[51] ಪೋ ಬಾ ೫೧೦ ಮದರಾಸ್

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ [illegible]	೨ ಆಣೆ
ಮುರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೇಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮ[illegible] (೩ನೇಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ (೫ನೇಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೇಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೇಯ ಆವೃತ್ತಿ)	೧ ಆಣೆ
ಬಸವಾದಿ ಸಿದ್ಧತತ್ತ್ವದರ್ಪಣ (೩ನೇಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯ ಶತಕ (೩ನೇಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಸಾರ	೨ ಆಣೆ
ಗುರುಸ್ಥಲ[illegible]	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯ ಶತಕ	೨ ಆಣೆ
ವೀರಶೈವಮತ[illegible]	೩ ಆಣೆ
ವೀರಶೈವಾಚಾರವಿಧಿ (೩ನೇಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೇಯ ಆವೃತ್ತಿ)	೨ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ತ್ವ ಸ್ಪಷ್ಟೀಕರಣ (೩ನೇಯ ಆವೃತ್ತಿ)	೪ ಆಣೆ
ವೈದಿಕಸಾಮ್ರಾಜ್ಯ ವ್ಯವಸ್ಥೆ	೪ ಆಣೆ
ಆಗಮಪರಿ[illegible]	೮ ಆಣೆ
ಶಿವಾಧಿಕ್ಯರತ್ನಾವಳಿ ([illegible]ಕೃತ)	೮ ಆಣೆ
ಬಸವಧ್ವಾಂತ ದಿವಾಕರ (೩ನೇಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ[illegible]
पण्डित श्रीकाशीनाथशास्त्री यांचे भाषण (मराठी)	८ आ[illegible]
Speeches by Pandit Shri Kashinatha Shastri (English)	12 A[illegible]
ವೀರಶೈವರತ್ನ (೪ನೇಯ ಆವೃತ್ತಿ) ...	೧೨ ಆ[illegible]
ವೈದಿಕಶಿವಪೂಜಾ ವಿಧಿ (ವೈದಿಕಪದ್ಧತಿಯುಕ್ತವಾದ ಅತ್ಯಂತ ಸುಂದರವಾದದ್ದು)	೧೨ ಆ[illegible]
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧[illegible]
ಮಹಾಸ್ವರ ದೀಕ್ಷಾವಿಧಿ (೩ನೇಯ ಆವೃತ್ತಿ) ...	೧೨ ಆ[illegible]
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) ...	೧೨ ಆ[illegible]
ಶಿವಾಗಮೋಕ್ತಸಿದ್ಧಾಂತದರ್ಪಣ	೧೨ ಆ[illegible]
ಸಚಿತ್ರ ರೇಣುಕವಿಜಯ (೩ನೇಯ ಆವೃತ್ತಿ)	೧ ರೂ[illegible]
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) ..	೧ ರೂ[illegible]
[illegible]ಪನಿಷತ್ (ವೀರಶೈವಭಾಷ್ಯ) ..	೧ [illegible]
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾಸಹಿತ) ...	೧ [illegible]
ವೀರಶೈವಸಿದ್ಧಾಂತಸುಧಾಕರ	೨ [illegible]
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೬ ಪುಟ)	೮ [illegible]
लिंगधारणचंद्रिका (संस्कृत)	३
महानारायणोपनिषत् (वीरशैवभाष्य-संस्कृत)	१
वीरशैवेंदुशेखर (संस्कृत)	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ[illegible] ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ [illegible] ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ[illegible]

ಮೈಸೂರು [illegible] ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible] ತಾ|| [illegible] ಮುದ್ರಿಸಿ ಪ್ರಕಟಿಸಲ್ಪ[illegible]

...ವ ಪಂಡಿತಮಹಾಶಯರನ್ನು ನಮ್ಮ ಪತ್ರಿಕಾವಾಚಕರಿಗೆ ತಿಳಿಸಲು ಅತ್ಯಂತ ವ್ಯಸನವುಂಟಾಗುತ್ತದೆ

ಸಿಂಧ್ ಪ್ರಾಂತದಲ್ಲಿ ಅಸಾಧ್ಯವಾದ ಛಳಿ. ಎತಬಿತದೆ ... ಸುರಿಯುತ್ತಿದೆ ಮಂಜಿನ ಅವಾಂತರ ಹೇಳತೀರದು ನವಾಬ್ ಷಾ ಮತ್ತು ಸುಕ್ಕೂರು ಜಿಲ್ಲೆಗಳಲ್ಲಿ ...ಗೆ ನಷ್ಟಸಂಭವಿಸಿರುವುದಾಗಿ ವರ್ತಮಾನಬಂದಿದೆ ... ಗದ್ದೆಗಳು ವೃಕ್ಷಪಕ್ಷಿಗಳಿಂದ ತುಂಬಿಹೋಗಿವೆ ನವಾಬ್ ಷಾಜಿಲ್ಲೆಯಲ್ಲಿ ಛಳಿಯನ್ನು ತಡೆಯಲಾರದೆ ಇಬ್ಬರು ಭಿಕ್ಷುಕರು ಪ್ರಾಣಬಿಟ್ಟರೆಂದು ವರ್ತಮಾನಬಂದಿದೆ

ಜರ್ಮನಿದೇಶದಲ್ಲಿ ಚಿನ್ನದ ಅಭಾವವಿರುವುದರಿಂದ ವಿವಾಹಸಮಯದಲ್ಲಿ ವಧುವಿಗೆ ಕೊಡತಕ್ಕ ಉಂಗರಗಳು ...ಮ ಕ್ಯಾರೆಟ್ ಚಿನ್ನದ್ದು ಮಾತ್ರವಿರಬೇಕೆಂದೂ ... ಹಣತೂಕಕ್ಕೆ ಹೆಚ್ಚು ಕೊಡದೆ ದೂ ಸರ್ಕಾರದವರು ಆಜ್ಞೆಮಾಡಿರುತ್ತಾರೆ ಮತ್ತು ಹಳೇ ವೃದ್ಧಿ ...ನ್ನಗಳನ್ನು ಸರ್ಕಾರದವರಿಗೆ ಒಪ್ಪಿಸಬೇಕೆಂದೂ, ...ನ್ನದ ವ್ಯಾಪಾರಸ್ಥರು ಸರ್ಕಾರದಿಂದ ಅಪ್ಪಣೆಪಡೆದು ವ್ಯಾಪಾರಮಾಡಬೇಕೆಂದೂ ತಿಳಿದುಬರುತ್ತದೆ

ಬೊಂಬಾಯಿ ಬೋರಿವಾಲಿ ಹತ್ತಿರ ಒಂದು ಮೋಟಾರು ಅಪಾಯವುಂಟಾಯಿತು. ಇದರ ಸಲುವಾಗಿ ೫ ಮಂದಿ ಸ್ತ್ರೀಯರೂ ಸೇರಿ ೧೨ ಮಂದಿಗೆ ...ವಾದ ಗಾಯಗಳಾದವು ಲಾರಿಯೊಂದು 20 ಜನರನ್ನು ಕೂರಿಸಿಕೊಂಡು ಮುಂಬಯಿಗೆ ಬರುತ್ತಿದ್ದಾಗ ...ಯಲ್ಲಿ ತಲೆಕೆಳಗಾಯಿತು ಇವರ ಪೈಕಿ ... ಹೆಚ್ಚು ಗಾಯಗಳುಂಟಾದುದು ... ಮಂದಿ ಮಕ್ಕಳು ... ಈ ಅನಾಹುತದಿಂದ ಪಾರಾದರೆಂದು ...ತ್ತೇವೆ

ಬರುವ ಫೆಬ್ರವರಿ ತಿಂಗಳಲ್ಲಿ ಹೈದರಾಬಾದಿನ ನೈಜಾಮರ ರಜತಮಹೋತ್ಸವ ನಡೆಯುವದನ್ನು ಆ ಸಮಾರಂಭಕ್ಕೆ ಭಾರತದ ನಾನಾ ಸಂಸ್ಥಾನಗಳ ಒಡೆಯರು ...ಸಿಸಲ್ಪಟ್ಟಿರುವರೆಂದು ತಿಳಿದುಬಂದಿದೆ ಅವರಲ್ಲಿ ನಮ್ಮಘನವೆತ್ತ ಮೈಸೂರು ಶ್ರೀಮನ್ಮಹಾರಾಜರವರು ಆಹ್ವಾನಿಸಲ್ಪಟ್ಟಿರುವರೆಂದೂ ಅವರ ಬಿಡಾರಕ್ಕಾಗಿ ನೈಜಾಮರು ತಮ್ಮ ಸ್ವಂತ ಅರಮನೆಯೊಂದನ್ನು ... ಸಲಾಗಿಟ್ಟಿದ್ದಾರೆಂದು ತಿಳಿದುಬಂದಿದೆ ಶ್ರೀಮನ್ಮಹಾರಾಜರವರು ನೈಜಾಮರ ಆಹ್ವಾನವನ್ನು ಮನ್ನಿಸಿ ರಜತಮಹೋತ್ಸವದಲ್ಲಿ ಭಾಗಗಳಿಸಲು ಒಪ್ಪಿದ್ದಾರೆಂಬ ವದಂತಿ ಹರಡಿದೆ

ಭೂಕಂಪ.

ಕಳೆದ 6 ನೆಯ ತಾರೀಕಿನ ದಿವಸ ಜಮ್ಮು ಪ್ರದೇಶದಲ್ಲಿ ಭೂಕಂಪವಾಯಿತೆಂದು ಅನೇಕ ಕಟ್ಟಡಗಳು ಬಿದ್ದುಹೋದವೆಂದೂ ವರ್ತಮಾನ ಬಂದಿದೆ ಅದರಂತೆ, ... ಕೋಟ್ಬಾಬಾದ್ ಮತ್ತು ಸಿಕಂದರ್ ಪುರಗಳಲ್ಲಿ ಭೂಕಂಪವಾಗುವುದೆಂಬ ವಾರ್ತೆಯು ಹಬ್ಬಿ, ಜನರಲ್ಲಿ ಬಹಳ ಕಳವಳವನ್ನು ಹುಟ್ಟಿಸಿದೆ ಅಂಚೆ ಮತ್ತು ತಂತಿ ... ಗಳಿಗೆ ವರ್ತಮಾನಕ್ಕಾಗಿ ಬಹಳ ಜನರು ತಂತಿಯನ್ನು ಕಳುಹಿಸಿದ್ದರೆಂದು ತಿಳಿದುಬರುತ್ತದೆ

ಸರ್ಪಾಲಯ

...ಯಾಮದಲ್ಲಿ ಇಜ್ಜಾಮ ಎಂಬ ಊರು ಇದ್ದು ಒಂದು ದೇವಾಲಯ ಅದರ ಹೆಸರು "ಮಿನಾಂಗ" ... ಆ ದೇವಾಲಯದಲ್ಲಿ ಜೀವಂತ ಸರ್ಪಗಳು ವರ್ಷವೆಲ್ಲ ಎಲ್ಲ ಕಡೆಗೂ ಹರಿದಾಡುತ್ತವೆ ಇದಕ್ಕೆ ಸರ್ಪಾಲಯವೆಂದು ಕರೆಯುತ್ತಾರೆ ವರ್ಷಕ್ಕೊಮ್ಮೆ ಆ ದೇವಾಲಯದಲ್ಲಿ ಮಹಾಪೂಜೆ ಜರಗುವುದು ಆಗ ... ನೂರಾರು ಸರ್ಪಗಳು ಅಲ್ಲಿ ಕೂಡುತ್ತವೆ ಪೂಜೆ ಮುಗಿದ ಮೇಲೆ ಅಲ್ಲಿಂದ ಹೊರಟುಹೋಗುತ್ತವಂತೆ

ವಿಚಿತ್ರ ಮೋಸಕೃತ್ಯ.

ಕಳೆದ 1 ನೆಯ ತಾರೀಖು ಊದಿಯಾನದಲ್ಲಿ ...ಣವಾಗಿ ಉಡುಪುಧರಿಸಿದ್ದ ಒಬ್ಬ ಯುವಕನೂ ಮತ್ತು ಬುರ್ಖಾ ಹಾಕಿಕೊಂಡಿದ್ದ ಒಬ್ಬ ಯುವತಿಯೂ ಮಗುವಿನ ಸಹಿತ ಜವಳಿ ಅಂಗಡಿಯೊಂದಕ್ಕೆ ಹೋಗಿ ಸೂರಾರು ರೂಪಾಯಿ ಬೆಲೆಬಾಳುವ ಪದಾರ್ಥಗಳನ್ನು ಕೊಂಡು ಅವುಗಳನ್ನು ಕೂಡಲೆ ರೈಲಿನಲ್ಲಿ ಬೇರೆಯೂರಿಗೆ ಕಳುಹಿಸಬೇಕಾಗಿರುವುದರಿಂದ ಲೆಖ್ಖಾಚಾರಮಾಡಿ ಬಿಲ್ಲು ಬರೆಯುವವರಲ್ಲಿ ಒರುವುದಾಗಿ ಹೇಳಿ ಯುವಕನು ತನ್ನ ಹೆಂಡತಿ ಎಂದು ಹೇಳಿ ಸಂಗಡವಿದ್ದ ಯುವತಿಯನ್ನು ಅಲ್ಲೇ ನಿಲ್ಲಿಸಿ ಸಾಮಾನುಸಹಿತ ಹೊರಟುಹೋದನು ಯುವತಿಯು ಸ್ವಲ್ಪಕಾಲ ಕಾದು ತನ್ನ ಪತಿಯು ಬರಲಿಲ್ಲವೆಂದೂ ನಿದ್ರಿಸುತ್ತಿದ್ದ ಮಗುವನ್ನು ಅಲ್ಲಿಯೇ ಬಿಟ್ಟು ಹೊರಗೆಹೋಗಿ ನೋಡಿಬರುವುದಾಗಿ ಹೇಳಿ ಹೋದಳು ಎಷ್ಟುವೇಳೆಯಾದರೂ ಯಾರೂ ಹಿಂದಿರುಗದಿದ್ದಕಾರಣ ಅಂಗಡಿಯವರು ಸಂದೇಹಪಟ್ಟು ಮಲಗಿದ್ದ ಮಗುವಿನ ಬಳಿ ಒಂದು ಹೊದಿಕೆಯನ್ನು ತೆಗೆದು ನೋಡಲು ಒಳಗಿದ್ದುದು ಮಗುವಾಗಿರದೆ ಕಪ್ಪೂರದ ಬೊಂಬೆಯಾಗಿತ್ತು

ಗಂಡಸರಲ್ಲಿ ಗೋಷಾ ಪದ್ಧತಿ

ಪ್ರಪಂಚದಲ್ಲೆಲ್ಲಾ ಹೆಂಗಸರು ಮಾತ್ರ ಗೋಷಾದಲ್ಲಿರುವರು ಆದರೆ ಆಫ್ರಿಕಾದಲ್ಲಿರುವ ಮಹಾ ಮರುಭೂಮಿಯಾದ ಸಹರಾ ಪ್ರದೇಶದಲ್ಲಿ ಗಂಡಸರೇ ಬುರ್ಖಾ ಹಾಕಿಕೊಳ್ಳುತ್ತಾರೆ ಹೆಂಗಸರು ಗಂಡಸರಂತೆ ರಾಜಾರೋಷಾಗಿ ಓಡಾಡುತ್ತಾರೆ

ಸಹರಾ ಮರುಭೂಮಿಯಲ್ಲಿ ಅಲ್ಲಲ್ಲಿ ಜಲವಸತಿಗಳಿವೆ ಅವಕ್ಕೆ ಓಯಿಸಿಸ್‌ಗಳೆಂದು ಹೆಸರು ಅಲ್ಲಿ ಈ ಜನರು ವಾಸಿಸುತ್ತಾರೆ ಈ ಜನಾಂಗದ ಹೆಸರು ಟ್ವಾರೆಗ್ ಎಂದು ಜತ್ಯಾಮ ಸಲ್ಮಾನರು ಗಂಡಸರು ಮನೆಗಳಲ್ಲಿ ಬುರುಕಿಗಳನ್ನ ಹಾಕಿಕೊಂಡು ಕುಳಿತಿದ್ದರೆ ಹೆಂಗಸರೆ ಮಿಕ್ಕೆಲ್ಲಾ ಕಾರ್ಯಗಳನ್ನೂ ನಡೆಸುತ್ತಾರೆ ವಿದ್ಯಾಬುದ್ಧಿ ಕಲಿಯುವವರು ಸ್ತ್ರೀಯರೇ ಗಂಡಸು ವಿವಾಹಿತನಾದಮೇಲೆ ಹೆಂಡತಿಯ ವಂಶಕ್ಕೆ ಸೇರಿಹೋಗುತ್ತಾನೆ ಹುಟ್ಟಿದ ಮಕ್ಕಳೂ ಆಕೆಯ ವಂಶಕ್ಕೇ ಸೇರಿದವರು ಸಂಸಾರನಿರ್ವಹಣಕಾಲದಲ್ಲಿ ಇಲ್ಲಿಯ ಮಗಂಡಸರು ಹೆಂಗಸರ ಮಾತಿಗೆ ಬೆಲೆ ಕೊಡುವಂತೆ ಅಲ್ಲಿ ಗಂಡಸಿನ ಮಾತಿಗೆ ಹೆಂಗಸರು ಬೆಲೆ ಕೊಡುತ್ತಾರೆ ನಮ್ಮಲ್ಲಿಯ ಸ್ತ್ರೀಸ್ವಾತಂತ್ರ್ಯವಾದಿಗಳಿಗೆ ಸಹರಾ ಪ್ರದೇಶಕ್ಕೆ ಪ್ರಯಾಣಮಾಡುವುದು ಒಳಿತಲ್ಲವೇ?

ಇಟಲಿ ಅಬ್ಸೀನಿಯಾ ಯುದ್ಧದ ಪರಿಸ್ಥಿತಿ

ಇಟಲಿಯು ವಿಮಾನ ಮುತ್ತಿಗೆಗಳು ಎಲ್ಲಾ ರಣಕ್ಷೇತ್ರಗಳಲ್ಲೂ ಮೊದಲಾಗಿರುವುದಾಗಿ ಕೇಳುತ್ತಾರೆ ತೇಂಬಿಯನ್ ಬಳಿಯ ಯುದ್ಧಗಳಾಗಿ ಎರಡು ಕಡೆಗಳಲ್ಲೂ ಅನೇಕ ನಷ್ಟಗಳಾದುವೆಂದೂ ಕೊನೆಗೆ ಇಟಲಿಯವರನ್ನು ಹೊಡೆದಟ್ಟಿ ತೇಂಬಿಯನ್ ಕ್ಷೇತ್ರವನ್ನು ಅಬ್ಸೀನಿಯರು ವಶಪಡಿಸಿಕೊಂಡರೆಂದು ತಿಳಿದು ಬಂದಿದೆ ಸೋಮಾಲಿಲ್ಯಾಂಡ್ ಕಡೆ ಇಟಲಿಯ ದಂಡಿನ ಸೈನ್ಯದವರು ಗನಾಲೆ ನದಿಯ ಮೇಲಿರುವ ಡೋಲೋ ಎಂಬ ನಗರವನ್ನು ದೋರಿಯ ಎಂಬುದನ್ನೂ ಹಿಡಿದು ಅಲ್ಲಿಂದ ಅಬ್ಸೀನಿಯರನ್ನು ಹೊಡೆದಟ್ಟಿ ಅವರ ಬಿಡಾರಗಳನ್ನೆಲ್ಲಾ ನಾಶಪಡಿಸಿದರು ಇದರಲ್ಲಿ ಅಬ್ಸೀನಿಯದ ಕಡೆ 150 ಮಂದಿ ಸೈನಿಕರು ನಾಶವಾದರೆಂದೂ ಇಟಲಿಯ ಕಡೆ 3 ಡುಬೆಟ್ ಸೈನಿಕರು ಒಬ್ಬ ಇಟಲಿ ಸೈನಿಕನೂ ಮಾತ್ರ ಸತ್ತರೆಂದೂ 10 ಮಂದಿಗಳು ಗಾಯಗೊಂಡರೆಂದೂ ತಿಳಿಸುತ್ತಾರೆ ತೇಂಬಿಯನ್ ಕ್ಷೇತ್ರದಿಂದ ಹಿಮ್ಮೆಟ್ಟುತ್ತಿರುವ ಇಟಲಿಯವರು ದಾರಿಯಲ್ಲಿ ಸಿಕ್ಕಿದ ಹಳ್ಳಿಗಳಿಗೆಲ್ಲಾ ಬೆಂಕಿ ಇಟ್ಟು ಸುಟ್ಟು ಹಾಕುತ್ತಿರುವರೆಂದು ಸುದ್ದಿ ಬಂದಿದೆ ಇಟಲಿಯವರು ಅನುಸರಿಸುತ್ತಿರುವ ನ್ಯಾಯವಿರುದ್ಧವಾದ ಕ್ರೂರಮಾರ್ಗಗಳನ್ನು ಪರಿಶೀಲಿಸಿ ವಿಚಾರಣೆ ನಡೆಸಬೇಕೆಂದು ಲೀಗ್ ಸಭೆಗೆ ಅಬ್ಸೀನಿಯರು ದೂರು ಕೊಟ್ಟಿರುತ್ತಾರೆ ಅಬಿಸೀನಿಯರನ್ನೆಲ್ಲ ಸಂಪೂರ್ಣ ನಾಶಮಾಡಬೇಕೆಂಬ ಸಂಕಲ್ಪದಿಂದ ಇಟಲಿಯವರು ಕೆಲಸ ಮಾಡುತ್ತಿದ್ದಾರೆಂದು ತಿಳಿಸಿರುತ್ತಾರೆ

ಇಟಲಿಯಿಂದ ಆಫ್ರಿಕಕ್ಕೆ ಕಳುಹಿಸಲ್ಪಟ್ಟ ಸೈನ್ಯಗಳಿಗೆ ಬದಲು ದೇಶರಕ್ಷಣೆಗಾಗಿ ಪುನಃ ಹೊಸ ಸೈನ್ಯಗಳನ್ನು ಕೂಡಿಸಬೇಕೆಂದು ಆಜ್ಞೆಯಾಗಿದೆ ಬರುವ ೫ ೨ 36 ರಿಂದ ಈ ಶಾಸನವು ಜಾರಿಗೆ ಬರುವುದು. ಕೆಲಸದಿಂದ ನಿವೃತ್ತರಾಗಿ ವಿಶ್ರಾಂತಿ ಹೊಂದುತ್ತಿರುವ ಸೈನಿಕರೂ ಕೂಡ ತಿರುಗಿ ಶಸ್ತ್ರಧಾರಣ ಮಾಡಿ ಸೈನ್ಯಕ್ಕೆ ಸೇರಬೇಕಾಗಿದೆ

ಅಬ್ಸೀನಿಯರೆಂಬ ತಪ್ಪು ತಿಳುವಳಿಕೆಯಿಂದ ಬ್ರಿಟಿಷ್ ಸೋಮಾಲಿಲ್ಯಾಂಡ್ ಗಡಿ ಪ್ರದೇಶದಲ್ಲಿ ಒಂಟೆಗಳಿಗೆ ನೀರು ಕುಡಿಸುತ್ತಿದ್ದ ಬ್ರಿಟಿಷ್ ದೇಶೀಯ ಪ್ರಜೆಗಳ ಮೇಲೆ ಇಟಲಿಯವರು ಬಾಂಬುಗಳನ್ನು ಹಾಕಿದರು ಒಂಟೆಗಳು ದಿಕ್ಕಾಪಾಲಾಗಿ ಓಡಿದವು ವಿಶೇಷ ಅಪಾಯವೇನೂ ಉಂಟಾಗಲಿಲ್ಲವೆಂದು ಕೇಳುತ್ತೇವೆ

ಅಬ್ಸೀನಿಯಾದಲ್ಲೆಲ್ಲಾ ಅಕಾಲ್ಯ ಬಿರುಗಾಳಿ ಗುಡುಗುಮಿಂಚುಗಳಿಂದ ಕೂಡಿದ ಮಳೆಗೆ ಆರಂಭವಾಗಿರುವುದರಿಂದ ರಸ್ತೆಗಳೆಲ್ಲವೂ ಹಾಳಾಗಿವೆ ನದಿ ಪ್ರವಾಹಗಳು ಹೆಚ್ಚಿರುವುದರಿಂದ ಯುದ್ಧಕಾರ್ಯಗಳು ನಡೆಯುವುದು ಅಸಾಧ್ಯವಾಗಿದೆ ದೇಶದ ಮೇಲೆಲ್ಲಾ ಮೋಡ ಕವಿದಿರುವುದರಿಂದ ಚೆನ್ನಾಗಿ ಕಾಣುವುದಿಲ್ಲವಾಗಿ ಯಾವ ವಿಮಾನ ಕಾರ್ಯಕ್ರಮಗಳನ್ನು ನಡೆಸಲು ಸಾಧ್ಯವಿಲ್ಲವಾಗಿದೆ ಮೋಟರು ಲಾರಿಗಳ ಚಲನಗಳಿಗೂ ಪ್ರತಿಬಂಧಕ ಉಂಟಾಗಿದೆ

ಟೈರೋಲ್ ಪ್ರಾಂತದಲ್ಲಿ ಜರ್ಮನ್ ಮಾತನಾಡುವ ಅನೇಕಜನರು ಬಲವಂತವಾಗಿ ಇಟಲಿಯ ಸೈನ್ಯಕ್ಕೆ ಸೇರಿ ಅಬ್ಸೀನಿಯಾದಲ್ಲಿ ಕೆಲಸಮಾಡಲು ಜನಗಳನ್ನು ಒತ್ತಾಯಪಡಿಸುವುದನ್ನು ಪ್ರತಿಭಟಿಸಿ ಪಕ್ಕದಲ್ಲಿರುವ ಯುಗೋಸ್ಲೋವ್ಯಾಕಿಯ, ಒಪೇರಿಯ ಮೊದಲಾದ ದೇಶಗಳಿಗೆ ಓಡಿಹೋಗಿ ಸೇರಿಕೊಂಡಿರುವರಂತೆ ಈ ಸುದ್ದಿಯು ಸುಳ್ಳೆಂದು ಇಟಲಿಯವರು ಹೇಳಿದರೂ ಬೇರೆಕಡೆಗಳಿಂದ ಈ ಪ್ರತಿಭಟನೆಯು ನಿಶ್ಚಯವೆಂದು ತಿಳಿದುಬರುತ್ತದೆ

ದೋರ್ಬಲಿ ಜಿನದಾಸಶಾಸ್ತ್ರಿಗಳ ನಿಧನ

ಶ್ರವಣಬೆಳಗೊಳದ ಪ್ರಸಿದ್ಧ ಜೈನ ವಿದ್ವಾಂಸರಾದ ಶ್ರೀ ಬ್ರಹ್ಮಸೂರಿಶಾಸ್ತ್ರಿಗಳವರ ಸುಪುತ್ರರೂ ತಮ್ಮ ತಂದೆಯವರಂತೆ ಹೆಚ್ಚಿನ ಪಾಂಡಿತ್ಯವನ್ನು ಪಡೆದು ಅವರಿಂದ ಸ್ಥಾಪಿಸಲ್ಪಟ್ಟ ಗೀರ್ವಾಣಭಾಷೋಜ್ಜೀವಿನಿ ಎಂಬ ಸಂಸ್ಕೃತ ಪಾಠಶಾಲೆಗೆ ಅಧ್ಯಕ್ಷರಾಗಿದ್ದು ಸ್ಥಳಪರಸ್ಥಳದ ಬಹುಜನಗಳನ್ನು ಪಂಡಿತರನ್ನಾಗಿ ಮಾಡಿದ, ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನದಲ್ಲಿ ಮಹಾವಿದ್ವಾನ್ ಪದವೀಧರರಾಗಿ ಶ್ರವಣಬೆಳಗೊಳದ ಸಂಸ್ಥಾನಕ್ಕೆ ಬಹಳಕಾಲ ಏಜಂಟರಾಗಿದ್ದ ಶ್ರೀ ದೋರ್ಬಲಿ ಜಿನದಾಸಶಾಸ್ತ್ರಿಗಳು 1 1 36 ನೇ ಬೆಳಗ್ಗೆ ೯ ಘಂಟೆ ಸಮಯದಲ್ಲಿ, ತಮ್ಮ ೬೧ನೆಯ ವರ್ಷದಲ್ಲಿ, ಶುಭಧ್ಯಾನದಿಂದ ಪರಂಧಾಮವನ್ನೈದಿದರು ಇದರಿಂದ ಇವರ ಪುತ್ರರಾದ ಬ್ರಹ್ಮಸೂರಿಶಾಸ್ತ್ರಿಗಳಿಗೂ, ಇವರ ಕುಟುಂಬವರ್ಗದವರಿಗೂ ಮತ್ತು ಜೈನಸಮಾಜಕ್ಕೂ ಉಂಟಾಗಿರುವ ವ್ಯಸನವನ್ನು ಪರಿಹರಿಸಿ ಮನಶ್ಶಾಂತಿಯನ್ನುಂಟುಮಾಡಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ

ಭರಮಯ್ಯ

ಸ್ವೀಕಾರ

ಗದಗ ಬೆಟಗೇರಿ ನಿವಾಸಿಗಳಾದ ಮ|| ರಾ|| ವೀರಪ್ಪ ಮುಲಕಾಜಪ್ಪ ಮುದಗಲ್ಲಪ್ಪಾ ಶಿಗ್ಲಿ ಇವರ ಮಗಳನ್ನು ಮ|| ರಾ|| ಗದಗ ರಾಚಪ್ಪ ಕಿತ್ತೂರ ಇವರ ಸುಪುತ್ರನಿಗೆ ಕೊಟ್ಟು ನಡೆಯಿಸಿದ ವಿವಾಹಸಮಾರಂಭ ಸಮಯದಲ್ಲಿ ಪ್ರಭಾಪೋಷಣೆಗಾಗಿ ಸಮರ್ಪಿಸಲ್ಪಟ್ಟ ವರನ ಕಡೆಯವರಿಂದ 2 ರೂ ಗಳು ವಧುವಿನ ಕಡೆಯವರಿಂದ 1 ರೂ ಜಮ್ಮಾ 3 ರೂ ಗಳು ಮ|| ರಾ|| ಸಂಗಪ್ಪಬಸಪ್ಪ ಕಾಶಪ್ಪ ಬೇಲೇರಿಯವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ಜಗದ್ಗುರು ಪಂಚಾಚಾರ್ಯಾಯ ನಮಃ

ಮಹನೀಯರ ಹಿತೋಕ್ತಿಗಳು

---

೧ ಪರೋಪಕಾರವೆಂದರೆ—ಅನ್ಯರ ಸಹಜವಾದ ಅಪೇಕ್ಷೆಯನ್ನು ನೆರವೇರಿಸುವಿಕೆಯು. ಈ ಕಾರ್ಯವು ಪುಣ್ಯಕ್ಕೋಸ್ಕರವೆಂಬುದಾಗಿಯೂ ಪ್ರತ್ಯುಪಕಾರಕ್ಕಾಗಿಯೂ, ಹೆಸರ ವಾಸಿಗೋಸ್ಕರವೆಂಬುದಾಗಿಯೂ ಮಾನವನಿಗೆ ಇದು ಸ್ವಾಭಾವಿಕವಾಗಿಯೂ ಸಹ ಮಾಡಲ್ಪಡುತ್ತಿರುವದು. ಹೇಗಾದರೂ ಇದು ಕಾಲ ದೇಶಗಳ ಭೇದದಿಂದಲೂ ಅವರವರ ಅಪೇಕ್ಷೆಯು ಹಲವು ತೆರನಾಗಿರುವುದರಿಂದಲೂ ಸಹ ನಾನಾವಿಧವಾಗಿರುತ್ತದೆ. ಪರೋಪಕಾರಕಾರ್ಯದಿಂದ ಪುಣ್ಯಬರುತ್ತದೆಂದು ತಿಳಿದುಕೊಂಡಿರುವವರು—ತಮಗೆ ಅನುಕೂಲವೂ ಶಕ್ತಿಯೂ ಇದ್ದಾಗ ಅನ್ಯರಿಗೆ ಉಪಕಾರವನ್ನು ಮಾಡಬೇಕು. ಮತ್ತು ಪುಣ್ಯವನ್ನು ಅಪೇಕ್ಷಿಸುವ ಸತ್ಪುರುಷರು ಪ್ರತ್ಯುಪಕಾರವನ್ನು ಹೊಂದಬೇಕೆಂಬ ಬಯಕೆಯನ್ನು ಮೊದಲು ದೂರಗೊಳಿಸಬೇಕು. ಏತಕ್ಕೆಂದರೆ—ಜಗತ್ತಿನಲ್ಲಿ ಉಪಕೃತಿಯ ಸ್ಥಿತಿಯವರ ಅನ್ಯರಿಂದ ತಾವು ಉಪಕಾರವನ್ನು ಪಡೆಯಬೇಕೆಂದು ಕೋರುವರಲ್ಲದೆ ಇಷ್ಟಪಡುವಷ್ಟಿಗೆ ಹೊಂದುತ್ತಲೂ ಇರುವರು. ಈ ಪರಿಯ ಉಪಕಾರವನ್ನು ಬಯಸುವರೂ, ಬಯಸುವವರಿಗೆ ತಕ್ಕ ದಯಪಾಲಿಸುವ ಉಪಕಾರವನ್ನು ಮಾಡುವವರು ಸಹ ಉಭಯತರಿಗೂ ಒಂದು ಬಗೆಯಾದ ತೃಪ್ತಿಯಾಗಿಯೇ ಇದ್ದ ವಾಸ್ತವದಿಂದಲೂ ಅನುಭವದಿಂದಲೂ ತಿಳಿದುಬರುತ್ತದೆ. ಇದರಿಂದ ಉಪಕಾರವನ್ನು ಮಾಡುವವರು ಇತರರಿಂದ ತಾವು ಪ್ರತ್ಯುಪಕಾರವನ್ನು ಅಪೇಕ್ಷಿಸಿದರೆ ಮುಂದೆ ಅದು ತಮಗೆ ಲಭಿಸದೆ ಹೋದರೆ ತಾವು ಮಾಡಿದ ಉಪಕಾರವು ಸಾರ್ಥಕವಾಗುವದಿಲ್ಲವು. ಅದು ಸಾರ್ಥಕವಾದರೂ ಅಥವಾ ಇಲ್ಲದೇ ಹೋದರೂ, ಅದರ ಕೊರತೆಯಿಂದ ತೃಪ್ತಿಯೂ ಉಂಟಾಗುವದಿಲ್ಲ. ಮತ್ತು ಉಪಕಾರವನ್ನು ಪಡೆದವರಿಗಾದರೋ ತಾವು ಹೊಂದಿದ ಉಪಕಾರಕ್ಕಾಗಿ ಅನ್ಯರಿಗೆ ಋಣಬದ್ಧರಾಗಿರತಕ್ಕದ್ದರಿಂದ ಅವರ ಚಿಂತೆಯಿಂದಲೂ, ಭಯದಿಂದಲೂ ಅವರಿಗೆ ಕೊರತೆಯೂ ದುಃಖವೂ ಉಂಟಾಗುತ್ತದೆ. ಯಾರಿಗಾದರೂ ಸಂತಸವನ್ನು, ತೃಪ್ತಿಯನ್ನು ಉಂಟುಮಾಡಿದರೆ ಪುಣ್ಯಬರುತ್ತದೆಯೇ ವಿನಾ, ಕೊರತೆಯನ್ನು, ಭಯವನ್ನು ಉಂಟುಮಾಡಿದರೆ ಪುಣ್ಯಕ್ಕೆ ಪ್ರತಿಯಾಗಿ ಪಾಪಬರುವದೆಂಬ ನಿಯಮವಿರುವುದರಿಂದ ಕಲ್ಯಾಣಕಾಂಕ್ಷಿಗಳು ನಿರಪೇಕ್ಷೆಯಿಂದ ಉಪಕಾರವನ್ನು ಮಾಡಬೇಕು. ಮತ್ತೆ ಕೆಲವರು ತಮಗೆ ಕೀರ್ತಿ ಬರಬೇಕೆಂದು ಪರರಿಗೆ ಉಪಕಾರಮಾಡುವವರು ಪ್ರಾಯಶಃ ಪ್ರತ್ಯುಪಕಾರವನ್ನು ಅಪೇಕ್ಷಿಸುವದಿಲ್ಲ. ಆದರೆ ಇವರಿಗೆ ತಮ್ಮ ಹೆಸರು ಕೊಂಡಾಡಲ್ಪಡಬೇಕೆಂಬ ಆಸೆಮಾತ್ರ ವಿಶೇಷವಾಗಿರುತ್ತದೆ. ಅದಕ್ಕೆ ತಕ್ಕ ಹಾಗೆಯೇ ಅಂಥದ ಕಾರ್ಯಗಳನ್ನು ಮಾಡುತ್ತಾರೆ. ಇದರಿಂದ ಅವರಿಗೆ ಉಪಕಾರಕ್ಕೆ ಪಾತ್ರಾಪಾತ್ರಗಳ ವಿವೇಚನೆಯೇ ಇರದಿಲ್ಲವಾದ್ದರಿಂದ ಅಂತಹ ಉಪಕಾರವು ಉತ್ತಮವಲ್ಲವೆಂದು ಹೇಳಬೇಕಾದದ್ದಿಲ್ಲ. 'ಪರೋಪಕಾರಾರ್ಥಮಿದಂ ಶರೀರಂ' ಎಂಬಂತೆ ತನ್ನ ಕರ್ತವ್ಯವೆಂದು ನಿರಪೇಕ್ಷೆಯಿಂದ ಪರಹಿತವಾದವನು ಸ್ವ[illegible]ತ್ರವು ವಾದದ್ದು. ಆದರೆ, ಈ ಜಗತ್ತಿನಲ್ಲಿ ಕೆಲ ಸ್ವಾರ್ಥಪರರು ಉಪಕಾರಮಾಡುವುದಕ್ಕೆ ಬದಲಾಗಿ ಪರರಿಂದ ಉಪಕಾರಹೊಂದಿ, ಕೃತಜ್ಞತೆಯನ್ನು ತೋರಿಸದೆ 'ಹೊಳೆ ದಾಟಿದ ಮೇಲೆ ಅಂಬಿಗನ ಮಿಂಡ" ಎಂಬ ಗಾದೆಯಂತೆ ಬಹು ಘಾತಕತನವಮಾಡಿ ತೊಂದರೆಯನ್ನು ಕೊಡುತ್ತಾರೆ. ಮತ್ತು ಪ್ರತ್ಯುಪಕಾರಹೊಂದುವ ಕಾಂಕ್ಷೆಯಿಂದಲೋ ಅನಿವಾರ್ಯಕಾರಣದಿಂದಲೋ ಪರರಿಗೆ ಸಹಾಯ ಮಾಡಿ, ಪ್ರಸಂಗವಿಶೇಷದಲ್ಲಿ 'ನಾನು ಹಾಗೆಮಾಡಿದೆನು, ನಾನು ಹೀಗೆಮಾಡಿದೆನು' ಎಂದು ಹೇಳುತ್ತಾರೆ. ಇದರಿಂದ ಉಪಕಾರಹೊಂದಿದವರ ಮನಸ್ಸಿಗೆ ಬಹು ನೋವು ಉಂಟಾಗುವದಲ್ಲದೇ, ಅವರು ಮಾಡಿದ್ದೂ ನಿರರ್ಥಕವಾಗುವದು. ಆದರೆ, "ಮಾಡಿ ಅವರಣ್ಣನವರು ಮನೆಯಂಥ ಕಡುಬ" ಎಂಬಂತೆ ಅದಕ್ಕೆ ತಕ್ಕ ಫಲವನ್ನು ಅನುಭವಿಸುವದೇ ಶತಸ್ಸಿದ್ಧವು. ಆತ್ಮರಿಂದ ಹೇ ಮೂಢಜೀವಿಗಳೇ! ಪಂಚೇಂದ್ರಿಯಗಳೇ! ಇನ್ನು ಮುಂದೆಯಾದರೂ ಅರಿತುಕೊಂಡು ಸ್ವಾರ್ಥಕ್ಕಾಗಿ ಕೃತಘ್ನತೆ ವಿಶ್ವಾಸಘಾತುಕತನ, ಹಣದ ವ್ಯಾಮೋಹದಿಂದ ಅಭಿಮಾನ ನುಡಿಯುವಿಕೆ, ಚಾಡಿ ಚೌರ್ಯ ಕುಟಿಲತನ ಇವೇ ಮೊದಲಾದ ದುರ್ಗುಣಗಳನ್ನು ಖಂಡಿತವಾಗಿಯೂ ಬಿಟ್ಟುಬಿಡಿರಿ! ಇವರಿಂದ ನಿಮಗೆ ನಾಶವಾಗುವದು! ಸುಮ್ಮನೆ ಮರ್ತ್ಯಮಾನವರಿಗೆ ... ಮರುಗಿ ಹೋದರೂ ಮರಗಿನ ಕೊರಳಿಗೆ ... ಎಂಬ ಗಾದೆಯಂತೆ, ಕಡ್ಡಿ ಮುರಿದಂತೆ ನಿಷ್ಠುರ ಅಪರಾಧ ಆಗುವದಿಲ್ಲ. ನಿತ್ಯನಿರಂತರ ಅವರ ಜನರ ಅವಹೇಳನವೂ ತಪ್ಪುವದಿಲ್ಲ. ಪರೋಪಕಾರಕ್ಕೆ ಯಾರು ವ್ಯಯ ಮಾಡುವರೋ ಅವರ ಅಭ್ಯುದಯದ ಲಾಭವನ್ನು ಹೊಂದುವರು. ಪರೋಪಕಾರವಾದರೆ ಇತರರಿಂದ ಉಪಕಾರಹೊಂದುವರು. ಅತ್ಯಂತ ನಷ್ಟಹೊಂದುವರು (ದಧೀಚಿ ಮಹರ್ಷಿ) ಸಾತ್ವಿಕ ಪಾಠಯುಕ್ತ ಪರೋಪಕಾರದ ವಿಷಯದಲ್ಲಿ ಒಂದು ಇತಿಹಾಸವಿರುವದು. ಪೂರ್ವದಲ್ಲಿ—ಕೃತಯುಗದಲ್ಲಿ ವೃತ್ರಾಸುರನು ದೇವತೆಗಳಿಗೆ ಬಹು ತೊಂದರೆಯನ್ನು ಕೊಟ್ಟನು. ಆಗ ಇಂದ್ರನ ವಜ್ರಾಯುಧವು ಸರ್ವಸಾಧಾರಣ ಶಸ್ತ್ರಾಸ್ತ್ರಗಳಿಂದ ಸಾಧ್ಯತಕ್ಕವನಲ್ಲ, ದಧೀಚಿ ಮಹರ್ಷಿಯ ಎಲುಬಿನಿಂದ ಆಯುಧವಮಾಡಿ ಹೊಡೆದರೆ ಅವನ ಮರಣವಾಗುವದು ಎಂದು ತಿಳಿದನು. ದೇವತೆಗಳು ದಧೀಚಿ ಮಹರ್ಷಿಗಳಲ್ಲಿಗೆ ಹೋಗಿ ಈ ವಿಷಯವನ್ನರುಹಲು ಅವರು ಬಹು ಸಂತಸದಿಂದ 'ನನ್ನ ಎಲುಬುಗಳು ಲೋಕಕ್ಕೆ ಉಪಕಾರವನ್ನು ಮಾಡುವದಲ್ಲ!' ಪರೋಪಕಾರಕ್ಕಿಂತಲೂ ಬೇರೆ ಧರ್ಮವಿಲ್ಲ. ಅದಕ್ಕಾಗಿ ಅಗತ್ಯವಾಗಿ ತೆಗೆದುಕೊಳ್ಳಿರಿ ಎಂದು ಪ್ರಾಣವನ್ನು ಬಿಟ್ಟರು. ಆಗ ಯಥಾ ಪ್ರಕಾರ ಎಲುಬನ್ನು ತಕ್ಕೊಂಡು ವೃತ್ರಾಸುರನ ಸಂಹಾರಮಾಡಿದ್ದರಿಂದ ಸ್ವರ್ಗಲೋಕವು ನಿರಾತಂಕವಾಯಿತು. "ಪರೋಪಕಾರಾರ್ಥಮಿದಂ ಶರೀರಂ" ಎಂಬಂತೆ ಮಣ್ಣಾಗಿಹೋಗುವ ದೇಹವನ್ನು ಸಾರ್ಥಕಪಡಿಸಿದ್ದು ಇದಲ್ಲವೇ ಪರೋಪಕಾರವು! ಆದರೆ ತಾವೂ ಉಪಕಾರಮಾಡದೆ, ಸಮಯದಲ್ಲಿ ಪರರಿಂದ ಹೊಂದಿ ಅವರಿಗೇ ಪ್ರತಿಘಾತ ಮಾಡುವ ನರರಾಕ್ಷಸರು ಮುಂದಾದರೂ ತಮ್ಮ ರಾಕ್ಷಸಪ್ರವೃತ್ತಿಯನ್ನು ದೂರೀಕರಿಸುವದುತ್ತಮವಲ್ಲವೆ?

೭ ಮನಸ್ಸನ್ನು ಗೆಲ್ಲಬೇಕೆಂದು ಯತ್ನಮಾಡತಕ್ಕವರು ಮೊದಲು ಅದರ ಮೇಲೆ ಸಾಕ್ಷಾತ್ ಕೈಮಾಡುವುದಕ್ಕೆ ಪ್ರತಿಯಾಗಿ ಅದರ ಬಹಿರಂಗದಮೇಲೆ ತಮ್ಮಧಿಕಾರವನ್ನು ಸಾಧಿಸಬೇಕು. ಪ್ರಾಣವಾಯು ಮತ್ತು ಸ್ಥೂಲಶರೀರ ಇವೆರಡೂ ಮನಸ್ಸಿನ ಬಹಿರಂಗಗಳು. ಒಳ್ಳೆ ಕೈಲಾಗದವನು ಬೆಟ್ಟಕ್ಕೆ ಹಾರುವನೆ? ಎಂಬಂತೆ ಈ ಹೊರಗಿನ ಅಂಗಗಳನ್ನೇ ವಶಮಾಡಿಕೊಳ್ಳಲಾರದವನು ಒಳಗಿನ ಮನಸ್ಸಿನ ಮೇಲೆ ಕೈಮಾಡಬಲ್ಲನೇ? ಹೊರಗಣ ಸೈನ್ಯವನ್ನು ಸ್ವಾಧೀನಮಾಡಿಕೊಳ್ಳದೆ ಒಳಗಣ ನಾಯಕನನ್ನು ಹಿಡಿಯುವದೆಂತು? ಆದುದರಿಂದ ಮನಸ್ಸನ್ನು ಗೆಲ್ಲಬೇಕನ್ನುವವನು ಅದರ ಬಹಿರಂಗಗಳಾದ ಪ್ರಾಣವಾಯು ಮತ್ತು ಜಡದೇಹ ಈ ಎರಡನ್ನೂ ಹಿಡಿತಕ್ಕೆ ಸಿಕ್ಕಿಸಿಕೊಳ್ಳಬೇಕು. ಇವೆರಡರಲ್ಲಿಯೂ ಜಡದೇಹವು ಬಹಳ ಹೊರಗಿನದು. ಆದ್ದರಿಂದ ಮೊದಲು ಅದನ್ನು ಸ್ವಾಧೀನಮಾಡಿಕೊಳ್ಳುವದು ಹೆಚ್ಚು ಅಗತ್ಯವು. ಸಾಧಾರಣವಾಗಿ ಶರೀರಸ್ಥಿತಿಯ ಪರಿಣಾಮವು ಮನಸ್ಸಿನ ಮೇಲೆ ಆಗುವದು ಹೆಚ್ಚು. ಶರೀರವು ಆರೋಗ್ಯವಾಗಿದ್ದರೆ ಮನಸ್ಸು ಶಾಂತವಾಗಿರುವದು. ಶರೀರಕ್ಕೇನಾದರೂ ರೋಗವು ಬಂದರೆ ಕೂಡಲೇ ಮನಸ್ಸು ತಳಮಳಿಸಿ ಚಲಿಸುವದು. ಆದುಕಾರಣ ಮನಸ್ಸು ಸ್ವಸ್ಥವಾಗಿರುವುದಕ್ಕಾಗಿ ಶರೀರವು ಕದಲದಂತೆ ಇರುವದು ಸಹಾಯವಾಗುವುದು. "ಶರೀರಮಾದ್ಯಂ ಖಲು ಧರ್ಮಸಾಧನಂ" ಎಂಬಂತೆ ಧರ್ಮವನ್ನು ಮೈಯೂಡಿಸಿಕೊಳ್ಳುವದಕ್ಕೆ ಶರೀರವು ಮೊದಲನೆಯ ಸಾಧನವಾಗಿರುವದು. ಮತ್ತು ಇಂದ್ರಿಯಗಳನ್ನು ಸ್ವೇಚ್ಛೆಯಾಗಿ ಹರಿಬಿಟ್ಟು, ಮನಸ್ಸನ್ನು ಮಾತ್ರ ನಿಗ್ರಹಿಸಲು ಯತ್ನಿಸುವದು ಹ್ಯಾಗಾಗುವದೆಂದರೆ—ಹೆಗ್ಗಣವನ್ನು ಒಳಗೆ ಬಿಟ್ಟು ಮೇಲೆ ಗಿಲಾಯಿಮಾಡಿದಂತೆಯೂ, ಮುಂಗೈ ಬಿಟ್ಟು ಮೊಳಕೈ ಹಿಡಿದಂತೆಯೂ ಆ[illegible]ವದು. ವಾಚಕಮಹಾಶಯರೆ! ವಾಣಿಜ್ಯಾದಿವ್ಯವಹಾರಗಳಲ್ಲಿಯೂ ಮನುಷ್ಯನು ತನ್ನ ಹಿಡಿತವನ್ನು ತನ್ನ ಕೈಯಲ್ಲಿಟ್ಟುಕೊಂಡವನು ಪಾರಾಗುವನು. ಅಲ್ಲದೆ ದಯಾದಾಕ್ಷಿಣ್ಯಕ್ಕೊಳಗಾಗಿ ಖಂಡಿತವಾಗಿ ವ್ಯವಹಾರ ನಡೆಸದೆ ಧರ್ಮದೃಷ್ಟಿಯಿಂದ ಕುಟಿಲ, ಕುಯುಕ್ತಿಗಳನ್ನು ಮಾಡದೆ "ಬೆಳ್ಳಗಿರುವದೆಲ್ಲವೂ ಹಾಲೆಂದು" ತಿಳಿದು, ವರ್ತಿಸಿದರೆ ಅಂಥವನು ಖಂಡಿತವಾಗಿಯೂ ಕಷ್ಟನಷ್ಟಗಳನ್ನನುಭವಿಸುವನು. ಇದು ಸ್ವತಃ ಅನುಭವದ ಮಾತಾಗಿರುವದು. ವ್ಯವಹಾರಮಾಡತಕ್ಕ ಇಬ್ಬರಲ್ಲಿಯೂ ಸರಳತೆ, ಇಬ್ಬರಲ್ಲಿಯೂ ಕುಟಿಲತೆಯಿದ್ದರೆ ಯಾರೂ ಯಾವ ವಿಧವಾದ ಕಷ್ಟನಷ್ಟಗಳಿಗೆ ಒಳಗಾಗಬೇಕಾಗುವದಿಲ್ಲವು. ಆದರೆ ಒಬ್ಬನಲ್ಲಿ ಸರಳತೆ ಇನ್ನೊಬ್ಬನಲ್ಲಿ ಕುಟಿಲತೆಗಳಿದ್ದರೆ ಮಾತ್ರ ಕುಟಿಲತೆಯಲ್ಲಿ ನಿಪುಣರಾದವರು ಸರಳರನ್ನು ಸುಲಿಯುತ್ತ (ಮ[illegible] ಕೇಳ ಹೆಸರಿಲ್ಲದಂತೆ ಮಾಡಿಬಿಡುತ್ತಾರೆ. ಆದ್ದರಿಂದ ಲೌಕಿಕವ್ಯವಹಾರ ನಡೆಯಿಸತಕ್ಕವರು ಹಗ ಕೊಳ್ಳ ಕೈಕಟ್ಟಿಸಿಕೊಳ್ಳುವ ಪ್ರಸಂಗ ತಂದುಕೊಳ್ಳಬಾರದೆಂದು ಬಹು ಕಳಕಳಿಯಿಂದ ಸೂಚಿಸುವೆನು. ಯಾಕೆಂದರೆ ಮರುಳರಾದವರು ದಾರಿಗಳ್ಳರಾಗಿ ಕಾದುಕೊಂಡಿರುತ್ತಾರೆ. ಕಂಡದ್ದನ್ನು ಕಂಡಹಾಗೆ ಹೇಳಿದರೆ ಕೆಂಡದಂತ ಸಿಟ್ಟು.

(ಸಾಗ

ಆರ್. ಎಂ. ಮಲ್ಲಿಕಾರ್ಜುನಾರಾಧ್ಯ, ತಿಪ್ಪಾ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತ

ಪುರಾಣ ಪರಿಸಮಾಪ್ತಿ ಸಮಾರಂಭಮಹೋತ್ಸವ

ಕೊಟ್ಟೂರು

ಪುಣ್ಯಕ್ಷೇತ್ರವೆನಿಸಿದ ಈ ಕೊಟ್ಟೂರು ಗ್ರಾಮದ ಇದೇ ಸಂ|| ಆಶ್ವಯುಜ ಶು|| ೧ ಲಾಗಾಯತು ಮಾ ಶಿರ ಬ|| ೧೩ ವರೆವಿಗೂ ಶ್ರೀ ರೇಣುಕಾಂಶಸಂಭ ನಾದ ಶ್ರೀ ಗುರುಬಸವರಾಜನ ಪುರಾಣವು ಶ್ರೀ ಪೂಜ್ಯಪಾದರಾದ ಹಸಗೋಡು ಸಿಟ್ಟದ ದೇವರ ಶ್ರ ಅನದಿಂದ ನಡೆಯಿಸಲ್ಪಟ್ಟಿತು. ಪ್ರತಿದಿವಸವು ಶ್ರೀ ವರ ಬೋಧಾಮೃತಪಾನ ಮಾಡಲಿಕ್ಕೆ ೩೪ ಸಾ ಜನರು ಆಗಮಿಸುತ್ತಿದ್ದರು. ಶ್ರೀಗಳವರ ಬೋ ದಿಂದ ಪುರಾಣಾಧಿದೇವನಾದ ಶ್ರೀ ಗುರುಬಸವರ ಜನ ಅವತರಿಸಿದನೋ ಎಂಬಂತೆ ಜನರ ಹೃದಯ ದಲ್ಲಿ ಭಾಸವಾಗುತ್ತಿತ್ತು. ಸದರಿ ಶ್ರೀಗಳವರ ಶಿವ ಜಾಫಲದಿಂದ ಈ ಮಹನೀಯನ ಪುರಾಣವು ಭ ಕ್ತಿಯಾಗಿ ನಡೆಯುತ್ತಿರುವದೆಂದು ಕೊಂಡಾಡುತ್ತಿದ್ದ ಪರಿಸಮಾಪ್ತಿ ಸಮಾರಾಧನೆಯು ಇದೇ ಮಾರ್ಗ ಶಿ ಬ|| ೧೩ ಸೋಮವಾರ ೬-10 ಸಹಸ್ರಾವಧಿ ಭಕ್ತಮ ಶ್ವರರಿಗೆ ಅನ್ನಸಂತರ್ಪಣೆಯು ಭೂರಿದಕ್ಷಿಣೆ ಪೂರ್ವಕ ನಡಿಸಲ್ಪಟ್ಟಿತು. ಈ ಬ|| ೧೧ ಮಂ ವಾರ ಶ್ರೀ ಮಹಾಪುರಾಣವು ಮತ್ತು ಶ್ರೀಗಳ ಅಂದೋಲಿಕೋತ್ಸವವು 10-12 ಸಹಸ್ರ ಜನರ ಕೂಡಿ ಅತಿವೈಭವದಿಂದ ಜರುಗಿತು. ಈ ಮಹಾ ರ್ಯಕ್ಕೆ ವಿಘ್ನಗಳನ್ನು ಮಾಡಬೇಕೆಂದು ಕೆಲವು ಕ ಜನರು ಮಾಡಿದ ಪ್ರಯತ್ನಗಳು ಶ್ರೀ ಗುರುಬಸ ರಾಜನ ಕೃಪೆಯಿಂದ ನೀರಿನಲ್ಲಿ ಹೋಮಮಾಡಿದಂ ಯಿತು. ಈ ಪುರಾಣಸಂಘದವರು ಈ ಧನಕಾ ವನ್ನು ಅತಿ ಭಕ್ತಿಯಿಂದ ನಡೆಸಿದ್ದರಿಂದ ಸ್ವಾರ್ಥಜನ ಬಾಯಿಗೆ ಬೀಗಹಾಕಿದಂತಾಯಿತು. ಈ ಸತ್ಕಾರ್ಯ ೩ ತಿಂಗಳ ಲಾಗಾಯಿತು ಸ್ವಕಾರ್ಯವನ್ನು ಬಿಟ್ಟು ಸ ಮಿಕಾರ್ಯದಲ್ಲಿ ನಿರತರಾದ ಈ ಸಂಘದವರಿಗೆ ಶ್ರೀ ಗುರುಬಸವರಾಜನು ಆಯುರಾರೋಗ್ಯೈಶ್ವರ್ಯಗಳ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

ಓರ್ವ ಪ್ರತ್ಯಕ್ಷದರ್ಶಿ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಸಂಬಂಧದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ನೂರಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ಮೂರು ವರ್ಷಕ್ಕೋ ಹತ್ತು ವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅವರು ತಮ್ಮ ಶಿಷ್ಯರ ಮನೆಗಳ ಯಾವತ್ತು ವಿಷಯವನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವಸ್ಥೆಯಿಂದ ಅನೇಕ ಮಠಗಳ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ನಿವಾರಿಸುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರ ಚನ್ನಾಗಿ ಕೊಡಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಪ್ರತಿಯೊಬ್ಬ ಗುರುವರ್ಗದವರೂ ಖರೀದಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಉತ್ತಮ ಕೆಂಪುಬಣ್ಣದ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಈ ಕೆಳಕಂಡ ಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲ	ಮೌಲ್ಯ
ಸರ್ವಜ್ವರಧ್ವಂಸಿ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ರಸಸಿಂದೂರ	೧	೩—೦—೦
ಮಲ್ಲಸಿಂಧೂರ	೧	೪—೦—೦
ತಾಳಸಿಂಧೂರ	೧	೪—೦—೦
ಶಿಲಾಸಿಂದೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೨—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೬—೦
ನಾಗಭಸ್ಮ	೧	೦—೮—೦
ಅಭ್ರಕಭಸ್ಮ	೧	೦—೮—೦
ಶಂಖಭಸ್ಮ	೧	೦—೮—೦
ಶೃಂಗಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಕಪರ್ದಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಮುತ್ತಿನಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ರಸಾದಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ್,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಸಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ಕರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜ ಪ್ರತ್ಯೇಕ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಉತ್ಕೃಷ್ಟವಾದುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿದ್ದಾರೆ. ಈ ಮೂಲಗ್ರಂಥವು ಕೇವಲ ೩೪ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಮುಕ್ತಕಂಠದಿಂದ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಂಡಿತರಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ಕರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೬೭ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುರ್ದಿನದಲ್ಲಿಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮೀಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ [illegible] ಫೋಟೋ [illegible]	೦—೩—೦
ಶ್ರೀ [illegible] ಪಂಚಾಚಾರ್ಯರು [illegible] ಫೋಟೋ [illegible]	೦—೧—೬
[illegible] ಫೋಟೋ [illegible]	೦—೨—೬
ಶ್ರೀ ಜಗದ್ಗುರು [illegible] ಪಂಚಾಚಾರ್ಯರ [illegible] ಫೋಟೋ [illegible]	೦—೧—೬
ಶ್ರೀ ಜಗದ್ಗುರು [illegible] ಫೋಟೋ [illegible]	೦—೦—೯
ಶ್ರೀ [illegible] ಶ್ರೀ ಜಗದ್ಗುರು [illegible] ಫೋಟೋ	೦—೦—೯
ಶ್ರೀ [illegible] ಶ್ರೀ ಜಗದ್ಗುರು [illegible]	೦—೦—೯
ಶ್ರೀ ಜಗದ್ಗುರು [illegible] ಶಿವಾಚಾರ್ಯರು [illegible] ಫೋಟೋ	೦—೦—೯
ಶ್ರೀ [illegible]	೦—೦—೯
ಶ್ರೀ [illegible] ಗುರುರೂಪವನ್ನು [illegible] ಫೋಟೋ [illegible]	೦—೦—೯
ಶ್ರೀ [illegible] ಶ್ರೀ [illegible] ಫೋಟೋ	೦—೦—೯
ಶ್ರೀ [illegible] ಜಗದ್ಗುರುಗಳವರ [illegible] ಶ್ರೀ [illegible] ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ [illegible]	೦—೦—೯
ಶ್ರೀ ಜಗದ್ಗುರು [illegible] ಫೋಟೋ [illegible]	೦—೦—೯
ಶ್ರೀ ಜಗದ್ಗುರು [illegible] ಫೋಟೋ [illegible]	೦—೦—೯
ಶ್ರೀ ಜಗದ್ಗುರು [illegible] ಫೋಟೋ	೦—೦—೯
ಶ್ರೀ ಜಗದ್ಗುರು [illegible] ಫೋಟೋ	೦—೦—೯
[illegible] ಶ್ರೀ [illegible] ಫೋಟೋ	೦—೦—೯
[illegible] ಜಗದ್ಗುರುಗಳವರ [illegible] ಫೋಟೋ	೦—೦—೯

ಸೂಚನೆ — [illegible] ಕಳುಹಿಸುವದಾಗುವದಿಲ್ಲ [illegible] ತರಿಸಿಕೊಳ್ಳುವವರಿಗೂ [illegible] ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜೇ ಬಿ ಯುವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ[illegible] ಕಂಡುಹಿಡಿಯಲ್ಪಟ್ಟು [illegible] ಉಪಯೋಗಿಸಿ [illegible]ಗಳಾಗಿ, ಯೋಗ್ಯತಾಪ[illegible]

ಗಳನ್ನು ಕೊಟ್ಟ[illegible]ರು ಪ್ರಸಿದ್ಧವಾದ[illegible] ನಶ್ಯದ ಪುಡಿಯು[illegible] ಸ್ಪಷ್ಟವಾಗುವ ವ್ಯಾಧಿಗಳು ಯಾವವೆ[illegible]ರೆ — [illegible] ತಲೆನೋವು ತಲೆ[illegible]ಳ್ಳಿಯ ರೋಗಗ[illegible] ಕಣ್ಣುಗಳಲ್ಲಿ [illegible] ಗಳು ಸರ್ವವ್ಯಾಧಿಗಳು, [illegible] ವ್ಯಾಧಿಗಳು ಪರಿಹಾರವಾಗುವವಲ್ಲದೆ [illegible] ವ್ಯಾಧಿಗಳನ್ನು ಸ್ಪಷ್ಟಪಡಿಸಿ [illegible] ಯುಸ್ಸೂ ಸಹ ಹೆಚ್ಚು ಮಾಡುತ್ತದೆ [illegible] ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು[illegible]ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲ[illegible] ಸರಿಸುಳವಾಗುವುದು ಇದನ್ನು ಅನೇಕ ಪ್ರಭುಗ[illegible] ತಮ್ಮ ಗೃಹದಲ್ಲಿ ಕುಟುಂಬಪರಿವಾರವಾಗಿ ಉಪಯೋ[illegible] ಸತ್ಕಾರ ಮಾಡಲಿಕ್ಕೆ ಹೊಗಸಿಟ್ಟಿ ಕಳುಹಿಸಲಾಗು[illegible]

ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦ ವಿ. ಪಿ. ೦ ೪ [illegible]

ಡಜನ್ ಒಂದಕ್ಕೆ ಕ್ರಯ ರೂ ೩ ೮ ೦ ವಿ. ಪಿ. ೮ [illegible]

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[illegible] ಪೋ ಬಾ ೫೯೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ [illegible]	೨ ಆಣೆ
[illegible]	೧ ಆಣೆ
ಗೋತ್ರಸೂತ್ರ [illegible] ([illegible] ಆವೃತ್ತಿ)	೧ ಆಣೆ
[illegible] ([illegible] ಆವೃತ್ತಿ [illegible])	೧ ಆಣೆ
[illegible] ([illegible] ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ [illegible] ([illegible] ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ([illegible] ಆವೃತ್ತಿ)	೧ ಆಣೆ
[illegible] ([illegible] ಆವೃತ್ತಿ)	೨ ಆಣೆ
ಶ್ರೀ ರೇಣುಕ[illegible] ([illegible] ಆವೃತ್ತಿ)	೨ ಆಣೆ
ಪಂಚಾಚಾರ್ಯ [illegible]	೨ ಆಣೆ
ಶಿವಶಕ್ತಿ[illegible]	೨ ಆಣೆ
ಶ್ರೀ ಗುರುತತ್ತ್ವ [illegible]	೨ ಆಣೆ
[illegible]	೨ ಆಣೆ
ಶ್ರೀ [illegible] ಶತಕ	೨ ಆಣೆ
[illegible]	೩ ಆಣೆ
ವೀರಶೈವ[illegible] ([illegible] ಆವೃತ್ತಿ)	೩ ಆಣೆ
ವಿವಾಹವಿಧಿ ([illegible] ಆವೃತ್ತಿ)	೪ ಆಣೆ
[illegible] ([illegible] ಆವೃತ್ತಿ)	೪ ಆಣೆ
ವೈದಿಕ[illegible]	೪ ಆಣೆ
[illegible]	೮ ಆಣೆ
ಶಿವಾಧಿಕ್ಯ[illegible] ([illegible])	೮ ಆಣೆ
[illegible] ([illegible] ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ[illegible]
पण्डित श्रीकाशीनाथशास्त्री यांचे भाषण (मराठी)	८ आणे
Speeches by Pandit Shri Kashinatha Shastri (*English*)	12 As.
[illegible] ([illegible] ಆವೃತ್ತಿ)	೧೨ ಆ[illegible]
ವೈದಿಕಶಿವಪೂಜಾ ವಿಧಿ ([illegible])	೧೨ ಆ[illegible]
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರ[illegible]	೧೨ ಆ[illegible]
[illegible] ([illegible] ಆವೃತ್ತಿ)	೧೨ ಆ[illegible]
[illegible] ([illegible])	೧೨ ಆ[illegible]
[illegible] ಸಿದ್ಧಾಂತದರ್ಪಣ	೧೨ ಆ[illegible]
[illegible] ([illegible] ಆವೃತ್ತಿ)	೧ ರೂ
ಸಿದ್ಧಾಂತ[illegible] (ವೀರಶೈವಭಾಷ್ಯ)	೧ ರೂ
[illegible] (ವೀರಶೈವಭಾಷ್ಯ)	೧ ರೂ
[illegible] ([illegible])	೧ ರೂ
ವೀರಶೈವ ಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತ[illegible] ([illegible])	೮ ರೂ
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य–संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ[illegible] ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ[illegible] ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು [illegible] ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮ್ಯಾನೇಜರ್ [illegible] ಗುರು[illegible] ಮುದ್ರಿಸಿ ಪ್ರಕಟಿಸ[illegible]

REGISTERED No M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ||
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂನ್ ಮುನಿವರಾನ್ ಪಾಲಿಷ್ಟ ದೀಲೋಕಪಾನ್ ||

ಸಂಪಾದಕರು—ಅಷ್ಟಾಂಗ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೦ನೇ ಜನವರಿ ೧೯೩೬ [ಸಂಚಿಕೆ ೩೭

ಶ್ರೀ ೧೦೦೮ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಶಿವಲೋಕಯಾತ್ರೆ.

ಯಾವ ಮಹಾತ್ಮರ ತಪಃಪ್ರಭಾವದಿಂದ ವೀರಶೈವ ಜಗದ್ಗುರುಪಂಚಪೀಠಗಳು ಪ್ರಕಾಶಿಸತೊಡಗಿದವೋ ಆ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಇಹಲೋಕತ್ಯಾಗದಿಂದ ಅಖಿಲ ವೀರಶೈವಪ್ರಪಂಚವೇ ಶೋಕಸಾಗರದಲ್ಲಿ ಮುಳುಗಿರುವುದು. ಈ ಭಗವತ್ಪಾದರು ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾರೋಹಣಮಾಡಿದಂದಿನಿಂದ ವೀರಶೈವಸಮಾಜದ ಭಾಗ್ಯೋದಯವಾಯಿತು. ವೀರಶೈವ ಧರ್ಮಾಧಿಕಾರಿಗಳಾದ ಗುರುವರ್ಗದವರು ಜಾಗ್ರತರಾಗಲು ಈ ಪೂಜ್ಯಪಾದರೇ ಕಾರಣರಾದರು. ಶ್ರೀ ಜಗದ್ಗುರು ಹಿಮವತ್ಕೇದಾರಪೀಠವು ನಾನಾತರದ ವಿಪತ್ತಿಗೆ ಗುರಿಯಾಗಿ ನಮ್ಮ ವೀರಶೈವ ಹಸ್ತದಿಂದ ಪರ ಹರಕೀಯರ ವಶವಾಗುವಂಥ ದುರ್ಧರಪ್ರಸಂಗವು ಪ್ರಾಪ್ತವಾಗಿತ್ತು. ಈ ಭಗವತ್ಪಾದರು ಆ ಪೀಠವನ್ನು ಜಗತ್ತಿನಲ್ಲಿ ಉಳಿಯುವಂತೆ ಮಾಡಿದರು. ರಂಭಾಪುರೀಪೀಠದ ವಿಷಯದಲ್ಲಿಯಂತೂ ಈ ಜಗದ್ಗುರುಗಳು ತಮ್ಮ ಅಮೋಘವಾದ ತಪೋಬಲವನ್ನು ಧಾರೆಯಾಗಿ ಎರೆದರು. ಪರಮತಪೋನಿಧಿಗಳಾದ ಶ್ರೀ ಜಗದಾಚಾರ್ಯರ ಅತ್ಯದ್ಭುತ ಮಹಿಮೆಗಳು ಸ್ಮರಣೆಗೆ ಬಂದಬಂದಂತೆ ದುಃಖವು ಸೂರ್ಧ್ವಿಯಾಗಿ ಉಕ್ಕೇರಿ ಲೇಖನಿಯು ತತ್ತರಿಸಿ ಕೆಳಗೆ ಬೀಳುವದು. ಹಾಯ್, ಹಾಯ್ ಜಗಜ್ಜ್ಯೋತಿಯಲ್ಲಿ ಮಾಯವಾದ ಜಗದ್ಗುರುವನು ನಮಗೆ ಇನ್ನೆಲ್ಲಿ ದೊರೆಯುವನು! ಯಾರ ಪವಿತ್ರ ನಾಮಸ್ಮರಣೆಯು ಸಮಸ್ತ ಮಾನವರ ಪಾಪವನ್ನು ಶಮನಗೊಳಿಸುತ್ತಿತ್ತೋ ಆ ಪೂಜ್ಯಮೂರ್ತಿಯ ದರ್ಶನವು ಪಾಮರರಾದ ನಮಗಿನ್ನೆಲ್ಲಿ ದೊರೆಯುವುದು! ಅದೃಶ್ಯವಾಗಿ ಪರಬ್ರಹ್ಮಜ್ಯೋತಿಯಲ್ಲಿ ಲೀನವಾಗಿ ಹೋದ ವೀರಶೈವ ಜಗಜ್ಜ್ಯೋತಿಯು ಚರ್ಮಚಕ್ಷುವಿನಿಂದ ನೋಡುವ ನಮಗೆ ತೋರುವ ಬಗೆ ಎಂತು? ವೀರಶೈವ ಮತಕ್ಕೆ ಮಹೋಪಕಾರವನ್ನು ಮಾಡಿದ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಅಗಲುವಿಕೆಯ ದುಃಖವನ್ನು ಪಂಡಿತಮಂಡಲಿಯು ಹೇಗೆ ನಿವಾರಿಸಿಕೊಳ್ಳುವದು? ಪಂಡಿತರ ಉಚ್ಛ್ರಾಯಶಿಖರವೇ ಕಳಚಿಹೋಯಿತು. ವೀರಶೈವಮಹಾಮಂದಿರದ ಶಿಖರವು ಮಾಯವಾಯಿತು. ಅಸಹನೀಯವಾದ ದುಃಖವನ್ನು ನಿವಾರಿಸಲು ಆ ಪರಂಜ್ಯೋತಿಯೊಡನೆ ಬೆರೆತ ಜಗದ್ಗುರುವಿನ ಆತ್ಮಜ್ಯೋತಿಯೇ ಸಮರ್ಥವಾಗಿರುವದರಿಂದ ನಾವೆಲ್ಲರೂ ಆ ಜಗದಾರ್ತ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರನ್ನು ಪ್ರಾರ್ಥಿಸೋಣ.

ಶಿರೋಳ ಪಂಚಾಕ್ಷರಶಾಸ್ತ್ರೀ.

ವಿಷಾದಪ್ರದರ್ಶನ ಸಭೆ.

ತಾರೀಖು 14 1 36 ರಲ್ಲಿ ರಾಯದುರ್ಗದ ವೀರಶೈವ ಸಮಾಜದವರು ಶ್ರೀಮಜ್ಜಗದ್ಗುರು ಉಜ್ಜಯಿನೀ ಮಹಾಸ್ವಾಮಿಗಳವರು ಶಿವೈಕ್ಯರಾದ ವಿಷಯವನ್ನು ಕುರಿತು ಶ್ರೀ ಬಸವೇಶ್ವರ ಆಲಯದಲ್ಲಿ ವಿಷಾದಪ್ರದರ್ಶಕ ಸಭೆಯನ್ನು ನಡೆಯಿಸಿದರು. ಆ ಸಭೆಯಲ್ಲಿ ಮಾಡಿದ ತೀರ್ಮಾನಗಳು —

1 ಸಭಿಕರು ರಾ|| ರಾ|| ಕೋರಿಶೆಟ್ಟಿ ಸಣ್ಣಪ್ಪನವರಿಗೆ ಬಂದ ಟೆಲಿಗ್ರಾಮನ್ನು (ತಂತಿಯನ್ನು) ನೋಡಿದರು.

2 ಶ್ರೀಮದುಜ್ಜಯಿನೀ ಜಗದ್ಗುರು ಶ್ರೀ ಸಿದ್ಧಲಿಂಗಸ್ವಾಮಿಗಳವರು 12-1-36 ರಂದು ಶಿವಸಾಯುಜ್ಯ ಹೊಂದಿದರೆಂಬ ವಾಕ್ಯವನ್ನು ಕೇಳಿ ಎಲ್ಲರೂ ಏಕಕಂಠದಿಂದ ತಮ್ಮ ತಮ್ಮ ಪರಿತಾಪವನ್ನು ವ್ಯಕ್ತಗೊಳಿಸಿದರು.

3 ಶ್ರೀ ಸ್ವಾಮಿಗಳವರು ಸುಮಾರು 24 ವರ್ಷಗಳ ಕಾಲ ವೀರಶೈವ ಸಮಾಜವನ್ನು ಸುಧಾರಿಸುವುದಕ್ಕಾಗಿ ಅನಂತಾನಂತ ಪ್ರಯತ್ನಗಳನ್ನು ಮಾಡಿ ಆಕಸ್ಮಿಕವಾಗಿ ಲಿಂಗೈಕ್ಯರಾದುದರಿಂದ ಸಮಾಜಕ್ಕೂ ಮತ್ತು ಆಚಾರ್ಯಪೀಠಗಳಿಗೂ ಮಹತ್ತರವಾದ ನಷ್ಟವು ಸಂಭವಿಸಿತೆಂತಲೂ ಇಂತಹ ಮೂರ್ತಿಗಳ ಕೊರತೆಯನ್ನು ತುಂಬಿಸುವುದು ಅತ್ಯಧಿಕವಾದ ಕಷ್ಟವಾದುದೆಂತಲೂ ತೀರ್ಮಾನಿಸಿದರು.

4 ಈ ವಿಷಾದಪ್ರದರ್ಶಕ ಸಭೆಯ ತೀರ್ಮಾನವನ್ನು ಎಲ್ಲಾ ಪತ್ರಿಕೆಗಳಿಗೂ ಮತ್ತು ಶ್ರೀಮದುಜ್ಜಯಿನೀ ಪೀಠಕ್ಕೂ ಕಳುಹಿಸಬೇಕೆಂದು ತೀರ್ಮಾನಿಸಿದರು.

ಪಿ. ಎಂ ಮೂರ್ತಿನಾಥಶಾಸ್ತ್ರಿ,
ವಿದ್ವಾನ್

ಪ್ರಸಿದ್ಧ ಪತ್ರಿಕೆ.

ಶ್ರೀ ಶಿವಾನಂದಾಶ್ರಮ, ಕಂಸಾಗರ ಎಸ್ಟೇಟ್
ಕಡೂರು ಪೋಸ್ಟ್

ಕಡೂರು ತಾ|| ಹೆಡ್ ಕ್ವಾರ್ಟರಿಗೆ ಸಮೀಪದಲ್ಲಿ 'ಶ್ರೀ ಶಿವಾನಂದಾಶ್ರಮ' ಕಂಸಾಗರ ಎಸ್ಟೇಟಿನಲ್ಲಿ ಮಹಾಶಿವರಾತ್ರಿಯ ಕಾಲದಲ್ಲಿ ತಾ|| 21-2-36 ನೇ ಶುಕ್ರವಾರದಲಾಗಾಯಿತು ಒಂದು ವಾರದವರಿಗೆ ನಡೆಯುವ ಶ್ರೀ ಮರುಳಸಿದ್ಧೇಶ್ವರಸ್ವಾಮಿ ಜಾತ್ರೆಯ ಸಂದರ್ಭದಲ್ಲಿ ದನಗಳ ಮತ್ತು ಕುರಿಗಳ ಪ್ರದರ್ಶನವನ್ನು ನಡೆಯಿಸಬೇಕಾಗಿ ಪ್ರದರ್ಶನಕಮಿಟಿಯವರು ನಿಶ್ಚಯಿಸಿದ್ದಾರೆ.

ಈ ಪ್ರಾಂತದಲ್ಲಿ ದನಗಳ ಜಾತ್ರೆಯು ವಿಶೇಷವಾಗಿ ನಡೆಯುತ್ತಿಲ್ಲವಾಗಿ ದನಗಳನ್ನು ಕೊಳ್ಳುವರು, ಮಾರುವವರು ಸಹಾ ಬಹಳ ದೂರವಾದ ಪಾಸನ ವಗೈರೆ ಜಾತ್ರೆಗಳಿಗೆ ಹೋಗಬೇಕಾಗಿತ್ತು. ಆ ತೊಂದರೆ ತಪ್ಪಿ ದನಕರುಗಳ ವ್ಯಾಪಾರವು ಚೆನ್ನಾಗಿ ನಡೆಯುವ ಭರವಸ ಇದೆ.

ಜಾತ್ರೆ ನಡೆಯುವ ಪ್ರದೇಶವು ಕಡೂರು ಚಿಕ್ಕಮಗಳೂರು ರಸ್ತೆಯ ಬಾಜೂವಲ್ಲಿದ್ದು, ನೀರು ಮತ್ತು ನೆಳಲಿನ ಸೌಕರ್ಯವು ಚೆನ್ನಾಗಿದೆ. ದನಗಳ ಮೇವು ಸಹಾ ಕ್ರಯಕ್ಕೆ ದೊರೆಯುತ್ತದೆ.

ಜಾತ್ರೆಯ ಕಾಲದಲ್ಲಿ ಆಟಗಳು, ನಾಟಕಗಳು ಮೊದಲಾದ ಕಲೆಗಳ ಪ್ರದರ್ಶನಗಳಿಗೂ ಏರ್ಪಾಡು ಮಾಡಲಾಗಿದೆ.

ರೈತರ ಅಭಿವೃದ್ಧಿಗೆ ಅನುಕೂಲಗಳಾದ ಪಶುಪಾಲನೆ, ವ್ಯವಸಾಯ, ಗ್ರಾಮಾರೋಗ್ಯ, ವಿದ್ಯಾಭ್ಯಾಸ ಮೊದಲಾದ ವಿಷಯಗಳಲ್ಲಿ ಮಹನೀಯರ ಉಪನ್ಯಾಸಗಳೂ ನಡೆಯುವ ಏರ್ಪಾಡಿದೆ.

ನಮ್ಮ ರೈತಬಂಧುಗಳಿಗೆ ವಿರಾಮಕಾಲವೂ ಆಗಿದೆ. ಆದ್ದರಿಂದ ಈ ಸಂಧಿಯನ್ನು ಕಳೆದುಕೊಳ್ಳದೆ ರೈತಬಂಧುಗಳೆಲ್ಲರೂ ತಮ್ಮ ತಮ್ಮ ಉತ್ತಮ ರಾಸುಗಳೊಡನೆ ಜಾತ್ರೆಗೆ ದಯಮಾಡಿಸಬೇಕಾಗಿ ಕೋರಿದೆ.

ಜಾತ್ರೆ ಮತ್ತು ಪ್ರದರ್ಶನದ ಸ್ವಾಗತಸಂಘ,
ವ್ಯವಸ್ಥಾಪಕರು,
ತಾ||26 12 1935 ಶ್ರೀ ಶಿವಾನಂದಾಶ್ರಮ,
ಕಂಸಾಗರ ಎಸ್ಟೇಟ್

ಶ್ರೀ ರಾಮೇಶ್ವರ ಕ್ಷೇತ್ರಕ್ಕೆ
ಯಾತ್ರಾರ್ಥಿಗಳಾಗಿ ಬರತಕ್ಕ ವೀರಶೈವರಿಗೆ

ಸೂಚನೆ.

ಸುಪ್ರಸಿದ್ಧವಾಗಿರುವ ಶ್ರೀರಾಮೇಶ್ವರಕ್ಷೇತ್ರಕ್ಕೆ ಬರುವ ವೀರಶೈವರಿಗೆ ಯಾವ ಪ್ರಕಾರದ ಸೌಕರ್ಯವೂ ಇಲ್ಲದಿರುವದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ನಾವು ವೀರಶೈವರ ವಸತಿಗಾಗಿ "ಜಂಗಮವಾಡಿ" ಎಂಬ ಸ್ಥಳವನ್ನು ಏರ್ಪಡಿಸಿರುವೆವು. ವೀರಶೈವರಿಗೆ ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡುವೆವಲ್ಲದೆ ದರ್ಶನಾದಿಗಳಿಗೆ ಬೇಕಾಗುವ ಸುವ್ಯವಸ್ಥೆಯನ್ನು ಕಲ್ಪಿಸಿಕೊಡುವೆವು. ಮಾಹಿತಿಗಾಗಿ ನಮ್ಮ ಸಂಗಡ ಪತ್ರವ್ಯವಹಾರ ಮಾಡಬೇಕಾಗಿ ಕೋರಿಕೆ.

ಗುರುಸಿದ್ಧಸ್ವಾಮಿ,
(13) ಜಂಗಮವಾಡಿ ಮಠ, ರಾಮೇಶ್ವರ,
ಪೋ|| ರಾಮೇಶ್ವರ (S.I.Ry.)

ಪತ್ರವ್ಯವಹಾರ

ಚಂದಾದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

ಮಹನೀಯರ ಹಿತೋಕ್ತಿಗಳು

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

೩ [illegible] ಸತ್ಯವಾದಿ [illegible] ನಲ್ಲಿ ಸತ್ಯಕ್ಕಿಂತಲೂ ಹಿರಿದಾದ ಧರ್ಮ (ಸ್ವರ್ಗ) ವಿಲ್ಲ ಸುಳ್ಳಿಗಿಂತಲೂ ಹೆಚ್ಚಿನ ಪಾಪ (ನರಕ) ವಿಲ್ಲ ಮನಸ್ಸಿನಲ್ಲಿ [illegible] ಪರಮಾತ್ಮನಿಗೆ ತಿಳಿಯದ ಸಂಗತಿ [illegible] ಯಿಲ್ಲ ದುರ್ಜನರು [illegible] ಪ್ರಸಂಗದಲ್ಲಿ ತನ್ನ ಇಷ್ಟದೈವವನ್ನು ಹಿಡಿದು ಪ್ರಮಾಣ ಮಾಡಿ ಅನ್ಯರ ಹಣ ಅಪಹರಿಸಿದರೆ ಅವನೇನು ಪಾಪಿಯಲ್ಲವೆ? [illegible] ಗೌರವವೆಲ್ಲಾ [illegible] ಮಾಡಿ [illegible] ತ್ಯಗಳನ್ನು ಮಾಡಿ ಪರಮೇಶ್ವರನ ಭವರೋಗಕ್ಕೆ [illegible] ಹೇಯವೆನಿಸುವದಲ್ಲ [illegible] ಅಪಾಯಕರವಾದ [illegible] ಸಮಾಜದಲ್ಲಿ [illegible] ರ್ಯವೇ ಅತ್ಯಂತ [illegible] ಸನ್ಮಾರ್ಗನಡತೆಯೇ ಅಮೂಲ್ಯವಾದ ಐಶ್ವರ್ಯವೆಂದು ಅರಿಯಬೇಕಲ್ಲ ಸ್ವಕಾರ್ಯಸಾಧನೆಗಾಗಿ ಎಲ್ಲರಿಗೂ ಒಳ್ಳೆಯವರಾಗಿರಬೇಕೆಂಬ ಉದ್ದೇಶದಿಂದ [illegible] ನಂತೆ ಎಲ್ಲಾ ಕಡೆಗೂ ತಲೆಹಾಕುತ್ತಿದ್ದರೆ [illegible] ಅಪಾಯದ ಮನಸ್ಸನ್ನು [illegible] ವರು ಎಷ್ಟು ಪೂಜಾ ಪುನಸ್ಕಾರಗಳನ್ನು ಮಾಡಿದರೂ ತ್ರಿಶಂಕುಸ್ವರ್ಗ (Armel devil) [illegible] ಕೈಗೆ ಸಿಕ್ಕಿದ್ದನ್ನು ಹ್ಯಾಗೆ ಕೊಡುವನೆಂದು [illegible] ವನು ನಿಂಚಿತನಲ್ಲ ಹೃದಯದಲ್ಲಿರುವುದೆ [illegible] ಬರಬೇಕಲ್ಲ ಅದನ್ನು [illegible] ನ್ಯಾಯವಿಮರ್ಶೆಯಲ್ಲಿ [illegible] ತನ್ನ [illegible] ಒಂಥವರು ಮಿತ್ರರೆಂದು, ಪೂರ್ವದಿಕ್ಕಿಗೆ [illegible] ವೆಂದು ಹೇಳಿದರೆ [illegible] ತಪ್ಪು [illegible] ಆಗುವದಲ್ಲ ಮನುಷ್ಯನ [illegible] ಲಕ್ಕೆ ಸದೃಶವಾದ ವಿಷವಲ್ಲ ಸ್ತ್ರೀಯರು [illegible] ಹಿತಕಾರ್ಯದಲ್ಲಿ ತಮ್ಮ ಮಾನಕ್ಕೆ ಧಕ್ಕೆಹತ್ತುವ ಪ್ರಸಂಗದಲ್ಲಿ ಸಿಂಹಿಣಿಯರಂತೆ ಶೌರ್ಯ ತೋರಿಸಿದರೆ [illegible] ರವಣಿ" ಎಂಬ ನಾಮವು ಅನ್ವರ್ಥವಾಗವಷ್ಟು ಇದನ್ನು ಬಿಟ್ಟು ಸಂಸ್ಕೃತಿಯ ಬಲದಿಂದ ಸ್ಪರ್ಧೆ [illegible] ತೆಗಳಿಗೆ ತುತ್ತಾಗಿ [illegible] ಬಂದು [illegible] ರೆದುರಿಗೆ ನಿರ್ಲಜ್ಜೆಯಿಂದ ಎದೆಯನ್ನು [illegible] ಕೊಂಡುನಿಂತು ತೊಡೆಭುಜಗಳನ್ನು [illegible] ದರೆ ಬಜಾರಿ, ಗಂಡುಬೀರಿ ಎನ್ನುವರಲ್ಲ ಇಂತಹ ಗುಣಗಳುಳ್ಳವರಿಗೇನೇ ಹಿಡಂಬಿ [illegible] ಶಾಕಿನಿ, ಢಾಕಿನಿಯರೆಂದು ಜ್ಞಾನಿಗಳು ಕರೆದಿರುವರಲ್ಲ ಹುಟ್ಟಿದ ಮನೆಗೂ, ಸೇರಿದ ಮನೆಗೂ [illegible] ಗೌರವವಷ್ಟು "ನಾರಿ ಸ್ವರ್ಗದ ದಾರಿ ಇಹಕುಪಕಾರಿ ಪುರುಷನಿಗೆ ಸಹಕಾರಿ, ನಾರಿ ಮಾರನ್ನು ತೋರಿದರೆ ಹೆಮ್ಮಾರಿ ಸರ್ವಜ್ಞ" ಎಂಬ ವಚನವು ಅಕ್ಷರಶಃ [illegible] ದಲ್ಲಿ 'ಪುರುಷನಿಗೆ [illegible] ನಾರಿಯೇ ಹೆಮ್ಮಾರಿ' ಎಂದು ಕನಕದಾಸರೂ ಸಹ ಹೇಳಿರುವರಲ್ಲ ರಾಕ್ಷಸೀ ಮಹತ್ವಾಕಾಂಕ್ಷೆಯೆಂಬ [illegible] ಳಗಣ ಮದಾಲಸ, ಕೋದಂಡ, ಧುಜ ಯರ ನೆನಪಾಗುವದಲ್ಲ ಹೆಣ್ಣು ಗಂಡಾಗಿಯೂ, ಗಂಡು ಹೆಣ್ಣಾಗಿಯೂ ವರ್ತಿಸಿದ್ದು ಮಾತ್ರ ಬಹು ಆಶ್ಚರ್ಯವಲ್ಲ ಇನ್ನಾದರೂ ಅರಿಯಬೇಕಲ್ಲ ಮೋಸ, ದಗಾ, ಸ್ವಾರ್ಥತೆ, ಹೊಟ್ಟೆಕಿಚ್ಚು ಬಿಡಬೇಕಲ್ಲ ಹೇಳುವದು ವೇದ, ಹಾಕುವದು ಗಾಳ ಎಂಬ ನಡವಳಿಕೆಯನ್ನು ಪಲಾಯನಗೊಳಿಸಬೇಕಲ್ಲ ಗೌಡಬಂಗಾಲಿ ವಿದ್ಯೆಯು ಅವಿಶ್ವಾಸಕ್ಕೆ ಕಾರಣವಲ್ಲ ನುಡಿಯಂತೆ ನಡೆ ಇದೇ ಜನ್ನದ ಕಡೆ ಎಂದು ಅರಿವಾಗಬೇಕಲ್ಲ ಸತ್ಸಂಗ ಮಾಡಬೇಕಲ್ಲ ಮೂಲಾಹಂಕಾರವಳಿಯಬೇಕಲ್ಲ "ನಾನು" ಎಂಬ ಮರಭಿಮಾನ ಬಿಡಬೇಕಲ್ಲ ಸದ್ಗುರುಮೂಲಕ ಆತ್ಮಜ್ಞಾನ ಸಂಪಾದಿಸಿಕೊಳ್ಳಬೇಕಲ್ಲ ಪರಕೀಜೋಭಂಗವು ತನ್ನ ಅವನತಿಗೆ ಕಾರಣವಾಗುವನಲ್ಲಿ ಈ ಜಗತ್ತು (ಲೋಕ) ಯು ಬಹು ಅಸ [illegible] ಕಾರಣವೇ [illegible] ಸರ್ವ [illegible] ಪ್ತಿಯೂ ಆತ್ಮವಾನವಿ [illegible] ನೇಹಯಾತ್ರೆಯನ್ನು ಪ್ರಾರಬ್ಧ [illegible] ನಡೆಯಲೇಬಾ [illegible] ದೈವಬಲವೇ ಬಲ [illegible] ನಂಬಬೇಕಲ್ಲ ಮಹ [illegible] ಕವಂತೆ ನಡೆದು ಸರ್ವರೂ ಧನ್ಯರಾಗಬೇಕಲ್ಲ ಸತ್ಯಮೇವ ಜಯತಿ

೪ ಈ ಮಾಯಾವಿ ಯ ಜಗತ್ತಿನಲ್ಲಿ ಅತಿಸ್ವಾರ್ಥ [illegible] ದಯವಿಲ್ಲದ ವನಸ್ಸಿಲ್ಲದ [illegible] ಮನಸ್ಸಿನ [illegible] ತಮ್ಮ ಕಡೆಗಿಂತಲೂ [illegible] ಬಹಳವಿರುವದು [illegible] ಸುಖ [illegible] ವರೆ ಒಪ್ಪಿಸಿ ಮಾಡಿದರೆ [illegible] ಸುಖವೆಂದಿತಲ್ಲ! ಅಸ್ತಿ [illegible] ದನಲ್ಲ! ಎಂದು ಹೊಟ್ಟೆಕಿಚ್ಚು ಪಡುವರು ಮತ್ತು [illegible] ದರೆ [illegible] ವ್ಯರಿಂದಲೇ ತಮಗೆ ಸವರಕ್ಕ [illegible] ರಣೆಯಾದಂತೆ ಒಲಿಸುತ್ತ [illegible] ಯಾದದ್ದನ್ನು ನೋಡಬೇಕೆಂದು [illegible] ಮತ್ತು ಇತರರಿಗೆ ಲಭ್ಯವಷ್ಟ [illegible] ವರ ಉತ್ತಮವಾದದ್ದನ್ನು [illegible] ಸ್ಥಾನ [illegible] ಮಾಡ್ಯ [illegible] ಎಂದು ಒಳಗಿಂದೊಳಗೆ ತಮ್ಮ [illegible] ತಿಂದುಕೊಳ್ಳುವರು [illegible] ಪಡೆದದ್ದು [illegible] ಮತ್ತು [illegible] ಕಾಲವನಂ [illegible] ಪ್ರ [illegible] ಪ್ರಸ್ತಾವಕೆ ಸರಿ [illegible] ಆಗಬಾರದ್ದು ಆಗದೆ [illegible] ಉತ್ಕೀರ್ತನೆ [illegible] ವೀಧಿವೀಧಿಯಲ್ಲಿ ಸಾರುವರು [illegible] ಗೆ ಸುಖ [illegible] ಸೂಕ್ಷ್ಮವಾಗಿ [illegible] ಸವನ್ನು [illegible] ಪುರ [illegible] ಯಂದೆಸ್ವಂಪ ವಿಲಗ್ನಸ್ಯ [illegible] ಇಂತಹ ಧೂರ್ತ [illegible] ವಾಸ್ತವಾಗ ಕ್ಕಿರುವ [illegible] ನೀಚರ ನೀಚತನಕ್ಕೆ ಧಿಕ್ಕಾರ!

[illegible] ಆಶಯ! ಆದರೆ ನಿಸ್ವಾರ್ಥ ರೂ [illegible] ಪ್ರಭಾವ ಮನಸ್ಸುಳ್ಳವರೂ ಆದ [illegible] ಪಠನವು ಮೇಲ್ಕಂಡವರಿಗಿಂತ ತೀರಾ [illegible] ಗಿರತಕ್ಕದ್ದು ಅದು ಹೇಗೆಂದರೆ—ಯಾರಿಗಾದರೂ [illegible] ಸಂತೋಷಗಳುಂಟಾದರೆ, ಹೊಲ ಮನೆ ಸಂಪಾದಿಸಿದರೆ, ವ್ಯವಹಾರದಲ್ಲಿ ಅಧಿಕ ಲಾಭ ಹೊಂದಿದರೆ ಈಗೂ ನಮ್ಮ ವಿತ್ರನಿಗೆ ಇಂದು ಇಂದ ಅನ ಕೂಲವಾಯಿತು! ಇಂಪ್ರಾದ್ದನ್ನು ಸಂಪಾದಿಸಿದನು! ಎಂದೆನ್ನುತ್ತಾ ಹರಿಹರಿದಾಡುವರು ಮತ್ತು ಯಾರಿಗಾದರೂ ಏನಾದರೂ ಸಂಕಟ ಪ್ರಾಪ್ತಿಯಾದರೆ 'ಅಯ್ಯೋ ಪಾಪ! ಅವರಿಗೆ ಈ ಸಂಕಟವು ಯಾವ ರೀತಿಯಿಂದ ಪರಿಹಾರವಾದೀತು?' ಎಂದು ವರನ ಮರುಗುತ್ತಾ ಕರುಣಾಭಾವದಿಂದ ಅವರಲ್ಲಿ ಸಹಾಯವನ್ನು ತೋರಿಸುವರು 'ಪುಣ್ಯವಿಶೇಷದಿಂದ ಯಾರಾದರೂ ಏಳಿಗೆಯನ್ನು ಹೊಂದಿದರೆ ಭಲೆ! ಇದಿಗ ಪುಣ್ಯವಂತರ ಗತಿ! ಎಂದು ಸಂತೋಷದಿಂದ ನಲಿದಾಡುವರು ಮತ್ತು ಪಾಪಿಷ್ಠರೆಂದವರನ್ನು ಯಾರನ್ನಾದರೂ ಕಂಡರೆ ಅವರು ಪಾಪವನ್ನು ಮಾಡಲೇ ಇಲ್ಲವೆಂದು! ಎನ್ನುವ ಹಾಗೆ ಅವರ ದುಷ್ಟತನದ ಕಡೆಗೆ ಲಕ್ಷಗೊಡದೆ ಹೇಗೋ ಹಾಗೆ ಅವರಿಗೆ ಸಂತೋಷವನ್ನುಂಟುಮಾಡುವುದಕ್ಕೇ ಯತ್ನಿಸುವರು ಇಂಥ ಸದಮಲಹೃದಯಂದ ಸದ್ಗೃಹಸ್ಥರಿಗೆ ಅನಂತ ಧನ್ಯವಾದಗಳು ಈ ಮೇಲುದಾಹರಿಸಿರುವ ವೈತ್ರಾಪ್ತಿ ದಿಭಾವನೆಗಳು ಮಹಾತ್ಮರಾದ ಮನುಜವರ್ಗದವರಲ್ಲಿ ಸ್ವಭಾವದಿಂದಲೇ ಕಂಡುಬರುವವು ಇನ್ನು ಮನುಜವರ್ಗದಲ್ಲಿ ಎರಡನೇ ವರ್ಗಕ್ಕೆ (ಮೃಗಜಾತಿಗೆ) ಸೇರಿದವರು ತನ್ನ ಸಮಸಮಾನವಾದ ಒಂದು ಜೀವಿಯು ಉತ್ಕ್ರಮಣಕಾಲದಲ್ಲಿ ಸಂಕಟಪಡುತ್ತಿರುವದನ್ನು ನೋಡಿ "ಅಯ್ಯೋ ಪಾಪ" ಎಂದು ಕನಿಕರಗೊಳ್ಳದೆ "ಏನು ಮಜ" ಎಂದು ಉದ್ಗಾರವನ್ನು ತೆಗೆಯುವರು ಇಂಥ ಪಾಷಂಡಿಗಳಿಗೆ ವಾಚಕರೇ! ತಮಗೆ ಒಪ್ಪಬಹುದಾದ ಹೆಸರನ್ನು ಕರೆಯಬಹುದು. ಮನೆಯಲ್ಲಿ ಹೆಂಡತಿ ಹೆಗ್ಗಣಿಯಾದರೆ ಗಂಡನು ಮನೆ ನಾಯಿಗಿಂತಲೂ ಕಡೆ

೫ ಮಾನವನ ಅಗ ಹೋಗುವುದನ್ನು ಯಾರೂ ತಪ್ಪಿಸಲಾರರು "ಪಡೆದಷ್ಟಲ್ಲದೆ ದುಡಿದಷ್ಟು ಬಪ್ಪದೆ" ಎಂಬಂತೆ ಪ್ರಾರಬ್ಧ ಕರ್ಮಾನುಸಾರವಾಗಿ ಹಣೆಯಲ್ಲಿ ವಿಧಿಯು ಬರೆದಂತೆ ಆಗಿಯೇ ತೀರುವದು ಜನನ ಮರಣ ಸುಖದುಃಖ ಮುಂತಾದ ದ್ವಂದ್ವಗಳು ಕಾಲಗತಿಯಿಂದಲೇ ಒದಗುವವು ಸಮಸ್ತ ಜೀವಿಗಳ ಜನನ ಮರಣಗಳನ್ನುಂಟುಮಾಡುವ ಆ ಕಾಲವಿಧಿಯನ್ನಾದರೂ ಕಾಲವೇ ಮಾಡುವದು ಕಾಲದ ಸ್ವಾಭಾವಿಕ ಸ್ವರೂಪವು ಅಚಿಂತ್ಯ ಶಕ್ತಿಯು ಪರಶಿವನ ಪರಮಾತ್ಮಸ್ವರೂಪವೇ ಆಗಿರುವದು ಈ ಮೂಜಗದೊಳಗಿನ ಸಮಸ್ತ ಪದಾರ್ಥಗಳ ಜನ್ಮವೂ, ನಾಶವೂ, ಕಾಲದಿಂದಲೇ ಆಗುವದು ಮತ್ತು ಭಗವಂತನ ಸ್ವರೂಪದಲ್ಲಿ ಅಡಗಿದ್ದ ಅಖಿಲಬ್ರಹ್ಮಾಂಡದ ಪುನರುಜ್ಜೀವನವಾದರೂ ಕಾಲದಿಂದಲೇ ಆಗುವದು. ಜಗತ್ತಿನೊಳಗಿನ ಎಲ್ಲಾ ಪ್ರಾಣಿಗಳು ನಿದ್ರಾವಸ್ಥೆಯಲ್ಲಿರುವಾಗ ಕಾಲವೇ ಜಾಗ್ರದವಸ್ಥೆಯಲ್ಲಿರುವದು ಯಾವತ್ತು ಚರಾಚರವಸ್ತುಗಳ ಅಂತರ್ಭಾಗದಲ್ಲಿ ಅನವರತವೂ ಪ್ರತಿಬಂಧಕವಿಲ್ಲದೆ ಸಂಚರಿಸುವದು ಕಾಲವೇ ಆಗಿರುವದು ಕಾಲದ ಶಕ್ತಿಯನ್ನು ಕುಂಠಿತಮಾಡಲು ಯಾರೂ ಸಮರ್ಥರಾಗಲಾರರು ವಾಚಕರೇ! ಭೂತ, ಭವಿಷ್ಯ, ವರ್ತಮಾನ ಕಾಲಗಳಲ್ಲಿಯ ಮೂಲಕಾರಣವು ಕಾಲವೇ ಆಗಿರುವದು ಆದ್ದರಿಂದ ಈ ಮಾಯಾಪ್ರಪಂಚದ ಸುಖಕ್ಕೇ ಮೋಹಪರವಶರಾಗಿ, ಕಾಲನಿಗೆ ತುತ್ತಾದವರಿಗಾಗಿಯೂ, ನಮ್ಮ ಕಷ್ಟನಿಷ್ಠೂರಗಳಿಗಾಗಿಯೂ, ದುಃಖಿಸುವದು ಹಿತವಲ್ಲವು ಆದರೆ ಬಹುತೇಕಜನರು ಕಾಲವು ಕೆಟ್ಟುಹೋಯಿತು, ಹಿಂದಿನ ಕಾಲದಂತಿಲ್ಲ ಏನು ಮಾಡುವದು ಎಂದು ಉದ್ಗಾರಗಳನ್ನು ತೆಗೆಯುತ್ತಾರೆ ಕಾಲವೇನೂ ಮಾಡುವದಿಲ್ಲ ಅದು ಕೆಟ್ಟು ಹೋಗಿಯೂ ಇಲ್ಲ ಆಗಿದ್ದ ಸೂರ್ಯ ಚಂದ್ರರೇ ಇರವರು ಅದೇ ಭೂಮಿಯೂ ಇದೆ. ಆದರೆ ನಮ್ಮ ನಡೆನುಡಿಗಳು ಮಾತ್ರ ಕೆಟ್ಟು ಹೋಗಿವೆ ಎಲ್ಲಾ ಒಳಿತುಕೆಡುಕುಗಳೂ ನಮ್ಮ ಕೈಯಲ್ಲಿಯೇ ಇರುವವು ನಾವು ಸ್ವಾರ್ಥತೆ, ದುರಾಶೆ, ಮೋಸಕ್ಕೊಳಗಾಗಿ ಮಾಡಬಾರದ ಕೃತ್ಯಗಳನ್ನು ಮಾಡಿ ಅವುಗಳ ಫಲವಾಗಿ ಬಂದ ಪರಿಣಾಮಕ್ಕೆ ಕಾಲದಮೇಲೆ ದೋಷಕೊಡುವದು ಮೂರ್ಖತನವಾಗುವದಲ್ಲದೆ ಕೋತಿ ಮೊಸರು ತಿಂದು ಮೇಕೆಯ ಬಾಯಿಗೆ ಒರಿಸಿತು ಎಂಬ ಗಾದೆಯಂತಾಗುವದು ಅಲ್ಲದೆ ಈ ಕಾಲದ ವಿಷಯವಾಗಿ ಸುಭಾಷಿತಕಾರರೂ ಸಹ ಭೋಗಿಸಿರೆಲ್ಲ ಭೋಗತತಿ ಭೋಗಿಸಿ ಪೋದೆವು ನಾವೆ ಕಾಲ ಮೇಂ | ಪೋಗಿದುದಿಲ್ಲ ಪೋಗಿದೆವು ನಾವೆ ತಪಂಗಡ ತಪ್ತಮಲ್ತು ನಾ || ವೇಗಡ ತಪ್ತರಾದೆ ವಳಿಯಾಸೆ ಸುಜೀರ್ಣತಾದುದಿಲ್ಲ ಭಳ | ಭಾಗದೆ ನಾವೆ ಜೀರ್ಣರೆನಿಸಿದ ಪೆವಿಂತಿದನಾರ್ಗೆ ಪೇಳ್ವೆವೈ || ಎಂದು ನಿರೂಪಿಸಿರುವದು ಬಹು ಸಮಂಜಸವಾಗಿರುವದು

೬ ದೇವಾಸುರರು ಬಂದಾಗ ಅಮೃತವನ್ನು ಪಡೆಯುವುದಕ್ಕಾಗಿ ಸಮುದ್ರವನ್ನು ಮಥನಮಾಡಲಾಗಿ ಅದರಿಂದ ಅಮೃತವು ಪ್ರಾಪ್ತವಾಯಿತು ಆಗ ಅವರು ಅಷ್ಟಕ್ಕೇ ತೃಪ್ತರಾಗದೆ ದುರಾಶೆಗೊಳಗಾಗಿ ಮತ್ತೂ ಸಮುದ್ರವನ್ನು ಕಡೆದರು ಆಗ ಅದರ ಫಲವಾಗಿ 'ಅತಿಆಶೆ ಗತಿಗೆಡಿಸಿತು' ಎಂಬಂತೆ ಕಾಲಕೂಟ ವಿಷವು ಪ್ರಾದುರ್ಭವಿಸಿತು ಅದರಿಂದ ದೇವಾಸುರರಿಬ್ಬರೂ ಗತಿಗೆಟ್ಟ ವಿಷಯವು ಸರ್ವರಿಗೆ ಮನವರಿಕೆಯಾದ ವಿಷಯವಾಗಿರುವದು ಇದರಂತೆಯೇ ದ್ರವ್ಯ ಸಂಪಾದನೆ, ರಾಜ್ಯಸಂಪಾದನೆ, ಮಾನಮರ್ಯಾದೆ ಸಂಪಾದನೆ, ಅಧಿಕಾರಸಂಪಾದನೆ ಇವೇ ಮೊದಲಾದ ಪರಕೀಜೋಭಂಗದ ಪ್ರಸಂಗಗಳಲ್ಲಿ ಅತ್ಯಾಶೆಗೆ ತುತ್ತಾದರೆ ಆಸೆಬುರುಕರು ಕಟ್ಟಕಡೆಗೆ ಖಂಡಿತವಾಗಿಯೂ ಗತಿಗೆಡಲೇ ಬೇಕಾಗುವದು ಈ ವಿಷಯದಲ್ಲಿ ಸಂಶವೇ ಇಲ್ಲ ಕದಾಚಿತ್ ಆಶಾಪರರ ಪುಣ್ಯವಿಶೇಷದಿಂದ ಅವರು ಪ್ರಕೃತಜನ್ಮದಲ್ಲಿ

ತಾವು ಮಾಡಿದ ಪಾಪದ ಫಲವನ್ನು ಅನುಭವಿಸದಿದ್ದರೂ ಜನ್ಮಜನ್ಮಾಂತರದಲ್ಲಿಯೂ ಅವರಿಗೆ ಆ ಫಲಭೋಗವು ತಪ್ಪಿದ್ದಲ್ಲವು ಮತ್ತು ಅವರ ಸಂತತಿಯವರಾದರೂ ಸಹ ನಿಶ್ಚಯವಾಗಿಯೂ ಅತ್ಯಾಶೆಯ ದುಷ್ಪರಿಣಾಮಫಲವನ್ನು ಅನುಭವಿಸಲೇ ಬೇಕಾಗುವದು ಇದಕ್ಕೆ ಈಗ ಪ್ರಾಣಿಗಳು ಅನುಭವಿಸುತ್ತಿರುವ ಕಷ್ಟಗಳೇ ಸಾಕ್ಷೀಭೂತವಾಗಿರುವವು ಆದರೆ ಸ್ವಾರ್ಥಾಂಧ ಈ ದುರುಳರು "ತಾನು ಕೆಡುವ ಕೋತಿ ವನವನ್ನೆಲ್ಲಾ ಹಾಳುಮಾಡಿತು" ಎಂಬಂತೆ ತಮ್ಮ ಸಹಾಧ್ಯಾಯಿಗಳನ್ನೂ ಸಹ ತಮ್ಮಂತೆಯೇ ಮಾಡಿಕೊಳ್ಳುತ್ತಾರೆ ಬಹುವಿಷಾದಕರವು ವಾಚಕರೇ! ಕೆಲ ಅತಿಮಾನವರು ಅತ್ಯಾಶೆಗೆ ತುತ್ತಾಗಿ ಯಾವುದಕ್ಕೂ ಹೇಸದೆ ಮಾನಮರ್ಯಾದೆಗಳನ್ನು ತೊರೆದು ಪೂರ್ವಾಪರ ವಿಚಾರವಿಲ್ಲದೆ ಹೀನ ಕೃತ್ಯಗಳನ್ನು ಮಾಡಿ ರೌರವ ನರಕ ಯಾತನೆಯನ್ನು ಅನುಭವಿಸುವರು ಮತ್ತು ಅವರ ಮಾತೂ ನಡವಳಿಕೆಗಳೂ ಸಹ—ಮರ್ಕಟಸ್ಯ ವೃಶ್ಚಿಕ ದಂಶನಂ | ತನ್ಮಧ್ಯೇ ಭೂತಸಂಚಾರಂ ಯದ್ವಾ ತದ್ವಾ ಭವಿಷ್ಯತಿ || ಎಂಬಂತೆ ಬಹು ಅಸಮಂಜಸವಾಗಿರುತ್ತವೆ ಮತ್ತು ತಮ್ಮ ದುರಾಶೆಯ ತೃಪ್ತಿಗಾಗಿ ಗುರುದ್ರೋಹ, ಬಂಧುದ್ರೋಹ, ಮಿತ್ರದ್ರೋಹ, ರಾಷ್ಟ್ರದ್ರೋಹ ಇತ್ಯಾದಿ ಕ್ರೂರದ್ರೋಹಕೃತ್ಯಗಳನ್ನು ಪ್ರತಿಕ್ಷಣದಲ್ಲಿ ನೀರು ಕುಡಿದಂತೆ ಮಾಡಿಬಿಡುತ್ತಾರೆ ಇವರೀ ದುರ್ವರ್ತನಕ್ಕೆ ತಕ್ಕ ಫಲವು ಸಿದ್ಧವಾಗಿಯೇ ಇರುವುದು ಇಹದಲ್ಲಿ ಜನರಾದರೂ ಎದುರಿಗೆ ಏನನ್ನದಿದ್ದರೂ ಹಿಂದೆಯಾದರೂ ಕೈಹೊಯ್ದು ನಗುವರು ಆದ್ದರಿಂದ ಮಂಗಳೇಚ್ಛುಗಳು ಈ ದುರ್ವರ್ತನವನ್ನು ಸಹಸಾ ತ್ಯಜಿಸುವುದುತ್ತಮವು (ಸಂಪೂರ್ಣ)

ಆರ್. ಎಂ. ಮಲ್ಲಿಕಾರ್ಜುನಾರಾಧ್ಯ, ತಿಪ್ಟೂರು

ನಮಃ ಪಂಚ ಜಗದ್ಗುರುಭ್ಯ

ಗುರ್ವಾಜ್ಞೋಲ್ಲಂಘನವು ವಿಹಿತವಲ್ಲ

"ಗುರೋರಾಜ್ಞಾ ಗರೀಯಸೀ" ಎಂಬಂತೆ ಗುರ್ವಾಜ್ಞೆಯು ಅತ್ಯಂತ ಶ್ರೇಷ್ಠವಾದದ್ದು ಇದನ್ನರಿತ ಪೂರ್ವಜರು ಗುರುವನ್ನು ತಮ್ಮ ಪ್ರಾಣಕ್ಕಿಂತಲೂ ಮಿಗಿಲಾಗಿ ಸಂರಕ್ಷಿಸುತ್ತಿದ್ದರು ಗುರ್ವಾಜ್ಞೆಯನ್ನು ವೇದವಾಕ್ಯಕ್ಕಿಂತಲೂ ಹೆಚ್ಚಾಗಿ ಪಾಲಿಸುತ್ತಿದ್ದರು ಪೂರ್ವಜರೂ ತಮ್ಮ ವಚನಗಳಲ್ಲಿ ತಮ್ಮ ತಮ್ಮ ಸಾಂಕೇತಿಕ ಗುರುನಾಮಗಳನ್ನು ಉಚ್ಚರಿಸಿರುತ್ತಾರೆ ಪೂರ್ವಜರಾದ ಕವಿಗಳೂ ತಮ್ಮ ಗ್ರಂಥಾರಂಭದಲ್ಲಿ ತಮ್ಮ ತಮ್ಮ ಗುರುಸ್ಮರಣೆಯನ್ನು ಮಾಡಿರುತ್ತಾರೆ ಮುನಿಗಳೂ, ರಾಜರೂ, ಕವಿಗಳೂ ಪಂಡಿತರೂ, ಸಾಧುಸಜ್ಜನರೂ, ಕಿಂಬಹುನಾ ಸರ್ವರೂ ಗುರುವಿನಿಂದಲೇ ಸನ್ಮಾರ್ಗಗಾಮಿಗಳಾಗಿರುತ್ತಾರೆ ಹೀಗಿದ್ದು ಈಗಿನ ಕೆಲ ಜನ ನಾಸ್ತಿಕ ತತ್ವಾವಲಂಬಿಗಳು ತಮ್ಮ ಸದ್ಗುರುಗಳನ್ನು ಹಳಿಯುತ್ತ ಪಾಪಕೂಪದಲ್ಲಿ ಕೊಳೆಯಲಪೇಕ್ಷಿಸುವುದನ್ನು ನೋಡಿದರೆ ಮಹದಾಶ್ಚರ್ಯವಾಗುತ್ತದೆ ಗುರ್ವಾಜ್ಞೆಯನ್ನು ಎಂದೂ ಉಲ್ಲಂಘಿಸಕೂಡದು

ಗುರುವಿನಲ್ಲಿ ಕಾಪಟ್ಯದಿಂದ ವಿದ್ಯೆಯನ್ನು ಕಲಿತ ಕರ್ಣನು ಸಮಯಕ್ಕೆ ವಿದ್ಯೆಯ ಸಹಾಯದಿಂದ ದೂರಾಗಲಿಲ್ಲವೇ? ಗುರುವಿನಲ್ಲಿ ಕಪಟತನವನ್ನು, ಅಭಿಮಾನವನ್ನು ತೋರಿಸಿ ಗುರುವಿನ ಆಜ್ಞೆಯನ್ನುಲ್ಲಂಘಿಸಿ ಅದಾವ ಸಂಪತ್ಸಮೃದ್ಧಿಯನ್ನು ಪಡೆಯುವರೋ? ನಾಕಾಣೆ

ಮಹನೀಯರೇ! ಗುರುವಿನ ಆಜ್ಞೆಯನ್ನು ಉಲ್ಲಂಘಿಸುವದು ವಿಹಿತವಲ್ಲ ಉಲ್ಲಂಘಿಸುವದರಿಂದ ಮಹಾದುಃಖ ಪರಂಪರೆಯು ತಪ್ಪದು ಇದಕ್ಕೆ ಪೂರ್ವಜರ ಸಾಕ್ಷಿಗಳೇಕೆ? ಸ್ವಾನುಭವವನ್ನೇ ತಿಳಿಸುತ್ತೇನೆ

ಶ್ರೀಮದುಜ್ಜಯಿನಿ ಸದ್ಧರ್ಮಸಿಂಹಾಸನಾಧೀಶ್ವರ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸನ್ನಿಧಿಯ ಸ್ವಾರಿಯು ಮಹಾರಾಷ್ಟ್ರ ಭಾಗದಲ್ಲಿ ಪಂಢರಪುರದಲ್ಲಿತ್ತು ಆ ಸಮಯದಲ್ಲಿ ಮಹಾಸನ್ನಿಧಿಯ ಪಾದದರ್ಶನಾರ್ಥಿಯಾಗಿ ನಾನು ಅಲ್ಲಿಗೆ (ಪಂಢರಪುರಕ್ಕೆ) ಹೋಗಿ ದರ್ಶನಾಶೀರ್ವಾದವನ್ನು ಪಡೆದು ಎರಡು ದಿವಸಗಳ ತರುವಾಯ ಹೊರಡಲು ಅಪ್ಪಣೆಯನ್ನು ಪ್ರಾರ್ಥಿಸಿಕೊಂಡೆನು ಸನ್ನಿಧಿಯು ಇನ್ನೂ ಎರಡು ದಿವಸಗಳಿದ್ದು ಹೋಗೆಂದು ಆಜ್ಞೆಯನ್ನಿತ್ತರು ಆದರೂ ನಾನು ಕಾರ್ಯಾತುರತೆಯನ್ನು ತೋರಿಸಿ ಆಗ್ರಹದಿಂದ ಪ್ರಾರ್ಥಿಸಲು ಒಳ್ಳೇದು ಎಂದರು ಹಾಗೆಯೇ ಹೊಟಗಿಗೆ ಬಂದು ೧೨ ದಿವಸಗಳ ಪರ್ಯಂತ ಭಯಂಕರ ತಲೆಶೂಲೆಯಿಂದ ನರಳಿ ಎಚ್ಚತ್ತೆನು ನೋಡಿದಿರಾ! ಗುರ್ವಾಜ್ಞೋಲ್ಲಂಘನದ ಫಲವನ್ನು?

ಬೆಂಗಳೂರಿನಲ್ಲಿ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜಯೋಗೀಂದ್ರ ಶಿವಾಚಾರ್ಯ ಮಹಾಸನ್ನಿಧಿಯವರ ಆಂದೋಳಿಕೋತ್ಸವವನ್ನು ಪ್ರತ್ಯಕ್ಷಿಸಿ ಬರುವಾಗ್ಗೆ ಅದವಾನಿಯಲ್ಲಿ "ಕೇದಾರ ಜಗದ್ಗುರುಗಳ ಮುಕ್ಕಾಂ" ಇತ್ತು ಅಲ್ಲಿ ರೈಲಿನಿಂದಿಳಿದು ಶ್ರೀ ಕೇದಾರ ಜಗದ್ಗುರುಗಳ ಪಾದದರ್ಶನವನ್ನು ಹೊಂದಿ ಮಾರನೇ ದಿವಸ ಹೊರಡಲುದ್ಯುಕ್ತರಾದೆವು ಆಗ್ಗೆ ಶ್ರೀ ಕೇದಾರ ಜಗದ್ಗುರು ಮಹಾಸನ್ನಿಧಿಯವರು ಇಲ್ಲಿ ವ್ಯಾಖ್ಯಾತೃಗಳು ಯಾರೂ ಇಲ್ಲ ಆದ್ದರಿಂದ ಒಂದೆರಡು ದಿವಸ ಜನರಿಗೆ ಸದುಪದೇಶವನ್ನು ಮಾಡಿಹೋಗಿರೆಂದು, ನನಗೂ, ಪುರಂದರ ಶ್ರೀಗಳಿಗೂ ಸದಾನಂದಬುವಾ ಇವರಿಗೂ ಆಜ್ಞೆಯನ್ನಿತ್ತರು ಮಹಾಸನ್ನಿಧಿಯ ಆಜ್ಞಾನುಸಾರ ಸದಾನಂದಬುವಾ ಕೀರ್ತನಕಾರರು ನಿಂತರು ನಾನೂ ಪುರಂದರ ಶ್ರೀಗಳೂ ಹೊರಟೆವು ಸನ್ನಿಧಿಯವರು ಇಚ್ಛೆಯಿಲ್ಲದೆ ನಮಗೆ ಅಪ್ಪಣೆಯನ್ನಿತ್ತರು ಸನ್ನಿಧಿಯ ಹಮಣೇಗಾಡಿಯಲ್ಲಿ ಕೂತು ಸ್ಟೇಶನಕ್ಕೆ ಹೊರಟೆವು ಸ್ಟೇಷನ್ನಿಗೆ ಇನ್ನೂ ೨ ಫರ್ಲಾಂಗು ದೂರದಲ್ಲಿ ಗಾಡಿ ಮುರಿದು ಸರ್ವರೂ ಬಿದ್ದೆವು ನನಗೆ ಬಲವಾದ ಪೆಟ್ಟು ಬಿದ್ದು ಕೈಯು ಬಹಳ ನೊಂದಿತು ಹಾಗೆಯೇ ಸ್ಟೇಶನ್ನಿಗೆ ಹೋಗಲಾಗಿ ಹೋಗಬಂಡಿಯು ದೊರೆಯಲಿಲ್ಲ ಮರಳಿ ಒಂದು ಪೂರ್ತಿ ಮಾರನೇ ದಿವಸ ಹೋಗಬೇಕಾಯಿತು ಕೇಳಿದಿರಾ? ಗುರ್ವಾಜ್ಞೋಲ್ಲಂಘನದ ಫಲವನ್ನು?

ಮೈಸೂರು ರಾಜಧಾನಿಯಲ್ಲಿ ಒಂದೇ ಸಲ ಜಗದ್ಗುರು ಮಹಾಸನ್ನಿಧಿಯ ಮಹೋತ್ಸವಕ್ಕೆ ಹೋಗಿ ಪುನಃ ಬರುವ ಸಮಯದಲ್ಲಿ ಮಹಾಸನ್ನಿಧಿಯವರು ನವರಾತ್ರ ಮಹೋತ್ಸವವನ್ನು ನೋಡಿ ಹೋಗೆಂದು ಆಜ್ಞೆಯನ್ನಿತ್ತರು ಕಾರ್ಯಾತುರತೆಯನ್ನು ತೋರಿಸಿ ಹೊರಟೆನು ರೈಲ್ವೆಯಲ್ಲಿ ಕೂತು ಒರುವಗ್ಗೆ ಗುಂತಕಲ್ಲಿನ ಟಿಕೀಟನ್ನು ಕೊಂಡಿದ್ದೆನು ರಾತ್ರಿ ಸಮಯದಲ್ಲಿ ಗುಂತಕಲ್ಲಿನ ಟಿಕೀಟನ್ನು ೫೦ ರೂಪಾಯಿ ನೋಟನ್ನೂ ಕೆಲವು ಚಿಕ್ಕಚಿಕ್ಕ ಪುಸ್ತಕಗಳನ್ನೂ ಒಂದು ವಸ್ತ್ರದಲ್ಲಿ ಕಟ್ಟಿಕೊಂಡು ಮಲಗಿಕೊಂಡಿದ್ದೆನು ಮೈಸೂರಿನಿಂದ ಕೆಲವು ಸ್ಟೇಶನ್ನುಗಳು ದಾಟಿದ ಮೇಲೆ ಎಚ್ಚತ್ತು ನೋಡಲಾಗಿ ಟಿಕೀಟು ಮತ್ತು ೫೦ ರೂಪಾಯಿ ನೋಟು ಇದ್ದಿಲ್ಲ ಬಹಳ ಹುಡುಕಿದೆನು ದೊರೆಯಲಿಲ್ಲ ನನ್ನ ಹತ್ತಿರ ಮೈಸೂರಿನಿಂದ ನನ್ನೊಡನೊಂದು ಕೆಲವು ತರುಣರು ತಮ್ಮೂರಿಗೆ ಹೋಗುವವರಾಗಿ ಕುಳಿತಿದ್ದರು ಅವರು ನನ್ನ ಹತ್ತಿರ ಟಿಕೀಟು ಇರುವುದನ್ನು ನೋಡಿದ್ದರು ಪ್ರತಿ ಸ್ಟೇಶನ್ನುಗಳಲ್ಲಿ ಟಿಕೀಟ ಮಾಸ್ತರು ನನ್ನನ್ನು ವಿಚಾರಿಸುತ್ತಿದ್ದರು ಆಗ್ಗೆ ಮೈಸೂರು ತರುಣವಿದ್ಯಾರ್ಥಿಗಳು ನನ್ನನ್ನು ಕುರಿತು—ಯಾಕೆ ಸ್ವಾಮಿ! ಟಿಕೀಟ ಮಾಸ್ತರು ನಿಮ್ಮನ್ನೇ ಟಿಕೀಟಿಗಾಗಿ ವಿಚಾರಿಸುವರು ಇದರ ಕಾರಣವೇನು? ಎಂದರು ಆಗ್ಗೆ ನಾನು—ಟಿಕೀಟ ಮಾಸ್ತರರು ನನ್ನನ್ನು ನೋಡಿಯಲ್ಲ ನನ್ನ ವೇಷಕ್ಕಾಗಿ ವಿಚಾರಿಸುತ್ತಾರೆಂದು ಹೇಳಿದೆನು ಹೀಗಾದ ಮೇಲೆ ಟಿಕೀಟು ನೋಟು ಕಳೆದವು ಇಂಥಾ ದುಃಖದ ಪರಿಸ್ಥಿತಿಯು ನನಗೆ ಎಂದೂ ಒದಗಿರಲಿಲ್ಲ ಆಗ್ಗೆ ಮಾತ್ರ ಗುರ್ವಾಜ್ಞೆಯು ನನಗೆ ಚನ್ನಾಗಿ ನೆನಪಿಗೆ ಬಂದಿತು ಅಸ್ತು! ಆ ತರುಣರು ನೀವೇನೂ ಹೆದರಬೇಡಿ, ಬೆಂಗಳೂರಿನಲ್ಲಿ ಟಿಕೀಟ ಮಾಸ್ತರರಿಗೆ ನಾವು ತಿಳಿಸುತ್ತೇವೆಂದರು ಹಾಗೆಯೇ ಮುಂಜಾನೆ ೮ ಘಂಟೆಗೆ ಬೆಂಗಳೂರಿಗೆ ಇಳಿದೆನು ಎದೆಯಲ್ಲಿ ಹೆದರಿಕೆಯು ಮುಳ್ಳು ಓಡಾಡುತ್ತಿತ್ತು ಟಿಕೀಟ ಮಾಸ್ತರರ ಎದುರಿಗೆ ಹೋಗುವುದಕ್ಕೆ ಬಹಳ ಭಯವು ಬರಹತ್ತಿತು ಆದರೂ ನಿರ್ವಾಹವಿಲ್ಲದೆ ಹೋದೆನು ಆ ಮಾಸ್ತರನು ಟಿಕೀಟು ಟಿಕೀಟು ಎಂದು ವಾಮಹಸ್ತದ ತರ್ಜನೀ ಬೆರಳನ್ನು ಚಲಿಸುತ್ತ ಕೇಳಿದನು ಆಗ್ಗೆ ನನಗಾದ ಸ್ಥಿತಿಯನ್ನು ನೆನೆಸಿದರೆ ಈಗಲೂ ಭಯವು ಬರುತ್ತಿದೆ. ಅನಂತರ ಮೈಸೂರು ತರುಣರು ಆ ಮಾಸ್ತರನಿಗೆ ಹೀಗೆ ಹೇಳಿದರು—ಅವರು ಟಿಕೀಟನ್ನು ಕೊಂಡಿದ್ದರು ಸ್ವಾಮೀ, ಅದನ್ನೂ ೫೦ ರೂಪಾಯಿ ನೋಟನ್ನೂ ಯಾರೋ ಹುಡುಗರು ಎತ್ತಿರುತ್ತಾರೆ ಅವರನ್ನು ಬಿಟ್ಟುಬಿಡಿ ಟಿಕೀಟ ಮಾಸ್ತರನು ನನ್ನನ್ನು ಒಂದೇ ಸಮನೆ ನೋಡುತ್ತಿದ್ದನು ನಾನು ಮಾತ್ರ ಗುರುಮೂರ್ತಿಯನ್ನು ಮನೋದೃಷ್ಟಿಯಿಂದ ಒಂದೇ ಸಮನೆ ನೆನೆದು ಆಜ್ಞೋಲ್ಲಂಘನಕೃತಿಯನ್ನು ಹೀಯಾಳಿಸುತ್ತಿದ್ದೆನು ಅಷ್ಟರಲ್ಲಿ ಆ ಟಿಕೀಟು ಮಾಸ್ತರನು ನನ್ನನ್ನುದ್ದೇಶಿಸಿ, ಒಳ್ಳೇದು ಸ್ವಾಮಿ ಟಿಕೀಟಿನ ನಂಬರು ನಿಮಗೆ ಗೊತ್ತುಂಟೋ ಎಂದನು ಅಷ್ಟು ಮಾತ್ರ ಗುರುಕೃಪೆಯಿಂದ ಬರೆದುಕೊಂಡಿದ್ದೆನು ಆಗ್ಗೆ ನಾನು ೩೫೫ ನಂಬರೆಂದು ಹೇಳಿದೆನು ಟಿಕೀಟು ಮಾಸ್ತರನು ಹಾಗಾದರೆ ಹೋಗಬಹುದು ಎಂದನು ಆ ಕ್ಷಣದಲ್ಲಿ ನನಗಾದ ಆನಂದವನ್ನೇನ ಹೇಳಲಿ ಹಿಂದಕ್ಕೆ ಟಿಕೀಟ ಆಫೀಸಿಗೆ ಹೋಗಿ ಗುಂತಕಲ್ಲ ಟಿಕೀಟನ್ನು ೩ ರೂಪಾಯಿ ೮ ಆಣೆಗೆ ಕೊಂಡೆನು ಟಿಕೀಟು ಕೊಳ್ಳುವಾಗ್ಗೆ ನನ್ನ ಚಿಗುರೀಚರ್ಮವನ್ನು ಮರೆತುಬಂದೆನು ಆಗಲೂ ಗುರುವಿನ ಆಜ್ಞೋಲ್ಲಂಘನದ ಸ್ಮರಣೆಯಾಯಿತು ಮುಂದೆ ಗುಂತಕಲ್ಲ ಸ್ಟೇಷನ್ನಿನಲ್ಲಿ ಇಳಿದೆನು ನನ್ನ ಬಳಿ ೧೨ ಆಣೆ ರೊಕ್ಕದ ಹೊರತು ಒಂದು ದುಡ್ಡು ಸಹ ಇರಲಿಲ್ಲ ಸ್ಟೇಷನ್ನಿನಲ್ಲಿ ಟಿಕೀಟ ಮಾಸ್ತರನ ಕಡೆ ಹೋಗಿ ೧೨ ಆಣೆ ರೊಕ್ಕವನ್ನಿಟ್ಟು ಇಷ್ಟು ರೊಕ್ಕಕ್ಕೆ ಯಾವ ಸ್ಟೇಷನ್ನಿಗೆ ಟಿಕೀಟು ದೊರೆಯುವದೋ, ಅದನ್ನು ಕೊಡಿರಿ ಎಂದು ಕೇಳಿದೆನು ಆಗ್ಗೆ ಅವರು ಅದವಾನಿ ಟಿಕೀಟನ್ನು ಕೊಟ್ಟರು ಅದವಾನಿಯಲ್ಲಿ ಶ್ರೀ ಜಗದ್ಗುರು ಪ್ರಸಿದ್ಧ ಮಾಲೀಕರಾದ ರಾಜಯ್ಯನವರ ಕಡೆಗೆ ಹೋದೆನು ಮರುದಿವಸ ಬರುವಾಗ್ಗೆ ಯಾರನ್ನೂ ದುಡ್ಡು ಕೇಳದ ನನಗೆ ಅವರನ್ನು ೧೫ ರೂಪಾಯಿಯನ್ನು ಕೊಡಿರೆಂದು ಪ್ರಾಣವನ್ನೇ ಕೈಯಲ್ಲಿ ಹಿಡಿದುಕೊಂಡು ಕೇಳಿದೆನು ಅವರು ಹರ್ಷದಿಂದ ಕೊಟ್ಟರು ಹೊಟಗಿಗೆ ಬಂದು ಅವರ ರೂಪಾಯಿ ಅವರಿಗೆ ಮನಿಯಾರ್ಡರ ಮುಖಾಂತರ ಕಳಿಸಿದೆನು ತಿಳಿಯಿತೋ ಗುರ್ವಾಜ್ಞೋಲ್ಲಂಘನದ ಹಿತವು

ಬೆಂಗಳೂರು ಮಹಾಂತಿನಮಠಾಧ್ಯಕ್ಷ ಶ್ರೀ ಗಂಗಾಧರ ಶ್ರೀಗಳವರೂ ನಾನೂ ಪೂನಾಗೆ ಮಹಾರುದ್ರಾಭಿಷೇಕಕ್ಕಾಗಿ ಹೋಗುವಾಗ್ಗೆ ವಿದ್ಯಾಗುರುಗಳಾದ ಪಂ|| ಜಗದೀಶಶಾಸ್ತ್ರಿಗಳವರ ದರ್ಶನವನ್ನು ಹೊಂದಿ ಹೋಗಬೇಕೆಂದು ಸೊಲ್ಲಾಪುರದಲ್ಲಿ ಇಳಿದೆವು ಆ ಸಮಯದಲ್ಲಿ ಸೊಲ್ಲಾಪುರದಲ್ಲಿ 'ಮಾರ್ಶಲ್ ಲಾ' ಜಾರಿಯಲ್ಲಿತ್ತು ಪಂಡಿತರಲ್ಲಿ ಸ್ವಲ್ಪ ಮಾತುಕತೆಗಳಾಗಿ ಸ್ಟೇಷನ್ನಿಗೆ ಹೋಗುವಾಗ್ಗೆ ವಿದ್ಯಾಗುರುಗಳು ನಮ್ಮ ಕೈಯಲ್ಲಿರುವ ದಂಡಗಳನ್ನು ನೋಡಿ—ಈಗ ಊರಲ್ಲಿ ಪಾಸತ್ರಾಸು ಇದೆ ಆದ್ದರಿಂದ ನೀವು ನಿಮ್ಮ ದಂಡಗಳನ್ನು ಇಲ್ಲೇ ಇಟ್ಟುಹೋಗಿರಿ ಎಂದರು—ನಮ್ಮನ್ನೇನು ಮಾಡುತ್ತಾರೆಂದು ನಾವಿಬ್ಬರ ತೆಗೆದುಕೊಂಡು ಹೊರಟೆವು ವೇಂಕಟೇಶ ಥಿಯೇಟರ ಮುಂದೆ ಬಂದ ಕೂಡಲೇ ನಮ್ಮಿಬ್ಬರನ್ನು ಗೋರಾ ಪೋಲೀಸರು ಹಿಡಿದ ನಮ್ಮ ಹಸ್ತಗಳಲ್ಲಿರುವ ದಂಡಗಳನ್ನು ಕಸಿದುಕೊಂಡು ಬಿಸಾಡಿ ೧೫ ನಿಮಿಷ ಕೂಡ್ರಿಸಿಬಿಟ್ಟರು ಗುರ್ವಾಜ್ಞೋಲ್ಲಂಘನವು ಹೇಗಿದೆ ವಿದಿತವಾಯಿತೋ?

ಮಹನೀಯರೇ! ಇದೆಲ್ಲವೂ ಸತ್ಯವಾದ ಸ್ವತಃ ಅನುಭವದ ವಿಷಯವಿರುತ್ತದೆ ಗುರುವಿನ ಪ್ರೌಢಿಮೆಯನ್ನು ಬೆಳೆಯಿಸುವದಕ್ಕಾಗಿ ಬರೆದುದಲ್ಲ ಗುರುಮೂರ್ತಿಯು ಸ್ವತಃ ಶ್ರೇಷ್ಠನಿರಲು ಅಂಥಾ ಮೂರ್ತಿಯ ಶ್ರೇಷ್ಠತೆಯನ್ನು ಮಾಡುವುದು ನನ್ನಂಥ ಪಾಮರನಿಂದಾದೀತೇ? ಆದ್ದರಿಂದ ಮಹನೀಯರೇ! ಗುರುಮೂರ್ತಿಯ ನಿಂದೆಯನ್ನು ತ್ಯಜಿಸಿ, ಗುರ್ವಾಜ್ಞಾನುಸಾರ ವರ್ತಿಸಿ ಜನ್ಮದ ಸಾಫಲ್ಯವನ್ನು ಮಾಡಿಕೊಳ್ಳಿರಿ. "ಮುಕ್ತಿಮೂಲಂ ಗುರೋಃ ಕೃಪಾ" ಎಂಬಂತೆ ಮುಕ್ತಿಗೆ ಗುರುಕೃಪೆಯೇ ಮೂಲವಾಗಿದೆ ಗುರುಕೃಪೆಗೆ ಗುರುಸೇವೆಯೇ ಅವಶ್ಯವಿದೆ ಗುರುಸೇವೆಗೆ ಗುರ್ವಾಜ್ಞಾನುಸಾರ ವರ್ತನವೇ ಮೂಲಸಾಧನವಿದೆ. ಆದ್ದರಿಂದ ಗುರುವಿನ ಆಜ್ಞೆಯನ್ನು ಉಲ್ಲಂಘಿಸುವದು ವಿಹಿತವಲ್ಲ 'ಗುರೋರಾಜ್ಞಾ ಗರೀಯಸೀ" ಶಿವಮಸ್ತು ಸರ್ವೇಷಾಂ

ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಬೃಹನ್ಮಠ, ಹೊಟಗಿ

ಪಂಚಾಚಾರ್ಯ ಪ್ರಭಾ.

೧೯೩೬ ನೆಯ ಜನವರಿ ತಾ॥ ೨೦ ನೆಯ ಸೋಮವಾರ

ಉಜ್ಜಯಿನೀ ಜಗದ್ಗುರುಗಳ ಕೈಲಾಸಗಮನ

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನ ನಿವಾಸಿಗಳಾದ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಕಳೆದ ಸೋಮವಾರದ ದಿವಸ ಮರವಲ್ಲಿಯೇ ತಮ್ಮ ಭೌತಿಕಕಳೇಬರವನ್ನು ಬಿಟ್ಟು ಪರಶಿವನಲ್ಲಿ ಐಕ್ಯವನ್ನು ಹೊಂದಿದರೆಂಬ ಸಮಾಚಾರವು ಸಿಡಿಲೆರಗಿದಂತೆ ಎಲ್ಲರಿಗೂ ತಿಳಿದುದರಿಂದ ಜಗತ್ತಿನಲ್ಲಿರುವ ಅಖಿಲಗುರುವರ್ಗವೂ ಭಕ್ತವರ್ಗವೂ ದುಸ್ತರವಾದ ಶೋಕಸಾಗರದಲ್ಲಿ ಮುಳುಗಿತು. ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಮಹಾಪೀಠಗಳು ಕೆಲವು ವರ್ಷಗಳಿಂದ ಸದ್ಗುರುವಿಹೀನರಾದ ಗುರುಗಳ ಸಾನ್ನಿಧ್ಯದಿಂದ ಕೃಷ್ಣಪಕ್ಷದ ಚಂದ್ರನಂತೆ ಕ್ಷೀಣೋನ್ಮುಖವಾಗುತ್ತ ವೀರಶೈವಮತದ ಧರ್ಮನಿಬಂಧನೆಗಳ ಕಟ್ಟುಪಾಡುಗಳು ಸಡಿಲವಾಗಿ ಶೈಥಿಲ್ಯವನ್ನು ಹೊಂದುತ್ತ ಬರಲು ಅವುಗಳ ಜೀರ್ಣೋದ್ಧಾರಕ್ಕಾಗಿ ಶ್ರೀ ಜಗದ್ಗುರು ಮಹಾರಾಜರಾದ ಶ್ರೀ ಸಿದ್ಧಲಿಂಗಶಿವಾಚಾರ್ಯರೂಪದಿಂದ ತಲೆದೋರಿದರೋ ಎಂಬಂತೆ ಶಮದಮಾದಿಸದ್ಗುಣಮಂಡಿತರೂ ಲಿಂಗನಿಷ್ಠಾಶೀಲರೂ ಪ್ರಾಜ್ಞರೂ ಬ್ರಹ್ಮವಿದ್ಯಾವಿಭೂಷಿತರೂ ಪಂಚಶಿಖಾಯುಕ್ತರೂ ಪಂಚಮುದ್ರಾಂಕಿತರೂ ವೈರಾಗ್ಯಶೀಲರೂ ಸಹಿಷ್ಣುಸೋಪಾದಿಯಲ್ಲಿ ತಪೋನಿಷ್ಠರೂ ಸುರಗುರುವಿನಂತೆ ವಾಗ್ಮಿಗಳೂ ದೂರ್ವಾಸನಂತೆ ಶಾಪಾನುಗ್ರಹಸಮರ್ಥರೂ ನಲಹರಿಶ್ಚಂದ್ರಾದಿಗಳಂತೆ ಸತ್ಯಸಂಧರೂ ಶೈವಧರ್ಮಾನುಷ್ಠಾನನಿಷ್ಣಾತರೂ ಆದ ಈ ಮಹಾನುಭಾವರೆಂಬ ಸೂರ್ಯನು ಸದ್ಧರ್ಮಪೀಠವೆಂಬ ಗಗನಮಂಡಲವನ್ನೇರಿ ಇಲ್ಲಿಗೆ ಮೂವತ್ತು ವರ್ಷಗಳು ಕಳೆದವು. ಇವರ ಗುರುತ್ವಾಧಿಕಾರದಲ್ಲಿ ಶೈವಪ್ರಪಂಚದಲ್ಲಿ ಬಹುಕಾಲದಿಂದ ಹರಡಿ ನಿಬಿಡವಾಗಿದ್ದ ಅಜ್ಞಾನವೆಂಬ ಮಹಾಂಧಕಾರವು ಮೆಲ್ಲಮೆಲ್ಲನೆ ತೊಲಗಿದಂತೆಲ್ಲಾ ಶೈವಸಿದ್ಧಾಂತದ ನಿಜತತ್ವವೆಂಬ ಬೆಳಕು ಕಾಣಿಸಿಕೊಳ್ಳುತ್ತ ಬಂದಿತು. ರಾಕ್ಷಸರ ಹಾವಳಿಯಿಂದ ದೇವತೆಗಳು ತಲೆಮರೆಯಿಸಿಕೊಂಡಂತೆ ಅಪಸಿದ್ಧಾಂತಿಗಳ ಹಾವಳಿಯಿಂದ ಮುದುಗಿಹೋಗಿದ್ದ ವಿದ್ವಜ್ಜನಗಳು ಯಾವ ಮಹಾನುಭಾವರ ಆಶ್ರಯದಿಂದ ಉಚ್ಚಶಿಖರವನ್ನೇರಿದರೋ ಯಾವ ಮಹಾನುಭಾವರು ಭರತಖಂಡದ ಅನೇಕ ಪ್ರಾಂತಗಳಲ್ಲಿರುವ ಶಿವಭಕ್ತರನ್ನು ಅಷ್ಟಾವರಣ ಪಂಚಾಚಾರ ಷಟ್‌ಸ್ಥಲ ಮುಂತಾದ ಮುಕ್ತಿಸಾಮ್ರಾಜ್ಯಸಾಧನೆಗಳನ್ನುಪದೇಶಿಸಿ ಪವಿತ್ರಗೊಳಿಸಿದರೋ ಸದಾಚಾರದಲ್ಲಿಯೇ ಪ್ರಾಣವನ್ನಿರಿಸಿಕೊಂಡು ಸಾವಧಾನತೆ ಪ್ರಾಣಿಮಾತ್ರದಲ್ಲಿ ದಯಾರಸವುಳ್ಳವರಾಗಿದ್ದು ವಿದ್ಯಾರ್ಥಿಗಳಲ್ಲಿ ಪುತ್ರನಿರ್ವಿಶೇಷವಾದ ವಾತ್ಸಲ್ಯವನ್ನು ಯಾವ ಮಹಾನುಭಾವರು ತೋರಿಸುತ್ತಿದ್ದರೋ ತಮ್ಮ ಪೀಠವನ್ನಲಂಕರಿಸಲ್ಲದೆ ಪೂರ್ವಕಾಲದ ಪುರಕ್ಕೆ ಹೆಸರಿಲ್ಲದ ಕೈಬಿಟ್ಟು ಹೋಗುತ್ತಿದ್ದ ಕೇದಾರ ಮಹಾಪೀಠವನ್ನೂ ಮತ್ತು ಶಿಥಿಲವಾಗಿದ್ದ ಶ್ರೀಕಾಶೀ ಪೀಠವನ್ನೂ ಉದ್ಧರಿಸಿ ಶಾಸ್ತ್ರಮರ್ಯಾದೆಗನುಸಾರವಾಗಿ ಕೇಳಲ್ಪಡುತ್ತಿರುವ ಪಂಚಮಹಾಪೀಠಗಳನ್ನು ಸರ್ವಜನಗಳ ದೃಷ್ಟಿಗೋಚರಗಳನ್ನಾಗಿ ಮಾಡಿದ ಯಾವ ಮಹಾನುಭಾವರ ಪಂಚಪೀಠ ಎಂಬ ಹೆಸರನ್ನು ಸಾರ್ಥಕಗೊಳಿಸಿದರೋ ಕಳವಳಗೊಂಡಿದ್ದ ವೀರಶೈವ ಸಮಾಜಕ್ಕೆ ಹೊಸ ಜೀವವನ್ನು ಕೊಡುವವರಾಗಿ ನಾಯಕರಾಗಿ ಅನಾಯಕವಾಗಿ ಹೋಗುತ್ತಿದ್ದ ಶ್ರೀ ವೀರಶೈವಮಹಾಸಭೆಗೆ ಪುನಃ ಸನಾಯಕವಾಗುವವರೆಗೆ ಸ್ಥಾನವನ್ನು ಬಿಡುವುದಿಲ್ಲವೆಂದು ವೀರಪ್ರತಿಜ್ಞೆ ಮಾಡಿ ಘೋರಾರಣ್ಯದಲ್ಲಿ ನಿರಾಹಾರಿಯಾಗಿ ತಪವಗೈಯುತ್ತ ಶ್ರೀವೀರಶೈವಮಹಾಸಭೆಯನ್ನು ಪರದಿಕ್ಕಾಗಿ ಪರೋಪಕಾರದಿಂದ ಕೂಡಿದುದನ್ನಾಗಿ ಮಾಡಿದ್ದಲ್ಲದೆ ಮೈಸೂರು ರಾಜ್ಯಾಧಿಪತಿಗಳಾದ ಮಹಾರಾಜರ ಶ್ರೀಮತ್ಕಟಾಕ್ಷಕ್ಕೆ ಪಾತ್ರವನ್ನಾಗಿ ಯಾವ ಮಹಾನುಭಾವರು ಮಾಡಿದರೋ ಮರ್ಯಾದೆಯಂತೆ ಕಾಲಾಂತರದಲ್ಲಿ ಭಾಗ್ಯಹೀನವಾಗಿ ಹೋಗುತ್ತಿದ್ದ ವೀರಶೈವ ಸಿದ್ಧಾಂತವನ್ನು ಶಾಸ್ತ್ರತಃ ಸರ್ವೋಪಯೋಗವನ್ನು ಯಾವ ಮಹಾನುಭಾವರು ಸಿದ್ಧಾಂತದ ಮೃದು ನುಡಿಗಳಿಂದ ಅನುತ್ತರವಾದ ನಿರ್ಮಲಗೊಳಿಸುತ್ತಿದ್ದರೋ ತಾವು ಗುರುತ್ವದ ಮಹಾಪೀಠವನ್ನು ವಹಿಸಿಕೊಳ್ಳದೆ ವಿಸ್ತೃತ ಪಂಡಿತಮಂಡಲದ ಕರ್ತೃತ್ವವನ್ನು ಹೊಂದಿದ್ದರೂ ಯಾವ ಮಹಾನುಭಾವರು ಪ್ರಾರಂಭಿಸಿದ ಪಾಠಶಾಲೆಗಳಲ್ಲಿ ಅನೇಕ ಬಡ ವಿದ್ಯಾರ್ಥಿಗಳಿಗೆ ಗುರುಮನೆಗಳಲ್ಲಿ ವಾಸಮಾಡುವ ಸ್ಥಳ ಸವಲತ್ತು ಸಿಗುವಂತಾಗಿದ್ದರೋ ಯಾವ ಮಹಾನುಭಾವರು ವಯೋವೃದ್ಧರಾಗಿದ್ದರೂ ಜ್ಞಾನವೃದ್ಧರೂ ತಪೋವೃದ್ಧರೂ ಆಗಿದ್ದರೋ ಅಂಥ ವೀರಶೈವಮತದ ಜಗದ್ಗುರುಗಳೆನಿಸಿದ ಸಿದ್ಧಲಿಂಗಶಿವಾಚಾರ್ಯರು ಬಹುಕಾಲದ ವೀರಶೈವಮತದ ಪುನರುಜ್ಜೀವನದ ಕಾರ್ಯವನ್ನು ನಿರಂತರ ನಡೆಸುತ್ತ ನೂರಾರುವರ್ಷಗಳಿಂದ ಧರ್ಮಪೀಠದ ಸಹಜಾದಿ ಕಷ್ಟಗಳನ್ನನುಭವಿಸಿದ್ದವು. ಧರ್ಮಬೋಧೆಯಿಲ್ಲದೆ ವೀರಶೈವ ಸಮಾಜದಲ್ಲಿ ಅನೇಕರು ಕುಮಾರ್ಗಾವಲಂಬಿಗಳಾಗಿದ್ದರು. ಧರ್ಮಶಾಸ್ತ್ರಗಳು ತಲೆಕೆಳಗಾಗಿದ್ದವು. ಅವುಗಳಲ್ಲಿ ಸಮಾಜದ ಕಿಂಚಿತ್ ಪ್ರಜ್ಞಾವಿಶೇಷದಿಂದ ಈ ಮಹಾನುಭಾವರು ಚಿಕ್ಕ ವಯಸ್ಸಿನಲ್ಲೇ ಧರ್ಮಬೋಧವನ್ನೇರಿ ಧರ್ಮೋಪದೇಶವನ್ನು ಮಾಡುತ್ತ ಬಂದರು. ಅಂದಿನಿಂದ ಇದುವರೆಗೆ ಪಂಚ ಧರ್ಮಪೀಠಗಳಿಗೂ ವೀರಶೈವಸಮಾಜಕ್ಕೂ ಇರುವ ಜನ್ಯಜನಕಭಾವ ಸಂಬಂಧವೆಂಬ ಅಮೃತಬೀಜವು ಅಖಿಲ ವೀರಶೈವ ಹೃದಯಕ್ಷೇತ್ರದಲ್ಲಿ ಅಂಕುರಿಸಿ ಮೆಲ್ಲಮೆಲ್ಲನೆ ಪಲ್ಲವಿಸಿ ಕುಸುಮಿತವಾಗಿ ಫಲೋನ್ಮುಖವಾಗುತ್ತಿರುವಷ್ಟರಲ್ಲಿ ವೀರಶೈವಮತದ ದುರದೃಷ್ಟದಿಂದ ಕ್ರೂರನಾದ ವಿಧಿಯು ವೀರಶೈವ ಸಾಮ್ರಾಜ್ಯಪಾಲಕರಾದ ಈ ಗುರುಸಾರ್ವಭೌಮರನ್ನು ಕಣ್ಮರೆಮಾಡಿತೆ. ಅಯ್ಯೋ! ಪಾಪಿ ವಿಧಿಯೇ! ಕಲಿಯುಗದಲ್ಲಿ ಇಂಥ ಪವಿತ್ರ ಗುರುಗಳಿದ್ದರೆ ನಿನ್ನ ಸ್ವೇಚ್ಛಾವಿಹಾರಕ್ಕೆ ಪ್ರತಿಬಂಧಕವೆಂದು ಬಗೆದೆಯಾ! ಬಹುಕಾಲದಿಂದ ಅಜ್ಞಾನಾಂಧಕಾರದಲ್ಲಿ ಸಿಕ್ಕು ಒದ್ದಾಡುತ್ತಿದ್ದ ಗುರುವರ್ಗವನ್ನೂ ಭಕ್ತವರ್ಗವನ್ನೂ ಜಾಗ್ರತಿಗೊಳಿಸುತ್ತಿದ್ದ ಈ ಕರುಣಾಮಯಮೂರ್ತಿಯನ್ನು ನೋಡಿ ಸಹಿಸದೆ ಹೋದೆಯಾ! ಅಯ್ಯೋ! ಹತಭಾಗ್ಯವಾದ ವೀರಶೈವ ಮತವೇ, ಇಂಥ ಶಮದಮಯುಕ್ತರಾದ ಮಹಾಯೋಗಿಗಳು ಇನ್ನು ನಿನ್ನ ಗರ್ಭದಲ್ಲಿ ಸಂಜನಿಸುವರೆಂದು ನಂಬುವುದಕ್ಕಾದೀತೆ? 'ಸದ್ಧರ್ಮಸಿಂಹಾಸನ' ಎಂಬ ಈ ಪೀಠದ ಹೆಸರು ದರ್ಶನಮೂರ್ತಿಯಾದ ಈ ಗುರುಕುಲ ಚಕ್ರವರ್ತಿಯ ಸಮಾಗಮದಿಂದ ಅನ್ವರ್ಥಕವಾಗಿ ಪರಿಣಮಿಸಿತೆಂದು ನಲಿಯುತ್ತಿರುವ ವೀರಶೈವಸಮಾಜವನ್ನು ಆಕಸ್ಮಿಕವಾಗಿ ಇಷ್ಟು ದುಃಖಕ್ಕೀಡುಮಾಡಿದ ಕರಾಳವಿಧಿಯ ಧಾರ್ಷ್ಟ್ಯವನ್ನು ಎಷ್ಟು ನಿಂದಿಸಿದರೂ ತೀರದಾಗಿದೆ. ಇರಲಿ ಇದಕ್ಕೆ "ಭವಿತವ್ಯಂ ಭವತ್ಯೇವ" ಎಂಬಂತೆ ವೀರಶೈವಸಮಾಜವು ಇನ್ನೂ ಎಷ್ಟು ಕಷ್ಟನಷ್ಟಗಳನ್ನು ಅನುಭವಿಸಬೇಕೋ ಅಷ್ಟನ್ನು ಅನುಭವಿಸಲೇ ಬೇಕು. ಇನ್ನು ಹೊಸದಾಗಿ ಇಂಥ ಬ್ರಹ್ಮತೇಜಸ್ವಿಗಳೂ ಕರುಣಾಹೃದಯರೂ, ವಿದ್ವಾಂಸರೂ ಆದ ಗುರುಮೂರ್ತಿಯು ಈ ಧರ್ಮಪೀಠಕ್ಕೆ ಒದಗುವವರೆಗೂ ಸಮಾಜಕ್ಕೊದಗಿದ ಈ ಮಹಾ ದುರ್ಭಾಗ್ಯವು ಶಮನವಾಗಲಾರದು. ಆದುದರಿಂದ ವೀರಶೈವಮತದ ಅಧಿದೇವತೆಯು ಸರ್ವಜ್ಞನೂ ಆದ ಪರಶಿವನು ವೀರಶೈವಮತದಮೇಲೆ ಇನ್ನಾದರೂ ಕರುಣೆಯನ್ನು ತೋರಿಸಿ ಶೂನ್ಯವಾದೀಧರ್ಮಪೀಠಕ್ಕೆ ಯೋಗ್ಯಗುರುಮೂರ್ತಿಯನ್ನನುಗ್ರಹಿಸಿ ಸಮಾಜಕ್ಕುಂಟಾದ ಅನಿರ್ವಚನೀಯವಾದೀ ದುಃಖವನ್ನು ಬೇಗನೆ ಪರಿಹರಿಸಲೆಂದು ಪ್ರಾರ್ಥಿಸುವೆವು

ಒಳದೇಶದ ವೃತ್ತಾಂತಗಳು.

ಹೆಗ್ಗಡದೇವನಕೋಟೆ ತಾ॥ ಸರಗೂರಿಗೆ ಸೇರಿದ ಶ್ಯಾನುಭೋಗ ಶ್ರೀ ದೇವಯ್ಯ ಎಂಬುವರು ಸರ್ಕಾರಕ್ಕೆ ಬರಬೇಕಾಗಿದ್ದ ೫೧೫-೮-೨ ರೂ ಗಳನ್ನು ವಸೂಲು ಮಾಡಿ ದುರುಪಯೋಗಪಡಿಸಿಕೊಂಡರೆಂದು ಹೆಗ್ಗಡದೇವನಕೋಟೆ ಪೋಲೀಸರು ೧೪-೧೧-೩೩ ರಲ್ಲಿ ವ್ಯವಹಾರ ಹೂಡಿದ್ದರು. ಮೈಸೂರು ಸ್ಪೆ॥ ಮೊದಲನೇ ವರ್ಗದ ಮ್ಯಾಜಿಸ್ಟ್ರೇಟರವರು ವಿಚಾರಣೆ ನಡೆಯಿಸಿ ಅಪಾದಿತರಮೇಲೆ ತಪ್ಪು ಹೊರಿಸಲು ಸರಿಯಾದ ಆಧಾರವಿಲ್ಲವೆಂದು ಹೇಳಿ ಇವರನ್ನು ಬಿಡುಗಡೆ ಮಾಡಿದರು.

ಮಳವಳ್ಳಿ ತಾಲೋಕು ಬೆಳಕವಾಡಿಯ ಪೌರಸಭೆಯವರು ತಮ್ಮ ಗ್ರಾಮದಲ್ಲಿ ಒಂದು ಆಸ್ಪತ್ರೆಯನ್ನು ಇಡಿಸಬೇಕೆಂದು ವಿಚಾರನಡೆಸುತ್ತಿರುವಲ್ಲಿ ಗ್ರಾಮದ ಯಜಮಾನರೂ ಶಿವನಸಮುದ್ರದ ಜಹಗೀರುದಾರರೂ ಆದ ಶ್ರೀ ಟಿ. ಆರ್ ಆನಂದರಾಜಮೊದಲಿಯಾರವರು ಆಸ್ಪತ್ರೆಯ ಉಪಯೋಗಕ್ಕಾಗಿ ತಮ್ಮ ಜಹಗೀರ್ರ ಆಫೀಸು ಕಟ್ಟಡದಲ್ಲಿ ಅರ್ಧಭಾಗವನ್ನು ಬಿಟ್ಟುಕೊಡುವುದಾಗಿಯೂ ಮತ್ತು ಇತರ ಖರ್ಚಿಗಾಗಿ ವರ್ಷಕ್ಕೆ 200 ರೂಪಾಯಿಗಳನ್ನು ಕೊಡುವುದಾಗಿಯೂ ಬರಹ ಮೂಲಕ ವಾಗ್ದಾನ ಮಾಡಿರುವುದಾಗಿ ಕೇಳಿ ಸಂತೋಷಿಸುತ್ತೇವೆ.

ಬೆಂಗಳೂರು ಸಿಟಿ ಹಲಸೂರು ಪೇಟೆಯ ಒಂದು ಮನೆಯಲ್ಲಿ ನಾಗಯ್ಯನೆಂಬವನೂ ಅವನ ಹೆಂಡತಿ ರಾಧ ಎಂಬುವಳೂ ನೇಣುಹಾಕಿಕೊಂಡು ಪ್ರಾಣಬಿಟ್ಟರು. ಕೆಲವು ದಿನಗಳಹಿಂದೆ ಗಂಡಹೆಂಡರಲ್ಲಿ ಜಗಳವಾಗಿ, ಹೆಂಡತಿಯು ತಲೆಯಮೇಲೆ ಪೆಟ್ಟುಬಿದ್ದು ಆಕೆಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾಳೆಂದೂ ಕೃತ್ಯ ನಡೆದದಿವಸ ಮತ್ತೆ ಜಗಳವಾಗಿ, ಗಂಡನು ಮನೆಯನ್ನುಬಿಟ್ಟು ಹೊರಗೆ ಹೋಗಿರುವಾಗ ಹೆಂಗಸು ಕೊಠಡಿಯ ಬಾಗಿಲು ಹಾಕಿಕೊಂಡು ನೇಣು ಹಾಕಿಕೊಂಡಳೆಂದೂ, ಗಂಡನು ಮನೆಗೆ ಬಂದಮೇಲೆ ಅವನ ೮ ವರ್ಷದ ಮಗನು ಬಾಗಿಲ ಸಂದಿಯಿಂದ ನೋಡಿ ತಾಯಿಯು ನೇಣುಹಾಕಿಕೊಂಡಿರುವುದನ್ನು ಆತನಿಗೆ ತಿಳಿಸಲು, ಆತನು ಯಾವುದೋ ನೆಪದಮೇಲೆ ಮಗನನ್ನು ಹೊರಗೆ ಕಳುಹಿಸಿ ಹೆಂಡತಿಯ ದೇಹವನ್ನು ಬಿಚ್ಚಿ ನೆಲದಮೇಲಿಟ್ಟು ತಾನು ನೇಣು ಹಾಕಿಕೊಂಡನು, ಸ್ವಲ್ಪಕಾಲದಮೇಲೆ ಹುಡುಗನು ಬಂದು ನೋಡಿ ಭಯಪಟ್ಟು ಪೋಲೀಸರಿಗೂ ತಿಳಿಸಿದನೆಂದು ಕೇಳುತ್ತೇವೆ.

ವರ್ತಮಾನಸಂಗ್ರಹ.

ಸೇಲಂ ಡಿಸ್ಟ್ರಿಕ್ಟ್ ಹಾರೂರ್ ಹಳ್ಳಿಯ ಸ್ಕೂಲು ಮಾಸ್ಟರು ವೆಂಕಟಕೃಷ್ಣಾಚಾರ್ ಎಂಬುವರು ಕಳೆದ ವರ್ಷ ತನ್ನ ಹೆಂಡತಿಯು ಮಲಗಿ ನಿದ್ರಿಸುತ್ತಿದ್ದಾಗ ಕಬ್ಬಿಣದ ಹಾರೆಯಿಂದ ಆಕೆಯ ತಲೆಯ ಮೇಲೆ ಹೊಡೆದು ಕೊಂದರೆಂದು ಮೊಕದ್ದಮೆಯಾಗಿದ್ದಿತು. ಅಪರಾಧಿಯು ತಾನು ಆರೀತಿ ಕೊಲ್ಲಲಿಲ್ಲವೆಂದು ವಾದಿಸಿದನು. ಆದರೆ ಆತನ ಮಗನೂ ಮತ್ತು ಮಗಳೂ ತಮ್ಮ ತಂದೆಯೇ ಆಕೃತ್ಯ ನಡೆಸಿದವನೆಂದು ಸಾಕ್ಷಿ ಹೇಳಿದ್ದರಿಂದ ಜಡ್ಜಿಯವರು ಅಪರಾಧಿಗೆ ಗಡೀಪಾರು ಶಿಕ್ಷೆ ವಿಧಿಸಿದರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಸಂಕಟದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಮನೆಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ನಿವಾರಣೆಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ [illegible] ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ [illegible] ಕಾಗದಗಳನ್ನು ಉಪಯೋಗಿಸಿರುವುದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

೧೦ ಈ ಜಗತ್ತಿನಲ್ಲಿ ಉನ್ನತಿ ಮತ್ತು ಅವನತಿಗಳ ಚಕ್ರಪರಿಭ್ರಮಣವು ಯಾವ ವ್ಯಕ್ತಿಗಾಗಲಿ, ದೇಶಕ್ಕಾಗಲಿ ಬಿಟ್ಟದ್ದಲ್ಲವು. ಬೆಳಕಿನ ಮುಂದೆ ಕತ್ತಲೆಯೂ ಕತ್ತಲೆಯ ಮುಂದೆ ಬೆಳಕೂ ಇರುವಂತೆ ಉತ್ಕರ್ಷತೆಯ ಮುಂದೆ ಅಪಕರ್ಷತೆಯೂ ಅಪಕರ್ಷತೆಯ ಮುಂದೆ ಉತ್ಕರ್ಷತೆಯೂ ಇದ್ದೇ ಇರುವದು. ಆದಪ್ರಯುಕ್ತ ಯಾವ ಜೀವಿಯೇ ಆಗಲಿ, ಯಾವ ದೇಶವೇ ಆಗಲಿ ತನ್ನ ಏಳಿಗೆಗಾಗಿ ಉಬ್ಬಿ ಮೈಮರೆದು ಧರ್ಮಹೀನವಾಗಬಾರದು, ಮತ್ತು ಅವನತಿಗಾಗಿ ಕುಗ್ಗಿ ಧರ್ಮಭ್ರಷ್ಟವಾಗಬಾರದು. ಯಾಕಂದರೆ ಉನ್ನತಿ ಅವನತಿಗಳಂತೆ ಧರ್ಮವು ಚಾಂಚಲ್ಯವಾಗಿರದೆ ಸ್ಥಿರವಾಗಿರುವುದರಿಂದ, ಧರ್ಮಾತ್ಮನನ್ನು ಏಳಿಕೆಗಳು ವಿಕಾರವಶನನ್ನಾಗಿ ಮಾಡಲಾರವು. ಅದ್ದರಿಂದ ಇವನು ಸುಖದುಃಖ, ದೂಷಣೆ, ಭೂಷಣೆ, ತಿರಸ್ಕಾರ, ಪುರಸ್ಕಾರ ಮುಂತಾದ ಸಮಸ್ತವನ್ನೂ ಆ ಜಗಜ್ಜನಕನ ಪರಮಪ್ರಸಾದವೆಂದು ತಿಳಿದು ಯಾವಗಲೂ ಏಕರೀತಿಯಾಗಿ ಧರ್ಮದಿಂದಿರುವನು. ಜೀವಾತ್ಮರಿಗೆ ಪರಮಾತ್ಮನೂ, ಅವನ ಸೃಜಿಸುವಿಕೆಯೂ ಇವೆರಡರ ಹೊರತು ಅನ್ಯಾಧಾರವೇ ಇಲ್ಲ. ಭಗವಂತನ ಸ್ವರೂಪವು ಸಮತೆಯು ಸೃಷ್ಟಿಯ ಸ್ವರೂಪವು ವಿಷಮತೆಯು ಸಮತಾಧರ್ಮದಲ್ಲಿ ಉನ್ನತಿ ಅವನತಿಗಳ ಸುಳಿದಾಟವೇ ಇರುವದಿಲ್ಲವು. ಇವೆಲ್ಲವೂ ವಿಷಮತೆಯ ಧರ್ಮದಲ್ಲಿರುವವು. ಆದರೆ ಭಗವಂತನನ್ನು ಮರೆತು ಯಾರು ಜಗತ್ತಿನ ಸುಖವನ್ನೇ ಚಪ್ಪರಿಸುತ್ತಾ ಲೋಲಾಡುತ್ತಾ ಅದರಲ್ಲಿಯೇ ಮಗ್ನರಾಗಿ ಮುಳುಗೇಳುತ್ತಿರುವರೋ ಅಂಥವರಿಗೆ ಮಾತ್ರ ಉನ್ನತಿ ಅವನತಿಗಳ ಚಕ್ರವು ಹಿಂಬಾಲಿಸುವದು ಇದು ಸೃಷ್ಟಿಯ ಸ್ವಾಭಾವಿಕ ಧರ್ಮವಿರುವದರಿಂದ ಆ ಚಕ್ರಭ್ರಮಣಕ್ಕಾಗಿ ಯಾರು ದುಃಖಪಡುವದಕ್ಕೂ ಆಶ್ಚರ್ಯಹೊಂದುವುದಕ್ಕೂ ಲೇಶ ಮಾತ್ರವೂ ಕಾರಣವಿರುವದಿಲ್ಲ. ವಾಚಕರೇ! ಇದುವರೆಗೂ ಯಾವ ವ್ಯಕ್ತಿಯೂ, ಯಾಂವುನೇತನವೂ ಯಾರಪಸಮಾಜವೂ, ಯಾರದೇಶವೂ ನಿರಂತರ ಉನ್ನತಿಯನ್ನು ಹೊಂದಿರುವದಿಲ್ಲ, ನಿರಂತರ ಹೀನಸ್ಥಿತಿಯಲ್ಲಿಯೂ ಇಲ್ಲ. ಇದು ಕಣ್ಣಿಗೆ ಕಟ್ಟಿದ ಹಾಗೆ ಸರ್ವರ ಅನುಭವದ ಮಾತಾಗಿರುವದು ಒಂದಾನೊಂದು ಕಾಲದಲ್ಲಿ ಯಾವ ಜನಾಂಗದವರು ನಾಗರಿಕರಾಗಿಯೂ ವಿದ್ಯಾ ಬುದ್ಧಿ ವಿಶಾರದರಾಗಿಯೂ, ರಾಜನೀತಿಜ್ಞರಾಗಿಯೂ, ಸಕಲ ಭೌತಿಕಶಾಸ್ತ್ರ ಪಾರಂಗತರಾಗಿಯೂ ಸ್ವಮತೋದ್ಧಾರಕಾರ್ಯದಲ್ಲಿ ಸ್ಥಿರಪ್ರಯತ್ನಶಾಲಿಗಳಾಗಿಯೂ, ಸತ್ಯವಾದಿಗಳಾಗಿಯೂ, ನ್ಯಾಯಮೂರ್ತಿಗಳಾಗಿಯೂ, ಅಪ್ರಿಯ ವಂಚನ ಪ್ರಲೋಭನಾದಿಗಳನ್ನರಿಯದವರಾಗಿಯೂ, ಕೊಳೆ ಸುಲಿಗೆ, ವ್ಯಭಿಚಾರದಿಂದ ಬಾಹಿರರಾಗಿಯೂ ಇದ್ದರೋ ಈಗ ಅದೇ ಜನಾಂಗದವರು ಅದೇ ಸ್ಥಿತಿಯಲ್ಲಿದ್ದಾರೆಯೇ? ಮತ್ತು ಒಂದಾನೊಂದು ಕಾಲದಲ್ಲಿ ಮಾನುಷಸಂತೋಷಕ್ಕೆ ಮುಖ್ಯಸ್ಥಾನವಾಗಿದ್ದ ಪುರಾತನದೇಗುಲಗಳ ಹಾಳು ಬಿದ್ದ ನೆಲಗಟ್ಟುಗಳಲ್ಲಿ ಒಕ್ಕಲಿಗರು ನೇಗಿಲನ್ನು ನೂಕುತ್ತಿರುವದು ನೀವರಿಯದ ವಿಷಯವೇ? ಈ ಮಹತ್ತಾದ ಅವನಿಯಲ್ಲಿ ಸಾಮ್ರಾಜ್ಯಸಂಪದಗಳು ನಾಶವಾಗಿ ಹೋಗಿ, ಈಗಲೀಗ ಅದರಲ್ಲಿ ಅಸ್ಥಿಪಂಜರಗಳೂ ಪ್ರಾಚೀನಕಾಲದ ಪ್ರದಾರ್ಥಗಳೂ, ದೊರೆಯುತ್ತಿರುವದು ನಿಮಗೆ ಗೋಚರಿಸದಿರುವ ಸಂಗತಿಯೇ! ಹಾ! ಕಾಲ ಚಕ್ರದ ವಿಚಿತ್ರ ಗತಿಯನ್ನು ಕಂಡವರಾರು? ಒಂದಾನೊಂದು ಕಾಲದಲ್ಲಿ ಯಾರ ಹೆಸರನ್ನು ಕೇಳಿದಮಾತ್ರಕ್ಕೆ ಪ್ರಪಂಚವೆಲ್ಲವೂ ಗಡಗುಟ್ಟಿ ನಡುಗುತ್ತಿದ್ದಿತೋ, ಮತ್ತು ಯಾರ ದರ್ಶನಮಾತ್ರದಿಂದ ಜನರೆಲ್ಲರೂ ಶರಣಾಗತರಾಗಿ ಪಶಾದವೆತ್ತುತ್ತಿದ್ದರೋ ಅಂಗಳಂತಹವರ ಹೆಸರು ನಾಮಾವಶಿಷ್ಟಮಾತ್ರವಾಗಿರುವದು ನೀವರಿಯದ ಸಂಗತಿಯೆ? ಮತ್ತು ಸಂಧ್ಯಾಕಾಲದ ಗಗನಪಟದಲ್ಲಿರುವ ನಾನಾವರ್ಣರಂಜಿತವಾದ ಮೇಘವು ಪ್ರತಿಕ್ಷಣದಲ್ಲಿ ರೂಪಾಂತರವನ್ನು ತಾಳಿ ಹೇಗೆ ವಾಯುಮಂಡಲದಲ್ಲಿ ವಿಲೀನವಾಗಿ ಹೋಗುವದೋ ಹಾಗೆಯೇ ಪ್ರಪಂಚದ ಪ್ರತಿವಸ್ತುವೂ ಪರಿವರ್ತನೆಯನ್ನು ಹೊಂದಿ, ಮಾಯವಾಗುವದನ್ನು ನಾವು ನೋಡುತ್ತಲೇ ಇರುವೆವು. ಅದು ಹೋಗುತ್ತಲೇ ಇರುವದು. ಆದರೆ ಜಗತ್ತಿನ ಸ್ಥಿತಿಯು ಹೀಗಿರುವಾಗ ಕೆಲ ಮೂಢರು—"ಪರದುಃಖವೇವ ಹಿತಂ" ಎಂಬಂತೆ ಪರರಿಗೆ ಆಪತ್ಪ್ರಸ್ತುತಿಯನ್ನುಂಟುಮಾಡಿ ತಾವು ಸಂತೋಷಪಡಬೇಕೆಂದು ಹೋಗಿ ತಮ್ಮ ತೇಜೋಭಂಗಮಾಡಿಕೊಳ್ಳುತ್ತಾರೆ ಇಂಥವರು ತಮ್ಮ ನಡೆನುಡಿಗಳನ್ನು ಸುಧಾರಿಸಿಕೊಳ್ಳುವದು ಶ್ರಮವು. ಸಾರಾಂಶ—"ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ" ಎಂಬಂತೆ ಏಳಿತಗಳ ಬಗ್ಗೆ ತಳಮಳಗೊಳ್ಳದೆ ಸಮತ್ವದಿಂದಿರುವದೇ ಜ್ಞಾನಿಗಳ ಲಕ್ಷಣವು ಮತ್ತು ಯಾರಾದರೂ ಮತ್ತೊಬ್ಬರ ಮುಖಕ್ಕೆ ಮಸಿಹಚ್ಚುವ ಪ್ರಯತ್ನಮಾಡಿದರೆ ಮೊದಲು ತಮ್ಮ ಕೈಗೆ ಮಸಿಸವರಿಕೊಳ್ಳಬೇಕಾಗುವದಲ್ಲವೇ? ಮನುಷ್ಯನಿಗೆ ಮೋಸವು ತನ್ನ ನಾಶಕ್ಕೆ ಕಾರಣವಾಗುವದು—ಮನುಷ್ಯನಿಗೆ ಕುಚೇಷ್ಟೆವಿನಹ ಪ್ರತಿಷ್ಠೆ ಬರುವದಿಲ್ಲವು

೧೧. ಜನರು ತಮ್ಮ ಮಕ್ಕಳು ಮರಿಗಳು ಹುಟ್ಟಿದ ಹಾಗೆಯೇ ದೊಡ್ಡವಾಗಬೇಕು, ಅವಕ್ಕೆ ರೋಗರುಜೆಗಳು ಬರಬಾರದು, ತಮ್ಮ ಮುಂದೆ ಅವು ಮರಣ ಹೊಂದಬಾರದು; ಅವು ಯಾವಾಗಲೂ ಸುಖವಾಗಿರಬೇಕು; ತಾವೂ ಸಹ ಹೆಚ್ಚಿನ ಧನಕನಕ ಸುಖಲಾಲಸೆಗಳನ್ನು ಹೊಂದಬೇಕು, ಯಾವಬಗೆಯ ಪ್ರಾಪಂಚಿಕತಾಪತ್ರಯಗಳು ಉಂಟಾಗಬಾರದು; ಇತ್ಯಾದಿ ಶುಭಗಳನ್ನೇ ಕೋರುತ್ತಾರೆ. ಆದರೆ ಜಗತ್ಕರ್ತೃವಾದ ಪರಶಿವನು ನಿಸ್ಪೃಹನಾಗಿ ಅವರವರ ಕರ್ಮದಂತೆ ಫಲವನ್ನು ಕೊಡುತ್ತಿರುವನು. ಆದರೆ ಈ ಮಾಯಾಜಗತ್ತು ನಂಜುಗೂಡಿದ ಕಡಬಿನಂತೆ ಸುಖಗಳಿಂದ ಕೂಡಿರುವದೆಂಬುದನ್ನು ದೃಢವಾಗಿ ತಿಳಿದುಕೊಳ್ಳಬೇಕು. ಅವರವರ ಕರ್ಮಾನುಸಾರವಾಗಿ ಸುಖದುಃಖಗಳ ಪ್ರಮಾಣವು ಹೆಚ್ಚುಕಡಿಮೆಯಾಗಿದ್ದರೂ, ಸಂಸಾರದಲ್ಲಿ ಸುಖದುಃಖಗಳ ಸಂಬಂಧವು ತಪ್ಪಿದ್ದಲ್ಲವು. ಸಂಸಾರದೊಳಗಿನವರೆಲ್ಲ ಒಂದೇಸಾರಿ ಹುಟ್ಟಿಬರುವದಿಲ್ಲ, ಒಂದೇ ಸಾರಿ ಸತ್ತುಹೋಗುವದಿಲ್ಲ; ಅವರವರ ಕರ್ಮಗಳಂತೆ ಯಾರು ಗರ್ಭದಲ್ಲಿರುವಾಗ, ಯಾರು ಜನಿಸಿದೊಡನೆ, ಯಾರು ಹುಡುಗರಾಗಿರುವಾಗ, ಯಾರು ಪ್ರಾಯದಲ್ಲಿ, ಯಾರು ಮುದಿತನದಲ್ಲಿ ಮರಣವನ್ನೈದುವರು. ಸಕಾಮಗಳಾದ ಸತ್ಕರ್ಮಗಳಿಂದ ಸ್ವರ್ಗಾದಿ ಅರ್ಥಗಳೂ, ದುಷ್ಕರ್ಮಗಳಿಂದ ನರಕಾದಿ ಅನರ್ಥಗಳೂ, ಈಶ್ವರಾರ್ಪಣಬುದ್ಧಿಯಿಂದ ಮಾಡಿದ ನಿಷ್ಕಾಮಕರ್ಮಗಳಿಂದ ಮೋಕ್ಷವೂ ಸಾಧಿಸುವವು. ಸಂಸಾರದ ಸುಖಗಳು ಸಂಸಾರಾಸಕ್ತಿಗೂ, ದುಃಖಗಳು ಜ್ಞಾನಸಾಧನವಾದ ವೈರಾಗ್ಯಕ್ಕೂ ಕಾರಣವಾಗಿರುವವು. ಸಾರಾಸಾರವಿಚಾರಮಾಡಿ ನೋಡಿದರೆ—ದೇವರು ಪರಮನ್ಯಾಯಾಧೀಶನಾಗಿರುವುದರಿಂದ, ಸಂಸಾರದಲ್ಲಿ ಅವನ ತಂತ್ರದಿಂದ ನಮಗೆ ಆಗುವದೆಲ್ಲವೂ ನಮ್ಮ ಹಿತಕ್ಕಾಗಿಯೇ ಆಗುತ್ತಿರುವದೆಂದು ತಿಳಿದು, ಬರುವ ಸುಖದುಃಖಗಳನ್ನು ಉದಾಸೀನರಾಗಿ ಭೋಗಿಸುತ್ತ, ಮೋಕ್ಷಸಾಧನೆ ಮಾಡಿಕೊಳ್ಳಬೇಕಲ್ಲದೆ; 'ಊರು ಹಾಳಾದಮೇಲೆ ಕೋಟೆ ಬಾಗಿಲು ಹಾಕಿದರು' ಎಂಬ ಗಾದೆಯಂತೆ ಈಗ ನಾನು ಹೀಗೆ ಮಾಡಲಿಲ್ಲ, ಹಾಗೆಮಾಡಲಿಲ್ಲ, ಹೀಗೆಮಾಡಿದೆನು, ಹಾಗೆಮಾಡಿದೆನು, ಹೀಗಮಾಡಿದ್ದರೆ ಹಾಗಾಗುತ್ತಿತ್ತು, ಹಾಗೆಮಾಡಿದ್ದರೆ ಹೀಗಾಗುತ್ತಿತ್ತು, ದೇವರು ದಯಮಾಡಿದನು, ದೇವರು ನಿರ್ದಯನು ಇತ್ಯಾದಿ ಅಹಂಕಾರದಿಂಮೊಡಗೂಡಿದ ನಿರರ್ಥಕ ಉದ್ಗಾರಗಳನ್ನು ತೆಗೆಯುತ್ತ ಶೋಕಮಗ್ನರಾಗಿ ಆಯುಷ್ಯಕ್ಷೀಣಮಾಡಿಕೊಳ್ಳಬಾರದು. ಆದರೆ ಹುಟ್ಟಿಬರುವವರು ಅವರವರ ಕರ್ಮಫಲಭೋಗಕ್ಕಾಗಿ ಹುಟ್ಟಿ ಬರುವರಲ್ಲದೆ, ಒಬ್ಬರಿಗೆ ದುಃಖಕೊಡಬೇಕೆಂದಾಗಲಿ, ಸುಖಕೊಡಬೇಕೆಂದಾಗಲಿ ಬರುವುದಿಲ್ಲವು. ಸತಿ, ಪತಿ, ಸೋದರಾದಿ ಬಾಂಧವ್ಯಗಳು ಪರಸ್ಪರ ಸ್ಥೂಲ ದೇಹಗಳಿಗೆ ಮಾತ್ರವಿರುತ್ತವೆ. ಪರಸ್ಪರ ಯಾವ ಜೀವಾತ್ಮರುಗಳಿಗೂ ಸಂಬಂಧವಿರುವುದಿಲ್ಲ. ಜೀವಿಗಳು ಮರಣಹೊಂದಿದರೆ ಅಂದರೆ ಸ್ಥೂಲ ಶರೀರಗಳನ್ನು ತೊರೆದರೆ ಸಂಬಂಧವು ಹಾರಿಹೋಗುತ್ತದೆ. ಅಂದಮೇಲೆ ಒಬ್ಬರ ಸಲುವಾಗಿ ಸುಖದುಃಖಮಗ್ನರಾಗಿ ತಮ್ಮ ಹಾನಿಯನ್ನು ಯಾಕೆ ಮಾಡಿಕೊಳ್ಳಬೇಕು? ಪರಸ್ಪರ ಕರ್ಮಸಂಬಂಧವಿರುವುದರಿಂದ, ಆದಕ್ಕನುಸರಿಸಿ ಪರಸ್ಪರರು ಪರಸ್ಪರರಿಗೆ ಸುಖದುಃಖಗಳ ಪ್ರಸಂಗಗಳನ್ನುಂಟುಮಾಡಿಕೊಡಲಿಕ್ಕೆಮಾತ್ರ ಸಾಂಸಾರಿಕರು ನಾವು ಪರಸ್ಪರ ಸಂಬಂಧಿಕರಾಗಿ ಹುಟ್ಟಿರುವೆವೆಂದು ತಿಳಿದು, ನಮ್ಮ ನಿಜವಾದ ಭಗವಂತನಲ್ಲಿ ಭಕ್ತಿವಿಶ್ವಾಸಗಳನ್ನಿಟ್ಟು ನಮ್ಮ ಕರ್ಮಕ್ಕನುಸರಿಸಿ ಭಗವಂತನ ನಿಯಮದಂತೆ ನಮಗೆ ಆಗುವದೆಲ್ಲವೂ ನಮ್ಮ ಹಿತಕ್ಕಾಗಿಯೇ ಆಗುತ್ತಿರುವದೆಂದು ತಿಳಿದು, ಸ್ವಾರ್ಥತೆ, ದುರಾಶೆ, ಇವುಗಳ ದುರ್ಗುಣತನವನ್ನು ಬಿಟ್ಟು ಸನ್ಮಾರ್ಗದಿಂದ ನಡೆಯುವುದು ಮನುಷ್ಯಜಾತಿಯ ಕರ್ತವ್ಯವಾಗಿರುವುದು.

೧೨. ಸ್ವಾರ್ಥಮೂಲವಾದ ದ್ವೇಷ, ಅಸೂಯೆ ಮೊದಲಾದ ದುರ್ಗುಣಗಳು ಸ್ವಾರ್ಥಪರಗಳಾದ ಜೀವಿಗಳಿಗೆ ಮಾತ್ರ ಹುಟ್ಟುಗುಣವಾಗಿರುವುದೆಂದು ಹೇಳಬಹುದು. ಅದರಲ್ಲಿ ಮನುಷ್ಯರಲ್ಲಂತೂ ಸ್ವಾರ್ಥತೆಯು ಅತ್ಯಧಿಕವಾಗಿರುವುದು; ಈ ಸ್ವಾರ್ಥವು ಅಧಿಕವಾಗಿದ್ದ ಪ್ರಮಾಣದಿಂದ ಅವರಲ್ಲಿ ಮಹತ್ವಾಕಾಂಕ್ಷೆ, ದ್ವೇಷಾಸೂಯೆಗಳೂ ಹೆಚ್ಚಾಗಿರುವವು. ಸ್ವರ್ಗದ ಬಯಕೆಯಿಂದಾಗಲಿ, ರಾಜ್ಯದ ಬಯಕೆಯಿಂದಾಗಲಿ, ಹಣದ ಬಯಕೆಯಿಂದಾಗಲಿ, ಇಂದ್ರಿಯಗಳ ತೃಪ್ತಿಯ ಬಯಕೆಯಿಂದಾಗಲಿ ಕಾರ್ಯವನ್ನು ಮಾಡಿದರೆ—ಸ್ವಾರ್ಥಕ್ಕಾಗಿ ಪರರ ಹಾನಿಯನ್ನು ಮಾಡುವುದರಲ್ಲಿ ಪಾಪವುಂಟಾಗುವು. ಫಲವನ್ನು ಬಯಸಿ ಮಾಡುವವರಿಗೆ ಆ ಫಲದಜೊತೆಗೆ ಪರರನ್ನು ಹಿಂಸಿಸಿದ ಪಾಪವೂ ಬರುವುದು. ಸ್ವಾರ್ಥತೆಯಲ್ಲಿ ನೀಚಸ್ವಾರ್ಥತೆ, ಧರ್ಮಸಂಮತವಾದ ಸ್ವಾರ್ಥತೆ ಎಂದು ಎರಡುವಿಧವಾಗಿರುವವು. ನೀಚಸ್ವಾರ್ಥತೆಯ ಉದಾಹರಣೆಗಾಗಿ ನೋಡಿರಿ; ಅಶೋಕಚಕ್ರವರ್ತಿಗೆ ತಿಷ್ಯರಕ್ಷಿತೆಯೆಂಬ ಕಿರಿಯ ಹೆಂಡತಿಯೂ, ಕುನಾಲನೆಂಬ ಹಿರಿಯಸತಿಯ ಮಗನೂ ಇದ್ದರು. ಕುನಾಲನೆಂಬ ಪಕ್ಷಿಯ ಕಣ್ಣುಗಳಂತೆ ಅವನ ನೇತ್ರಗಳು ಅಂದವಾಗಿದ್ದುದರಿಂದ ಆ ಹೆಸರು ಬಂತೆಂದು ಹೇಳುವಂತೆ ಅವನು ಬಹುಮನೋಹರವಾಗಿದ್ದನು. ಆದರೆ ಅವನ ಆ ಸೌಂದರ್ಯವು ಅವನ ಮಲತಾಯಿಯಾದ ತಿಷ್ಯರಕ್ಷಿತೆಯೆಂಬ ತರುಣಿಗೆ ಬಹುಮೋಹಕರವಾಗಿ ಪರಿಣಮಿಸಿತು. ಮಗನಾದ ಕುನಾಲನಮುಂದೆ ಅವಳು ತನ್ನ ಮನೋವಿಕಾರಗಳನ್ನು ಅಡಗಿಸಿಕೊಳ್ಳಲಾರದೆ ಹೋದಳು ಮತ್ತು ತನ್ನ ನೀಚವಾದ ಕಾಮವಾಸನೆಯನ್ನು ತೀರಿಸಿಕೊಳ್ಳುವುದಕ್ಕಾಗಿ ಪರಿಪರಿಯ ಹಾವಭಾವವಿಲಾಸಗಳಿಂದ ಕೂಡಿದ, ನಾನಾವಿಧ ತಂತ್ರಗಳನ್ನು ಮಾಡಿದಳು. ಆ ಮಹಾವೈರಾಗ್ಯಶಾಲಿಯು ಅವಳ ಮೋಹಪಾಶಕ್ಕೊಳಗಾಗಲಿಲ್ಲ. ಆಗ ನಿರಾಶೆಯಿಂದ ಅವಳು ಅವನಮೇಲೆ ಎಷ್ಟು ಪ್ರೇಮ ಮಮತೆಯನ್ನು ತೋರಿಸುತ್ತಿದ್ದಳೋ-ಅಷ್ಟು ಕಠಿಣಹೃದಯಳಾಗಿ ಅವನ ನಾಶಕ್ಕೆ ಹವಣಿಸಲು ಯತ್ನಮಾಡಿದಳು ಕೊನೆಗೆ ಅವಳು ನೀಚಸ್ವಾರ್ಥತೆಗೆ ತುತ್ತಾಗಿ ಈ ಕುನಾಲನು ಕಣ್ಣರಿಯಾದಹೊರತು ತನ್ನ ತಾಪವು ಶಾಂತವಾಗಲಾರದೆಂದು ಯೋಚಿಸಿ, ಒಂದು ದಿನ ರಾಜನಸಂಗಡ ಸರಸಸಲ್ಲಾಪಮಾಡುತ್ತಿರುವಾಗ ಉಪಾಯದಿಂದ ರಾಜಮುದ್ರೆಯನ್ನು ಸಂಪಾದಿಸಿ ಅದರ ಸಹಾಯದಿಂದಲೂ ತನ್ನ ಕುಯುಕ್ತಿಯಿಂದಲೂ ಮಲಮಗನ ಕಣ್ಣುಗಳನ್ನು ಕೀಳಿಸಿದಳು. ಇದು ರಾಕ್ಷಸಕೃತ್ಯವು ಅಹಿಂಸಾವ್ರತಕ್ಕೆ ತಾಯಿಬೇರಿನಂತಿದ್ದ ಅಶೋಕನಿಗೆ ಈ ಸಂಗತಿ ತಿಳಿದು, ಮುದ್ದಿನಹೆಂಡತಿ ಎಂಬ ದುರಭಿಮಾನವಿಡದೆ ರಾಜಾಸ್ಥಾನದಲ್ಲಿ ಅವಳ ವಿಚಾರಣೆ ನಡೆಯಿಸಿ ಧರ್ಮನಿಷ್ಠೆಯಿಂದ ಶಿರಚ್ಛೇದನ ಮಾಡಿಸಿದನು. ಇದು ಸತ್ಯವಾದ ಶಾಸನವು. ಇನ್ನು ಧರ್ಮಸಮ್ಮತವಾದ ಸ್ವಾರ್ಥತೆ ಎಂದರೆ—ಹಣ್ಣಿಗಾಗಿ ಮಾವಿನಮರವನ್ನು ಬೆಳೆಯಿಸಿದವರಿಗೆ, ಅವರು ಬಯಸದಿದ್ದರೂ ನೆರಳೂ, ಸುವಾಸನೆಯೂ ತಾನಾಗಿಯೇ

(೬ ನೇ ಪುಟವನ್ನು ನೋಡಿ)

ಪಂಚಾಚಾರ್ಯ ಪ್ರಭಾ.

೧೯೩೬ ನೆಯ ಜನವರಿ ತಾ|| [illegible]೦ನೆಯ ಸೋಮವಾರ

ಲಿಂಗಧಾರಣವು ಸ್ಮೃತಿಸಿದ್ಧವಾದುದು.

ಮುಖೇ ಮಂತ್ರಂ ಹೃದಿ ಧ್ಯಾನಂ [illegible]
[illegible] ||

ಮುಖದಲ್ಲಿ ಮಂತ್ರೋಚ್ಚಾರಣವು, ಹೃದಯದಲ್ಲಿ ಪರಮಾತ್ಮನ ಧ್ಯಾನವು, [illegible] ಕಂಠದಲ್ಲಿ [illegible] ಲಿಂಗಧಾರಣವೂ [illegible] ಇವಾರು ಪದಾರ್ಥಗಳು [illegible] ಬ್ರಾಹ್ಮಣನ ಲಕ್ಷಣವು [illegible] ಗೌತಮಸ್ಮೃತಿಯಲ್ಲಿ [illegible] ರಿಂದ [illegible] ಇಲ್ಲದಿರುವುದರಿಂದ [illegible] ಬ್ರಾಹ್ಮಣನೆಂಬ [illegible] ವಾಕ್ಯವೇ ವ್ಯರ್ಥವಾಗುವ ಪ್ರಸಕ್ತಿಯು [illegible] ದೊರೆಗುವುದು. ಇದ್ದರಿಂದ [illegible] ಲಕ್ಷಣಂ' ಎಂಬ ವಾಕ್ಯವು [illegible] ತ್ವವನ್ನು ಬೋಧಿಸುವುದಕ್ಕಾಗಿ [illegible] ಸಾಮಾನ್ಯ ವಿಧಿ [illegible] ರುವುದಿಲ್ಲವೆಂಬ ಅರ್ಥಸಂಕೋಚವನ್ನು ಮಾಡಿದರಲ್ಲ ದಲ್ಲಿ ಆ ವಾಕ್ಯವು ಸಂಗತವಾಗದೆ [illegible] ದಿಗಳಲ್ಲಿ ಪರಸ್ಪರ ವಿರೋಧವು [illegible] ವು ಬರಬಹುದಾದ ಪಕ್ಷದಲ್ಲಿ ಅರ್ಥಸಂಕೋಚಮಾಡಿ ಸ್ಮೃತಿವಾಕ್ಯಗಳನ್ನು ಬಲಪಡಿಸುವುದು [illegible] ಸಂಪ್ರದಾಯವಾಗಿರುತ್ತದೆ. ಇದಕ್ಕೆ ಉದಾಹರಣೆ—

ಶ್ರಾದ್ಧಂ ಸಮುತ್ಸೃಜ್ಯ [illegible]

ಎಂದು ಸ್ಮೃತಿಯನ್ನು ಹೊಂದಿರತಕ್ಕ [illegible] ಸ್ಮನುಸರಿಸಿಯೇ ಒಂದು ದಿವಸವನ್ನು [illegible] ದಂತೆ ಶ್ರಾದ್ಧಕರ್ಮವನ್ನು ನಡ[illegible] ಲ್ಲದೆ ಶ್ರಾದ್ಧದಿನವನ್ನು ಅತಿಕ್ರಮಿ[illegible] ದೋಷಿಯಾಗುತ್ತಾನೆಂದು ಧರ್ಮ[illegible] ಧನೆಮಾಡಿದ್ದಾರೆ. ಈ [illegible] ವಾಕ್ಯವು ಜಗತ್ತಿನಲ್ಲಿರುವ [illegible] ಬ್ರಾಹ್ಮಣರಿಗೂ [illegible] ಮಾತ್ರ ಅನ್ವಯಿಸುವುದೆಂದು [illegible] ಹೀಗಿದ್ದರೂ ಏಕಾದಶೀವ್ರತಕ್ಕೆ [illegible] ಕೊಟ್ಟಿರುವ ಆನಂದತೀರ್ಥ [illegible] ಲದ ಬ್ರಾಹ್ಮಣರಾದರೋ [illegible] ಏಕಾದಶೀದಿವಸ ವೇನಾದರೂ ಶ್ರಾದ್ಧಮಾಡುವ ಪ್ರಸಕ್ತಿಯಾದಾಗಿದರೆ ಏಕಾದಶೀವ್ರತವನ್ನು ನಿಲ್ಲಿಸಿ ಶ್ರಾದ್ಧಕರ್ಮವನ್ನು ಮಾಡಬೇಕೋ ಅಥವಾ ಶ್ರಾದ್ಧಕರ್ಮವನ್ನು ನಿಲ್ಲಿಸಿ ಏಕಾದಶೀವ್ರತವನ್ನು ಮಾಡಬೇಕೋ ಎಂದು ಸಂಶಯವುಂಟಾಗುತ್ತದೆ. ಆದರೆ ಆನಂದತೀರ್ಥೀಯಮತಾನುಯಾಯಿಗಳು ಶ್ರಾದ್ಧಕರ್ಮಾತಿಕ್ರಮಣಕ್ಕಿಂತಲೂ ಏಕಾದಶೀವ್ರತಾತಿಕ್ರಮಣವು ಅತ್ಯಂತದೋಷಪ್ರದವಾದುದರಿಂದ ಏಕಾದಶಿಯ ದಿವಸವೇ ಶ್ರಾದ್ಧಕರ್ಮವು ಬಂದೊದಗಿದಲ್ಲಿ ಏಕಾದಶೀವ್ರತಕ್ಕೆ ಭಂಗವುಂಟಾಗಬಾರದೆಂದು ಆ ದಿವಸ ಶ್ರಾದ್ಧಕರ್ಮವನ್ನು ನಿಲ್ಲಿಸಿ ಏಕಾದಶೀವ್ರತವನ್ನೇ ಅನುಸರಿಸಬೇಕಾಗುವದು. ಶ್ರಾದ್ಧಾತಿಕ್ರಮಣದಿಂದುಂಟಾದ ಪ್ರತ್ಯವಾಯವಿಧಾಯಕವಾದ

ಶ್ರಾದ್ಧಂ ಸಮುತ್ಸೃಜ್ಯ |

ಇತ್ಯಾದಿ ಧರ್ಮಶಾಸ್ತ್ರಗಳನ್ನು ಏಕಾದಶೀವ್ರತಪ್ರಧಾನರಾದ ಆನಂದತೀರ್ಥೀಯಮತಾನುಯಾಯಿಗಳಾದವರ ಹೊರತು ಮಿಕ್ಕವರಲ್ಲಿ ಅನ್ವಯಿಸುವುದುಚಿತವಾದುದೆಂದು ಅರ್ಥಸಂಕೋಚಮಾಡಲ್ಪಟ್ಟಿರುತ್ತದೆ. ಇದಲ್ಲದೆ—

ರಾತ್ರಿಶ್ಚಿವಾ ಕಾಚನ ಸ್ವಸ್ಥಧರ್ತ್ರೀ | ಸಿಲೋಕಯೇ ಜಾಗ್ರತಮು ಪ್ರಮತ್ತೇ | ಸಮಾನಧರ್ಮಾ ಉಪವಾಸೋಸ್ತು ಶಕೀ | ಸಬಾ ಭಾಸ್ವತ್ಸಚಿವೇಣ ಶಸ್ತಿಕಾ ||

ಎಲೈ ನೇತ್ರಗಳಿರಾ! ಇತ್ಯೇಯೆಂದು ಹೇಳಲು ಸಾಧ್ಯವಾಗದಷ್ಟು ಮಹಾಫಲವನ್ನು ಕೊಡುವ ಮಂಗಲಕರವಾದ ಒಂದಾನೊಂದು ರಾತ್ರಿಯು ವರ್ಷಕ್ಕೊಂದೇ ದಿವಸ ನಿಮಗೆ ಸಿಗುತ್ತದೆ. ಲೋಕದಲ್ಲಿ ಅದನ್ನೇ ಶಿವರಾತ್ರಿಯೆಂದು ಕರೆಯುತ್ತಾರೆ. ಇಂಥ ಶಿವರಾತ್ರಿಯ ದಿವಸ ನೀವು ನಿಮ್ಮ ರೆಪ್ಪೆಯನ್ನು ಸಹ ಹೊಯ್ಯದಂತೆ [illegible] ಜಾಗರೂಕರಾಗಿರಬೇಕು. ಅಂದರೆ ಆ ರಾತ್ರಿಯಲ್ಲಾ ಸ್ವಲ್ಪವೂ ನಿದ್ರೆಮಾಡದಂತೆ ಪರಮಾತ್ಮನನ್ನು [illegible] ಹೀಗೆ ಜಾಗರಣೆಮಾಡುತ್ತಿಂದರೆ ನಿಮ್ಮ [illegible] ನಿಮಗ ಸಮಾನವಾದ [illegible] ಮಿತ್ರನಾಗಿ [illegible] ಕೊಳ್ಳುವನು. [illegible] ಶಿವರಾತ್ರಿಯ ದಿವಸ ಜಾಗರಣೆಯನ್ನು ಮಾಡು [illegible] ಮನುಷ್ಯನು ಮೂರು [illegible] ಶಿವನೇ ಆಗುತ್ತಾನೆಂದು ಒಬ್ಬನೊಬ್ಬ [illegible] ತನ್ನ ನೇತ್ರಗಳನ್ನು ಪ್ರೋತ್ಸಾ[illegible] ಜಾಗರಣವಿಧಾಯಕವಾಕ್ಯ [illegible] ಸೂಚನೆಗಳನ್ನು [illegible] ನೇತ್ರ [illegible] ಹೇಳಲ್ಪಟ್ಟಂತೆ ಇರುವುದಿಲ್ಲ. [illegible] ಶಿವರಾತ್ರಿಯ ದಿವಸ [illegible] ಮಾತ್ರ ಈ ನಿಯಮವನ್ನು [illegible] ಜಮತಾನುಯಾ[illegible] ಅನ್ವಯಿಸುವುದಿಲ್ಲ. ಇದು ಅವ [illegible] ಆದ್ದರಿಂದ 'ರಾತ್ರಿಶ್ಚಿವಾ' [illegible] ಸಾಮಾನ್ಯವಾಗಿ ಸಕಲ ನೇತ್ರ[illegible] ಇದ್ದರೂ ಈ ವಾಕ್ಯ [illegible] ಸಿದ್ಧಾಂತವನ್ನು ಹೊರತು [illegible] ವರಿಗ ಮಾತ್ರ ಅನ್ವಯಿಸುತ್ತದೆ [illegible] ಅರ್ಥಸಂಕೋಚವನ್ನು ಮಾಡಲೇಬೇಕಾಗುವದು. ಇದರಂತೆ ಗೌತಮಸ್ಮೃತಿಯಲ್ಲಿ ಮಂತ್ರ, [illegible] ಧಾರಣ, ಶಿವ ಭಸ್ಮ ರುದ್ರಾಕ್ಷ ಇವುಗ[illegible] ಬ್ರಾಹ್ಮಣನೆಂದು ಸಾಮಾನ್ಯವಾಗಿ ಹೇಳಿ[illegible] ಲಕ್ಷಣವನ್ನು ಮಾತ್ರ ಬೋಧಿಸುವದಕ್ಕಾಗಿ [illegible] ವಾಕ್ಯವೆಂದು ಅರ್ಥ [illegible] ಆ ಗೌತಮಸ್ಮೃತಿಯ ವಾಕ್ಯವು [illegible] ಅರ್ಥಸಂಕೋಚಮಾಡದಿ[illegible] ಲಕ್ಷಣವೇ ಇಲ್ಲದಂತಾಗಿ ವೃಥಾ[illegible] ವಾಕ್ಯವನ್ನು ವ್ಯರ್ಥಗೊಳಿಸು[illegible] ಅರ್ಥಸಂಕೋಚವನ್ನು ಕಲ್ಪಿಸಿ ಸಾರ್ಥಕ[illegible] ಪಕ್ಷವೆಂದು ಪ್ರಾಚೀನಾಚಾರ್ಯರ [illegible] ದಯಾದಕಾರಣ "ಮುಖೇ ಮಂತ್ರಂ [illegible]" ಎಂಬ ಗೌತಮಸ್ಮೃತಿಯಿಂದ ದೇಹದಲ್ಲಿ ಲಿಂಗಧಾರಣವು ಸಿದ್ಧವಾಗುತ್ತದೆ.

ವರ್ತಮಾನಸಂಗ್ರಹ.

ಇಂಡಿಯಾ ದೇಶದಲ್ಲಿ ಬೆಳೆವ ಕಾಫಿಯನ್ನು ಸಮುದ್ರದ ಮೂಲಕವಾಗಲಿ ಭೂಮಿಯ ಮೇಲಾಗಲಿ ಬ್ರಿಟಿಷ್ ಇಂಡಿಯಾ ದೇಶದಿಂದ ಹೊರ ದೇಶಗಳಿಗೆ ರಫ್ತು ಮಾಡಿದರೆ 28 ಪೌಂಡು ತೂಕಕ್ಕೆ ೩ ಆಣೆಯಂತೆ ಸುಂಕ ವಸೂಲು ಮಾಡಲಾಗುತ್ತದೆಂದು ಇಂಡಿಯಾ ಸರ್ಕಾರದವರು ಪ್ರಕಟಿಸಿರುತ್ತಾರೆ.

ಕಳೆದ ವಾರ ಜಪಾನ್ ಸೈನಿಕರಿಗೂ ಮಂಚೂಕೋ ಸೈನಿಕರಿಗೂ ಮಿನ್ಸನ್ ಎಂಬ ಊರಿನ ಬಳಿ ಹೊಡೆದಾಟಗಳು ನಡೆದು ಎರಡು ಕಡೆಯಿಂದ ವಿಶೇಷ ಪ್ರಾಣಹಾನಿಯಾಗಿರುವುದಾಗಿಯೂ, ಸೋವಿಯಟ್ ರಷ್ಯಾ ಸರ್ಕಾರದವರು ಮಾಂಚುಕೋದವರಿಗೆ ಬೆಂಬಲವಾಗಿ ಚಿತಾಯಿಸಿ ಈ ಕಲಹ ನಡೆಸಿದರೆಂದು ಜಪಾನಿನವರು ಆಕ್ಷೇಪಿಸಿದ್ದಾರೆ.

ಜಪಾನ್ ಮತ್ತು ಮಾಂಚುಕೋಸೈನ್ಯಗಳು ಮಾಂಗೋಲಿಯದ ಗಡಿನಾಡಿನ ಕಡೆ ಹೊರಡಲು ನಿರ್ಧರಿಸಿರುವುದಾಗಿಯೂ, ಮಂಗೋಲಿಯನರೂ ರಷ್ಯನರೂ ತಕ್ಕ ಯುದ್ಧಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವುದಾಗಿಯೂ ಸುದ್ದಿ ಹಬ್ಬಿದೆ. ಈಚೆಗೆ ಮಾಂಚುಕೋ ಮಂಗೋಲಿಯಾ ಗಡಿನಾಡಿನ ಕಲಹಗಳು ಹೆಚ್ಚುತ್ತಿವೆ. ಇಷ್ಟರಲ್ಲೆ ರಷ್ಯ ಜಪಾನ್ ಯುದ್ಧವು ಪ್ರಾರಂಭವಾಗಬಹುದೆಂಬ ಭೀತಿಯು ವಿಶೇಷವಾಗಿದೆ.

ಮೋಟಾರುಗಾಡಿಗಳಿಗೆ ಯಾವಬಣ್ಣದ ದೀಪ ಹಾಕಿದರೆ ಒಳ್ಳೆಯದೆಂದು ಪರೀಕ್ಷಿಸಿ ತಿಳಿಸಲು ಫ್ರೆಂಚ್ ಸರ್ಕಾರದವರಿಂದ ನಿಯಮಿತರಾಗಿದ್ದ ಕಮಿಟಿಯವರು ಅನೇಕ ಪರೀಕ್ಷೆಗಳನ್ನು ನಡೆಯಿಸಿ ಮೋಟಾರುಗಳಿಗೆ ಈಗ ಉಪಯೋಗಿಸುತ್ತಿರುವ ಪ್ರಕಾಶವಾದ ಎಲೆಕ್ಟ್ರಿಕ್ ದೀಪಗಳಿಗಿಂತ ಹಳದಿ ದೀಪಗಳನ್ನು ಹಾಕುವುದರಿಂದ ಬಹಳ ಅನುಕೂಲವಾಗುವುದಲ್ಲದೆ ಕಣ್ಣುಗಳಿಗೂ ಹಿತವಾಗಿರುವುದೆಂದು ವರದಿ ಮಾಡಿದ ಕಾರಣ, ಬರುವ ಜುಲೈ ೧ ನೇ ತಾರೀಕಿನಿಂದ ಫ್ರಾನ್ಸಿನ ಎಲ್ಲಾ ಮೋಟಾರುಕಾರುಗಳಿಗೂ ಹಳದಿ ದೀಪಗಳನ್ನು ಉಪಯೋಗಿಸುವರೆಂದು ಕೇಳುತ್ತೇವೆ.

ಕಳೆದ ಒಂದು ವರ್ಷದಲ್ಲಿ ಫ್ರಾನ್ಸಿನ ರಾಜಧಾನಿಯಾದ ಪ್ಯಾರಿಸ್ ಮಹಾಪಟ್ಟಣದಲ್ಲಿ 16000 ಜನಗಳು ಪತ್ತೆ ಇಲ್ಲದೆ ಅದೃಶ್ಯರಾಗಿರುವರು. ಅಂದರೆ ಅದರ ಹಿಂದಿನ ವರ್ಷಕ್ಕಿಂತ 1600 ಮಂದಿ ಹೆಚ್ಚಾದು ದಾಯಿತು. ಇವರುಗಳಲ್ಲಿ 7000 ಜನರು ಏನಾದರೂ ಬುಡಿ ಪತ್ತೆಯಿಲ್ಲ. ಪಿಗಾರೋ ಎಂಬ ಪತ್ರಿಕೆಯ ಪ್ರಕಟನೆಯಂತೆ ಕಳೆದೆರಡು ವರ್ಷಗಳಿಂದ 2931 ಮಂದಿ ಗಂಡಂದಿರು (ಅವರಲ್ಲಿ ಅರ್ಧ ಮಂದಿ ಪತ್ತೆ ಮಾಡಲ್ಪಟ್ಟಿರು) 2107 ಹೆಂಡತಿಯರು 1215 ಮಂದಿ ಮೈನರ್ ಹುಡುಗರು 1207 ಮಂದಿ ಹುಡುಗಿಯರೂ 350 ಮಂದಿ ತಂದೆಗಳೂ 288 ಮಂದಿ ತಾಯಿಯರೂ ಪತ್ತೆ ಇಲ್ಲದೆ ಹೋದರೆಂದು ತಿಳಿದುಬರುತ್ತದೆ.

ಜಪಾನಿನ ಡಾಕ್ಟರಾದ, ಪ್ರೊಫೆಸರ್ ಊಚ್ಚಿತಾ ಎಂಬವರು ಜಪಾನ್ ದೇಶದವರ ಕಣ್ಣುಗಳ ಆಕಾರವನ್ನು ಯೂರೋಪುದೇಶದವರ ಕಣ್ಣುಗಳ ಆಕಾರಕ್ಕೆ ಶಸ್ತ್ರಚಿಕಿತ್ಸೆಯಿಂದ ಬದಲಾಯಿಸುವುದರಲ್ಲಿ ಪ್ರಸಿದ್ಧರಾಗಿದ್ದರು. ಅವರು ಈಗ ಹೊಸದಾಗಿ ಕಣ್ಣುಗಡ್ಡೆಗಳಿಗೆ ಯಾವ ಬಣ್ಣವನ್ನು ಬೇಕಾದರೂ ಕೊಡಬಲ್ಲ ಉಪಾಯವನ್ನು ಕಂಡುಹಿಡಿದಿರುತ್ತಾರೆ. ಇವರು ಕಣ್ಣಿನ ಬಣ್ಣವನ್ನು ಬದಲಾಯಿಸುವುದನ್ನು ಕಂಡು ಹಿಡಿದ ದಿನದಿಂದ ಜಪಾನಿನ ಶ್ರೀಮಂತಸ್ತ್ರೀಯರೆಲ್ಲರೂ ತಮ್ಮ ಕಣ್ಣುಗಳನ್ನು ನೀಲಿಬಣ್ಣಕ್ಕೆ ತಿರುಗಿಸಿಕೊಳ್ಳುವುದು ಅಭ್ಯಾಸಕ್ಕೆ ಬಂದಿದೆ. ಈಗ ಪುರುಷರಿಗೂ ಈ ಹುಚ್ಚುಹಿಡಿದು ತಮ್ಮ ಕಣ್ಣುಗಳಿಗೆ ಹಸರುಬಣ್ಣ ಹಾಕಿಸುತ್ತಿರುವರಂತೆ. ಆಂತೂ ಪೂರ್ವದೇಶೀಯರ ಜನ್ಮಸಿದ್ಧವಾದ ಕರಿಯ ಕಣ್ಣುಗಳು ಜನಗಳಿಗೆ ಅನಾಗರಿಕವಾಗಿ ತೋರಹತ್ತಿದಂತಿದೆ.

ಪ್ರಪಂಚದ ಎಲ್ಲ ಪ್ರದೇಶಗಳ ವಿಜ್ಞಾನಶಾಸ್ತ್ರಜ್ಞರು ನಮ್ಮ ಸುತ್ತಲೂ ವ್ಯಾಪಿಸಿರುವ ಅತ್ಯಂತ ಶಕ್ತಿಯುತವಾದ, ಕಾಸ್ಮಿಕ್‌ರೇ ಎಂಬ ತೇಜಸ್ಸನ್ನು ತಮ್ಮ ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ಪ್ರಯತ್ನದಲ್ಲಿ ಅವರು ಉತ್ತೀರ್ಣರಾದರೆ, ಲಕ್ಷಾಂತರ ವೋಲ್ಟ್ ವಿದ್ಯುಚ್ಛಕ್ತಿಯನ್ನು ಪ್ರಪಂಚಕ್ಕೆ ಏನೊಂದು ಖರ್ಚು ಇಲ್ಲದೇ ಆಕಾಶದಿಂದ ಒದಗಿಸಿಕೊಡಬಲ್ಲ ಹೊಸಯುಗವೇ ಪ್ರಾರಂಭವಾಗುವುದೆಂದು ಹೇಳುತ್ತಾರೆ. ಇಲ್ಲಿಯವರಿವಿಗೆ ನಡೆಸಿರುವ ಪ್ರಯತ್ನಗಳು ಆಶಾಜನಕಗಳಾಗಿವೆ. ಈ ಪ್ರಯತ್ನಗಳಲ್ಲಿ ಪ್ರಮುಖರಾದ ಚಿಕಾಗೋವಿನ ಪ್ರೊಫೆಸರ್ ಎ. ಹೆಚ್. ಕಾಂಪ್‌ಟನ್ ಎಂಬುವರು ತಮ್ಮ ಈ ಪ್ರಯತ್ನವು ಸಿದ್ಧಿಸಲು ಬಹಳಕಾಲ ಅವಶ್ಯಕವಿಲ್ಲವೆಂದು ಹೇಳುತ್ತಾರೆ. ಲಂಡನ್ನಿನ ಬ್ರಿಟಿಷ್ ವಿಜ್ಞಾನಶಾಸ್ತ್ರಜ್ಞರು ಪರೀಕ್ಷೆಗಳನ್ನು ನಡೆಸಿದ್ದರಲ್ಲಿ ಈ ಕಾಸ್ಮಿಕ್ ತೇಜಸ್ಸಿನ ಶಕ್ತಿಯು ಭೂಮಿಯ ಮೇಲ್ಭಾಗದಲ್ಲಿರುವಷ್ಟೇ ಶಕ್ತಿಯುತವಾಗಿ ಭೂಗರ್ಭದಲ್ಲಿಯೂ ಇದೆಯೆಂದು ಹೇಳುತ್ತಾರೆ.

ವಿಚಿತ್ರವಾದ ಮರಣ

ಕಲ್ಕತ್ತಾ ಪಟ್ಟಣದ ಉತ್ತರಭಾಗದಲ್ಲಿ ವಾಸವಾಗಿರುವ ಗೃಹಸ್ಥನೊಬ್ಬನು ಕಳೆದ ೯ನೆಯ ತಾರೀಕು ಬೆಳಗೆ ಹಾಸಿಗೆ ಬಿಟ್ಟೆದ್ದು ನೋಡುವಲ್ಲಿ ಆತನ 3 ಹೆಣ್ಣುಮಕ್ಕಳು ಮಲಗಿದಲ್ಲೇ ಮೃತರಾಗಿ ಮತ್ತೊಬ್ಬಳು ಉತ್ಕಟಾವಸ್ಥೆಯಲ್ಲಿರುವುದನ್ನು ಕಂಡನು. ಮರಣದ ಕಾರಣವು ಸರಿಯಾಗಿ ತಿಳಿದಿಲ್ಲ. ಅಳಿ

ವನ್ನು ಹೆಚ್ಚಾಗಿ ಸೇವಿಸಿದ್ದರಿಂದ ಮರಣವುಂಟಾಗಿರಬಹುದೆಂದು ಊಹಿಸಲಾಗಿದೆ. ಮೃತರು ಕೆಲವು ದಿವಸಗಳ ಹಿಂದೆ ಕೊಳದಲ್ಲಿ ಬಿದ್ದು ಆತ್ಮಹತ್ಯೆಮಾಡಿಕೊಂಡ ಸುಸಿಲ್ ಮುಜುಂದಾರ್ ಎಂಬುವನ ಸಹೋದರಿಯರು. ಏಕಕಾಲದಲ್ಲಿ ಇಷ್ಟು ಮಕ್ಕಳ ಮರಣದಿಂದ ತಂದೆಯ ದುಃಖವು ಮಿತಿಮೀರಿಹೋಗಿದೆ.

ಆಶ್ಚರ್ಯಕರವಾದ ಸಹಗಮನ

ಸುಲ್ತಾನಪುರದ ರಾಜಗುರುವಾದ ರಾಮಪ್ರಸಾದ್ ಪಂಡಿತ್ ಎಂಬುವರು ಖಾಹಿಲೆಬಿದ್ದರೆಂಬುದನ್ನು ಕೇಳಿ, ಗಯೆಯಲ್ಲಿದ್ದ ಆತನ ಹೆಂಡತಿಯು ಪತಿಶುಶ್ರೂಷೆಗಾಗಿ ಬಂದು ಎಷ್ಟು ಶ್ರಮವಹಿಸಿದರೂ ರೋಗವು ಗುಣವಾಗದೆ ಮರಣವೇ ನಿಶ್ಚಯವೆಂದು ತಿಳಿದವರಿಂದ ಪತಿಯನ್ನು ಬಿಟ್ಟು ಬದುಕಲು ಇಷ್ಟವಿಲ್ಲದೇ ಆಕೆಯು ಮೂರನೆಯದಿವಸ ನಿರಶನವ್ರತಮಾಡಿ ಮರಣಹೊಂದಿದಳು. ಪತ್ನಿಯ ಮರಣ ಸಮಾಚಾರವನ್ನು ಕೇಳಿದ ಕೂಡಲೆ ಪಂಡಿತರೂ ದೇಹವನ್ನು ಬಿಟ್ಟರು. ಒಂದೇ ಚಿತೆಯಲ್ಲಿ ಮೊದಲು ಪತ್ನಿಯನ್ನೂ ಅನಂತರ ಪತಿಯನ್ನೂ ಇಟ್ಟು ದಹನವು ನಡೆಯಿತೆಂದು ತಿಳಿದು ಬರುತ್ತದೆ. ಭಾರತರಮಣಿಯರ ಪತಿವ್ರತಾಪ್ರಭಾವವು ಅಳಿವಿಲ್ಲವೆಂಬುದಕ್ಕಿದೊಂದು ನಿದರ್ಶನವಲ್ಲವೇ ?

ಚೀಣಾ ಸರ್ಕಾರದವರ ಪರಿಸ್ಥಿತಿ

ಚಹಾರಿನ ೬ ಕೌಂಟಿಗಳನ್ನು ವಶಪಡಿಸಿಕೊಂಡ ೧೦೦೦೦ ಮಂಚುಕೊ ಮಂಗೋಲ್ ಸೈನಿಕರು, ಸೂಯ್ಯುವಾನ್ ಪ್ರಾಂತ್ಯಕ್ಕೆ ಮುತ್ತಿಗೆ ಹಾಕಿ ಮತ್ತೆ ೭ ಜಿಲ್ಲೆಗಳನ್ನು ವಶಪಡಿಸಿಕೊಳ್ಳಲು ಸಿದ್ಧಪಡಿಸಿಕೊಳ್ಳುತ್ತಿದ್ದಾರೆಂಬ ಸುದ್ದಿ ಹಬ್ಬಿದೆ. ಸೂಯ್ಯಾನಿನ ಗವರ್ನರ್ ಜನರಲ್ ಫುಟ್ಸೋಯಿಯವರು, ಶತ್ರುಗಳನ್ನು ಎದುರಿಸುವರೆಂದು ತೋರುತ್ತದೆ. ಇದರಿಂದ ಮಂಗೋಲಿಯದ ರಾಜ್ಯಜನರು ದಂಗೆಏಳುವರೆಂಬ ಭಯವು ಬಹಳವಾಗಿದೆ. ನಾನ್‌ಕಿಂಗ್ ಸರ್ಕಾರದವರು ಸೂಯ್ಯಾನಿನ ಮಂಗೋಲ್‌ಲೀಗುಗಳಿಗೆ ಬೇರೆ ಕೌನ್ಸಿಲ್ ಏರ್ಪಾಡುಮಾಡಿರುತ್ತಾರೆ. ಚಹಾರಿಗೂ ಈ ಸ್ಥಿತಿಯು ಹರಡದಂತೆ ಇರಲೆಂದು ಹೀಗೆ ಮಾಡಿದರು. ಪರಿಸ್ಥಿತಿಯು ಸಂದೇಹಾಸ್ಪದವಾಗಿದೆ

ನೀರಿನಲ್ಲಿ ತೇಲುವ ಕಲ್ಲು

ಯೋತಮಲ್ ಡಿಸ್ಟ್ರಿಕ್ಟಿನ ತಾರಾಗಾಂವ್ ಎಂಬ ಹಳ್ಳಿಯಲ್ಲಿ ಶಿಥಿಲವಾದ ಕಟ್ಟಡ ಒಂದರಲ್ಲಿ ಸಿಕ್ಕಿದ ನೀರಿನ ಮೇಲೆ ತೇಲುವ ವಿಚಿತ್ರತರ ಕಲ್ಲಿನ ಮಾದರಿಗಳನ್ನು ಮಿ|| ನಾಗಪುರದ ಬಿ ಸಿ ದೇಶಪಾಂಡೆ ಎಂಬುವರು ಲಂಡನ್ ಮ್ಯೂಸಿಯಂನಲ್ಲಿ ಪ್ರದರ್ಶಿಸಲು ಕಳುಹಿಸಿದ್ದಾರೆ. ಸಾಮಾನ್ಯವಾಗಿ ದೊಡ್ಡದಾಗಿಯೇ ಇರುವ ಈ ಕಲ್ಲು ನೋಡಲು ಇಟ್ಟಿಗೆಯಂತೆ ಇದ್ದು ಸ್ವಲ್ಪ ಕಪ್ಪಾಗಿರುತ್ತದೆ. ಇದು ನೀರಿನ ಮೇಲೆ ಸಂಪೂರ್ಣವಾಗಿ ತೇಲುತ್ತದೆ. ಇದರ ಮಾದರಿಯನ್ನು ಇಟ್ಟಿರುವ ನಾಗಪುರದ ಮ್ಯೂಸಿಯಂ ಕ್ಯೂರೇಟರು ಪ್ರಪಂಚದಲ್ಲೇ ಈ ವಿಧವಾದ ಬೇರೆ ಕಲ್ಲುಗಳಿಲ್ಲವೆಂದೂ ಹಗುರವೆಂದು ಹೇಳಿಸಿಕೊಳ್ಳುವ "ಪ್ಯೂಮಿಸ್" ಕಲ್ಲುಗಳು ಕೂಡ ನೀರಿನಲ್ಲಿ ಮುಳುಗಿಹೋಗುತ್ತವೆಂದು ಹೇಳುತ್ತಾರೆ

ಹಣತೆಗೆದುಕೊಳ್ಳುವ ಯಂತ್ರ.

ಇಷ್ಟರಲ್ಲೇ ಲಂಡನ್ ಬ್ಯಾಂಕುಗಳೆಲ್ಲಾ ಹಣವನ್ನು ತೆಗೆದುಕೊಳ್ಳುವ ಹೊಸಮಾದರಿಯ ಯಂತ್ರವು ಇಡಲ್ಪಡುವುದು. ಕಾರ್ಗಸೊಮ್ಯಾಟ್ ಎಂಬ ಈ ಯಂತ್ರವನ್ನು ಸ್ವಿಸ್‌ದೇಶೀಯನಾದ ಫ್ರಿಟ್ಸ್‌ನೂಬಿ ಎಂಬವನು ನಿರ್ಮಿಸಿದನು. ಇದರ ಸಹಾಯದಿಂದ ಹಣವನ್ನು ಬ್ಯಾಂಕಿಗೆ ಕೊಡಬೇಕಾದವರು ರಾತ್ರಿಹಗಲೆನ್ನದೆ ತಮಗೆ ಅನುಕೂಲವಾದಾಗ ಸಲ್ಲಿಸಬಹುದು. ಈ ಯಂತ್ರಗಳಿಗೆ ಸಂಬಂಧಪಟ್ಟ ಒಂದೊಂದು ಬೀಗದಕೈಯನ್ನು ಪ್ರತಿಯೊಬ್ಬ ಗಿರಾಕಿಗೂ ಕೊಡುವರು. ಹಣ ಕೊಡಲು ಹೋದವರು ಆ ಬೀಗದಕೈಯನ್ನು ಯಂತ್ರದ ಬೀಗದಲ್ಲಿ ಅರ್ಧಹಾಕಿದಕೂಡಲೆ ನೋಟು ನಾಣ್ಯ ಮತ್ತು ರಿಜಿಸ್ಟರ್ ಕಾಗದಗಳನ್ನಿಡಲು ಬೇರೆಬೇರೆ ಸ್ಥಳವಿರುವ ಖಾನೆಯೊಂದು ಹೊರಗೆ ಬರುವುದು. ಬ್ಯಾಂಕಿಗೆ ಕೊಡಬೇಕಾಗಿರುವ ಮೊಬಲಗನ್ನೂ ಕಾಗದವನ್ನೂ ಅದರಲ್ಲಿಟ್ಟು ಬೀಗದಕೈಯನ್ನು ಒಳಕ್ಕೆ ತಳ್ಳಿದಕೂಡಲೆ ಅವರು ಕೊಟ್ಟ ಪದಾರ್ಥಗಳೆಲ್ಲವೂ ಫೋಟೋತೆಗೆಯಲ್ಪಟ್ಟು ಬೀಗದಕೈ ಸಮೇತ ರಶೀತಿಯೂ ಸಹ ಹೊರಕ್ಕೆ ಬರುವುದು. ರಶೀತಿ ಬರೆಯುವ ಕೆಲಸವನ್ನೆಲ್ಲಾ ಈ ಯಂತ್ರವೇ ನಡೆಸುವುದು. ಚೆಕ್ಕನ್ನು ತೆಗೆದುಕೊಂಡು ದುಡ್ಡು ಕೊಡುವ ಕೆಲಸವನ್ನು ಬಿಟ್ಟು ಬಾಕಿ ಎಲ್ಲ ಕೆಲಸಗಳನ್ನು ಈ ಯಂತ್ರದಿಂದ ಮಾಡಿಸಬಹುದಂತೆ

ಜರ್ಮನಿ ಹುಡುಗಿಯರ ಗತಿ

ನ್ಯೂರೆಂಬರ್ಗಿನಲ್ಲಿ ಯಹೂದ್ಯರಿಗೆ ವಿರೋಧವಾಗಿ ಕಾನೂನು ಜಾರಿಯಲ್ಲಿ ತಂದಿರುವ ಪ್ರಯುಕ್ತ ಜರ್ಮನೀದೇಶದಲ್ಲಿ ೪೫ ವರ್ಷದೊಳಗೆ ವಯಸ್ಸುಳ್ಳ ಹೆಂಗಸರೆಲ್ಲರೂ ಯಹೂದ್ಯರ ಮನೆತನಗಳಲ್ಲಿ ಕೆಲಸಮಾಡುವುದನ್ನು ಬಿಟ್ಟಿರುತ್ತಾರೆ. ಯಹೂದ್ಯರ ಮನೆಗಳಲ್ಲಿ ಕೆಲಸಮಾಡುತ್ತಿದ್ದ ಸಾವಿರಾರು ಜರ್ಮನಿಯ ಹುಡುಗಿಯರಿಗೆ ಈ ಹೊಸವರ್ಷದಲ್ಲಿ ಕೆಲಸವಿಲ್ಲದೆ ಅಲೆದಾಡುವ ಗತಿಬಂದಿದೆ. ಇವರಲ್ಲಿ ಅನೇಕರು ಮನೆಮಠಗಳಿಲ್ಲದ ನಿರ್ಗತಿಕರಾಗಿರುವುದರಿಂದ ಇವರ ಪೋಷಣೆಗಾಗಿ ಜರ್ಮನೀದೇಶದ ಹಲವು ಪೌರಸಭೆಗಳು 'ಸ್ಪೆಷಲ್ ಅಪ್ಲಾಯ್‌ಮೆಂಟ್ ಬ್ಯೂರೋ' ಗಳನ್ನು ಏರ್ಪಡಿಸಿ, ಅವುಗಳಲ್ಲಿ ಆ ಹುಡುಗಿಯರಿಗೆ ನಿಲ್ಲಲು ಆಸರೆಯನ್ನು ಕಲ್ಪಿಸಿದ್ದಾರೆ. ಆ ಹುಡುಗಿಯರಿಗೆ ಬೇರೆ ಜೀವನೋಪಾಯಗಳು ಸಿಕ್ಕುವವರೆಗೆ ಅವರೆಲ್ಲರೂ ಅಲ್ಲಿಯ ಪೌರಸಭೆಯವರು ಸ್ಥಾಪಿಸಿರುವ ರಕ್ಷಣಾಲಯಗಳಲ್ಲಿ ವಾಸಿಸಬೇಕಾಗಿದೆ. ಇದು ಆ ಹುಡುಗಿಯರಿಗೆ ಹಿತಕರವಾಗಿಲ್ಲ. ಅವರು ಕೆಲಸಮಾಡುತ್ತಲಿದ್ದ ಯಹೂದ್ಯರ ಮನೆಯಲ್ಲಿ ಸುಖವಾಗಿಯೇ ಇದ್ದವರು. ಎಂಥ ಹೊಸ ಬದಲಾವಣೆ ಬಂದರೂ ಕೊಂಚಮಟ್ಟಿಗೆ ಸುಖವನ್ನು ತ್ಯಾಗಮಾಡಬೇಕಲ್ಲವೆ ? ಜರ್ಮನಿ ಜನಾಂಗವು ಆರ್ಯರ ಬುಡಕಟ್ಟಿಗೆ ಸೇರಿದ್ದು ಆದುದರಿಂದ ಆರ್ಯರಾದ ಜರ್ಮನಿಯ ಹುಡುಗಿಯರು ಯಹೂದ್ಯರೊಂದಿಗೆ ಯಾವ ವಿಧವಾದ ಸಂಬಂಧವನ್ನೂ ಮಾಡದೆ ಇರಬೇಕೆಂಬ ಉದ್ದೇಶದಿಂದಲೇ ನ್ಯೂರೆಂಬರ್ಗ್ ಕಾನೂನನ್ನು ಜಾರಿಯಲ್ಲಿ ತಂದಿರುವುದು. ಆರ್ಯರೊಂದಿಗೆ ಯಹೂದ್ಯರ ಸಹಪಂಕ್ತಿ ಭೋಜನವನ್ನು ನ್ಯೂರೆಂಬರ್ಗ್ ಕಾನೂನು ನಿಷೇಧಿಸುತ್ತದೆ. ಆರ್ಯನ್ ಹುಡುಗಿಯರನ್ನು ಯಹೂದ್ಯರು ವಿವಾಹವಾಗುವುದನ್ನೂ ಸಹ ಪ್ರತಿಬಂಧಿಸುತ್ತದೆ. ಈ ಕಾನೂನು ಮಾಡಿರುವ ಉದ್ದೇಶವು ಜರ್ಮನಿಯ ಸ್ತ್ರೀಯರ ಪಾರಿಶುದ್ಧ್ಯವನ್ನು ಕಾಪಾಡುವುದೇ ಆಗಿದೆ

ಇಟಲಿ ಅಬ್ಸೀನಿಯಾ ಸಂಗ್ರಾಮ

ಅಡೆಗ್ರ್ಯಾಟ್‌ನಗರದ ದಕ್ಷಿಣಭಾಗದಲ್ಲಿ ರಾಸ್‌ಸೆಯೂಂರವರ ಸೈನ್ಯಕ್ಕೂ ಇಟಲಿಯ ಸೈನ್ಯಕ್ಕೂ ಕ್ರೂರ ಕದನವು ನಡೆದು ಅಬ್ಸೀನಿಯರಿಗೆ ಜಯವು ಲಭಿಸಿತು. ಇಟಲಿಯವರ ವರ್ತಮಾನಸೌಕರ್ಯಗಳನ್ನೂ ರಸ್ತೆಯನ್ನೂ ಅಬ್ಸೀನಿಯರು ಮುತ್ತಿ ವಶಪಡಿಸಿಕೊಳ್ಳಲು ಪ್ರಯತ್ನಪಡುತ್ತಿದ್ದಾರೆ. ಒಟ್ಟಿನಲ್ಲಿ ಉತ್ತರರಣರಂಗದ ಪರಿಸ್ಥಿತಿಯು ಅಬ್ಸೀನಿಯರಿಗೆ ತೃಪ್ತಿಯನ್ನುಂಟುಮಾಡಿರುತ್ತದೆ

ಟೆಂಬಿಯನ್ ಯುದ್ಧದಲ್ಲಿ ಅಬ್ಸೀನಿಯರು ಜಯಿಸಿದರೆಂದು ಹೇಳುವುದು ಸುಳ್ಳು. ತಮಗೆ ಜಯವಾಯಿತೆಂದು ಇಟಲಿಯವರು ಹೇಳುತ್ತಿದ್ದರು. ಆದರೆ ಸ್ಥಳದಲ್ಲಿ ಕೆಲಸಮಾಡುತ್ತಿದ್ದ ರೆಡ್‌ಕ್ರಾಸ್ ವೈದ್ಯರಾದ ಬ್ರಿಟಿಷ್ ಡಾಕ್ಟರ್ ಬ್ರೋಫೀಲ್ಡ್‌ರವರು ಅಬ್ಸೀನಿಯರಿಗೆ ಜಯವಾಯಿತೆಂದು ಖಂಡಿತ ತಿಳಿಸಿರುವರು. ಉತ್ತರ ರಂಗದಲ್ಲಿ ಇಟಲಿಯವರಿಗೆ ಸೋಲಾದುದು ಇದೇ ಮೊದಲು. ಉಪಚಾರ ಪಡೆಗಳ ಮೇಲೆ ಬಾಂಬು ಹಾಕುವುದು ಇನ್ನೂ ನಿಲ್ಲಿಸಲ್ಪಟ್ಟಿಲ್ಲವೆಂದು ಹೇಳುತ್ತಾರೆ

ಅಬ್ಸೀನಿಯರು ಮಕಾಲೆ ನಗರವನ್ನು ಮುತ್ತಿ ಅದನ್ನು ವಶಪಡಿಸಿಕೊಳ್ಳಲು ಸ್ಥಿರಸಂಕಲ್ಪಮಾಡಿದ್ದಾರೆ. ಪಟ್ಟಣಕ್ಕೆ ನೀರು ಸರಬರಾಜಾಗುತ್ತಿದ್ದ ನದಿಯನ್ನೇ ಬೇರೆಕಡೆಗೆ ತಿರುಗಿಸಿ ನೀರಿಗೆ ತೊಂದರೆಯಾಗುವಂತೆ ಮಾಡಿರುವರಲ್ಲದೆ, ದೂರದಲ್ಲಿ ಇಟಲಿ ಸೈನ್ಯದ ಸಂಬಂಧವನ್ನು ಒಡೆದು ಬೇರ್ಪಡಿಸಿರುವರೆಂದು ತಿಳಿಸುತ್ತಾರೆ

ದಕ್ಷಿಣರಂಗದಲ್ಲಿ ರಾಸ್‌ಡೆಸ್ಟಾನು ಇಟಲಿಯ ಸೈನ್ಯಗಳ ಕಡೆಗೆ ತನ್ನ ಸೈನ್ಯಗಳನ್ನು ನಡೆಸುತ್ತಿರುವುದಾಗಿ ಸುದ್ದಿ. ಆ ಪ್ರಾಂತಗಳಲ್ಲಿ ವಾಸವಾಗಿದ್ದ ಅನೇಕ ನಾಗರಿಕರು ತಮ್ಮ ಮನೆಮಠಗಳನ್ನು ಬಿಟ್ಟು ದನಕರುಗಳನ್ನು ಹೊಡೆದುಕೊಂಡು ಇಟಲಿ ಸೈನ್ಯದ ರಕ್ಷಣೆಗೊಳಪಟ್ಟ ಪ್ರದೇಶಗಳಿಗೆ ಬರುತ್ತಿರುವರಂತೆ ! ಈ ವಿಚಿತ್ರಯುದ್ಧದಲ್ಲಿ ನಾಗರಿಕರು ಶತ್ರುಗಳನ್ನು ಕಂಡು ಓಡಿಹೋಗುವುದರ ಬದಲು ಅವರ ಆಶ್ರಯಕ್ಕೇ ಬರುತ್ತಿರುವರಂತೆ. ಹೀಗೆ ಬಂದವರನ್ನು ಇಟಲಿಯ ಕಡೆಯ ದುಬಟ್ ಸೈನಿಕರು ಕರೆದುಕೊಂಡುಹೋಗಿ ಅವರಲ್ಲಿದ್ದ ಆಹಾರಸಾಮಗ್ರಿಗಳನ್ನು ಕೊಂಡುಕೊಂಡು ಇಂಥವರಿಗಾಗಿ ಏರ್ಪಡಿಸಿರುವ ಹುಲ್ಲುಗಾವಲು ಪ್ರಾಂತಗಳಿಗೆ ಅವರನ್ನು ಕಳಿಸಿದವರಂತೆ. ಒಗಡೆನ್ ಪ್ರಾಂತದ ಅನೇಕ ಅಬ್ಸೀನಿಯ ಮುಖಂಡರು ಇಟಲಿಯವರ ಕಡೆ ಸೇರಿದರೆಂದೂ ಇವರಲ್ಲಿ "ಹುಚ್ಚುಮುಲ್ಲಾ" ಮಗನೂ ಇರುವನೆಂದು ಹೇಳುತ್ತಾರೆ. ಇಟಲಿಯ ಎರಿಟ್ರಿಯಾ ಸೈನ್ಯದಮೇಲೆ ಬೀಳಬೇಕೆಂಬುದೇ ರಾಸ್‌ಡೆಸ್ಟಾನ ಯೋಚನೆ. ಈ ಯೋಚನೆಯು ಒಳ್ಳೆಯದಾದರೂ ಅದರಂತೆ ನಡೆಸುವುದು ಕಷ್ಟವೆಂದು ಇಟಲಿಯ ಸೈನ್ಯಾಧಿಪತಿ ಗ್ರಜಿಯಾನಿಯೇ ಹೇಳುತ್ತಿದ್ದಾನೆ. ಅಂತೂ ಅಬ್ಸೀನಿಯ ಸೈನ್ಯಗಳು ಡೋಲೊ ನಗರದ ಕಡೆ ಬರುತ್ತಿವೆ. ಅವರೆ ಇಟಲಿಯವರ ಮೇಲೆ ಬೀಳುವರೋ, ಇಟಲಿಯವರೇ ಮೊದಲು ಅವರನ್ನು ಎದುರಿಸುವರೋ ನೋಡಬೇಕು. ಚಕ್ರವರ್ತಿಯ ಅಳಿಯನಾದ ರಾಸ್ ಡೆಸ್ಟಾನು ಬಹಳ ದೇಶಪ್ರೇಮಿಯೂ ಚಕ್ರವರ್ತಿಯವರ ಇಷ್ಟದಂತೆ ನಡೆಯುವವನೂ ಎಂದು ಪ್ರಸಿದ್ಧನಾಗಿದ್ದಾನೆ. ದಕ್ಷಿಣ ರಣರಂಗದಲ್ಲಿ ನಡೆದ ಎಲ್ಲಾ ಕದನಗಳಿಗಿಂತ ಈಗ ನಡೆಯಲಿರುವದು ಬಹಳ ಭಾರಿಯೂ ಅಪಾಯಕರವೂ ಆಗಿರುವುದೆಂದು ಹೇಳುತ್ತಾರೆ.

ಅಬ್ಸೀನಿಯದ ರಾಜಧಾನಿಯಾದ ಅಡಿಸ್ ಅಬಾಬದ ಮೇಲೆ ಬಾಂಬುಗಳನ್ನು ಹಾಕಲು ಸಿದ್ಧತೆಗಳು ನಡೆಯುತ್ತಿವೆ. ಒಂದು ಘಂಟೆಯೊಳಗೆ ಅಡಿಸ್ ಅಬಾಬಕ್ಕೆ ತಲುಪಲು ಶಕ್ತಿಯುಳ್ಳ 10 ವಿಮಾನಗಳನ್ನು ನೆಗೆಲ್ಲಿಗೆ ಇಟಾಲಿಯನರು ತಂದಿರುವರಂತೆ. ಆದರೆ ವಿಮಾನ ನಿಲ್ಲಿಸುವ ಸ್ಥಳವೆಲ್ಲವೂ ಮಳೆಯಿಂದ ಬಹಳ ಕೆಸರಾಗಿರುವುದರಿಂದ ಹಾರಲಾರದೆ, ನಿಲ್ಲಿಸಲ್ಪಟ್ಟಿವೆಯೆಂದು ತಿಳಿದುಬಂದಿದೆ

ಶ್ರೀ ರಾಮೇಶ್ವರ ಕ್ಷೇತ್ರಕ್ಕೆ
ಯಾತ್ರಾರ್ಥಿಗಳಾಗಿ ಬರತಕ್ಕ ವೀರಶೈವರಿಗೆ

ಸೂಚನೆ.

ಸುಪ್ರಸಿದ್ಧವಾಗಿರುವ ಶ್ರೀರಾಮೇಶ್ವರಕ್ಷೇತ್ರಕ್ಕೆ ಬರುವ ವೀರಶೈವರಿಗೆ ಯಾವ ಪ್ರಕಾರದ ಸೌಕರ್ಯವೂ ಇಲ್ಲದಿರುವದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ನಾವು ವೀರಶೈವರ ಪರತಿಗಾಗಿ "ಜಂಗಮವಾಡಿ" ಎಂಬ ಸ್ಥಳವನ್ನು ಏರ್ಪಡಿಸಿರುವೆವು. ವೀರಶೈವರಿಗೆ ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಒದಗಿಸಿ ಕೊಡುವೆವಲ್ಲದೆ ದರ್ಶನಾದಿಗಳಿಗೆ ಬೇಕಾಗುವ ಸುವ್ಯವಸ್ಥೆಯನ್ನು ಕಲ್ಪಿಸಿಕೊಡುವೆವು. ಮಾಹಿತಿಗಾಗಿ ನಮ್ಮ ಸಂಗಡ ಪತ್ರವ್ಯವಹಾರ ಮಾಡಬೇಕಾಗಿ ಕೋರಿಕೆ.

ಗುರುಸಿದ್ಧಸ್ವಾಮಿ,
(14) ಜಂಗಮವಾಡಿ ಮಠ, ರಾಮೇಶ್ವರ,
ಪೋ|| ರಾಮೇಶ್ವರ (S.I.Ry.)

(೫ ನೇ ಪುಟದಿಂದ ಮುಂದ ವರಿಸುದು)

ದೊರೆಯುವಂತೆ, ಮತ್ತು ಯಾರಾದರೂ ಅಡವಿಗಳಲ್ಲಿ ಹೊಲ ತೋಟ ಗದ್ದೆಗಳ ಉಪಯೋಗಕ್ಕಾಗಿ ಭಾವಿ ಕೆರೆ ಗದ್ದೆ ಕಟ್ಟೆ ಕಟ್ಟಿಸಿದರೆ ಬರುಹೋಗುವ ಜನರಿಗೂ ದನಕರು ಹಕ್ಕಿಪಕ್ಷಿಗಳಿಗೂ ಉಪಯೋಗವಾಗುವಂತೆ ಆ ಫಲವು ಸಂಪೇರುವುದಿಲ್ಲದೆ ತನ್ನ ಕರ್ತವ್ಯವು ನೆರವೇರುವುದು ಜನರಲ್ಲಿ ನೀಚಸ್ವಭಾವವು ಹುಟ್ಟಿದೊಡನೆ ಅಂದವರಲ್ಲಿ ಲೋಭ ಅಸತ್ಯ, ಚೌರ್ಯ ಹೆಮ್ಮೆ, ದುರಾಶೆ ರ ದ ರಾಶಿ, ರಾಗದ್ವೇಷಾದಿಗಳಿಂದ ಹುಟ್ಟುವ ಕಲಹಗಳೂ, ವಂಚನೆಯೂ ನಿರ್ಲಜ್ಜೆಯೂ ತಲೆಯೆತ್ತುವವು ಆದರೆ ದ್ವೇಷಾಸೂಯೆಗಳ ಮೂಲ ಬೀಜವೂ, ಸರ್ವನಾಶಕರವೂ ಆದ ನೀಚಸ್ವಭಾವ ಗುಣವನ್ನು ಪ್ರವಹಿಸಿಕೊಂಡು ಪೆರೆಯುವ ಘೋರ ವಾದ ನಖ, ಪಂಜರ, ಕೋರೆದಾಡೆಗಳುಳ್ಳವ ನರಭಕ್ಷ ಕರಾದ ದಿ ಶ ದ ಹಿಂಸ್ರ ಮೃಗಗಳ ಜನ್ಮಕ್ಕೆ ಧಿಕ್ಕಾರ ವಿರಲಿ! ವಾಚಕಮಹಾಶಯರೇ! ಈ ನೀಚಸ್ವಭಾವ ತೆಗತ ತ್ತಾಗಿ ರಾವಣನು ಸೀತೆಯನ್ನು ಕಣದಿ ನ ದ ವಾದನು ಪ್ರತಿಸೃಷ್ಟಿಯನ್ನು ಮಾಡುವ ಶಕ್ತಿಯಿದ್ದ ವಿಶ್ವಾಮಿತ್ರನು ಇದರ ಪ್ರಭಾವದಿಂದ ವಶಿಷ್ಠರ ಹತ ಮಾಡಲು ಉದ್ಯುಕ್ತನಾದನು ಅತಿ ಲೋಭಿಯಾದ ಕೌರವನು ರಾಜ್ಯಸೆಯಿಂದ ಪಾಂಡವರನ್ನು ಪರಿಸರಿ ತೊಂದರೆಪಡಿಸಿ ತನ್ನ ನಾಶವಾಡಿ ಕೊಂಡನು ಬ್ರಹ್ಮನು ಒಂದು ತಲೆಯನ್ನು ಕಳೆದು ಕೊಂಡನು ಹೀಗೆ ಒಂದಲ್ಲ ಎರಡಲ್ಲ ಎಷ್ಟೋ ಇವೆ ಆದರೆ ಈಗ ಈ ಕರಾಳವ್ಯಕ್ತಿಕ್ಕೆ ತ ತ್ತಾಗಿರುವ ಮುಂದೆ ತುತ್ತಾಗಲಿರುವ ಭೂಲೋಕದ ಜನರೆಷ್ಟೋ ಎಚ್ಚರವಾಗಿರಿ! ನೀಚಸ್ವಭಾವವು ಸರ್ವನಾಶವು ಬಹುಕಷ್ಟವು! ಇದರ ಆಶ್ರಯ ಮಾಡಿ ನ ಹಿಡದ ತ್ತೇನೆಂದು ಕೋರುವುದ ... ನ ಗರಹಾ ನಸದೆ ನ ... ನಂಬ ಕಷ್ಟಪ್ರೊಳ್ಳ ಎಂಬಂತೆ ... ಹಾಗಾದರ ಎಲ್ಲ ನೀಚಸ್ವಭಾವವು ... ವಂದನಗಳು, ... ಸ್ವ ... ಮಾಡುವುದು ಒಂದು ಬಂದವರ ... ತರ ... ವ್ಯವಾಗಿರುವುದ ... ಸ.

ಆರ್. ಎಂ ವಸ್ಥಿರಾಜ ...

ಶ್ರೀ ಜಗದ್ಗುರು ಕೇದಾರಪೀಠ ಓಖೀಮಠ ಸಂಸ್ಥಾನದ ಕೋಶಾಗಾರ (ಖಜಾನಾ) ದಲ್ಲಿ ಭಯಂಕರವಾದ ಕಳ್ಳತನವು

ಶ್ರೀ ಜಗದ್ಗುರು ಸಂಸ್ಥಾನ ... ದ ಮ್ಯಾನೇಜರಾಗಿದ್ದ ಸದಾನಂದ ಶಾಸ್ತ್ರೀ ... ಮಠದ ಖಜಾನೆಯಲ್ಲಿದ್ದ ಬೆಳ್ಳಿ ಬಂಗಾರ ... ಮುಂತಾದವುಗಳನ್ನು ಅಪಹರಿಸಿ, ಕಳ್ಳತನಾಗಿದೆ ಎಂದ ಸುಳ್ಳುಸುಳ್ಳಾಗಿ ಡೆಪ್ಯುಟಿ ಕಲೆಕ್ಟರ್ ಸಾಹೇಬರಿಗೆ ಅರ್ಜಿ ... ಕಳ್ಳತನದ ... ಗಾಗಿ ತಹಸೀಲ್ದಾರ ಸಾಹೇಬರನ್ನು ಕರೆದನು ತಹಸೀಲ್ದಾರ ಸಾಹೇಬರು ಪೋಲೀಸ್ ಅಧಿಕಾರಿಗಳ ಸಮೇತ ಆಗಮಿಸಿ ಕಳ್ಳತನವಾಗಿದ್ದ ಖಜಾನೆಯ ಸ್ಥಾನವನ್ನೂ ಬಾಗಿಲುಗಳು ಇದ್ದದ್ದು ಇದ್ದಹಾಗೆ ಇರು ವುದನ್ನೂ ಟ್ರಂಕಿನ ಬೀಗವು ಮುರಿದದ್ದನ್ನೂ ಹಾಗೂ ಖಜಾನೆಯ ಬಾಗಿಲದ ಬೀಗವು ಮುರಿಯುವುದಕ್ಕೆ ತಕ್ಕಂತೆ ಮಾತ್ರ ಸುಟ್ಟಿರುವುದನ್ನೂ ನೋಡಿ ಆಶ್ಚರ್ಯಪಟ್ಟು ಅನುಮಾನದ ಮೇಲೆ ಮ್ಯಾನೇಜರನ್ನು ಮತ್ತು ಗೀತಾರಾಮನೆಂಬ ಆತನ ನೌಕರ ನನ್ನೂ ಮತ್ತೊಬ್ಬ ಅಧ್ಯಾಪಕನಾದ ಮಹಿಮಾನಂದ ನನ್ನೂ ದಸ್ತಗಿರಿಮಾಡಿ ಅವರ ಕೋಣೆಗಳನ್ನು ಹುಡು ಕಲಾಗಿ ಸಾವಿರದ ನೂರು ರೂಪಾಯಿಗಳ ಒಂದು ಗಂಟು, ಒಂಭೊತ್ತು ಗಿನ್ನಿಗಳು, ಒಂದು ಕಸ್ತೂರಿಯ ಮುಷ್ಠವು, ಒಂದು ಆನೆಯಕೊಂಬಿನ ಡಬ್ಬಿಯು ಅದು ಮೊಸೆ ಬಂಗಾರವು ಮ್ಯಾನೇಜರ ಕೋಣೆಯಲ್ಲಿಯೇ ಸಿಕ್ಕಿದವು. ಈ ಸಾಮಾನುಗಳು ಕಳ್ಳತನವಾದ ರಿಪೋರ್ಟನಲ್ಲಿ ತೋರಿಸಿದವುಗಳೇ ಆಗಿದ್ದವು ಕೆಲವು ರೂಪಾಯಿಗಳು ಗೀತಾರಾಮನ ಕೋಣೆಯಲ್ಲಿ ಸಿಕ್ಕಿದವು ಉಳಿದ ಸಾಮಾನುಗಳು ಅಂದರೆ, ಶ್ರೀ ಕೇದಾರ ನಾಥಸ್ವಾಮಿಯ ಪಂಚಮುಖದ ಅಲಂಕಾರವೂ ಶ್ರೀಯ ಮೇಲುಭಾಗದ ಬಂಗಾರದ ಒಂದು ವಸ್ತುವು ರಿಂದವು ರತ್ನಖಚಿತವಾದದ್ದು ತೊಲ ೫೦, ಒಂದು ಬಂಗಾರದ ಪ್ರಭಾವಲಿಯು ರತ್ನಖಚಿತವಾದದ್ದು ತೊಲ ೬೦, ಎರಡು ಬಂಗಾರದ ಚಾಮರಗಳು ತೊಲ ೩೦ ಚಿಕ್ಕರಿಬಂಗಾರ ಮಹಾಸ್ವಾಮಿ ಕೇದಾರನಾಥನಿಗೆ ... ಪಟ್ಟಿದ್ದು ತೊಲ ೫೦, ಬೆಳ್ಳಿಯ ಒಂದು ಪಲಕಿಯ ತೊಲ ೫, ನಗದು ರೂಪಾಯಿಗಳು ಹದಿನಾರುಸಾವಿರದ ಆರುನೂರ ಐವತ್ತು ರೂಪಾಯಿಗಳು ಹತ್ತು ಆಣೆ (೧೬೬೫೦ ೧೦ ೦) ಇಂತಿಷ್ಟು ಸಾಮಾನುಗಳು ಸಹ ಮ್ಯಾನೇಜರ ಕಳ್ಳತನದ ಲಿಸ್ಟಿನಲ್ಲಿ ತೋರಿಸಲ್ಪಟ್ಟವುಗಳು ಸಿಕ್ಕಿರುವುದಿಲ್ಲ ಅನುಮಾನದ ಮೇಲೆ ಪೋಲೀಸರು ಸಂಸ್ಥಾನದ ಲೆಖ್ಖಪತ್ರಗಳನ್ನು ತನಿಖೆಮಾಡಲಾಗಿ ಕೆಲವು ಹಣವನ್ನು ಮ್ಯಾನೇಜರು ಸ್ವತಃ ಉಪಯೋಗಪಡಿಸಿರುವುದಾಗಿಯೂ ಕಳ್ಳತನದ ರಿಪೋರ್ಟು ಮಾಡುವುದಕ್ಕಿಂತಲೂ ಮುಂಚೆಯೇ ದುರುಪಯೋಗಮಾಡಿರುವನೆಂದೂ ಇತ್ಯಾದಿ ಮೋಸಗಳು ಸರ್ಕಾರಕ್ಕೆ ತಿಳಿದುಬಂದಿದ್ದರಿಂದ ಖದ್ದು ತಹಸೀಲ್ದಾರ ಸಾಹೇಬರು ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಡೆಪ್ಯುಟಿ ಕಲೆಕ್ಟರ ಸಾಹೇಬರ ಸಮಕ್ಷಮದಲ್ಲಿ ಕೇಸನ್ನು ನಡಸಿ ಈ ಮೂವರನ್ನು ಪೋಲೀಸರ ಅಧಿಕಾರದಲ್ಲಿ ಇಟ್ಟಿದ್ದು ವಿಚಾರಣೆಯು ನಡೆಯುತ್ತಿರುವುದು ಈ ಅತ್ಯಾಶ್ಚರ್ಯಕರವಾದ ವಿಶ್ವಾಸಘಾತಕ ಮೋಸತನದಿಂದಾದ ಭಯಂಕರ ಕಳ್ಳತನವು ಈ ಸಂಸ್ಥಾನದಲ್ಲಾಗಿರುವುದರಿಂದ ಸನಾತನ ಧರ್ಮಾವಲಂಬಿಗಳಿಗೂ ಸರ್ಕಾರದವರಿಗೂ ಸಹ ... ಪ್ರಸಿದ್ಧ ಸಂಸ್ಥಾನಕ್ಕೆ ಬಹಳ ನಷ್ಟವಾಗಿರುತ್ತೆ.

ಶಿವಾನಂದಶರ್ಮಾ

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸಾದಂತು

ಸ್ವಪ್ನದರ್ಶನ

ಶ್ರೀಮದುಜ್ಜಯಿನಿ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಕೈಲಾಸಗಮನದಿಂದೆನಗುಂಟಾ ದ ಮನೋವ್ಯಥೆಯು ವರ್ಣಿಸಲಸದಳವಾಗಿ ಹೋದ. ಈ ಮಹಾಗುರುಗಳ ಮಹಿಮೆಯೂ ಶಿವಯೋಗ ಸಂಪತ್ತು ... ಅನಂತಲೀಲೆಗಳೂ ಸಹ ಇಡೀ ಪ್ರಪಂಚಕ್ಕೆ ವಿಸ್ಮಯ ವನ್ನುಂಟುಮಾಡಿರುವಲ್ಲಿ ಪಾಮರನಾದ ನಾನು ಪೊಗಳ ವಶವೇ ಪುದು? ಇಂತಹ ಗುರುವರ್ಯರನ್ನಗಲಿದ ನ ವುಗಳ ನಿರ್ಭಾಗ್ಯರೇ ಸರಿ ಹಾ ಗುರುಸಾರ್ವಭೌಮ ಕಣ್ಮರೆಯಾದೆಯಾ ಈ ಚರ್ಮಚಕ್ಷುವಿಗೆ ನೀನು ಕಾಣಿಸದೆ ತಪ್ಪಿಸಿಕೊಂಡು ಹೋದಾಗ್ಯೂ ಜ್ಞಾನನೇತ್ರವುಳ್ಳವರು ಅವಲೋಕಿಸಿ ತಮ್ಮಂತರಂಗದ ಭಕ್ತಿಪಾಶದಿಂದ ನಿನ್ನನ್ನು ಬಂಧಿಸದೆ ನುತಿಸದೆ ಪೂಜಿಸದೆ ಆರಾಧಿಸದೆ ಬಿಡುವರೇ, ಎಂದಿಗೂ ಇಲ್ಲವು ಭೋ ಯತಿವರೇಣ್ಯ? ಬಹು ದಿನಗಳಿಂದಲೂ ನಿನ್ನ ಚರಣಸಂದರ್ಶನವನ್ನು ಮಾಡಿ ಧನ್ಯನಾಗಬೇಕೆಂದಿದ್ದ ನನ್ನಿಷ್ಟವು ಸಫಲವಾಗದಿರಲು ಲೋಕದಲ್ಲಿ ನನ್ನಂಥ ಪಾಪಾತ್ಮರಿರುವರೇ? ಇಲ್ಲ ಓ ಕಾರುಣ್ಯಮೂರ್ತಿಯೇ ನೀನು ಕೈಲಾಸಗಮನದ ಹಿಂದಿನ ದಿನ ರಾತ್ರಿ ನನ್ನ ಸ್ವಪ್ನದಲ್ಲಿ ದಯಗೆಯ್ದು ದರ್ಶನವಿತ್ತಾಶೀರ್ವಾದಿಸಿದುದನ್ನು ಪಾಪಿಯಾದ ನಾನು ಈಗ ಜ್ಞಾಪಿಸಿಕೊಳ್ಳ ಬೇಕಾಗಿ ಬಂದಿತು ನಿನ್ನ ಮಹಿಮೆಯನ್ನು ಬಲ್ಲವರಾರು? ಸ್ವಪ್ನದಲ್ಲಾದರೂ ಸಂದರ್ಶನವಿತ್ತು ದರ್ಶನಾಪೇಕ್ಷೆಯಾಗಿ ಹಾರೈಸುತ್ತಿದ್ದ ನನ್ನ ಮನಸ್ಸನ್ನು ತೃಪ್ತಿಗೊಳಿಸಿರಬೇಕಲ್ಲವೇ? ನಿಶ್ಚಯ ನಿಶ್ಚಯ ಗುರುದೇವಾ! ನಿನ್ನ ಕೃಪೆಯಿರಲಿ

ಕೀರ್ತನಕೇಸರಿ ಕವಿಭೂಷಣ,
ಗುಬ್ಬಿ ಶಿವರುದ್ರಶಾಸ್ತ್ರಿ,
ತುಮಕೂರು ಗಂಟೇದೇವಮಠ.

ಹಿರಿಯೂರು ತಾಲ್ಲೂಕು ವೀರಶೈವ ವಿದ್ಯಾವರ್ಧಕ ಸಂಘ, ಸ್ಪೆಷಲ್ ಮೀಟಿಂಗ್.

---

1 ನಮ್ಮ ವೀರಶೈವ ಮತಸ್ಥಾಪಕರೂ ಧರ್ಮೋದ್ಧಾರಕರೂ ಆದ ಜಗದ್ಗುರು ಪಂಚಪೀಠಾಧಿಪತಿಗಳ ಜಗದ್ವಿಖ್ಯಾತರೂ ತಪೋನಿಷ್ಠರೂ ಅದ್ವಿತೀಯ ... ಮಾರ್ಣವರೂ ಪರಮಪೂಜ್ಯರೂ ಆದ ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಸವ್ಯ... ದುದೈವದಿಂದ ಪೂರ್ವ ವಯಸ್ಸಿನಲ್ಲಿಯೇ ಅಕಸ್ಮಾ... ಶಿವಸಾಯುಜ್ಯವನ್ನೈದಿದ ಬಗ್ಗೆ ಸಂಘದವರ ... ತಾಪವನ್ನು ಸಂಸ್ಥಾನಕ್ಕೆ 1-1-1936 ರಲ್ಲಿ ದ... ಸೂಚೀಬಿನ್ನಹದ ಮೂಲಕ ನಿವೇದಿಸಿರುವುದು ... ಯುಕ್ತ

2 ಸದರಿ ಜಗದ್ಗುರು ಸಿಂಹಾಸನಾರೋಹ... ಗುರುತ್ವಾಧಿಕಾರವು 2-2-36 ರಲ್ಲಿ ಉಜ್ಜಯಿನಿ ಕ್ಷೇತ್ರದಲ್ಲಿ ಉಳಿದ ಶ್ರೀ ರಂಭಾಪುರಿ, ಶ್ರೀ ಕಾಶಿ ಶ್ರೀ ಕೇದಾರ, ಶ್ರೀ ಶೈಲ ಸಿಂಹಾಸನಗಳ ಗುರುಪುಂಗವರ ನೇತೃತ್ವದಲ್ಲಿ ನೆರವೇರುವದೆಂಬುವ ರೀತಿಯು ಸಿದ್ಧವಾಗಿ ತೋರುತ್ತದೆ

3 ಏಕಕಾಲದಲ್ಲಿ ಪಂಚಜಗದ್ಗುರು ಮಹಾಸ್ವಾಮಿಗಳವರ ಸಮ್ಮೇಳನವು ನಡೆಯುವುದು ಕಾಲವು ಕ್ಷೇತ್ರವು ಪುಣ್ಯದಾಯಕವಾದದ್ದಾಗಿರುತ್ತದೆ

4 ಕೇವಲ ಬಾಲ್ಯಾವಸ್ಥೆಯಲ್ಲಿರುವ ನಮ್ಮ ಸಂಘದ ಅಭಿವೃದ್ಧಿ ಸೂಚಕವಾದ ಸ್ಪೆಷಲ್ ಬಿಲ್ ಮತ್ತು ಬೈಲಾಸ್ ರಿಜಿಸ್ಟರ್ ನಡೆದು ನಮ್ಮ ರಾಜ್ಯಭಾರ ದಿವಾನ್ ಸಾಹೇಬರವರಿಂದ ಪ್ರವೇಶೋತ್ಸವವು ನಡೆ... ಸುವ ತರದೂದು ತೂರ್ಯದಿಂದ ನಡೆಯುವ ಈ ಸು... ಮಯದ ಪೂರ್ವ ಒಂದೇ ಕಾಲಕ್ಕೆ ಪಂಚ ಜಗದ್ಗುರು ಪುಂಗವರ ಕೃಪಾಶೀರ್ವಾದಕ್ಕೆ ಪಾತ್ರವಾಗುವ ಸುಸ... ದಿಯನ್ನು ಒದಗಿಸಿಕೊಟ್ಟ ಪರಮಾತ್ಮನನ್ನು ಅನನ್ಯ ಭಾವದಿಂದ ಪ್ರಾರ್ಥಿಸತಕ್ಕದ್ದು

ತೀರ್ಮಾನ

1 ನಮ್ಮ ಸಂಘಸ್ಥಾಪಕರು, ಪೋಷಕರು ವಯೋವೃದ್ಧರು ಆದ ಎ ಎಂ ಚಂದ್ರಶೇಖರಯ್ಯನವರ ಮಹಾಸಂಸ್ಥಾನಗಳ ಸೇವಾಪರಿಚಿತರಾಗಿರುವದರಿಂದ ಗೊತ್ತಾಗಿರುವ ತಾ|| 2-2-36 ಕ್ಕೆ ಸಂಸ್ಥಾನಕ್ಕೆ ಸಂಘದ ಪರವಾಗಿ ಹಾಜರಾಗತಕ್ಕದ್ದು.

2. ಸಂಘದ ಬೈಲಾಸ್ ವಗೈರೆ ಮುಖ್ಯ ರಿಕಾರ್ಡುಗಳನ್ನು ಸಂಕ್ಷಿಪ್ತ ಶ್ರುತಪಡಿಸುವುದು.

3 ಈ ಸಂಘದ ಪುರೋಭಿವೃದ್ಧಿಯ ಕಾರ್ಯಕ್ರಮಗಳನ್ನು ಮಹಾಸಂಸ್ಥಾನದವರು ಕೃಪೆಯಿಂದ ಕೈಕೊಳ್ಳುವಂತೆ ಪ್ರಾರ್ಥಿಸುವದು.

ಪಂಚ ಜಗದ್ಗುರುಗಳವರ ಭಾವಚಿತ್ರಗಳನ್ನು ಆಶೀರ್ವಾದ ನಿರೂಪವನ್ನು ದಯಪಾಲಿಸುವಂತೆ ಕೋರುವದು.

5 ಮಹಾಶಿವರಾತ್ರಿಯ ಹಾಗೂ ಆಚಾರ್ಯಪುಂಗವರ ಜಯಂತ್ಯೋತ್ಸವಗಳು ಸಮೀಪಗತವಾಗಿರುವುದರಿಂದ ಶ್ರೀ ಶಿವಯೋಗದ ದಿವಸ ಹಾಸ್ಟಲ್ ಬಿಲ್ಡಿಂಗಿನಲ್ಲಿ ಭಾವಚಿತ್ರಗಳನ್ನು ಸ್ಥಾಪಿಸುವುದು

ಸಂಘದ ಹಾಸ್ಟಲ್ ಕಮಿಟಿಯವರು ಪ್ರತಿ ವೇಳೆ ಪೂಜಾಭಜನಾನಂತರವೇ ಭೋಜನ ನಡೆಯಿಸಬೇಕೆಂಬ ವಿಧಿಯನ್ನು ವಿದ್ಯಾರ್ಥಿಗಳಲ್ಲಿ ಜಾರಿ ಇತವದು

ಈ ಮೇರೆ ಸರ್ವಾನುಮತದಿಂದ ನಿರ್ಧರಿಸಲಾಗಿದೆ

ಎ. ಮೂ. ಕಲ್ಲಯ್ಯ,
ಫಾರ್ ಪ್ರೆಸಿಡೆಂಟ್

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಸಂಪತ್ತಿಲ್ಲದ ಪ್ರತಿಯೊಂದು ಗುರುವರ್ಗದ ಮಠಕ್ಕೆ ಎರಡು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತು ವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅವರೆಲ್ಲರು ತಮ್ಮ ಆಚಾರ್ಯತ್ವಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ಪರಿಹಾರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ, ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂಥಾ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಸಿತಾಶ್ಮಿಕಭಸ್ಮ	೧	೦—೮—೦
ಟಂಕಣಭಸ್ಮ	೧	೦—೮—೦
ಶಂಖಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್— ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಳಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಪ್ರಕಾಶಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಶಾಕ್ತೀಂದುದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ರಚನೆಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಳ್ಳಗಿನ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ.** ಒಂದು ರೂಪಾಯಿಗೆ ನಾಲಕ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಬಹುವರ್ಣ ಆಮ್ರ ಕಲಶದಿಂದ ಉದಿಸಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸಾನಂದ ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಸದ್ಯಃ ಪಂಚಾಚಾರ್ಯಪೀಠಾಧಿಪತಿಗಳು ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನಿ ಶಿವಾಚಾರ್ಯರು ಧರೆಗೆ ದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನಿ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುತೂಕವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನಿ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಶ್ರೀ ಬಾಳೆಹೊನ್ನೂರ ಪೀಠದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಶ್ರೀ ಮಹಾವೀರಸಿಂಹಾಸನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮಾಲಯ ಪರ್ವತದ ಕೇದಾರದಲ್ಲಿ ಬರುವ ಶ್ರೀ ಕೇದಾರೇಶ್ವರ ಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೆ ಫೋಟೋ ವ್ಯಾಪಾರಿಗಳಿಗೆ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿ... ರು. ಪ್ರಸಿದ್ಧವಾದ ನಶ್ಯದ ಪುಡಿಯು ... ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ —ಪೀನಸಿ, ... ತಲೆನೋವು, ತಲೆ... ಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾ... ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ... ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟಲು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವುದು ಇದನ್ನು ಅನೇಕ ಪ್ರಜೆಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗು...

ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦ ವಿ. ಪಿ. ೦ ೯ ...
ಡಜನ್ ಒಂದಕ್ಕೆ ಕ್ರಯ ರೂ ೨-೮ ೦ ವಿ. ಪಿ. ೮ ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[3] ಪೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಮಾಲೆ	೨ ಆಣೆ
ಮರುಳಸಿದ್ಧೇಶ್ವರ ಚರಿತ್ರೆ	೧ ಆಣೆ
ಗೋತ್ರಸೂತ್ರಪಟ (೨ನೆಯ ಆವೃತ್ತಿ)	೧ ಆಣೆ
ಪಂಚಾಚಾರ್ಯ ಸುಪ್ರಭಾತ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನೋತ್ತರ (೫ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಗದ್ಯಸ್ತೋತ್ರಗಳು (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಒಸವಾದಿ ಸಿದ್ಧತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೬ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾವ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುಕಕ್ಷ್ಯಪದಗಳು	೨ ಆಣೆ
ಗುರುಸ್ವರೂಪಸ್ತುತಿದೀಪಿಕಾ	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಮತವಿಚಾರಸಾರ	೩ ಆಣೆ
ವೀರಶೈವಾಚಾರಪದ್ಧತಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಶೈವಧರ್ಮಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ...
पंडित श्रीकाशीनाथशास्त्री यांचें भाषण (मराठी)	८ आ...
Speeches by Pandit Shri Kashinatha Shastri (*English*)	12 A...
ವೀರಶೈವರತ್ನ (೪ನೆಯ ಆವೃತ್ತಿ)	೧೨ ಆ...
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆ...
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ...
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ...
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ...
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆ...
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ...
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ...
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ...
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ...
ವೀರಶೈವಸಿದ್ಧಾಂತಸುಧಾಕರ	೨ ರೂ...
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೮ ರೂ...
लिंगधारणचंद्रिका (संस्कृत)	३ रु...
महानारायणोपनिषत् (वीरशैवभाष्य-संस्कृत)	१ रु...
वीरशैवेंदुशेखर (संस्कृत)	१ रु...

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಧ್ಯಾಪಕ ... ಪಂಡಿತ ... ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

REGISTERED No M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯರು ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾ‌ಃ ಪಂಚಾಕ್ಷಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿತ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವದೇಶದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರದೇಶದವರಿಗೆ ೩ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೭ನೇ ಫೆಬ್ರವರಿ ೧೯೩೬ [ಸಂಚಿಕೆ ೪೧

ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತೀಮಹೋತ್ಸವಗಳು

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಭೂಲೋಕಪ್ರಸಿದ್ಧಿಗಳಾಗಿರುವ ಸೋಮನಾಥ, ಸಿದ್ಧೇಶ್ವರಾದಿ ಪಂಚ ಮಹಾಲಿಂಗಗಳಿಂದವತರಿಸಿ, ಪರಮ ಪವಿತ್ರವಾದ ವೀರಶೈವಮತವನ್ನು ಸ್ಥಾಪಿಸಿ, ವರ್ಣಾಶ್ರಮಧರ್ಮಗಳನ್ನು ವಿಭಾಗಿಸಿ, ಅಷ್ಟಾವರಣ, ಷಟ್ಸ್ಥಲ ಪಂಚಾಚಾರಗಳ ವಿವರಗಳನ್ನು ಬೋಧಿಸಿ, ಪುನಃ ಆಯಾಯಾ ಲಿಂಗಗಳಲ್ಲಿಯೇ ಐಕ್ಯರಾದ ವಿಷಯವು ಶಾಸ್ತ್ರಪ್ರಸಿದ್ಧವೂ, ಜಗತ್ಪ್ರಸಿದ್ಧವೂ ಆಗಿರುವುದಷ್ಟೆ!

ಕರ್ಮಮಕರ್ಮ ಮನ್ಯಥಾಕರ್ತುಂಸಮರ್ಥರಾದ ಗುರುಸಾರ್ವಭೌಮರು ಲಿಂಗಗಳಿಂದ ಅವತರಿಸಿದ ಶುಭದಿವಸಗಳಲ್ಲಿ ಅವರ ಜಯಂತೀಮಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸುವುದು ಪ್ರತಿಯೊಬ್ಬ ಲಿಂಗಧಾರಿಯ ಮುಖ್ಯಕರ್ತವ್ಯವಾಗಿದೆ ಜಯಂತಿಗಳನ್ನು ಯಾವಯಾವ ದಿನಗಳಲ್ಲಿ ಮಾಡಬೇಕು, ಯಾವಪ್ರಕಾರಮಾಡಬೇಕೆಂದರೆ—

1. ಶ್ರೀ|| ಜ|| ರೇಣುಕಶಿವಾಚಾರ್ಯರ ಜಯಂತಿ ಪ್ರತಿವರುಷ ಫಾಲ್ಗುಣ ಶುದ್ಧ ೧೩

2 ಶ್ರೀ|| ಜ|| ದಾರುಕಶಿವಾಚಾರ್ಯರ ಜಯಂತಿ ಪ್ರತಿವರುಷ ವೈಶಾಖ ಶುದ್ಧ ೫

3 ಶ್ರೀ|| ಜ|| ಏಕೋರಾಮಾರಾಧ್ಯರ ಜಯಂತಿ ಪ್ರತಿವರುಷ ವೈಶಾಖ ಶುದ್ಧ ೩

4 ಶ್ರೀ|| ಜ|| ಪಂಡಿತಾರಾಧ್ಯರ ಜಯಂತಿ ಪ್ರತಿವರುಷ ಮಹಾಶಿವರಾತ್ರಿ

5 ಶ್ರೀ|| ಜ|| ವಿಶ್ವಾರಾಧ್ಯರ ಜಯಂತಿ ಪ್ರತಿವರುಷ ಮಹಾಶಿವರಾತ್ರಿ

ಈಪ್ರಕಾರ ಆಯಾತಿಥಿಗಳಲ್ಲಿ ಭರತಖಂಡದಲ್ಲಿರುವ ಪ್ರತಿಯೊಬ್ಬ ವೀರಶೈವರೂ ತಮ್ಮತಮ್ಮ ಮನೆಮಠಾದಿಗಳನ್ನು ಸಾರಣೆ, ಕಾರಣೆ, ತಳಿರು, ತೋರಣಗಳಿಂದಲೂ, ರಂಭಾಸ್ತಂಭ, ಚಿತ್ರಪಟಧ್ವಜ, ರಂಗವಲ್ಲ್ಯಾದಿಗಳಿಂದಲೂ, ಮನೋಹರವಾಗಿ ಅಲಂಕರಿಸಿಕೊಂಡು, ಶ್ರೀ ಜಗದಾಚಾರ್ಯರ ಭಾವ (ಚಿತ್ರ) ಗಳನ್ನು, ಷೋಡಶೋಪಚಾರಗಳಿಂದ ಪೂಜಿಸಿ, ಮಾಹೇಶ್ವರಮೂರ್ತಿಗಳನ್ನು ಮೃಷ್ಟಾನ್ನಪಾನಗಳಿಂದ ತೃಪ್ತಿಪಡಿಸಿ, ದಕ್ಷಿಣೆತಾಂಬೂಲಾದಿಗಳನ್ನು ಅರ್ಪಿಸಬೇಕು ಬಳಿಕ ಶೃಂಗರಿಸಿದ ಪಲ್ಲಕ್ಕಿಯಲ್ಲಿ ಶ್ರೀ ಜಗದ್ಗುರುಗಳ ಭಾವಪಟವನ್ನಿಟ್ಟು ಸುಮಂಗಲೆಯರ ಕಲಶಕನ್ನಡಿಗಳಿಂದಲೂ, ಭಜನಾಸಂಘದವರ ಗಾಯನದಿಂದಲೂ, ವಾದ್ಯವೈಭವದಿಂದಲೂ ಹೊರಟು ಪುರವೀಧಿಗಳಲ್ಲಿ ಮಹೋತ್ಸವಮಾಡುತ್ತ ಅಲ್ಲಲ್ಲಿಗೆ ನಿಲ್ಲಿಸಿ, ಜಗದಾಚಾರ್ಯರ ಮಹಿಮಾತಿಶಯಗಳನ್ನು ಭಾಷಣಮೂಲಕ ಸರ್ವರಿಗೂ ಬೋಧಿಸುತ್ತಾ ಸ್ವಸ್ಥಳಕ್ಕೆ ಆಗಮಿಸಿ ಪರಮಾನಂದಭರಿತರಾಗಿ ಜಯಘೋಷಗಳನ್ನು ಉದ್ಘೋಷಿಸುತ್ತ ಮಂಗಳಾರತಿಗಳನ್ನು ಬೆಳಗಿ, ಫಲಾಶೀರ್ವಾದಗಳನ್ನು ಸ್ವೀಕರಿಸಿ ಧನ್ಯರಾಗಬೇಕು

ಸದ್ಯ: ಮಹಾಶಿವರಾತ್ರಿಯದಿವಸ ಶ್ರೀ ಜ|| ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಜಯಂತಿಗಳು ಪ್ರಾಪ್ತವಾಗಿರುತ್ತವೆ ಆದಿವಸ ಜಯಂತಿಗಳನ್ನು ದೊಡ್ಡ ಹಬ್ಬದಂತೆ ಆಚರಿಸಬೇಕು

ಇಂತಹ ಪವಿತ್ರಕಾರ್ಯಗಳನ್ನು ಜರುಗಿಸುವುದರಿಂದ ದೇಶದಲ್ಲಿ ರೋಗಾಗ್ನ್ಯುಪದ್ರವಗಳೂ, ಈತಿಬಾಧೆಗಳೂ ನಿವಾರಣವಾಗಿ ಕಾಲಕಾಲಕ್ಕೆ ಮಳೆ ಬೆಳೆಗಳಾತ್ತ ಆಯುರಾರೋಗ್ಯಾದಿಸುಖಸಂಪತ್ತುಗಳುಂಟಾಗುವಲ್ಲಿ ಸಂದೇಹವಿಲ್ಲ ಆದುದರಿಂದ ಸರ್ವರೂ ಜಗದಾಚಾರ್ಯ ಜಯಂತೀಮಹೋತ್ಸವಗಳನ್ನು ಅನನ್ಯದೃಢಭಕ್ತಿವಿಶೇಷದಿಂದಾಚರಿಸಿ, ಧನ್ಯರಾಗಬೇಕೆಂದು ಸವಿನಯ ಸೂಚನೆ—

ಗುರುಚರಣಕಿಂಕರ,
ಪುರಾಣಿಕಮಠದ ವಿರೂಪಾಕ್ಷಶಾಸ್ತ್ರಿ,
ಹಿರೇಹಡಗಲಿ
ಚಿಕ್ಕಮರುಳಪ್ಪನವರ ಕೊಟ್ರಬಸಪ್ಪ
ಸಾಮಂತ್ರಿ ಕೊಟ್ರಪ್ಪ

ಶ್ರೀ ಸಿದ್ಧಲಿಂಗಶಿವಾಚಾರ್ಯರಂತಹ ಜಗದ್ಗುರುಗಳು ನಮಗೆ ಲಭಿಸುವರೆ ?

ಈ ಪೂಜ್ಯಪಾದರು ಶಿವಲೋಕಕ್ಕೆ ಪ್ರಯಾಣ ಮಾಡಿ ಕೆಲವು ದಿವಸಗಳು ಕಳೆದವು ಈ ಸಮಾಚಾರವನ್ನು ಅಖಿಲಭಾರತದ ವೀರಶೈವರು ಕೇಳಿ ಹತಾಶರಾಗಿ ದುಃಖಿಸುತ್ತ, ಹಾಯ್! ಗುರುಸಾರ್ವಭೌಮರೇ! ನಿಮ್ಮ ಪಾದಸೇವಕರಾದ ನಮ್ಮೆಲ್ಲರನ್ನೂ ಬಿಟ್ಟು ನೀವೊಬ್ಬರೇ ಶಿವಸನ್ನಿಧಿಯನ್ನು ಸೇರಿದಿರಾ ? ಎಂದು ಗೋಳಿಡುತ್ತ ಇವರನ್ನು ತನ್ನಲ್ಲಿ ಐಕ್ಯಮಾಡಿಕೊಂಡ ಪರಶಿವಮೂರ್ತಿಯನ್ನು ಕುರಿತು—ಎಲೈ ಶಂಭುವೆ ? ಖಿಲವಾಗುತ್ತಲಿದ್ದ ವೀರಶೈವ ಸನಾತನಧರ್ಮವನ್ನು ಪುನರುಜ್ಜೀವನಗೊಳಿಸುವುದಕ್ಕೋಸ್ಕರ ಅವತರಿಸಿದ ಶ್ರೀ ಸಿದ್ಧಲಿಂಗಶಿವಾಚಾರ್ಯರನ್ನು ಇಷ್ಟು ಶೀಘ್ರವಾಗಿ ನಿನ್ನಲ್ಲಿ ಐಕ್ಯಮಾಡಿಕೊಳ್ಳಬಹುದೆ? ಎಂದು ಹಗಲಿರುಳೂ ಶಿವನಿಗೆ ಮೊರೆಯಿಡುತ್ತಿರುವರು ವೀರಶೈವಮತದ ನಿಜತತ್ತ್ವವನ್ನು ತಿಳಿದವರೂ, ವೇದಾಗಮಪುರಾಣಾಭಿಜ್ಞರೂ, ಪವಿತ್ರಚರಿತ್ರರೂ ಆದ ಜಗದ್ಗುರುಗಳ ವಿಷಯದಲ್ಲಿ ವೀರಶೈವಜನಾಂಗವೇ ಅನಿತರಸಾಧಾರಣವಾದ ಪೂಜ್ಯಬುದ್ಧಿಯನ್ನಿಟ್ಟಿದ್ದಿತು ಶಿವಲಿಂಗಾರ್ಚನಾಕಾಲದಲ್ಲೂ, ಲಿಂಗನಿರೀಕ್ಷಣೆಯ ಕಾಲದಲ್ಲೂ ಅವರನ್ನು ಸಂದರ್ಶಿಸಿದವರೆಲ್ಲರೂ ಸಾಕ್ಷಾತ್ ಪರಶಿವನೇ ಎಂದು ಎನ್ನುತ್ತಿದ್ದರು ವೀರಶೈವಜಗತ್ತಿಗೆ ಮುಕ್ತಿಮಾರ್ಗವನ್ನು ತೋರಿಸಿಕೊಟ್ಟು ಹೋಗಿರುವ ಈ ಮಹಾತ್ಮರ ವಿಷಯದಲ್ಲಿ ಎಷ್ಟು ದುಃಖಪಟ್ಟರೂ ತೀರದಾಗಿದೆ. ಈ ಪರಮಪೂಜ್ಯರ ವಿಯೋಗವು ವೀರಶೈವಮತಕ್ಕೆ ವಜ್ರಾಘಾತವಾದಂತಾಯಿತು ಈ ಜಗತ್ತಿನಲ್ಲಿ ಇಂತಹ ನಿಜಜಗದ್ಗುರುಗಳವರು ದೊರೆಯುವುದು ದುರ್ಲಭವೇ ಸರಿ! ಈ ಮಹನೀಯರು ಜಗದ್ಗುರು ಸಿಂಹಾಸನಾರೋಹಣಮಾಡಿದ 30 ವರ್ಷಗಳಲ್ಲಿ ತಮ್ಮ ಕರ್ತೃತ್ವಶಕ್ತಿಯಿಂದ ವೀರಶೈವಮತವನ್ನು ಉಜ್ವಲಗೊಳಿಸಿ ಗುರುವರ್ಗಕ್ಕೆ ರೂಢಮೂಲವಾಗಿ ಬಂದಿದ್ದ ಜಾಡ್ಯವನ್ನು ಪರಿಹರಿಸಿದರು ಈ ಮಹಾತ್ಮರು ತಮ್ಮ ಸಂಸ್ಥಾನಮಠದಲ್ಲಿಯೂ, ಗುಲ್ಬರ್ಗಾದಲ್ಲಿಯೂ, ಶ್ರೀಜಗದ್ಗುರು ರಂಭಾಪುರಿಪೀಠದಲ್ಲಿಯೂ, ಬುಕ್ಕಾಂಬುಧಿ ಗವಿಯಲ್ಲಿಯೂ, ಚಿಕ್ಕಮಗಳೂರು, ಸೋಲಾಪುರ, ಬಾರ್ಶಿ ಮೊದಲಾದ ಸ್ಥಳಗಳಲ್ಲಿಯೂ ಪ್ರಸಾದವಾಣಿಯಿಂದ ಅಪ್ಪಣೆಕೊಡಿಸಿದ ವಿಷಯಗಳು ಪ್ರತಿಕ್ಷಣಕ್ಕೂ ಸ್ಮೃತಿಪಥಕ್ಕೆ ಬರುತ್ತಲಿರುವವು. ಸದ್ಧರ್ಮಪೀಠವು ಇವರ ಅಧಿಕಾರಪೂರ್ವದಲ್ಲಿ ಖಿಲವಾಗುತ್ತಲಿದ್ದುದನ್ನು ನೋಡಿ ಈ ಮಹಾತ್ಮರು ಕರ್ನಾಟಕ, ಮಹಾರಾಷ್ಟ್ರ, ಆಂಧ್ರದೇಶಗಳಲ್ಲಿ ಸಂಚರಿಸಿ ಸಂಸ್ಥಾನಮಠವನ್ನು ಜೀರ್ಣೋದ್ಧಾರಮಾಡಿ ಪ್ರತಿಭಾಶಾಲಿಗಳೆಂದೆನಿಸಿಕೊಂಡರು ವಿಶ್ವವಿಖ್ಯಾತರಾದ ಈ ಗುರುಶ್ರೇಷ್ಠರ ಪವಿತ್ರಚರಿತ್ರವನ್ನು ಕುರಿತು ವಿದ್ವಾಂಸರು ವಿಪುಲವಾಗಿ ಗ್ರಂಥರೂಪದಿಂದ ಬರೆದಿಡಬೇಕಾದುದು ಅತ್ಯಾವಶ್ಯಕವಾಗಿದೆ. ಪರಮತಪೋಧನರೂ, ವೀರಶೈವಮತದ ಭಾಗ್ಯಸ್ವರೂಪರೂ ಆದ ಈ ಮಹಾಗುರುಗಳು ಶಿವಲೋಕವನ್ನು ಕುರಿತು ಪ್ರಯಾಣಬೆಳೆಸಿದ್ದಕ್ಕಾಗಿ ಪಾಮರರಂತೆ ಶೋಕಿಸದೆ, ಅವರು ಜಗತ್ತಿನಲ್ಲಿ ಸಾರಿಹೋಗಿರುವ ಅಪ್ಪಣೆಯನ್ನು ಶಿರಸಾವಹಿಸಿ ನಡೆಯಿಸುತ್ತ ಅವರ ಪವಿತ್ರವಾದ ನಾಮವನ್ನು ಸರ್ವರೂ ಸರ್ವದಾ ಧ್ಯಾನಮಾಡುತ್ತ ಧನ್ಯರಾಗಬೇಕೆಂದು ಅನನ್ಯಭಾವದಿಂದ ಪ್ರಾರ್ಥಿಸುವ,

ಪಾದಸೇವಕ, ಶಿವಕಥಾಪಂಡಿತ,
ಜಿ ನಂಜುಂಡಾರಾಧ್ಯ.

ಸ್ವೀಕಾರ

ಧಾರವಾಡ ಡಿ|| ಶಿಗ್ಗಾಂವಿ ಗ್ರಾಮದ ಕೆಲಜನ ಗುರುಭಕ್ತರಿಗೆ ಆಶೀರ್ವಾದಫಲಗಳ ವಿಷಯದಲ್ಲಿ ಅದ್ಭುತಮಹಿಮೆಯು ತೋರಿಬಂದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ಶ್ರೀಮಾನ್ ಪಿ. ಆಯ್. ಹಿರೇಮಠ ವಕೀಲ ಹುಬ್ಬಳ್ಳಿ ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಪತ್ರಿಕೆಗಳ ಸಹಕಾರ

ಬ[illegible] ಪತ್ರಿಕೆಯವರು [illegible] ಪತ್ರಿಕೆ [illegible] ವಿಷಯ ವನ್ನು [illegible] ಲಕ್ಷ್ಯದಲ್ಲಿ [illegible]

—

ಶ್ರೀ ಜಗದ್ಗುರು [illegible] ಶ್ರೀ [illegible] ಜಗದ್ಗುರು [illegible] ಮಹಾಸ್ವಾಮಿಗಳವರ [illegible]

ವರ್ಧಂತ್ಯುತ್ಸವ

—

[illegible]

ಗಯೂ [illegible] ಸವ [illegible] ತಕ್ಕ [illegible] ಕ [illegible] ಕಿವ [illegible] ಗಳ ಪದವೀಪತ್ರಗಳನ್ನು [illegible] ವರ ಕರಕಮಲಗಳಲ್ಲಿ [illegible]

ಈ ೫ ನೆಯ ವರ್ಧಂತ್ಯುತ್ಸವದಲ್ಲಿ ಶ್ರೀ ಜಗದ್ಗುರುಗಳವರು ತರ್ಕಪಂಡಿತ [illegible] ಶ್ರೀ [illegible] ಶಿವಾಚಾರ್ಯರು ಬೃಹನ್ಮಠ [illegible]

[illegible] ಎಂಬ ಪದವಿಯನ್ನೂ, ಮೈಸೂರ [illegible] ಹನ್ನ [illegible] ಸ್ವಾಮಿಗಳಿಗೆ ಸಾಹಿತ್ಯಪ್ರವೀಣ ಎಂಬ ಪದವಿಯನ್ನೂ, ಸುಣ್ಣಕಲ್ಲು ವಿದರ ಆಂಧ್ಯ [illegible] ತಂಪ್ರ [illegible] ಸ್ವಾಮಿಗಳಿಗೆ 'ಸಾಹಿತ್ಯ [illegible]' ಎಂಬ ಪದವಿಯನ್ನೂ, ಹೊಳಗುಂದಿ [illegible] ಸ್ವಾಮಿಗಳಿಗೆ ಸಾಹಿತ್ಯ [illegible] ಎಂಬ ಪದವಿಯನ್ನೂ, ಆಯುರ್ವೇದ [illegible] ಬಗೇ [illegible] ಅವರಿಗೆ [illegible] ಎಂಬ ಪದವಿಯನ್ನು ವಿತರಿಸಿ [illegible] ದ [illegible] ಎಂಬ ಪದವಿಯನ್ನೂ [illegible] ಗಡಿ ಗರು [illegible] ಎಂಬ ಪದವಿಯನ್ನೂ ಆಶೀರ್ವದಿಸಿದರು.

[illegible] ಕರ್ನಾಟಕ [illegible] ಬಂದಿದ್ದರು [illegible] ಈ ಮಹೋತ್ಸವವು ದೊರೆತುದ [illegible]

[illegible] ಶ್ರೀ ಜಗದ್ಗುರುಸನ್ನಿಧಿಗೆ ಕಾಣಿಕೆ [illegible] ಬಂಗಾರ [illegible] ಸರಿಯಾಗಿ [illegible] ಜಯ [illegible] ಶ್ರೀ ವಿಶ್ವ [illegible] ಜಗದ್ಗುರುವೂ [illegible] ಎಲ್ಲಾ [illegible] ಭಕ್ತವೃಂದ [illegible] ಶ್ರೀ ಜಗದ್ಗುರು [illegible] ಪಂಚ [illegible] ಸುತ್ತೇನೆ.

[illegible] ವೀರಶೈವ ವಿದ್ವತ್ಸಂಘದ ಕ್ರಿಟರಿ

=====

[illegible] ಶ್ರೀ [illegible] ಜ್ಞಾನಸಿಂಹಾಸನಾಧೀಶ ಶ್ರೀ [illegible] ಜಗದ್ಗುರು ಪಂಚಾಚಾರ್ಯ [illegible] ಮಹಾಸ್ವಾಮಿಗಳವರ ೫ ನೆಯ

ವರ್ಧಂತ್ಯುತ್ಸವದಲ್ಲಿ

ವಿಜಯ [illegible] ಶಾಸ್ತ್ರಿಗಳು ಮಾಡಿದ

ಭಾಷಣ

—

[illegible] ಕ್ಷೇಮ [illegible] |
[illegible] ಜಗದ್ಗುರೋ ||

[illegible] ಶ್ರೀ ಜಗದ್ಗುರು ಮಹಾ [illegible] ವಂದಿಸಿ ನನ್ನ ಪಾಲಿಗೆ ತೋರಿದ [illegible] ತಮ್ಮದುರಿಗೆ ಆಡಬೇಕೆಂಬ [illegible] ನಾನು [illegible] ಹಿಸುವರೆಂದು ನಂಬಿ [illegible]

[illegible] ದಿನವು ದಿ [illegible] ವಿರಲ್ಯವ ನವು [illegible] ರಾಣ [illegible] ಆಚಾರ್ಯರಿಂದ [illegible] ಶ್ರೀ [illegible] ಬಂದಿದೆ. ಈ [illegible] ಶ್ರೀಮದ್ರಂಭಾಪುರೀ [illegible] ಶಿರೋರತ್ನಗ [illegible] ಪಂಚ [illegible] ಶ್ರೀಮತ್ಪಂಚಾಚಾರ್ಯರಿಂದಲೇ [illegible] ಗಳಿವೆ. ಶ್ರೀ [illegible] ಇಂದಿನವರೆಗೆ [illegible] ಪರಂಪರೆಯಾಗಿ ಆಯಾಯ ಜಗದ್ಗುರು ಸಿಂಹಾಸನವನ್ನಲಂಕರಿಸಿ ವೀರಶೈವಮತ [illegible] ತಮ್ಮ ಅಮೋಘವಾದ ತಪ-

ಶಕ್ತಿಯಿಂದ ಅನೇಕಜನ ಮಹರ್ಷಿಗಳಿಗೆ ಶಿವಾದ್ವೈತಸಿದ್ಧಾಂತೋಪದೇಶವನ್ನು ಮಾಡಿರುವರಲ್ಲದೆ ಜನಮೇಜಯಾದಿ ಲೋಕಪ್ರಖ್ಯಾತರಾದ [illegible] ರಾಜರುಗಳಿಂದಲೂ, ಹುಮಾಯೂನ್, ಅಕಬರ್ ಮೊದಲಾದ ಮೊಗಲಚಕ್ರವರ್ತಿಗಳಿಂದಲೂ ಸೇವೆಗೊಂಡಿರುವುದು ಜಗತ್ಪ್ರಸಿದ್ಧವೇ ಆಗಿದೆ.

ಇಂದು ಶ್ರೀಮತ್ಪಂಚಾಚಾರ್ಯಪೀಠಗಳಲ್ಲೊಂದಾದ ಶ್ರೀ [illegible] ವಿರಾಜಮಾನ ಜ್ಞಾನಸಿಂಹಾಸನಾಧೀಶ್ವರ ಯತಿಕುಲಸಾರ್ವಭೌಮ ಶ್ರೀ ಜಗದ್ಗುರು [illegible] ಶಿವಾಚಾರ್ಯ ಮಹಾಸ್ವಾಮಿಗಳವರ ೫ ನೆಯ ವರ್ಧಂತೀಮಹೋತ್ಸವದ ಈ ಶುಭಸನ್ನಿವೇಶವು ನಮ್ಮ ಸುಕೃತವಿಶೇಷದಿಂದ ಲಭ್ಯವಾದುದಕ್ಕಾಗಿ ನನ್ನ ಆನಂದಕ್ಕೆ ಪಾರವೇ ಇಲ್ಲದಾಗಿದೆ.

ಶ್ರೀಮಜ್ಜಗದ್ಗುರು [illegible] ನಿರ್ಮಿತವಾದ [illegible] ಜ್ಞಾನಸಿಂಹಾಸನವು ತನ್ನ ಪವಿತ್ರನಾಮಕ್ಕನುಸಾರವಾಗಿ [illegible] ದಿಂದಲೂ ಅನೇಕ ವಿದ್ವನ್ಮಣಿಗಳಿಂದ ಪರಿಶೋಭಿತವಾಗಿಯೇ ಇರುತ್ತಿದೆ. ಈ ಪೀಠದಲ್ಲಿ ವಿದ್ಯಾಭ್ಯಾಸವಾಡದಿರುವ ವೀರಶೈವ ಪಂಡಿತರೇ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಸದ್ಯಃ ಪೀಠಾರೋಹಣಮಾಡಿರುವ ವೀರಶೈವ ಮಠಸ್ಥಾಪನಾಚಾರ್ಯ ಜಗದ್ಗುರು ಸಿಂಹಾಸನಾಧೀಶ್ವರರೂ ತದನುಯಾಯಿಗಳಾದ ಅನೇಕಾನೇಕ [illegible] ಮಠಾಧಿಪತಿಗಳೂ ಈ ಪೀಠದಲ್ಲಿಯೇ ವಿದ್ಯಾಭ್ಯಾಸಮಾಡಿ ಘನಪಾಂಡಿತ್ಯವನ್ನು ಪಡೆದು ಜಗತ್ಪ್ರಸಿದ್ಧರಾಗಿದ್ದಾರೆ. ಶ್ರೀಮದ್ರಂಭಾಪುರೀ ವೀರಸಿಂಹಾಸನವನ್ನಲಂಕರಿಸಿರುವ ಶ್ರೀಮಜ್ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಈ ಜ್ಞಾನಸಿಂಹಾಸನದಲ್ಲಿ [illegible] ವಿದತ್ತಾಡಿಮೆಯಿಂದಲೂ ತಪಃಶಕ್ತಿಯಿಂದಲೂ [illegible] ಶ್ರೀ [illegible] ಪ್ರಕಾಶಿಸುತ್ತಲಿದ್ದಾರೆ. ಈ ಮಹಾತ್ಮರ ಸಂದರ್ಶನಮಾತ್ರದಿಂದಲೇ ರಾಜಾಧಿರಾಜರಿಗೂ ಸಹ ಭಕ್ತಿಭಾವವುತ್ಪನ್ನವಾಗುತ್ತದೆ. ಈ ವಿಷಯದಲ್ಲಿ [illegible] ಯೆಂದು ಹೆಸರಾಂತ ಮೈಸೂರ ಕರ್ನಾಟಕರತ್ನಸಿಂಹಾಸನಾಧೀಶ್ವರ ಶ್ರೀಮನ್ಮಹಾರಾಜ ಶ್ರೀಮನ್ನಾಲ್ವಡಿ ಕೃಷ್ಣರಾಜಒಡೆಯರ್ ಬಹದ್ದೂರವರು ಒಮ್ಮೆ ಶ್ರೀಮದ್ರಂಭಾಪುರೀ [illegible] ದಯಮಾಡಿಸಿ ಕೊಡಲೇ ತಮ್ಮ ಸುಪ್ರಸಿದ್ಧವಾದ ಅರಮನೆಗೆ ಶ್ರೀ [illegible] ಗಳವರನ್ನು ಸಮಸ್ತ ರಾಜಮರ್ಯಾದೆಗಳೊಡನೆ ಬರಮಾಡಿಕೊಂಡು 'ಗಾರ್ಡ್ ಆಫ್ ಆನರ' ಎಂಬ ಮಹಾಮರ್ಯಾದೆಯನ್ನು ಸಲ್ಲಿಸಿ ತೀರ್ಥಪ್ರಸಾದವನ್ನು ಸ್ವೀಕರಿಸಿ ವಿಶೇಷ ಕಾಣಿಕಾದಿಗಳನ್ನು ಸಮರ್ಪಿಸಿ ಜಗದ್ಗುರು ಭಕ್ತಿಯನ್ನು ಪ್ರಕಟಗೊಳಿಸಿದುದು ಇಡೀ ಜಗತ್ತಿಗೇ ವೇದ್ಯವಾಗಿರುತ್ತದೆ. ಹಿಂದಕ್ಕೆ ದಿಲ್ಲಿಯಲ್ಲಿ ನೆರವೇರಿದ ಸಮ್ರಾಟ್ ಜಾರ್ಜ್ ಸಾರ್ವಭೌಮರ ಪಟ್ಟಾಭಿಷೇಕದ ದಿವಸ ಶ್ರೀ [illegible] ದಲ್ಲಿ ಬ್ರಿಟಿಷ್ ಗೌರ್ನಮೆಂಟಿನ ಅಭಿಪ್ರಾಯದ ಮೇರೆಗೆ ಹಿಂದಿನ ಶ್ರೀ ಜಗದ್ಗುರುಗಳವರ ಮಹೋತ್ಸವವನ್ನು ಅಖಿಲ [illegible] ಮರ್ಯಾದೆಗಳೊಡನೆ ನಡೆಸಿರುವುದೂ ಒಂದು ಪ್ರತ್ಯಕ್ಷಪ್ರಮಾಣವಾಗಿರುತ್ತದೆ. ಇತ್ಯಾದ್ಯನಂತ ಉದಾಹರಣೆಗಳು ತಮ್ಮೆಲ್ಲರಿಗೂ ತಿಳಿದವುಗಳೇ ಆಗಿವೆ. ಆದರೆ ನನ್ನ ಸ್ಮೃತಿಪಥಕ್ಕೆ ಬಂದ ಇನ್ನೊಂದು ವಿಷಯವನ್ನು ಅರಿಕೆಮಾಡಿಕೊಳ್ಳಲು ಅತ್ಯಂತ ಕುತೂಹಲವುಳ್ಳವನಾಗಿದ್ದೇನೆ. ಇದೇ [illegible] ಜಗದ್ಗುರು [illegible] ರವಲ್ಲಿ ವಿದ್ಯಾಭ್ಯಾಸ ಮಾಡಿ [illegible] ಪದವೀಭೂಷಿತರಾಗಿಯೂ ಶ್ರೀಮತ್ಪಂಚಾಚಾರ್ಯರ ತೇಜೋವಿಶೇಷವೇ ಮೂರ್ತಿಮತ್ತಾಗಿ ಪ್ರಕಟವಾಯಿತೋ ಎಂಬಂತೆ ಪ್ರಕಾಶಿಸುತ್ತಿರುವವರಾಗಿಯೂ ವೀರಶೈವಮತಪ್ರವರ್ಧಕರಾಗಿಯೂ ಇರುವ ನಾಗನೂರು ಬೃಹನ್ಮಠಾಧೀಶ ಲೋಕಮಾನ್ಯ ಪಂಡಿತ ಶ್ರೀ [illegible] ಶಾಸ್ತ್ರಿಗಳವರು [illegible] ಶಾಸ್ತ್ರೀಯ ವಿದ್ವತ್ತೆಯಿಂದ ಶ್ರೀ [illegible] ನ್ನೆಲ್ಲ [illegible] ವೀರಶೈವಮತದ ವಿಷಯವಾಗಿ [illegible] ಯಾರಿಗಿದ್ದ ಅಜ್ಞಾನಾಂಧಕಾರವನ್ನೆಲ್ಲಾ ತೊಲಗಿಸಿ ಅನೇಕ ಸದ್ವಿದ್ವಾಂಸರುಗಳಿಂದ ಸನ್ಮಾನಿಸಲ್ಪಟ್ಟ ಕರ್ನಾಟಕದೇಶದ ವೀರಶೈವರು ಕಾರ್ಗತ್ತಲೆಯಲ್ಲಿ ಮುಳುಗಿರುವುದನ್ನೂ, ಇತರದೇಶೀಯರು ಅಸ್ವಾವಶ್ಯ

ಯಲ್ಲಿರುವುದನ್ನೂ ತಿಳಿದು ಸರ್ವರನ್ನೂ ಉದ್ಧರಿಸಲೋಸುಗವಾಗಿ ರಾಜರ್ಷಿ ಪುಂಗವರರಾಜಧಾನಿಯಾದ ಮೈಸೂರುನಗರಕ್ಕೆ ದಯಮಾಡಿಸಿ ತಮ್ಮಲ್ಲಿರುವ ಸನಾತನ ಶಾಸ್ತ್ರೀಯಪ್ರಭಾವಿಶೇಷದಿಂದ ಸಮಾಜದಲ್ಲಿದ್ದಂಧಕಾರವನ್ನೆಲ್ಲಾ ಕಳೆದ ಹಾಕಿದರು ಅವರ ವಿದ್ವತ್ಪ್ರಭೆಯು ದಶದಿಕ್ಕುಗಳಿಗೂ ಪಸರಿಸಿ ಪ್ರಕಾಶಿಸುತ್ತದೆ ಈ ಪ್ರಭಾರತ್ನದ ಕಾಂತಿಯಿಂದ ಕಂದಿಕುಂದಿದ ಲಿಂಗಸ್ಥಲಿಯು ಇಂದು ಗಿರಿದುರ್ಗವನ್ನಾಶ್ರಯಿಸಿ ಹಿ ದಿನ ತನ್ನ ಹೆಮ್ಮೆಯನ್ನು ಹಂಬಲಿಸಹತ್ತಿದೆ ಇರಲಿ

ಇಂತಹ ದಿವ್ಯಜ್ಯೋತಿಗಳು ಈ ಪೀಠದಿಂದವತರಿಸಿದೆ ಶಮಧ್ಯದಲ್ಲೆಲ್ಲಾ ಪ್ರಕಾಶಿಸುತ್ತಿರುವುದು ವೀರಶೈವಮತೀಯರ ಭಾಗ್ಯೋದಯವೆಂದೇ ಭಾವಿಸಿದ್ದೇನೆ, ಮಹಸ್ವಾಮಿಗಳೇ ಅಲ್ಲದೆ ಬ್ರಹ್ಮಚಾರಿ, ಗೃಹಸ್ಥ, ವನಪ್ರಸ್ಥ, ಸನ್ಯಾಸಿಗಳೆಂಬ ಚತುರಾಶ್ರಮದವರೂ ಈ ಮಹಾಮತಸ್ಥಾಪನಾಚಾರ್ಯರ ಪೀಠದಲ್ಲಿಯೇ ವಿದ್ಯಾರ್ಜನೆಮಾಡಿ ಪ್ರಶಸ್ತಿಗಳನ್ನು ಪಡೆದುಕೊಂಡಿರುತ್ತಾರೆ ಈ ವಿಶ್ವಾರಾಧ್ಯ ಗುರುಕುಲದಲ್ಲಿ ಸದ್ಯಃ ವಿದ್ಯಾಭ್ಯಾಸಮಾಡುತ್ತಿರುವ ಸನತನ ವೈದಿಕ ವಿದ್ವನ್ಮಣಿಗಳಾದ ಶಾಸ್ತ್ರಿಗಳೂ ಆಚಾರ್ಯರೂ ಶಾಸ್ತ್ರೀಯ ಮಾರ್ಗದಿಂದ ನಡೆದು ತನ್ಮೂಲಕ ಕೀರ್ತಿಯುತರೂ ವೀರಶೈವ ಮತೋದ್ಧಾರಪ್ರವರ್ತಕರೂ ಜಗನ್ಮಾನ್ಯರೂ ಆತ್ಮೋದ್ಧಾರಕರೂ ಆಗಲೆಂದು ಶ್ರೀಮಜ್ಜಗದ್ಗುರು ವಿಶ್ವಾರಾಧ್ಯರನ್ನು ತ್ರಿಕರಣಪೂರ್ವಕವಾಗಿ ಪ್ರಾರ್ಥಿಸುತ್ತೇನೆ

ಈ ಭರತಖಂಡದಲ್ಲಿರುವ ಸನಾತನ ಹಿಂದೂ ಧರ್ಮಾವಲಂಬಿಗಳಿಗೆ ಈ ವಾರಣಾಸೀಪಟ್ಟಣವು ಹಗೆ ಪವಿತ್ರಕ್ಷೇತ್ರವೆಂದು ಪ್ರಸಿದ್ಧಿಯನ್ನು ಪಡೆದಿರುವುದೋ ಹಾಗೆಯೇ ನಮ್ಮೀ ವೀರಶೈವವಿಶ್ವದಲ್ಲಿ ವಿಶ್ವಾರಾಧ್ಯರ ಪೀಠವು ಅತ್ಯಂತ ಪ್ರಾಧಾನ್ಯತೆಯ ಹೊಂದಿದೆ ವೀರಶೈವೇತರ ಯಾತ್ರಾರ್ಥಿಗಳಿಗೆ ಭಾಗೀರಥಿ ಸ್ನಾನ, ವಿಶ್ವನಾಥನ ಸೇವೆಗಳು ಲಭ್ಯ ಲಾಭಗಳಾಗಿರುವಂತೆ ವೀರಶೈವ ಯಾತ್ರಾರ್ಥಿಗಳಿಗೆ ಭಾಗೀರಥಿಸ್ನಾನ, ವಿಶ್ವನಾಥನ ಸೇವೆಯೊಡನೆ ಶ್ರೀ ಜಗದ್ಗುರು ವಿಶ್ವಾರಾಧ್ಯರ ಪರಮಪವಿತ್ರ ಪೀಠದಶನವೂ ಪೀಠಾಧೀಶ್ವರರ ದರ್ಶನ ಸೇವಾದಿಗಳೂ ಲಭ್ಯಲಾಭಗಳಾಗಿವೆ ಆದುದರಿಂದ ನನಗೆ ಶ್ರೀ ಜಗದ್ಗುರು ಪೀಠಸೇವೆಯೂ, ಶ್ರೀ ಜಗದ್ಗುರುಗಳವರ ಸದರ್ಶನ ಕೃಪಾಶೀರ್ವಾದಗಳೂ ಲಭಿಸಿದುದಕ್ಕಾಗಿ ನನ್ನ ಸುಕೃತಲತೆಯು ವೃದ್ಧಿಯನ್ನೈದಿ ಸಲಭರಿತವಾಯಿತೆಂದೇ ಭಾವಿಸಿ ಆನಂದತುಂದಿಲಹೃದಯನಾಗಿದ್ದೇನೆ

ಶ್ರೀ ವಿಶ್ವನಾಥನ ಸಿತ್ಯಾವಾಸದಿಂದಲೂ ಲೋಕಪಾವನೆಯಾದ ಭಾಗೀರಥಿಯು ಸನ್ನಿಧ್ಯದಿಂದಲೂ ಪರಮಪವಿತ್ರವೆನಿಸಿ ಭೂಕೈಲಾಸವೆಂದು ವಿಖ್ಯಾತವಗಿರುವ ವಾರಾಣಸೀ ಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀ ವಿಶ್ವಾರಾಧ್ಯ ಪೀಠಾಧೀಶ್ವರರಾದ ನಮ್ಮ ಮಹಸ್ವಾಮಿಗಳವರು ಅನೇಕ ದೇಶಗಳಿಂದ ಬರತಕ್ಕ ಯಾತ್ರಿಕರಿಗೆ ತಮ್ಮ ಜಂಗವಾಡೀಮಠದಲ್ಲಿ ಆಶ್ರಯವನ್ನಿತ್ತು ತೀರ್ಥಸ್ನಾನದಿಗಳಿಗೂ ಶ್ರೀ ವಿಶ್ವನಾಥನ ಮತ್ತು ಶ್ರೀ ವಿಶ್ವಾರಾಧ್ಯನ ಸೇವೆಗೂ ಅವಕಾಶವನ್ನೂ ಅನುಕೂಲಗಳನ್ನೂ ಕಲ್ಪಿಸಿರುವುದಕ್ಕಾಗಿ ಶ್ರೀ ಜಗದ್ಗುರುಗಳವರನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ

ಈ ವಿಶ್ವಾರಾಧ್ಯಸಿಂಹಾಸನ(ಜಂಗವಾಡೀಮಠ)ವು ಸಪ್ತರ್ಷಿಮಂಡಲದಂತೆ ಪ್ರಕಾಶಮಾನವಾಗಿದ್ದು ಸಪ್ತಾವರಣಕೋಟೆಯಂತೆ ಸುಂದರಮಂದಿರಗಳಿಂದ ಕೂಡಿ ಸಾವಿರಾರು ಯಾತ್ರಿಕರು ಏಕಕಾಲದಲ್ಲಿ ಒಂದಾಗಿ ಸಕಲಸೌಕರ್ಯಯುತವಾಗಿ ತಂಗೊಳಿಸುತಿರುವುದು ನನಗೆ ಪರಮಾನಂದವನ್ನುಂಟುಮಾಡಿದೆ ಸಪ್ತಾವರಣ ಮಧ್ಯದಲ್ಲಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯರ ಜ್ಞಾನಸಿಂಹಾಸನವು ರಜತಗಿರಿಯ ಶಿಖಾಗ್ರದಲ್ಲಿರುವ ಶಿವಸಭಾಮಂದಿರದ ಸಿಂಹಾಸನದಂತೆ ರಾರಾಜಿಸುತ್ತಿದೆ. ದೇದೀಪ್ಯಮಾನವಾದೀ ದೇವಮಾನಕಲದ ಪೀಠದ ಇಕ್ಕೆಲಗಳಲ್ಲಿ ಅಸಂಖ್ಯಾತ ಶಿವಲಿಂಗಮೂರ್ತಿಗಳು ವಿರಾಜಿಸುತ್ತ ಶ್ರೀ ಭಗವತ್ಪಾದ ರೇಣುಕಾಚಾರ್ಯರು ಲಂಕಾಧೀಶನಾದ ವಿಭೀಷಣನ ಪ್ರಾರ್ಥನೆಯ ಕಾರಣವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿದ ವಿಷಯವನ್ನು ಸ್ಮೃತಿಪಥಕ್ಕೆ ತರುತ್ತಿದೆ ಈ ಜ್ಞಾನಸಿಂಹಾಸನದ ಸುತ್ತಲೂ ಪ್ರಾಚೀನ ಸುಪ್ರಸಿದ್ಧ ಗುರುಸಾರ್ವಭೌಮರ ಭವಚಿತ್ರಗಳು ಕಂಗೊಳಿಸುತ್ತ ಮಂಗಳಕರವಾಗಿ ಮನಂಗಳನ್ನು ಸೂರೆಗೊಳ್ಳುತ್ತಿವೆ ಅಲ್ಲದೆ ಲೋಕಮಾನ್ಯ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಅತ್ಯಂತ ಪ್ರಾಚೀನಕಾಲದ ಸಿಂಹಾಸನದ ಕೆಳಗಣಭಾಗವು ಶಿಲಾನಿರ್ಮಿತವಾದಾಗ್ಯೂ ಕಾಲಾನುಗುಣವಾಗಿ ಜೀರ್ಣವಾಗುತ್ತಿದ್ದುದನ್ನು ಕಂಡು ಭದ್ರತೆಯ ಭಿದ್ರವಾಗದಂತೆಯೂ ಸುಂದರತೆಯು ಮಂದವಾಗದಂತೆಯೂ ನವೀನಕಾಲದ ಶಿಲ್ಪಿಗಳಿಂದ ನಿರ್ಮಿಸಿರುವ ನೂತನಕಲಾಲತೆಗಳಿಂದ ಕೂಡಿದ ಶ್ರೀಶಿಲ ಕೆಲಸವು ಪ್ರಾಚೀನಮಂದಿರದ ಸೌಂದರ್ಯವನ್ನು ಮುಂದುವರಿಸಿ ಭಕ್ತಸಂದೋಹವನ್ನು ಆನಂದತುಂದಿಲವನ್ನಾಗಿ ಮಾಡುತ್ತಿದೆ ಅಲ್ಲದೆ ಈ ಸಿಂಹಾಸನದ ಮುಂಭಾಗದಲ್ಲಿ ಪ್ರಾಚೀನಕಾಲೀನ ಶಿಲೆರಿಂದ ನಿರ್ಮಿತವಾಗಿರುವ ಅಮೃತಶಿಲಾವೇದಿಕೆಯನ್ನೂ ಅದರ ಮಧ್ಯದಲ್ಲಿ ವಿರಾಜಿತವ ವಿಶ್ವಾರಾಧ್ಯಮೂರ್ತಿಯ ಸೌಂದರ್ಯವನ್ನೂ ಎಷ್ಟು ವರ್ಣಿಸಿದರೂ ತೀರದಾಗಿದೆ ಈ ಮಂದಿರದ ಎಡಭಾಗದಲ್ಲಿರುವ ಮತ್ತೊಂದು ಮಂದಿರದಲ್ಲಿ ಹಿಂದೆ ನಡೆದ ಚರಿತ್ರಾರ್ಹವಾದ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಸಮ್ಮೇಲನಕಾಲದಲ್ಲಿ ಜಗತ್ಕಲ್ಯಾಣಕ್ಕಾಗಿ ಸ್ಥಾಪಿಸಿರುವ ಶಿವಲಿಂಗಗಳು ಚಂದ್ರಕಲೆಯಂತೆ ಸುಂದರ ನವಮಾತ್ರದಿಂದಲೇ ಸಕಲಪಾಪಗಳನ್ನು ಪರಿಹರಿಸಿ ವಾಂಛಿತಫಲಗಳನ್ನು ಕೊಡತಕ್ಕವುಗಳಾಗಿವೆ ಇನ್ನೂ ಪಂಚಾಚಾರ್ಯರ ಪಾವನ ಗದ್ದುಗೆಗಳು ಸಿಂಹಾಸನದ ಬಲಭಾಗದಲ್ಲಿ ಕಲಾಕಾರರಿಂದಮಾಡಿ ಶಿಲಾಚಿತ್ರಮಂಟಪಗಳಲ್ಲಿ ಪ್ರತಿದಿನವು ಪೂಜಗೊಳ್ಳುತಿವ ಪ್ರತಿಯೊಂದು ಅವಸರದಲ್ಲಿಯೂ ಕ್ಷೇತ್ರಕ್ಕೆ ಯಾತ್ರಾರ್ಥಿಗಳಾಗಿ ಬಂದ ಗುರುಭಕ್ತರೂ ಮತ್ತು ರಾಜಾಧಿರಾಜರೂ ಪ್ರತಿಷ್ಠಿಸಿರುವ ಅಸಂಖ್ಯಾತ ಶಿವಲಿಂಗಮೂರ್ತಿಗಳು ಕಣ್ಮನಂಗಳನ್ನು ಸೂರೆಗೊಳ್ಳುತ್ತಿವೆ

ಈ ಜಗದ್ಗುರು ವಿಶ್ವಾರಾಧ್ಯಪೀಠಕ್ಕೆ ಸೇರಿರುವ ವಿಸ್ತಾರವಾದ ವನವು ಇಂದೆ ಹರಿಕೇಶನಂದನವನವೆಂಬ ಹೆಸರನ್ನು ಹೊಂದಿ ಈಗಲೂ ಶೋಭಿಸುತ್ತಿದೆ ಇಲ್ಲಿ ಅಗಸ್ತ್ಯ ವ್ಯಾಸ ಗೌತಮ ವಿಶ್ವಾಮಿತ್ರಾದ್ಯನೇಕ ಸುಪ್ರಸಿದ್ಧ ಮಹರ್ಷಿಗಳು ತಮ್ಮತಮ್ಮ ನಾಮದಿಂದ ಶಿವಲಿಂಗಗಳನ್ನೂ ತೀರ್ಥಕುಂಡಗಳನ್ನೂ ಮಂದಿರಗಳನ್ನೂ ಸ್ಥಾಪಿಸಿ ವಾಸವಾಗಿದ್ದರು ಇವರ ಸಮೀಪದಲ್ಲಿಯೇ ಸೂರ್ಯವಂಶಕ್ಕೆ ಸೇರಿದ ಹರಿಶ್ಚಂದ್ರಮಹಾರಾಜನು ತನ್ನ ಸತ್ಯವ್ರತವನ್ನು ವಿಶ್ವಾಮಿತ್ರಮಹರ್ಷಿಗೆ ತೋರಿಸಿ ಧನ್ಯತೆಯನ್ನು ಪಡೆದ ಸ್ಥಳ ಸನ್ನಿಧಾನವು ಹರಿಶ್ಚಂದ್ರಘಾಟ್‌ಎಂದು ಪ್ರಸಿದ್ಧಿಯನ್ನು ಪಡೆದು ಪ್ರಕಾಶಿಸುತ್ತಿದೆ ಈಗಲೂ ಪುರಾತನ ಪದ್ಧತಿಯಂತೆ ಗಂಗಾತೀರದಲ್ಲಿರುವ ಹರಿಶ್ಚಂದ್ರ ಘಾಟಿನಲ್ಲಿ ಶವಸಂಸ್ಕಾರಗಳನ್ನು ನಡಯಿಸುತ್ತಿದ್ದಾರೆ ಇಂತಹ ಪ್ರಾಚೀನಮಹರ್ಷಿಗಳ ಆವಾಸಸ್ಥಾನವಾದ ನಂದನವನವು ಜಂಗವಾಡಿ ಮಠ ಹಲವಾರು ನಾಮದಿಂದ ಇಂದಿಗೂ ಈ ಮಹಾ ಸಂಸ್ಥಾನಕ್ಕೆ ಸೇರಿರುವುದಲ್ಲದೆ ಆ ಶಿವಲಿಂಗಗಳ ಪೂಜಾದಿಕ್ರಿಯೆಗಳು ಸಂಸ್ಥಾನದ ವತಿಯಿಂದಲೇ ನಡೆಯುತ್ತಬರುತ್ತಿವೆ ಇಂತಹ ಮಹಾಸಂಸ್ಥಾನವನ್ನು ಮಹಸ್ವಾಮಿಯವರು ದಕ್ಷತೆಯಿಂದಲೂ ವಿಚಕ್ಷಣತೆಯಿಂದಲೂ ತಪಃಪ್ರಭಾವದಿಂದಲೂ ಅಭಿಯ ಕಲಹಗಳನ್ನು ಪರಾಮರ್ಶಿಸುತ್ತ ಆರ್ಥಿಕ ಮುಗ್ಗಟ್ಟಿನ ಈ ಕಾಲದಲ್ಲಿಯೂ ಅನೇಕಾನೇಕ ವಿದ್ಯಾರ್ಥಿಗಳಿಗೆ ಅಶನ, ವಸನ, ವಸತಿಗಳನ್ನು ಅನುಗ್ರಹಿಸಿ ವೀರಶೈವ ಸಮಾಜಕಲ್ಯಾಣವನ್ನೆಸಗುತ್ತಿರುವುದು ಅತ್ಯಂತ ಸ್ತೋತ್ರಾರ್ಹ ವಿಷಯವಾಗಿದೆ

ಈ ಪೀಠವನ್ನು ದರ್ಶನಮಾಡದ ಪ್ರತಿಯೊಬ್ಬರಿಗೂ ಇದು ಪ್ರಾಚೀನಮಠವಾದರೂ ಇಂದು ಕಟ್ಟಿಸಿದ ಸುಂದರಮಂದಿರದಂತೆ ಕಾಣುವ ಹಾಗೆ ಪ್ರತಿದಿನವೂ ಜೀರ್ಣೋದ್ಧಾರಕಾರ್ಯವು ಸಾಗುತ್ತಲೇ ನಡೆದಿದೆ ಇದು ಜಗದಾಚಾರ್ಯರ ಪ್ರಭಾವವಲ್ಲದೆ ಬೇರೆ ಇಲ್ಲವೆಂದು ಭಾವಿಸಿದ್ದೇನೆ ಇಲ್ಲಿ ಪ್ರೌಢವಿದ್ಯಾಭ್ಯಾಸಮಾಡುತ್ತಿರುವ ವಿದ್ಯಾರ್ಥಿಗಳೂ ಕೂಡ ಈ ಕಲಿಕಾಲದಲ್ಲಿಯೂ ತಪಿಸ್ವಿ ಆಶ್ರಮಪ್ರಭಾವದಿಂದ ಮುನಿಪುತ್ರರಂತೆ ವೇದಾಗಮ ಪಠನ ಶ್ರೀ ಗುರುದೇವತಾ ಭಜನೆಗಳಿಂದಕೂಡಿ ಸದ್ವರ್ತನೆಯುಳ್ಳವರಾಗಿರುವುದನ್ನು ನೋಡಿ ನನಗೆ ಮಹದಾನಂದವನ್ನುಂಟುಮಾಡಿದೆ. ಇಂಥ ಪರಮಪವಿತ್ರವಾದ ಪುಣ್ಯಾಶ್ರಮದಲ್ಲಿ ಶ್ರೀ ಜಗದ್ಗುರುಮಹಾಸ್ವಾಮಿಗಳವರ ವರ್ಧಂತಿಮಹೋತ್ಸವಸಂದರ್ಭದ ಶುಭ ಶೀರ್ವಾದಗಳು ದೊರೆತುದಕ್ಕಾಗಿ ಪೂಜ್ಯ ಜಗದ್ಗುರು ಮಹಾ ಚರಣಗಳಲ್ಲಿ ಶಿರಸಾಷ್ಟಾಂಗ ಪ್ರಣಾಮಗಳನ್ನು ಸಮರ್ಪಿಸಿ ಇದರಂತೆಯೇ ಅನಂತಾನಂತ ವರ್ಧಂತಿಮಹೋತ್ಸವಗಳ ನಡೆದು ಭಕ್ತಸಂಕುಲವು ಮಹಾಪಾದಸೇವನಸಂದರ್ಶನಗಳಿಂದ ಧನ್ಯವಾಗಲೆಂದು ಶ್ರೀ ಜಗದ್ಗುರು ವಿಶ್ವಾರಾಧ್ಯ ಪೂಜ್ಯಪಾದರನ್ನ ಪ್ರಾರ್ಥಿಸಿ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ನಾಮಸ್ಮರಣೆಯೊಡನೆ ನನ್ನ ಭಾಷಣವನ್ನು ವಿರಮಿಸುತ್ತೇನೆ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಗುರುಮಹಿಮೆಯನ್ನು ಯಾರೂ ಅರಿಯರು!

ಬಾಗೇವಾಡಿ ವೀರಶೈವ ತರುಣಸಂಘದ ಮೊದಲಿನ ಈ ಕೆಳಗೆ ಸಹಿಮಾಡಿದ ನಾವು ತಾ||೨-೨-೫೬ ರವಿವಾರದ ದಿವಸ ಉಜ್ಜಯಿನೀ ಜಗದ್ಗುರು ಪಟ್ಟಾಭಿಷೇಕ ಮಹೋತ್ಸವವನ್ನು ಪೂರೈಸಿಕೊಂಡು ಶ್ರೀ ಜಗದ್ಗುರುಗಳವರಿಂದ ಆಶೀರ್ವಾದವನ್ನು ಪಡೆದು ಮರುದಿವಸ ಪಂಪಾಕ್ಷೇತ್ರಕ್ಕೆ ಪ್ರಯಾಣಮಾಡಿದೆವು ಅಲ್ಲಿ ತುಂಗಭದ್ರಾ ಸ್ನಾನಮಾಡಿ ದೇವತಾದರ್ಶನವನ್ನು ಮಾಡಿಕೊಂಡು ಸಾಯಂಕಾಲಕ್ಕೆ ಹೊಸಪೇಟೆಗೆ ಬಂದೆವು ಅಲ್ಲಿಂದ ಸೊಂಡೂರು ಕುಮಾರಸ್ವಾಮಿಯ ದರ್ಶನಾಪೇಕ್ಷೆಯಿಂದ ಮಂಗಳವಾರ ಬೆಳಗ್ಗೆ ಆರು ಘಂಟೆ ಮೋಟಾರಿನಲ್ಲಿ ಕುಳಿತು ತೋರಣಗಲ್ಲಿಗೆ ಬಂದೆವು ಇಳಿಯುವಾಗ್ಗೆ ಆಶೀರ್ವಾದಫಲಗಳನ್ನು ಒಂದು ಚೀಲದಲ್ಲಿ ಮೋಟಾರಿನಲ್ಲಿಯೇ ಮರೆತು ಬಿಟ್ಟೆವು ಅರ್ಧದಾರಿ ಹೋದಮೇಲೆ ಆಶೀರ್ವಾದಫಲಗಳ ನೆನಪಾಗಿ ನಮ್ಮೆಲ್ಲರ ಮನಸ್ಸಿಗೆ ಬಹು ವ್ಯಸನವಾಯಿತು ಗುರುಗಳಿಂದಬಂದ ಫಲವು ಹೋಯಿತೆಂದು ಚಿನ್ನರಾಗಿ ಸದ್ಗುರುವೇ ನಮಗೆ ಸಲ್ಲದ ಆಶೀರ್ವಾದಫಲಗಳು ಸಮರ್ಪಕವಾಗಿ ಸಿಗಲೆಂದೂ ಫಲಗಳು ಸಿಗುವವರೆಗೆ ಊಟವನ್ನೂ ಸಹ ಮಾಡಲಿಕ್ಕಿಲ್ಲವೆಂದೂ ಎಲ್ಲರೂ ಸಂಕಲ್ಪಮಾಡಿ ಪ್ರಾರ್ಥಿಸಿದೆವು ಹಾಗೆಯೇ ಸೊಂಡೂರಿಗೆ ಹೋಗಿ ಕುಮಾರಸ್ವಾಮಿಯ ದರ್ಶನವನ್ನು ಮಾಡಿಕೊಂಡು ಮಂಗಳವಾರ ಸಾಯಂಕಾಲಕ್ಕೆ ಸೊಂಡೂರು ಮೋಟಾರ್‌ಸ್ಟ್ಯಾಂಡಿಗೆ ಬಂದೆವು ಅಷ್ಟರಲ್ಲಿ ಮೋಟಾರು ಹೋಗಿತ್ತು ಅಲ್ಲಿಂದ ಚಕ್ಕಡಿ ಬಾಡಿಗೆಮಾಡಿಕೊಂಡು ಅದೆ ದಿವಸ ರಾತ್ರಿ ಎರಡು ಘಂಟೆಗೆ ತೋರಣಗಲ್ಲಿಗೆ ಬಂದೆವು ಗಾಡಿಯೂ ಹೋಗಿತ್ತು ಆಗ್ಗೆ ನಾವೆಲ್ಲರೂ ಗುರುವಿನ ಪ್ರಸಾದವೂ ಹೋಯಿತು ಗಾಡಿಯೂ ಹೋಯಿತು ಎಂದು ವ್ಯಸನದಿಂದ ಗುರುಸ್ಮರಣೆಯನ್ನು ಮಾಡಿ ಗುರುಗಳ ಜಯಘೋಷವನ್ನು ಮಾಡುತ್ತ ತೋರಣಗಲ್ಲಿನ ಒಂದು ಅಂಗಡಿಯಲ್ಲಿ ಪ್ರಸಾದವನ್ನು ಇಲ್ಲಿ ಯಾರಾದರೂ ಕೊಟ್ಟಿರುವರೇ? ಎಂದು ರಾತ್ರಿ ಎಬ್ಬಿಸಿ ಕೇಳಿದೆವು ಇಗೋ! ಇಲ್ಲಿ ಕೊಟ್ಟಿರುವರು ತೆಗೆದುಕೊಳ್ಳಿರಿ ಎಂದು ಆ ಅಂಗಡಿಯವರು ನಮ್ಮ ಆಶೀರ್ವಾದಫಲಗಳನ್ನೂ ನಮ್ಮ ಪಂಜಿಯನ್ನೂ ಕೊಟ್ಟರು ಆಗ್ಗೆ ನಮ್ಮ ಆನಂದಕ್ಕೆ ಪಾರವಿಲ್ಲದಂತಾಯಿತು ಅಷ್ಟರಲ್ಲಿ ಯಾವುದೋ ಒಂದು ಮೋಟಾರ್‌ಕಾರು ಬಳ್ಳಾರಿ ಕಡೆಯಿಂದ ಬಂದಿತು ಅದನ್ನು ಶ್ರೀ ಜಗದಾಚಾರ್ಯರೇ ಕಳುಹಿಸಿಕೊಟ್ಟರೇನೋ ಎನ್ನುವಂತೆ ಆಶ್ಚರ್ಯವಾಯಿತು ಅದೇ ಮೋಟಾರಿನಲ್ಲಿ ಕುಳಿತು ನಾವೆಲ್ಲರೂ ರಾತ್ರಿ ಮೂರುಘಂಟೆಗೆ ಸುರಕ್ಷಿತವಾಗಿ ಹೊಸಪೇಟೆಗೆ ಬಂದೆವು ಇದೆಂತಹ ಗುರುಮಹಿಮೆಯೆನ್ನುವುದನ್ನು ವಾಚಕರೇ ಯೋಚಿಸಬೇಕಾಗಿದೆ ಈ ಸಂತೋಷಕ್ಕಾಗಿ ಪ್ರಭಾಪೋಷಣೆಕ್ಕೋಸ್ಕರ ಒಂದು ರೂ ಯನ್ನು ಸಮರ್ಪಿಸಿ ಕಳುಹಿಸಿದೆವು

ವೀರಯ್ಯ ಹುರಗಿಮಠ, ಗುರುಶಾಂತಪ್ಪ ಎಲಿಗಾರ, ವೀರಪ್ಪ ದುರ್ಗದ, ಶಿದಿಗಪ್ಪ ಗವಳಿ

ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವ

ಮಹಾಶಿವರಾತ್ರಿ



ಭರತಖಂಡದಲ್ಲಿರುವ ಸಮಸ್ತ ವೀರಶೈವರು ಮಹಾಶಿವರಾತ್ರಿಯ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯರ ಹಾಗೂ ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತೀಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಧನ್ಯರಾಗಬೇಕು. ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುವುದೇ ಆಸ್ತಿಕಮತಾನುಯಾಯಿಗಳ ಮುಖ್ಯ ಧರ್ಮವಾಗಿದೆ. ಮತಸ್ಥಾಪನಾಚಾರ್ಯರ ಜಯಂತಿಯನ್ನು ಮೊದ್ಲಹಬ್ಬದಂತೆ ಅತ್ಯಂತ ವೈಭವದಿಂದ ಆಚರಿಸಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಮಹಾಶಿವರಾತ್ರಿಯ ದಿವಸ ಈ ಮಹಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಾಹೇಶ್ವರಾರಾಧನೆಯನ್ನು ಮಾಡಬೇಕು. ಆ ದಿವಸವೇ ಈ ಪೂಜ್ಯಪಾದರ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ಸಕಲ ವಾದ್ಯವೈಭವದೊಡನೆ ಮಹೋತ್ಸವವನ್ನು ನೆರವೇರಿಸಬೇಕು. ಇದೇ ಲಿಂಗಾಂಗಿಗಳ ಮೂಲಧರ್ಮವು! ಗುರುಗಳ ಜಯಂತಿಗಳನ್ನು ಭಕ್ತಿಯಿಂದ ಆಚರಿಸುವವರೇ ನಿಜವಾದ ವೀರಶೈವರು!

ಸೂಚನೆ.

ಪ್ರತಿವರ್ಷದ ಪದ್ಧತಿಯಮೇರೆಗೆ ಮಹಾಶಿವರಾತ್ರಿಯ ನಿಮಿತ್ತವಾಗಿ ಮುಂದಿನ ಫೆಬ್ರವರಿ ೨೪ನೆಯ ತಾರೀಖಿನ ಪತ್ರಿಕೆಯು ಹೊರಡುವದಿಲ್ಲವೆಂಬ ವಿಷಯವನ್ನು ಚಂದಾದಾರರೆಲ್ಲರೂ ತಿಳಿಯತಕ್ಕದ್ದು. ಸಂ.

ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ವಿಷಯದಲ್ಲಿ ಬಂದ ಶೋಕಪೂರಿತ ಲೇಖಗಳು.

ಶ್ರೀ ಜಗದ್ಗುರುಗಳವರು ತಮ್ಮ ತಪಃಪ್ರಭಾವದಿಂದ ಜಗದ್ವಂದ್ಯರಾಗಿದ್ದ ವಿಷಯವು ಸರ್ವರಿಗೂ ವೇದ್ಯವಿರುವುದಷ್ಟೆ! ಆ ಗುರುಸಾರ್ವಭೌಮರು ನಮ್ಮನ್ನು ಬಿಟ್ಟು ಅಗಲಿಹೋದುದಕ್ಕೆ ಎಷ್ಟು ಶೋಕಿಸಿದರೂ ತೀರದಾಗಿದೆ ಆ ಮಹಾತ್ಮರ ವಿಷಯದಲ್ಲಿ ಭರತಖಂಡದ ನಾನಾಭಾಗಗಳಿಂದ ನಮ್ಮ ಕಡೆಗೆ ಅಸಂಖ್ಯಲೇಖಗಳೂ ಕವಿತೆಗಳೂ ಬಂದಿವೆ ಅವೆಲ್ಲವುಗಳನ್ನೂ ಮುದ್ರಿಸುತ್ತ ಹೋದರೆ ಆರು ತಿಂಗಳುಗಳವರೆಗಾದರೂ ಮುಗಿಯುವಂತಿಲ್ಲ ಆದುದರಿಂದ ಲೇಖಕರು ತಮ್ಮ ಲೇಖಗಳು ಪ್ರಸಿದ್ಧವಾಗಲಿಲ್ಲವೆಂಬ ಭಾವವನ್ನಿಟ್ಟುಕೊಳ್ಳದೆ ಆ ಮಹಾತ್ಮರ ನಾಮಸಂಕೀರ್ತನವನ್ನು ಮಾಡಿ ಧನ್ಯರಾಗಬೇಕೆಂದಾಶಿಸುತ್ತೇವೆ ಸಂ—

ರಾಜಕವಿಭೂಷಣ ಲಿಂಗರಾಜ ಅರಸರವರು ಪರಂಧಾಮವನ್ನೈದಿದರು

ರಾಜಕವಿಭೂಷಣ ಬಿರುದಾಂಕಿತರಾದ ಹೆಚ್ ಲಿಂಗರಾಜ ಅರಸರವರು ಕೆಲವು ದಿವಸಗಳಿಂದ ಅಸ್ವಸ್ಥರಾಗಿದ್ದು ಇದೇ ತಿಂಗಳು 10ನೆಯ ತಾರೀಖು ಸೋಮವಾರ ಸಾಯಂಕಾಲ 6 ಘಂಟೆಯ ಸಮಯದಲ್ಲಿ ತಮ್ಮ ಪಾರ್ಥಿವಶರೀರವನ್ನು ತ್ಯಜಿಸಿದರೆಂಬ ವಿಷಯವು ಅತ್ಯಂತ ಖೇದವನ್ನುಂಟುಮಾಡತಕ್ಕದ್ದಾಗಿದೆ. ಇವರ ಅತ್ಯವಿಯೋಗವಾದ ಒಂದೆರಡು ಘಂಟೆಯೊಳಗಾಗಿ ರಾಜಮರ್ಯಾದೆಯೊಡನೆ ಕಳೇಬರವು ರುದ್ರಭೂಮಿಗೆ ಸಾಗಿಸಲ್ಪಟ್ಟು ಅಂತ್ಯಸಂಸ್ಕಾರಗಳೆಲ್ಲವೂ ಸಾಂಗವಾಗಿ ನಡೆದವು ಈ ಮಹೋದಯರಿಗೆ ಅವಸಾನಕಾಲದಲ್ಲಿ ೭೦ ವರ್ಷಗಳಾಗಿದ್ದುವು ಇವರು ರಾಜಬಂಧುಗಳಾಗಿದ್ದುದರಿಂದಲೂ, ಸರಸಕವಿಗಳಾಗಿದ್ದುದರಿಂದಲೂ ಪಾಂಡಿತ್ಯದಯಾದಾಕ್ಷಿಣ್ಯಾದ್ಯನೇಕ ಸದ್ಗುಣಭೂಷಿತರಾಗಿದ್ದುದರಿಂದಲೂ ಅನಿತರಸಾಧಾರಣ ರಾಜಭಕ್ತಿಯುತರಾಗಿದ್ದುದರಿಂದಲೂ ಮಹಾಪ್ರಭುಗಳ ಪ್ರೇಮಕಟಾಕ್ಷಲಹರಿಯು ಇವರಲ್ಲಿ ವಿಶೇಷವಾಗಿ ಹರಿಯುತ್ತಲಿತ್ತು ಈ ಮಹೋದಯರು 1887 ರಿಂದ 1911ರವರೆಗೆ ಅರಮನೆಯ ಮರ್ಚಂಟ್‌ಶಾಖೆಯ ಛೇರ್ಮನ್‌ರಾಗಿದ್ದರು ಅಲ್ಲಿಂದ ಮಹಾಪ್ರಭುಗಳವರು ಇವರಿಗೆ ಮುಜರಾಯಿಭಕ್ಷಿಗಿರಿಯನ್ನು ದಯಪಾಲಿಸಿದರು. ಇವರು ಈ ಪದವಿಯಲ್ಲಿ 1೦ ವರ್ಷಗಳವರೆಗಿದ್ದು ಪ್ರಜಾನುರಾಗಿಗಳೆನಿಸಿಕೊಂಡಿದ್ದರು. ಈ ಮಹೋದಯರು ಆಜನ್ಮಸುಖಿಯಾದ ಅರಸುಮನೆತನದಲ್ಲಿ ಜನ್ಮಧಾರಣಮಾಡಿದ್ದರೂ ದೀನಪ್ರಜೆಗಳ ಕಡೆಗೆ ಲಕ್ಷ್ಯಕೊಡದೆ ಪ್ರಭುಗಳ ಆಜ್ಞಾನುಸಾರವಾಗಿ ಅಧಿಕಾರಮಾಡುತ್ತ ಅಸಂಖ್ಯವಿದ್ವಜ್ಜನಗಳಿಗೆ ಅವರವರ ಯೋಗ್ಯತಾನುಸಾರವಾಗಿ ಮಹೋಪಕಾರವನ್ನು ಮಾಡಿದರು. ಇದಲ್ಲದೆ ಇವರು ಇಂಥ ಅಧಿಕಾರಸೌಖ್ಯಾನುಭವ ಮಾಡುತ್ತಿದ್ದರೂ ಹಗಲಿರುಳೆನ್ನದೆ ಯಾವಾಗಲೂ ವಿದ್ವಜ್ಜನಗಳಲ್ಲಿ ಶಾಸ್ತ್ರೀಯಪ್ರಸಂಗಗಳನ್ನಾಡುತ್ತ ಕಾಲಕಳೆಯುವುದೊಂದೇ ಇವರ ಮುಖ್ಯಧ್ಯೇಯವಾಗಿದ್ದಿತು ಇದಲ್ಲದೆ ಶ್ರೀ ಭಗವತೀಶಾರದಾದೇವಿಯು ಇವರಿಗೆ ಸಂಸ್ಕೃತಕವಿತಾರಚನೆಯೆಂಬ ಅನರ್ಘರತ್ನವೊಂದನ್ನನುಗ್ರಹಿಸಿದ್ದಳು ಲೋಕದಲ್ಲಿ ತರ್ಕವ್ಯಾಕರಣಾದಿವಿದ್ಯೆಗಳನ್ನು ಕಷ್ಟದಿಂದ ಸ್ವಾಧೀನಪಡಿಸಿಕೊಳ್ಳಬಹುದು. ಆದರೆ ಕವಿತೆಯೆಂಬ ವಿದ್ಯೆಯು ಕಷ್ಟಪಟ್ಟು ಎಂಥ ಸಾಹಸಮಾಡಿದರೂ ಬರತಕ್ಕುದಲ್ಲ. ಅದು ತಾನಾಗಿಯೇ ಪ

ಪೋಷ್ಯರಾನುಗ್ರಹದಿಂದ ಲಭಿಸತಕ್ಕದಾಗಿದೆ. ಲೋಕದಲ್ಲಿ ಕಷ್ಟಪಟ್ಟು ಹತ್ತೆಂಟು ಪದ್ಯಗಳನ್ನು ಜೋಡಿಸುವ ಶಕ್ತಿಯನ್ನು ಪಡೆದು ಕವಿಗಳೆನಿಸಿಕೊಳ್ಳುತವರುಂಟು. ಆದರೆ ಸಾವಿರಾರು ಪದ್ಯಗಳಿಂದ ಕೂಡಿದ ಮತ್ತು ದ್ರಾಕ್ಷಾಪಾಕದಂತೆ ಆಪ್ಯಾಯನಕರವಾದ ಒಂದೊಂದು ಗ್ರಂಥವನ್ನೇ ಪೂರ್ಣ ಬರೆಯುವುದೆಂದರೆ ಅದು ಈಶ್ವರಾನುಗ್ರಹವಲ್ಲದೆ ಬೇರೆಯಲ್ಲ "ಕಲಿಸಿದೊಡೆಂ ಬರ್ಮೆ ಕಲ್ಲಲಿಕಕವಿತ್ವಂ ನಿಸರ್ಗಸುಭಗಂ" ಎಂದು ಷಡಕ್ಷರಮಹಾಕವಿಯು ಈ ವಿಷಯವನ್ನೇ ಉದ್ಗಾರ ಮಾಡಿರುತ್ತಾನೆ. ಇಂಥ ಸ್ವಭಾವಸಿದ್ಧವಾದ ಕರ್ಣಪ್ರಿಯಸರಸಕವಿತಾರಚನಾತ್ಮಕವಾದ ಅದ್ಭುತಶಕ್ತಿಯೊಂದು ಇವರಲ್ಲಿದ್ದುದರಿಂದ ಅನೇಕಪಂಡಿತೋತ್ತಮರೂ, ಕವಿಗಳೂ, ಗಾಯಕರೂ ಇವರನ್ನಾಶ್ರಯಿಸುತ್ತಿದ್ದರು. ಈ ಮಹೋದಯರು ಹಸಿವುತೃಷೆಗಳ ಮೇಲೂ ಲಕ್ಷ್ಯವಿಲ್ಲದೆ ವಿದ್ವಜ್ಜನರೊಂದಿಗೆ ಸರಸವಚನಗಳನ್ನಾಡುತ್ತ ಸದಾ ಕಾವ್ಯಗುಣದೋಷಗಳನ್ನು ಪರಿಶೀಲಿಸುತ್ತ ಆನಂದದಿಂದ ಕಾಲಕಳೆಯುತ್ತಿದ್ದರು. ಈ ಮಹೋದಯರು **"ಯದುನೃಪವಿಜಯ"** **"ಸಂಕ್ಷಿಪ್ತರಾಮಾಯಣ"** ಎಂಬ ಎರಡು ಉದ್ಗ್ರಂಥಗಳನ್ನು ರಚಿಸಿ ಮುದ್ರಣಮಾಡಿಸಿದ್ದಾರೆ. ಈ ಗ್ರಂಥಗಳಲ್ಲಿ ಪದಲಾಲಿತ್ಯ, ಅರ್ಥಗೌರವ, ಭಾವಪೂರ್ಣತಾದಿಗಳನ್ನು ಕಂಡು ನಮ್ಮ ಮಹಾಪ್ರಭುಗಳವರು ಇವರಿಗೆ ೧೯೩೩ ರಲ್ಲಿ **"ರಾಜಸಭಾಭೂಷಣ"** ಎಂಬ ಬಿರುದಾಕ್ಷರಗಳಿಂದೊಡಗೂಡಿದ ರತ್ನಖಚಿತಪ್ರಶಸ್ತಿಯನ್ನು ದಯಪಾಲಿಸಿದರು. ಇಲ್ಲಿಂದೀಚೆಗೆ ಇವರ ಯಶೋವಲ್ಲರಿಯು ಜಗತ್ತಿನಲ್ಲೆಲ್ಲಾ ಹಬ್ಬಿತು. 1926ರಲ್ಲಿ ಬಳ್ಳಾರಿಯ ಮಹಾಜನಗಳು ಅಲ್ಲಿ ನಡೆದ ಕೀರ್ತನಸಮ್ಮೇಳನಾಧ್ಯಕ್ಷತೆಗೆ ಇವರನ್ನು ಬರಮಾಡಿಕೊಂಡಿದ್ದರು. ರಾಜಾಸ್ಥಾನದಲ್ಲಿ ಬಹುಕಾಲದಿಂದ ತ್ರಿಮತೀಯ ವಿದ್ವಾಂಸರು ಆಸ್ಥಾನ ವಿದ್ವಾಂಸರಾಗುತ್ತ ಬಂದಿದ್ದು ವೀರಶೈವ ವಿದ್ವಾಂಸರಿಗಾಗಲಿ ಜೈನವಿದ್ವಾಂಸರಿಗಾಗಲಿ ಯಾರಿಗೂ ಆಸ್ಥಾನ ವಿದ್ವತ್ಪದವಿಗಳು ದೊರೆತಿರಲಿಲ್ಲ. ಗುಣೈಕಪಕ್ಷಪಾತಿಗಳಾದ ಈ ಮಹೋದಯರು ತಮ್ಮ ಪವಿತ್ರವಾದ ಮುಜರಾಯಿಭಕ್ಷಿಗಿರಿಯ ಸ್ಥಾನವನ್ನೇರಿದ ಬಳಿಕ ಇವರ ನಿಷ್ಪಕ್ಷಪಾತದೃಷ್ಟಿಯಿಂದ ವೀರಶೈವ ಮತ್ತು ಜೈನ ವಿದ್ವಾಂಸರಿಗೆ ಆಸ್ಥಾನ ವಿದ್ವತ್ಪದವಿಯ ಗೌರವಗಳು ಲಭಿಸುತ್ತ ಬಂದವು. ಇವರು ಮಾಡಿದ ಮಹೋಪಕಾರವನ್ನು ಈ ಮತೀಯರು ಎಷ್ಟು ಜನ್ಮಗಳೆತ್ತಿದರೂ ತೀರಿಸಲಸಾಧ್ಯವಾಗಿದೆ. ಸ್ವತಃ ಇವರು ಮಹಾಕವಿಗಳಾಗಿದ್ದುದಲ್ಲದೆ ರಾಜಾಧಿಕಾರಿಗಳಾಗಿ ಮಹಾಪ್ರಭುಗಳ ಪ್ರೇಮಬಾಹುಳ್ಯವನ್ನು ಅರ್ಜಿಸಿ ಎಲ್ಲ ಜನಾಂಗದ ವಿದ್ವಜ್ಜನಗಳನ್ನು ಪ್ರಭುಕಟಾಕ್ಷ ಭಾಗಿಗಳನ್ನಾಗಿ ಮಾಡಿದ ಮಹೋಪಕಾರವನ್ನು ಇತರ ವಿದ್ವಾಂಸರು ಯಾವ ಬಗೆಯಿಂದ ತೀರಿಸಬೇಕೆಂಬುದು ಗೊತ್ತಾಗದೆ ಹೋಯಿತು. ಪಂಡಿತರು ಸದಾ ಅವರಿದ್ದ ಒಳಗೆ ಹೋಗಿ ವಿಕಸಿತಕಮಲದಂತೆ ಹಸನ್ಮುಖಿಗಳಾಗಿರುವ ಆ ಸುಂದರಮೂರ್ತಿಯನ್ನು ನೋಡಿ ಕೃತಜ್ಞತೆಯನ್ನು ತೋರಿಸಿ ಬರುತ್ತಿರುವದನ್ನು ನೋಡಿ ಕರಾಳವಾದ ವಿಧಿಯು ಈ ಮಹೋದಯರ ದೇಹವನ್ನು ಮರೆಮಾಡಿರಬಹುದಲ್ಲವೆ? ಹಾ! ವಿಧಿಯೇ ನಿನೆಂಥ ನಿಷ್ಕರುಣಿಯು? ಈಗ್ಗೆ 10 12 ವರ್ಷಗಳ ಪೂರ್ವದಲ್ಲಿ ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀ ರೇಣುಕರ ಪೀಠವೇ ಮುಳುಗಿಹೋಗುವ ಸಂಭವವು ಒದಗಿದ್ದಿತು. ಅಂಥ ಮಧ್ಯ-ರಸಮಯದಲ್ಲಿ ಶೂನ್ಯವಾದಾಪೀಠಕ್ಕೆ ಅಸಾಧಾರಣ ವಿದ್ವಾಂಸರಾದ ಯೋಗ್ಯಗುರುಮೂರ್ತಿಗಳು ದೊರೆತಿದ್ದುದು ಈ ಮಹೋದಯರ ಪ್ರಯತ್ನವಿಶೇಷದಿಂದಲೇ ಎಂಬುದು ಯಾರಿಗೆ ತಾನೇ ಗೊತ್ತಿಲ್ಲ? ಹೀಗೆ ವೀರಶೈವ ಜನಾಂಗದ ಪ್ರತಿಯೊಂದು ರೋಮಕೂಪಗಳಲ್ಲಿಯೂ ಈ ಮಹೋದಯರು ಮಾಡಿದ ಮಹೋಪಕಾರವು ವ್ಯಾಪಿಸಿರುವುದೆಂದು ಹೇಳಿದರೆ ಅದು ಅತಿಶಯೋಕ್ತಿಯೆನಿಸಲಾರದು. ಇಂಥ ಮಹೋದಯರ ಆತ್ಯಂತಿಕವಿಯೋಗದುಃಖವನ್ನು ಸಹಿಸುವುದೇ ಕಷ್ಟವಾಗಿದೆ. ಸರ್ವನಿಯಾಮಕನಾದ ಶ್ರೀ ಭಗವಂತನು ಇವರ ಕುಟುಂಬವರ್ಗಕ್ಕುಂಟಾದ ಮಹಾದುಃಖವನ್ನು ಪರಿಹರಿಸುವ ಮೂಲಕ ಈ ಮಹೋದಯರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವೆವು.

ಒಳದೇಶದ ವೃತ್ತಾಂತಗಳು.

ಶ್ರೀಮದುಜ್ಜಯಿನೀ ಜಗದ್ಗುರು ಪಟ್ಟಾಭಿಷೇಕ ಮಹೋತ್ಸವದ ವ್ಯವಸ್ಥೆಗಾಗಿ ಪ್ರಯಾಣಮಾಡಿದ್ದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಅಲ್ಲಿಯ ಕಾರ್ಯಗಳನ್ನೆಲ್ಲಾ ಸಾಂಗಗೊಳಿಸಿ ಈ ತಿಂಗಳು ೧೧ ನೆಯ ತಾರೀಖಿನ ದಿವಸ ರಾಜಧಾನಿಗೆ ಆಗಮಿಸಿದರು.

ಮೈಸೂರು ಪೌರಸಭಾಧ್ಯಕ್ಷರು ರಜದಮೇಲೆ ಹೋಗುವಕಾಲದಲ್ಲಿ ನ್ಯಾಯವಾದರೀತಿಯಲ್ಲಿ ಉಪಾಧ್ಯಕ್ಷರಿಗೆ ಅಧಿಕಾರವಹಿಸದೆ, ಪೌರಸಭೆಯ ಇಂಜನಿಯರಿಗೆ ವಹಿಸಿಹೋದುದು ಅನ್ಯಾಯವೆಂದೂ ಆದ್ದರಿಂದ ಅದನ್ನು ತಪ್ಪಿಸಿ ಅಧಿಕಾರವನ್ನು ತಮಗೇ ಕೊಡಿಸಬೇಕೆಂದೂ ಶ್ರೀ ಮಹಮುದ್‌ಸೇಟರು, ಸರಕಾರದ ಶ್ರೇಷ್ಠ ಕಾರ್ಯದರ್ಶಿಗಳಿಗೂ ಶ್ರೀ ದಿವಾನ್ ಸಾಹೇಬರಿಗೂ ವಿಜ್ಞಾಪನೆಗಳನ್ನು ಕಳುಹಿಸಿದ್ದರಷ್ಟೆ! ಅದಕ್ಕೆ ಉತ್ತರವಾಗಿ ಸರ್ಕಾರದ ಮುಖ್ಯಕಾರ್ಯದರ್ಶಿಗಳು 'ಸರಕಾರದವರು ಈ ಸಂಬಂಧವಾಗಿ ವಿಮರ್ಶೆಮಾಡಿ ನೋಡಿದರು. ಪೌರಸಭಾಧ್ಯಕ್ಷರು ಮಾಡಿರುವ ವ್ಯವಸ್ಥೆಯಲ್ಲಿ ಕೈಹಾಕಲು ಕಾರಣವೇನೂ ಕಾಣಬರಲಿಲ್ಲ' ಎಂದು ಉತ್ತರ ಕೊಟ್ಟಿರುವುದಾಗಿ ಕೇಳುತ್ತೇವೆ.

ಕಳೆದ ೧೨ ನೆಯ ತಾರೀಖು ಬುಧವಾರರಾತ್ರಿ ಸುಮಾರು ೧೦ ಘಂಟೆಯ ಸಮಯದಲ್ಲಿ ಹಳೇ ಅಗ್ರಹಾರದಲ್ಲಿ ವಾಸವಾಗಿರುವ ಮ|| ರಾ|| ಪುಟ್ಟಬಸಪ್ಪನವರ ಮಗ ಅರಮನೆ ಆಸ್ಪತ್ರೆಯಲ್ಲಿ ಕಾಂಪೌಂಡರ್ ಕೆಲಸದಲ್ಲಿದ್ದ ಎಂ. ಪಿ. ಲಿಂಗಪ್ಪನೆಂಬ ತರುಣನು ಕೋಟೆಯ ಪೂರ್ವಭಾಗದ ವಿಜಯಮಾರ್ತಂಡ ಎಂಬ ಹೆಬ್ಬಾಗಿಲಮುಂದೆ ರಸ್ತೆಯಲ್ಲಿ ಗಾಯಪಟ್ಟು ಬಿದ್ದಿರುವುದನ್ನು ಪೋಲೀಸರು ನೋಡಿ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಮಾಡಿಸಿದರೂ ಅನುಕೂಲವಾಗದೆ ಮರಣಹೊಂದಿದನು. ಮೃತನು ರಸ್ತೆಯಲ್ಲಿ ಬರುತ್ತಿದ್ದಾಗ್ಗೆ ಎದುರಿಗೆ ಬಂದ ಮೋಟಾರು ಅತನಿಗೆ ಡಿಕ್ಕಿ ಹೊಡೆದು ನಿಲ್ಲದೆ ಹೊರಟುಹೋಯಿತೆಂದೂ, ಮೋಟಾರು ನಡೆಯಿಸುತ್ತಿದ್ದವನು ಮಾದಕವಸ್ತು ಸೇವನೆಯ ಅಮಲಿನಲ್ಲಿದ್ದನೆಂದೂ ಪೋಲೀಸರು ಅವನನ್ನು ಹಿಡಿದಿರುವರೆಂದೂ ತಿಳಿದುಬರುತ್ತದೆ.

ವರ್ತಮಾನಸಂಗ್ರಹ.

ಎಂಟನೆಯ ಎಡ್ವರ್ಡ್ ಚಕ್ರವರ್ತಿಗಳ ಪಟ್ಟಾಭಿಷೇಕ.

ಎಂಟನೆಯ ಎಡ್ವರ್ಡ್ ಪ್ರಭುಗಳವರ ಪಟ್ಟಾಭಿಷೇಕ ಮಹೋತ್ಸವವು ಲಂಡನ್ನಿನಲ್ಲಿ ೧೯೩೭ ನೇ ಮೇ ತಿಂಗಳಲ್ಲಿ ನಡೆಯಬಹುದೆಂದೂ, ಅದೇ ವರುಷ ಅಕ್ಟೋಬರ್ ತಿಂಗಳಲ್ಲಿ ಅವರು ಇಂಡಿಯಾಕ್ಕೆ ದಯಮಾಡುತ್ತಾರೆಂದೂ, ಆಗ ದೆಹಲಿಯಲ್ಲಿ ಅವರಿಗೆ ಕಿರೀಟಧಾರಣಮಹೋತ್ಸವವು ನಡೆಯುವುದೆಂದೂ ಪ್ರಕಟವಾಗಿದೆ.

ಕೊಡಗಿನಲ್ಲಿ ಭೂಕಂಪ.

ಕಳೆದ ೨೬ ನೆಯ ತಾರೀಖಿನದಿನ ಕೊಡಗಿನ ಬಾಗಮಂಡಲ ಪ್ರಾಂತದಲ್ಲಿ ಮೂರು ಸಾರಿ ಭೂಮಿಯು ನಡುಗಿತು. ಮೊದಲು ಬೆಳಗ್ಗೆ 11 ಘಂಟೆಗೆ ಸಾಮಾನ್ಯವಾಗಿಯೂ, ಮಧ್ಯಾಹ್ನ 13 ಘಂಟೆಗೆ ಮೊದಲಿಗಿಂತ ಹೆಚ್ಚಾಗಿಯೂ ನಡುಗಿದುದರಿಂದ ಕಿಟಕಿ, ಬಾಗಿಲು, ಮನೆಯ ಛಾವಣಿ ಎಲ್ಲವೂ ಅಲ್ಲಾಡಿದವು. ಪುನಃ ರಾತ್ರಿ ಎಂಟು ಘಂಟೆಗೆ ಸ್ವಲ್ಪ ನಡುಗಿ ಪಶ್ಚಿಮದಿಂದ ಈಶಾನ್ಯ ದಿಕ್ಕಿಗೆ ಹೋದಂತೆ ತೋರಿತೆಂದು ತಿಳಿದು ಬರುತ್ತದೆ.

ಆನೆಕಲ್ಲಿನ ಮಳೆ!

ದಕ್ಷಿಣ ಆಫ್ರಿಕಕ್ಕೆ ಸೇರಿದ ಟ್ರಾನ್ಸ್‌ವಾಲ್ ಪ್ರಾಂತದಲ್ಲಿ ಕಳೆದ ವಾರ ವಿಶೇಷ ಮಳೆಯಾಗಿ ತೆಂಗಿನಕಾಯಿ ದಪ್ಪ ಆನೆಕಲ್ಲುಗಳು ಬಿದ್ದವು. ಈ ಆನೆಕಲ್ಲಿನ ಏಟಿಗೆ ಸಿಕ್ಕು 19 ಮಂದಿ ಮೃತರಾದರು. ಮಳೆಯು 3 ಘಂಟೆಗಳ ಕಾಲಬಿಡದೆ ಸುರಿದಿದ್ದರಿಂದ ರಸ್ತೆಯ ಮೇಲೆಲ್ಲಾ 3 ಅಡಿಗಳ ಎತ್ತರ ಆನೆಕಲ್ಲುಗಳು ಬಿದ್ದಿದ್ದವೆಂದು ತಿಳಿದುಬರುತ್ತದೆ.

ಇಟಲಿ ಅಬ್ಬೀಸೀನಿಯಾ ಯುದ್ಧ

ಈ ವಾರದಲ್ಲಿ ಯುದ್ಧವು ಹೆಚ್ಚು ಮುಂದರಿದಿರುವುದಿಲ್ಲ. ಇಷ್ಟುದಿವಸದ ಯುದ್ಧದಲ್ಲಿ ಇಟಲಿಯವರು ಅಬ್ಬೀಸೀನಿಯದಲ್ಲಿ ಮುಂದುವರಿದು ಹೆಚ್ಚು ಪ್ರದೇಶಗಳನ್ನು ಆಕ್ರಮಿಸಲು ಸಾಧ್ಯವಾಗಿರುವುದಿಲ್ಲ. ಮೊದಲು ಹಿಡಿದ ಪ್ರದೇಶಗಳನ್ನು ಬಿಡದೆ ಆತ್ಮಸಂರಕ್ಷಣೆಮಾಡಿಕೊಳ್ಳುವುದೇ ಇಟಲಿಯವರಿಗೆ ಕಷ್ಟತರವಾಗಿದೆ. ಇಟಲಿಯವರ ವಿಮಾನಮುತ್ತಿಗೆಗಳೇನೋ ಎಡೆಬಿಡದೆ ನಡೆಯುತ್ತಿದ್ದರೂ ಅದರಿಂದ ಅಬ್ಬೀಸೀನಿಯನರಿಗೆ ವಿಶೇಷ ಹಾನಿಯಾಗಿರುವಂತೆ ಕಾಣುವುದಿಲ್ಲ. ಅಬ್ಬೀಸೀನಿಯದಲ್ಲಿರುವ ಯೂರೋಪಿಯನರ ಹೇಳಿಕೆಯಂತೆ ಇಟಲಿಯ ವೈಮಾನಿಕರ ಗುರಿಯು ಸ್ವಲ್ಪವೂ ಸರಿಯಾಗಿಲ್ಲವೆಂದೂ, ಇದು ಬಿಳಿಯ ಜನಾಂಗಕ್ಕೇ ಅವಮಾನಕರವಾದ ವಿಷಯವೆಂದೂ ಹೇಳುತ್ತಾರೆ. ನಿಮಿಷಮಾತ್ರದಲ್ಲಿ ಅಬ್ಬೀಸೀನಿಯಾದೇಶವನ್ನು ನುಂಗುವೆನೆಂದು ಹೊರಟಿದ್ದ ಮುಸ್ಸೋಲಿನಿಯ ಅಹಂಕಾರವು ಈಗ ಸ್ವಲ್ಪ ತಗ್ಗಿದಂತೆ ತೋರುತ್ತಿದೆ.

ಇಟಲಿಯ ವಿಮಾನಗಳು ಅಬ್ಬೀಸೀನಿಯಾಚಕ್ರವರ್ತಿಗಳನ್ನು ಕೊಲ್ಲುವ ಉದ್ದೇಶದಿಂದ ಪುನಃ ಡೆಸ್ಸಿಯ ಮೇಲೆ ಬಾಂಬುಗಳನ್ನು ಹಾಕಿದವು. ಇದರಿಂದ ಕೆಲವು ಮನೆಗಳು ನಾಶವಾದರೂ ಚಕ್ರವರ್ತಿಗಳಿಗೆ ಏನೂ ಅಪಾಯವಾಗಲಿಲ್ಲ.

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಮಹೋತ್ಸವ, ಕೊಟ್ಟೂರು.

ಬಳ್ಳಾರಿ ಡಿ|| ಕೊಟ್ಟೂರು ಟವನ್ನಿನಲ್ಲಿ ಇದೇ ತಿಂಗಳು ೨೦ನೆಯ ತಾರೀಖು ಗುರುವಾರ ಪ್ರಾತಃಕಾಲ ೮ಘಂಟೆಗೆ ನೂತನ ಜಗದ್ಗುರುಗಳವರ ಆಂದೋಲಿಕಾ ಮಹೋತ್ಸವವು ಅಸಾಧಾರಣವೈಭವದೊಡನೆ ನೆರವೇರುವುದರಿಂದ ನಾನಾ ಭಾಗಗಳಲ್ಲಿರುವ ಸಕಲ ಭಕ್ತಮಾಹೇಶ್ವರರು ಮಹೋತ್ಸವಕ್ಕೆ ಆಗಮಿಸಿ ಶ್ರೀ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಕೊಟ್ಟೂರು ಗ್ರಾಮದ ದೈವದವರು ಪ್ರಾರ್ಥಿಸುತ್ತಾರೆ.

ಕೊಲ್ಲಿಪಾಕಿ (ಕೊಲನುಪಾಕ) ಕ್ಷೇತ್ರದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತೀಮಹೋತ್ಸವ.

ಶ್ರೀ ಜಗದ್ಗುರು ರೇಣುಕಾಚಾರ್ಯರು ಯಾವ ಪವಿತ್ರಕ್ಷೇತ್ರದಲ್ಲಿ ಅವತರಿಸಿದರೋ ಆ ಕೊಲ್ಲಿಪಾಕಿ ಕ್ಷೇತ್ರದಲ್ಲಿರುವ ಶ್ರೀ ಸೋಮನಾಥದೇವಾಲಯದಲ್ಲಿಯೇ ಈ ವರ್ಷ ಫಾಲ್ಗುನ ಶು|| ೧೩ ಶುಕ್ರವಾರ (ತಾ|| ೬-೩-೩೬) ದಿವಸ ಶ್ರೀ ರೇಣುಕಜಯಂತೀ ಮಹೋತ್ಸವವೂ ವೀರಶೈವಧರ್ಮಪರಿಷತ್ತೂ ನೆರವೇರುವುವೆಂದೂ, ಆ ಸಮಯಕ್ಕೆ ಯಾದಗಿರಿ ಶಂಕರ ಸಂಸ್ಕೃತಕಾಲೇಜ ಪ್ರಿನ್ಸಿಪಾಲರಾಗಿರುವ ವೇದತೀರ್ಥ, ಕಾವ್ಯತೀರ್ಥ, ಸ್ಮೃತಿತೀರ್ಥ, ಧರ್ಮಾಚಾರ್ಯ, ಸಾಹಿತ್ಯವಿಶಾರದ, ವಿದ್ಯಾರತ್ನ, ವಿದ್ಯಾನಿಧಿ ಇತ್ಯಾದಿ ಪದವೀವಿಭೂಷಿತರಾದ ವೇ|| ಪಂಡಿತ ವೀರಭದ್ರಶಾಸ್ತ್ರಿಗಳವರು ಅಲ್ಲಿಗೆ ದಯಮಾಡಿಸಿ ಆಂಧ್ರಭಾಷೆಯಲ್ಲಿ ಭಾಷಣವನ್ನು ಮಾಡುವರೆಂದೂ ಅಲ್ಲಿಯ ಕಾರ್ಯದರ್ಶಿಗಳಾದ ವೇ|| ನೀಲಕಂಠಯ್ಯನವರು ಪ್ರಸಿದ್ಧಿಸಿದ್ದಾರೆ. ಈ ವರ್ಷ ಆಚಾರ್ಯರ ಅವತಾರಕ್ಷೇತ್ರದಲ್ಲಿಯೇ ಜಯಂತೀಮಹೋತ್ಸವವು ನೆರವೇರುತ್ತಿರುವುದನ್ನು ನೋಡಿದರೆ, ವೀರಶೈವಮತದ ಪುಣ್ಯಕ್ಕೆ ಎಣೆಯೇ ಇಲ್ಲವೆಂದು ಹೇಳಬಹುದಾಗಿದೆ.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸಾನಂದ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಬೋಧಿಸುವ ಫೋಟೋ ಸೈಜು ೧೦×೧೬ ಬೆಲೆ	೦—೧—೬
ಪಂಚಪೀಠಾಧೀಶರಾದ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನಿ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ —ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರು... ರು ಪ್ರಸಿದ್ಧವಾದ... ನಶ್ಯದ ಪುಡಿಯಿಂ... ಸ್ಪಷ್ಟವಾಗುವ ವ್ಯಾ... ದಿಗಳು ಯಾವವೆಂ... ರೆ —ಪೀನಸಿ, ಒಂ... ತಲೆನೋವು ತಲೆ... ಲ್ಲಿಯ ರೋಗಗ... ಕಣ್ಣುಗಳಲ್ಲಿ ಉಂ... ಗತಕ್ಕ ಸರ್ಪವ್ಯಾಧಿಗಳು, ಚಳಿದೋಷ ಮೊಂತಾ... ವ್ಯಾದಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಟ್ಟಿರುವ ವ್ಯಾಧಿಗಳನ್ನು ಸ್ಪಷ್ಟಪಡಿಸಿ ಜ್ಞಾಪಕಶಕ್ತಿ... ಯನ್ನೂ ಸಹ ಹೆಚ್ಚು ಮಾಡುತ್ತದೆ ಮೂರುಬೆಟ್ಟ... ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು... ಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲ... ಪರಿಮಳವಾಗುವುದು ಇದನ್ನು ಅನೇಕ ಪ್ರಭುಗ... ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋ... ಸುತ್ತಾರೆ ಮಾದರಿಸೀಸ ಪುಗಸಟ್ಟೆ ಕಳುಹಿಸಲಾಗುವ...

ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦ ವಿ. ಪಿ. ೦ ...
ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ. ಪಿ. ೮ ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[1] ಪೋ. ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಮಾಲಿಕೆ .	೨ ಆಣೆ
ಮರುಳಸಿದ್ಧೇಶ್ವರಸುಪ್ರಭಾತ .	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ) ..	೧ ಆಣೆ
ಸನ್ಯಾಸಶಾಸ್ತ್ರಮನಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚಪೀಠಕತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) .	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ) ..	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ) ...	೧ ಆಣೆ
ಬಸವಾದಿ ಪುರಾತನ್ವದರ್ಪಣ (೪ನೆಯ ಆವೃತ್ತಿ) ...	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ಶಿವಶಕ್ತಿವಿಲಾಸ	೩ ಆಣೆ
ಶ್ರೀಗುರುತತ್ತ್ವಪದಗಳು .	೩ ಆಣೆ
ಗುರುಸ್ವರೂಪಸ್ವರೂಪದೀಪಿಕೆ	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಮತಮಾಹಾತ್ಮ್ಯ	೪ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ) .	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) ..	೪ ಆಣೆ
ಸನ್ಯಾಸಶಾಸ್ತ್ರಮ ವಿಮರ್ಶ ತತ್ತ್ವನಿರೂಪಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ .	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ) ..	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ...
पंडित श्रीकाशीनाथशास्त्री यांचें भाषण (मराठी)	८ आ...
Speeches by Pandit Shri Kashinatha Shastri (*English*)	12 A...
ವೀರಶೈವರತ್ನ (೪ನೆಯ ಆವೃತ್ತಿ)	೧೨ ಆ...
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆ...
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ...
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) ...	೧೨ ಆ...
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) ...	೧೨ ಆ...
ಶಿವಾಗಮೋಕ್ತ ಸಿದ್ಧಾಂತದರ್ಪಣ	೧೨ ಆ...
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ...
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ...
ಕೇನೋಪನಿಷತ್ (ವೀರಶೈವಭಾಷ್ಯ) ..	೧ ರೂ...
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ ಸಹಿತ) ...	೧ ರೂ...
ವೀರಶೈವಸಿದ್ಧಾಂತಸುಧಾಕರ	೨ ರೂ...
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೭೩೩ ಪುಟ)	೮ ರೂ...
लिंगधारणचंद्रिका (संस्कृत)	३ ...
महानारायणोपनिषत् (वीरशैवभाष्य-संस्कृत)	१ ...
वीरशैवेंदुशेखर (संस्कृत)	१ ...

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಧ್ಯಾಪಕ್ ... ಪಂಡಿತ ... ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ...

REGISTERED No M. 2266 || ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾ: ಪಂಚಾಸ್ಯಪೀಠಾಧಿಪಾ: | ಪಂಚಕ್ಲೇಶವಿನಾಶಕಾ: ಪರತರಶ್ರೀಪಂಚಲಿಂಗೋದ್ಭವಾ: ||
ಪಂಚಾಚಾರನಿಯಾಮಕಾ: ಪರಿಲಸತ್ಪಂಚಾಕ್ಷರೀಬೋಧಕಾ: | ಪಂಚಾಚಾರ್ಯಜಗದ್ಗುರೂತ್ತಮವರಾ: ಪಾಲಿನ್ತ್ವಿದಂ ಲೋಕಮ್ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ | ಬಿಡಿ ಪ್ರತಿ ೧ಕ್ಕೆ ೯ ಪೈ | ಪರಸ್ಥಳದವರಿಗೆ ೨ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨ನೇ ಮಾರ್ಚಿ ೧೯೩೬ [ಸಂಚಿಕೆ ೪೩

ದುಃಖಪ್ರದರ್ಶನಸಭಾ,

ಬೆಂಗಳೂರು

1936ನೇ ಇಸವಿ ಫೆಬ್ರವರಿ 29ನೆಯ ತಾರೀಖು ಶನಿವಾರ ಸಾಯಂಕಾಲ ೬ ಘಂಟೆಯ ಸಮಯದಲ್ಲಿ ಬೆಂಗಳೂರು ಶ್ರೀ ಮಹಂತಿನಮಠದೊಳಗೆ ಸರ್ ಕೆ ಪಿ ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ವೀರಶೈವ ಮಹಾಜನರು ಸಭೆಸೇರಿ ನಡೆಸಿದ ಪ್ರೊಸಿಡಿಂಗ್ಸ್—

1 ಶ್ರೀ ಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಜಯಂತೀಮಹೋತ್ಸವಸಮಾರಂಭದ ಪ್ರೋಗ್ರಾಂಪ್ರಕಾರ ಶ್ರೀ ಮಹಂತಿನಮಠದ ಪಟ್ಟಾಧ್ಯಕ್ಷ ಷ|| ಬ್ರ|| ಶ್ರೀ ಗಂಗಾಧರಶಿವಾಚಾರ್ಯಸ್ವಾಮಿಗಳವರು ತಮ್ಮ "ಮಹತ್ಸಮಸ್ಯೆ" ಎಂಬ ಭಾಷಣವನ್ನು ಮಾಡದೆ—"ರಾಜಕವಿಭೂಷಣ ಎಚ್ ಲಿಂಗರಾಜ ಅರಸರವರು ತಾ|| 10-2-36 ರಲ್ಲಿ ಮೈಸೂರಿನಲ್ಲಿ ಪರಂಧಾಮವನ್ನೈದಿದರೆಂಬ ವಿಷಯವನ್ನು ಕೇಳಿ ಅವರು ವೀರಶೈವಸಮಾಜಕ್ಕೂ ಮತ್ತು ಇತರ ಸಮಾಜದವರಿಗೂ ಮಾಡಿರುವ ಮಹೋಪಕಾರವನ್ನು ಜ್ಞಾಪಕಕ್ಕೆ ತೆಗೆದುಕೊಂಡು ಇಂಥ ಸಮಯದಲ್ಲಿ ಅವರಿಗೆ ಮರ್ಯಾದೆಯನ್ನು ತೋರಿಸುವುದಕ್ಕೋಸ್ಕರ ಮುಂದಿನ ಕಾರ್ಯಕ್ರಮಗಳನ್ನು ನಿಲ್ಲಿಸಬೇಕೆಂದು' ಸೂಚಿಸಿದ್ದರಿಂದ ಅವರ ಸೂಚನೆಯಂತೆ ಮುಂದಿನ ಕಾರ್ಯಕ್ರಮಗಳು ನಿಲ್ಲಿಸಲ್ಪಟ್ಟವು

ಮೈಸೂರು ಹೈಕೋರ್ಟಿನ ರಿ|| ಚೀಫ್‌ಜಸ್ಟಿಸ್ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ವೆ|| ಪಿ ಮಹಾದೇವಯ್ಯನವರು—ರಾಜಕವಿಭೂಷಣ ಎಚ್ ಲಿಂಗರಾಜ ಅರಸರವರು ಮಾಡಿರುವ ಮಹತ್ಕಾರ್ಯಗಳ ವಿಷಯವಾಗಿ ದೀರ್ಘವಾದ ಭಾಷಣವನ್ನು ಮಾಡಿದರು ಅವರ ಭಾಷಣದಿಂದ ಅಂಥ ಮಹನೀಯರ ವಿಯೋಗದಿಂದ ಪ್ರಪಂಚಕ್ಕೆ ಮಹತ್ತರ ನಷ್ಟವು ಸಂಭವಿಸಿರುತ್ತದೆಯೆಂದು ಸಭಿಕರು ದುಃಖಪ್ರದರ್ಶನಮಾಡಿದರು ಅನಂತರ ಸಭಿಕರು ಎದ್ದುನಿಂತು 'ವೆ|| ಪಿ ಮಹಾದೇವಯ್ಯನವರು ತಂದ ರೆಜಲ್ಯೂಷನ್ನು ಸರ್ವಾನುಮತದಿಂದ ಒಪ್ಪಿ ಈ ರೆಜಲ್ಯೂಷನ್ನು ಅಧ್ಯಕ್ಷರು ಕೈ|| ಎಚ್ ಲಿಂಗರಾಜ ಅರಸರವರ ಸ್ವಕೀಯ ಬಂಧುಗಳಿಗೆ ಕಳುಹಿಕೊಡಬೇಕೆಂದು ನಿರ್ಧರಿಸಲ್ಪಟ್ಟಿತು. ಮತ್ತು ಇದೇ ರೆಜಲ್ಯೂಷನ್ನು ಇಂಗ್ಲೀಷು ಮತ್ತು ಕನ್ನಡಪತ್ರಿಕೆಗಳಿಗೆ ಪ್ರಕಟನೆಯ ಬಗ್ಗೆ ಕಳುಹಿಸಬೇಕೆಂದು ನಿರ್ಧರಿಸಲ್ಪಟ್ಟಿತು

ದರ್ಗನಹಳ್ಳಿಯಲ್ಲಿ ಧರ್ಮಾಚರಣೆ

ಸೋಲಾಪೂರ ತಾಲೂಕು ಪೈಕಿ ದರ್ಗನಹಳ್ಳಿಯಲ್ಲಿ ತಾ|| ೨೧-೨-೩೬ ನೆಯ ಮಹಾಶಿವರಾತ್ರಿಯ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯ ಗುರುಸಾರ್ವಭೌಮರ ಲಿಂಗೋದ್ಭವಮೂರ್ತಿಗಳನ್ನು ಅತ್ಯಂತ ಅಂದವಾದ ಆಂದೋಳಿಕೆಯಲ್ಲಿ ಮಂಡಿಸಿ ಮೆರೆಸಿ ವರ್ತಿಗೊಳಿಸಿ ಶ್ರೀಯುತ ಲಿಂಗಣ್ಣಪ್ಪನವರ ಗೃಹದಿಂದ ಅತ್ತ ಪಲ್ಲಕ್ಕಿ ಮಹೋತ್ಸವವು ಒಳ್ಳೇ ವೈಭವದಿಂದ ಹೊರಟು ಊರನ್ನೆಲ್ಲಾ ಪವಿತ್ರಗೊಳಿಸಿ, ಮಹದೇವ ಮಂದಿರಕ್ಕೆ ತಲ್ಪಿತು ಅನಂತರ ಹೊಟಗೀ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿ ವಿಶ್ವಾರಾಧ್ಯ, ಅಣ್ಣಪ್ಪ ಮಾಸ್ತರ, ಬಾಪೂರಾವ ಪಾಟೀಲ ಜೋಷಿ, ಇವರ ವ್ಯಾಖ್ಯಾನಗಳು ದವು ಅಧ್ಯಕ್ಷರ ಭಾಷಣವಾಗಿ, ಪ್ರತಿಯೊಂದು ಗ್ರಾಮ ಸುಧಾರಣೆಗೆ ಐಕ್ಯದ ಅತ್ಯಾವಶ್ಯಕತೆಯು ಇರುವುದರಿಂದಲೂ ದರ್ಗನಹಳ್ಳಿಯಲ್ಲಿ ವೀರಶೈವರೇ ವಿಶೇಷವಿರುವದರಿಂದಲೂ ಅವರ ಸುಧಾರಣೆಗಾಗಿ ಒಂದು ಸಂಘದ ಆವಶ್ಯವಿದೆ ಎಂದು ಅಪ್ಪಣೆಕೊಡಿಸಿದರು

ಯಾವ ಪೂಜ್ಯರ ಸ್ಮರಣ ಮಾತ್ರದಿಂದಲೇ ಮಹಾರಾಷ್ಟ್ರ ಭಾಗವೇ ಪವಿತ್ರವಾಯಿತೋ. ಯಾವ ಜಗದ್ವಂದ್ಯರ ಉಪದೇಶಾಮೃತದಿಂದ ಸರ್ವ ವೀರಶೈವರು ಭವಸಾಗರವನ್ನು ದಾಟಿದರೋ, ಯಾರ ತಪಃಪ್ರಭಾವದಿಂದ ಗುರುವರ್ಗವು ಜಾಗೃತಿಗೊಂಡಿತೋ, ಕಿ ಬಹುನಾ ಯಾವ ಮಹಿಮರಿಂದಲೇ ಸರ್ವರಿಗೂ ಆನಂದವಾಯಿತೋ ಅಂಥ ಪೂಜ್ಯಪಾದ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಸನ್ನಿಧಿಯವರ ದಿವ್ಯನಾಮದಿಂದಲೇ "ಶ್ರೀ ಜಗದ್ಗುರು ಸಿದ್ಧಲಿಂಗ ಸೇವಾಸಂಘವು ಸ್ಥಾಪಿಸಲ್ಪಟ್ಟಿತು ಸದರಿ ಸಂಘದ ವತಿಯಿಂದಲೇ ಶ್ರೀ ಜಗದ್ಗುರು ಪಂಡಿತಾರಾಧ್ಯ ವಾಚನಾಲಯ" ವೂ ಸ್ಥಾಪಿಸಲ್ಪಟ್ಟಿತು

ಸಂಘಾಧ್ಯಕ್ಷ ಶ್ರೀ ರಾಚಪ್ಪ ಗಂಗಪ್ಪ ಬಿರಾಜದಾರ, ಉಪಾಧ್ಯಕ್ಷ ಶ್ರೀ ಸಂಗಪ್ಪ ಗುರುಸಿದ್ಧಪ್ಪ ಬಿರಾಜದಾರ

ಸೆಕ್ರೆಟರಿ ಹೊನಮೊರಗೀಕರ

೨೫ ಜನರು ಮೆಂಬರರಿರುತ್ತಾರೆ ಇತ್ಯಾದಿ ಕಾರ್ಯಗಳಾದ ಮೇಲೆ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು ಹೊಟಗೀ ಶ್ರೀಗಳ ಪಾದಪೂಜೆ, ಶಿವಭಜನದೊಳಗೆ ಮಹಾಶಿವರಾತ್ರಿಯು ಪೂರೈಸಿತು

ದರ್ಗನಹಳ್ಳಿಯಲ್ಲಿ ಭಯಂಕರ ಕಲಹಾಗ್ನಿಯು ಮಧ್ಯದಲ್ಲಿ ಪ್ರವೇಶಿಸಿತ್ತು ಅದನ್ನು ಶ್ರೀ ಹೊಟಗೀ ಶ್ರೀಗಳು ಗೇನಪ್ಪ, ಗಂಗಪ್ಪ, ಶಿವರಾಮಪ್ಪ ಇವರಿಂದ ಕೂಡಿಕೊಂಡು ಮಹಾಶಿವರಾತ್ರಿ ದಿವಸ ಶಾಂತಗೊಳಿಸಿದರು

ತಾ|| ೨೩-೨-೩೬ ಕ್ಕೆ ಹೊಟಗೀ ಶ್ರೀಗಳ ವಾಸಸ್ಥಳವಾದ ಊರಿಂದ ೧ ಮೈಲು ಅಂತರದಲ್ಲಿರುವ "ಶ್ರೀ ಪಂಡಿತಾಶ್ರಮ" ದಲ್ಲಿ ಸದರಿ ಸಂಘದವರ ವಿಠಲಿಂಗು ರಾಚಪ್ಪನವರ ಅಧ್ಯಕ್ಷತೆಯಲ್ಲಿ ಕೂಡಿ ಕೆಳಗಿನ ಠರಾವು ಸರ್ವಾನುಮತದಿಂದ ಪಾಸಾದವು

೧ ಪ್ರತಿಯೊಬ್ಬ ವೀರಶೈವನು ಲಿಂಗವನ್ನು ಬಿಟ್ಟು ತಿರುಗಬಾರದೆಂಬ ಬಗ್ಗೆ ಉಪದೇಶವನ್ನು ಮಾಡಬೇಕು ಕೇಳದಿದ್ದರೆ ಈ ಸಂಘದ ವತಿಯಿಂದ ೫ ರೂಪಾಯಿ ದಂಡಮಾಡುವುದರಲ್ಲಿ ಬರುತ್ತದೆ

೨ ಹೊಟಗೀ ಶ್ರೀಗಳವರ ನೇತೃತ್ವದಲ್ಲಿಯು ಕಲಹಾಗ್ನಿಯನ್ನು ಗ್ಯಾನಪ್ಪ, ಗಂಗಪ್ಪ ಶಿವರಾಮಪ್ಪ ಇವರು ಶಾಂತಗೊಳಿಸಿದ ಬಗ್ಗೆ ಈ ಸಭೆಯವರಿಗೆ ಆನಂದವಾಗುತ್ತದೆ

ಸೆಕ್ರೆಟರಿ,

ಶ್ರೀ ಜಗದ್ಗುರು ಸಿದ್ಧಲಿಂಗ ಸೇವಾಸಂಘ

ದಿವ್ಯರತ್ನವು ಕಳಚಿಹೋಯಿತು!

ನಿಜಾಮ ಇಲಾಖಾ ದೇವದುರ್ಗ ತಾಲೂಕು ಪೈಕಿ ಮೌಜೆ ಗೆಜ್ಜಭಾವಿಯೆಂಬ ಗ್ರಾಮದಲ್ಲಿ ಶ್ರೀಮತ್ಪ್ರಣವಸ್ವರೂಪಿ ಚನ್ನಬಸವಸ್ವಾಮಿಗಳೆಂಬ ಚರಪಟ್ಟಾಧ್ಯಕ್ಷರು, ಕುಷ್ಟಗಿ, ನಿಡಶೇಸಿ, ಒಣಗೇರಿ, ಮಾದಾಪುರ ಮತ್ತು ಗುಡುದೂರು ಮೊದಲಾದ ಸ್ಥಳಗಳ ಮಠಾಧಿಪತಿಗಳಾಗಿದ್ದು ಇವರು ಸದಾಚಾರಿಗಳೂ ಬ್ರಹ್ಮಚರ್ಯೆಯಿಂದ ಮೆರುಗುವವರೂ, ತಮ್ಮನ್ನಾಶ್ರಯಿಸಿದ ಭಕ್ತರಿಗೆ ಸದ್ಬೋಧೆಯಿಂದ ಉದ್ಧಾರ ಮಾಡುವವರೂ, ಆಶಾವಿರಹಿತರೂ, ಶಿವಪೂಜಾಧುರಂಧರೂ ಆಗಿದ್ದರು. ಅಲ್ಲದೆ ವರ್ಷಕ್ಕೊಮ್ಮೆ ನಿಡಶೇಸಿ ಮುಕ್ಕಾಮಿನಲ್ಲಾಗಲಿ ಗೆಜ್ಜಭಾವಿ ಮುಕ್ಕಾಮಿನಲ್ಲಾಗಲಿ ಆಚಾರಯುಕ್ತವಾಗಿ ಮಹಾಗಣಾರಾಧನೆಯನ್ನು ಮಾಡುತ್ತಿದ್ದರು ಭಕ್ತರನ್ನು ಬೇಡುವದೆಂದರೆ ಇವರಿಗೆ ಇಷ್ಟವಿರಲಿಲ್ಲ ಇವರ ಸನ್ಮಾರ್ಗಗಾಮಿತ್ವ ಶಿವಾಚಾರತತ್ಪರತೆ ಮುಂತಾದ ನಡವಳಿಕೆಯಿಂದ ಸದರಿ ಸ್ವಾಮಿಗಳವರ ದರ್ಶನ ಸೇವಾಭಿಲಾಷಿಗಳಾದ ಎಷ್ಟೋ ಭಕ್ತರು ಅಯಾಚಿತವಾಗಿ ತಾವೇ ಬಂದು ಗಣಾರಾಧನೆ ಮೊದಲಾದ ಖರ್ಚುಗಳನ್ನು ಭಕ್ತಿ ಪೂರ್ವಕವಾಗಿ ಸಲ್ಲಿಸುತ್ತಿದ್ದರು ಇವರು ಕನ್ನಡ ಸಂಸ್ಕೃತ ಭಾಷೆಗಳಲ್ಲಿ ದೊಡ್ಡ ಪಾಂಡಿತ್ಯವನ್ನು ಸಂಪಾದಿಸಿದ್ದರು ಅಲ್ಲದೆ ತಮ್ಮ ಜೀವಿತಕಾಲದಲ್ಲಿ ಎಷ್ಟೋ ಪವಾಡಗಳನ್ನು ಮಾಡಿತೋರಿಸಿದರು. ಇಂಥಾ ದೇದೀಪ್ಯಮಾನವಾದ ರತ್ನವು (ವಿಭೂತಿಯು) ಇದೇ ಯುವನಾಮ ಸಂ||ರದ ಮಾಘ ಬ|| ೪ ಮಂಗಳವಾರ ಉಷಃಕಾಲಕ್ಕೆ ಗೆಜ್ಜಭಾವಿ ಮಠದಲ್ಲಿ ಈ ಲೋಕದ ಯಾತ್ರೆಯನ್ನು ಮುಗಿಸಿ ಶಿವಸಾಯುಜ್ಯವನ್ನೈದಿದರೆಂದು ತಿಳಿಸಲು ತುಂಬಾ ವಿಷಾದವೆನಿಸುತ್ತದೆ

ಬುಳ್ಳಾಪೊಡ್ಡಪ್ಪ ನಾಗಲೀಕ ಮುಸಿಗಿ

ಮಿ|| ಜ ಜೆ ಡಿಪ್ಲೂರಿ ಎಂಬ ಲಂಕಾಷಹರಿನ ಹತ್ತಿಬಟ್ಟೆಗಳ ಪರೀಕ್ಷಕನು 20 ವರ್ಷಕಾಲ ಕಷ್ಟಪಟ್ಟು ಹತ್ತಿಗೆ ಬದಲಾಗಿ ಉಪಯೋಗಿಸಬಹುದಾದ ಹೊಸ ಮಾದರಿಯ ಗಿಡವೊಂದನ್ನು ಪತ್ತೆಮಾಡಿರುವನು. ಇದರ ನಾರು ಹತ್ತಿಯಷ್ಟೇ ಮೃದುವಾಗಿದ್ದು ವ್ಯತ್ಯಾಸವೇ ತಿಳಿಯುವದಿಲ್ಲವಂತೆ! ಇದು ಈಗ ಉಪಯೋಗಿಸುತ್ತಿರುವ ಹತ್ತಿ ಮತ್ತು ನಾರುಗಳಿಗಿಂತ ಬಹಳ ಅಗ್ಗವಾಗಿ ದೊರೆಯುವದರಿಂದ ಇದರಿಂದ ತಯಾರಾದ ಬ್ಲಾಂಕೆಟ್ಟುಗಳು ಎರಡಾಣೆಗೆ ಒಂದರಂತೆ ಮಾರಿದರೂ ಲಾಭ ಬರುವುದೆಂದು ಹೇಳುತ್ತಾನೆ.

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

ಕಾಶೀ ಶ್ರೀ ೧ ೦ ಜಗದ್ಗುರು
ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರ
೯ ನೆಯ ವರ್ಧಂತ್ಯುತ್ಸವದಲ್ಲಿ ಸಮರ್ಪಿಸಿದ
ಪದ್ಯರತ್ನಗಳು

ಶ್ರೀ ಜಗದ್ಗುರು ಪಂಚಾಕ್ಷರಪಂಚಕಂ

ಶ್ರೀಮ ಜ್ಜಗದ್ಗುರ [illegible] ವ ದೇ ಜ[illegible] [illegible] ಬುಜ ಜಾಮದ [illegible] ||

ಪಂಚಾಕ್ಷರ ಶಿವ [illegible] ಘ[illegible] ಪಾ [illegible] ||

[illegible]

[illegible]

[illegible]

[illegible]

ಶ್ರೀ ಜಗದ್ಗುರು ಪಂಚಾಕ್ಷರಾಷ್ಟಕಂ

[illegible] ಸುಜ್ಞಾನ [illegible] ವಿ ತಸ್ಪ್ರದೂಪ [illegible] ||೧||

ಕ್ಷೇಂತ [illegible] ಜನ ಗಸ್ಯ ಗರೋ [illegible] ಕ್ಕೃಪ [illegible] ಸೋಮಸ್ಯ [illegible] ಲಕ್ಷ್ಮೀಶ್ಚ [illegible] ವಿಲೀಯತೇ ಶ್ಯಮಾಯತಿ [illegible] ತಯಾ ನಿಜ ಪತಿಃ |೨|

ಪಪ್ರಹುಟು [illegible] ದೇಶಮುತ್ತಮಂ ದೇಶೇSಪಿ ಕಾಶೀಪುರಮುತ್ತಮಂ ಪಾವನಂ ಸಜ್ಞಾನಪೀಠಂ ಚ ತತೋSತಿಪಾವನಂ ತಸ್ಯಾಪಿ ಪಂಚಾಕ್ಷರವಿವ ಕಾರಣಂ ||೪||

ಸಿಂಹಾಸನೇ ಸ್ವರ್ಣಮಯೇ ಚರಾಜತೇ ಸ್ಥಿತಂ ಗುರುಂ ತ್ವಾಂ ಖಲು ಯೋಗಿರಾಜ ತೇ | ಕೇಚಿ ದ್ಬುಧಾ ದೇವಗುರುಂ ವದಂತಿ ವೈ ಹ್ಯೇವಂ ಪರೇ ಶಾಂತಮಯಂ ಮುನಿಂ ತಥಾ ||೪||

ವಕ್ಷೋವತಶ್ಯಂಬಿ [illegible] ಭಿಜಾತಶ್ಚ ಪಿತ ಮಹೋ ಯತಃ | ಪದಂ ತಯೋಃ [illegible] ಭೂತಲೇ [illegible] ಸ್ತತ ಸತ್ಕುಲಜೋSಸಿ ಸರ್ವದಾ ||೫|

ಶ್ರೀಲೋಕನಾದೋ ದ್ವಿಜರಾಜಭೂಷಿತಃ ಸೋಮೋS ಯಮೇವಂ ಭಯಭಕ್ತಿ [illegible] | ಮತ್ವಾ ಇತಿ [illegible] ಜಗದ್ಗುರುಂ ಪಂಚಾಕ್ಷರಂ ಪಾವನದೇಹಭೂಷಿತಂ ||೬||

ಶ್ರೀವೀರಶೈವಾಗಮ [illegible] ವಿದ್ಯಾನಿಧಿ ಯೋ [illegible] | [illegible] ರಕ್ಷತು ಸ್ತೋ ಜಗದ್ಗುರುಃ ಪಂಚಾಕ್ಷರೋ [illegible] ಶುಭಂಕರಃ |೭|

ಯಸ್ಯ ಶ್ರೀಗುರುಪುಂಗವಸ್ಯ ಭಜನಾತ್ [illegible] ಯತೀ ಪಾತಕಂ ಸಾಕ್ಷಾದ್ದರ್ಶನತಸ್ತು [illegible] ಲಭ್ಯಂ ಮುಕ್ತೇಃ ಪದಂ ಪ್ರಾಪ್ಯತೇ | [illegible] ಸ್ತು ನಾ [illegible] ವಯ ೧೦ [illegible] ದ್ಯೋಧಯನ್ ಸರ್ವಾ [illegible] ಭೂಮಿತಲೇ ತರಚ್ಛತಯುತಃ ಪಂಚಾಕ್ಷರ [illegible] |೮||

ಗುರುದೇವಶಿವಾಚಾರ್ಯ
ಚಿಕ್ಕಮಣ್ಣೂರು, ಬ್ಯಮು

ಭಕ್ತಿಕುಸುಮಾನಿ

[illegible] ಜ್ಞಾನನಿಧಿ ಸುಧ ಸಹಚರಪ್ರಸ್ನಿಗ್ಧ ಬೋಧೋತ್ಸ [illegible] ಯಚ್ಛಾಂತಾನನಮುದ್ರಯಾ ವಿತನ [illegible] ವೋದಂ ಸತಾಂ|| ಮಾತ್ಸರ್ಯಾ [illegible] ಲಿಸಿಗ್ರಹಪಟುಸ್ಸದ್ಧಾ [illegible] ಕ್ಷೇಮದಃ | [illegible] ಯಂ ಪ [illegible] ಜಿಸ್ರೂಜಿತಪದಃ ಪಂಚಾಕ್ಷರೋ [illegible] ಜತೇ |೧|

ಸಜ್ಜ [illegible] ಸುಜ್ಞಾನಸಿ [illegible] ಸನಮಧಿಕತಪಸ್ಸಿದ್ಧಿ ವಿದ್ಯೋ [illegible] ಸಚ್ಛಾಸ್ತ್ರನಿಷ್ಠ [illegible] ಚರಿತವರ [illegible] ಯನ್ನಿಷ್ಟಪೂರ್ತ್ಯೈ || ಸತ್ಯಾ [illegible] ದರಾಖ್ಯಾಮುತನುತನುಯುತೋ ಭಕ್ತ [illegible] ವಸ್ಯ [illegible] ಪಂಚಾಕ್ಷ[illegible] ಶ್ರೀ [illegible] ಕುಲತಿಲಕಶ್ಯೈವ [illegible] ||೨||

[illegible] ಪರ ಒಪದಿ [illegible] ಯೋಗಾತ್| [illegible] ಸ್ಯವಸಿಂವೃತ್ || [illegible] ಯೋಗ [illegible] ವ ಮಾಯೆ [illegible] ಪರಿಷಮಾಪ್ತಂ [illegible] ತಾನಾಂ |೩|| [illegible] ಶಿವಜ್ಞ [illegible] ಸದಾ ಸುಖಮೇಧತೇ ||

ಜಗದ್ಗುರುಪದಪದ್ಮಚಂಚರೀಕಃ
ಶ್ರೀ ವೃಷಭಲಿಂಗಶಿವಾಚಾರ್ಯ

ಅಭಿನವ ವಿಶ್ವಾರಾಧ್ಯಸ್ತವನಂ

ಅಭಿನವವಿಶ್ವಾರಾಧ್ಯನ |
ಶುಭಕರ [illegible] ಯಮುತ್ತಮಂ ಸಮುನಿಸೆ ನಾಂ ||
ಅಭಯವನಿತುತೆ ಧರ್ಮ |
ಪ್ರಭುವರ ಸಮ್ಮುಖದೊಳೊರೆವೆನಿಸ್ತುತಿಗಣಮಂ||೧||

ಗುರುಕುಲವಿದ್ಯಾಪೀಠಂ |
ಚಿರಕಾಲಂ ನಲಿದೆ ನೆಲಸ ಪಂಚಾಚಾರ್ಯರ್ ||
ಹರಭಕ್ತರ ಕರಬಲದಿಂ |
ವರವಾರಾಣಸಿಯೊಳಿಲ್ಲಿ ದಯೆದೋರಿಹರೈ ||೨||

ಧನಿಕಂ ಕೊಡುವ ಧನಂ ತಾಂ |
ತಿನುವೂಡೆ ಕತಕಾಲದನಕವಾನಂದಕರಂ ||
ದನಿ ನೀಂ ಕೊಡುತಿಹ ವಿದ್ಯಾ |
ಧನವಾದರನಂತಜನ್ಮಸುಖಕರವಹುದೈ ! ||೩||

ವಿದ್ಯಾದಾನಿಯೆ ! ನಿನ್ನಯ |
ಸದ್ಯಶವಿಂದುಂಬಿ ವರಕೀರ್ತಿವಕ್ತ್ರೀಮುಗಿಲೊಳ್ ||
ಪ್ರದ್ಯೋತನ ನ ಮದೆ ತಾಂ |
ವಿದ್ಯೋತಿತಮಾದರಿಂದು ಸುಂದರಮಹುದೈ ||೪||

ನಿನ್ನಿ ಕೀರ್ತಿಯೆ ಪವಿತರ |
ವನ್ನೋದಕವೆರಸಿ ವಿದ್ಯೆಗಳನೀಯುವುದುಂ ||
ಫನ್ನ ಪದಂಗಳನೀಯುಸಿ |
ಸನ್ನುತರಂ ಮಾಡುತಿಪ್ಪುದಿದು ಘನಕಾರ್ಯಂ ||೫||

ನಿಜವಾದ ದಾನಿ ನೀನೈ ,
ಸುಜನತ್ವವನೀವ ದಿವ್ಯವಿದ್ಯಾಮೃತಮಂ ||
ಭಜಕರಭಜಕರ ಮನ್ನಿದೆ |
ಸೃಜಿಸುವೆಯುವರವರು ಬಯಸುವಂದದೊಳಿಗಳ್ ||೬||

ಧರೆಯೊಳು ಧನಿಕರು ದಾನಿಗ |
ಳರಿಯೆ ಮಹಿಯ್ಯ ದಾನ ಗೊಂಬವರಿಲ್ಲಂ ||
ಸರಿದೇ ಸರಿ ಪಂಚಾಕ್ಷರ |
ಗುರು ನಾಮೋಚ್ಚಾರಫಲದೆ ಕಣಿದಿಹರಿಲ್ಲರ್ |೭||

ಗುರು ವರಣಾಮೋಚ್ಚಾರ್ಣವೆ |
ಕರಕರದಿನ್ವಾರ್ಥವೀಯುತಿರೆ ಬಾಯ್ದೆರೆಮಂ ||
ಕರಗಳನೊಡ್ಡಿಯೆ ದೈನ್ಯದೆ |
ಸಿರಿಯುತದಾನಿಗಳನೇಕೆ ಯಾಚಿಪುದಿಳೆಯೊಳ್ ||೮||

ಪೊಳೆಯುವೆ ಸೂರ್ಯನ ಹಾಗೆಂ |
ಕಳೆಯಾಚಂದಿರನ ಕಳೆಗೆ ಮಿಗಿಲಾಗಿಹುದೈ ||
ಬಳಮಿಗಿಶಿವನುತಬಳಮಾ |
ಗಿಳೆಯಂ ಸದ್ಧರ್ಮಮಯ ಪಥಾಗಿಸಿ ಪೊರೆಯ್ಯ ! ||೯||

ಅಶಿವರ್ದಿಸ್ವೈ ! ಗುರು ನೀ |
ನ ಶಾಸ್ತ್ರಿತರಂದ ನಿನ್ನ ಪಾದಾರ್ಚಕರಂ ||
ಪಶುಪತಿಯೋಚಿತರಾಗಿ |
ಯಶೋಧನ ಭಜಿಕುತ್ತ ಪಾಶುಪತರಾಗುವವೋಲ್

ವರವೀರಶೈವತತ್ತ್ವದ |
ನರುಹುವ ಕಥದಿಂದೆ ವಿಶ್ವಗುರುವಾಗಿಹೆಯೈ ||
ಪೊರೆ ಗುರುವಿಶ್ವಾರಾಧ್ಯ |
ಪರರೂಪಿಯೇ ! ಗುರುಚರಾಧಿಪತಿ ನೀ ಜವದಿಂ ||೧೧

ನಮಿಸುವೆ ನಿನ್ನಡಿಗಳತಾಂ |
ಕಮಲಗಳೆಳಿ ಒಡ್ಡಿ ನಿರ್ಮಲತೆವೊಂದಲಿ ತಾಂ ||
ಕಮಲಮುಗುಣಗಳೆ ಮೂಡಲಿ |
ಕಮನಾರಿಯರೂಪಿ ನೀನೆ ಸಲಹೀಧರೆಯಂ ||೧೨||

ಗುರುಸೇವಾಧ್ಯಾಪಕ,
ಶ್ರೀ ವಾಗೀಶಶಿವಾಚಾರ್ಯ

ಶ್ರೀ ಜಗದ್ಗುರು ವಿಶ್ವಾರಾಧ್ಯ ಸ್ತವನ ಪಂಚರತ್ನಂ

ಶ್ರೀಗುರುವೆ ಸಕಲಾಗಮಜ್ಞನೆ |
ಯೋಗಿಜನನಿವಹಾಂಚಿತನೆ ಭವ |
ಸಾಗರೋಲ್ಮಗ್ನಾಜ್ಞಜನದುರಿತೌಘಸಂಹರನೆ ||
ಭೋಗಿಭೂಷಣನಂಕಶಾಸನೆ |
ಭೂಗಣೇಂದ್ರನೆ ಬುಧಜನಾವನ |
ಯೋಗಿವರಸುಜ್ಞಾನಪೀಠೇಶ್ವರನೆ ಪೊರೆಯೆನ್ನಂ ||೧||

ಹರಿವಿರಿಂಚಿಪುರಾಸುರರ್ಗಂ |
ಹರುಷದಿಂದಿಷ್ಟಾರ್ಥವೀಯುತ |
ಪೊರೆದು ಲೋಕವನೆಲ್ಲವಂ ಗುರುವಾಗಿ ಮೆರೆಯುತ್ತಂ||
ಪರಮಗತಿಗಾಣಲ್ಕೆ ಸುಖಕರ |
ದರಿವ ಬೋಧೆಯ ಗೆಯ್ದು ಶಂಭುವ |
ನರಿದೆ ಜಗದಾಚಾರ್ಯ ವಿಶ್ವಾರಾಧ್ಯ ಗುರುವರನೆ||೨||

ಭುವಿಯೊಳಾಸ್ತಿಕ ವೀರಶೈವವ |
ಜವದಿ ಹದಿಬಯ ಗೆಯ್ವುಕೆಳದಿಂ |
ಶಿವನ ಮುಡಿವಿಡಿದಮಲಕಾಶೀಪುರಿಯ ಮಧ್ಯದೊಳು ||
ತವೆ ವಿರಾಜಿಪ ವಿಶ್ವನಾಥನೊ |
ಳವತರಣಮಂ ಪೊಂದಿ ಕಪಿಲ |
ಪ್ರವರಮುನಿಜನಕೊಲಿದು ಶಿವಸಿದ್ಧಾಂತಗಳನೊರೆದೈ

ಸರ್ವದುರ್ಮತವಾದಿಗಳ ಘನ |
ಗರ್ವಮಂ ಪರಿಹರಿಸುತವರಿಗೆ |
ಶರ್ವಸಾಕ್ಷಾತ್ಕಾರಮಾಗುಗೆ ಬೋಧೆಗೆಯ್ಯುತ್ತಂ ||
ಉರ್ವಿಪತಿಹರಿಚಂದ್ರನಿಷ್ಟವ |
ನೊರ್ವನೇ ಪೂರಯಿಸಿ ಸುಖವಂ |
ಸರ್ವಜನವರವಿತ್ತ ನೀಡಿದೆ ವಿಶ್ವಗುರು ನೀನೈ ||೪||

ಹರಮತಪ್ರಭುವರ್ಯ ನೀನೇ |
ಪರಮಪಾವನ ಪಾಪವೆನ್ನ ಪರಿ |
ಯರುಹಲೆಂ ಗುರುರಾಯ ನಿನ್ನಯ ಕೀರ್ತಿ ಭುವನತರವು
ಗುರುವೆ ಮೂಜಗದಿರುವೆ ನೀನೆಮ |
ಗರುಹು ಪರತರ ವೀರಶೈವವ |
ನೆರಗಿರುವೆ ನಿನ್ನಡಿಗೆ ಪಂಚಾಕ್ಷರಗುರೂತ್ತಮನೆ ||೫||

ಶ್ರೀಜಗದ್ಗುರು ಪಂಚಾಚಾರ್ಯರ ಪಾದಸೇವಕ,
ಬೆಂಗಳೂರು ಸಿದ್ಧಪ್ಪ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ವಾರಾಣಸೀ ವರ್ಣನಂ.

ಧನ್ಯಂ ಭಾರತವರ್ಷಮೇವ ಸುಮಹದ್ದೇಶೇಷು ಸರ್ವೇಷು ತ| ದ್ಯಸ್ಮಿನ್ನಸ್ತಿ ಸಮಸ್ತಪತ್ತನಶಿರೋರತ್ನಂ ಚ ಕಾಶೀಪುರೀ|| ಯತ್ರಾಸ್ತೇ ಮಹಿಮಾ, ಪುನಃ ಪುನರಪಿ ಧ್ಯಾಯಂತಿ ಯಂ ಸರ್ವದಾ| ಸೋಽವ್ಯಾನ್ನೋ ಬುಧಮೌಲಿವಂದಿತಪದಃ ಶ್ರೀ ಪಾರ್ವತೀವಲ್ಲಭಃ ||೧||

ಯಸ್ಮಿಂಭೂಃ ಸ್ವಗತೈರ್ಯುತೋ ವಸುಮತೀಂ ದ್ರಷ್ಟುಂ ಗತೋ ಭೂಮಂ ವಿಭುಃ| ನಾದ್ಯಾಪಿ ಪ್ರತಿಯಾತ್ಯಸೌ ಸುರಗುರುಃ ಶೂನ್ಯಶ್ಚ ಕೈಲಾಸಭೂಃ| ಇತ್ಥಂ ಶೈಲಸುತಾಪಿ ಸಂಭ್ರಮಮನಾಃ ಮಹ್ಯಾಂ ಯದಾ ಸಾಗತಾ| ತತ್ಕಾಲಾದ್ವೃಷಮಾನಸಃ ಶಶಿಧರ ಕಾಶ್ಯಾಂ ನಿವಾಸಂ ಗತಃ ||೨||

ಕೈಲಾಸೇರುಚಿಮಾನಭೂತ್ಸ ಇತಿಯತ್ ತತ್ಸತ್ಯಮೇವಾಸ್ತಿ ಮೇ| ಹ್ಯೇಕಸ್ತತ್ರ ಶಿವಃ ಪ್ರಣೌತಿ ಗಿರಿಶಂ ಕಾಶ್ಯಾಂ ಶಿವಾನಾಂ ಚಯಃ|| ಏತಃ ಪುಣ್ಯಜನೇಶ್ವರೋ ಹರಗಿರೌ ನೈಕೇಚ ಕಾಶೀಪುರೀ| ಕೈಲಾಸಾದಧಿಕೈವ ಶೈವನಗರೀ ವಾರಾಣಸೀ ವರ್ತತೇ ||೩||

ಕೈಲಾಸೋಹಿ ವಿನಾಯಕಃ ಸಮಭವತ್ ಕಾಶೀತು ಸನ್ನಾಯಕಾ ಹ್ಯೇಕಃ ಶಕ್ತಿಧರೋಽಸ್ತಿ ತತ್ರ ಚ ಗಿರೌ ನೈಕೇಽತ್ರ ತತ್ಸನ್ನಿಭಾಃ| ಗೌರ್ಯೇಕಾ ನನು ವರ್ತತೇ ಹರಗಿರೌ ಬಹ್ವ್ಯತ್ರ ಚ ಯತ್ಪತ್ತನೇ ಕೈಲಾಸಃ ಕಥಂನು ತತ್ಪುರಸಮಃ ಸ್ಯಾದ್ಭೂತಲೇ ದುರ್ಗತಃ ||೪||

ಪ್ರತ್ಯೇಕಂ ನನು ವರ್ತಮಾನನಿಲಯಾಃ ಸಂತ್ಯತ್ರ ಶುಭ್ರೋನ್ನತಾಃ| ಪಶ್ಯಂತಿಸ್ಮ ಸುರೇಶ್ವರಾ ಹರಗಿರಿಭ್ರಾಂತ್ಯಾಽಸಕೃತ್ತಾನ್ ಯದಾ|| ತತ್ಕಾಲಾದಿ ಬುಧಾಃ ಪುರೇಽತ್ರ ವಿಲಿತಾ ವಾಸಂಚ ಯತ್ತನ್ವತೇ ತಸ್ಮಾತ್ಸ್ವಂ ವಿಬುಧಾಲಯಃ ಸಮಭವದ್ವಾರಾಣಸೀ ಭೂತಲೇ ||೫||

ಕಾಶ್ಯಾಂ ಕಲ್ಪಲತೇವ ವಿಶ್ವಫಲದೇ ಜ್ಞಾನಾತಿರೇಕಾನ್ವಿತೇ| ಪ್ರತ್ಯಕ್ಷೈಕಾಽತ್ರ ಸರಸ್ವತೀ ಪ್ರವರದಾ ಗೀರ್ವಾಣವಿದ್ಯಾಪ್ರದಾ|| ಅನ್ಯಾಽಸ್ತ್ಯನ್ನಪೂರ್ಣಾ ಹಾರಿಣೀ ಸುರಧುನೀ ನೄಣಾಂ ಶುಭಾಕಾಂಕ್ಷಿಣೀ| ಸರ್ವೇಷಾಂ ಪುರವಾಸಿನಾಂ ಸುಖಕರೀ ಸಂಸಾರಸಿಂಧೋಸ್ತರೀಃ ||೬||

ಆದ್ಯಾಽಪ್ಯತ್ರ ಬುಭುಕ್ಷಿತೋ ಹರಪುರೀಂ ನೈವಾಽಸ್ತಿ ಕಶ್ಚಿನ್ನರಃ| ಸರ್ವೇಭ್ಯೋಽಶನಮಾದಧಾತಿ ಸದಯಾ ಮಾತಾನ್ನಪೂರ್ಣೇಶ್ವರೀ || ಪಾಪಂ ತನ್ನಗರಸ್ಥಮಾನವವರಾನ್ ಹಂತುಂ ನ ಶಕ್ತಂ ಯತಃ| ತದ್ಧ್ವಸ್ತ್ವಾ ಸ್ವಯಮೇವ ತಾನ್ ಸುರಧುನೀ ಮಾತೇವ ರಕ್ಷತ್ಯಹೋ ||೭||

ಶ್ರೀ ಕಾಶೀ ವಿಶ್ವಾರಾಧ್ಯ ಗುರುಕುಲ ನಿವಾಸಿ ಗುರುದೇವ ಶಿವಾಚಾರ್ಯಃ ಚಿಕ್ಕಮಣ್ಣೂರು, ಬ. ಮ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಆಗಮನ, ಹಾವನೂರು

ಧಾರವಾಡ ಜಿ|| ಹಾವೇರಿ ತಾ|| ಹಾವನೂರು ಗ್ರಾಮದ ಸಮಸ್ತ ಭಕ್ತಮಾಹೇಶ್ವರರ ಪ್ರಾರ್ಥನೆಯ ಮೇರೆಗೆ ಇದೇ ಮಾಘ ಬ|| ೧೨ (ತಾ|| ೧೯-೨-೩೬) ನೆಯ ಬುಧವಾರ ಉದಯ ೯ ಘಂಟೆಗೆ ಹಾವೇರಿ ಮುಕ್ಕಾಮಿನಿಂದ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳ ಸವಾರಿಯು ದಯಮಾಡಿಸಿತು. ಬಹಿದ್ವಾರದಲ್ಲಿ ಗ್ರಾಮದ ಮಠಾಧಿಕಾರಿಗಳು, ಪಾಟೀಲ ಕುಲಕರ್ಣಿ ಶೆಟ್ಟರು, ಬಣಕಾರರು, ಮೆ|| ನೀಲಕಂಠಶಾಸ್ತ್ರಿ ಇನಾಮದಾರ, ಗಳಗನಾಥ ಇವರು ಮತ್ತು ಮುಸಲ್ಮಾನರ ಮುಖ್ಯಸ್ಥರಾದ ಮೆ|| ಶಾಬೋದೀನ ಸಾಬಮುಲ್ಲಾ, ಕಮರೋದ್ದೀನ ಸಾಬಮುಲ್ಲಾ, ರಾಜೆಸಾಬ ಶಿರಹಟ್ಟಿ, ಹುಸೇನಸಾಬ ವ್ಯಾಗೇರಿ ಇವರು ತಮ್ಮ ಸಮಾಜ ಯಾವತ್ತರನ್ನೂ ಕೂಡಿಕೊಂಡು ಹಿಂದೂ ಮುಸಲ್ಮಾನ ಭೇದವಿಲ್ಲದೆ, ಸಮಸ್ತ ಮತೀಯರನ್ನೊಳಗೊಂಡು ಇತ್ತಕಡೆ ಕಾಲ ಸಮೀಪ ಕಾದಿದ್ದರು. ಮಹಾಸವಾರಿಯು ದಯಮಾಡಿಸುತ್ತಲೇ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಪಾದಸನ್ನಿಧಿಯ ಅಡಿದಾವರೆಗೆರಗಿ ಹಾರತುರಾಯಿಗಳನ್ನರ್ಪಿಸಿದರು. ಒಳ್ಳೆ ಶೃಂಗರಿಸಲ್ಪಟ್ಟ ರಜತಾ ದೋಲಿಕೆಯಲ್ಲಿ ಶ್ರೀ ಜಗದ್ಗುರುಗಳು ಮಂಡಿಸಿದೊಡನೆ ಸಮಸ್ತ ಬಿರುದಾವಳಿಗಳಿಂದ ಅಡ್ಡಪಲ್ಲಕ್ಕಿ ಮಹೋತ್ಸವವು ಅನಂತ ವಾದ್ಯವೈಭವದಿಂದಲೂ ಗಜತುರಗ ಪಂಕ್ತಿಗಳಿಂದಲೂ ಅಜುಬಾಜು ಗ್ರಾಮಗಳಿಂದಲೂ ಅಲ್ಲದೆ ಮದ್ರಾಸ ಇಲಾಖಾ ಶಿರಹಟ್ಟಿ ಲಕ್ಷ್ಮೇಶ್ವರ ಸಂಸ್ಥಾನದ ಹದ್ದಿಯ ಜನರು, ಗುರುದರ್ಶನಾಪೇಕ್ಷಿಗಳಾಗಿ ಆಗಮಿಸಿದ ೮೧೦ ಸಹಸ್ರದ ಮೇಲೆ ಜನರ ಸಮೂಹದೊಡನೆ ಅಲ್ಲಿಂದಲ್ಲೆ ತಳಿರುತೋರಣಮಂಟಪಂಗಳಿಂದ ಅಲಂಕರಿಸಲ್ಪಟ್ಟ ಗ್ರಾಮದ ಮುಖ್ಯ ಮುಖ್ಯ ಯಾವತ್ತೂ ಬೀದಿಗಳಲ್ಲಿ ಅಡ್ಡಪಲ್ಲಕ್ಕಿಯು ಹೊರಟಿತು. ಅಲ್ಲಲ್ಲಿಗೆ ಸುವಾಸಿನಿಯರು ಕಲಶಾರತಿಗಳನ್ನು ಬೆಳಗುತ್ತಿದ್ದರು. ಹಾರತುರಾಯಿಗಳನ್ನು ಹಿಂದು ಮುಸಲ್ಮಾನ ಭೇದವಿಲ್ಲದೆ ಅರ್ಪಿಸುತ್ತಿದ್ದರು. ಉತ್ಸವದ ಸೊಬಗನ್ನು ನೋಡಿ ಪ್ರತಿಒಬ್ಬರು ತಮ್ಮ ತಮ್ಮ ಆನಂದೋದ್ಗಾರಗಳನ್ನು ಹೊಗಳುತ್ತಿದ್ದರು. ಈ ಪ್ರಕಾರವಾಗಿ ಉತ್ಸವವು ಮುಸಲ್ಮಾನರ ಓಣಿಯಲ್ಲಿ ಹೋದೊಡನೆ ಮುಸಲ್ಮಾನರ ಮತೀಯರು ತಮ್ಮ ಯಾವತ್ತು ಸಮಾಜದ ಪರಿಯಿಂದ ಶ್ರೀ ಜಗದ್ಗುರುಗಳವರಿಗೆ ಹಾರತುರಾಯಿ ಫಲಾದಿಗಳನ್ನು ಅರ್ಪಿಸಿದರು. ಮುಂದೆ ಈ ಪ್ರಕಾರವಾಗಿ ಉತ್ಸವವು ನಡೆದು ಮಧ್ಯಾಹ್ನ ೧ ಘಂಟೆಗೆ ಗ್ರಾಮದ ಪ್ರಸಿದ್ಧ ಶ್ರೀಮಂತರಾದ ಮೆ|| ಪಕ್ಕೀರಯ್ಯನವರು ಅರಸ್ತೆಪ್ಪಿನ ಸಂಗನಮಠ ಇವರ ಗೃಹದ ಮುಂಭಾಗದಲ್ಲಿ ಅಲಂಕರಿಸಲ್ಪಟ್ಟ ದರ್ಬಾರದ ಮಂಟಪಕ್ಕೆ ದಯಮಾಡಿಸಿತು. ಉತ್ಸವದ ಬಂದೋಬಸ್ತಿಯನ್ನು ಗುತ್ತಲದಿಂದ ಬಂದಿದ್ದ ಪೋಲೀಸ ಅಧಿಕಾರಿಗಳು ಶಾಂತರೀತಿಯಿಂದ ಇಟ್ಟಿದ್ದರು. ಮಹಾಸವಾರಿಯು ದರ್ಬಾರಮಂಟಪದಲ್ಲಿ ರಚಿಸಿದ ಸಿಂಹಾಸನಪೀಠದಲ್ಲಿ ಮಂಡಿಸಿದೊಡನೆ ಹಾವೇರಿ ಬಣ್ಣದಮಠದ ಶ್ರೀ ಷಟ್‌ಸ್ಥಲಬ್ರಹ್ಮಿಗಳಾದ ಚರಮೂರ್ತಿ ಸ್ವಾಮಿಯವರು ಶ್ರೀ ಜಗದ್ಗುರುಗಳವರ ಉತ್ಸವಕ್ಕೆ ಬಂದ ಯಾವತ್ತು ಹಿಂದೂ ಮುಸಲ್ಮಾನ ಜನರನ್ನುದ್ದೇಶಿಸಿ ಪ್ರಾಸ್ತಾವಿಕ ಭಾಷಣಮಾಡಿದರು. ಅನಂತರ ಶ್ರೀ ಜಗದ್ಗುರುಗಳವರು ತಮ್ಮ ಅಮೃತವಾಣಿಯಿಂದ ಪ್ರತಿಯೊಂದು ಮತದವರು ತಮ್ಮ ತಮ್ಮ ಮತಸ್ಥಾಪನಾಚಾರ್ಯರಲ್ಲಿ ಅತಲವಾದ ಭಕ್ತಿಯನ್ನು ಇಟ್ಟು, ಏಕಮತ್ಯದಿಂದ ವರ್ತಿಸತಕ್ಕದ್ದು ಪ್ರತಿಯೊಬ್ಬ ಮಾನವನ ಆದ್ಯಕರ್ತವ್ಯವಾಗಿದೆಯೆಂದು ಇತ್ಯಾದಿ ಅನಂತ ವಿಷಯಗಳನ್ನು ಅರ್ಪಣೆಕೊಡಿಸಿದರು. ಅದಕ್ಕೆ ಅನುಷ್ಠಾನಸಮಯವಾದ್ದರಿಂದ ಯಾವತ್ತರಿಗೂ ಆಶೀರ್ವಾದವನ್ನಿತ್ತು ಮಹಾಸ್ವಾಮಿಯವರು ಅನುಷ್ಠಾನಕ್ಕೆ ದಯಮಾಡಿಸಿದರು. ಉತ್ಸವಕ್ಕೆ ಆಗಮಿಸಿದ ಭಕ್ತಮಾಹೇಶ್ವರರಿಗೆ ಶ್ರೀಮಂತ ಮೆ|| ಗದಿಗಯ್ಯನವರು, ಪಕ್ಕೀರಯ್ಯನವರು ಅನ್ನಸಂತರ್ಪಣೆಯನ್ನು ಮಾಡಿದರು. ಶ್ರೇಷ್ಠತರವಾದ ಮಹಾಶಿವರಾತ್ರಿಯ ಸಂಧಿಗೆ ಶ್ರೀ ಜಗದ್ಗುರು ಮಹಾಸವಾರಿಯು ದಯಮಾಡಿಸಿದ್ದರಿಂದ ಇಲ್ಲಿಯ ಜನರ ಆನಂದಕ್ಕೆ ಪಾರವೇ ಇರಲಿಲ್ಲ. ಮಹಾಶಿವರಾತ್ರಿಯ ದಿವಸ ಸದರಿ ಗದಿಗಯ್ಯನವರು, ಮತ್ತು ಪಕ್ಕೀರಯ್ಯನವರು ಮಹಾಸನ್ನಿಧಿಯ ಪೂಜೋತ್ಸವಾದಿಗಳ ಯಾವತ್ತೂ ಖರ್ಚುಗಳನ್ನು ವಹಿಸಿಕೊಂಡು ತುಂಗಭದ್ರಾನದೀತೀರದಲ್ಲಿ ಭವ್ಯವಾದ ಮಂಟಪವನ್ನು ರಚಿಸಿ ಅಲ್ಲಿಯೇ ಜಗದ್ಗುರುಗಳವರು ಅನುಷ್ಠಾನವನ್ನು ನೆರವೇರಿಸುವಂತೆ ಏರ್ಪಡಿಸಿದ್ದರು. ಮಹಾಶಿವರಾತ್ರಿಯ ಪರ್ವಕಾಲ, ಶ್ರೀ ಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಜಯಂತಿಯ ಪುಣ್ಯತಿಥಿ, ಪವಿತ್ರವಾದ ತುಂಗಭದ್ರಾ ನದೀತೀರ ಶ್ರೀ ಜಗದ್ಗುರುಗಳವರ ಸಾನಿಧ್ಯವೆಂದಮೇಲೆ ಅಂದಿನ ಪೂಜೋತ್ಸವಾದಿ ಕಾರ್ಯಗಳಲ್ಲಿ ಭಾಗಿಗಳಾಗಿ ಶ್ರೀ ಜಗದ್ಗುರುಗಳವರ ತೀರ್ಥಪ್ರಸಾದವನ್ನು ಸೇವನಗೈದ ಮಾನವನ ಪುಣ್ಯಕ್ಕೆ ಅಂಥ ಸುಸಂಧಿಯನ್ನು ಒದಗಿಸಿಕೊಟ್ಟ ಮಹಾನುಭಾವರಾದ ಮೆ|| ಗದಿಗೆಯ್ಯನವರು ಮತ್ತು ಪಕ್ಕೀರಯ್ಯನವರ ಪುಣ್ಯಕ್ಕೆ ಎಣೆಯೇ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಅಂದಿನ ಶಿವರಾತ್ರಿಯ ದಿವಸ ಸ್ಥಳಪರಸ್ಥಳಗಳಿಂದ ಸಹಸ್ರಾರು ಜನ ಭಕ್ತಮಾಹೇಶ್ವರರು ಬಂದಿದ್ದರಲ್ಲದೆ, ಹಂದಿಗನೂರ ಶ್ರೀಮಂತ ಸಣ್ಣಮುರಿಗಪ್ಪನವರು, ಮ ರಾವಸಾಹೇಬರು ಮೊದಲಾದ ದೇಸಾಯಿಮಂಡಳಿಯವರು ಬಂದಿದ್ದರು. ಶ್ರೀ ಜಗದ್ಗುರುಗಳವರ ಮುಕ್ಕಾಂ ಈ ಗ್ರಾಮಕ್ಕೆ ದಯಮಾಡಿಸಿದ ಲಾಗಾಯ್ತು ಮುಂದಕ್ಕೆ ಪ್ರಯಾಣಬೆಳಸುವವರೆಗೂ ಮೆ|| ಮಳೆಯ್ಯ ಕರಬಸಯ್ಯ ಹಿರೇಮಠ ಮ ರುದ್ರಯ್ಯನವರು ಶಿರಕೋಳಮಾಸ್ತರ ಇವರು ಮಹಾಸನ್ನಿಧಿಯ ಸೇವೆಯಲ್ಲಿ ತತ್ಪರರಾಗಿದ್ದರು.

ಷಡಕ್ಷರಸ್ವಾಮಿ, ವಿರಾಳಭಟ್ಟಮಠ,
ಜಾಗಟಗೇರಿ, ಕೊಟ್ಟೂರ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀ ಜಗದ್ಗುರು

ಪಂಡಿತಾರಾಧ್ಯ ವಿಶ್ವಾರಾಧ್ಯರ

ಜಯಂತೀಮಹೋತ್ಸವ

ಹಿರೇಹಡಗಲಿ

ಬಳ್ಳಾರಿ ಜಿ|| ಹಿರೇಹಡಗಲಿ ಗ್ರಾಮದಲ್ಲಿ ಯುವ ಸಂ|| ಮಾಘ ಬ|| ೧೪ ಶುಕ್ರವಾರದ ದಿವಸ ಗ್ರಾಮದ ಸಮಸ್ತ ವೀರಶೈವರು ಸ್ನಾನಾದಿಕ್ರಿಯೆಗಳನ್ನು ತೀರಿಸಿಕೊಂಡು ಶ್ರೀ ಜಗದ್ಗುರು ಪಂಚಾಚಾರ್ಯಭಜನಾ ಮಂದಿರದಲ್ಲಿ ಸೇರಿ, ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಪಂಚಲೋಹದ ಮೂರ್ತಿಗಳನ್ನು ದಿವ್ಯ ಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ, ಶೃಂಗರಿಸಲ್ಪಟ್ಟ ಪಲ್ಲಕ್ಕಿಯಲ್ಲಿರಿಸಿ ಸಕಲವಾದ್ಯವೈಭವದಿಂದಲೂ, ತರುಣಸಂಘದ ಮನೋಹರವಾದ ಭಜನೆಯಿಂದಲೂ, ಶ್ರೀ ಗುರುವರ್ಗದ ಮಾಹೇಶ್ವರರು ಪರಿಸುವ ಜಗದಾಚಾರ್ಯರ ಮಹಿಮಾತಿಶಯಬೋಧಕಗಳಾದ ಪರಾಕು ಜಯಜಯಕಾರಗಳಿಂದಲೂ ರಂಭಾಸ್ತಂಭ ತಳಿರು ತೋರಣಗಳಿಂದಲಂಕರಿಸಲ್ಪಟ್ಟ ಬೀದಿಗಳಲ್ಲಿ ವಿಶೇಷ ಜನಸಮುದಾಯದೊಡನೆ ಉತ್ಸವವು ಹೊರಡಲು ಅಲ್ಲಲ್ಲಿಗೆ ಸ್ವಮತಪರಮತೀಯರು ಭಕ್ತಿಯಿಂದ ಜಗದಾಚಾರ್ಯರ ಭಾವಚಿತ್ರಗಳಿಗೆ ಕಾಯಿ ಕರ್ಪೂರ ಪುಷ್ಪಹಾರಗಳನ್ನರ್ಪಿಸಿ, ಆನಂದದಿಂದವಲೋಕಿಸುತ್ತಿದ್ದರು. ಈ ಪ್ರಕಾರವಾಗಿ ಉತ್ಸವವು ಜರಗುತ್ತ ಬಂದು ಮೆ|| ಕಬ್ಬಿಣಮಠದ ಕೊಟ್ರಯ್ಯನವರ ಗೃಹಕ್ಕೆ ತಲಪಿತು. ಅಲ್ಲಿ ಏರ್ಪಡಿಸಿದ್ದ ಜಯಂತೀಸಮಾರಾಧನೆಯು ತೀರಿದನಂತರ ಪುನಃ ಅದೇರಾತ್ರಿಗೆ ಸದರಿಯವರ ಮಂದಿರದಿಂದ ಉತ್ಸವವು ಹೊರಟು ಭಜನಾಮಂದಿರಕ್ಕಾಗಮಿಸಿ, ದಿವ್ಯಪೀಠದಲ್ಲಿ ಭಾವಚಿತ್ರಗಳನ್ನು ಮೂರ್ತಗೊಳಿಸಿ ಶ್ರೀ ಪಂಚಾಚಾರ್ಯರ ಭಜನಾನಂತರ ಮಂಗಲವನ್ನು ಮಾಡಿದ ಬಳಿಕ ಫಲಾಶೀರ್ವಾದಗಳು ಕೊಡಲ್ಪಟ್ಟವು. ಈ ಉತ್ಸವದಲ್ಲಿ ಪಂಚಾಚಾರ್ಯಭಜನಾಸಂಘದ ತರುಣರು ಅತ್ಯಂತಭಕ್ತಿಯಿಂದ ಸೇವೆಮಾಡಿದ್ದು ವಿಶೇಷಶ್ಲಾಘನೀಯವಾಗಿರುವದಲ್ಲದೆ, ಮೆ|| ಮಾನಿಹಳ್ಳಿ ಪುರವರ್ಗಮಠದ ಪಾಟೀಲು ಶಿವರುದ್ರಗೌಡರು ಕಬ್ಬಿಣಮಠದ ಕೊಟ್ರಯ್ಯನವರ ತಮ್ಮಂದಿರು, ಅಲಿಡಿಯ ದೊಡ್ಡ ಕೊಟ್ರಪ್ಪನವರು, ಕಲ್ಲೋಟಿ ಕೊಟ್ರಬಸಪ್ಪನವರು ವಿಶೇಷ ಶ್ರದ್ಧಾದರದಿಂದ ಉತ್ಸವಭಾಗಿಗಳಾಗಿದ್ದರು—ಆವರೆ ಈ ದಿವಸವೇ ಮಹಾಶಿವರಾತ್ರಿಯೋಗವೂ ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಯೋಗವೂ ಒದಗಿರುವದು ಕಬ್ಬಿನಮೇಲೆ ಜೇನು ಇಟ್ಟಂತಾಗಿರುವದು.

ಓರ್ವ ಗುರುಭಕ್ತ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ.

ಫಾಲ್ಗುಣ ಶುದ್ಧ ಚತುರ್ದಶಿ (6—3—36) ಶುಕ್ರವಾರ

ಶ್ರೀ ಕೊಲ್ಲಿಪಾಕಿ ಸೋಮನಾಥಲಿಂಗದಿಂದ ಶ್ರೀ ಜಗದ್ಗುರು
ರೇಣುಕಾಚಾರ್ಯರ ಅವತಾರವು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುಣ ಶುದ್ಧ ಚತುರ್ದಶಿ ಶುಕ್ರವಾರ **(6-3-36)** ದಿವಸ ಭರತಖಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತಭಕ್ತಿಯಿಂದ ನೆರವೇರಿಸಬೇಕು. ಶ್ರೀರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಾಪ್ರಭಾವದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು. ಕಾಂಚೀಕ್ಷೇತ್ರದಲ್ಲಿರುವ ವಿಷ್ಣುಮೂರ್ತಿಯು ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದ ವೈದ್ಯಲಿಂಗಂ ಮತ್ತು ಹುಚ್ಚ ಎಂಬ ಇಬ್ಬರು ಖೈದಿಗಳು ಅಲ್ಲಿಂದ ತಪ್ಪಿಸಿಕೊಂಡು ಪರಾರಿಯಾಗಿರುವರೆಂದು ತಿಳಿದುಬರುತ್ತದೆ

ರಾಜಧಾನಿಯ ಚಾಮರಾಜಮೊಹಲ್ಲಾದಲ್ಲಿ ವಾಸವಾಗಿರುವ ವಿದ್ವಾನ್ ಆನೇಕಲ್ ಶ್ರೀನಿವಾಸಾಚಾರ್ಯರ ಮನೆಗೆ ಕಳ್ಳರು ನುಗ್ಗಿ ಸುಮಾರು 2000 ರೂಪಾಯಿ ಬಾಳುವ ಒಡವೆವಸ್ತ್ರಗಳನ್ನು ಅಪಹರಿಸಿಕೊಂಡು ಹೋದರೆಂದು ಕೇಳುತ್ತೇವೆ

ಕಳೆದ 23ನೆಯ ತಾರೀಖಿನ ರಾತ್ರಿ ಮರಿಯಿಂದ ಕೂಡಿದ ಒಂದು ಹೆಣ್ಣು ಚಿರತೆಯು ಅರವನೆಯ ಗಜಶಾಲೆಯಲ್ಲಿ ಬಿಟ್ಟಿದ್ದ ಒಂದು ಹಸವನ್ನು ಕೊಂದು ಭಕ್ಷಿಸಿಂದು ಹೋಗಿತ್ತು ಚಿರತೆಗಳ ಪದ್ಧತಿಯಂತೆ ಮಾರನೇ ರಾತ್ರಿಯು ಅದು ಅಲ್ಲಿಗೆ ಬರುವದೆಂದು ಶಿಕಾರಿಗಳು ಮರೆಯಾಗಿ ಕಾದಿದ್ದು ಸುಮಾರು ರಾತ್ರಿ ೭ ಘಂಟೆಯಲ್ಲಿ ಗುಂಡಿನಿಂದ ಹೊಡೆದು ಕೊಂದರು ಜೊತೆಯಲ್ಲಿ ಬಂದಿದ್ದ ಮರಿಯು ತಪ್ಪಿಸಿಕೊಂಡು ಪರಾರಿಯಾಯಿತಂತೆ!

ಕಳೆದತಿಂಗಳು 27ನೇ ತಾರೀಖು ಗುರುವಾರ ಸಾಯಂಕಾಲ ಸುಮಾರು 4 ಘಂಟೆಸಮಯದಲ್ಲಿ ಮಹಾಪ್ರಭುವರ್ಯರ ಅಂಗರಕ್ಷಕರಾದ ಕಮ್ಯಾಂಡೆಂಟ್ ಲೆಫ್ಟಿನೆಂಟ್ ಕರ್ನಲ್ ಎಸ್ ಗೋಪಾಲರಾವ್‌ರವರು ತಮ್ಮ ಗಾಡಿಯಲ್ಲಿ ಕುಳಿತುಕೊಂಡು ಮನೆಯಿಂದ ಅರಮನೆ ಗ್ಯಾರೇಜ್‌ಬಳಿ ಹೋಗುತ್ತಿದ್ದರು ಕೆಲಸದಿಂದ ತೆಗೆಯಲ್ಪಟ್ಟಿದ್ದ ಅರಮನೆಯ ಮುನಿವೆಂಕಟಪ್ಪನೆಂಬವನು ತನ್ನನ್ನು ಡಿಸ್‌ಮಿಸ್‌ಮಾಡಿದ ಮಾತ್ಸರ್ಯದಿಂದೊಡಗೂಡಿ ಆಯುಧಧಾರಿಯಾಗಿ ಬಂದು ತನ್ನ ಕಷ್ಟನಷ್ಟಗಳನ್ನು ಹೇಳಿಕೊಂಡನು ಮ|| ಗೋಪಾಲರಾವ್‌ರವರು ಅವನ ಹೇಳಿಕೆಗೆ ಮನಗೊಡದೆ ರಥವನ್ನು ಮುಂದೋಡಿಸಿದರು ಅವನು ಅಷ್ಟರಲ್ಲಿ ಕೋಪೋದ್ರೇಕದಿಂದ ಪರವಶನಾಗಿ ರಹಸ್ಯವಾಗಿಟ್ಟಿದ್ದ ತೀಕ್ಷ್ಣವಾದ ಆಯುಧವನ್ನು ಕೈಗೆ ತೆಗೆದುಕೊಂಡು ರಥಕ್ಕೆ ಧುಮುಕಿ ರಾಯರನ್ನು ತಿವಿದುಬಿಟ್ಟನು ಬಹಿಸೇಟು ಭಗವಂತನ ಕೃಪೆಯಿಂದ ಅಪಾಯಸ್ಥಳಕ್ಕೆ ಬೀಳದೆ ಬನ್ನಿನಮೇಲೆ ಬಿದ್ದುದರಿಂದ ಮ|| ರಾ|| ಗೋಪಾಲರಾವ್‌ರವರು ಪ್ರಾಣಾಪಾಯದಿಂದ ಪಾರಾದರು ಅಷ್ಟರಲ್ಲಿ ಇವರ ರಥವನ್ನು ಹೊಡೆಯುತ್ತಿದ್ದ ಕೋಚುಮನವನು ಗಾಡಿಯಿಂದಿಳಿದು ಹತ್ಯಾಕಾರಿಯನ್ನು ಹಿಡಿದುಕೊಳ್ಳಲು ಅವನಿಗೂ ಬಾಕಿನಿಂದ ಚುಚ್ಚಿ ಓಡಿಹೋಗುತ್ತಿದ್ದನು ಅಷ್ಟರಲ್ಲಿ ಸುತ್ತುಮುತ್ತಲಿರುವ ಸಿಪಾಯಿಗಳು ಬೆನ್ನಟ್ಟಿ ಹಿಡಿದರು ಮುನಿವೆಂಕಟಪ್ಪನಿಗೂ ಗಾಯಗಳಾಗಿವೆ ಅಲ್ಲಿಂದ ಗೋಪಾಲರಾವ್‌ರವರನ್ನೂ, ಅವರ ಕೋಚ್‌ಮ್ಯಾನನನ್ನೂ, ಕೊಲೆಗಡಕನನ್ನೂ ಆಸ್ಪತ್ರೆಗೆ ಸಾಗಿಸಿದರು ಗಾಯಗೊಂಡ ಗೋಪಾಲರಾವ್‌ರವರು ಚಿಕಿತ್ಸೆಯಿಂದ ಗುಣಮುಖರಾಗುತ್ತಿದ್ದಾರೆ ಅದೇ ದಿವಸವೇ ಪ್ರಭುವರ್ಯರು ಪದಚ್ಯುವರ ಆರೋಗ್ಯವನ್ನು ನೋಡಿಕೊಂಡುಬಂದರು ಹೀಗೆ ಹಗಲುಹೊತ್ತಿನಲ್ಲಿ ಬಹುಜನಗಳು ಸಂಚರಿಸುವ ರಾಜಮಾರ್ಗದಲ್ಲಿಯೇ ಹಿಂದುಮುಂದಿನ ಲೋಚನೆಯಿಲ್ಲದೆ ಇಂತಹ ಘೋರಕೃತ್ಯವನ್ನು ನಡೆಯಿಸಿದ ಘಾತುಕನ ಸಾಹಸವನ್ನು ಎಷ್ಟು ಹೇಳಿದರೂ ತೀರದು ಶ್ರೀ|| ಗೋಪಾಲರಾಯರು ಅಂಥ ಉನ್ನತ ಪದವಿಯಲ್ಲಿದ್ದು ರಾಜಕಟಾಕ್ಷಕ್ಕೆ ಪೂರ್ಣಭಾಗಿಗಳಾಗಿರುವುದಲ್ಲದೆ ತಮ್ಮ ಅಧೀನದಲ್ಲಿರುವ ಜನಗಳಲ್ಲಿಯಾಗಲಿ ಸಾಮಾನ್ಯಜನಗಳಲ್ಲಿಯಾಗಲಿ ಕರುಣೆಯನ್ನು ತೋರಿಸುವುದೂ, ಬಡಬಗ್ಗರಿಗೆ ಯಥೋಚಿತ ಸಹಾಯಮಾಡುವುದೂ ಇವರ ನೈಜವಾದ ಸ್ವಭಾವವಾಗಿರುವುದು ಅಲ್ಲದೆ ದೇವರಲ್ಲಿಯೂ ಗುರುಜನರಲ್ಲಿಯೂ ಭಕ್ತಿಯುಳ್ಳವರಾಗಿ ಅತ್ಯಂತಸುಸ್ವಭಾವುಳ್ಳವರಾಗಿದ್ದಾರೆ ಅನೇಕರು ಅಧಿಕಾರದರ್ಪದಿಂದ ಉದ್ಧಾಂತರಾಗುವುದುಂಟು, ಆದರೆ ಇವರುಮಾತ್ರ ಬಹುಸಣ್ಣದರಿಂದ ಕಷ್ಟಪಟ್ಟು ಉನ್ನತಪದವಿಗೇರಿದವರಾದ್ದರಿಂದ ಅಪ್ರಿಕರಾದ ಬಡವರಿಗೆ ಅನೇಕವಿಧವಾದ ಸಹಾಯ ಸಂಪತ್ತನ್ನೊದಗಿಸುವಮೂಲಕ ಎಲ್ಲರಿಂದಲೂ ಸ್ತುತ್ಯರಾಗಿದ್ದಾರೆ ಈ ಧರ್ಮಾತ್ಮರಿಗೊದಗಿದ್ದ ಅಪಮೃತ್ಯುವು ಈಶ್ವರನ ಕೃಪೆಯಿಂದ ಇಷ್ಟರಲ್ಲಿಯೇ ಪರ್ಯವಸಾನವಾದುದಕ್ಕಾಗಿ ನಾವು ತುಂಬಾ ಸಂತೋಷಪಡಬೇಕಾಗಿದೆ ಶ್ರೀ ಪರಮೇಶ್ವರನು ಇವರಿಗೆ ಬೇಗನೆ ಆರೋಗ್ಯಭಾಗ್ಯವನ್ನೀಯಲೆಂದು ಪ್ರಾರ್ಥಿಸುವೆವು

ವರ್ತಮಾನಸಂಗ್ರಹ.

ಆನೆಕಲ್ಲಿನ ಅನಾಹುತ ಕೋರ್ಲಕುಂಟೆ.

ತಾ|| 11 2 36 ನೇ ರಾತ್ರಿ 9 ಘಂಟೆ ಸಮಯಕ್ಕೆ ಇಲ್ಲಿ ಮಳೆ ಪ್ರಾರಂಭವಾಗಿ ವಿಶೇಷವಾಗಿ ಆನೆಕಲ್ಲುಗಳು ಬಿದ್ದು ಭತ್ತದ ಪೈರೆಲ್ಲಾ ಕತ್ತರಿಸಿಹೋಗಿದೆ ಇಲ್ಲಿದ್ದ 1 2 ತೋಟಗಳಲ್ಲಿ ವೀಳೆಯದಎಲೆಬಳ್ಳಿ, ಅಡಕೆಮರ ಇವುಗಳ ಎಲೆ, ಗರಿಗಳೆಲ್ಲಾ ಬಿದ್ದುಹೋಗಿವೆ ಕುಷ್ಕಿಹೊಲದಲ್ಲಿದ್ದ ಹರಳುಗಿಡ, ಹತ್ತಿಗಿಡ, ಜೋಳದಪೈರು ಇದೆಲ್ಲಾ ನಾಶವಾಗಿದೆ ಇದರಿಂದ ರೈತರಗೋಳು ಹೇಳತೀರದಾಗಿದೆ ಈ ಆನೆಕಲ್ಲು ಒಂದೊಂದು ಕಡೆ ತಿಪ್ಪಕಟ್ಟೆ 1 ಅಡಿಯಿಂದ 2 2½ ಅಡಿವರೆಗೆ ಬಿದ್ದಿತ್ತು ಇದು 2-3 ದಿವಸ ಹಾಗೇ ಇತ್ತು ಸುಮಾರು 70 80 ವರ್ಷದವರು ಈ ರೀತಿ ಆದದನ್ನು ತಾವು ಯಾವಾಗಲೂ ಕಂಡಿರಲಿಲ್ಲವೆಂದೂ, ಈ ಪ್ರಾಂತ್ಯದಲ್ಲಿ ಇದರಂತೆ ಅನೇಕಕಡೆ ಆಗಿರುತ್ತದೆಂದೂ ಗಾ ರೆ ಚನ್ನಮಲ್ಲಪ್ಪನವರು ತಿಳುಹಿಸುತ್ತಾರೆ

ಜಪಾನಿನಲ್ಲಿ ಭಯಂಕರ ಪರಿಸ್ಥಿತಿ

ಜಪಾನಿನ ಮುಖ್ಯನಗರವಾದ ಟೋಕಿಯೋನಗರದಲ್ಲಿ ಮಿಲಿಟರಿಯವರ ಎತೂರಿಯು ನಡೆದು ಅನೇಕ ರಾಜಕೀಯಪ್ರವೀರ ಕೊಲೆಯಾಗಿರುವುದಾಗಿಯೂ, ಮಹಾಪ್ರಧಾನರ ಮನೆ ಪೋಲೀಸುಕಛೇರಿ, ಒಳನಾಡಿನ ಮಂತ್ರಿಗಳಮನೆ ಮೊದಲಾದುವುಗಳನ್ನೆಲ್ಲಾ ಸೈನಿಕರು ಮುತ್ತಿರುವುದಾಗಿಯೂ ಮತ್ತು ಜಪಾನಿನಲ್ಲೆಲ್ಲಾ ಮಾರ್ಷಲ್‌ಲಾ ಆಚರಣೆಯಲ್ಲಿರುವುದಾಗಿಯೂ ವರ್ತಮಾನಪಡೆ ಸೈನ್ಯ ಇಲಾಖೆಯು ಮಿಕಡೋ ಚಕ್ರವರ್ತಿಗಳಿಗೊಬ್ಬರಿಗಲ್ಲದೆ, ಮತ್ತಾರಿಗೂ ಅಡಿಯಾಳಾಗಿರಕೂಡದೆಂಬ ಸಲಹೆಗೆ ಮಂತ್ರಿಮಂಡಲದವರು ಒಪ್ಪದಿದ್ದಕಾರಣ ಮಿಲಿಟರಿಯವರು ಅಸಮಾಧಾನಹೊಂದಿ ಗಲಭೆನಡೆಸಿರುತ್ತಾರೆ ಕ್ಯಾಪ್ಟನ್ ಸೋನಾಕಾರವರ ಕೈಕೆಳಗೆ ಸೈನಿಕರು ಹೋಗಿ, ಅಡ್ಮಿರಲ್ ಕೌಂಟ್‌ಸೈಟೋ, ಮಹಾಪ್ರಧಾನ ಒಕಾದೊ ಮತ್ತು ಹಣಕಾಸಿನ ಮಂತ್ರಿಗಳಾದ ತಕಹಾಸಿ ಇವರುಗಳನ್ನು ಕೊಂದರೆಂದೂ, ಕೌಂಟ್‌ಮಕಿನೋ ಮತ್ತು ಜನರಲ್ ಸುಜುಕಿ ಇವರುಗಳು ತಪ್ಪಿಸಿಕೊಂಡರೆಂದೂ, ಮಿಲಿಟರಿ ಶಿಕ್ಷಣದ ಇನ್‌ಸ್ಪೆಕ್ಟರ್ ಜನರಲ್ ವಾಟನಾಬಯವರಿಗೆ ಬಹಳ ಗಾಯಗಳಾಗಿರುವುವೆಂದೂ ತಿಳಿದುಬರುತ್ತದೆ

ಇಟಲಿ ಅಬ್ಸೀನಿಯಾ ಯುದ್ಧ

ಉತ್ತರರಣರಂಗದಲ್ಲಿ ಇಟಲಿಯವರು ತಮ್ಮ ಸೈನ್ಯದಲ್ಲಿರುವ ಹೋರಾಟಶಕ್ತಿಗಳಿಗೆ ಹುಲ್ಲನ್ನು ಯೂರೋಪಿನಲ್ಲಿ ಕೊಂಡು ಹಡಗಿನಲ್ಲಿ ತುಂಬಿ ಕಳುಹಿಸುತ್ತಿರುವರೆಂದು ಈಜಿಪ್ಟಿನಿಂದ ಸಮಾಚಾರ ಬಂದಿದೆ

ಡೆಸ್ಸಿಯಲ್ಲಿರುವ ರೆಡ್‌ಕ್ರಾಸ್ ವಿಮಾನವನ್ನು ನಾಶಪಡಿಸಲು ಇಟಲಿಯವರು ಮಾಡಿದ ಪ್ರಯತ್ನವೆಲ್ಲವೂ ನಿಷ್ಫಲವಾಯಿತೆಂದು ತಿಳಿದು ಬಂದಿದೆ

ಮಾಕಲ್ಲೆಯ ಬಳಿ ಅಬ್ಸೀನಿಯಾ ಸೈನ್ಯವನ್ನು ಸೋಲಿಸಿ ತಾವು ಅನೇಕ ಮೈಲಿಗಳು ಮುಂದುವರಿದಿರುವುದಾಗಿ ಇಟಲಿಯವರು ಪ್ರಕಟಿಸಿದ್ದರ, ಆದರೆ ಅಬ್ಸೀನಿಯರು ತಮಗೆ ಅಂಥ ಸೋಲಾಗಲಿಲ್ಲವೆಂದೂ ಇಟಲಿಯವರು ಮಾಕಲ್ಲೆಗೆ ದಕ್ಷಿಣದಲ್ಲಿ ಸುಸಜ್ಜಿತರಾಗಿರುವರೆಂಬುದನ್ನು ತಿಳಿದು ತಮ್ಮ ಚಲನವನ್ನು ಬದಲಿಸಲು ಹಿಂದಕ್ಕೆ ಹೋಗಲು ಪ್ರಯತ್ನಿಸಿದರೆಂದೂ ಅಷ್ಟರಲ್ಲಿ ಇವರು ಹಿಮ್ಮೆಟ್ಟುತ್ತಿರುವುದನ್ನು ತಿಳಿದು ಇಟಲಿಯವರು ಮೇಲೆ ಬೀಳಲು 12ರಿಂದ 17ನೇ ತಾರೀಖಿನವರೆಗೆ ಅನೇಕಕಡೆಗಳಲ್ಲಿ ಹೊಡೆದಾಟವಾದವೆಂದೂ ಅಬ್ಸೀನಿಯರಿಗಿಂತ ಇಟಲಿಯವರಿಗೇ ವಿಶೇಷನಷ್ಟವಾಗಿರುವುದೆಂದೂ ತಿಳಿಸುತ್ತಾರೆ ಅಬ್ಸೀನಿಯರು ಹಗಲೆಲ್ಲಾ ಗುಹೆ ಬೆಟ್ಟ ಗುಡ್ಡಗಳಲ್ಲಿ ಅವಿತುಕೊಂಡಿದ್ದು ರಾತ್ರಿ ವೇಳೆ ಶತ್ರುಗಳ ಮೇಲೆ ಬಿದ್ದು ವಿಶೇಷ ತೊಂದರೆ ಕೊಡುತ್ತಿರುವುದಾಗಿ ತಿಳಿದುಬರುತ್ತದೆ

ಇಟಲಿಯವರು ಪಶ್ಚಿಮದಲ್ಲಿ ಹೋರಾಡುತ್ತಿರುವ ತಮ್ಮ ಸೈನ್ಯವು ಅಬ್ಸೀನಿಯದವರ ಮುಖ್ಯಸ್ಥಳವಾದ ಅಂಬಾಅಲಾಜಿಗೆ 10 ಮೈಲಿ ದೂರದಲ್ಲಿರುವುದಾಗಿ ಹೇಳುತ್ತಾರೆ

ಗೊಜ್ಜಾರಿ ಗೌರ್ನರ ಕಡೆಯ ಅಬ್ಸೀನಿಯಾ ಸೈನ್ಯದ ಎರಡು ತಂಡಗಳು ಅಕಸ್ಮಾತ್ತಾಗಿ ಪಶ್ಚಿಮದಲ್ಲಿ ಇಟಲಿಯವರ ಮದ್ದು ಗುಂಡುಗಳನ್ನು ಕೂಡಿಸಿಟ್ಟಿದ್ದ 16 ಮನೆಗಳನ್ನೂ ಫಿರಂಗಿ ಗಾಡಿಗಳ ಎರಡು ಮನೆಗಳನ್ನೂ ನಾಶಪಡಿಸಿ 412 ಮಂದಿ ಇಟಲಿಯ ಸೈನಿಕರನ್ನು ಕೊಂದು ಹಿಂತಿರುಗಿರುವುದಾಗಿ ಸುದ್ದಿ ಅನೇಕ ಯುದ್ಧ ಸಾಮಗ್ರಿಗಳು ಅಬ್ಸೀನಿಯಕ್ಕೆ ಕಳುಹಿಸಲು ಬ್ರಿಟಿಷ್ ಸೋಮಾಲಿ ಲ್ಯಾಂಡಿನ ರೇವಿನಲ್ಲಿ ಬಂದು ಬಿದ್ದಿರುವುದಾಗಿಯೂ ಮತ್ತು 10 12 ಲಾರಿಗಳು ಅವುಗಳನ್ನು ಹಗಲು ರಾತ್ರಿಯೆನ್ನದೆ ಸಾಗಿಸುತ್ತಿರುವುದಾಗಿಯೂ ತಿಳಿದುಬಂದಿದೆ

ದಕ್ಷಿಣರಂಗದಲ್ಲಿ ಇಟಲಿಯ ಕಡೆ ಎರಿಟ್ರಿಯದ 1000 ದೇಶೀ ಸೈನಿಕರು ಸೈನ್ಯವನ್ನು ಬಿಟ್ಟು ಬ್ರಿಟಿಷ್ ಕೆನ್ಯಾವಿಗೆ ತಪ್ಪಿಸಿಕೊಂಡು ಹೋದರು ಅವರನ್ನು ಹಿಡಿತರಲು ಮಾಡಿದ ಪ್ರಯತ್ನಗಳೆಲ್ಲಾ ನಿಷ್ಫಲವಾದವು ಅಕ್ಟೋಬರ್ ತಿಂಗಳಿಂದ ಸುಮಾರು 10 ಸಾವಿರ ಸೈನಿಕರು ಈ ರೀತಿ ಇಟಲಿ ಸೈನ್ಯವನ್ನು ತ್ಯಜಿಸಿ ಹೋಗಿರುವರೆಂದು ಹೇಳಲಾಗಿದೆ

ಪ್ರಸಿದ್ಧ ಪತ್ರಿಕೆ

ವೀರಶೈವಮಾರ್ಗನಿರತರಾದ ಮ|| ರಾ|| ಮಾಸ್ಟರ್ ಎ ಚನ್ನಪ್ಪನವರು ಪ್ರತಿವರುಷವೂ ತಪ್ಪದೆ ಆಚರಿಸುತ್ತಿರುವ ವೀರಶೈವದ ಆದಿಮತಸ್ಥಾಪನಾಚಾರ್ಯರಾದ ಶ್ರೀ ಮಜ್ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವನ್ನು ಪದ್ಧತಿಯಂತೆ ಇದೇ ಯುವನಾಮ ಸಂ|| ಫಾ|| ಶು ೧೪ (ತಾ 6 3-36) ನೇ ಶುಕ್ರವಾರ ದಿವಸ ಅರಸಿಕೆರೆ ತಾಲ್ಲೋಕು ಹೊನ್ನಕಟ್ಟೆಗ್ರಾಮದಲ್ಲಿ ನಡೆಯಿಸುವಂತೆ ನಿರ್ಧರಿಸಿರುವಪ್ರಯುಕ್ತ ಸಮಸ್ತ ಗುರುಭಕ್ತಮಹಾಶಯರು ಮೇಲ್ಕಂಡ ಶುಕ್ರವಾರ ಹೊನ್ನಕಟ್ಟೆಗ್ರಾಮಕ್ಕೆ ದಯಮಾಡಿಸಿ ಪರಮಪವಿತ್ರವಾದ ಗುರುಕಾರ್ಯವನ್ನು ಭಕ್ತಿಪೂರ್ವಕವಾಗಿ ನೆರವೇರಿಸಿ ಪ್ರಸಾದವನ್ನು ಸ್ವೀಕರಿಸಿ ಶ್ರೀ ಗುರುರೇಣುಕನ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದು ಈ ಮೂಲಕ ಪ್ರಾರ್ಥಿಸುವ,

ಹೆಚ್ ಬಿ ಮರಿಸಿದ್ಧಪ್ಪ ಮತ್ತು ಸಿದ್ಧರಾಮಣ್ಣ

ಸ್ವೀಕಾರ

ರಾಯಚೂರ ಡಿ|| ಗಂಗಾವತಿ ತಾ|| ಕನಕಗಿರಿ ಮ|| ತೆಗ್ಗಿನಮನೆ ನಾಗಣ್ಣನವರ ಪುತ್ರಿ ಚಿ| ಕುಂ|| ಸೌ|| ಅಮರಾಂಬೆಯನ್ನು ಇದೇ ಗ್ರಾಮದ ಮ|| ರಾ| ಗಂಗಾಧರಪ್ಪ ತಿಪ್ಪನಾಳು ಇವರಿಗೆಕೊಟ್ಟುನೆರವೇರಿಸಿದ ವಿವಾಹ ಸಮಾರಂಭದಲ್ಲಿ ನಾಗಣ್ಣನವರಿಂದ ತೆಗೆಯಿಸಿದ 1 ರೂ ಯು ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಪಂಚಾಕ್ಷರ ಶಿವಾಚಾರ್ಯರು ಬೃಹನ್ಮಠ ಇವರ ದ್ವಾರಾ ತಲ್ಪಿರುತ್ತದೆ

ರಾಜಧಾನಿಯ ಹಳೆಅಗ್ರಹಾರದಲ್ಲಿರುವ ಮ|| ರಾ|| ಮಿರಾಯಿ ಸುಬ್ಬಣ್ಣನವರ ಪುತ್ರಿ ಹ|| ಕುಂ|| ಕೊ|| ಚಿ| ಸೌ|| ಸಿದ್ಧಮ್ಮನನ್ನು ನಗರ್ತಯಲ್ಲಿರುವ ಲೇಟ್ ಸಿದ್ಧಪ್ಪನವರ ಪುತ್ರ ಚಿ|| ಸ|| ಬೆಟ್ಟಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣ ಕ್ಕೋಸ್ಕರ 1 ರೂ ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ರಾಮನಾಥಪುರದಬಳಿ ಸೇತುವೆಯ ನಿರ್ಮಾಣ

ಅಸ್ತಿಭಾರ ಶಿಲಾಪ್ರತಿಷ್ಠಾಪನ ಮಹೋತ್ಸವ

ಶ್ರೀಮನ್ಮಹಾರಾಜರವರು ಮೇಲ್ಕಂಡ ಸೇತುವೆಯ ಶಂಕುಸ್ಥಾಪನೆಗಾಗಿ ಕಳೆದ ಸೋಮವಾರ (ತಾ|| 24) ಬೆಗ್ಗೆ ಪರಿವಾರ ಸಮೇತರಾಗಿ ಬಂಥಸಿಯಿಂದ ಸ್ಪೆಷಲ್ ಟ್ರೈನಿನಲ್ಲಿ ಹೊಳೆನರಸೀಪುರಕ್ಕೆ ಚಿತ್ತೈಸಿ ಅಲ್ಲಿ ಸಿದ್ಧವಾಗಿದ್ದ ಮೋಟಾರಿನಲ್ಲಿ ರಾಮನಾಥಪುರವನ್ನು ತಲಪಿದರು ಸೇತುವೆನಿರ್ಮಾಣವಾಗುವ ಕಾವೇರಿ ದಡದ ಸಮೀಪದಲ್ಲಿ ಈ ಉತ್ಸವಕ್ಕಾಗಿ ನೇತ್ರಾನಂದಕರವಾದ ಹಸುರುವಾಣಿ ಮಂಟಪವನ್ನು ಹಾಕಿಸಿ ಬಗೆಬಗೆಯಾಗಿ ಅಲಂಕರಿಸಿದ್ದರು. ಮೈಸೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳಿಂದ ನೂರಾರುಮಂದಿ ಅಧಿಕಾರಿಗಳೂ ಹಾಗೆ ದೊಡ್ಡಮನುಷ್ಯರೂ ದಯಮಾಡಿದ್ದರು ಸಾವಿರಾರುಪ್ರಜೆಗಳು ಪ್ರಭುಗಳ ದರ್ಶನಲಾಭವನ್ನು ಪಡೆಯಲು ಕುತೂಹಲದಿಂದ ಕಾದಿದ್ದರು ರಿಜರ್ವ್ ಪೋಲೀಸಿನವರು ಬಂದೂಕಗಳನ್ನು ಹಿಡಿದು ಸಾಲುಕಟ್ಟಿನಿಂತಿದ್ದರು ಮಂಟಪದಲ್ಲಿ ಹಾಸನ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರು ಯುರೋಪಿಯನ್ ಮತ್ತು ದೇಶೀಯ ಪ್ಲಾಂಟರುಗಳು ರಾಜಪಿಂಡೆಯವರು ಅರಮನೆಯ ಅಧಿಕಾರವರ್ಗದವರು, ಸರ್ ಚಾರ್ಲ್ಸ್ ಟಾಡ್ಹಂಟರವರು ಹುಜೂರುಸೆಕ್ರೆಟರಿ ರಾಜಸಭಾಭೂಷಣ ಮ|| ಟಿ ತಂಬೂಚೆಟ್ಟಿಯವರು ಅ|| ಸೆಕ್ರೆಟರಿ ಮ|| ಎಂ ರಾಮರಾಯರೇ ಮೊದಲಾದವರೆಲ್ಲಾ ಸಾಲುಕಟ್ಟಿ ನಿಂತಿದ್ದರು

ಶ್ರೀಮನ್ಮಹಾರಾಜರವರು ಸಲ್ಲಾಪ ತಿಲವ ಮೋಟರಿನಲ್ಲಿ ದಿವಾನರವರನ್ನೂ ಮ|| ಎ ವಿ ಸುಬ್ರಹ್ಮಣ್ಯರಾಜೇ ಅರಸರವರನ್ನೂ ಸಮ್ಮುಖದಲ್ಲಿ ಕರೆಸಿಕೊಂಡು ಓಲಗ ಕಹಳೆಗಳು ಮೊಳಗುತ್ತಿರಲು ಮಂಟಪದ ಒಳಗೆ ಚಿತ್ತೈಸಿದರು ಡೆಪ್ಯುಟಿಕಮಿಷನರ್ ಮ|| ಎಂ ಚನ್ನರಾಜ ಅರಸರವರು, ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ಮ|| ಎಚ್ ಬಿ ಗುಂಡಪ್ಪಗೌಡರು, ಚೀಫ್ ಇಂಜಿನಿಯರ್ ಮ|| ಎನ್ ಎನ್ ಅಯ್ಯಂಗಾರ್ಯ ಇವರನ್ನು ಮುಂತಾದ ಅಧಿಕಾರಿಗಳು ಬೋರ್ಡ್ ಮೆಂಬರುಗಳು ಮಂಟಪದ ಬಾಗಿಲಲ್ಲಿ ಕಾದಿದ್ದು ಪ್ರಭುಗಳನ್ನು ಸತ್ಕರಿಸಿದರು ಸಭಿಕರೆಲ್ಲಾ ಎದ್ದುನಿಂತು ಮುಜರೆ ಮಾಡುತ್ತಿರುವಲ್ಲಿ ಶ್ರೀಮನ್ಮಹಾರಾಜರವರು ಬಂಗಾರದ ಸಿಂಹಾಸನವನ್ನು ಅಲಂಕರಿಸಿದರು ನಲ್ಲೂರು ಬಾಲಿಕೆಯರು ಮನೋಹರವಾದ ರಾಗದಿಂದ ಪದ್ಯಗಳನ್ನು ಹಾಡಿ ಶ್ರೀಮನ್ಮಹಾರಾಜರವರಿಗೆ ಸ್ವಾಗತವನ್ನು ಬಯಸಿದಮೇಲೆ ಪಂಡಿತ ನರಸಿಂಹಶಾಸ್ತ್ರಿಗಳು ಸ್ವಸ್ತಿವಾಚನವನ್ನು ಪಠಿಸಿ ಪ್ರಭುಗಳ ಶ್ರೇಯಸ್ಸನ್ನು ಬಯಸಿದರು ತರುವಾಯ ಚೀಫ್ ಇಂಜಿನಿಯರ್ ದಿವಾನ್ ಬಹದ್ದೂರ್ ಎನ್ ಎನ್ ಅಯ್ಯಂಗಾರ್ಯ ಆಹ್ವಾನವನ್ನು ಓದಿಕೊಟ್ಟರು ಡಿಸ್ಟ್ರಿಕ್ಟ್ ಬೋರ್ಡಿನ ಪರವಾಗಿ ಪ್ರೆಸಿಡೆಂಟ್ ಮ|| ಎಚ್ ಬಿ ಗುಂಡಪ್ಪಗೌಡರು ಬಿನ್ನಪಪತ್ರಿಕೆಯನ್ನು ಅರಿಕೆಮಾಡಿ ಚಿತ್ರಕೆಲಸಮಾಡಿದ ಬೆಳ್ಳಿಯ ಕ್ಯಾಸ್ಕೆಟ್ಟಿನಲ್ಲಿಟ್ಟು ಒಪ್ಪಿಸಿದರು ಶ್ರೀಮನ್ಮಹಾರಾಜರವರು ಪ್ರತ್ಯುತ್ತರವನ್ನು ದಯಪಾಲಿಸಿ ತಾರತರಾಯಿಗಳನ್ನು ಸ್ವೀಕರಿಸಿ ನದಿಯ ಪಾತ್ರಕ್ಕೆ ದಯಮಾಡಿ ಅಲ್ಲಿ ಸಿದ್ಧಪಡಿಸಿದ್ದ ಸ್ಥಾನದಲ್ಲಿ ಅಸ್ತಿಭಾರಶಿಲೆಯನ್ನು ಸ್ಥಾಪಿಸಲ್ಪಟ್ಟು ಸ್ವಹಸ್ತದಿಂದ ಬಂಗಾರದ ಕರಣೆಯಲ್ಲಿ ಗಾರೆಯನ್ನು ಹಾಕಿ ಗಟ್ಟಿಮಾಡಿ ಚೀಫ್ ಇಂಜಿನಿಯರವರೊಡನೆ ಸೇತುವಿನ ವಿಚಾರವಾಗಿ ಸ್ವಲ್ಪ ಹೊತ್ತು ಸಂಭಾಷಣೆಯನ್ನು ಬೆಳಸಿ ಮೇಲಕ್ಕೆ ಚಿತ್ತೈಸಿ ಅಲ್ಲಿ ಕಾದಿದ್ದ ಫೋಟೋಗ್ರಾಫರ್ ಪಟ್ಟಿಕ್ಕೆಯಲ್ಲಿ ಪುಟಿತು ಮೊದಲಿನಂತೆಯೇ ಮಂಗಳವಾದ್ಯ ಆಗುತ್ತಿರುವಲ್ಲಿ ಅಲ್ಲಿಂದ ತೆರಳಿದರು

ಶ್ರೀಮನ್ಮಹಾರಾಜರವರ ಭಾಷಣ

ದಿವಾನ್ ಬಹದ್ದೂರ್ ಎನ್ ಎನ್ ಅಯ್ಯಂಗಾರ್ಯರವರೇ ಹಾಸನ ಡಿಸ್ಟ್ರಿಕ್ಟು ಬೋರ್ಡಿನ ಅಧ್ಯಕ್ಷರು ಮತ್ತು ಸದಸ್ಯರೇ, ಮಹಿಳೆಯರೇ ಮತ್ತು ಮಹಾಶಯರೇ—ಈ ದಿನದ ಉತ್ಸವವನ್ನು ನಾವು ನೆರವೇರಿಸಬೇಕೆಂಬ ಪ್ರಾರ್ಥನೆಯನ್ನು ಅತ್ಯಂತ ಸಂತೋಷದಿಂದ ಅಂಗೀಕರಿಸಿ ಇಲ್ಲಿಗೆ ಬಂದಿರುವೆವು 1931ನೆಯ ಇಸವಿಯಲ್ಲಿ ನಮ್ಮ ಸರ್ಕಾರದವರು ಸೇತುಬಂಧನ ಕಾರ್ಯಕ್ರಮವನ್ನು ನಿರ್ಧರಿಸಿಕೊಂಡಿದ್ದರು ಇಲ್ಲಿ ನಿರ್ಮಿತವಾಗುವ ಈ ಸೇತುವೂ ಸೇರಿ ಒಟ್ಟು ಒಂಬತ್ತು ಸೇತುಗಳನ್ನು ಕೆಲವು ಹತ್ತುವರುಷಗಳ ಅವಧಿಯಲ್ಲಿ ಕಟ್ಟಬೇಕೆಂದು ಆಗ್ಗೆ ನಿಶ್ಚಯವಾಗಿದ್ದಿತು ನಮ್ಮ ಸರ್ಕಾರದವರು ಎಷ್ಟು ಮಹತ್ತರವಾದ ಉತ್ಸಾಹದಿಂದ ಕಾರ್ಯಕ್ರಮವನ್ನು ನಿಶ್ಚಯಮಾಡಿದರೆಂಬುದು ಇದರಿಂದ ಸುವ್ಯಕ್ತವಾಗುವುದು ಆಗಿನ್ನೂ ಯೂರೋಪಿನ ಮಹಾಯುದ್ಧವಾದ ಬಳಿಕ ತಾತ್ಕಾಲಿಕವಾಗಿ ತೋರಿಬಂದಿದ್ದ ಉಚ್ಛ್ರಾಯದೆಶೆಯಂತಿದ್ದ ಅವಧಿ ಈಚಿನ ವರ್ಷಗಳಲ್ಲಿ ಸಂಭವಿಸಿರುವ ಆರ್ಥಿಕ ದುರ್ದೆಶೆಯ ದುರ್ಭರಸ್ಥಿತಿಯು ಆಗಿನ್ನೂ ಮರೆಯಾಗಿದ್ದಿತು

ಸೇತುಬಂಧನ ಕಾರ್ಯಕ್ರಮವು ನಿಶ್ಚಯವಾದ ಬಳಿಕ ಕಳೆದ ಹದಿನೈದುವರ್ಷಗಳ ಅವಧಿಯಲ್ಲಿ— ಚಿಕ್ಕಹೆಬ್ಬಾಳು, ಗೂರೂರು ತಿರುಮಕೂಡಲ ನರಸೀಪುರ, ಸೋಸಲೆ, ಈ ಸ್ಥಳಗಳ ನಾಲ್ಕು ಸೇತುಗಳು ಮಾತ್ರವೇ ನಿರ್ಮಿತವಾದುವು ಇನ್ನೂ ಹೆಚ್ಚು ಸಂಖ್ಯೆಯ ಸೇತುಗಳು ಸಿದ್ಧವಾಗುವುದು ಸಾಧ್ಯವಿಲ್ಲದೆ ಹೋಯಿತಲ್ಲಾ ಎಂದು ನಮ್ಮ ಮನಸ್ಸಿಗೆ ವಿಷಾದವಾಗುತ್ತಿದೆ ಇದುವರೆಗೆ ನಿರ್ಮಿತವಾಗಿರುವ ಈ ನಾಲ್ಕು ಸೇತುಗಳಲ್ಲಿ ಪ್ರತಿಯೊಂದರಲ್ಲಿಯೂ ಸ್ನಿಗ್ಧಸಂಬಂಧದ ಸುಯೋಗವು ನಮಗೆ ಲಭಿಸಿರುವುದು ಇದಕ್ಕಾಗಿ ನಾವು ಹೆಮ್ಮೆ ಪಡುತ್ತಿರುವೆವು ಇಲ್ಲಿ ನಿರ್ಮಿತವಾಗುವ ಸೇತುವೆಯಿಂದ ಮೈಸೂರು ಸಂಸ್ಥಾನಕ್ಕೂ ಮದರಾಸು ಕೊಡಗು ಪ್ರಾಂತಗಳಿಗೂ ಮಹತ್ತರವಾದ ಪ್ರಯೋಜನಗಳು ದೊರೆಯುತ್ತವೆ ಈ ಸೇತು ನಿರ್ಮಾಣದ ವೆಚ್ಚದಲ್ಲೊಂದು ಭಾಗವನ್ನು ವಹಿಸಲು ಇಂಡಿಯಾ ಸರ್ಕಾರದವರು ಸಮ್ಮತಿಸಿದ್ದಾರೆ ಈ ಉದಾರ ಸಹಾಯಕ್ಕಾಗಿ ಅವರು ನಮ್ಮೆಲ್ಲರ ಕೃತಜ್ಞತೆಗೂ ಪಾತ್ರರಾಗಿರುವರು

"ಹಾಸನದ ಡಿಸ್ಟ್ರಿಕ್ಟ್ ಬೋರ್ಡಿನವರು ಇಲ್ಲಿ ಸೇತುಬಂಧನ ಕಾರ್ಯವು ಅತ್ಯಗತ್ಯವಾಗಿ ನೆರವೇರಬೇಕೆಂಬ ಅಂಶವನ್ನು 1921ನೆಯ ಇಸವಿಗಿಂತ ಮುಂಚಿನಿಂದಲೂ ಪದೇ ಪದೇ ನಮ್ಮ ಗಮನಕ್ಕೆ ತರುತ್ತಿದ್ದರು ಇದಕ್ಕಾಗಿ ಅವರಿಗೆ ನಮ್ಮ ಅಭಿನಂದನೆಗಳು ಸಲ್ಲಬೇಕಾಗಿವೆ ಇಲ್ಲಿ ನಿರ್ಮಿತವಾಗುವ ಸೇತುವು ಕಾವೇರಿಮಾತೆಗೆ ನಮಿಸಿ ತವಕದ ಭಕ್ತಿಪೂರ್ವಕವಾದ ಕಾಣಿಕೆಯಂತೆ ಕಂಗೊಳಿಸುವುದು

'ಕಾವೇರೀ ನದಿಯಿಂದ ಮಹೋಪಕಾರವಾಗುತ್ತಿದೆ ಬೆಳಗುವ ವಿದ್ಯುತ್ತೂ ಗೃಹಗಳಿಗೆ ಬೆಳಕೂ ಈ ನದಿಯಿಂದ ದೊರೆಯುತ್ತಿವೆ ಕೃಷಿರಹಿತವಾಗಿದ್ದ ಪ್ರದೇಶಗಳಲ್ಲಿ ಕಬ್ಬು ಬೆಳೆದು ಸಕ್ಕರೆಯು ದೊರೆಯುವಂತಾಗಿರುವುದೂ ಅದರಿಂದ ಉಕ್ಕು ಕಬ್ಬಿಣಗಳು ಲಭಿಸುವಂತಾಗಿರುವುದೂ ಈ ನದಿಯ ಪ್ರಭಾವದಿಂದಲೇ ರಾಮನಾಥಪುರದಂತಹ ಪುಣ್ಯಕ್ಷೇತ್ರಗಳೂ ಇಲ್ಲಿರುವಂತಹ ಪವಿತ್ರ ದೇವಾಲಯಗಳೂ ಈ ಜೀವನದಿಯ ತೀರದುದ್ದಕ್ಕೂ ಅಲ್ಲಲ್ಲಿ ಶೋಭಿಸುತ್ತಿವೆ ಕೃಷ್ಣರಾಜಸಾಗರದ ಹಿಂದೆ ಮನೋಹರವಾದ ಬಗೆಬಗೆಯ ವಾರಿಧಾರಾ ಯಂತ್ರಸಾಧನಗಳಿಂದ ಕಂಗೊಳಿಸುವ 'ಬೃಂದಾವನ'ವೆಂಬ ಉದ್ಯಾನದಿಂದಲೂ ಈ ನದಿಯು ಅಲಂಕೃತವಾಗಿದೆ

'ಮೈಸೂರಿನಿಂದ ಸಮುದ್ರತೀರಕ್ಕೆ ಹೋಗುವ ರಾಜಮಾರ್ಗಕ್ಕೆ ಹಾಸನದ ಸುತ್ತುಮುತ್ತಲಿನ ಕಾಫಿಬೆಳೆಯ ಪ್ರದೇಶಗಳಿಂದ ನೇರವಾದ ಸಂಚಾರ ಮಾರ್ಗ ಸೌಲಭ್ಯವಿಲ್ಲದೆ ಈಗ ಬಹು ಕಷ್ಟವಾಗಿದೆ ಹುಣಸೂರು ತಾಲ್ಲೂಕಿನ ಮತ್ತು ಕೊಡಗು ಪ್ರಾಂತದ ಕೆಲವು ಪ್ರದೇಶಗಳಿಗೂ ಇಲ್ಲಿಂದ ನೇರವಾದ ಸಂಚಾರ ಮಾರ್ಗ ಸಂಬಂಧವು ಕಲ್ಪಿತವಾಗಿಲ್ಲದ ಕಷ್ಟವೂ ಇದೆ ನಾವು ಇಲ್ಲಿ ಅಸ್ತಿಭಾರ ಶಿಲೆಯನ್ನು ಪ್ರತಿಷ್ಠಿಸುವ ಸೇತುವಿನಿಂದ ಆ ಕಷ್ಟಗಳು ನಿವಾರಣೆಯಾಗುವುವು ಈಗ ಹಲವುದಾರಿಗಳಲ್ಲಿ ದೂರ ಬಳಸಿಕೊಂಡು ಹೋಗಬೇಕಾಗಿರುವ ಕ್ಲೇಶವು ಪರಿಹಾರವಾಗಿ ಹೆಚ್ಚಿನ ಅನುಕೂಲವುಂಟಾಗುವುದು.

"ಇಲ್ಲಿಯ ಸೇತು ನಿರ್ಮಾಣಕ್ಕಾಗಿ ವಿಶೇಷ ಧನವ್ಯಯವಾಗುವುದಾಗಿದೆ ಇಂಡಿಯಾ ಸರ್ಕಾರದವರ ಉದಾರ ಸಹಾಯವಿಲ್ಲದೆ ಮಹತ್ತರವಾದ ಈ ಕಾರ್ಯವು ಸಾಧ್ಯವೆನಿಸುತ್ತಿರಲಿಲ್ಲ ಇಂಡಿಯಾ ಸರ್ಕಾರದವರ ಉದಾರ ಸಹಾಯವು ಲಭಿಸಿಯೂ ಕೂಡ ಡಿಸ್ಟ್ರಿಕ್ಟು ಬೋರ್ಡಿನವರು ಈ ಸೇತು ನಿರ್ಮಾಣಕ್ಕಾಗಿ ಸಾಲಮಾಡಬೇಕಾಗುತ್ತದೆ ಆ ಸಾಲವನ್ನು ತೀರಿಸುವುದಕ್ಕೆ ಅನುಕೂಲಮಾಡಿಕೊಳ್ಳುವುದಕ್ಕಾಗಿ ಅವರು ಈ ಸೇತುವಿನ ಒಳಿಯಲ್ಲಿ ಸ್ವಲ್ಪ ಸುಂಕವನ್ನು ಕೂಡ ವಿಧಿಸಬೇಕಾಗುವುದು ಈ ಸೇತುವಿನಿಂದ ಮಹತ್ತರವಾಗಿ ಸಂಚಾರ ಸೌಕರ್ಯ ಪ್ರಯೋಜನವನ್ನು ಪಡೆಯುವ ಜನರು ಅದನ್ನು ಗಮನಿಸಲಾರರೆಂಬುದು ನಮಗಿರುವ ನಂಬುಗೆ

"ಇಲ್ಲಿ ನಿರ್ಮಿತವಾಗಲಿರುವ ಸೇತುವಿನ ಅಸ್ತಿಭಾರ ಶಿಲೆಯನ್ನು ನಾವು ಅತಿ ಸಂತೋಷದಿಂದ ಪ್ರತಿಷ್ಠಿಸುವೆವು ಈ ಸೇತುವು ವಿಶೇಷ ಪ್ರಯೋಜನಕಾರಿಯಾಗಿ ಪರಿಣಮಿಸುವಂತೆ ಜಗದೀಶ್ವರನು ಅನುಗ್ರಹಿಸಲೆಂದು ಹೃತ್ಪೂರ್ವಕವಾಗಿ ಹಾರೈಸುವೆವು

ಚಿಮ್ಮಲಗಿ

ವಿಜಾಪೂರಜಿಲ್ಲಾ ಬಾಗೇವಾಡಿ ತಾಲ್ಲೂಕಿನ ಚಿಮ್ಮಲಗಿ ಗ್ರಾಮದಲ್ಲಿ ಅರಳೆಲೆಮಠದೊಳಗೆ ವ[illegible]ಚಾರದಂತೆ ಮಹಾಶಿವರಾತ್ರಿಯ ಉತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು

ವೀರಶೈವಮತಸ್ಥಾಪಕರಾದ ಜಗದ್ಗುರು ಪಂಚಾಚಾರ್ಯರಪೈಕಿ ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರವರ ಜಯಂತ್ಯುತ್ಸವವು ಸಾಂಗವಾಯಿತು

ರುದ್ರಾಭಿಷೇಕ ಶಿವಸಹಸ್ರನಾಮಬಿಲ್ವಾರ್ಚನೆ ಪಂಚಾಚಾರ್ಯರ ನಾಮಾವಳಿ ಸ್ತೋತ್ರ, ಮಂತ್ರ ಮಂಗಳ ಮೊದಲಾದ ವಿಷಯಗಳೊಡನೆ ಷೋಡಶೋಪಚಾರದಿಂದ ವಿಧಾನೋಕ್ತವಾಗಿ, ನೋಡುವವರ ನೇತ್ರಗಳಿಂದ ಆನಂದಬಾಷ್ಪಗಳುದುರುವಂತೆ ಶಿವಪೂಜೆಯು ನೆರವೇರಿಸಲ್ಪಟ್ಟಿತು ಅನಂತರ ಕೂಡಿದವರಿಗೆಲ್ಲ ಪ್ರಸಾದಸಮರ್ಪಣೆಯಾಯಿತು

ಆಮೇಲೆ ಶ್ರೀ ಅರಳೆಲೆಮಠದ ಶಾಂತವೀರ ಪಟ್ಟದ ಸ್ವಾಮಿಗಳು ಉಭಯ ಜಗದ್ಗುರುಗಳ ಜಯಂತಿಯ ಬಗ್ಗೆ ಹಾಗೂ ಅಷ್ಟಾವರಣ, ಗುರುಮಹಿಮಾ, ಶ್ರೀ ಜಗದ್ಗುರು ಉಜ್ಜಯಿನೀ ಮಹಾಸ್ವಾಮಿಗಳವರು ಮಾಡಿದ ಅಘಟನಘಟನ ಮಹಿಮೆ ಮೊದಲಾದ ವಿಷಯಗಳಮೇಲೆ ತಮ್ಮ ಶ್ರಾವ್ಯವಾಣಿಯಿಂದ ಸರ್ವರಿಗೂ ಆಹ್ಲಾದಕರವಾಗುವಂತೆ ಬೋಧಾಮೃತಪಾನ ಮಾಡಿಸಿದರು

ಈಪ್ರಕಾರ ಮಂಗಲವಾದನಂತರ ಜಗದ್ಗುರುಗಳ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಗುರುಸಂಗಪ್ಪ ಸಜ್ಜನ
ಚಿಮ್ಮಲಗಿ

ಶ್ರೀ ರಾಮೇಶ್ವರ ಕ್ಷೇತ್ರಕ್ಕೆ ಯಾತ್ರಾರ್ಥಿಗಳಾಗಿ ಬರತಕ್ಕ ವೀರಶೈವರಿಗೆ

ಸೂಚನೆ.

ಸುಪ್ರಸಿದ್ಧವಾಗಿರುವ ಶ್ರೀರಾಮೇಶ್ವರಕ್ಷೇತ್ರಕ್ಕೆ ಬರುವ ವೀರಶೈವರಿಗೆ ಯಾವ ಪ್ರಕಾರದ ಸೌಕರ್ಯವೂ ಇಲ್ಲದಿರುವದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ನಾವು ವೀರಶೈವರ ವಸತಿಗಾಗಿ "**ಜಂಗಮವಾಡಿ**" ಎಂಬ ಸ್ಥಳವನ್ನು ಏರ್ಪಡಿಸಿರುವೆವು ವೀರಶೈವರಿಗೆ ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡುವೆವಲ್ಲದೆ ದರ್ಶನಾದಿಗಳಿಗೆ ಬೇಕಾಗುವ ಸುವ್ಯವಸ್ಥೆಯನ್ನು ಕಲ್ಪಿಸಿಕೊಡುವೆವು ಮಾಹಿತಿಗಾಗಿ ನಮ್ಮ ಸಂಗಡ ಪತ್ರವ್ಯವಹಾರ ಮಾಡಬೇಕಾಗಿ ಕೋರಿಕೆ

ಗುರುಸಿದ್ಧಸ್ವಾಮಿ,
(10) ಜಂಗಮವಾಡಿ ಮಠ, ರಾಮೇಶ್ವರ
ಪೋ|| ರಾಮೇಶ್ವರ (S.I.R)

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ...ನೂರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ...ವರ್ಷಕ್ಕೊ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯ...ದ ಕಾಣಿಕೆಯನ್ನು ತೆಗೆದುಕೊಂಡು ಒರುತ್ತಿರುವರು. ಆದರೆ ...ವರು ತಮ್ಮ ಶಕಾಂತ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ...ನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ...ಗಿಬರುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ...ನು ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ...ವಾಗುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ...ಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ...ವು ಚೆನ್ನಾಗಿ ತೋರಿಸಲ್ಪಟ್ಟಿವೆ. ಆದುದರಿಂದ ಸದರಿ ಪುಸ್ತಕ...ನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ...ದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ಶಾಶ್ವತವಾಗಿ ...ದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ...ಮ ಕಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದ...ದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

...ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ...ಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ...ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲೆ	ಮೂಲ್ಯ
...ಮಕರಧ್ವಜ	೧	೩೦—೦—೦
...ಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
...ಂದೂರ	೧	೨—೦—೦
...ಸಿಂಧೂರ	೧	೪—೦—೦
...ಸಿಂಧೂರ	೧	೪—೦—೦
...ಸಿಂಧೂರ	೧	೪—೦—೦
...ವಂಗ	೧	೩—೦—೦
...ವಂಗ	೧	೧—೦—೦

ಭಸ್ಮಗಳು.

...ಭಸ್ಮ	೧	೪೦—೦—೦
...ತಭಸ್ಮ	೧	೪—೦—೦
...ಭಸ್ಮ	೧	೦—೨—೦
...ಹಭಸ್ಮ	೧	೦—೧೨—೦
...ಗಭಸ್ಮ	೧	೦—೮—೦
...ಗಭಸ್ಮ	೧	೦—೮—೦
...ತ್ರಾಳಭಸ್ಮ	೧	೦—೮—೦
...ಭಸ್ಮ	೧	೦—೮—೦
...ಭಸ್ಮ	೧	೦—೮—೦
...ಂಕೂರಭಸ್ಮ	೧	೦—೮—೦
...ಮುಕ್ತಿಕಾಭಸ್ಮ	೧	೦ ೧೨—೦
...ಕಭಸ್ಮ	೧	೩—೦—೦
...ಕಾಂತಭಸ್ಮ	೧	೪೦—೦—೦
...ಮಾಭಸ್ಮ	೧	೦—೮—೦
...ಬಿಸ್ಮಿನ ಭಸ್ಮ	೧	೦—೮—೦
...ರಂಗದ ಕೋಡಿನ ಭಸ್ಮ	೧	೦—೮—೦
...ದಂತಿಹರತಾಲಭಸ್ಮ	೧	೦—೮—೦
...ರಿ (೧ನೇ ನಂಬರ್)	೧	೫೦—೦—೦
...ಜಿತ ಸೊರ್ಯಪುಟ	೧	೧—೦—೦
...ಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾ...ದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು...ವ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಒಖಿಮಠ, ಜಿಲ್ಲಾ ಗಢವಾಲ್ ಯು ಪಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ತ್ರಿರುದ್ರಾಧ್ಯಾಯ ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಆ ಕೊರತೆಯು ದೂರವಾಗಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳ, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ ಪಿ ಚಾರ್ಜ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಮುಕ್ತಕಂಠದಿಂದ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ದೇಣಿಗೆಯನ್ನಾಗಿ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ವಿವಾಹಮಹೋತ್ಸವಸಮಾರಂಭ, ಕನಕಗಿರಿ

—

ರಾಯಚೂರು ಜಿಲ್ಲಾ ಗಂಗಾವತಿ ತಾಲೂಕು ಕನಕಗಿರಿಯಲ್ಲಿರುವ ಸದಾಚಾರಸಂಪನ್ನರೂ ಗುರುಲಿಂಗಾಭಿಮಾನಿಗಳೂ ಆದ ಮ|| ರಾ|| ತೆಗ್ಗಿನಮನೆ ನಾಗಪ್ಪನವರು ತಮ್ಮ ಸುಪುತ್ರಿ ಚಿ|| ಕುಂ|| ಸೌ|| ಅಮರಾಂಬೆಯನ್ನು ಇದೇ ಗ್ರಾಮದ ಮ|| ರಾ|| ಗಂಗಾಧರಪ್ಪ ಶೆಟ್ಟರ ಮಗ ಬಸಪ್ಪನವರಿಗೆ ಕೊಟ್ಟು ವಿವಾಹವನ್ನು ಇದೇ ಯುವನಾಮ ಸಂ|| ಮಾಘ ಬ|| ೧೧ ಮಂಗಳವಾರ ತಮ್ಮ ಗೃಹದಲ್ಲಿಯೇ ಅತ್ಯಂತ ವೈಭವದೊಡನೆ ನೆರವೇರಿಸಿದರು. ಈ ಮಂಗಳಮಹೋತ್ಸವಕ್ಕೆ ಕನಕಗಿರಿ ಶ್ರೀ ಪಟ್ಟಾಧ್ಯಕ್ಷ ಷ|| ಬ್ರ|| ಕಂತೆಶ್ವರ ಶಿವಾಚಾರ್ಯರು ಬ್ರಹನ್ಮಠ ಈ ಮಹನೀಯರು ದಯಮಾಡಿಸಿದ್ದರಿಂದ ಅನೇಕಾನೇಕ ಗ್ರಾಮಗಳಿಂದ ಅನಂತ ಭಕ್ತಮಹೋತ್ಸವರು ... ಸಂದಿಗ್ಧ ಮಹೋತ್ಸವವು ಶ್ರೀಗಳವರ ಸನ್ನಿಧಿಯಲ್ಲಿ ವೈದಿಕರಿಂದ ಗಣಪತಿಪೂಜಾ ನಾಂದೀಸಮಾರಾಧನ ಪುಣ್ಯಾಹವಾಚನ, ಪಂಚಬ್ರಹ್ಮಕಲಶ ಸ್ಥಾಪನಾದಿಕ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟಿತು. ಶ್ರೀ ಪೀಠಾಧಿಪರೂ ನೂತನ ವಧೂವರರಿಗೆ ಶುಭಮುದ್ರವನ್ನು ಮಾಡಿದರು. ಅನಂತರ ಸಭಾಸದರಿಗೆ ಪರಿಶಾಂಬೂಲಾದಿಗಳು ಕೊಡಲ್ಪಟ್ಟವು. ಮರುದಿವಸ ಶ್ರೀ ಪಟ್ಟಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಾಯಂಕಾಲ ಪ್ರಚಂಡಸಭೆಯು ನಡೆಯಿತು. ಅಗ್ಗಿ ವೇ|| ಗದಿಗಯ್ಯನವರು, ಹಾಲಿಂಮಾಡಿಮಠ ಲಕ್ಷ್ಮೀಶ್ವರ ಇವರು ಸನಾತನ ವೀರಶೈವಮತ ವಿಷಯವಾಗಿ ಸುಮಾರು ೧|| ತಾಸಿನವರೆಗೆ ಬಹು ಸಾರಸ್ಯವಾಗಿ ಭಾಷಣವನ್ನು ಮಾಡಿ ಸಭಿಕರನ್ನು ಆನಂದತುಂದಿಲರನ್ನಾಗಿ ಮಾಡಿದರು. ಒಳಿಕ ಶ್ರೀ ಅಧ್ಯಕ್ಷ ಮಹಾಸ್ವಾಮಿಗಳು ಶ್ರೀ ಜಗದ್ಗುರು ಪಂಚಾಚಾರ್ಯರ ವಿಷಯವಾಗಿ ಧರ್ಮೋಪನ್ಯಾಸವನ್ನು ಮಾಡಿ ಸಮಾಜನಸ್ತೋಮವನ್ನು ಸಂತೋಷಸಮುದ್ರದಲ್ಲಿ ಲೋಲಾಡುವಂತೆ ಮಾಡಿದರು. ತರುವಾಯ ಶ್ರೀ ಪಟ್ಟಾಧ್ಯಕ್ಷರವರೂ ಸಭಿಕರೂ ನೂತನ ವಧೂವರರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹರಸಿ ಜಗದಾಚಾರ್ಯರ ಜಯಘೋಷದೊಡನೆ ಸಭೆಯನ್ನು ಮುಕ್ತಾಯಗೊಳಿಸಿದರು. ಮ|| ನಾಗಪ್ಪನವರು ಷೋಡಶಯಮಹಾದಾನಾಂತರ್ಭೂತವಾದ ಕನ್ಯಾದಾನವನ್ನು ಮಾಡಿಕೊಟ್ಟು ಕೀರ್ತಿಶಾಲಿಯಾದವರಲ್ಲದೆ ಶ್ರೀಗಳವರ ಅಪ್ಪಣೆಮೇರೆಗೆ ವೀರಶೈವಧರ್ಮೋದ್ಧಾರಕ್ಕಾಗಿ ಜನ್ಮವೆತ್ತಿರುವ ಶ್ರೀ ಪಂಚಾಚಾರ್ಯಪ್ರಭಾ ಪ್ರೋತ್ಸಾಹಕ್ಕಾಗಿ ೧ ರೂ. ಯನ್ನು ತೆಗೆಯಿಸಿದರು.

ಚನ್ನಪ್ಪ, ಕುಕನೂರು

ಶ್ರೀ ವೀರಭದ್ರಸ್ವಾಮಿ ರಥೋತ್ಸವ

—

ಪದ್ಧತಿಯಂತೆ ಇದೇ ಯುವನಾಮಸಂವತ್ಸರದ ಫಾಲ್ಗುಣ ಬ|| ೧ ಹಸ್ತಾನಕ್ಷತ್ರ ಸೋಮವಾರ (ತಾ|| ೯-೩-೧೯೩೬) ರಲ್ಲಿ ಜಗಳೂರು ತಾಲ್ಲೂಕು ಕೊಣಚಗಲ್ಲ ಶ್ರೀವೀರಭದ್ರದೇವರ ರಥೋತ್ಸವವು ಬಹು ವಿಜೃಂಭಣೆಯಿಂದ ನಡೆಯುವುದು. ಬೆಟ್ಟದ ಮೇಲಿರುವ ಪುರಾತನವಾದ ಈ ದೇವಾಲಯದ ಜೀರ್ಣೋದ್ಧಾರಕ್ಕೆ ಭಕ್ತಾದಿಗಳಿಂದೊದಗಿದ ಸಹಾಯದ್ರವ್ಯದಿಂದ ಪ್ರಾಕಾರವು ಕಟ್ಟಲ್ಪಟ್ಟಿದೆ. ಈ ಪರ್ವತದ ಹವಾಮಾನವು ಅನುಕೂಲವಿದ್ದು ನೆರಳು ನೀರಿನ ಸೌಕರ್ಯವು ಪ್ರಕೃತಿಸೌಂದರ್ಯವೂ ಸಹ ವರ್ಣನೀಯವಾಗಿರುವುದು. ಅಲ್ಲದೆ ಈ ದೇವಸ್ಥಾನದ ಪೂಜಾವಿನಿಯೋಗವು ಸಾಂಗೋದ್ಧಾರವಾಗಿ ನಡೆಯಲು ಚಿರನಿಧಿಗಾಗಿ ದಾವಣಗೆರೆ ಹಳುವದಂಡಿ ಮರದ ವೇ|| ರುದ್ರಯ್ಯನವರು ಲಿಂಗೈಕ್ಯ ತಮ್ಮ ತಂದೆಯವರ ಹೆಸರಿನಲ್ಲಿ ೧೦೦೧ ರೂಪಾಯಿಗಳನ್ನು ಕೊಡಲು ವಾಗ್ದಾನಮಾಡಿರುವ ತಮ್ಮ ಸಂಕಲ್ಪವನ್ನು ಈ ಸಮಯದಲ್ಲಿ ನೆರವೇರಿಸ ಮಾಡಿಗಿದ್ದಾರೆ. ಆದ್ದರಿಂದ ಭಕ್ತಾದಿಗಳೆಲ್ಲ ಅವಶ್ಯವಾಗಿ ಬಂದು ಈ ಮಹೋತ್ಸವಭಾಗಿಗಳಾಗಿ ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥನೆ.

ಕಾರ್ಯದರ್ಶಿಗಳು,
ಜಗಳೂರು ಸರ್ಕಾರ್ ಮಲ್ಲಪ್ಪ
ಜಗಳೂರು ಸಾಹುಕಾರ್ ಮಹಲಿಂಗಪ್ಪ

ಶ್ರೀ ಜಗದ್ಗುರು ರೇಣುಕಾಚಾರ್ಯ ಫ್ರೀ-ಬೋರ್ಡಿಂಗ್ ಬಿಜಾಪೂರ

—

ಪ್ರತಿ ವರ್ಷದಂತೆ ಈ ವರ್ಷವಾದರೂ ಬಿಜಾಪುರ ಸೆಂಟರದಲ್ಲಾಗುವ ಮುಲಕಿ ಪರೀಕ್ಷೆಗೆ ಬರುವ ಬಡ ವಿದ್ಯಾರ್ಥಿಗಳ ಸಲುವಾಗಿ ತಾಸಬಾವಡಿ ಹತ್ತಿರ ಸೊನ್ನದ ದೇಸಾಯಿಯವರ ಬಂಗ್ಲೇದಲ್ಲಿ ಕೋಟಿ ಹಿರೇಮಠದ ಪಟ್ಟದ ಸ್ವಾಮಿಗಳಿಂದ ಊಟದ ವ್ಯವಸ್ಥೆಯು ಮಾಡಲಾಗುವದು. ಸದರಿ ಬೋರ್ಡಿಂಗ ದಲ್ಲಿ ಅನ್ನೋದಕವನ್ನು ಸ್ವೀಕರಿಸಬೇಕೆಂಬುವ ವಿದ್ಯಾರ್ಥಿಗಳು ಮಾರ್ಚ ತಿಂಗಳ ೧೫ನೇ ತಾರೀಖಿನೊಳಗಾಗಿ (ತಮ್ಮ ಶಾಲೆಯ ಹೆಡ್ಮಾಸ್ತರರಾಗಲೀ ಊರೊಳಗಿನ ಯಾರಾದರೊಬ್ಬ ಪ್ರಮುಖಜನರಾಗಲೀ ಬಡವನೆಂಬ ಬಗ್ಗೆ ಯೋಗ್ಯ ಸರ್ಟಿಫಿಕೇಟನೊಂದಿಗೆ) ಅರ್ಜಿಯನ್ನು ಬಸವಪ್ರಭಯ್ಯ ದುಂಡಯ್ಯ ಹಿರೇಮಠ ಮುನಿಸಿಪಾಲಿಟಿ ಕನ್ನಡ ಶಾಲಾ ಮಾಸ್ತರ ಬಿಜಾಪೂರ ಈ ವಿಳಾಸಕ್ಕೆ ಕಳುಹಿಸತಕ್ಕದ್ದು. ಮುದ್ದತ ಮೀರಿ ಬಂದ ಅರ್ಜಿಯನ್ನು ಸ್ವೀಕರಿಸಲಾಗುವದಿಲ್ಲ. ಪರೀಕ್ಷೆಗೆ ಬರುವಾಗ ತಮ್ಮ ಕಡೆಯಿಂದ ಬೋರ್ಡಿಂಗಿನಲ್ಲಿ ಉಪ... ಮಾಡಲಿಕ್ಕೆ ಪರವಾನಗಿ ಪತ್ರವನ್ನು ಸಂಗಡ ತರತಕ್ಕದ್ದು.

ವ್ಯವಸ್ಥಾಪಕ,
ಶ್ರೀ ರೇಣುಕಾಚಾರ್ಯ ಫ್ರೀಬೋರ್ಡಿಂಗ್
ಬಿಜಾಪೂರ

ಶ್ರೀಮತಿಕಮಲಾನೆಹರುರವರು ವಿಧಿವಶರಾದರು

—

ಶ್ರೀಯುತ ಜವಾಹಿರಲಾಲನೆಹರೂರವರ ಪತ್ನಿಯವರಾದ ಶ್ರೀಮತಿ ಕಮಲಾನೆಹರೂರವರು ಕಳೆದ ... ನಯ ತಾರೀಖಿನ ದಿವಸ ಸ್ವಿಜ್ಜರ್ಲೆಂಡಿನಲ್ಲಿ ಮರಣ ಹೊಂದಿದರೆಂಬುದನ್ನು ತಿಳಿಸಲು ವಿಷಾದವೆನಿಸುತ್ತದೆ.

ಮನೋಹರವಾದ ಫೋಟೋಗಳು.

	ರೂ	ಆ	ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೩೦×೧೯ ಬೆಲೆ ಒಕ್ಕೆ	೦	೩	೮
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸಾನಂದ ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಬೋಧಿಸುವ ಫೋಟೋ ಸೈಜು ೧೯×೧೪ ಬೆಲೆ	೦	೧	೬
ಪಂಚಪೀಠಗಳ ಜಗದ್ಗುರುಗಳು ಪಂಚಾಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦	೧	೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪/೧೦ ಬೆಲೆ ಒಕ್ಕೆ	೦	೧	೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ಒಕ್ಕೆ	೦	೦	೯
ಶ್ರೀ ಕಾಶೀ ... ಪೀಠದ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦	೦	೯
ಶ್ರೀಮದ್ ... ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦	೦	೯
ಶ್ರೀ ಜಗದ್ಗುರು ... ಶಿವಾಚಾರ್ಯರು ... ಅವತರಿಸುವ ಫೋಟೋ	೦	೦	೯
ಶ್ರೀ ರೇಣುಕಾಚಾರ್ಯರು ... ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦	೦	೯
ಶ್ರೀ ರೇಣುಕಾಚಾರ್ಯರು ... ಮಾಡುತ್ತಿರುವ ಗುರುವರನನ್ನು ... ಶ್ರೀ ... ಫೋಟೋ ಒಕ್ಕೆ	೦	೦	೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ... ಅನುಗ್ರಹಿಸುವ ಫೋಟೋ	೦	೦	೯
ಶ್ರೀಮದುಜ್ಜಯಿನೀ ... ಶ್ರೀ ... ಕುಳಿತುಕೊಂಡಿರುವ ಫೋಟೋ	೦	೦	೯
ಪಂಡಿತ ಶ್ರೀ ... ಫೋಟೋ ಬೆಲೆ ಒಕ್ಕೆ	೦	೦	೯
ಶ್ರೀ ಜಗದ್ಗುರು ಉಜ್ಜಯಿನೀ ... ಫೋಟೋ ಒಕ್ಕೆ	೦	೦	೯
ಶ್ರೀ ಜಗದ್ಗುರು ಉಜ್ಜಯಿನೀ ... ಫೋಟೋ ಒಕ್ಕೆ	೦	೦	೯
ಶ್ರೀ ಜಗದ್ಗುರು ... ಫೋಟೋ	೦	೦	೯
ಶ್ರೀ ಜಗದ್ಗುರು ... ಫೋಟೋ ...	೦	೦	೯
ಹಿಮವತ್ಕೇದಾರದ ಮಧ್ಯದಲ್ಲಿ ... ಶ್ರೀ ... ಫೋಟೋ ..	೦	೦	೯
ಕೊಲ್ಲಿಪಾಕದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦	೦	೯

ಸೂಚನೆ — ಒಂದು ರೂಪಾಯಿಗಿಂತಲೂ ಕಡಿಮೆ ... ಕಳುಹಿಸುವದಕ್ಕಾಗುವದಿಲ್ಲ. ... ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ... ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ವಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ... ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ... ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಒಂದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಪ್ಪಟ್ಟ ... ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂಲುಪಟ್ಟಿ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗುವದು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ ೦-೬-೦ ವಿ. ಪಿ ೦-೪...
ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ. ಪಿ ೮...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[6] ಪೋ. ಬಾ ೫೧೦, ಮದರಾಸ್

ಮೈಸೂರು ಮಹ್ಯಾರಾಜರ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಮನಿವಾಸ್ಕರ ವೇ|| ಬ್ರ|| ಪಂಡಿತ ತೋ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ...

REGISTERED No M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಜಾತಜಪಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪಶುಪತಿಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ — ಬಿಡಿ ಪ್ರತಿ ೧ಕ್ಕೆ ೯ ಪೈ — ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೯ನೇ ಮಾರ್ಚಿ ೧೯೩೬ [ಸಂಚಿಕೆ ೪೪

ಶ್ರೀ ಕೇದಾರ ಜಗದ್ಗುರುಗಳವರ ತಿರ್ಯಗಾಂದೋಲಿಕೋತ್ಸವ

ಶ್ರೀ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಚಿದ್ಘನಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ದೇಶಪರ್ಯಟನದಲ್ಲಿ ಸಂಚರಿಸುತ್ತ ಸದ್ಯಃ ಬಳ್ಳಾರಿ ಜಿಲ್ಲಾ ಹೂವಿನಹಡಗಲಿ ತಾಲ್ಲೂಕು ಹೊಳಗುಂದಿಗ್ರಾಮಕ್ಕೆ ದಯಮಾಡಿಸಿರುವುದು ಸರಿಯಷ್ಟೆ! ಶ್ರೀ ಶಿವಮತಸ್ಥಾಪನಾಚಾರ್ಯವರ್ಯರೂ, ಶರಣಾಗತರಕ್ಷಕರೂ, ಭಕ್ತೇಷ್ಟಫಲಪ್ರದಾಯಕರೂ, ತಪಸ್ಸಾಮ್ರಾಜ್ಯಸಿಂಹಾಸನಾರೂಢರೂ, ಶ್ರೀಮತ್ಪಂಚಮಹಾಪೀಠಮುಕುಟಪ್ರಾಯರೂ ಆದ ಶ್ರೀಮದುಜ್ಜಯಿನೀ ಜಗದ್ಗುರುಗಳವರು ಲಿಂಗೈಕ್ಯರಾದುದರಿಂದ, ವೀರಶೈವಮತದ ಕಲಶವೇ ಕಳಚಿದಂತಾಗಿ ಅಖಿಲಜನಾಂಗವೇ ದುಃಖಸಾಗರದಲ್ಲಿ ಮುಳುಗಿತ್ತು. ಇಂಥ ಭಯಂಕರ ವಿಷಮಸನ್ನಿವೇಶದಲ್ಲಿಯೇ, ನಮ್ಮ ಪ್ರಭುವರ್ಯರಾದ ಜಾರ್ಜ್ ಸಾರ್ವಭೌಮರವರ ನಿಧನದ ವಾರ್ತೆಯಿಂದಂತೂ, ಕುರುವಿನಮೇಲೆ ಗುಳ್ಳೆಯೆದ್ದಂತಾಗಿ, ಜನಸಮುದಾಯದ ದುಃಖಕ್ಕೆ ಮೇರೆಯೇ ಇಲ್ಲದಾಗಿತ್ತು. ಆದರೆ, ದಯಾಮಯನಾದ ಭಗವಂತನು ತನ್ನ ಭಕ್ತರ ದುಃಖಪರಿಹಾರಾರ್ಥವಾಗಿ ಕ್ಷಿಪ್ರದಲ್ಲಿಯೇ, ತಪಃಪ್ರಭಾವಿಗಳೂ, ವಿದ್ಯಾವಂತರೂ, ಭಕ್ತೋದ್ಧಾರಕರೂ ಆದ ಶ್ರೀ ೧೦೮ ಜಗದ್ಗುರು ಸಿದ್ಧೇಶ್ವರಶಿವಾಚಾರ್ಯರಂಥ ಗುರುಸಾರ್ವಭೌಮರನ್ನೂ, ಪ್ರಜಾವಾತ್ಸಲ್ಯಪೂರಿತರೂ, ಭೂತದಯಾಪರರೂ, ಮತಧರ್ಮಪರಿಪಾಲಕರೂ ಆದ ಶ್ರೀ ಅಷ್ಟಮ ಎಡ್ವರ್ಡ್ ಸಾರ್ವಭೌಮರಂಥ ಪುಣ್ಯಪ್ರಭುವರ್ಯರನ್ನೂ ಅಧಿಕಾರಿಗಳನ್ನಾಗಿ ನಿಯಮಿಸಿ, ಗುರುಮನೆ ಅರಮನೆಗಳೆರಡನ್ನು ಸುಶೋಭಿತವಾಗುವಂತೆಮಾಡಿ ಇಡೀ ಜಗತ್ತಿಗೇನೇ ಸಂತೋಷವನ್ನುಂಟುಮಾಡಿದನು. ಈ ಸಂತೋಷ ಸಮಯದಲ್ಲಿ ಶ್ರೀ ಕೇದಾರ ಜಗದ್ಗುರುಗಳವರು ನಮ್ಮ ಗ್ರಾಮಕ್ಕೆ ದಯಮಾಡಿಸಿ ತಮ್ಮ ಅಮೃತೋಪಮಾನವಾದ ವರದವಾಣಿಯಿಂದ ಉಪದೇಶಿಸಿ ಭಕ್ತಸಮುದಾಯವನ್ನುದ್ಧಾರಮಾಡುತ್ತಿರುವುದರಿಂದಂತೂ ಇಲ್ಲಿಯ ಭಕ್ತರ ಆನಂದವು ಇಮ್ಮಡಿಯಾಗಿದೆ. ತಾ|| 27-2-36 ನೆಯ ಗುರುವಾರ ದಿವಸ ಗುರುಭಕ್ತಿಧುರೀಣರಾದ ಮ|| ರಾ|| ಶಾನುಭೋಗರ ಭದ್ರಪ್ಪನವರ ಗುದ್ದದ ಸಿದ್ಧಪ್ಪನವರು ಕರಿವೀರಪ್ಪನವರು ಶ್ರೀ ಕೇದಾರ ಜಗದ್ಗುರುಗಳವರನ್ನು ಸಮಸ್ತ ಬಿರುದಾವಳಿಗಳಿಂದ, ತಿರ್ಯಗಾಂದೋಲಿಕಮಹೋತ್ಸವದೊಡನೆ ತಮ್ಮ ಗೃಹಕ್ಕೆ ಬಿಜಯಂಗೈಸಿಕೊಂಡು, ಗುರುಪಾದಸೇವೆಮಾಡಿ ಗುರುಕಾಣಿಕೆಯನ್ನರ್ಪಿಸಿ ಕೃತಾರ್ಥರಾದರು. ಮ|| ರಾ|| ಯಜಮಾನ ಶಾ|| ಶಾಂತಪ್ಪನವರೂ, ಮ|| ರಾ|| ಯಜಮಾನ ಶಾನುಭೋಗರ ಸಿದ್ಧಲಿಂಗಪ್ಪನವರೂ, ಮ|| ರಾ|| ಚೇರ್ಮನ್ ಪಾಟೀಲ್ ಗುರುಬಸವನಗೌಡರು ಮ|| ರಾ|| ಎಚ್. ಮಹಾದೇವಪ್ಪನವರು, ಮ|| ರಾ|| ಶಾ|| ಗವಿಸಿದ್ಧಪ್ಪನವರು, ಮ|| ರಾ|| ಮಲ್ಲನಕೆರೆ ಪಾಟೀಲ ಚನ್ನಬಸವನಗೌಡ್ರು ಮ|| ರಾ|| ಸೋರಗಿ ಪಾ|| ಲಿಂಗನಗೌಡ್ರು ಮುಂತಾದ ಪ್ರಮುಖ ಮಹಾಶಯರು ಅತ್ಯಂತ ಶ್ರದ್ಧಾಭಕ್ತಿಯಿಂದ ಈ ಗುರುಕಾರ್ಯದಲ್ಲಿ ಭಾಗಿಗಳಾಗಿ ಗುರುಕೃಪೆಗೆ ಪಾತ್ರರಾದರು. ಈ ಮಹೋತ್ಸವಕ್ಕೆ ಮ|| ರಾ|| ಮೊ|| ಕೋ ಆಪರೇಟಿವ್‌ಸೊಸೈಟಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು, ಮ|| ರಾ|| ಮೆಹರ್ಬಾನ್ ಸಬ್ ಇನ್ಸ್‌ಪೆಕ್ಟರವರು ದಯಮಾಡಿಸಿದ್ದರಿಂದ, ವಿಶೇಷ ಶೋಭೆಯುಂಟಾಗಿತ್ತು. ಇದೇ ದಿವಸ ಸಾಯಂಕಾಲ ಧಾರ್ಮಿಕಸಭೆ ಸೇರಿ, ಶ್ರೀ|| ಮಹಾಸನ್ನಿಧಾನದವರು ವೀರಶೈವಮತವಿಷಯವಾಗಿ ಸವಿಸ್ತರವಾಗಿ ಸ್ವಪ್ನನಿಸುಳಿ ಒಳ್ಳೆ ಪರಿಣಾಮವಾಗುವಂತೆ ಬೋಧಿಸಿದರು. ಬಳಿಕ ವೇ|| ವಿರೂಪಾಕ್ಷಶಾಸ್ತ್ರಿಗಳು ಗುರುಮಹತ್ವ ಹಾಗೂ ಶಿವಾಚಾರರ ಪ್ರಾಚೀನತ್ವವಿಷಯವಾಗಿ ಬಹುಸರಸವಾಗಿ ಭಾಷಣ ಮಾಡಿದರು. ತದನಂತರ ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾಸಂಗೀತ ನಾಟಕಮಂಡಳಿ ಹೊಳಗುಂದಿ ಇವರಿಂದ ಕೇವಲ ೧೦-೧೨ ವರ್ಷದ ಚಿಕ್ಕಬಾಲಕರಿಂದೊಡಗೂಡಿದ ಲಿಖಿತಲೀಲ ಎಂಬ ಆಖ್ಯಾನವು ಪ್ರದರ್ಶಿಸಲ್ಪಟ್ಟಿತು. ಶ್ರೀ ಮಹಾಸನ್ನಿಧಾನದವರು ಈ ಆಖ್ಯಾನವು ಆಚಾರವರಣ, ಗುರುಮಹತ್ವ, ಪಾತಿವ್ರತ್ಯಪ್ರಭಾವ ಮುಂತಾದ ನೀತಿಬೋಧಕವಿಷಯಗಳನ್ನು ಪ್ರತಿಪಾದಿಸುವುದಾದ್ದರಿಂದ, ಸರ್ವಜನಾದರಕ್ಕೆ ಪಾತ್ರವಾಗಿದೆಯೆಂದೂ, ಇಂಥ ನೀತಿಯುಕ್ತ ಆಖ್ಯಾನಗಳನ್ನು ರಂಗಭೂಮಿಯಲ್ಲಿ ಪ್ರಯೋಗಮಾಡುವುದರಿಂದ ಸಮಾಜಸುಧಾರಣೆಗೆ ತುಂಬಾ ಸಹಕಾರಿಯಾಗುವುದೆಂದೂ ಅಪ್ಪಣೆಕೊಡಿಸಿ, ಈ ಕಂಪನಿಯ ಬಾಲಕರು ಇಷ್ಟು ಚಿಕ್ಕವಯಸ್ಸಿನಲ್ಲಿ ಇಂಪಾದ ಗಾನದಿಂದ ಹಾವಭಾವಗರ್ಭಿತವಾಗಿ ಹೃದಯಾನಂದವಾಗುವಂತೆ ಪ್ರದರ್ಶಿಸಿದ್ದಕ್ಕಾಗಿ ಸುವರ್ಣಪದಕವನ್ನು ಬಹುಮಾನವಾಗಿ ದಯಪಾಲಿಸಿ, ಈ ಸಂಘವು ಉತ್ತರೋತ್ತರ ಅಭಿವೃದ್ಧಿಯಾಗುವಂತೆ ಆಶೀರ್ವದಿಸಿದರು.

ಈ ಸಮಯದಲ್ಲಿ ವೀರಶೈವ ಧರ್ಮೋದ್ಧಾರಕ್ಕಾಗಿ ಅವತರಿಸಿರುವ, ಪ್ರಭಾ ಪೋಷಣಕ್ಕಾಗಿ ೨ ರೂಪಾಯಿಗಳು ಸಮರ್ಪಿಸಲ್ಪಟ್ಟವು.

ಓರ್ವ ಪ್ರತ್ಯಕ್ಷದರ್ಶಿ

ವ್ಯವಸಾಯಗಾರರಿಗೆ ಜೋಧಪುರ ಮಹಾರಾಜರ ಸಹಾಯ

ಜೋಧಪುರದ ಮಹಾರಾಜರು ತಮ್ಮ ಸಂಸ್ಥಾನದ ಬಡ ವ್ಯವಸಾಯಗಾರರಿಗೆ ಸಹಾಯವಾಗುವ ಕಾರ್ಯಕ್ರಮಗಳನ್ನು ಕೈಗೊಳ್ಳಲಿದ್ದಾರೆ. ಅದಕ್ಕಾಗಿ ಒಂಬು ಲಕ್ಷ ರೂ ಗಳ ಸುಂಕವನ್ನು ಕಡಮೆಮಾಡಬೇಕೆಂದು ಆಗಲೇ ನಿಶ್ಚಯಿಸಿದ್ದರು. ಈಗ ಖಾಲ್ಸಾ ಮತ್ತು ಜಾಗೀರು ಕ್ಷೇತ್ರಗಳಲ್ಲಿ ಕೊಡುತ್ತಿರುವ ಸೆಸ್‌ಗಳಲ್ಲಿ ವರ್ಷಕ್ಕೆ ಸುಮಾರು ೩೫೦೦೦ ರೂ ಗಳವರೆವಿಗೆ ಕಡಿಮೆಮಾಡಬೇಕೆಂದು ನಿಶ್ಚಯಿಸಿರುವುದಾಗಿ ಕೇಳುತ್ತೇವೆ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀ ಜಗದ್ಗುರು ಪಂಚಾಚಾರ್ಯರ

ಲಿಂಗೋದ್ಭವ ಮೂರ್ತಿಗಳು

ಪಂಚಲೋಹದಲ್ಲಿ

	5 ಇಂಚು	10—0—0
	4½ „	8—0—0
ಎತ್ತರ	4	5—0—0
	3 „	4—0—0
	2½ „	2—0—0

(ಪ್ರತಿ ಒಂದು ಮೂರ್ತಿ ಸಹಿತ ಪಂಚಪಟ್ಟಿನ ಪದರಿಂದ ಅಚ್ಚು ಹಿಡಿದಿರುವ ತೋರಿಕೆ ಇಲ್ಲ)

ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿ ಉತ್ಸವಕ್ಕಾಗಿ ಬೇಕಾದ ದೊಡ್ಡ ಮೂರ್ತಿಗಳಿಗೆ ಆರ್ಡರು ಕೊಟ್ಟಲ್ಲಿ ತಯಾರುಮಾಡಿಕೊಡುತ್ತೇವೆ. ಪಂಚಲೋಹದಲ್ಲಾದರೂ ಅಥವಾ ಶುದ್ಧವಾದ ಬೆಳ್ಳಿಯಲ್ಲಾದರೂ ತಯಾರಿಸುತ್ತೇವೆ. ದೊಡ್ಡ ಮೂರ್ತಿಗಳಿಗೆ ಬೆಲೆ ಮೊದಲಾದವುಗಳನ್ನು ಪತ್ರ ದ್ವಾರಾ ತಿಳಿಯಬಹುದು.

ನಾರಾಯಣಾಚಾರ್ಯ C/o ಮಹಾಂತಿನ ಮಠ,
(7) ಚಿಕ್ಕಪೇಟೆ, ಬೆಂಗಳೂರು ಸಿಟಿ

ಶ್ರೀ ರಾಮೇಶ್ವರ ಕ್ಷೇತ್ರಕ್ಕೆ ಯಾತ್ರಾರ್ಥಿಗಳಾಗಿ ಬರತಕ್ಕ ವೀರಶೈವರಿಗೆ

ಸೂಚನೆ.

ಸುಪ್ರಸಿದ್ಧವಾಗಿರುವ ಶ್ರೀರಾಮೇಶ್ವರಕ್ಷೇತ್ರಕ್ಕೆ ಬರುವ ವೀರಶೈವರಿಗೆ ಯಾವ ಪ್ರಕಾರದ ಸೌಕರ್ಯವೂ ಇಲ್ಲದಿರುವದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ನಾವು ವೀರಶೈವರ ಪರವಾಗಿ "ಜಂಗಮವಾಡಿ" ಎಂಬ ಸ್ಥಳವನ್ನು ಏರ್ಪಡಿಸಿರುವೆವು. ವೀರಶೈವರಿಗೆ ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಒದಗಿಸಿ ಕೊಡುವೆವಲ್ಲದೆ ದರ್ಶನಾದಿಗಳಿಗೆ ಬೇಕಾಗುವ ಸುವ್ಯವಸ್ಥೆಯನ್ನು ಕಲ್ಪಿಸಿಕೊಡುವೆವು. ಮಾಹಿತಿಗಾಗಿ ನಮ್ಮ ಸಂಗಡ ಪತ್ರವ್ಯವಹಾರ ಮಾಡಬೇಕಾಗಿ ಕೋರಿಕೆ.

ಗುರುಸಿದ್ಧಸ್ವಾಮಿ,
(17) ಜಂಗಮವಾಡಿ ಮಠ, ರಾಮೇಶ್ವರ,
ಪೋ|| ರಾಮೇಶ್ವರ (S.I.Ry.)

ಜಪಾನ್ ಮಾಂಗೋಲಿಯ ಪರಿಸ್ಥಿತಿ

ಜಪಾನಿನವರು ಹೊರ ಮಾಂಗೋಲಿಯದ ಮೇಲೆ ಯುದ್ಧಪ್ರಯತ್ನವನ್ನು ನಡೆಸಿದರೆ ರಷ್ಯವು ಮಾಂಗೋಲಿಯನರಿಗೆ ಸಹಾಯಮಾಡುವುದಾಗಿ ಸ್ಟಾಲಿನ್ನರು ಹೇಳಿರುವುದಾಗಿ ತಿಳಿದುಬಂದಿದೆ.

ಪತ್ರವ್ಯವಹಾರ

ಚಾತ್ಮೀನದರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಮಹನೀಯರ ಹಿತೋಕ್ತಿಗಳು

([illegible])

೧೪ ನೇ ಅಂತಗ್ರ ಧಗೆ ವರೆ [illegible] ವನ್ನುಂಟುಮಾಡುವಂಥವು ಇವನ್ನು [illegible] ಬಂದು ಗಂಟುಬಿದ್ದಿರುತ್ತವೆಂದು ಕೆಲವು [illegible] ಅವನ್ನು [illegible] ತ್ತಿಸಹ [illegible] ದಿಂದ ವೈರಾಗ್ಯ [illegible] ಯಾವ [illegible] ಒಂದು [illegible] ತರೆ ಆಗ ಆವನ ಪುಣ್ಯ [illegible] ಕೊಳ್ಳಬೇಕು ಜಗತ್ತಿನಲ್ಲಿ [illegible] ಭಾಗ್ಯವೇ ಇಲ್ಲ [illegible] ಸುಖಸಾಧನಗಳು ಇಲ್ಲವೆ [illegible] ಸುಖಸಾಧನಗಳು [illegible] ಆ ಸುಖಸಾಧನಗಳಲ್ಲಿ [illegible] ತೋರ [illegible] ರತ್ನಪ್ರಗಳೆಂಬ ಚಿಲಿಯು ಅರಿಯದೆ ಇರುವುದರಿಂದ [illegible] ಪ್ರಗಳಿಲ್ಲವೂ ಮತ್ತು ಅವರೂ ಎಂದೆಂದಿಗೂ [illegible] ಕೊಂಡು ಇರುವೆವೆಂದು ನಂಬಿ ಮೋಸಹೋಗುವದೇ ಅವರ ದುಃಖಕ್ಕೆ ಮುಖ್ಯಕಾರಣವಾಗಿರುವದು ಆದರೆ ಪಾರಮಾರ್ಥಿಕವಾಗಿ [illegible] ಈ ತಪ್ಪು ತಿಳವಳಿಕೆಯನ್ನೆಲ್ಲಾ ಬೇರುಸಹಿತ ಕಿತ್ತೊಗೆಯುವದು ಈ ಸಂಸಾರವೆಂಬುದು ಕೊನೆಮೊದಲಿಲ್ಲದ ಸಮುದ್ರದಂತಿರುವದು ಜಗತ್ತಿನಲ್ಲಿರುವ ಜೀವಿಗಳು ಆ ಸಮುದ್ರದಲ್ಲಿ ಜಾರಿ ಬಿದ್ದವರಾಗಿರುತ್ತಾರೆ ಈಗ ಆ ಜೀವಿಗಳು ಈಜುವ ವಿಷಯದಲ್ಲಿ [illegible] ನೋಡಿದರೆ ಕಣ್ಣು [illegible] ಸಂಕಟ [illegible] ಈ ಜಗತ್ತಿನಲ್ಲಿ [illegible] ಹೊರತು [illegible] ಸಹಾಯದ ದೇಹಧಾರಿಯಾಗಿ ಒಂದು ಜೀವಾತ್ಮನು [illegible] ದೀರ್ಘಕಾಲ ಸತ್ಕರ್ಮ ದುಷ್ಕರ್ಮಗಳೆಂಬ ಅನೇಕ ಬಗೆಯ [illegible] ಗಳನ್ನು ಮಾಡಬೇಕಾಗಿ ಬರುವದು ಆಗ ಇವನಿಗೆ ಇವುಗಳ ಫಲವಾಗಿ, ವಿವಿಧ ದೇಹಗಳನ್ನು ಎತ್ತುತ್ತ ಸಾಯುತ್ತ ವಿವಿಧ ಅನುಭವಗಳನ್ನು ಪಡೆಯುತ್ತ ಸ್ವಪ್ನದಂತೆ ಭಯಂಕರವಾದ ಸಾಗರದಲ್ಲಿ ಪ್ರವೇಶಿಸುವದೂ ತಪ್ಪದಿರಲೆಂದು [illegible] ಲಭ್ಯವಾಗಿದ್ದ ಪುಣ್ಯ [illegible] ದರೂ ಹೆಚ್ಚು ಹಣವನ್ನು ಸಂಪಾದಿಸಬೇಕೆಂದು [illegible] ಮಾರ್ಗದಲ್ಲಿ ಕಳ್ಳರ ಕೈಗೆ [illegible] ಸಿಕ್ಕಿದ್ದು ಇದ್ದುದುಬದ್ದುದನೆಲ್ಲ ಕಳೆದುಕೊಳ್ಳುವಂತೆ ಇಂದ್ರಿಯಗಳಿಗೂ ಕಾಮಕ್ರೋಧಾದಿ ಷಡ್ವರ್ಗಗಳಿಗೂ ವಶನಾಗಿ [illegible] ಹೋಗುವದು ಮಾತ್ರವಲ್ಲದೆ [illegible] ಸಿಕ್ಕಿದ ಹುರಿಯನ್ನು [illegible] ಹಾಗೆ ಕಿತ್ತು [illegible] ಲೇಶಮಾತ್ರ ಸತ್ವ [illegible] ದಲ್ಲಿ ಪಡೆಯಬೇಕೆಂದು ಪ್ರಯತ್ನಿಸತೊಡಗುವ ಜೀವನು [illegible] ದರೂ ಹೆಂಡತಿ, ಮಕ್ಕಳು, ನೆಂಟರಿಷ್ಟರ ಮೇಲಿನ ಮೋಹವು ಅಂಟಿಕೊಂಡು [illegible] ದಿಸುತ್ತಿರುವದು ಅಜ್ಞಾನಿಯಾದ ಜೀವಾತ್ಮನಾದರೋ ಮಾಯಾಮೋಹಿತನಾಗಿ ಹೆಂಡರು, ಮಕ್ಕಳು ನೆಂಟರಿಷ್ಟರನ್ನೇ ಕೇವಲ ತನ್ನ ಹಿತಚಿಂತಕರೆಂದು ಭಾವಿಸುವನು ಅವರ ಸಂತೋಷಕ್ಕೆಂದು ದ್ರವ್ಯಾದಿಗಳನ್ನು ಸಂಪಾದಿಸುವುದಕ್ಕಾಗಿ ಬಣಿವೆ ಮನೆಗಳಿಗೆ ಬೆಂಕಿ ಹಚ್ಚುವ ದುಷ್ಟರಿಗಿಂತ ದುಷ್ಟನಾಗಿ ಹಾದಿಯ ಬಡಿಯುವ ಕಳ್ಳರಿಗಿಂತ ಕಳ್ಳನಾಗಿ, ನಿಷ್ಕರುಣತ್ವದಿಂದ ಕುರಿ ದನಗಳನ್ನು ಕತ್ತರಿಸುವ ಕಟುಕನಿಗಿಂತ ಕಟುಕನಾಗಿ ಆವನು ಮಾಡತೊಡಗುವ ಘೋರಪಾಪಗಳಿಗೆ ಕೊನೆಮೊದಲಿಲ್ಲ ಸಲದುದಕ್ಕೆ ಅವನಿಗೆ ಈ ಭವಾಟವಿಯಲ್ಲಿ ದುರ್ಜನರೆಂಬ ಕಾಡುನಾಯಿ, ಜೇನು ತಗಣಿ, ಗೊದ್ದ ಸೊಳ್ಳೆಗಳ ಕಾಟವೂ ಸಂಭವಿಸುವದು ಮತ್ತು ಇಷ್ಟರನ್ನು ಜಗಳವಾಡಹಚ್ಚಿ ತನ್ನ ಹೊಟ್ಟೆಯನ್ನು ಹುಸದಲ್ಲಿ ಕೆಡವಿಕೊಳ್ಳುವ ಅಥವಾ [illegible] ಶಕ್ಯ ಸಂಭವಿತರ ವಿತ್ತ ಕಂಕುಳಲ್ಲಿ ದೋಣ್ಣೆ ಕೈಯಲ್ಲಿ ಕಠಿಣ ಎನ್ನುವ ಗೋಮುಖವ್ಯಾಘ್ರಗಳ ಸಹವಾಸವು ದೊರೆಯುವದು ಅವನು ವೃದ್ಧಾಪ್ಯದಲ್ಲಿ ತರುಣಸ್ತ್ರೀಯರ ಮೋಹಬಲೆಯೆಂಬ ಕಗ್ಗತ್ತಲೆಯಲ್ಲಿ ಸಿಕ್ಕವನಾಗಿ ತಿಳಿಯದೆ ಸಂಕಟಪಡತೊಡಗುವನು ಮತ್ತು ವಿಷಯಾಭಿಲಾಷೆಯೆಂಬ ಅಂಧಕೂಪದಲ್ಲಿ ಬಿದ್ದವನು ಮಾಡತೊಡಗುವ ಅತ್ಯಾಚಾರಗಳಾದರೋ ಗಣಿತವಿಲ್ಲದವು.

ಈ ವಿಷಯಾದಿಗಳು ಮರೀಚಿಕಾ ಜಲದಂತೆ ಜೀವನಿಗೆ ಮಿಥ್ಯಾ ಭ್ರಾಂತಿಯನ್ನು ಹುಟ್ಟಿಸುತ್ತ ಹಚ್ಚುಹಿಡಿದ ನಾಯಿಯೋಪಾದಿಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಅಲೆದಾಡಿಸುತ್ತಿರುವವು ದ್ರವ್ಯಭ್ರಾಂತಿಯಿಂದ ಇತನ ಮಿತಿಮೀರಿ ಮೋಸ, ವಿಶ್ವಾಸಘಾತಕತನ ಸುಳ್ಳು ಕುಟಿಲತೆ, ಕುಯುಕ್ತಿ ಇತ್ಯಾದಿ ಪಾಪಕಾರ್ಯಗಳಲ್ಲಿ ಪ್ರವೇಶಿಸಿ ಒಹವಾಗಿ ಬಳಲುವನು ಫಲಾಪೇಕ್ಷೆಯಾಗಿ ಈಚಲು, ಜಾಲಿ, ಮೊದಲಾದ ಪಾಪವೃಕ್ಷಗಳನ್ನು ಆಶ್ರಯಿಸುವ ಪಾರಿಗನಂತೆ ಅವನು ಧನದ ಅತಿಲೋಭಿಗಳಾದ ಧನವಂತರನ್ನು ಆಶ್ರಯಿಸಿ ವೃಥಾ ಸಂಕಟಪಡುವದಲ್ಲದೆ ಎಂಥವರಾದರೂ ತಿರಬಗಿ ಕಿರುನಗೆಯಿಂದ ಕೈಜೋಡಿಸುವನು ದಾರಿದ್ರ್ಯವೆಂಬ ಮರುಭೂಮಿಯನ್ನು ಪ್ರವೇಶಿಸಿದಾಗಲಂತೂ ಅವನು ಕೊನೆ ಮೊದಲಿಲ್ಲದ ನರಕಯಾತನೆಗಳಿಗೆ ತಾಯಿಮನೆಯಾಗಿ, ಸಕಲವಿಧವಾದ ದುಃಖಗಳಿಗೂ ಆಶ್ರಯಸ್ಥಾನವಾಗಿ, ಸಂಕಟಪಡತೊಡಗುವನು ಇಷ್ಟಾದರೂ ಭಗವನ್ನಾಯಾಮೋಹಿತನಾದ ಆ ಕ್ಷುದ್ರ ಪ್ರಾಣಿಯು ಅವುಗಳ ಒಂದನ್ನೂ ಕಿತ್ತೊಗೆಯಲು ಇಷ್ಟಪಡದೆ, ಅವುಗಳನ್ನೇ ಸ್ವರ್ಗವೆಂದೂ, ವೈಕುಂಠಪದವಿಯೆಂದೂ ಭಾವಿಸಿಕೊಂಡು ಅವುಗಳಲ್ಲೇ ಬಿದ್ದು ಹಿಗ್ಗುತ್ತಾ, ಮುಗ್ಗರಿಸುತ್ತಾ ಬಿಸುಸುಯ್ಯುತ್ತ ನಗುತ್ತಾ, ಅಳುತ್ತಾ ಸಂತೋಷಿಸುತ್ತಾ, ದುಃಖಿಸುತ್ತಾ ಹೊಗೆಯೇ ಏಳುತ್ತಾ ಬೀಳುತ್ತಾ ಹಲವು ಜನ್ಮಗಳನ್ನೆತ್ತಿ ಮೇಲಿಂದ ಮೇಲೆ ಗರ್ಭವಾಸದುಃಖಕ್ಕೆ ಪಾತ್ರನಾಗುತ್ತ ಸಾಗುತ್ತಿರುವನು ಪುಣ್ಯಕರ್ಮಾಧಿಕ್ಯತೆಯಿಂದ ಸ್ವರ್ಗವನ್ನು ಪಡೆದು ಕೆಲವು ಕಾಲ ಸುಖಪಡಬಹುದು ಆದರೂ ಇದರಿಂದ ಜನನಮರಣರೂಪವಾದ ಈ ಸಂಸಾರ ಪರಿಭ್ರಮಣವೂ ಭವಾರಣ್ಯದಲ್ಲಿ ಪಡುವ ಅಸಹ್ಯ, ಅಸಭ್ಯವೇದನೆಗಳೂ ತಪ್ಪಲಾರವು ಆದರೆ ಅವುಗಳಿಂದ ತಪ್ಪಿಸಿಕೊಂಡು ಸುಖಿಸಬೇಕೆಂಬುವವನಿಗೆ ಒಂದೇ ಒಂದು ಮಾರ್ಗವುಂಟು ಪಾಠಕಮಹಾಶಯ! ಅದಾವುದೆಂದರೆ ಭಗವಂತನ ಚರಣಕಮಲಗಳ ಆಶ್ರಯವಲ್ಲದೆ ಸಂಸಾರಬದ್ಧನಾದ ಜೀವಿಗೆ ಬೇರೊಂದು ಉಪಾಯವಿಲ್ಲವು ಹೇ ಮೂಢಜೀವಿಗಳೇ! ಪರಮಲೋಭಿಗಳೇ ಇನ್ನಾದರೂ ನಿಮ್ಮ ಮದಮತ್ಸರ, ಲೋಭತ್ವ, ದುರಭಿಮಾನಬಿಟ್ಟು ಸನ್ಮಾರ್ಗದಲ್ಲಿ ಕಾಲಿಡಿರೆಂದು ನಿಮ್ಮ ಹಿತಚಿಂತನೆಯಿಂದ ಸೂಚಿಸುವೆನು ಆದರೆ "ಕಲಿತ ಗುಣವನ್ನು ಬಿಟ್ಟೆನು ಕಲ್ಲು ಹಾಯಲೇ" ಎಂದು ಹೇಳುವ ಕುಂಟಣಗಿತ್ತಿಯಂತೆ ದುರಭಿಮಾನಕ್ಕೆ ಬಿದ್ದು ಹಣದ ಮೋಹಕ್ಕೊಳಗಾಗಿ, ವಿಷಯಾಭಿಲಾಷೆಯಿಂದ ಕಣ್ಣುಕಟ್ಟಿಕೊಂಡು ಓಡತೊಡಗಿದವನು ಹಾಳು ಬಾವಿಗೆ ಬಿದ್ದಂತೆ ನರಕದ ಬಾಗಿಲನ್ನೇ ಪ್ರವೇಶಿಸುತ್ತೇನೆಂದರೆ ಯಾರೇನು ಮಾಡುವರು? ನಿಮ್ಮಿಷ್ಟ!

(ಸಶೇಷ)

ಆರ್. ಎಂ. ಮಲ್ಲಿಕಾರ್ಜುನಾರಾಧ್ಯ, ತಿಪ್ಟೂರ

ಶ್ರೀ ಜಗದ್ಗುರು ವಿಶ್ವಾರಾಧ್ಯ ಮತ್ತು ಪಂಡಿತಾರಾಧ್ಯರ ಜಯಂತೀಮಹೋತ್ಸವ ಶ್ರೀಕ್ಷೇತ್ರಕಾಶೀ

ಪರಮಪವಿತ್ರವಾದ ಮಹಾಶಿವರಾತ್ರಿಯು ವರ್ಷಕ್ಕೆ ಒಂದು ಸಾರಿ ಬರುತ್ತದೆಂಬ ವಿಷಯವು ಸಮಸ್ತರಿಗೂ ತಿಳಿದ ವಿಷಯವಾಗಿದೆ ಇದರ ಮಹಿಮಾತಿಶಯಗಳನ್ನು ತಿಳಿಯುವುದಕ್ಕಾಗಿ ಎಲ್ಲರೂ ಇಚ್ಛಿಸುತ್ತಾರೆ ಶಿವರಾತ್ರಿವ್ರತಂ ನಾಮ ಸರ್ವಪಾಪಪ್ರಣಾಶನಂ || ಎಂಬಂತೆ ಶಿವರಾತ್ರಿವ್ರತವು ಸಮಸ್ತಪಾಪಗಳನ್ನು ನಾಶ

ಮಾಡುತ್ತದೆಂದು ಈಶಾನಸಂಹಿತೆಯಲ್ಲಿ ಹೇಳಿದೆ ಅದೇ ರೀತಿಯಾಗಿ ಪದ್ಮಪುರಾಣದಲ್ಲಿಯೂ ಕೂಡ

ಶೃಣು ರಾಜನ್ ! ಪ್ರವಕ್ಷ್ಯಾಮಿ ಶಿವರಾತ್ರಿವ್ರತಂ ತವ | ವ್ರತಾನಾಮುತ್ತಮಂ ಸಾಕ್ಷಾತ್ಶಿವಲೋಕೈಕ ಸಾಧನಂ || ಮಾಘಫಾಲ್ಗುಣಯೋರ್ಮಧ್ಯೇ ಕೃಷ್ಣ ಪಕ್ಷೇ ಚತುರ್ದಶಿ || ಶಿವರಾತ್ರಿರಿತಿಖ್ಯಾತಾ ಸರ್ವಪಾಪಹಾರಿಣೀ | ಕೃತೋಪವಾಸಾ ಯೇ ತಸ್ಯಾಂ ಶಿವಮರ್ಚಂತಿ ಜಾಗ್ರತಃ | ಬಿಲ್ವಪತ್ರೈರ್ವಿಶಿಷ್ಟೈಸ್ತು ಯಾಂತಿ ಶಿವತುಲ್ಯತಾಂ || ಎಲೈ ರಾಜನೇ ವ್ರತಗಳಲ್ಲಿ ಉತ್ತಮವಾದ ಮತ್ತು ಸಾಕ್ಷಾತ್ ಶಿವಲೋಕಕ್ಕೆ ಸಾಧನಭೂತವಾದ ಶಿವರಾತ್ರಿಯ ಮಹಿಮೆಯನ್ನು ಕೇಳು !

ಮಾಘ ಫಾಲ್ಗುಣಗಳ ಮಧ್ಯದ ಕೃಷ್ಣಪಕ್ಷದಲ್ಲಿಯ ಚತುರ್ದಶಿಯು ಸಮಸ್ತ ಪಾಪಗಳನ್ನು ಪರಿಹಾರ ಮಾಡತಕ್ಕದ್ದಾಗಿರುವದು ಇದೇ ಶಿವರಾತ್ರಿ ಎಂದೆನಿಸಿ ಈ ಶಿವರಾತ್ರಿಯಲ್ಲಿ ಉಪವಾಸವನ್ನು ಮಾಡಿ ನಿದ್ರೆಯನ್ನು ಮಾಡದೆ ಯಾರು ಬಿಲ್ವಪತ್ರ ಮೊದಲಾದವುಗಳಿಂದ ನಾಲ್ಕು ಪ್ರಹರದವರೆಗೂ ಶಿವನನ್ನು ಪೂಜಿಸುತ್ತಾರೆಯೋ ಅವರು ಶಿವಸಮಾನರಾಗುತ್ತಾರೆ ದು ಹೇಳಲ್ಪಟ್ಟಿದೆ ವಾಚಕ ಮಹಾಶಯರೇ ! ಈ ಮಹಾಶಿವರಾತ್ರಿಯ ಮಹಿಮಾತಿಶಯವು ಯಾರಿಂದ ತಾನೆ ವರ್ಣಿಸಲಿಕ್ಕೆ ಶಕ್ಯವಾದೀತು ? ಮಾನವರ ಉದ್ಧಾರಕ್ಕೋಸುಗ ಪೂರ್ವಕಾಲದಲ್ಲಿ ಸಮಸ್ತ ದೇವತೆಗಳು ಪರಮಾತ್ಮನನ್ನು ಕುರಿತು ಎಲೈ ಪರಮಾತ್ಮನೇ ಅನೇಕ ಪಾಪಗಳಿಂದ ಕೂಡಿರತಕ್ಕ ಈ ಕಲಿಕಾಲದಲ್ಲಿಯ ಜನರ ಪಾಪಶುದ್ಧಿಯ ಸಲುವಾಗಿ ಭೂಮಂಡಲದಲ್ಲಿ ಒಂದು ದಿವಸವಾದರೂ ಅವತರಿಸಬಾರದೇ ? ನೀನು ಅವತರಿಸುವದರಿಂದ ನಿನ್ನ ಪೂಜೆಯನ್ನು ಮಾಡಿ ಮನುಷ್ಯರು ಪಾಪರಹಿತರಾಗುವರು ಎಂದು ಪ್ರಾರ್ಥಿಸಿದರು ಆಗ ಪರಮೇಶ್ವರನು ಪ್ರತ್ಯಕ್ಷನಾಗಿ ಅವರಿಗೆ,

ಮಾಘಮಾಸಸ್ಯ ಕೃಷ್ಣಾಯಾಂ ಚತುರ್ದಶ್ಯಾಂ ಸುರೇಶ್ವರಾಃ | ಅಹಂಯಾಸ್ಯಾಮಿ ಭೂಪೃಷ್ಠೇ ರಾತ್ರೌನೈವದಿವಾಕರೌ || ಲಿಂಗೇಷು ಚ ಸಮಸ್ತೇಷು ಚರೇಷು ಸ್ಥಾವರೇಷು ಚ | ಸಂಕ್ರಮಿಷ್ಯಾಮ್ಯಸಂದಿಗ್ಧಂ ವರ್ಷಪಾಪವಿಶುದ್ಧಯೇ ||

ಎಲೈ ದೇವತೆಗಳಿರಾ ! ಕಲಿಯುಗದಲ್ಲಿ ಮಾಘಮಾಸ ಕೃಷ್ಣಪಕ್ಷದ ಚತುರ್ದಶಿಯ ರಾತ್ರಿಯ ಶಿವರಾತ್ರಿಯಲ್ಲಿ ನಾನು ಭೂಮಂಡಲಕ್ಕೆ ಹೋಗುವೆನು. ಮತ್ತು ನಿಶ್ಚಯವಾಗಿ ಸಮಸ್ತ ಚರಾಚರ ಲಿಂಗಗಳಲ್ಲಿಯೂ ವಾಸಮಾಡುವೆನು ಆದ ನನ್ನ ಪೂಜೆಯನ್ನು ಮಾಡುವುದರಿಂದ ಜನರ ವರ್ಷದಲ್ಲಿ ಮಾಡಿರತಕ್ಕ ಪಾಪಗಳೆಲ್ಲವೂ ನಷ್ಟವಾಗುವವು ಎಂದು ಅಪ್ಪಣೆ ಕೊಡಿಸಿದ್ದಾನೆ ಉತ್ಪತ್ತಿ ಸ್ಥಿತಿ ಸಂಹಾರಗಳಿಗೆ ಕಾರಣೀಭೂತನಾದ ಪರಶಿವನ ಜ್ಞಾನಾಂಶರಾಗಿ ಯುಗಾದಿಯಲ್ಲಿ ನಮ್ಮೀ ಪರಮಪವಿತ್ರವಾದ ಭೂಮಂಡಲದಲ್ಲಿರತಕ್ಕ ಜ್ಯೋತಿರ್ಲಿಂಗಗಳಲ್ಲಿ ಗಣನೆಯಾದ ಸೋಮೇಶ್ವರಾದಿ ಪಂಚಲಿಂಗಗಳಿಂದ ಶ್ರೀಮತ್ಪಂಚಾಚಾರ್ಯರು ಉದ್ಭವಿಸಿ ಭರತಖಂಡದಲ್ಲಿದ್ದ ನಾಸ್ತಿಕ ಮತಗಳನ್ನು ಖಂಡಿಸಿ ವೇದಾಗಮಪ್ರಸಿದ್ಧವಾದ ಪರಮಪವಿತ್ರವಾದ ವೀರಶೈವಮತವನ್ನು ಸ್ಥಾಪಿಸಿ ಮಹಾ ಮಹಾ ಋಷಿಗಳಿಗೆ ಶಿವತತ್ವೋಪದೇಶವನ್ನು ಮಾಡಿ ಶಿವಭಕ್ತಿಯನ್ನು ಸ್ಥಿರಗೊಳಿಸಿದರೆಂಬ ವಿಷಯವು ನಮ್ಮ ಭೂಮಂಡಲದಲ್ಲಿರತಕ್ಕ ಸಮಸ್ತವೀರಶೈವರಿಗೂ ವೇದ್ಯವಾದ ವಿಷಯವೇ ಇರುತ್ತದೆ ಹೀಗಿರುವ ಆ ಜಗದ್ಗುರು ಪಂಚಾಚಾರ್ಯರಲ್ಲಿ ಇಬ್ಬರಾಗಿರತಕ್ಕ ಶ್ರೀ ಜಗದ್ಗುರು ವಿಶ್ವಾರಾಧ್ಯ ಶ್ರೀ ಜಗದ್ಗುರು ಪಂಡಿತಾರಾಧ್ಯರ ಜಯಂತಿಮಹೋತ್ಸವವು ಭೂಕೈಲಾಸವೆಂದು ಸುಪ್ರಸಿದ್ಧವಾದ ವಾರಾಣಸೀ ಕ್ಷೇತ್ರದಲ್ಲಿ (ಕಾಶಿಯಲ್ಲಿ) ವಿರಾಜಿಸುತ್ತಿರುವ ಜಂಗಮವಾಡೀಮಠದಲ್ಲಿ ತಳಿರುತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ನಾನಾವಿಧಬಣ್ಣಗಳಿಂದ ಕೂಡಿರತಕ್ಕ ವಿದ್ಯುದ್ದೀಪಗಳಿಂದಲೂ ಚಿತ್ರಗಳಿಂದಲೂ ನಿರ್ಮಿತವಾದ ಕೈಲಾಸಮಂಟಪದಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು ಪ್ರಾತಃಕಾಲ ೬ ಘಂಟೆಯಿಂದ ೧೨ ಘಂಟೆಯವರೆಗೆ ಶ್ರೀ ಜಗದ್ಗುರು ವಿಶ್ವಾರಾಧ್ಯ ಶ್ರೀ ಜಗದ್ಗುರು ಪಂಡಿತಾರಾಧ್ಯ ಮೂರ್ತಿಗಳಿಗೆ ಹನ್ನೊಂದು ಜನ ವೈದಿಕರಿಂದ ಮಹಾರುದ್ರಾಭಿಷೇಕವು ಸಾಂಗವಾಗಿ ನೆರವೇರಿಸಲ್ಪಟ್ಟಿತು ಕೈಲಾಸ ಮಂಟಪದ ಶೃಂಗಾರವು ಈ ದೇಶದ ಸಮಸ್ತ ಜನರ ದರ್ಶನಕ್ಕೋಸಗ ಶಿವರಾತ್ರಿಯ ದಿವಸ ತೆರೆಯುತ್ತದೆಂದು ಸುಪ್ರಸಿದ್ಧವಿದ್ದುದರಿಂದ ಆ ದಿವಸ ಸಾವಿರಾರು ಜನರು ತಂಡೋಪತಂಡವಾಗಿ ಹರಹರ ಮಹಾದೇವ ಶಂಭೋ ! ಕಾಶೀವಿಶ್ವನಾಥಗಂಗೇ ಎಂದು ಜಯಘೋಷದೊಡನೆ ಸಾಲುಸಾಲಾಗಿ ಬರುತ್ತಿರುವದನ್ನು ನೋಡಿದರೆ ಎಂಥ ನಾಸ್ತಿಕನೂ ಕೂಡ ಆಸ್ತಿಕನಾಗವಂತಿದ್ದಿತು ದರ್ಶನ ಧ್ವಾನಿ ಬರತಕ್ಕ ಜನಸಂದೋಹವು ರಾತ್ರಿ ೧೦ ಘಂಟೆಯವರೆಗೂ ಇದ್ದಿತು ವಿಶ್ವಾರಾಧ್ಯರ ಪೀಠದಲ್ಲಿರತಕ್ಕ ೪೫ ನೂರು ಜನ ವೀರಶೈವ ಯಾತ್ರಾರ್ಥಿಗಳ ಗಂಗಾಸ್ನಾನವನ್ನು ಮಾಡಿಕೊಂಡು ಪವಿತ್ರ ಮನಸ್ಸುಳ್ಳವರಾಗಿ ಕೈಲಾಸ ಮಂಟಪದಲ್ಲಿ ಆಸನಗಳಲ್ಲಿ ಕುಳಿತಿರುವಾಗ ವೇದವಿತ್ತಿಯಿಂದ ವೇದಘೋಷದೊಡನೆ ಅವರೆಲ್ಲರ ಇಷ್ಟಲಿಂಗಗಳಿಗೆ ಷೋಡಶೋಪಚಾರದಿಂದಲಿಂದ ಪೂಜೆಯು ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು ಇಷ್ಟುಜನರ ಪೂಜೆಗಳ ಹರಗಳು ಮುಗಿಯುವುದರೊಳಗಾಗಿಯೇ ೧೦ ಘಂಟೆಯಾಯಿತು ಅನಂತರ ಶ್ರೀ ವಿಶ್ವಾರಾಧ್ಯರ ಪೀಠದಮುಂಭಾಗದಲ್ಲಿ ಸಭೆಯು ಸರಿ ೧೦ ಘಂಟೆಯಿಂದ ಶಿವಭಜನೆಯೂ ಶಿವಕೀರ್ತನಗಳೂ ಪ್ರಾರಂಭವಾಗಿ ರಾತ್ರಿ ಒಂದು ಘಂಟೆಯವರೆಗೂ ನಡೆದವು ಮಹಾರಾಷ್ಟ್ರ ಕೀರ್ತನಕಾರರಾದ ಕೀರ್ತನರತ್ನ ದತ್ತಾತ್ರೇಯ ಬಪ್ಪಾಜಿ ನಾರಂಗಡೆ ಬಿರುದಾಂಕಿತರಾದ ಇವರು ಶಿವಭಕ್ತ ಬೆಳಿಯಾ ಎಂಬ ಕೀರ್ತನವನ್ನು ಹೃದಯಂಗಮವಾಗಿಯೂ ಬಹು ಮನೋಹರವಾಗಿಯೂ ಮಾಡಿದರು ಈ ಮಹೋತ್ಸವದಲ್ಲಿ ಕಾಶಿಯ ಸುಪ್ರಸಿದ್ಧ ಪಂಡಿತರಾದ ಸಾಹಿತ್ಯಾಚಾರ್ಯ ಮಹೋಪಾಧ್ಯಾಯ ಪಂ|| ಶ್ರೀ ಗಿರೀಶ ಧರ ಶರ್ಮರವರು ದಯಮಾಡಿಸಿದ್ದರು ಉತ್ಸವವನ್ನು ನೋಡಿ ಬಹಳವಾಗಿ ಆನಂದಪಟ್ಟರು ಶಿವಕೀರ್ತನೆಯು ಮುಗಿದ ನಂತರ ಮಂಗಳಾರತಿ ನಡೆದು ಪುಷ್ಪಾಂಜಲಿಯು ಆದ ಮೇಲೆ ಕೀರ್ತನಕಾರರಿಗೂ ಹಾರ್ಮೋನಿಯಂ ತಬಲ ಮಾಸ್ತರರಿಗೂ ಶ್ರೀ ಮಹಾಸಂಸ್ಥಾನದಿಂದ ಯೋಗ್ಯ ಮರ್ಯಾದೆಯು ಮಾಡಲ್ಪಟ್ಟಿತು ಯಾತ್ರಿಕರಿಗೂ ನೆರೆದಿದ್ದ ಪಂಡಿತರಿಗೂ ಫಲಾಹಾರ ಪ್ರಸಾದಗಳು ಹಂಚಲ್ಪಟ್ಟವು ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾರಾಜಕೀ ಜೈ ಶ್ರೀ ಜಗದ್ಗುರು ಪಂಡಿತಾರಾಧ್ಯ ಮಹಾರಾಜಕೀ ಜೈ ! ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ ! ಎಂಬ ಜಯಘೋಷದೊಡನೆ ಸಭೆಯು ಸಮಾಪ್ತವಾಯಿತು

ಕಾಶೀ ವೀರಶೈವ ವಿದ್ಯಾರ್ಥಿಸಂಘ

ಶ್ರೀ ಜಯಂತಿ ಮಹೋತ್ಸವ

ಮುಂಡರಗಿ ತಾಲ್ಲೂಕ ಸಿಂಗಟಾಲೂರು ಎಂಬ ಗ್ರಾಮದಲ್ಲಿ ವೀರಶೈವ ಮತಸಂಸ್ಥಾಪನಾಚಾರ್ಯವರ್ಯರಾದ ಪಂಡಿತಾರಾಧ್ಯ, ಏಕೋರಾಮಾರಾಧ್ಯರೆಂಬ ಉಭಯ ಜಗದ್ಗುರುಗಳು ಜಗದ್ಧಿತಾರ್ಥವಾಗಿ ಭೂಮಿಗೆ ಆಗಮಿಸಿದ ಪುಣ್ಯದಿನವಾದ ಮಹಾಶಿವರಾತ್ರಿ ಜಯಂತಿ ಮಹೋತ್ಸವವನ್ನು ಶ್ರೀ ಗುರುಲಿಂಗ ಪ್ರೇಮಿಗಳಾದ ಶ್ರೀಯುತ ಗುಡವೀರಪ್ಪಾ ದೇಸ್ಥು ಮತ್ತು ಸಮಾಜಾಭಿಮಾನಿಗಳಾದ ವೇ|| ಸಿದ್ಧಾಂತಿ ಗಂಗಾಧರಶಾಸ್ತ್ರೀ ಪ್ರಸನ್ನದೇವರ ಮಠೀಯ ಅನ್ನದಾನಯ್ಯಾಸ್ವಾಮಿ, ವೇ|| ಪಟದಯ್ಯಾ ಸ್ವಾಮಿ ಹೆಚ್ ಎಂ ಸಂಗಯ್ಯಾಸ್ವಾಮಿ ಎಂ|| ಮಠ, ಇವರೇ ಮೊದಲಾದವರು ನಂದೀಶ್ವರ ದೇವಾಲಯದಲ್ಲಿ ಮೇಲ್ಕಂಡ ಉಭಯ ಜಗದ್ಗುರು ಫೋಟೋಗಳನ್ನು ಅಷ್ಟವಿಧಾರ್ಚನೆ ಷೋಡಶೋಪಚಾರ ಸಹಸ್ರಬಿಲ್ವದಳಗಳಿಂದ ೪ ಘಂಟೆವರೆಗೂ ಅರ್ಚಿಸಿ ವೇ|| ಪಟದಯ್ಯ ಹಿ|| ಮಠ ಚನ್ನವೀರಯ್ಯ ಹಿ|| ಮಠ ಮತ್ತು ಪಂಚಯ್ಯ ಸಾ|| ಹಿ|| ಮಠ ರಾ|| ಗುಂಡಪ್ಪಾ ಬಿ|| ಮುಗ್ಗದ ಈ ಮೊದಲಾದವರು ಮಿಲಿತರಾಗಿ ಬಹು ಆನಂದದಿಂದ ಭಜನೆ ಮಾಡಿದರು ಆ ಕೂಡಲೆ ಉತ್ಸವಕ್ಕಾಗಿ ಆಗಮಿಸಿದ ಹಿರೇಹಡಗಲಿ ದರ್ಜಿ ಮುಕ್ಕುಂದಪ್ಪಾ ಶೀರ್ನಹಳ್ಳಿಗೌ|| ಮಲ್ಲರಪ್ಪಾ ಮಯೂರಪುರ ವಗೈರೆ ಗ್ರಾಮಗಳ ಭಕ್ತಜನರಿಂದಲೂ ಸ್ವಗ್ರಾಮದ ಅನಂತ ಅಬಾಲವೃದ್ಧರ ಸಮೂಹದಿಂದಲೂ, ಬಾಜ ಭಜಂತ್ರಿ, ಮುಂತಾದ ಮಂಗಳವಾದ್ಯಗಳಿಂದಲೂ ಗರಗಳ ಆಂದೋಳಿಕೋತ್ಸವವು ಬಹು ವಿಜೃಂಭಣೆಯಿಂದ ಜರುಗಿ ಶ್ರೀ ದೇವಾಲಯಕ್ಕೆ ಆಗಮಿಸಿದನಂತರ ಶ್ರೀಯುತ ಗುಡವೀರಪ್ಪನವರು ಭಕ್ತಮಾಹೇಶ್ವರರ ಕರ್ತವ್ಯ ಎಂಬ ವಿಷಯದ ಮೇಲೂ ಸದರಿ ಶಾಸ್ತ್ರಿಗಳ ಶಿವರಾತ್ರಿ ವಿಷಯವಾಗಿಯೂ ಜಗದ್ಗುರು ಜಯಂತಿ ವಿಷಯವಾಗಿಯೂ ಸರಸವಾದ ಉಪನ್ಯಾಸಗಳನ್ನು ಮಾಡಿದರು ಬಳಿಕ ಜಗದ್ಗುರು ಜಯ ಜಯ ಕಾರದೊಡನೆ ಸಭಾವಿಸರ್ಜನೆ ಮಾಡಲ್ಪಟ್ಟಿತು

ಪಟದಯ್ಯಾಸ್ವಾಮಿ ಹೆಚ್ ಎಂ ಮಠಾಗಳ

ಶ್ರೀ ಜಗದಾಚಾರ್ಯರ ಜಯಂತೀ ಮಹೋತ್ಸವವೂ, ಕೀರ್ತನಸಮಾರಂಭವೂ,

ಕನಕಗಿರಿ

ಪ್ರತಿವರುಷದಂತೆ ರಾಯಚೂರ ಜಿಲ್ಲಾ ಕನಕಗಿರಿ ಶ್ರೀಮಾನ್ ಚನ್ನನಗೌಡರ ಪೋಲೀಸ್ ಅಮಿಲ್ದಾರ್ ಸಾಹೇಬ ಬಿ ಎ, ಬಿ ಎಲ್, ಈ ಮಹೋದಯರ ಗೃಹದಲ್ಲಿ ಇದೇ ಸಂ|| ಮಾಘ ಬ|| ೧೪ ಶುಕ್ರವಾರದ ದಿವಸ ಉದಯ ಶ್ರೀ ಷ| ಬ್ರ|| ಪಂಚಾಕ್ಷರಶಿವಾಚಾರ್ಯರು ಬೃಹನ್ಮಠ ಕನಕಗಿರಿ ಇವರ ಸನ್ನಿಧಿಯಲ್ಲಿ ವೇ|| ಗದಿಗಯ್ಯ ಹಾಲುಮಠದ ಶಿವಲಿಂಗೇಶ್ವರ ಇವರ ಪ್ರಾಧಿಕತ್ವದಿಂದ ಶ್ರೀ ಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯ ಮೂರ್ತಿಗಳಿಗೆ ಏಕದಶವಾರ ರುದ್ರಾಭಿಷೇಕವು ಸಹಸ್ರ ಬಿಲ್ವಾರ್ಚನೆಯೂ ಸಕ್ರಮವಾಗಿ ಮಾಡಲ್ಪಟ್ಟಿತಲ್ಲದೆ ಅನೇಕ ಭಕ್ತಮಾಹೇಶ್ವರರಿಗೆ ಅನ್ನದಾನವು ನೆರವೇರಿತು ಸಾಯಂಕಾಲ ೫ ಘಂಟೆಗೆ ನೂತನವಾಗಿ ಶೃಂಗರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಉಭಯ ಜಗದ್ಗುರುಗಳವರ ಫೋಟೋಗಳನ್ನು ಮೂರ್ತಮಾಡಿಸಿ ತಳಿರುತೋರಣಗಳಿಂದಲೂ, ರಂಭಾಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟ ಬೀದಿಯಲ್ಲಿ ಸಕಲ ವಾದ್ಯಸಮೇತ ಉತ್ಸವವು ಹೊರಟಿತ ಮಧ್ಯದಲ್ಲಿ ಸುಮಂಗಲೆಯರು ಆರತಿಯನ್ನು ಬೆಳಗಿ ಭಕ್ತಿಯನ್ನು ವ್ಯಕ್ತಗೊಳಿಸುತಿದ್ದರು ಎಲ್ಲಿನೋಡಿದರೂ ಜಗದಾಚಾರ್ಯರ ಜಯಜಯಕಾರವೇ ಜಯ ಜಯಕಾರವಾಗಿತ್ತು ಈ ರೀತಿಯಾದ ಉತ್ಸವವು ರಾತ್ರಿ ೯ ಘಂಟೆಗೆ ಸ್ವಸ್ಥಾನವನ್ನು ಸೇರಿದಬಳಿಕ ಮ|| ಅಮಿಲ್ದಾರ ಸಾಹೇಬ ಬಿ ಎ, ಬಿ ಎಲ್, ಇವರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆಯು ನೆರವೇರಿತು ಆಗ್ಗೆ ಶ್ರೀ ಪಟ್ಟಾಧ್ಯಕ್ಷರವರು ನೆರೆದ ಜನವೃಂದಕ್ಕೆ ಶ್ರೀ ಜಗದ್ಗುರು ಪಂಚಾಚಾರ್ಯರ ವಿಷಯದಲ್ಲಿ ಮನೋಹರವಾದ ಭಾಷಣವನ್ನು ಮಾಡಿದರು ಅನಂತರ ವೇ|| ಯಮನಯ್ಯಸ್ ಶಾಸ್ತ್ರಿಗಳವರು ರಾತ್ರಿ ೩ ಘಂಟೆಯವರೆಗೆ ಗಿರಿಜಾಕಲ್ಯಾಣವೆಂಬ ಶಿವಕೀರ್ತನವನ್ನು ಮನೋಹರವಾಗಿ ಮಾಡಿದರು ಬಳಿಕ ಅಮಿಲ್ದಾರ್ ಸಾಹೇಬರು ವೀರಶೈವಮತದ ಪ್ರಾಚೀನತೆಯ ವಿಷಯವಾಗಿ ಭಾಷಣಮಾಡಿ ಸಭಿಕರನ್ನು ಆನಂದತುಂದಿಲರನ್ನಾಗಿ ಮಾಡಿದರು ಬಳಿಕ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು ಈ ಮಹೋತ್ಸವದಲ್ಲಿ ಶ್ರೀಮಾನ್ ಮೋತಿ ಸಾಹೇಬರು, ಪೇಷ ಇಮಾಮಸಾಹೇಬ, ಜಮಾದಾರ್ ಸಾಬ್, ಬಸಲಿಂಗಯ್ಯ ಸ್ಕೂಲ್‌ಮಾಸ್ತರ್, ಬಸಯ್ಯ ಪ್ರೋಹಿತ್ಸಮಠ, ಒಡ್ಡನಗೌಡ, ಪೊ|| ಪಾ|| ಮಲ್ಲಿಕಪ್ಪಸಜ್ಜನ, ಬಸಣ್ಣಶೆಟ್ಟರ ನಾಗಪ್ಪ ತಗಿನಮನೆ, ವೀರನಗೌಡ ಪೊ|| ಪಾ|| ಮುಂತಾದವರಾದಿಯಾಗಿ ವಳ್ಳಿ ಮುತುವಜಿಯಿಂದ ನೆರವೇರಿಸಿ ಪುಣ್ಯಭಾಗಿಗಳಾದರು ಅಮಿಲ್ದಾರ ಸಾಹೇಬರವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಇದಕ್ಕುನ್ನತವಾದ ಅಧಿಕಾರಸ್ಥಾನವನ್ನೂ, ವಂಶಾಭಿವೃದ್ಧಿಯನ್ನೂ, ನಿತ್ಯಮಂಗಳವನ್ನೂ ಇತ್ತು ಕಾಪಾಡಲೆಂದು ಕೋರುವ

ಹಿರಾಳಪ್ಪ ಗುಗ್ಗಳಶೆಟ್ಟಿ,
ಕನಕಗಿರಿ.

ಪಂಚಾಚಾರ್ಯ ಪ್ರಭಾ.

೧೯೩೬ ನೆಯ ಮಾರ್ಚಿ ತಾ॥ ೯ ನೆಯ ಸೋಮವಾರ

ಲಿಂಗಧಾರಣವು ಸ್ಮೃತಿಸಿದ್ಧವಾದುದು.

ಮುಖೇ ಮಂತ್ರೇ [illegible] ಲಿಂಗಧಾರಣಾ |
ರುದ್ರಾಕ್ಷಂ ಚ ಶಿರಾ ಭಸ್ಮ ಇತಿ ಬ್ರಾಹ್ಮಣಲಕ್ಷಣಂ |

ಎಂಬ ಗೌತಮಸ್ಮೃತಿಯಲ್ಲಿ ಮಂತ್ರ [illegible] ಲಿಂಗಧಾರಣ ರುದ್ರಾಕ್ಷ [illegible] ಭಸ್ಮ ಈ ಆರು ಧರ್ಮಗಳುಳ್ಳವನೇ ಬ್ರಾಹ್ಮಣನೆನಿಸುವನು ಎಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಲೋಕದಲ್ಲಿ [illegible] ಈ ಆರು ಧರ್ಮಗಳು ಒಟ್ಟಿಗೆ [illegible] ಕಂಡುಬರುವುದಿಲ್ಲ. [illegible] ಈ ಧರ್ಮಗಳು ಒಟ್ಟಿಗೆ ಕಂಡುಬರುತ್ತವೆ [illegible] ಈ ಗೌತಮಸ್ಮೃತಿವಾಕ್ಯವು [illegible] ಲಕ್ಷಣವನ್ನು ಹೇಳುವುದಕ್ಕಾಗಿಯೇ ಹೊರಟಿರುವುದೆಂದು ಅರ್ಥ ಸಂಕೋಚಮಾಡಬೇಕಾಗುತ್ತದೆ. ಆದರೆ "ಇತಿ ಬ್ರಾಹ್ಮಣಲಕ್ಷಣಂ" ಎಂಬ ಗೌತಮವಾಕ್ಯದಲ್ಲಿ ಬ್ರಾಹ್ಮಣ ಎಂಬ ಸಾಮಾನ್ಯಪದವು ಸ್ಪಷ್ಟವಾಗಿ [illegible] ಗೆ ಮಾತ್ರ ಅನ್ವಯಿಸುವ ವಿಶೇಷಪದವಾದರೂ ಕಂಡುಬರುವುದಿಲ್ಲವಾದರೂ [illegible] ಅರ್ಥ ಸಂಕೋಚವು [illegible] ಈ ವಾಕ್ಯವು [illegible] ಲಕ್ಷಣವನ್ನೇ ಬೋಧಿಸುವುದೆಂದು [illegible] ವುದು ಯುಕ್ತವಲ್ಲವೆಂದು [illegible] ಇಷ್ಟು ಮಾತ್ರ [illegible] ಸ್ಮೃತಿಯು [illegible] ಲಕ್ಷಣಬೋಧಕವೇ ಆಗುವುದಲ್ಲದೆ [illegible] ಲಕ್ಷಣವನ್ನು ಬೋಧಿಸುವುದಿಲ್ಲವೆಂದು [illegible] ಅದು ಹೇಗೆಂದರೆ—ಈ ಗೌತಮವಾಕ್ಯದ ಕೊನೆಯಲ್ಲಿ "ಇತಿ ಬ್ರಾಹ್ಮಣಲಕ್ಷಣಂ" ಎಂದು [illegible] ಬ್ರಾಹ್ಮಣ ಸಾಮಾನ್ಯಬೋಧಕವಾದ ಪದವು ಕಂಡುಬಂದರೂ ಸ್ಮೃತಿಕಾರರು "ಮುಖೇ ಮಂತ್ರ" ಎಂದು ಪ್ರಾರಂಭಿಸಿ ಮಧ್ಯದಲ್ಲಿ "ಮಸ್ತಕೇ ಲಿಂಗಧಾರಣಂ" ಎಂದು ಲಿಂಗಧಾರಣವನ್ನು ತೋರಿಸಿ ಅಂತ್ಯದಲ್ಲಿ "ಬ್ರಾಹ್ಮಣಲಕ್ಷಣಂ" ಎಂದು [illegible] ನೋಡಿದರೆ [illegible] ಅರ್ಥಸಂಕೋಚ [illegible] ಬ್ರಾಹ್ಮಣನನ್ನು [illegible] ಸಾಮಾನ್ಯಬೋಧಕವಾಗಿದ್ದರೂ "ಮಸ್ತಕೇ ಲಿಂಗಧಾರಣಂ" ಎಂಬ ವಿಶೇಷಪದದ [illegible] [illegible] ಲಿಂಗಿ ಬ್ರಾಹ್ಮಣ [illegible] ಅರ್ಥಸಂಕೋಚ [illegible] ಲಕ್ಷಣ [illegible] ಮಾತ್ರ [illegible] ಲಿಂಗಧಾರಣ [illegible] [illegible] ಶಿವಾಜ್ಞೆ [illegible] ರುದ್ರಾಕ್ಷಧಾರಣ [illegible] ಶಿವಲಿಂಗಧಾರಣ [illegible] ಕೆಂದು [illegible] ಈ [illegible] ಧರ್ಮಗಳು ವೀರಶೈವಬ್ರಾಹ್ಮಣರಲ್ಲಿರುವಂತೆ [illegible] ಗಳಲ್ಲಿಯೂ ಕಂಡುಬರುತ್ತವೆ. ಹೇಗೆಂದರೆ,

ಶಿವಾಜ್ಞಾಪಾಲನಾರ್ಥಾಯ ಶಿವಭಕ್ತೈಶ್ಚ ಸರ್ವಶಃ |
ಲಿಂಗರುದ್ರಾಕ್ಷಭಸ್ಮಾನಿ ಶಿವಚಿಹ್ನಾನಿ ಧಾರಯೇತ್ ||
ರಾಜಾಜ್ಞೋಲ್ಲಂಘನಾದ್ಯದ್ವತ್ ಯಥಾ ದಂಡೋ ವಿಧೀಯತೇ |
ಶಿವಾಜ್ಞೋಲ್ಲಂಘನಾದ್ದಂಡೋ ರೌರವಂ ನರಕಂ ವ್ರಜೇತ್ ||

ಶಿವಾಜ್ಞೆಯನ್ನು ಪಾಲಿಸುವುದಕ್ಕಾಗಿ ಶಿವಭಕ್ತರೆನಿಸಿಕೊಂಡವರೆಲ್ಲರೂ ಶಿವಲಿಂಗರುದ್ರಾಕ್ಷಭಸ್ಮಾದಿ ಶಿವಚಿಹ್ನೆಗಳನ್ನು ಧರಿಸಿರಬೇಕು. ರಾಜಾಜ್ಞೆಯನ್ನು ಮೀರಿದವನು ಶಿಕ್ಷೆಯನ್ನು ಅನುಭವಿಸುವಂತೆ ಶಿವಾಜ್ಞೆಯನ್ನು ಮೀರಿದವನು ನರಕರೂಪವಾದ ಶಿಕ್ಷೆಯನ್ನು ಪಡೆಯುವನೆಂದು ಶಿವ ಸಿದ್ಧಾಂತದಲ್ಲಿ ಉಕ್ತವಾಗಿರುವದರಿಂದ ವೀರಶೈವಮತಸ್ಥರಾದವರೆಲ್ಲರೂ ಈ ಆರು ಧರ್ಮಗಳುಳ್ಳವರಾಗಿರುವಲ್ಲಿ ಲಿಂಗಿಬ್ರಾಹ್ಮಣನು ಮಾತ್ರ ಈ ಆರು ಧರ್ಮವುಳ್ಳವನಾಗಿ ರಬೇಕೆಂಬ ಗೌತಮವಾಕ್ಯದ ಲಕ್ಷಣವು ಅತಿವ್ಯಾಪ್ತಿಯೆಂಬ ದೋಷದಿಂದ ದೂಷಿತವಾಗಿ ಹೋಗುತ್ತದೆಂದು ಆಕ್ಷೇಪವು ಬರಬಹುದು. ಆದರೆ ಈ ಗೌತಮವಾಕ್ಯದಲ್ಲಿ "ಇತಿ ಬ್ರಾಹ್ಮಣಲಕ್ಷಣಂ" ಎಂಬ ವಾಕ್ಯದಲ್ಲಿ ಬ್ರಾಹ್ಮಣ ಎಂಬ ವಿಶೇಷಪದವಿರುವುದರಿಂದ ಬ್ರಾಹ್ಮಣತ್ವದಿಂದೊಡಗೂಡಿದ ಷಡ್ವಿಧಧರ್ಮಗಳು ಲಿಂಗಿಬ್ರಾಹ್ಮಣರಲ್ಲಿ ಮಾತ್ರ ತೋರುತ್ತವೆ. ಲಿಂಗಿಕ್ಷತ್ರಿಯರಲ್ಲಾದರೂ ಕ್ಷತ್ರಿಯತ್ವದಿಂದೊಡಗೂಡಿದ ಷಡ್ವಿಧಧರ್ಮಗಳು ಕಂಡುಬಂದರೂ ಬ್ರಾಹ್ಮಣತ್ವದಿಂದೊಡಗೂಡಿದ ಷಡ್ವಿಧಧರ್ಮಗಳು ಕಂಡುಬರುವುದಿಲ್ಲವಾದುದರಿಂದ "ಮುಖೇಮಂತ್ರೋ .... ಇತಿ ಬ್ರಾಹ್ಮಣಲಕ್ಷಣಂ" ಎಂಬ ಗೌತಮಸ್ಮೃತಿಯಲ್ಲಿ ಹೇಳಿದ ಲಕ್ಷಣವು. ಕ್ಷತ್ರಿಯನಿಗೆ ಅನ್ವಯಿಸದೆ ಲಿಂಗಿಬ್ರಾಹ್ಮಣನಿಗೆ ಮಾತ್ರ ಅನ್ವಯಿಸುವುದರಿಂದ ಅತಿವ್ಯಾಪ್ತಿದೋಷದಿಂದ ಮುಕ್ತವಾಗಿ ನಿರ್ದುಷ್ಟಲಕ್ಷಣವೆನಿಸಿಕೊಳ್ಳುವುದರಲ್ಲಿ ಅವ ಬಾಧಕವೂ ಇಲ್ಲ. ಈ ವಿಷಯವು ಲಿಂಗಧಾರಣಚಂದ್ರಿಕಾ ಶ್ರೀಕರಭಾಷ್ಯಾದಿ ಗ್ರಂಥಗಳಲ್ಲಿ ಸ್ಪಷ್ಟವಾಗಿ ಹೇಳಲ್ಪಡುವುದಲ್ಲದೆ—

ಬ್ರಹ್ಮವಿಷ್ಣ್ವಾದಿದೇವಾಶ್ಚ ಮುನಯೋ ಗೌತಮಾದಯಃ |
ಧಾರಯಂತಿ ಸದಾಲಿಂಗಮುತ್ತಮಾಂಗೇ ವಿಶೇಷತಃ || ಉದ
ಕ್ತಕೇ [illegible] ವೃಕ್ಷಮೂಲ [illegible] ಪಿತಾಮಹಃ | ಲಿಂಗ
[illegible] ಸ್ಕಂದನಮಹಾಯುಃ ||

ಬ್ರಹ್ಮಾದಿ ಸಕಲ ದೇವತೆಗಳೂ, ಗೌತಮಾದಿ ಸಮಸ್ತ ಮುನಿಗಳೂ ಈ ಶಿವಲಿಂಗವನ್ನು ಮಸ್ತಕಾದಿ ಉತ್ತಮಾಂಗಗಳಲ್ಲಿ ಧರಿಸಿ, ನಿರಂತರವೂ ಪೂಜಿಸುತ್ತ ಬಂದಿರುವುದರಿಂದಲೇ ಉತ್ತಮಾಧಿಕಾರಿಗಳಾಗಿ ಲೋಕವಂದ್ಯರೆನಿಸಿದರೆಂದು ಸ್ಕಂದಪುರಾಣದಲ್ಲಿಯೂ—

ವಯಂ ಬ್ರಹ್ಮಾದಯಸ್ಸರ್ವೇ ಹರಮ [illegible] |
ತ್ವಮಸ್ಮಾಕಂ ಪತಿರ್ಯಸ್ಮಾತ್ ತಸ್ಮಾತ್ತ್ವಂ ಪಶುಪತಿರ್ಭವ || ಇತ್ಯು
ಕ್ತ್ವಾ ದೇವತಾಸ್ಸರ್ವಾಃ ಶಿವಲಿಂಗಾದಿಧಾರಿಣಃ | ಕೃತ್ವಾ ಪಾಶುಪ
ತಾಸ್ಸರ್ವೇ ತಸ್ಮಾತ್ಪಶುಪತಿರ್ಭವ || ಅತೋ ಬ್ರಹ್ಮಾದಿದೇವಾನಾ
ಮುಪಾಸ್ಯಶ್ಶಿವಃ ಸದಾ | ತಥಾವಿಭೂತಿ ರುದ್ರಾಕ್ಷಲಿಂಗಧಾರಣಮೇ
ವಚ [illegible] ರುದ್ರಸ್ಫಟಿಕಮಾಲಾಭೂಷಿತಾಸ್ತ್ರಿಪುಂಡ್ರಾಂಕಿತಾನನಾ |
ಬ್ರಹ್ಮವಿಷ್ಣ್ವಾದಿ ದೇವಾಶ್ಚ ನೃಪಾಃ [illegible] ಚೋತ್ತಮಾಃ |
ತ್ರಿಪುಂಡ್ರರುದ್ರಾಕ್ಷ [illegible] ವತ್ಸಲಃ |

ಎಲ್ಲೆ ಪಾಶುಪತರೇ ನಾವುಗಳು ಪಶುಗಳಾಗಿರುವೆವು. ನೀನು ನಮ್ಮುಗಳಿಗೆ ಪತಿಯೆನಿಸಿಕೊಂಡಿರುವುದರಿಂದ ಪಶುಪತಿಯೆಂದು ಹೇಳಿಸಿಕೊಳ್ಳುವಿಯೆ. ಎಂದು ಬ್ರಹ್ಮಾದಿಗಳು ಪರಶಿವನನ್ನು ಸ್ತೋತ್ರಮಾಡಿ ಎಲ್ಲರೂ ಶಿವಲಿಂಗವನ್ನು ವಿಭೂತಿ ರುದ್ರಾಕ್ಷಾದಿಗಳನ್ನೂ ಧರಿಸಿಕೊಂಡು ಪರಶಿವನನ್ನಾರಾಧಿಸುತ್ತ ಪಾಶುಪತರೆನಿಸಿಕೊಂಡರು. ಎಂದು ಲಿಂಗಪುರಾಣದಲ್ಲಿಯೂ ಶ್ರೀ [illegible] ಲಿಂಗಧಾರಣದ ಮಹತ್ವವನ್ನು ವಿಶೇಷವಾಗಿ [illegible] ನೆ. ಹೀಗೆ ಲಿಂಗಧಾರಣವು [illegible] ವಾಗಿರುವುದರಿಂದ "ಮುಖೇ.... ಬ್ರಾಹ್ಮಣಲಕ್ಷಣಂ" ಎಂಬ ಗೌತಮಸ್ಮೃತಿಯು ಲಿಂಗಧಾರಣ [illegible] ವಿಧಿಸುತ್ತದೆಂಬುದು ನಿರ್ವಿವಾದವಾಗಿದೆ.

ಒಳದೇಶದ ವೃತ್ತಾಂತಗಳು.

ನಮ್ಮ ಚಂದಾದಾರರಿಗೆ ಈ ವಾರದಪತ್ರಿಕೆಯ ಸಂಗಡ ೧೯೩೬ ನೆಯ ಇಸ್ವಿಯ ಕ್ಯಾಲೆಂಡರನ್ನು ಕಳುಹಿಸಿದೆ.

ಮೈಸೂರು ಶ್ರೀಮನ್ಮಹಾಪ್ರಭುಗಳವರಿಗೆ ಇಂಡಿಯಾಚಕ್ರವರ್ತಿಗಳವರು ಕ್ವೀನ್ ವಿಕ್ಟೋರಿಯಾ ಮಹಾರಾಣಿಯವರ ಸಾರ್ಜ್ ಮತ್ತು ಪೈನರ್ಸ್ ರೆಜಿಮೆಂಟ್‌ದಳದ ಆನರರಿ ಕರ್ನಲ್ ಪ್ರಶಸ್ತಿಯನ್ನು ಕೊಡಲು ಅಂಗೀಕಾರಮಾಡಿರುತ್ತಾರೆ

ಶ್ರೀ ಶೃಂಗೇರಿ ಮಹಾಸ್ವಾಮಿಗಳವರಿಗೆ ಕಳೆದ ನಾಲ್ಕೈದು ದಿವಸಗಳಿಂದ ತುಂಬಾ ಆರೋಗ್ಯವಾಗಿರುವುದೆಂದೂ ನಿನ್ನೇದಿವಸ ನರಸಿಂಹವನದಲ್ಲಿರುವ ಕಾಲಭೈರವನ ದೇವಾಲಯಕ್ಕೆ ಪಾದಚಾರಿಗಳಾಗಿ ಹೋಗಿದ್ದರೆಂದೂ ಕೇಳುತ್ತೇವೆ.

ಜರ್ಮನಿಯವರು 'ಹಿಂಡೆನ್‌ಬರ್ಗ್' ಎಂಬ ಹೊಸ ಜೆಪ್ಲಿನ್ ಒಂದನ್ನು (ವಿಮಾನ) ಕಟ್ಟಿದ್ದಾರೆ ವಿಶ್ವದಲ್ಲೆಲ್ಲ ಇದೇ ದೊಡ್ಡದು. ೫೦ ಮಂದಿ ಪ್ರಯಾಣಿಕರು ಕೂತುಕೊಳ್ಳಬಹುದು. ೪೦ ಮಂದಿ ವಿಮಾನ ಕೆಲಸಗಾರರಿಗೆ ಸ್ಥಳವಿದೆ. ವಿಮಾನದೊಳಗೆ ಹೊಟಲು ಉಂಟು

ಕೋಲಾರದ ಚಿನ್ನದಗಣಿಯಲ್ಲಿ ಕಳೆದ ೪ ನೆಯ ತಾರೀಕು ಕಲ್ಲುಕುಸಿದು ೧೧ ಮಂದಿ ಕೆಲಸಗಾರರು ಮಣ್ಣಿನಲ್ಲಿ ಹೂತುಹೋದರೆಂದೂ ಅದರಲ್ಲಿ ೧೧ ಜನರನ್ನು ಹೊರಕ್ಕೆತೆಗೆದರು ಒಬ್ಬ ಮೇಸ್ತ್ರಿಯು ಮರಣ ಹೊಂದಿದನು ಒಬ್ಬನ ನೆಲೆಯೇ ಸಿಕ್ಕಲಿಲ್ಲವೆಂದು ತಿಳಿದುಬರುತ್ತದೆ

ಈ ದಿವಸದಿಂದ ಬೆಂಗಳೂರಿನ ಸಿಟಿಟೌನ್ ರೋಡಿನಲ್ಲಿರುವ ಡೇಲಿ ಮೆಮೋರಿಯಲ್ ಹಾಲಿನಲ್ಲಿ ಮೈಸೂರು ಇಂಜನಿಯರುಗಳ ಸಭೆಯು ಪ್ರಾರಂಭವಾಗುತ್ತದೆ. ಪ್ರಥಮಮಂತ್ರಿವರ್ಯರಾದ ಎಸ್. ಪಿ. ರಾಜಗೋಪಾಲಾಚಾರ್ಯರು ಈ ಸಭೆಯ ಪ್ರಾರಂಭೋತ್ಸವವನ್ನು ನೆರವೇರಿಸುವರು

ಶಿವಮೊಗ್ಗಾಕ್ಕೆ ೬ ಮೈಲು ದೂರದಲ್ಲಿರುವ ಹಳಕೊಪ್ಪ ಎಂಬ ಗ್ರಾಮಕ್ಕೆ ಬೆಂಕಿ ಬಿದ್ದು ಹತ್ತು ಹದಿನೈದು ಮನೆಗಳು ಸುಟ್ಟು ಹೋಗಿರುವುವಲ್ಲದೆ ಅನೇಕ ಬತ್ತದ ಬಣವೆಗಳು ಹುಲ್ಲಿನ ಬಣವೆಗಳು ದನಕರುಗಳೂ ನಷ್ಟವಾಗಿ ಜನಗಳು ಬಹಳ ದುಃಖಕ್ಕೀಡಾಗಿರುವರೆಂದು ಕೇಳುತ್ತೇವೆ.

ಮೈಸೂರು ಇಂಟರ್‌ಮೀಡಿಯೇಟ್ ಕಾಲೇಜಿನ ಸೂಪರಿಂಟೆಂಡೆಂಟರಾದ ಶ್ರೀ॥ ಬಿ ನಾಗೇಶರಾಯರವರ ಗೃಹಕ್ಕೆ ಯಾರೋ ಭಯೋತ್ಪಾದಕ ಕಾಗದಗಳನ್ನು ಕಳುಹಿಸುತ್ತಿರುವರಂತೆ. ಮನೆಯವರು ರಾತ್ರಿಹಗಲು ಕಾದರೂ ಅವುಗಳು ಎಲ್ಲಿಂದ ಬರುತ್ತಿವೆಯೆಂಬುದು ತಿಳಿದುಬಂದಿಲ್ಲ ವಿಚಾರವು ಪೋಲೀಸರಿಗೆ ತಿಳಿಸಲ್ಪಟ್ಟಿದೆ

ರಾಜಧಾನಿಯ ಚೌಧ್ರಿ ಅಪ್ಪಾಜಿಶೆಟ್ಟಿ ಎಂಬುವರು ಸುಬ್ಬಮ್ಮನೆಂಬುವಳಿಗೆ ಮೋಸಮಾಡಿ ಆಕೆಯಿಂದ ೫೮೫ ರೂ. ಗಳನ್ನು ತೆಗೆದುಕೊಂಡರೆಂದು ಮೊಕದ್ದಮೆಯಾಗಿ 2 ನೇ ಸಿಟಿ ಮ್ಯಾಜಿಸ್ಟ್ರೇಟರು ಅಪರಾಧಿಗೆ ಕೋರ್ಟು ಏಳುವವರಿವಿಗೂ ಸಜವನ್ನೂ 1000 ರೂ. ಜುಲ್ಮಾನೆಯನ್ನೂ ವಿಧಿಸಿ, ಜುಲ್ಮಾನೆಯಲ್ಲಿ ೫೮೫ ರೂ. ಗಳನ್ನು ಪಿರ್ಯಾದಿಗೆ ಪಾವತಿಯಾಗುವಂತೆ ತೀರ್ಮಾನಿಸಿದರು.

ಮೈಸೂರು ಪೌರಸಭೆಯ ವಿಶೇಷ ಅಧಿವೇಶನವನ್ನು 13-3-36 ನೆಯ ದಿನ ನಡೆಯಿಸಬೇಕೆಂದು ಗೊತ್ತಾಗಿದೆ. ನಗರ ಶಾಲಾ ಸಮಿತಿಗೆ ಸ್ತ್ರೀ ಪ್ರತಿನಿಧಿಯೊಬ್ಬರನ್ನು ಆರಿಸಬೇಕೆಂಬುದೇ ಸಭೆ ನಡೆಯಿಸುವ ಉದ್ದಿಶ್ಯ. ಇದುವರೆಗೆ ಶಾಲಾಸಮಿತಿಗೆ ಪ್ರತಿನಿಧಿಯಾಗಿ ಹೋಗಲು ಸತಿ ಥಿಯೋಬಾಲ್ಡ್‌ರವರೊಬ್ಬರಲ್ಲದೆ ಮತ್ತೆಯಾರೂ ಮುಂದೆ ಬಂದಿಲ್ಲವೆಂದು ತಿಳಿದುಬಂದಿದೆ

ಹನ್ನೊಂದನೆಯ ತಾರೀಖು ಬುಧವಾರ ದಿನವನ್ನು ನಮ್ಮ ಇಡೀ ಭರತಖಂಡವಾಸಿಗಳೆಲ್ಲರೂ ಶ್ರೀಮತಿ ಕಮಲಾನೆಹರೂರವರ ವಿಯೋಗದ ದುಃಖದ ದಿವಸವನ್ನಾಗಿ ಆಚರಿಸಬೇಕೆಂದು ತೀರ್ಮಾನವಾಗಿರುತ್ತದೆಯಷ್ಟೆ. ಅದೇ ಪ್ರಕಾರ ಬೆಂಗಳೂರಿನ ಮಹಾಜನಗಳು ಅಂಗಡಿಮುಂಗಟ್ಟುಗಳನ್ನೆಲ್ಲಾ ಬಂದುಮಾಡಿ ದುಃಖಪ್ರದರ್ಶನ ಸಭೆಯಲ್ಲಿ ಭಾಗಿಗಳಾಗುವರೆಂದು ತಿಳಿಗುಬರುತ್ತದೆ.

ಅಜ್ಜಂಪುರಕ್ಕೆ ೩ ಮೈಲುದೂರದಲ್ಲಿರುವ ಹರಿಜನರ ತಿಪ್ಪಗೊಂಡನಹಳ್ಳಿ ರಂಗಪ್ಪನೆಂಬುವನು ಹೋಗುತ್ತಿರುವಾಗ್ಗೆ ದಾರಿಯಲ್ಲಿ ಒಂದುಚಿರತೆಯು ಅವನ ಮೇಲೆಬಿದ್ದಿತು. ಅವನು ಹೆದರದೆ ಧೈರ್ಯದಿಂದ ಅಲ್ಲೇ ಕೈಗೆ ಸಿಕ್ಕಿದ ಕಲ್ಲಿನಿಂದ ಅದರ ತಲೆಯನ್ನು ಜಜ್ಜಿಕೊಂದನು ಅವನಿಗೂ ಚಿರತೆಯಿಂದ ಸ್ವಲ್ಪ ಗಾಯುಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದಾನೆ. ಸತ್ತ ಹುಲಿಯನ್ನು ಗಾಡಿಯಲ್ಲಿ ಹೇರಿಕೊಂಡು ಸಹ ಬಂದಿರುತ್ತಾನೆ.

ಮೈಸೂರು ಮಂಡಿಮೊಹಲ್ಲಾ ಮೋಚಿಬೀದಿಯಲ್ಲಿ ಬನ ಪುಟ್ಟಮ್ಮನೆಂಬಾಕೆಯು ಅನ್ನ ಮಾಡುತ್ತಿರುವಾಗ ಆಕೆಯ ಮೂರು ವರ್ಷದ ಮಗು ಕುಶೀಲ ಎಂಬುದು ಪಕ್ಕದಲ್ಲಿಯೇ ಕುಳಿತಿತ್ತು. ಗಂಜಿಬಸಿಯಲು ಜೋರ ಬಾಗ ಅನ್ನದ ಮಡಕೆಯು ಕೆಳಗೆ ಬಿತ್ತೆಂದೂ, ಅದರ ಫಲವಾಗಿ ಮಗುವಿನ ಮೈಮೇಲೆಲ್ಲ ಕುದಿಯುತ್ತಿದ್ದ ಅನ್ನವು ಬಿದ್ದು ಮೈಯೆಲ್ಲಾ ಗಾಯಗಳಾಯಿತೆಂದೂ ಚಿಕಿತ್ಸೆಯಿಂದ ಪ್ರಯೋಜನವಾಗದೆ ಮಗುವು ಮೃತಿ ಹೊಂದಿತೆಂದು ತಿಳಿದುಬಂದಿದೆ.

ವರ್ತಮಾನಸಂಗ್ರಹ.

ಸ್ಪೇನಿಯನ್ನಿನಲ್ಲಿ ಯುದ್ಧವು ಮಿತಿಮೀರಿಹೋಗಿದೆ. ಉಭಯ ಸೈನ್ಯಗಳೂ ಸಮವಾಗಿ ಹೋರಾಡುತ್ತಿರುವರು. ಇವರ ಜಯಾಪಜಯಗಳನ್ನು ಹೇಳಲಿಕ್ಕಾಗದಂತಾಗಿದೆ. ಯುದ್ಧದಲ್ಲಿ ಮಡಿದ ಹೆಣಗಳು ನದಿಯಲ್ಲಿ ಬಿದ್ದು ನದಿಯನೀರೇ ಒಣಗಿಹೋಗಿರುವುದಂತೆ

ಕಲ್ಕತ್ತಾ ಪಟ್ಟಣದಲ್ಲಿ ೬ ಸಾವಿರ ಭಿಕ್ಷುಕರಿದ್ದಾರೆಂದೂ, ಕೆಲವು ಐಶ್ವರ್ಯವಂತರು ಕುಂಟರೂ ಕುರುಡರೂ ಆದ ಮಕ್ಕಳನ್ನು ಸಾಕುವುದಾಗಿ ಹೇಳಿ ತಮ್ಮ ಬಳಿ ಇಟ್ಟುಕೊಂಡು ಅವರನ್ನು ಭಿಕ್ಷೆಬೇಡುವುದಕ್ಕೆ ಕಳುಹಿಸಿ ಅದರಿಂದ ಹಣ ಸಂಪಾದನೆ ಮಾಡುತ್ತಿರುವುದಾಗಿ ತಿಳಿದುಬರುತ್ತದೆ.

ಎಂಥ ಭೀರುಗಳನ್ನಾದರೂ ಧೈರ್ಯಸ್ಥೈರ್ಯಗಳಿಂದ ಕೂಡಿದವರನ್ನಾಗಿ ಮಾಡುವ ಹೊಸ ಮಾದರಿಯ ಇಂಜಕ್ಷನ್ ಒಂದನ್ನು ಜಪಾನ್ ವೈಜ್ಞಾನಿಕರೊಬ್ಬರು ಕಂಡುಹಿಡಿದಿರುತ್ತಾರೆ ಇದರಿಂದ ತಯಾರಿಸಲ್ಪಟ್ಟ ಅಲ್ಕಲಾಯಿಡ್‌ರಸವನ್ನು ಇಂಜಕ್ಷನ್ ಮುಖಾಂತರ ರಕ್ತಗತಮಾಡಿದರೆ ಮನುಷ್ಯನಲ್ಲಿರುವ ಭಯ ಭೀತಿಯ ಮೂಲವೇ ಮಾಯವಾಗುವುದೆಂದು ಹೇಳುತ್ತಾರೆ.

ರಂಗೂನ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಸಂಘದ ಪ್ರೆಸಿಡೆಂಟಾದ ವಿದ್ಯಾರ್ಥಿಯು ಆ ಸಂಘದ ಮೀಟಿಂಗಿನಲ್ಲಿ ಮಾಡಿದ ಭಾಷಣವು ಅಲ್ಲಿನ ಉಪಾಧ್ಯಾಯರುಗಳಿಗೆ ಅಸಮಾಧಾನವನ್ನುಂಟುಮಾಡಿದ್ದರಿಂದ ಅವನನ್ನು ಕಾಲೇಜಿನಿಂದ ವಜಾಮಾಡಿದರು. ಇದರಿಂದ ಕೋಪಗೊಂಡ ಒಂದುಸಾವಿರ ಮಂದಿ ವಿದ್ಯಾರ್ಥಿಗಳೂ ಮತ್ತು ವಿದ್ಯಾರ್ಥಿನಿಯರು ಪುನಃ ಆ ವಿದ್ಯಾರ್ಥಿಯನ್ನು ಕಾಲೇಜಿಗೆ ಸೇರಿಸಿಕೊಳ್ಳಬೇಕೆಂದೂ ಅಲ್ಲಿಯ ವರಿವಿಗೂ ತಾವುಗಳು ಕಾಲೇಜಿಗೆ ಹೋಗುವುದಿಲ್ಲನೆಂದೂ ಮುಷ್ಕರ ಹಿಡಿದಿರುತ್ತಾರೆ ಈ ಮುಷ್ಕರ ಕಾರಣವನ್ನು ಸರಿಯಾಗಿ ವಿಚಾರಿಸಿ ಸಮಾಧಾನಕರವಾದ ಇತ್ಯರ್ಥ ಮಾಡಬೇಕೆಂದು ಅಲ್ಲಿನ ಸರ್ಕಾರದವರು ಅಪ್ಪಣೆಮಾಡಿರುತ್ತಾರೆ.

ಇಂಗ್ಲೆಂಡಿಗೂ, ಈಜಿಪ್ಟಿಗೂ, ಶಾಂತಿಸಂಧಾನಕೂಟವು ಈ ತಿಂಗಳು ೨ನೇ ತಾರೀಖು ಸೋಮವಾರ ಜಾಫರಾನ್ ಅರಮನೆಯಲ್ಲಿ ಪ್ರಾರಂಭವಾಯಿತು. ರಾಜಕೀಯ ಮತ್ತು ನೈತಿಕ ದೃಷ್ಟಿಯಿಂದ ಈ ಸನ್ನಿವೇಶದಲ್ಲಿ ಇಂಗ್ಲೆಂಡಿಗೂ, ಈಜಿಪ್ಟಿಗೂ,ಸ್ನೇಹಪೂರಿತವಾದ ಒಪ್ಪಂದವಾಗುವ ಆವಶ್ಯಕತೆಯನ್ನು ನಹಸ್‌ಪಾಷಾರವರು ಸ್ಪಷ್ಟಪಡಿಸಿದರು. ಜಗತ್ತಿನ ಈಗಿನ ದುರ್ಧರ ವಾತಾವರಣದಲ್ಲಿ ಇಂಗ್ಲೆಂಡ್ ಮತ್ತು ಈಜಿಪ್ಟ್ ದೇಶಗಳು ಒಂದುಗೂಡಿ ಮೈತ್ರೀಭಾವದಿಂದ ವರ್ತಿಸಬೇಕಾದುದು ಆವಶ್ಯಕವೆಂದೂ, ಈ ಪ್ರಯತ್ನದಲ್ಲಿ ಅವರು ಈ ಸಾರಿ ಜಯವನ್ನು ಹೊಂದುವರೆಂದೂ ಹೇಳಿದರು.

ಬ್ರಿಟಿಷ್ ಸರ್ಕಾರದ ಪರವಾಗಿ ಸರ್, ಮೈಲ್ಸ್ ಲ್ಯಾಂಪ್ಸನ್‌ರವರು ಉಭಯ ದೇಶಗಳಿಗೆ ಮೈತ್ರಿಯನ್ನುಂಟುಮಾಡಲು ಬ್ರಿಟಿಷ್ ಸರ್ಕಾರವು ಹಿಂದೆಗೆಯುವುದಿಲ್ಲವೆಂದೂ, ಈಜಿಪ್ಟ್ ಸಂಪೂರ್ಣ ಸಾಮ್ರಾಜ್ಯವನ್ನು ಹೊಂದಿ ಜಗತ್ತಿನ ಮುಂದೆ ಇಂಗ್ಲೆಂಡ್ ಮತ್ತು ಈಜಿಪ್ಟ್ ದೇಶಗಳು ಸಮಾನತ್ವದಿಂದಲೂ, ಪರಸ್ಪರ ಮಿತ್ರತ್ವದಿಂದಲೂ, ನಿಂತುಕೊಳ್ಳುವ ದಿನವನ್ನು ನೋಡಲು ತಾವು ಕುತೂಹಲಿಗಳಾಗಿರುವರೆಂದೂ ಹೇಳಿದರು. ಈ ಎರಡು ದೇಶಗಳಿಗೂ ಪರಸ್ಪರ ಒಪ್ಪಂದವು ಜಯಪ್ರದವಾಗುವುದೆಂಬ ಭರವಸೆಯಿದೆ.

ನೂತನ ಸಾರ್ವಭೌಮಂದ ಅಷ್ಟಮ ಯಡ್ವರ್ಡ ಪ್ರಭುಗಳು ೫ ನೇ ತಾರೀಖಿನದಿವಸ ೨ ನೈಲಿ ಆವರಣವುಳ್ಳ ನೂತನವಾಗಿ ವಿರಚಿತವಾದ ಕ್ವೀನ್ ಮೇರಿ ಎಂಬ ಹಡಗನ್ನು ನೋಡಿಕೊಂಡುಬರಲು ಗ್ಲಾಸ್ಗೋ ನಗರಕ್ಕೆ ಬಂದಿದ್ದು ನಗರದಲ್ಲಿರುವ ಪ್ರತಿಯೊಂದು ಮನೆಗೂ ಹೋಗಿ ಬಾಗಿಲುತಟ್ಟಿ ಒಳಗೆ ಬರಬಹುದೇ ಎಂದು ಕೇಳಿ ಒಳಕ್ಕೆ ಹೋಗುತ್ತಿದ್ದರಂತೆ ಒಂದು ಮನೆಯಬಾಗಿಲನ್ನು ತಟ್ಟಿದಾಗ ೫ ವರ್ಷದ ಒಬ್ಬ ಹುಡುಗನು ಬಾಗಿಲನ್ನು ತೆರೆದು, ಚಕ್ರವರ್ತಿಗಳನ್ನು ನೋಡಿ ತಾವೇನೋ ನಮ್ಮ ಹೊಸ ದೊರೆಗಳು ಎಂದು ಕೇಳಿದನಂತೆ. ಅದಕ್ಕೆ ಚಕ್ರವರ್ತಿಗಳು ಹೌದಯ್ಯ ನಾನೇ ನಿಮ್ಮ ಹೊಸದೊರೆಯೆಂದು ಹುಡುಗನ ತಲೆ ಸವರಿ ಪ್ರೀತಿಸಿದರಂತೆ.

ಅಲಹಾಬಾದಿನ ಜಾನ್‌ಸ್ಟನ್‌ಗಂಜ್ ಎಂಬ ಭಾಗದಲ್ಲಿರುವ ಅಕ್ಕಸಾಲೆಯ ಮನೆಯ ಬಾಗಿಲಿನಲ್ಲಿ ಒಂದು ತಗಡಿನ ಡಬ್ಬಿ ಬಿದ್ದಿದ್ದುದನ್ನು ಆ ಮನೆಯ ಹುಡುಗನು ನೋಡಿ ಅದನ್ನು ತೆಗೆದುಕೊಂಡುಹೋಗಿ ಇಟ್ಟುಕೊಂಡನು. ಮನೆಯವರು ಡಬ್ಬಿಯಲ್ಲಿ ಏನಿದೆಯೋ ನೋಡಲು ಅದನ್ನು ಬಲವಾಗಿ ಅಲ್ಲಾಡಿಸಲು ಅದು ಸಿಡಿದು ಪಕ್ಕದಲ್ಲಿ ನಿಂತಿದ್ದ ಹುಡುಗನ ಮುಖವೆಲ್ಲಾ ಸುಟ್ಟುಹೋಯಿತೆಂದು ತಿಳಿದುಬಂದಿದೆ.

ಜರ್ಮನಿಯ ಯುದ್ಧಸಿದ್ಧತೆಗಳು.

ಫ್ರಾನ್ಸಿಗೂ ಜರ್ಮನಿಗೂ ಮಧ್ಯದಲ್ಲಿರುವ ರೈನ್‌ಲ್ಯಾಂಡ್ ಪ್ರದೇಶದಲ್ಲಿ ಸೈನ್ಯಗಳನ್ನು ಇಡಕೂಡದೆಂಬ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ಮಿಲಟರಿ ಕೆಲಸಗಳಿಗೆ 35000 ವರಿವಿಗೂ ಜನಗಳನ್ನು ಆ ಪ್ರದೇಶದಲ್ಲಿ ಜಮಾಯಿಸಿರುತ್ತಾರೆಂದೂ ಇವರಲ್ಲಿ 15000 ಮಿಲಟರಿ ಕೆಲಸಗಾರರು 4000 ಫಿರಂಗಿಯವರು 3000 ವೈಮಾನಿಕರೂ ಇರುವರೆಂದೂ ರೈನ್‌ನದಿಯ ಮೇಲೆ ಹೊಸದಾಗಿ 3 ಸೇತುವೆಗಳು ಕಟ್ಟಲ್ಪಟ್ಟವೆಯೆಂದೂ ಬೆಲ್ಜಿಯಮ್ ಪತ್ರಿಕಾ ಪ್ರತಿನಿಧಿಗಳು ತಿಳಿಸುತ್ತಾರೆ.

ಮಂಜಿನಲ್ಲಿ ಹೂತು ಹೋಗಿರುವರು.

ರಾವಲ್‌ಪಿಂಡಿ ಸೈನ್ಯಕ್ಕೆ ಸೇರಿದ ಸಿ ಎಂ. ಗ್ರಹ್ಯಾಂ, ಎಲ್. ಸೊಲಾನ್ ಮತ್ತು ಎ. ಆರ್. ಹಿಂಗ್‌ಸ್ಟನ್ ಎಂಬ ಬ್ರಿಟಿಷ್ ಅಧಿಕಾರಿಗಳು ಕೆಲವು ಕೂಲಿಗಳೊಡನೆ ಬೇಗಿಸ ಹೊತ್ತು ಸುತ್ತಾಡಲು ಹೋಗಿ ರಾತ್ರಿಯಾಗಲು ಬಿಲ್ಡ್‌ಮಾರ್ಗ್ ಎಂಬ ಊರಿನ ಬಳಿ ಗುಡಿಸಲೊಂದರಲ್ಲಿ ಇಳಿದುಕೊಂಡರೆಂದೂ, ರಾತ್ರಿ ಉರುಳಿಬಂದ ಮಂಜಿನ ಪರ್ವತಕ್ಕೆ ಸಿಕ್ಕಿ ಗುಡಿಸಲು ನಾಶವಾಗಿ ಒಳಗಿದ್ದವರೆಲ್ಲರೂ ಮಂಜಿನಗೆಡ್ಡೆಯಲ್ಲಿ ಹೂತುಹೋಗಿರುವುದಾಗಿಯೂ ಆ ಮಾರ್ಗವಾಗಿ ಬಂದ ಕೆಲವು ಕೂಲಿಗಳ ಕಡೆಯಿಂದ ತಿಳಿದು ಜಮ್ಮು ಗೌರ್ನರೂ ಮತ್ತು ಶ್ರೀ ನಗರದ ಪೋಲೀಸು ಸೂಪರಿಂಟೆಂಡೆಂಟರೂ ಅಸಿಸ್ಟೆಂಟ್ ರೆಸಿಡೆಂಟರಾದ ಮೇಜರ್ ಸ್ಮಿತ್‌ರವರೂ ಸಹಾಯಾರ್ಥವಾಗಿ ಹೊರಟಿರುವರೆಂದು ಕೇಳುತ್ತೇನೆ.

ಇಟಲಿ ಅಬ್ಸೀನಿಯಾ ಯುದ್ಧ

ಉತ್ತರರಣರಂಗದಲ್ಲಿ ರಾಸ್‌ನಸ್ಸಿಬುರವರ ಸೈನ್ಯವನ್ನು ಬಿಟ್ಟು ಉಳಿದ ರಾಸ್ ಕಾಸಾ ರಾಸ್ ಸೆಯೂಂ ಮತ್ತು ರಾಸ್‌ಮುಲು ಘೇತಾರವರ ಸೈನ್ಯಗಳೆಲ್ಲವನ್ನು ಹೊಡೆದೋಡಿಸಿದರೆಂದೂ ತಮ್ಮಗಳನ್ನು ಎದುರಿಸಲು ಯಾರೂ ಇಲ್ಲವೆಂದೂ ಉಳಿದ ಅಬ್ಸೀನಿಯದ ಭಾಗಗಳನ್ನು ಹಿಡಿಯಲು ಇನ್ನೇನು ಕಷ್ಟವಿಲ್ಲವೆಂದೂ ಇಷ್ಟರಲ್ಲೇ ದಕ್ಷಿಣದಲ್ಲೂ ಯುದ್ಧವನ್ನು ಮುಂದುವರಿಸುವುದಾಗಿಯೂ ಇಟಲಿಯವರು ಹೇಳುತ್ತಿದ್ದಾರೆ. ಆದರೆ ಅಬ್ಸೀನಿಯರ ಹೇಳಿಕೆಯಂತೆ ಇಟಲಿಯವರು ಹೇಳುವುದೆಲ್ಲಾ ಶುದ್ಧ ಸುಳ್ಳೆಂದೂ ಇಟಲಿಯ ಸೈನ್ಯಗಳು ಹಿಂದೆ ಇದ್ದದ್ದಕ್ಕಿಂತ ಮುಂದುವರಿದಿಲ್ಲವೆಂದೂ ಇನ್ನೂ ತಾವೇ ಜಯಿಸುವುದು ಖಂಡಿತವೆಂದು ಹೇಳುತ್ತಾರೆ. ಯುದ್ಧವೇನೋ ಬಹಳ ಬಿರುಸಾಗಿ ನಡೆದು ಎರಡು ಕಡೆಗಳಲ್ಲೂ ವಿಶೇಷ ನಷ್ಟವಾಗಿರುತ್ತದೆ.

ದಕ್ಷಿಣರಂಗದಲ್ಲಿ ಕಳೆದವಾರದಲ್ಲಿ ವಿಶೇಷ ಕದನಗಳ್ಯಾವುವೂ ನಡೆದಿರುವುದಿಲ್ಲ ಇಟಲಿಯ ಸೈನ್ಯದ ಮೇಲೆ ಬೀಳಲು ಅಬ್ಸೀನಿಯರು ಸಕಲ ಸನ್ನಾಹಗಳನ್ನು ನಡೆಸುತ್ತಿದ್ದಾರೆ. ಇಟಲಿಯ ಅನೇಕ ಸ್ಥಳೀಯ ಸೈನಿಕರು ಸೈನ್ಯವನ್ನು ಬಿಟ್ಟು ಬ್ರಿಟಿಷ್ ಪ್ರದೇಶಗಳಿಗೆ ಓಡಿ ಹೋಗುತ್ತಿದ್ದಾರೆ.

ಇಟಲಿ ಅಬ್ಸೀನಿಯ ಸಂಧಿ ಪ್ರಯತ್ನ

ಇಟಲಿಯು ಗೆದ್ದಿರುವ ಪ್ರದೇಶಗಳನ್ನು ತಾನೇ ಇಟ್ಟುಕೊಳ್ಳಬೇಕೆಂಬ ವಿಚಾರವನ್ನು ಬಿಟ್ಟು ಮೊದಲಿನಂತೆಯೇ ಗಡಿಗಳನ್ನು ಏರ್ಪಡಿಸಿ ಕೊಳ್ಳಲೊಪ್ಪಿದರೆ ಸಂಧಿ ಮಾಡಿಕೊಳ್ಳಲು ತಮ್ಮ ಅಡ್ಡಿ ಇಲ್ಲವೆಂದು ಅಬ್ಸೀನಿಯ ಚಕ್ರವರ್ತಿಗಳು ಲೀಗಿಗೆ ತಿಳಿಸಿರುವುದಾಗಿ ತಿಳಿದು ಬರುತ್ತದೆ. ಫ್ರಾನ್ಸಿನ ರಾಯಭಾರಿಗಳು ಮುಸ್ಸೋಲಿನಿಯನ್ನು ಕಂಡು ಮಾತುಕತೆನಡೆಸಿ ಯುದ್ಧವನ್ನು ನಿಲ್ಲಿಸಬೇಕೆಂದು "ಲೀಗ್" ಸಭೆಯವರು ಮಾಡಿರುವ ಪ್ರಾರ್ಥನೆಗೆ ಅನುಕೂಲವಾದ ಉತ್ತರಕೊಡುವಂತೆ ಒತ್ತಾಯಪಡಿಸಿದರೆಂದು ಊಹಿಸಲಾಗಿದೆ.

ಕೋರೆಂ ಎಂಬಲ್ಲಿದ್ದ ಬ್ರಿಟಿಷ್ ಉಪಚಾರ ಪಡೆಯಮೇಲೆ ಇಟಲಿಯ ವಿಮಾನವೊಂದು ಬಹಳ ಸಮೀಪದಲ್ಲಿ ಹಾರಾಡುತ್ತಾ 90 ಬಾಂಬುಗಳನ್ನು ಹಾಕಿತು. ಇದರಿಂದ ಉಪಚಾರ ಪಡೆಯವರಿಗೆ ಅಪಾಯವಾಗಲಿಲ್ಲ ೨೭ ಮಂದಿ ರೋಗಿಗಳು ಮಾತ್ರ ಸತ್ತರೆಂದು ತಿಳಿದು ಬರುತ್ತದೆ.

ಸ್ವೀಕಾರ

ಬಿಜಾಪುರ ಡಿಸ್ಟ್ರಿಕ್ಟ್ ಜಮ್ಮಲಗಿಯಲ್ಲಿರುವ ಮ|| ರಾ|| ವೀರಯ್ಯ ಪ್ರಭಯ್ಯ ಮಂಟಗೇರಿ ಇವರು ತಮ್ಮ ತಾಯಿ ಶ್ರೀಮತಿ ನೀಲಗಂಗಮ್ಮನವರ ಸ್ಮರಣಾರ್ಥವಾಗಿ ಪ್ರಭಾಪೋಷಣೆಗೆ ೧ ರೂಪಾಯಿಯನ್ನು ಕಳುಹಿಸಿರುತ್ತಾರೆ.

ಬಳ್ಳಾರಿ ಜಿಲ್ಲಾ ಹುವ್ವಿನಹಡಗಲಿ ತಾಲ್ಲೂಕು ಹೊಳಗುಂದಿ ಗ್ರಾಮದ ಶಾನುಭೋಗರ, ಭದ್ರಪ್ಪನವರ, ಗುಡ್ಡದ ಸಿದ್ದಪ್ಪನವರು ಕಾವೀರಪ್ಪನವರು ಶ್ರೀ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಚಿದ್ಘನಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ತಿರ್‍ಗಾಂದೋಲಿಕಾ ಮಹೋತ್ಸವದೊಡನೆ ಪಾದಪೂಜೆಯನ್ನು ನೆರವೇರಿಸಿದ ಕಾಲದಲ್ಲಿ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಯಜಮಾನ್ ಶಾನುಭೋಗರ ಭದ್ರಪ್ಪನವರ ಗುಡ್ಡದ ಶಿದ್ಧಪ್ಪನವರ ದ್ವಾರಾ ತಲ್ಪಿರುತ್ತವೆ.

ಚನ್ನರಾಯಪಟ್ಟಣದ ತಾಲ್ಲೂಕು ಹಿರೀಸಾವೆ ಸಮ್ಮತು ಕೋಟೆ ಗ್ರಾಮದ ಕಪನಿ ಗೌಡರು ತಾ|| ೧೭-೨-೩೬ ರಲ್ಲು ಮಾದಲಗೆರೆ ಸಮೀಪದಲ್ಲಿ ಮಹದೇಶ್ವರಲಿಂಗ ಪ್ರತಿಷ್ಠೆಯನ್ನು ದೀಕ್ಷಾಸಂಸ್ಕಾರವನ್ನು ಅನ್ನಸಂತರ್ಪಣೆಯನ್ನೂ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ||ರಾ|| ಹಿರೀಸಾವೆ ಸಿದ್ಧಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹರಪನಹಳ್ಳಿಯಲ್ಲಿರುವ ಮ|| ರಾ|| ಹೂಗಾರ ಚಂದ್ರಪ್ಪನವರು ಲಕ್ಷ್ಮೇಶ್ವರದ ಗಂಗಪ್ಪನವರ ಮಗ ಚಿ|| ಬಸವಣ್ಣಪ್ಪನನ್ನು ದತ್ತಪುತ್ರನನ್ನಾಗಿ ಸ್ವೀಕರಿಸಿದ ಸಮಯದಲ್ಲಿ ಲಕ್ಷ್ಮೇಶ್ವರದ ವೇ|| ಹಿರೇಮಠದ ಕಾಶಪ್ಪಯ್ಯನವರ ಸೂಚನೆಯ ಮೇರೆಗೆ ಪ್ರಭಾಪೋಷಣಕ್ಕಾಗಿ 1 ರೂಪಾಯಿಯನ್ನು ಸಮರ್ಪಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಶ್ರೀಮದುಜ್ಜಯಿನಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ.

[illegible]

[illegible]

ಶ್ರೀ [illegible] ಅಷ್ಟಾವರಣ ಮಹಿಮೆ

[illegible]

ಗುರು ಲಿಂಗ ಜಂಗಮ [illegible] ಪಾದೋದಕ ಪ್ರಸಾದ [illegible] ವರಣವೆಂದ ವೀರಶೈವ [illegible]

[illegible]

ಅಷ್ಟಾವರಣಗಳಿಂದ [illegible] ಗೊಳಿಸುವದೆಂಬುದನ್ನು ವಿಸ್ತರಿಸಬೇಕಾಗಿಲ್ಲ. ಜೀವಾತ್ಮನು ಪರಮಾತ್ಮನಿಂದಾಗಲಿ ತನ್ನಲ್ಲಿನ ಸರ್ವಜ್ಞತ್ವ ಸರ್ವಕರ್ತೃತ್ವ ರೂಪ ಪರ [illegible] ದನವನ್ನು ಕಳೆದುಕೊಂಡು ಕಿಂಚಿಜ್ಞತ್ವ ಕಿಂಚಿತ್ಕರ್ತೃತ್ವ ರೂಪ ದಾರಿದ್ರ್ಯಯುತನಾಗಿ ಚಕ್ರನೇಮಿಕ್ರಮದಿಂದ ಸೀಬೋತ್ತಮ ಜನ್ಮಗಳನ್ನು ಧರಿಸುತ್ತ ದುಃಖಕ್ಕೀಡಾಗುತ್ತಾನೆ. ಈ ದುಃಖದಿಂದ ಬಿಡುಗಡೆಹೊಂದ ವವರಿಗೆ ಆತ್ಮಶಾಂತತೆಯೂ ಸುಖವೂ ಇಲ್ಲದೆ ಸಂಸಾರದ ಪದಲ್ಲಿ ಬೀಯುತ್ತಲೇ ಇರಬೇಕಾಗ ವುದು. ಪರಮಕೃಪಾಳುಗ [illegible] ನ ಪ್ರತಿಯೊಬ್ಬ ವ [illegible] ಪರಮೇಶ್ವರ [illegible] ಲೋಕದಿಂದ ಭೂಮಿಗವತರಿಸಿ [illegible] ಅಭಿರುಚಿಗನುಗುಣ [illegible] ಮಾರ್ಗವನ್ನು ಕಲ್ಪಿಸಿಕೊಟ್ಟಿರು [illegible] ಈ ಮಾರ್ಗಗಳೇ ಮೋಕ್ಷಮಾರ್ಗಗಳೆಂದೂ [illegible] ಮುಖ್ಯವಾಗಿ [illegible] ಸಂಸಾರಪಾಶವನ್ನು ಹರಿದು [illegible] ಸ್ವತಂತ್ರರನ್ನಾಗಿಮಾಡುವ [illegible]

ಈ ಮುಕ್ತಿಮಾರ್ಗಗಳಲ್ಲಿ ವೀರಶೈವಮುಕ್ತಿ ಮಾರ್ಗವು [illegible] ಈ ಮುಕ್ತಿಮಾರ್ಗವನ್ನು [illegible] ಪ್ರತ್ಯಾಗಮಗಳ ಅವಲಂಬನದಿಂದ [illegible] ಅಷ್ಟಾವರಣವನ್ನು (ಮ [illegible]) ಸಾಧನವನ್ನಾಗಿಮಾಡಿದರು. [illegible] ಸ್ವರೂಪವೇನೆಂದು ವಿಚಾರಮಾಡಿ [illegible] ಪರಶಿವನ ಜೀವಾತ್ಮನ ಜಗತ್ತಿನ [illegible] ಭೇದರೂಪವಾದ [illegible] ಪರಿಣಮಿಸು [illegible] ನೀರಿನಲ್ಲಿ ಚೆಲ್ಲಿದ ಬೀಜದ ಗಂಧ [illegible] ಅದರ ಸಂಬಂಧದಿಂದ ನೀರಿನಲ್ಲಿ [illegible] ನಷ್ಟವಾಗಿ ಆ ನೀರು [illegible] ತನ್ನ ಸ್ವಭಾವಸಿದ್ಧವಾದ ನಿರ್ಮಲಗುಣ [illegible] ನಮ್ಮ ಶರೀರದೊಳಗೆ ನಾಂಟುಕ [illegible] ಪ್ರಾಪಂಚಿಕ ವಿಷಯಗಳೆಂಬ [illegible] ತನ್ನ ಸರ್ವಜ್ಞತ್ವಾದಿ ಸ್ವೈಜಗುಣ [illegible] ಕೊಂಡು [illegible] ಗವದರಿಂದ ಈ [illegible] ಸಂಬಂಧದಿಂದ [illegible] ದಿನಂತೆ ತನ್ನ [illegible] ಗಳನ್ನು ಹೊಂದಿ [illegible] ದರಿಂದ ಮಮುಕ್ಷುವಾದ ಪ್ರತಿ [illegible] ವೀರಶೈವನೂ ಈ ಎಂಟೂ ಆವರಣಗಳನ್ನು ಹೊಂದಬೇಕು. ಇವುಗಳಲ್ಲಿ [illegible] ಭಸ್ಮ [illegible] ಇರಬೇಕು ರುದ್ರಾಕ್ಷಿ ಇದ್ದೆಡೆ [illegible] ಶಿವಲಿಂಗವಿದ್ದಲ್ಲಿ [illegible] ಇವುಗಳಿದ್ದಲ್ಲಿ ಮಂತ್ರವಿರ [illegible] ಮಂತ್ರವಿದ್ದಲ್ಲಿ [illegible] ಪರಮಾತ್ಮನ ಸಾನ್ನಿಧ್ಯವಿರಬೇಕು. ಪರಮಾತ್ಮನ ಸನ್ನಿಧ್ಯವಿದ್ದಲ್ಲಿ [illegible] ಚರನಿದ್ದಲ್ಲಿ ಗುರುವಿರಬೇಕು. ಇತ್ತ [illegible] ಕಲ್ಪವು [illegible] ವನ್ನು ಶುದ್ಧಿಗೊಳಿಸುವವು. ಕಲ್ಪವು [illegible] ಶುದ್ಧಿಗೊಳಿಸುವವು. ಪ್ರಥಮತಃ [illegible] ಹೊರತು [illegible] ದೊಳಗಣ [illegible] ಪಾತ್ರೆಯನ್ನು ಮೊದಲು [illegible] ಹೊರಗೆ ಬೆಂಕಿಯನ್ನು ಹಾಕು [illegible] ಒಳಗಿನ [illegible] ಪಕ್ವವಾಗು [illegible] ಈ ಅಷ್ಟಾವರಣಗಳ ಉಪಾ [illegible] ಪರಿಪಕ್ವವಾಗಿ ಆತ್ಮ [illegible] ಸಹಿಸುಗುವುದು. [illegible] ಆವರಣಗಳು ಕಂಡುಬರು [illegible] ಯಾವ ವಿಧವಾದ ಹಿಂಸಾ [illegible] ಹಿಂಸಾಪ್ರವೃತ್ತಿಯು [illegible] ಕದಲ್ಲಿ [illegible] ಇದ್ದರೂ ಹಿಂಸಾ [illegible] ಆವರಣಗಳು ಇದ್ದರೂ [illegible] ಹಿಂಸಯೆಂಬುದು [illegible] ಆ ಕ್ರೋಧವು ಯಾವ [illegible] ದಿಂದ ಹುಟ್ಟುತ್ತದೆ. ಕಾಮವಿಲ್ಲದಿದ್ದರೆ ಕ್ರೋಧವಿಲ್ಲ. ಕ್ರೋಧವಿಲ್ಲದಿದ್ದರೆ ಹಿಂಸೆಯಿಲ್ಲ. ಹಿಂಸೆಯಿಲ್ಲದಿದ್ದರೆ ಆತ್ಮಶಾಂತಿಯನ್ನವಲಂಬಿಸುತ್ತದೆ. ಪರಮಾತ್ಮನನ್ನು ಮರೆಯಿಸಿರುವ ಇಂಥ ಕಾಮಕ್ರೋಧ ಹಿಂಸಾದಿ ದುಷ್ಟಗುಣಗಳಿಂದ ಬಿಡಲ್ಪಡಬೇಕೆಂಬುದನ್ನು ತೋರಿಸುವದಕ್ಕಾಗಿಯೇ ಪೂರ್ವಾಚಾರ್ಯರು ಈ ಆವರಣಗಳನ್ನು ಅನುಗ್ರಹಿಸಿದ್ದಾರೆ. ಕ್ರಿಯಾಜ್ಞಾನ ಸಿದ್ಧಿದಾಯಕಗಳಾದ ಈ ಆವರಣಗಳ ಸ್ವರೂಪವು ವೇದಾಗಮಗಳಲ್ಲಿ ಸ್ಪಷ್ಟವಾಗಿ ವರ್ಣಿಸಲ್ಪಟ್ಟಿದೆ. ವೀರಶೈವ ಮತಾವಲಂಬಿಯಾದ ಮಾನವನು ನಡೆನುಡಿಗಳಲ್ಲಿ ಶುದ್ಧನಾಗಿ ತನ್ನ ಆತ್ಮನನ್ನು ಪವಿತ್ರಗೊಳಿಸಲೆಂಬ ಉದ್ದೇಶದಿಂದಲೇ ಜ್ಞಾನಕ್ರಿಯಾ ಬಾಹುಲ್ಯವಾದ ಈ ವೀರಶೈವಮತವೆಂಬ ಮಹಾಮಂ [illegible] ದಿರವನ್ನು ಶ್ರೀ ರೇಣುಕಾದ್ಯಾಚಾರ್ಯರು ಈ ಜಗತ್ತಿನಲ್ಲಿ ರಚಿಸಿ ಈ ಮಂದಿರ ರಕ್ಷಣೆಗಾಗಿ ಅಷ್ಟದಿಗ್ಗಜಗಳಂತೆ ಅಷ್ಟಾವರಣಗಳನ್ನು ಅನುಗ್ರಹಿಸಿದ್ದಾರೆ. ಹೀಗಿದ್ದು [illegible] ಕತ್ತೀಚಿಗೆ "ಅತಿ ಪರಿಚಯಾದವಜ್ಞಾ" ಎಂಬ [illegible] ಯಂತೆ ನಡೆನುಡಿಗಳನ್ನು ಶುದ್ಧಗೊಳಿಸುವಂಥ [illegible] ಅಷ್ಟಾವರಣಶ್ರದ್ಧೆಯು ಅನೇಕರಲ್ಲಿ ಕಡಿಮೆಯಾಗ [illegible] ಬಂದಿದ್ದರಿಂದ ಇವುಗಳು ಮೃತ್ಪಾಷಾಣಾದಿಗಳಿಂದ ಮಾಡಿ ನಿಲ್ಲಿಸಿದ ಗಜಗಳಂತೆ ಆಕಾರಮಾತ್ರದಿಂದ ಶೋಭಿಸುತ್ತಲಿವೆ. ಸಜೀವಗಳಾದ ಗಜಗಳಿಲ್ಲದಿದ್ದರೆ ಶತ್ರುಗಳು ನಿರ್ಭಯವಾಗಿ ಮಂದಿರವನ್ನು ಪ್ರವೇಶಿಸಿ ನಾಶಮಾಡದೆ ಬಿಡುವುದಿಲ್ಲ. ಈ ಅಷ್ಟಾವರಣಗಳು [illegible] ದವನು ಶಿವನಿಗೆ ಪ್ರೇಮಾಸ್ಪದನಲ್ಲ. ಶಿವನನ್ನು [illegible] ಬೇಕೆಂಬುವವನ ಗುರುವಿನಿಂದ ಈ ಅಷ್ಟಾವರಣ [illegible] ಗಳನ್ನು ಹೊಂದಲೇಬೇಕು. ರಾಜನನ್ನು ಕಾಣಬೇಕಾ [illegible] ದರೆ ರಾಜಭಕ್ತಿಯಿಂದ ರಾಜದರ್ಶನೋಚಿತ ಉಡುಪು [illegible] ಗಳನ್ನು ಧರಿಸಬೇಕಾಗುವದಲ್ಲವೇ. ಅದರಂತೆ [illegible] ಆವರಣಗಳು ಶಿವಭಕ್ತಿಯೊಡನೆ ಶಿವದರ್ಶನೋಚಿತವಾದ ಉಡುಪುಗಳಾಗಿರುವದರಿಂದ ವೀರಶೈವನೆನಿಸಿಕೊಂಡಿರುವ ಪ್ರತಿಯೊಬ್ಬನ ಹೃದಯದಲ್ಲಿ ಪರಮಾತ್ಮ [illegible] ನೆಲಸುವಾಗ ಸಾಧಕವಾದ ಅಷ್ಟಾವರಣ ವಿಷಯ [illegible] ಚದುರಿಹೋದ ಪ್ರೀತಿಯನ್ನು ಪುನಃ ನೆಲೆಗೊಳಿಸಿ ಶಿವಭಕ್ತರೆಂಬ ನಾಮವನ್ನು ಸಾರ್ಥಕವಾಗಿ ಮಾಡು [illegible] ವಂತೆ ಶ್ರೀ ಜಗದ್ಗುರು ಪಂಚಾಚಾರ್ಯರು ಪ್ರೇರಿಸಲಿ.

The following proposition was moved by

Rajadharmapraveena Dewan Bahadur P MAHADEVIAH Esqr B A B L

Retired Chief Justice High Court of Mysore and was carried Unanimously, all standing—

This meeting of Shetties, Vyajamma and other Veerashaivas assembled at 6 p m on Saturday the 22nd February 1936 in Sri Mahanthina Mutt under the presidentship of Sir K P Puttanna Chetty wishes to place on record their deep sense of sorrow at the untimely death of Sreeman Rajakarya bhushana H Lingaraja Urs, Late Muzrai Bhakshi in the palace of His Highness the Maharaja of Mysore. He was an eminent scholar, an author and a poet of great distinction in Kanada Literature and he was a tower of strength to all literary aspirents of all communities. This assembly desires to record the great interest which the Late Mr Lingaraja Urs always took in advancing the Claims of the Veerashaiva community and in particular the immemorable services he rendered in connection with the selection of highly qualified Guru for the Brehonnur Simhasana Peeta. They consider his demise to be an irreparable loss to the whole Karanataka country, which acknowledged the high place he held in the literary world. The Veerashaiva Community desires to convey their sincere condolences and sympathy to his near relatives in their sad bereavement and to the Urs Community of which he was an ornament and also pray God to grant peace to his noble soul

K P. Puttanna Chetty

Chairman

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಇಷ್ಟಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ವರುಷಕ್ಕೊಮ್ಮೆ ಹನ್ನೆರಡು ವರ್ಷಕ್ಕೊಮ್ಮೆ ಒಂದುಸಾರೆ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯವನ್ನು ಅರಿದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ತಪ್ಪಿಸುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ದಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ಕರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು ಇದಕ್ಕಾಗಿ ಒಳ್ಳೆ ಕಡದಂಥ ಕಾಗದಗಳನ್ನು ಉಪಯೋಗಿಸುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಈ ಔಷಧಾಲಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ರಸಸಿಂದೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂದೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ರಸವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦ ೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹರಿತಾಳಭಸ್ಮ	೧	೦—೮—೦
ಕಾಂಚನಭಸ್ಮ	೧	೦—೮—೦
ಶುಕ್ತಿಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦ ೧೨—೦
ಅಭ್ರಕಭಸ್ಮ	೧	೩—೦—೦
ಮುತ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಕಾಡಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಲಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಲಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಲಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾ ವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ ಬೆಲೆ ೧೨ ಆಣೆ ವಿ ಪಿ ಚಾರ್ಜ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಶೋಭಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿದ್ದಾರೆ ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ ಈ ಮಹಾಗ್ರಂಥದ ಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ನಿಃಸಂಕೋಚವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಂಡಿತರವರಿಗೆ ಆಶ್ರಯವನ್ನಿತ್ತಿರುವವಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ದಿವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೮ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನ ಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ ೮ **ರೂಪಾಯಿ** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ** ಗೆ ದೊರೆಯುವದು ವಿ ಪಿ ಚಾರ್ಜ ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳನ್ನು ತೋರಿಸುವ ಫೋಟೋ ಸೈಜು ೨೦×೧೪ ಬೆಲೆ ಒಂದಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸಾನಂದ ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಸದ್ಗುರು ಶಿವಯೋಗಿಗಳು ... ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ... ಫೋಟೋ ಸೈಜು ೧೪×೧೦ ಬೆಲೆ ಒಂದಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ... ಫೋಟೋ ಸೈಜು ೧೦×೮ ಬೆಲೆ ಒಂದಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ... ಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ... ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ... ಶಿವಾಚಾರ್ಯರಿಗೆ ... ಫೋಟೋ	೦—೦—೯
ಶ್ರೀ ... ಗುರುದರ್ಶನವನ್ನು ... ಫೋಟೋ ಒಂದಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ... ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರು ... ಫೋಟೋ	೦—೦—೯
ಪಂಡಿತ ಶ್ರೀ ... ಫೋಟೋ	೦—೦—೯
ಶ್ರೀ ಜಗದ್ಗುರು ... ಫೋಟೋ ಒಂದಕ್ಕೆ	೦—೦—೯
ಶ್ರೀ ಜಗದ್ಗುರು ... ಫೋಟೋ ಒಂದಕ್ಕೆ	೦—೦—೯
ಶ್ರೀ ಜಗದ್ಗುರು ... ಫೋಟೋ	೦—೦—೯
ಶ್ರೀ ಜಗದ್ಗುರು ... ಫೋಟೋ	೦—೦—೯
... ಫೋಟೋ	೦—೦—೯
... ಫೋಟೋ	೦—೦—೯

... ರೂಪಾಯಿಗಳ ... ಕಳುಹಿಸುವವರಿಗೆ ... ಆಣೆಯಂತೆ ಕಮೀಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ ಬಿ ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು ಒಡದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ ಮೂರುಬೆಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವು ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬದವರ ಉಪಯೋಗಕ್ಕೆ ... ಬುಡ್ಡಿ ಒಂದಕ್ಕೆ ಕ್ರಯ ರೂ ೦-೬-೦ ವಿ ಪಿ ೦-೯-೦ ಡಜನ್ ಒಂದಕ್ಕೆ ಕ್ರಯ ರೂ ೩-೮-೦ ವಿ ಪಿ ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯ ಪಡಿಸಿ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[ ] ಪೋ ... ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ...	೨ ಆಣೆ
...	೧ ಆಣೆ
ಗೋತ್ರಸೂತ್ರ ...	೧ ಆಣೆ
ಸನ್ಯಾಸಿತ್ರಯ ... (... ಸಂಸ್ಕೃತ)	೧ ಆಣೆ
ಪಂಚವಿಂಶತಿ ... (... ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ... (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (... ಆವೃತ್ತಿ)	೧ ಆಣೆ
ಬಸವಾದಿ ... ದರ್ಪಣ (... ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (... ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿ ...	೨ ಆಣೆ
ಶ್ರೀಗುರುತತ್ತ್ವ ಪದಗಳು	೨ ಆಣೆ
ಗುರು ಸ್ವರೂಪ ... ದೀಪಿಕೆ	೨ ಆಣೆ
ಶ್ರೀ ರುದ್ರಮುನಿ ... ಶತಕ	೨ ಆಣೆ
ವೀರಶೈವ ...	೩ ಆಣೆ
ವೀರಶೈವಾಚಾರ ... (... ಆವೃತ್ತಿ)	೩ ಆಣೆ
ವಿವಾಹವಿಧಿ (... ನೆಯ ಆವೃತ್ತಿ)	೪ ಆಣೆ
ಸನ್ಯಾಸಿ ... ನಿರಾಕರಣ (... ನೆಯ ಆವೃತ್ತಿ) ...	೪ ಆಣೆ
ವೈದಿಕಸಾಮ್ರಾಜ್ಯ ...	೪ ಆಣೆ
ಆಗಮಪರಿಜ್ಞಾನ	೬ ಆಣೆ
ಶಿವಾಧಿಕ್ಯರತ್ನಾವಳಿ (... ಕವಿಕೃತ)	೬ ಆಣೆ
ಬಸವಧ್ವಾಂತ ದಿವಾಕರ (... ಆವೃತ್ತಿ)	೬ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣವು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (English)	12 As
ವೀರಶೈವರತ್ನ (... ಆವೃತ್ತಿ)	೧೨ ಆಣೆ
ವೈದಿಕಶಿವಪೂಜಾ ವಿಧಿ (...)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (... ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) ..	೧೨ ಆಣೆ
ಶಿವಾಸೂತ್ರ ಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (... ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) ...	೧ ರೂ
ಈಶೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ವೀರಶೈವಸಿದ್ಧಾಂತಸುಧಾಕರ ..	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ... ಪುಟ) .	೬ ರೂ
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ... ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ... ತಾ|| ... ಗುರುಪಾದಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯೋ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಕ್ಷಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿಪ್ಪದೀಲೋಕಪಮ್ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ ಕ್ಕೆ ೯ ಪೈ ಪರಸ್ಥಳದವರಿಗೆ ೩ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೬ ನೇ ಮಾರ್ಚಿ ೧೯೩೬ [ಸಂಚಿಕೆ ೪೫

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತೀ ಮಹೋತ್ಸವ, ಬೆಂಗಳೂರು

ಪ್ರತಿವರ್ಷ ಪದ್ಧತಿಯಂತೆ ಇದೇ ಯುವಸ ಮಸಂ॥ ಫಾಲ್ಗುಣ ಶು॥ ೧೩ ಶುಕ್ರವಾರ ದಿವಸ ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಶ್ರೀ ಮಹಾಂತಿನಮಠದಲ್ಲಿ ಜಯಂತಿಮಹೋತ್ಸವವು ವಿಶೇಷ ವೈಭವದಿಂದ ನೆರವೇರಿತು ಆ ದಿವಸ ಪ್ರಾತಃಕಾಲ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಗೆ ಏಕಾದಶವಾರ ರುದ್ರಾಭಿಷೇಕವೂ ಸಹಸ್ರ ಬಿಲ್ವಾರ್ಚನೆಯೂ ನೆರವೇರಿ ಮಧ್ಯಾಹ್ನ ಸಮಾರಾಧನೆಯಾಯಿತು ಸಾಯಂಕಾಲ ೬ ಘಂಟೆಗೆ ದಿವಾನ್ ಬಹದ್ದೂರ್ ರಾಜಸಭಾಭೂಷಣ ಸರ್ ಕೆ ಪಿ ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆಯು ನೆರವೇರಿ ಜಯಂತಿ ಫಂಡಿನ ವಾರ್ಷಿಕ ವರದಿಯೂ, ಶ್ರೀ ರೇಣುಕಾದಿ ಪಂಚಾಚಾರ್ಯಧರ್ಮಗ್ರಂಥಭಂಡಾರದ ಮತ್ತು ಶ್ರೀ ಜಗದ್ಗುರು ರೇಣುಕಾದಿಪಂಚಾಚಾರ್ಯಸ್ವಾಮಿಪೋಷಿತ ವಾರಶಾಲಾ ಫ್ರೀಬೋರ್ಡಿಂಗಿನ ವರದಿಯೂ ಓದಲ್ಪಟ್ಟವು

ಅನಂತರ ಸದರಿ ಮಠಾಧ್ಯಕ್ಷರಾದ ಶ್ರೀ॥ಷ॥ಬ್ರ॥ ಗಂಗಾಧರಶಿವಾಚಾರ್ಯಮಹಾಸ್ವಾಮಿಗಳವರು 'ಗುರುಭಕ್ತಿ" ಎಂಬ ವಿಷಯವನ್ನೆತ್ತಿಕೊಂಡು ಭವ್ಯವಾದ ಭಾಷಣವನ್ನಿತ್ತರು ಶ್ರೀಗಳವರ ಭಾಷಣವನ್ನು ಕೇಳಿ ಸಭಿಕರೆಲ್ಲರೂ ತಮ್ಮ ಆನಂದೋದ್ಗಾರವನ್ನು ಮೇಲಿಂದ ಮೇಲೆ ಕರತಾಡನಮೂಲಕ ಪ್ರಕಟಿಸುತ್ತಿದ್ದರು ಅದೇ ದಿವಸ ಸುಣ್ಣಕಲ್ಲು ಬಿದರಿ ಆರಾಧ್ಯಮಠಾಧ್ಯಕ್ಷರಾದ ವೇ॥ ಪಂ॥ ಚಂದ್ರಶೇಖರಶಾಸ್ತ್ರಿಗಳವರು 'ಆಚಾರ್ಯರ ಜಯಂತಿಯ ಆವಶ್ಯಕತೆ" ಎಂಬ ವಿಷಯದಮೇಲೆ ಮನೋಹರವಾಗಿ ಸಂಭಾಷಿಸಿದರು ಈ ರೀತಿಯಾಗಿ ಭಾಷಣಗಳು ಮುಗಿದಮೇಲೆ ಅಧ್ಯಕ್ಷರ ಸಮಾರೋಪಭಾಷಣವಾಗಿ ಅಂದಿನ ಸಭಾಕಾರ್ಯವು ಸಮಾಪ್ತಿಗೊಂಡಿತು

ಬಳಿಕ ಕೇವಲ ಮಲ್ಲಿಕಾಕುಸುಮಗಳಿಂದ ವಿರಚಿತವಾಗಿದ್ದ ದಿವ್ಯರಥದಲ್ಲಿ ಶ್ರೀ ರೇಣುಕಾಚಾರ್ಯರ ಭವ್ಯಮೂರ್ತಿಯನ್ನೂ, ಈ ವರ್ಷ ಹೊಸದಾಗಿ ಗುರುಭಕ್ತಾಗ್ರಗಣ್ಯರಾದ ಮ॥ ರಾ॥ ಜಿ ಎಸ್ ಮಲ್ಲಿಕಾರ್ಜುನಪ್ಪನವರು ಅಸಾಧಾರಣವಾದ ಭಕ್ತಿವಿಶೇಷದಿಂದ ವಿಶೇಷದ್ರವ್ಯವನ್ನು ವ್ಯಯಮಾಡಿ ತಯಾರಿಸಿದ ನಂದಿ, ಭೃಂಗಿ ಮತ್ತು ವಿಘ್ನೇಶ್ವರಮೂರ್ತಿಗಳನ್ನೂ ಮೂರ್ತಗೊಳಿಸಲು ಉತ್ಸವಕಾರ್ಯಾರಂಭವಾಯಿತು ಅಭೂತಪೂರ್ವವಾದ ಜಗದಾಚಾರ್ಯರ ಈ ಮಹೋತ್ಸವಕ್ಕೆ ಜನಸ್ತೋಮವು ಅಪರಿಮಿತವಾಗಿ ಸಮ್ಮಿಲಿತವಾಗಿತ್ತು ಈ ಮಹೋತ್ಸವದ ವೈಭವವನ್ನು ಎಷ್ಟು ಬಣ್ಣಿಸಿದರೂ ಕಿರಿದಾಗಿದೆ

7 ನೆಯ ತಾರೀಖು ಶನಿವಾರದ ದಿವಸ ಶ್ರೀ ಜಗದಾಚಾರ್ಯ ಜಯಂತಿಯ ಅಂಗಭೂತವಾದ ಸಭೆಯು ಸದರಿ ಮಹಾಂತಿನಮಠದಲ್ಲಿ ಪ್ರಾರಂಭವಾಯಿತು ಆ ದಿವಸದ ಸಭಾಧ್ಯಕ್ಷಸ್ಥಾನವನ್ನು ಅಸಾಧಾರಣಮೇಧಾವಿಗಳೆಂದು ಜಗದ್ವಿಖ್ಯಾತರಾಗಿರುವ ರಾಜಧರ್ಮಪ್ರವೀಣ ದಿವಾನ್‌ಬಹದ್ದೂರ್, ಮ॥ ರಾ॥ ವಿ ಮಹಾದೇವಯ್ಯನವರು ರಿಟೈರ್ಡ್ ಮೈಸೂರು ಹೈಕೋರ್ಟು ಚೀಫ್ ಜಸ್ಟಿಸ್, ಈ ಮಹೋದಯರು ಅಲಂಕರಿಸಿದ್ದರು ಆ ದಿನ ಸಭೆಯಲ್ಲಿ ಮೈಸೂರು ಪ್ರಿನ್ಸ್‌ಪಾಲ್ ರವರ ಸಂಸ್ಕೃತ ಕಾಲೇಜಿನ ಮೀಮಾಂಸಾಧ್ಯಾಪಕರೂ ಆಸ್ಥಾನವಿದ್ವಾಂಸರೂ ವೇದಾಂತ ರವಿಮೀಮಾಂಸಾಭೂಷಣಾದಿಪದವೀಧರರೂ ಆಗಿರುವ ಶ್ರೀ ದೇವಶಿಖಾಮಣಿ ರಾಮಾನುಜಾಚಾರ್ಯರವರು ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ಮೇಲೆ ಮನೋಹರವಾಗಿ ಭಾಷಣಮಾಡಿದರು

ಬಳಿಕ ಅಧ್ಯಕ್ಷಮಹೋದಯರು ಭಾಷಣಕಾರರ ಪಾಂಡಿತ್ಯಪ್ರಭಾವವನ್ನು ಬಣ್ಣಿಸುತ್ತ ಅವರು ವಿಶಿಷ್ಟಾದ್ವೈತಮಂಜರಿಗೆ ಭಾಷ್ಯದ ವ್ಯಾಖ್ಯಾನವನ್ನು ಬರೆದಿರುವ ವಿಷಯವನ್ನೂ ಶಿವಾದ್ವೈತಮಂಜರಿಯ ಮಹತ್ವವಾದ ಯೋಗ್ಯತೆಯನ್ನೂ ಅದರ ಸ್ವರೂಪವನ್ನೂ ವಿವರವಾಗಿ ಪ್ರತಿಪಾದಿಸಿ ಸರ್ವಸಭಿಕರನ್ನೂ ಸಂತೋಷಭರಿತರನ್ನಾಗಿ ಮಾಡಿದರು ಆ ದಿನದ ಸಭೆಗೆ ಬೆಂಗಳೂರು ನಗರದ ಅನೇಕ ಜನ ಪ್ರತಿಷ್ಠಿತ ಪುರುಷರು ಆಗಮಿಸಿದ್ದರಿಂದ ಸಭೆಗೆ ವಿಲಕ್ಷಣವಾದ ಶೋಭೆಯುಂಟಾಗಿತ್ತು ಅಂದಿನ ಸಭಾಕಾರ್ಯಕ್ರಮವು ವಿಶೇಷವಾದ ಉತ್ಸಾಹದೊಡನೆ ನೆರವೇರಿತು

8 ನೆಯ ತಾರೀಖು ಭಾನುವಾರದ ದಿವಸ ಸದರಿ ಮಹಾಂತಿನಮಠದಲ್ಲಿ, ಬೆಂಗಳೂರು ಸೆಂಟ್ರಲ್ ಕಾಲೇಜಿನ ಫಿಜಿಕ್ಸ್ ಪ್ರೊಫೆಸರರಾಗಿರುವ ರಾವ್ ಬಹದ್ದೂರ್ ಶ್ರೀಮಾನ್ ಬಿ ವೆಂಕಟೇಶಾಚಾರ್ಯ ಎಂ ಎ ಇವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು ಅಂದಿನ ಸಭೆಗೆ ಪೂರ್ವದಿನದಂತೆ ಬೆಂಗಳೂರು ನಗರದಲ್ಲಿ ಪ್ರತಿಷ್ಠಿತರಾಗಿರುವ ಶ್ರೀಮಾನ್ ಬಿ ಎಂ ಶ್ರೀಕಂಠಯ್ಯನವರು ಎಂ ಎ ಪ್ರೊಫೆಸರ್ ಸೆಂಟ್ರಲ್ ಕಾಲೇಜು, ಶ್ರೀಮಾನ್ ಎಲ್ ರಾಮರಾವ್, ಎಂ ಎ ಪ್ರೊಫೆಸರ್ ಸೆಂಟ್ರಲ್ ಕಾಲೇಜು, ಶ್ರೀಮಾನ್ ಡಿ ವಿ ಗುಂಡಪ್ಪನವರು ಎಂ.ಎ, ಶ್ರೀಮಾನ್ ಸಿ ಕೆ ವೆಂಕಟರಾಮಯ್ಯನವರು ಎಂ.ಎ, ಎಲ್‌ಎಲ್ ಬಿ, ಶ್ರೀಮಾನ್ ಪಂಜೆ ಮಂಗೇಶರಾಯರು ಮಂಗಳೂರು, ಶ್ರೀಮಾನ್ ಎಂ ಬಿ ವರದರಾಜಯ್ಯಂಗಾರ್ ಬಿ ಎ, ಬಿ ಎಲ್, ಅಡ್ವೊಕೇಟ್, ಶ್ರೀಮಾನ್ ದೇಶಿಕಾಚಾರ್ಯರು, ಸಂಸ್ಕೃತ ಕಾಲೇಜ್ ಪ್ರೊಫೆಸರ್, ಶ್ರೀಮಾನ್ ನರಸಿಂಹಯ್ಯಂಗಾರ್ಯರು ರಿಟೈರ್ಡ್ ಅಮಲ್ದಾರ್ ಶ್ರೀಮಾನ್ ಸುಬ್ಬಾನರಸಿಂಹಶಾಸ್ತ್ರಿಗಳು ಇವರೇ ಮೊದಲಾದ ಅನೇಕ ಜನ ಸುಶಿಕ್ಷಿತರು ಆಗಮಿಸಿದ್ದರು ಆ ದಿವಸ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು, ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವಿಷಯಕವಾಗಿಯೂ ಪಂಚಪೀಠಗಳ ಸನಾತನತ್ವ ವಿಷಯಕವಾಗಿಯೂ ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಮಹತ್ವಪೂರ್ಣವಾದ ಭಾಷಣಮಾಡಿದರು ಪಂಡಿತರ ಭಾಷಣವಾದ ಬಳಿಕ ಅಧ್ಯಕ್ಷರು ಸಮಯೋಚಿತ ಭಾಷಣಮಾಡಿ ಅಂದಿನ ಸಭಾಕಾರ್ಯವನ್ನು ಸಮಾಪ್ತಿಗೊಳಿಸಿದರು

9 ನೆಯ ತಾರೀಖು ಸೋಮವಾರ ದಿವಸ ಪುನಃ ಸಭೆಯು ಪ್ರಾರಂಭವಾಯಿತು ಅಂದಿನ ಸಭಾಧ್ಯಕ್ಷಸ್ಥಾನವನ್ನು ಮೈಸೂರು ದೇಶದಲ್ಲೆಲ್ಲಾ ಪ್ರಖ್ಯಾತರಾಗಿರುವ ಶ್ರೀಮಾನ್ ಬಿ ಎಂ ಶ್ರೀಕಂಠಯ್ಯನವರು ಎಂ ಎ ಸೆಂಟ್ರಲ್‌ಕಾಲೇಜ ಈ ಮಹಾಶಯರು ಅಲಂಕರಿಸಿದ್ದರು ಆ ದಿವಸ ವೇ॥ ಸುಬ್ಬಾನರಸಿಂಹಶಾಸ್ತ್ರಿಗಳವರು 'ಭರತಖಂಡದಲ್ಲಿರುವ ಅವೈದಿಕಮತಗಳು' ಎಂಬ ವಿಷಯವನ್ನೆತ್ತಿಕೊಂಡು ಮನೋಹರವಾದಭಾಷಣವನ್ನು ಮಾಡಿದರು ಅವರು ತಮ್ಮ ಭಾಷಣದಲ್ಲಿ ಅನೇಕ ಅವೈದಿಕ ಮತಗಳ ಸ್ವರೂಪವನ್ನು ಬಣ್ಣಿಸುತ್ತ ಕಡೆಗೆ ಬಸವಪಂಥವು ಕೇವಲ ಅವೈದಿಕವಾದುದೆಂದು ಬಸವನ ವಚನಗಳಿಂದಲೇ ಸಿದ್ಧಮಾಡಿ ತೋರಿಸಿದರು ಈರೀತಿಯಾಗಿ ಶಾಸ್ತ್ರಿಗಳವರ ಭಾಷಣವು ಪೂರೈಸಿದ ಮೇಲೆ ಅಧ್ಯಕ್ಷಮಹಾಶಯರು ಸಮಯೋಚಿತ ಭಾಷಣವನ್ನುಮಾಡಿ ಅಂದಿನ ಸಭೆಯನ್ನು ಸಮಾಪ್ತಿಗೊಳಿಸಿದರು

10 ನೆಯ ತಾರೀಖಿನ ದಿವಸ ಮಹಾಂತಿನಮಠದ ಶ್ರೀಗಳವರು ಕಾರ್ಯಾಂತರ ಮೂಲಕ ಪರಸ್ಥಳಕ್ಕೆ ಪ್ರಯಾಣ ಮಾಡಿದ್ದರಿಂದ ಮೂರುನಾಲ್ಕು ದಿವಸಗಳವರೆಗೆ ಸಭಾ ಕಾರ್ಯಕ್ರಮವು ನಿಲ್ಲಿಸಲ್ಪಟ್ಟಿತು ತಾರೀಖು 14 ಮತ್ತು 15 ಈ ಎರಡು ದಿವಸ ಶ್ರೀಗಳವರ ಅಧ್ಯಕ್ಷತೆಯಲ್ಲಿ ಕೀರ್ತನಕೇಸರೀ ಮೊದಲಾದ ಬಿರುದಾಂಕಿತರಾದ ದೊಡ್ಡಬಳ್ಳಾಪುರದ ಶ್ರೀ ಶಿವದೇವಶಾಸ್ತ್ರಿಗಳವರು ದಕ್ಷಯಜ್ಞಲೀಲೆ ಮತ್ತು ಗಿರಿಜಾಕಲ್ಯಾಣ ಎಂಬ ಕೀರ್ತನೆಗಳನ್ನು ಮಾಡಿ, ಸರ್ವಸಾಮಾಜಿಕರನ್ನು ಸಂತುಷ್ಟಚಿತ್ತರನ್ನಾಗಿ ಮಾಡಿದರು 16 ನೆಯ ತಾರೀಖಿನ ದಿವಸ ಆಯುರ್ವೇದಾಚಾರ್ಯಾದಿ ಪದವೀವಿಭೂಷಿತರಾದ ಶ್ರೀ ಶಿವಕುಮಾರಸ್ವಾಮಿಗಳವರು 'ಆಯುರ್ವೇದ" ವೆಂಬ ವಿಷಯದ ಮೇಲೆ, ಭಾಷಣವನ್ನು ಮಾಡತಕ್ಕವರಿದ್ದಾರೆ

ಪ್ರತಿವರ್ಷಕ್ಕಿಂತಲೂ ಈ ವರ್ಷ ಜಯಂತಿಯ ಕಾರ್ಯಕ್ರಮವು ವಿಶೇಷ ವೈಭವದೊಡನೆ ನೆರವೇರಿದುದಕ್ಕೆ ಜಗದಾಚಾರ್ಯರ ಅನುಗ್ರಹವೇ ಮೂಲಕಾರಣೀಭೂತವಾಗಿರುವುದು ಇದರಂತೆಯೇ ಜಯಂತಿಮಹೋತ್ಸವವು ಉತ್ತರೋತ್ತರವಾಗಿ ಅಭಿವೃದ್ಧಿಯನ್ನು ಹೊಂದಲೆಂದು ಆ ಪೂಜ್ಯಪಾದರನ್ನು ಅನನ್ಯಸಾಧಾರಣ ಭಕ್ತಿಭಾವದಿಂದ ಭಜಿಸುವ,

ಕಾರ್ಯಭಾಗಿ

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

ರಂಭಾಪುರೀ ಮಹಾಸಂಸ್ಥಾನ ಪೀಠದಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವ ಮತ್ತು ವೀರೇಶನ ರಥೋತ್ಸವ

ಪ್ರತಿವರ್ಷದ ಪದ್ಧತಿಯಂತೆ ಸಾಲು ೫ ಶು|| ಚತುರ್ದಶಿ ಶುಕ್ರವಾರ ಪುಣ್ಯ ದಿವಸದಲ್ಲಿ ಶ್ರೀಮಜ್ಜಗದ್ಗುರು ಭಗವತ್ಪಾದ ಶ್ರೀ ರೇಣುಕಾಚಾರ್ಯರ ಜಯಂತಿ ಮತ್ತು ಪೀಠಾಧಿದೇವನಾದ ವೀರೇಶನ ರಥೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು ಈ ಪೀಠ ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರಶೇಖರೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಸಮಾರಂಭ ದಯಮಾಡಿಸದಿದ್ದಾಗ್ಯೂ, ಈ ಮಹೋತ್ಸವಕ್ಕೆ ಮೈಸೂರು ಪ್ರಾಂತದ ಹಾಗೂ ಬ್ರಿಟಿಷ್ ಇಂಡಿಯಾ ಮತ್ತು ನೈಜಾಮ ಪ್ರಾಂತದ ನಾನಾ ಭಾಗಗಳಿಂದ [illegible] ಪೀಠಾಭಿಮಾನಿಗಳು ಆಗಮಿಸಿದ್ದರು

ಶುಕ್ರವಾರ ಪ್ರಾತಃಕಾಲದಲ್ಲಿ [illegible] ತಳಿರು ತೋರಣ ರಂಗವಲ್ಲಿಗಳಿಂದ [illegible] ಲ್ಪಟ್ಟ ದೇವಾಲಯದಲ್ಲಿ ಶ್ರೀ ವೀರೇಶ್ವರನಿಗೆ [illegible] ಷೋಡಶೋಪಚಾರಪೂರ್ವಕ ಮಹಾ ರುದ್ರಾಭಿಷೇಕವು ನೆರವೇರಿತು ಮಧ್ಯಾಹ್ನೋತ್ತರ ವಾದ್ಯಘೋಷಗಳ [illegible] ವೀರೇಶನ ರಥಾರೋಹಣವಾದವೇಳೆ ನೆರೆದಿದ್ದ [illegible] ಮಂಡಲಿಯವರು ಫಲಪುಷ್ಪ ದಿಗಳೊಡನೆ [illegible] ಯನ್ನು ಸಮರ್ಪಿಸಿದರು [illegible] ರಥವು ಎಳೆಯಲ್ಪಟ್ಟಿತು [illegible] ತೀರ್ಥಪ್ರಸಾದಗಳನ್ನು ಕೊಡುವ [illegible] ಗಿತ್ತು ಅನ್ನಸಂತರ್ಪಣೆಯನ್ನು ನಡೆಸಲಾಯಿತು

[illegible] ದಿವಸ [illegible] ವತ್ತಾಗಿ ಮಹಾಜನರ ಸಭೆಯು [illegible] ಆಲ್ದೂರು ಶ್ರೀಮಂತ [illegible] ಅಧ್ಯಕ್ಷತೆಯಲ್ಲಿ ಕೂಡಿತ್ತು ಸಭೆಯ [illegible] ವನ್ನನುಸರಿಸಿ ಪ್ರಥಮದಲ್ಲಿ [illegible] ಕಾಚಾರ್ಯರ ಮಂಗಲ [illegible] ತಪೋನಿಧಿಗಳೂ, ಜಿತೇಂದ್ರಿಯ [illegible] ಪರಮ ವೈರಾಗ್ಯಶೀಲ [illegible] ವಿದ್ವತ್ಕುಲತಿಲಕ [illegible] ಲಿಂಗಾಂಗಸಾಮರಸ್ಯ ತತ್ತ್ವ [illegible] ಗಿದ್ದ ಈ ಪೀಠದ [illegible] ನಿರಾಹಾರದಿಂದ [illegible] ಪೀಠಗಳಿಗೆ [illegible] ಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ [illegible] ಸಿದ್ಧಲಿಂಗ ಶಿವಾಚಾರ್ಯ [illegible] ಅಕಸ್ಮಿಕವಾಗಿ [illegible] ತಮಗುಂಟಾದ [illegible] ಗೊಳಿಸಿದ್ದಲ್ಲದೆ ನೂತನ [illegible] ಶ್ರೀಜಗದ್ಗುರು ಸಿದ್ಧೇಶ್ವರ [illegible] ಸ್ವಾಮಿಗಳವರಲ್ಲಿ ತಮ್ಮ [illegible] ಭಕ್ತಿಯನ್ನು ಸತೋಷವನ್ನು [illegible]

ನಮ್ಮ ಮೈಸೂರು ದೇಶದ [illegible] **ಮಿರ್ಜಾ** ಎಂ ಇಸ್ಮೇಲ್‌ರವರಿಗೆ ಬ್ರಿಟಿಷ್ [illegible] **ಭೌಮರಿಂದ** ಕೆ ಸಿ ಐ ಇ [illegible] **ಪ್ರಾಪ್ತವಾದುದಕ್ಕೆ** ಈ ಸಭೆಯು ತನ್ನ ಸಂತೋಷವನ್ನು **ವ್ಯಕ್ತ**ಗೊಳಿಸಿ ಈ ವಿಷಯವನ್ನು ದಿವಾನ್ **ಸಾಹೇಬರವರಿಗೆ** ತಿಳಿಯಿಸಬೇಕೆಂದು ಸರ್ವಾನುಮತದಿಂದ **ಅಂಗೀಕರಿಸಲ್ಪಟ್ಟಿತು**

ಅನಂತರ " [illegible]ಂತಿಯ ಮಹತ್ವವನ್ನೂ " ಶಕ್ತಿವಿಶಿಷ್ಟಾದ್ವೈತ " [illegible]ಂತಸ್ವರೂಪವನ್ನೂ ಕುರಿತು **ಮಹಾ ಸಂಸ್ಥಾ**[illegible] ಉದ ರಾಷ್ಟ್ರಯದಿಂದಲೇ ಶ್ರೀ ಕ್ಷೇತ್ರಕಾಶೀ ವಿಶ್ವಾರಾಧ್ಯ ಗುರುಕುಲದಲ್ಲಿ ಅಭ್ಯಸಿಸಿ ವೇದಾಂತಾಚಾರ್ಯ, ಪಾಂಡಿತ್ಯವನ್ನು ಹೊಂದಿದ ವೇದಾಂತಾಚಾರ್ಯ, ಶಿರೋಮಣಿ ಇತ್ಯಾದಿ ಪದವೀಪ್ರತಿಷ್ಠಿತರಾದ ಭಾನಾಪುರ ಬೃಹನ್ಮಠಾಧ್ಯಕ್ಷಪಂಡಿತ ನೀಲಕಂಠ ಶಾಸ್ತ್ರಿಗಳವರು ಸರ್ವರಿಗೂ ಸುಗಮವಾಗಿ ಬೋಧವಾಗುವಂತೆ ಸುಮಾರು ಒಂದು ಘಂಟೆಯವರೆಗೆ ಗಂಭೀರವಾಗಿ ಭಾಷಣಮಾಡಿದರು [illegible] ಹೊಳಲೂರು [illegible] ಚಿಕ್ಕಮಗಳೂರು [illegible] ಪ್ರಸ್ತಾಪಿಸುತ್ತ ಮಕ್ಕಳಿಂದ ರಾಮ[illegible] ಗುರುಭಕ್ತಿ [illegible] [illegible] ವನ್ನಾಗಿ [illegible] ನೂತನ [illegible]

[illegible] ಆಲ್ದೂರು [illegible] ಶ್ರೀಮಂತ [illegible] ಬೋ|| [illegible] " ಭಗವತ್ಪಾದ ಶ್ರೀ ರೇಣುಕರ ಜಯಂತಿ " ಯ ದಿವಸವನ್ನು [illegible] ದಿವಸವನ್ನಾಗಿ [illegible] ಸಭೆಯು [illegible] ಪ್ರಜಾ [illegible] ಅಂಗೀಕರಿಸಲ್ಪಟ್ಟಿತು [illegible] ಶ್ರೀ ರೇಣುಕ ಜಯಂತಿ [illegible] ದಿವಸವನ್ನು [illegible] ರವರನ್ನು [illegible]

[illegible] ನವರು [illegible] ವಿಷಯವನ್ನು [illegible] ಸಭೆ [illegible] ಅನಂತರದಿಂದ [illegible] ದಿವನಂತರ ಈ [illegible] ಧ್ಯಕ್ಷರು [illegible] ಸಭೆ [illegible] ವಿಸರ್ಜಿಸಲ್ಪಟ್ಟಿತು

ಪ್ರತ್ಯಕ್ಷದರ್ಶಿ

ಶ್ರೀ ಜಗದ್ಗುರು [illegible]ಚಾರ್ಯ ಜಯಂತೀ ನಿಮಿತ್ತ [illegible] ನಡೆದ [illegible] ದಿಸೇವವನ್ನೂ, [illegible] ಪ್ರಸಿದ್ಧ ವಿದ್ವಾಂಸರ [illegible] ವ್ಯಾಸಗಳೂ

[illegible] ಹಾಸನದ ಜಂಗಮ [illegible] ಜಯಂತಿ ನಿಮಿತ್ತ [illegible] ತಂಪದ ವಿಶೇಷ ಧಿವೇಶ [illegible] ನೆರವೇರಿತು ತಾ|| [illegible] ಯಂಕಾಲ ೬ ಘಂಟೆ [illegible] ವರೆಗೂ ಕಾಶಿಯ ಸುಪ್ರಸಿದ್ಧ [illegible] ಸಾಹಿತ್ಯಾಚಾರ್ಯ **ಮಹೋಪಾಧ್ಯಾಯ** ಪಂಡಿತ ಶ್ರೀ ಗೌರೀನಾಥಪಾಠಕರವರ ಅಧ್ಯಕ್ಷತೆಯಲ್ಲಿ ವೀರಶೈವ ವಿದ್ವತ್ಸಂಘದ ಸಭೆಯು ನಡೆಯಿತು ಮೊದಲು ಜಗದಾಚಾರ್ಯರ ಸ್ತವನವಾದ ಬಳಿಕ ಸೆಕ್ರೆಟರಿಯವರ ಸೂಚನೆಯ ಮೇರೆಗೆ ಶ್ರೀ ವಾಗೀಶ ಶಿವಾಚಾರ್ಯರು ಹಿಂದೀಭಾಷೆಯಲ್ಲಿ " ಕಾಶೀ ವೀರಶೈವ ವಿದ್ವತ್ಸಂಘದ **ಪರಿಚಯು** " ವನ್ನು **ಮಾಡಿಕೊಟ್ಟರು** ಅನಂತರ ಶ್ರೀ ಮಹಿಸಾಳ ಪಟ್ಟದಸ್ವಾಮಿಗಳವರು **" ವೀರಶೈವಮತ "** ವೆಂಬ ವಿಷಯವನ್ನು ಸಂಸ್ಕೃತದಿಂದ ಹೇಳಿದರು **ಆಮೇಲೆ ಸಭಾಧ್ಯಕ್ಷರು " ಧರ್ಮರಕ್ಷಾ "** ಎಂಬ ವಿಷಯವನ್ನೆತ್ತಿಕೊಂಡು ಹಿಂದೀಭಾಷೆಯಲ್ಲಿ ೧ ಘಂಟೆಯವರೆಗೂ **ಅಸ್ಖಲಿತ**ವಾಗಿ ಭಾಷಣವನ್ನು ಮಾಡಿದರು ಇವರ **ಭಾಷಣ**ದಿಂದ ಸಂತುಷ್ಟರಾದ ಸಭಿಕರು ಮಧ್ಯಮಧ್ಯದಲ್ಲಿ ಆಚಾರ್ಯರ ಜಯಘೋಷವನ್ನು ಮಾಡುತ್ತಿದ್ದರು ಅಧ್ಯಕ್ಷರ ಭಾಷಣವು ಮುಗಿದ ಬಳಿಕ ಸದರಿ ಪಂಡಿತವರ್ಯರಿಗೆ ಕಾಶೀ ವೀರಶೈವ ವಿದ್ವತ್ಸಂಘದಿಂದ ಸನ್ಮಾನವು ಸಂಘದ ಸಕ್ರೆಟರಿಯವರಿಂದ ಮಾಡಲ್ಪಟ್ಟಿತು ಬಳಿಕ ಆಚಾರ್ಯರ ಮಂಗಲಸ್ತೋತ್ರಗೀತೆಯು ನಡೆದು ಸಭೆಯು ವಿಸರ್ಜಿಸಲ್ಪಟ್ಟಿತು

ತಾ|| ೩೧೧೩೬ ನೇ ಮಂಗಳವಾರ ಕಾಶೀ ಸುಪ್ರಸಿದ್ಧ ಪಂಡಿತರಾದ **ನ್ಯಾಯಾಚಾರ್ಯ, ತರ್ಕತೀರ್ಥ, ಪಂಡಿತ ಶ್ರೀ ವಾಮಾಚರಣಭಟ್ಟಾಚಾರ್ಯರವರು** ಹಾಗೂ **ಸಾಹಿತ್ಯಾಚಾರ್ಯರೂ, ಕಾವ್ಯತೀರ್ಥಪದವೀಧರರೂ, ಟೀಕಮಣಿ ಸಂಸ್ಕೃತಕಾಲೇಜ ಪ್ರಿನ್ಸಿಪಾಲರೂ ಆದ ಶ್ರೀ ಪಂಡಿತ ತಾರಾಚರಣಭಟ್ಟಾಚಾರ್ಯರವರು** ಆಗಮಿಸಿದ್ದರು **ಪಂಡಿತ** ವಾಮಾಚರಣ ಭಟ್ಟಾಚಾರ್ಯರವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು ಅಂದು **ಶ್ರೀ ವೃಷಭಲಿಂಗ** ಶಿವಾಚಾರ್ಯರು ಬಿಚ್ಚಾಲಿ ಇವರು " **ವೀರಶೈವ** ಮತಾಚಾರ " ವೆಂಬ ವಿಷಯವನ್ನು ಸಂಸ್ಕೃತದಿಂದ ಹೇಳಿದರು ಬಳಿಕ ಅಧ್ಯಕ್ಷ ಪದವೀಧರರಾದ ಪಂ|| ವಾಮಾಚರಣಭಟ್ಟಾಚಾರ್ಯರು **" ಹಿಂದೂಮತತತ್ವ "** ವೆಂಬ ವಿಷಯದಮೇಲೆಯೂ **ಪಂಡಿತ** ಶ್ರೀ ತಾರಾಚರಣಭಟ್ಟಾಚಾರ್ಯರು **" ಸನಾತನಧರ್ಮ "** ವೆಂಬ ವಿಷಯದಮೇಲೆಯೂ ಅಸ್ಖಲಿತವಾದ ಭಾಷಣಗಳನ್ನು ಮಾಡಿ ಸಭಿಕರೆಲ್ಲರಿಗೂ ಆನಂದವನ್ನುಂಟುಮಾಡಿದರು ಆಮೇಲೆ ಪಂಡಿತದ್ವಯರಿಗೂ ಸಕ್ರೆಟರಿಯವರು ವೀರಶೈವ ವಿದ್ವತ್ಸಂಘದ ವತಿಯಿಂದ ಸನ್ಮಾನವನ್ನು ಮಾಡಿದರು ಮಂಗಲಾನಂತರ ಸಭೆಯು ವಿಸರ್ಜಿಸಲ್ಪಟ್ಟಿತು

ತಾ|| ೪೧೧೩೬ ನೆಯ ಬುಧವಾರ ಕಾಶಿಯ ಸುಪ್ರಸಿದ್ಧ ವಿದ್ವಾಂಸರೂ ಹಿಂದೂಕಾಲೇಜಿನ ಪ್ರಧಾನ ಸಾಹಿತ್ಯಾಧ್ಯಾಪಕರೂ ' ಸುಪ್ರಭಾತ ' ಸಂಸ್ಕೃತ ಪತ್ರಿಕೆಯ ಸಂಪಾದಕರೂ ಆದ **ಪಂಡಿತ ಕೇದಾರನಾಥಶರ್ಮರವರ** ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು ಪ್ರತಿದಿನದಂತೆ ಮೊದಲು ಆಚಾರ್ಯಸ್ತವನವೂ ಸಂಘದ ಪರಿಚಯವೂ ನಡೆದನಂತರ ಶ್ರೀ ಮಲ್ಲಿಕಾರ್ಜುನಶಿವಾಚಾರ್ಯರು **' ಲಿಂಗಧಾರಣ '** ವಿಷಯವನ್ನೂ ಶ್ರೀ ವೃಷಭಲಿಂಗಶಿವಾಚಾರ್ಯರು ' ವೀರಶೈವಮತಾಚಾರ ' ವೆಂಬ ವಿಷಯವನ್ನೂ ಸಂಸ್ಕೃತ ಭಾಷೆಯಿಂದ ಪ್ರತಿಪಾದಿಸಿದರು ಬಳಿಕ ಸಭಾಧ್ಯಕ್ಷರೊಡನೆ ಬಂದಿದ್ದ ಮಹೋಪದೇಶಕ **ಪಂ|| ಶ್ರೀ|| ಸುರೇಶ್ವರಪ್ರಸಾದಶಾಸ್ತ್ರಿಗಳು ' ಸಂಘಶಕ್ತಿ '** ಎಂಬ ವಿಷಯದಮೇಲೆ ಹಿಂದೀಭಾಷೆಯಲ್ಲಿ ಮನೋಹರವಾಗಿ ವ್ಯಾಖ್ಯಾನಮಾಡಿದರು ಅನಂತರ ಅಧ್ಯಕ್ಷ ಮಹೋದಯರು **' ಸಂಘೇಶಕ್ತಿಃ ಕಲೌಯುಗೇ '** ಎಂಬ ವಿಷಯವನ್ನೆತ್ತಿಕೊಂಡು ಬಹು ಪರಿಣಾಮಕರವಾಗಿ ಭಾಷಣಮಾಡಿ ವೈದಿಕಮತೋನ್ನತಿಯ ವಿಷಯದಲ್ಲಿ ತಮಗಿರುವ ಉತ್ಕಟೇಚ್ಛೆಯನ್ನು ವಿಶದಪಡಿಸಿದರು ಆವೇಳೆ ಅಧ್ಯಕ್ಷಮಹೋದಯರಿಗೆ ಸಂಘದವತಿಯಿಂದ ಸನ್ಮಾನವು ನಡೆಸಲ್ಪಟ್ಟು ಆಚಾರ್ಯಮಂಗಳ ಜಯಘೋಷಗಳೊಡನೆ ಸಭೆಯು ಸಮಾಪ್ತಿಗೊಂಡಿತು ತಾ|| ೫೧೩೬ ಗುರುವಾರ ಕಾಶಿಯ ಸುಪ್ರಸಿದ್ಧ ವಿದ್ವಾಂಸರಾದ **ಸಾಹಿತ್ಯಾಚಾರ್ಯ ಕಾವ್ಯತೀರ್ಥ ದರ್ಶನಕೇಸರಿ ಪಂ| ಶ್ರೀ|| ಗೋಪಾಲಶಾಸ್ತ್ರಿಗಳವರು, ಶ್ರೀ ವಿಂಧ್ಯೇಶ್ವರೀಪ್ರಸಾದಶಾಸ್ತ್ರಿಗಳವರು ಶ್ರೀವರ್ಮಾ ರಾಮದಾಸಗೌಡ ಎಂ ಎ,** ಇವರು ದಯಮಾಡಿಸಿದ್ದರು ಪಂ| ಶ್ರೀ ಗೋಪಾಲಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು ಯಥಾಪ್ರಕಾರವಾಗಿ **ಮೊದಲು** ಆಚಾರ್ಯಸ್ತವನವು **ಮುಗಿದಬಳಿಕ** ಶ್ರೀ ವಾಗೀಶಶಿವಾಚಾರ್ಯರು **ಕಾಶೀ ವೀರಶೈವವಿದ್ವತ್ಸಂಘದ** ಪರಿಚಯವನ್ನು ಹಿಂದೀಭಾಷೆಯಲ್ಲಿ **ಹೇಳಿದರು ಆಮೇಲೆ ಶ್ರೀ ಮಲ್ಲಿಕಾರ್ಜುನಶಿವಾಚಾರ್ಯರು ' ಶಿವಲಿಂಗಧಾರಣ '** ವಿಷಯವನ್ನೂ ಶ್ರೀ **ವೃಷಭಲಿಂಗಶಿವಾಚಾರ್ಯರು " ವೀರಶೈವಾ**

ಚಾರ" ವಿಷಯವನ್ನು ಮನೋಹರವಾದ ಸಂಸ್ಕೃತಭಾಷೆಯಿಂದ ಹೇಳಿದರು. ಅನಂತರ ಶ್ರೀ ವಾಗೀಶಶಿವಾಚಾರ್ಯರು **"ವೀರಶೈವಮತಸ್ಥಾಪನಾಚಾರ್ಯರು"** ಎಂಬ ವಿಷಯವನ್ನು ಹಿಂದೀಭಾಷೆಯಲ್ಲಿ ಸುಸ್ಪಷ್ಟವಾಗಿ ಹೇಳಿದರು. ಬಳಿಕ ಶ್ರೀಮಾನ್ ರಾಮದಾಸಗೌಡ ಎಂ. ಎ., ಅವರು **"ಹಿಂದುತ್ವ"** ಎಂಬ ವಿಷಯದಮೇಲೆ ೧ ಘಂಟೆಯಕಾಲ ಅಸ್ಖಲಿತವಾಗಿ ವ್ಯಾಖ್ಯಾನಮಾಡುತ್ತ ಸರ್ವರನ್ನೂ ಆನಂದಪಡಿಸಿದರು. ಆಮೇಲೆ ಪಂ॥ ಶ್ರೀ ವಿಂಧ್ಯೇಶ್ವರೀಪ್ರಸಾದಶಾಸ್ತ್ರಿಗಳವರು **"ಧರ್ಮತತ್ತ್ವ"** ವೆಂಬ ವಿಷಯದ ಮೇಲೆ ಮನೋಹರವಾದ ವ್ಯಾಖ್ಯಾನವನ್ನು ಮಾಡುತ್ತ ಶಿವಜೀವೈಕ್ಯವಾಗುವ ಬಗೆಯನ್ನು ಭವ್ಯವಾಗಿ ಬಣ್ಣಿಸಿದರು. ಅನಂತರ, ಸಭಾಧ್ಯಕ್ಷರಾದ ಪಂ॥ ಶ್ರೀ ಗೋಪಾಲಶಾಸ್ತ್ರಿಗಳವರು **ಸರ್ವಾದ್ವೈತಂ** ಎಂಬ ವಿಷಯವನ್ನೆತ್ತಿಕೊಂಡು ವೇದಾಂತತತ್ತ್ವವನ್ನೆಲ್ಲ ಬಿಚ್ಚಿತೋರಿಸಿ ಶಕ್ತಿವಿಶಿಷ್ಟಾದ್ವೈತ, ಭೇದಾಭೇದ, ದ್ವೈತಾದ್ವೈತಮತದ ರಹಸ್ಯವೆಲ್ಲವನ್ನೂ ಅತ್ಯಂತ ಸುಲಭವಾದ ಸರಣಿಯಿಂದ ಬೋಧಿಸುತ್ತ ವೀರಶೈವಮತಸ್ಥಾಪಕರಾದ ಪಂಚಾಚಾರ್ಯರ ಸಿದ್ಧಾಂತದ ಸಾರವೆಲ್ಲವನ್ನೂ ಸಂಗ್ರಹರೂಪವಾಗಿ ಅಸ್ಖಲಿತವಾಣಿಯಿಂದ ಹಿಂದೀಭಾಷೆಯಲ್ಲಿ ಭಾಷಣಮಾಡಿದರು. ಇವರ ವ್ಯಾಖ್ಯಾನವನ್ನು ಕೇಳುತ್ತಿದ್ದ ಸಭಿಕರೆಲ್ಲರೂ ಆಗಾಗಲೇ ತಮ್ಮ ಆನಂದೋದ್ಗಾರವನ್ನು ಕರತಾಡನಯ ಮೂಲಕವಾಗಿಯೂ, ಆಚಾರ್ಯರ ಜಯಘೋಷಮೂಲಕವಾಗಿಯೂ ಪ್ರಕಟಮಾಡುತ್ತಿದ್ದರು. ಸಭಾಧ್ಯಕ್ಷರ ಭಾಷಣವು ಮುಗಿದಬಳಿಕ ಸಂಘದ ಸೆಕ್ರೆಟರಿಗಳು ವಿದ್ವತ್ಸಂಘದ ವತಿಯಿಂದ ಈ ಪರೂರುಜನ ವಿದ್ವಾಂಸರಿಗೂ ಸನ್ಮಾನವನ್ನು ಮಾಡಿ ಅವರೆಲ್ಲರ ಆಭಾರವನ್ನು ಮನ್ನಿಸಿದರು. ಈ ನಾಲ್ಕು ದಿವಸಗಳಲ್ಲಿ ಅಧ್ಯಕ್ಷಪದವಿಯನ್ನಲಂಕರಿಸಿದ್ದ ವಿದ್ವಾಂಸರೂ ಅವರೊಡನೆ ಬಂದಿದ್ದ ಇನ್ನಿತರ ವಿದ್ವಾಂಸರೂ ಸಹ ಕಾಶೀ ವೀರಶೈವವಿದ್ವತ್ಸಂಘದ ಸಮ್ಮತಿ ಪುಸ್ತಕದಲ್ಲಿ ತಮ್ಮ ತಮ್ಮ ಯೋಗ್ಯವಾದ ಅಭಿಪ್ರಾಯಗಳನ್ನು ಬರೆದಿದ್ದಾರೆ.

ತಾ॥ ೭-೩-೩೬ ಶುಕ್ರವಾರ ವಿಶೇಷೋತ್ಸಾಹಪೂರ್ವಕವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿಯು ನಡೆಸಲ್ಪಟ್ಟಿತು. ಆ ದಿನ ಲಿಂಗೋದ್ಭವ ರೇಣುಕವಿಗ್ರಹಕ್ಕೆ ವಿಶೇಷ ಪೂಜೆಯೂ ಶ್ರೀ ಸೋಮನಾಥಮಹಾಲಿಂಗಕ್ಕೆ ರುದ್ರಾಭಿಷೇಕಾದಿಗಳೂ ಜರುಗಿ ಸಾಯಂಕಾಲ ೮ ಘಂಟೆಯಿಂದ ೧೦॥ ಘಂಟೆಯವರೆಗೂ ಪಂಚಾಚಾರ್ಯರ ಭಜನೆಯೂ ಮಂಗಳಾರತಿಯೂ ನಡೆದವು. ಗುರುಸೇವೆಯಲ್ಲಿ ತತ್ಪರರಾದ ಸರ್ವರಿಗೂ ಪ್ರಸಾದವು ಹಂಚಲ್ಪಟ್ಟು ಕಾರ್ಯವು ಸಾಂಗವಾಗಿ ನೆರವೇರಿಸಲ್ಪಟ್ಟಿತು. ಈ ಸಮಯದಲ್ಲಿ ವೇ॥ ಪಂ॥ ಹೊಳಗುಂದಿ ಹಿರೇಮಠದ ಗುರುಶಾಂತಶಾಸ್ತ್ರಿಗಳು ಶ್ರೀ ರೇಣುಕಾಚಾರ್ಯರ ಪ್ರೀತ್ಯರ್ಥವಾಗಿ ಮಹಾಗಣಾರಾಧನೆಯನ್ನು ಮಾಡಿಸಿದ್ದರು. ಶ್ರೀ ಜಗದಾಚಾರ್ಯರ ಕೃಪೆಯಿಂದ ದಿನೇದಿನೇ ನಮ್ಮ ಕಾಶೀ ವೀರಶೈವ ವಿದ್ವತ್ಸಂಘವು ಅಭಿವೃದ್ಧಿ ಹೊಂದಲೆಂದು ಬಯಸುವ

ಸೆಕ್ರೆಟರಿ,
(ಕಾಶೀ ವೀರಶೈವ ವಿದ್ವತ್ಸಂಘ)

ಹುಬ್ಬಳ್ಳಿ

ಹುಬ್ಬಳ್ಳಿಯಲ್ಲಿ ತಾರೀಖು ೭-೩-೧೯೩೬ ನೇ ಶುಕ್ರವಾರ ದಿವಸ ಭೂಸಪೇಟೆ ಹನ್ನೆರಡುಮಠದಲ್ಲಿ ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವು ಬಹು ವಿಜೃಂಭಣೆಯಿಂದ ಜರುಗಿತು. ಆ ದಿನ ಪ್ರಾತಃಕಾಲದಲ್ಲಿ ಶ್ರೀ ರೇಣುಕರ ಸುವರ್ಣಮಯ ವಿಗ್ರಹಕ್ಕೆ ರುದ್ರಾಭಿಷೇಕವಾದನಂತರ ಮಧ್ಯಾಹ್ನ ನಾಲ್ಕು ಘಂಟೆಗೆ ಸುಪ್ರಸಿದ್ಧ ಕೀರ್ತನಕಾರರಾದ ಸದ್ಯೋಜಾತಶಾಸ್ತ್ರಿಗಳ ಬಹುಮನೋಹರವಾದ ಕೀರ್ತನವಾಯಿತು. ಆ ಮೇಲೆ ಸಾಯಂಕಾಲ ಏಳು ಘಂಟೆಗೆ ಹನ್ನೆರಡುಮಠದಿಂದ ಪಲ್ಲಕ್ಕಿ ಮಹೋತ್ಸವವು ಸಾಗಿತು. ಉತ್ಸವದಲ್ಲಿ ಶ್ರೀ॥ ಷ॥ ಬ್ರ॥ ಚರಮೂರ್ತಿ-

ಯೂರೋಪಿನಲ್ಲಿ ಭಯಂಕರ ಪರಿಸ್ಥಿತಿ

ಲೋಕಾರ್ನೊ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ಹಿಟ್ಲರವರು ರೈನ್‌ಲ್ಯಾಂಡ್ ಪ್ರದೇಶವನ್ನು ಸೈನ್ಯಗಳಿಂದ ತುಂಬುತ್ತಿರುವುದನ್ನು ನೋಡಿ ಇಡೀ ಯೂರೋಪುಖಂಡವೇ ತಲ್ಲಣಿಸಹೋಗಿದೆ. ರೈನ್‌ಲ್ಯಾಂಡಿನ ಆಕ್ರಮಣವು 7 ನೆಯ ತಾರೀಖಿನ ಪ್ರಾತಃಕಾಲ ೬ ಘಂಟೆಗೆ ಪ್ರಾರಂಭವಾಯಿತು. ಇದರಿಂದ ಅಲ್ಲಿಯ ಜರ್ಮನ್ ಪ್ರಜೆಗಳಿಗೆಲ್ಲಾ ಪರಮಾನಂದವಾಗಿದೆ.

ರೈನ್ ನದೀಪ್ರದೇಶದಿಂದ ಫ್ರೆಂಚರು ತಮ್ಮ ಸೈನ್ಯಗಳನ್ನು ತೆಗೆಯುವುದಕ್ಕೆ ಒಪ್ಪಿದರೆ ತಾನೂ ಒಪ್ಪುವುದಾಗಿ ಹಿಟ್ಲರನು ಹೇಳುತ್ತಾನೆ. ಆದರೆ ಹಾಗೆಮಾಡಲು ಸಾಧ್ಯವಿಲ್ಲವೆಂದು ಫ್ರೆಂಚರು ಹೇಳುತ್ತಾರೆ. ಫ್ರೆಂಚರು ಇದಕ್ಕೆ ಒಪ್ಪುವುದರಿಂದ ಬಹು ಪೆಟ್ಟು ತಿಂದು ಅನೇಕ ಕೋಟೆಗಳನ್ನು ನೆಲಸಮಮಾಡಬೇಕಾಗುತ್ತದೆ. ಫ್ರೆಂಚರು ರಜದ ಮೇಲೆ ಹೋಗಿರುವ ಎಲ್ಲ ಸೈನಿಕರನ್ನೂ ತತ್‌ಕ್ಷಣವೇ ಹಿಂದಕ್ಕೆ ಕರೆಸುವಂತೆ ಸಿದ್ಧರಿಸಿ ಗಡಿನಾಡಿನ ಕೋಟೆಗಳನ್ನೆಲ್ಲಾ ಬಲಪಡಿಸಲು ನಿಶ್ಚಯಿಸಿರುತ್ತಾರೆ.

ಜರ್ಮನಿಯೊಡನೆ ಸಂಧಾನ ನಡೆಸಲು ಫ್ರಾನ್ಸು ಸಿದ್ಧವಾಗಿದೆಯೆಂದೂ ಆದರೆ ಮೊದಲು ಜರ್ಮನಿಯು ತನ್ನ ಸೈನ್ಯಗಳನ್ನೆಲ್ಲಾ ರೈನ್‌ಲ್ಯಾಂಡಿನಿಂದ ಹಿಂದಕ್ಕೆ ಕರೆಸಬೇಕೆಂದೂ ಮತ್ತು ಯಾವ ಒಪ್ಪಂದವಾದರೂ ಲೀಗಿನ ಮುಖಾಂತರವಾಗಬೇಕೆಂದೂ ಫ್ರೆಂಚರು ಹೇಳುತ್ತಿದ್ದಾರೆ.

ಜರ್ಮನಿಯವರು ಸೈನ್ಯಗಳನ್ನು ಹಿಂದಕ್ಕೆ ಕರೆಸಲು ಸರ್ವಥಾ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಇಲ್ಲಿಯವರೆಗೆ ಸುಮಾರು 10 ಸಾವಿರ ಸೈನ್ಯವು ರೈನ್‌ಲ್ಯಾಂಡನ್ನು ಪ್ರವೇಶಿಸಿದೆ.

ಬ್ರಿಟಿಷ್ ವಿದೇಶ ವ್ಯವಹಾರ ಸಚಿವರಾದ ಶ್ರೀ ಆಂಥೋನಿ ಈಡನ್ನರು ಜರ್ಮನರ ರೈನ್‌ಲ್ಯಾಂಡ್ ಆಕ್ರಮಣವನ್ನು ಕುರಿತು ಜರ್ಮನರು ಮಾಡಿರುವುದೇನೋ ತಪ್ಪು! ಅವರು ಲೋಕಾರ್ನೊ ಒಪ್ಪಂದದ ನೀತಿಯನ್ನು ಮೀರಿ ನಡೆದಂತಾಯಿತು. ಆದರೆ ಈ ಆಕ್ರಮಣವು ಯುದ್ಧದ ಯೋಜನೆ ಇಲ್ಲವೆಂಬುದಕ್ಕೆ ಸಂತೋಷಿಸುತ್ತೇನೆ. ಹಾಗೆ ಜರ್ಮನಿಯು ಫ್ರಾನ್ಸಿನ ಮೇಲೆ ಗಲಿ ಬೆಲ್ಜಿಯಂನ ಮೇಲಾಗಲಿ ಬೀಳುವುದಾದರೆ ಬ್ರಿಟನ್ನು ಸಹಾಯಮಾಡಲು ಸಿದ್ಧವಾಗಿದೆ ಎಂದು ತಿಳಿಸಿದರು.

1 ನೆಯ ತಾರೀಖಿನದಿವಸ ಲೋಕಾರ್ನೊ ಒಪ್ಪಂದಕ್ಕೆ ರುಜುಮಾಡಿರುವ ದೇಶಗಳ ಪ್ರತಿನಿಧಿಗಳೆಲ್ಲ ಲಂಡನ್ ವಿದೇಶವ್ಯವಹಾರ ಇಲಾಖೆಯಲ್ಲಿ ಸಭೆ ಸೇರಿದ್ದರು. ಆದರೆ ಯಾವ ತೀರ್ಮಾನವೂ ಆಗಲಿಲ್ಲ. ಜರ್ಮನಿಯು ಒಪ್ಪಂದದ 12 13ನೆಯ ವಿಧಿಗಳನ್ನೇ ಮೀರಿದಂತಾಯಿತೆಂದು ಎಲ್ಲರೂ ಏಕವಾಕ್ಯತೆಯಿಂದ ಸಿದ್ಧಪಡಿಸಿದರು.

ಜರ್ಮನಿಯು ತನಗೆ ಇತರರಿಂದಾಗಿರುವ ತೊಂದರೆಗಳನ್ನು ಸೂಚಿಸಿ ದೊಡ್ಡ ಮೆಮೊರಂಡಮನ್ನು ಹೊರಡಿಸಿ ಅದರಲ್ಲಿ ಮುಖ್ಯವಾಗಿ ಫ್ರಾನ್ಸಿನ ನೀತಿಯನ್ನು ತೀವ್ರವಾಗಿ ಖಂಡಿಸಿದೆ.

ಫ್ರಾನ್ಸ್ ದೇಶವು ಪ್ರಪಂಚದ ಇತರ ರಾಜ್ಯಗಳೊಡನೆ ಒಪ್ಪಂದಗಳನ್ನು ಮಾಡಿಕೊಂಡು ತನ್ನ ಕ್ಷೇಮವನ್ನು ಮಾತ್ರ ನೋಡಿಕೊಂಡಿದೆ. ಈಗ ರಷ್ಯದ ಸಂಗಡ ಹೊಸದಾಗಿ ಸೈನ್ಯಸಂಬಂಧವಾದ ಕರಾರನ್ನು ಮಾಡಿಕೊಂಡಿದೆ. ಇಷ್ಟಾದರೂ ಜರ್ಮನಿಯು ಗೌರವಯುತವಾದ ಶಾಂತಿಯಿಂದ ಕೈಕಟ್ಟಿ ಕುಳಿತಿರಬೇಕೆಂದು ಅವು ನಿರೀಕ್ಷಿಸುತ್ತಿದೆ.

ನಿಜವಾಗಿ ಶಾಂತಿಯನ್ನು ನೆಲೆಗೊಳಿಸಲು ಜರ್ಮನಿಯು ಏನುಮಾಡಬೇಕಾದರೂ ಸಿದ್ಧವಾಗಿದೆ. ನಾವೇನೋ ಲೋಕಾರ್ನೊ ಒಪ್ಪಂದವನ್ನು ಮುರಿದಿರುವುದು ನಿಜ. ಆದರೆ ಅದಕ್ಕೆ ಕಾರಣವೇನೆಂಬುದನ್ನು ವಿಚಾರಿಸಬೇಕಾಗಿದೆ. ಹಾಗೆಮಾಡಲು ಇತರರು ಸಿದ್ಧರಿಲ್ಲದಿದ್ದರೆ, ಶಾಂತಿಪ್ರಯತ್ನಗಳನ್ನೆಲ್ಲ ಬದಿಗೊತ್ತಿ ಜರ್ಮನಿಯು ಯಾರ ತಂಟೆಯೂ ಬೇಡವೆಂದು ಪ್ರತ್ಯೇಕವಾಗಿ ಜೀವಿಸಬೇಕಾದೀತು. ಜನಾಂಗಗಳ ಗುಂಪಿನಲ್ಲಿ ಪಕ್ಷಪಾತಕ್ಕೊಳಗಾಗಿ, ಜನಾಂಗವೆಂಬ ಹೆಸರಿನಿಂದ ಬಾಳುವುದಕ್ಕೆ ಬದಲು, ಗೌರವದಿಂದ ಪ್ರತ್ಯೇಕವಾಗಿರುವುದೇ ಸರಿಯೆಂದು ಜರ್ಮನಿಯು ತಿಳಿಸಿರುತ್ತದೆ.

ಬ್ರಿಟಿಷ್ ಸರ್ಕಾರದವರು ಜರ್ಮನಿಗೆ ಈ ಸಮಯದಲ್ಲಿ ನಮ್ಮ ಸಲಹೆಯಂತೆ ರೈನ್‌ಲ್ಯಾಂಡ್‌ಪ್ರಾಂತದಲ್ಲಿ ಜರ್ಮನಿಯ ಸೈನಿಕರ ಸಂಖ್ಯೆಯನ್ನು ಕಡಮೆಮಾಡಿ ಸೈನ್ಯಬಲವನ್ನು ಹೆಚ್ಚಿಸುವುದಿಲ್ಲವೆಂಬುದಾಗಿ ವಚನ ಕೊಡಬೇಕೆಂದೂ ಸಂಧಾನದ ಮಾತುಕತೆಗಳನ್ನು ನಡೆಸುವಷ್ಟು ಕಾಲ ಯಾವ ಕಾರ್ಯಕ್ರಮಗಳನ್ನೂ ಕೈಗೊಳ್ಳಬೇಡಿರೆಂದೂ ತಿಳಿಸಿದ್ದರು. ಅದಕ್ಕೆ ಉತ್ತರವಾಗಿ ಜರ್ಮನಿ ಸರ್ಕಾರದವರು ರೈನ್‌ಲ್ಯಾಂಡ್ ಮೇಲೆ ತಮ್ಮ ಅಧಿಕಾರವನ್ನು ತಾತ್ಕಾಲಿಕವಾಗಿ ಕಡಮೆ ಮಾಡುವ ಅಥವಾ ಮುಂದೆ ಹಲ್ಲುವ ಯಾವ ಮಾತುಕತೆಗಳನ್ನೂ ಜರ್ಮನಿಯು ಭಾಗವಹಿಸುವುದಿಲ್ಲವೆಂದು ತಿಳುಹಿಸಿದೆ.

ಹಿಟ್ಲರನ ವೀರಭಾಷಣ

ಕ್ರಿಶ್ಚಿಯನ್ ಲ್ಯಾಂಡಿನಲ್ಲಿ ಹಿಟ್ಲರನ ಶಾಂತಿ ಸಲಹೆಗಳನ್ನು ಕೇಳಲು ಬೇರೆ ಬೇರೆ ಪ್ರಾಂತ್ಯಗಳಿಂದ ಜನರು ೭೦ ಸ್ಪೆಷಲ್ ಟ್ರೈನುಗಳಲ್ಲಿ ಬಂದು ಸೇರಿದ್ದರು.

ಕಾರ್ಲ್ಸ್‌ರೂಹಿಯಲ್ಲಿ ೭೦ ಸಾವಿರ ಜನರು ಹಿಟ್ಲರನಿಗೆ ಅಭೂತಪೂರ್ವವಾದ ಸುಸ್ವಾಗತವನ್ನು ಕೋರಿದರು. ಹರ್ ಹಿಟ್ಲರನು ತನ್ನ ಭಾಷಣದಲ್ಲಿ ಜರ್ಮನಿಯೂ, ಫ್ರಾನ್ಸೂ ಸಮಾನಸ್ಕಂಧರಾಗಿ ಬದುಕಬೇಕೆಂದೂ, ಹಾಗಿದ್ದರೇನೇ ಅನ್ಯೋನ್ಯ ಗೌರವವುಂಟಾಗುವುದೆಂದೂ, ಜರ್ಮನಿಗೆ ಫ್ರಾನ್ಸಿನ ಮೇಲಾಗಲೀ ಆವಾ ಪೋಲೆಂಡಿನ ಮೇಲಾಗಲೀ ಆಕ್ರಮಣಮಾಡಬೇಕೆಂಬ ಉದ್ದೇಶವಿರುವುದಿಲ್ಲವೆಂದೂ ಆದರೆ ಫ್ರಾನ್ಸು ರಷ್ಯರೊಂದಿಗೆ ಮಾಡಿಕೊಂಡಿರುವ ಒಪ್ಪಂದವು ಉಚಿತವಲ್ಲವೆಂದೂ, ರಷ್ಯದೇಶದ ಕಮ್ಯೂನಿಸಂ ತತ್ವದ ಪ್ರಸಾರದಿಂದ ಜರ್ಮನಿಯ ಜನರಿಗೆ ಬಹಳ ಅನುಭವವಾಗಿರುವುದೆಂದೂ, ಆದುದರಿಂದ ಫ್ರಾನ್ಸು ಮತ್ತು ರಷ್ಯದ ಒಪ್ಪಂದವನ್ನು ಸಹಿಸುವುದಕ್ಕಾಗುವುದಿಲ್ಲವೆಂದೂ ಹಿಟ್ಲರನು ತನ್ನ ಶಾಂತಿ ಸಲಹೆಗಳೇ ಅತ್ಯುತ್ತಮವಾದುವುಗಳೆಂದೂ ಕೇವಲ ಶತಮಾನದವರೆಗೆ ಜರ್ಮನಿಯು ೬೭೦ ಲಕ್ಷ ಜನಗಳುಳ್ಳದಾಗಿ ಶಾಂತಿ ಸಲಹೆಗಳನ್ನು ಕೊಡಲು ಯಾರಿಗೂ ಸಾಧ್ಯವಿಲ್ಲವೆಂದೂ, ಜನಾಂಗಗಳ ಸಹೋದರಭಾವದಲ್ಲಿ ಜರ್ಮನಿಯನ್ನು ಸರಿಸಮಾನಭಾವದಿಂದ ಸ್ವೀಕರಿಸಿಕೊಳ್ಳುವ ಕಾಲವು ಬರುವುದೆಂಬ ಆಸೆಯು ತನಗಿರುವುದೆಂದೂ ಹಿಟ್ಲರನು ತನ್ನ ಭಾಷಣದಲ್ಲಿ ಸ್ಪಷ್ಟಪಡಿಸಿದನು.

ಸ್ವೀಕಾರ

ಕಡೂರು ತಾ॥ ಬಿಸಲೆಹಳ್ಳಿ ಚಿತ್ರದುರ್ಗ ಮಠದವರಿಂದ ವಾಹೇಶ್ವರದೀಕ್ಷಾಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 5 ರೂಗಳು ತಿಪ್ಪೂರು ವೇ॥ ಎ. ಎಂ. ಬಸವಲಿಂಗಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗ ಟೌನ್ ನಿವಾಸಿಗಳಾದ ಸಾ॥ ರ॥ ರಾ॥ ಜೋಟಪ್ಪಶೆಟ್ಟರ ಪುತ್ರಿ ಷ| ರಾ| ಶೋ॥ ಬ| ಸೌ॥ ನಾಗಮ್ಮನನ್ನು ಜಯಚಾಮರಾಜಪುರದಲ್ಲಿರುವ ಮ॥ ರ॥ ಶಂಕರ ಗಣೇಶಪ್ಪನವರ ಪುತ್ರ ಚಿ| ಸ॥ ಚನ್ನಬಸಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವದಲ್ಲಿ ಪ್ರಭಾಪೋಷಣಕ್ಕಾಗಿ ವಧೂವರರಿಂದ ತೆಗೆಯಿಸಿದ 4 ರೂಗಳು ವೇ॥ ಗುಬ್ಬಿ ಶಿವಕವಿಪಂಡಿತ ಶಿವರುದ್ರಶಾಸ್ತ್ರಿಗಳದ್ವಾರಾ ತಲ್ಪಿರುತ್ತವೆ.

ತಿಪ್ಟೂರು ವೀರಶೈವರು ಶ್ರೀ ನಂದೀಶ್ವರಾಲಯದಲ್ಲಿ ಪದ್ಧತಿ ಪ್ರಕಾರ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವನ್ನು ವಿಜೃಂಭಣೆಯಿಂದ ನಡೆಯಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂಗಳು ತಿಪ್ಟೂರು ಕೋಆಪರೇಟಿವ್ ಸೊಸೈಟಿ ಅಸಿಸ್ಟೆಂಟ್ ಸೆಕ್ರೆಟರಿಗಳಾದ ಶ್ರೀಮಾನ್ ಸಿ. ಕೆ. ಕಪ್ಪಣ್ಣನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

ರಂಭಾಪುರೀ ಮಹಾಸಂಸ್ಥಾನ ಪೀಠದಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವ ಮತ್ತು ವೀರೇಶನ ರಥೋತ್ಸವ

ಪ್ರತಿವರ್ಷದ ಪದ್ಧತಿಯಂತೆ ಫಾಲ್ಗುಣ ಶು॥ ಚತುರ್ದಶಿ ಶುಕ್ರವಾರ ಪುಣ್ಯ ದಿವಸದಲ್ಲಿ ಶ್ರೀಮಜ್ಜಗದ್ಗುರು ಭಗವತ್ಪಾದ ಶ್ರೀ ರೇಣುಕಾಚಾರ್ಯರ ಜಯಂತಿ ಮತ್ತು ಪೀಠಾಧಿದೇವನಾದ ವೀರೇಶನ ರಥೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು ಈ ವರ್ಷ ಶ್ರೀ ಜಗದ್ಗುರು ಶಿವಾನಂದ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯು ದಯಮಾಡಿಸದಿದ್ದಾಗ್ಯೂ, ಈ ಮಹೋತ್ಸವಕ್ಕೆ ಮೈಸೂರು ಪ್ರಾಂತದ ಹಾಗೂ ಬ್ರಿಟಿಷ್ ಇಂಡಿಯಾ ಮತ್ತು ನೈಜಾಮ ಪ್ರಾಂತದ ನಾನಾ ಭಾಗಗಳಿಂದ ಅಸಂಖ್ಯಾತ ಪೀಠಾಭಿಮಾನಿಗಳು ಆಗಮಿಸಿದ್ದರು

ಶುಕ್ರವಾರ ಪ್ರಾತಃಕಾಲದಲ್ಲಿ ರಂಭಾಸ್ತಂಭ ತಳಿರು ತೋರಣ ರಂಗವಲ್ಲ್ಯಾದಿಗಳಿಂದ ಅಲಂಕರಿಸಲ್ಪಟ್ಟ ದೇವಾಲಯದಲ್ಲಿ ಶ್ರೀ ವೀರೇಶ್ವರನಿಗೆ ಷೋಡಶೋಪಚಾರಪೂರ್ವಕ ಮಹಾ ರುದ್ರಾಭಿಷೇಕವು ನೆರವೇರಿತು ಮಧ್ಯಾಹ್ನೋತ್ತರ ಮೂರು ಘಂಟೆಗೆ ಶ್ರೀ ವೀರೇಶನ ರಥಾರೋಹಣವ ಪಮೇಲೆ ನೆರೆದಿದ್ದ ಭಕ್ತಮಂಡಲಿಯವರು ಫಲಪುಷ್ಪಾದಿಗಳೊಡನೆ ಕಪ್ಪಕಾಣಿಕೆಯನ್ನು ಸಮರ್ಪಿಸಿದರು ತರುವಾಯ ಮಡಿಯ ರಥವ ಎಳೆಯಲ್ಪಟ್ಟಿತು ಆ ಮೇಲೆ ಸ್ವಾಮಿಯ ತೀರ್ಥ ಪ್ರಸಾದಗಳನ್ನು ಕೂಡಿದ ಭಕ್ತಮಹಾಶಯರಿಗೆಲ್ಲ ಅನ್ನಸಂತರ್ಪಣೆಯನ್ನು ನಡೆಯಿಸಲಾಯಿತು

ಅದೇ ದಿವಸ ಸಾಯಂಕಾಲ ಆರುಘಂಟೆಗೆ ಯದಾವತ್ತಾಗಿ ಮಹಾಜನಗಳ ಸಭೆಯು ಸುಪ್ರಸಿದ್ಧ ಅಲ್ದೂರು ಶ್ರೀಮಂತ ಪಟೇಲ ರಾಮಪ್ಪಗೌಡರ ಅಧ್ಯಕ್ಷತೆಯಲ್ಲಿ ಕೂಡಿತು ಸಭಾ ಕಾರ್ಯಕ್ರಮವನ್ನನುಸರಿಸಿ ಪ್ರಥಮದಲ್ಲಿ ಚರಮ್ಮ ಭಗವಾನ್ ರೇಣುಕಾಚಾರ್ಯರ ಮಂಗಲಾಚರಣಪಾದನಂತರ ಮಹಾತಪೋನಿಧಿಗಳೂ, ಜಿತೇಂದ್ರಿಯರೂ, ನಿಷ್ಪೃಹರೂ ಪರಮ ವೈರಾಗ್ಯಶೀಲರೂ, ವಿದ್ಯಾಪಕ್ಷಪಾತಿಗಳೂ, ವಿದ್ವತ್ಕುಲತಿಲಕಪ್ರಾಯರೂ ದಯಾಸಿಂಧುಗಳೂ ಲಿಂಗಾಂಗಸಾಮರಸ್ಯ ತತ್ತ್ವಜ್ಞರೂ, ಅನೇಕ ವರ್ಷಗಳಿದ್ದ ಈ ಪೀಠದ ಉದ್ಧಾರಕ್ಕಾಗಿ ದೀರ್ಘಕಾಲದವರೆಗೆ ನಿರಾಹಾರದಿಂದ ಘೋರತಪಸ್ಸನ್ನಾಚರಿಸಿದವರೂ ಪಂಚಪೀಠಗಳಿಗೆ ಪ್ರಾಣಸ್ವರೂಪರೂ ಆಗಿದ್ದ ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ಆಕಸ್ಮಿಕವಾಗಿ ಪರಂಧಾಮವನ್ನೈದಿದ ವಿಷಯದಲ್ಲಿ ತಮಗುಂಟಾದ ಅಪಾರವಾದ ವಿಷಾದವನ್ನು ವ್ಯಕ್ತಗೊಳಿಸಿದ್ದಲ್ಲದೆ ನೂತನವಾಗಿ ಪೀಠಾರೋಹಣಮಾಡಿದ ಶ್ರೀಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರಲ್ಲಿ ತಮ್ಮ ಅಸಾಧಾರಣವಾದ ಗುರುಭಕ್ತಿಯನ್ನು ಸಂತೋಷವನ್ನೂ ಪ್ರದರ್ಶಿಸಿದರು

ನಮ್ಮ ಮೈಸೂರು ದೇಶದ ಮಂತ್ರಿವರ್ಯರಾದ ಮಿರ್ಜಾ ಎಂ ಇಸ್ಮೈಲ್‌ರವರಿಗೆ ಬ್ರಿಟಿಷ್ ಸಾರ್ವಭೌಮರಿಂದ ಕೆ ಸಿ ಐ ಇ ಎಂಬ ಘನ ಪದವಿಯು ಪ್ರಾಪ್ತವಾದುದಕ್ಕೆ ಈ ಸಭೆಯು ತನ್ನ ಸಂತೋಷವನ್ನು ವ್ಯಕ್ತಗೊಳಿಸಿ ಈ ವಿಷಯವನ್ನು ದಿವಾನ್ ಸಾಹೇಬರವರಿಗೆ ತಿಳಿಯಿಸಬೇಕೆಂದು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು

ಅನಂತರ " [illegible]ಯಂತಿಯ ಮಹತ್ವವನ್ನೂ " ಶಕ್ತಿವಿಶಿಷ್ಟಾದ್ವೈತ " [illegible]ದ್ಧಾಂತಸ್ವರೂಪವನ್ನೂ ಕುರಿತು ಮಹಾ ಸಂಸ್ಥಾ[illegible] ಉದಾರಾಶ್ರಯದಿಂದಲೇ ಶ್ರೀ ಕ್ಷೇತ್ರಕಾಶೀ ವಿಶ್ವಾರಾಧ್ಯ ಗುರುಕುಲದಲ್ಲಿ ಘನವಾದ ಪಾಂಡಿತ್ಯವನ್ನು ಹೊಂದಿದ ವೇದಾಂತಾಚಾರ್ಯ, ಶಿರೋಮಣಿ ಇತ್ಯಾದಿ ಪದವೀಪ್ರತಿಷ್ಠಿತರಾದ ಬಾಣಾಪುರ ಬೃಹನ್ಮಠಾಧ್ಯಕ್ಷಪಂಡಿತ ನೀಲಕಂಠ ಶಾಸ್ತ್ರಿಗಳವರು ಸರ್ವರಿಗೂ ಸುಗಮವಾಗಿ ಬೋಧವಾಗುವಂತೆ ಸುಮಾರು ಒಂದು ಘಂಟೆಯವರೆಗೆ ಗಂಭೀರವಾಗಿ ಭಾಷಣಮಾಡಿದರು ಬೇಲೂರು ತಾಲೂಕು ಚಿಕ್ಕಮೇದೂರು ಶ್ರೀಮಂತ ಪುಟ್ಟೇಗೌಡರ ಮಕ್ಕಳಾದ ರಾಮೇಗೌಡರು ರಾಜಭಕ್ತಿ " ಗುರುಭಕ್ತಿ "ಯ ಪರವಾಗಿ ಸಭಿಕರ ಮನಸ್ಸಿನಮೇಲೆ ಚನ್ನಾಗಿ ಪರಿಣಮಿಸುವಂತೆ ಸರಸವಾಗಿ ಮಾತನಾಡಿದರು

ಅತಿ ಪ್ರಖ್ಯಾತರಾದ ಅಲ್ದೂರು ಕಾಫಿಪ್ಲಾಂಟರು ಶ್ರೀಮಂತ ಪುಟ್ಟಣ್ಣಶೆಟ್ಟರ ಸುಪುತ್ರರಾದ ಡಿ॥ ಬೋ॥ ಮಂಜುನಾಥ ಬಸಪ್ಪಶೆಟ್ಟರು " ಜಗದ್ಗುರು ಶ್ರೀ ರೇಣುಕರ ಜಯಂತಿ " ಯ ದಿವಸವನ್ನು ಹಿಂದೂ ರಜಾ ದಿವಸವನ್ನಾಗಿ ನಮ್ಮ ಮೈಸೂರು ಘನ ಸರ್ಕಾರದವರು ಮುಂಜೂರು ಮಾಡಬೇಕೆಂಬ ಠರಾವನ್ನು ಸಭೆಯ ಮುಂದಿಟ್ಟು ಇದೇ ನಿರ್ಣಯವು ಈ ಬಂದ ' ಪ್ರಜಾಪ್ರತಿನಿಧಿ ಸಭೆ' ಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿದ್ದಾಗ್ಯೂ ಈ ವಿಚಾರದಲ್ಲಿ ಘನ ಸರ್ಕಾರದವರು ಇದುವರೆಗೂ ತಮ್ಮ ಒಪ್ಪಿಗೆಯನ್ನು ಪ್ರಕಟಿಸದೆ ತಟಸ್ಥರಾಗಿರುವುದರಿಂದ ವೀರಶೈವ ಸಮಾಜಕ್ಕೆ ಅಸಮಾಧಾನವುಂಟಾಗಿರುವ ಪ್ರಯುಕ್ತ ಶ್ರೀ ರೇಣುಕ ಜಯಂತಿಯನ್ನಾಚರಿಸಲು ರಜಾ ದಿವಸವನ್ನು ಮುಂಜೂರು ಮಾಡಿಸಿಕೊಡಬೇಕಾಗಿ ಘನ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕೆಂದು ಹೇಳಿದರು

ಹಾರ್ನಹಳ್ಳಿ ವೇ॥ ರಾ॥ ಶ್ರೀ॥ ಗುರುಶಾಂತಪ್ಪನವರು ಇದೇ ವಿಷಯವನ್ನು ಪುಷ್ಟೀಕರಿಸಿ ಘನ ಸರ್ಕಾರದವರ ಈ ರೀತಿಯಾದ ಔದಾಸೀನ್ಯಕ್ಕೆ ನಮ್ಮಲ್ಲಿರುವ ಐಕಮತ್ಯವೇ ಕಾರಣವೆಂದು ಒಳ್ಳೆ ಆವೇಶದಿಂದ ಒಂದು ಗಂಟೆಯವರೆಗೆ ರಸವತ್ತಾಗಿ ಮಾತನಾಡಿದನಂತರ ಈ ಠರಾವು ಸರ್ವಾನುಮತದಿಂದ ಪಾಸಾಗಿ, ಅಧ್ಯಕ್ಷರು ಈ ನಿರ್ಣಯವನ್ನು ಘನ ಸರ್ಕಾರದವರ ಅವಲೋಕನದ ಬಗ್ಗೆ ಕಳುಹಿಸಿಕೊಡಬೇಕೆಂದು ತೀರ್ಮಾನಿಸಲಾಯಿತು

ಅಧ್ಯಕ್ಷರ ಉಪಸಂಹಾರ ಭಾಷಣವಾದ ಮೇಲೆ ಜಗವತ್ಪಾದ ಶ್ರೀ ರೇಣುಕಾಚಾರ್ಯರ ಮಂಗಳಾಚರಣಪೂರ್ವಕ ಜಯಘೋಷದೊಡನೆಯೂ ಮೈಸೂರ ಶ್ರೀಮನ್ ಮಹಾರಾಜ ಪ್ರಭುಗಳವರ ಶ್ರೇಯಸ್ಕಾಮನೆಯೊಡನೆಯೂ ಸಭೆಯು ವಿಸರ್ಜಿಸಲ್ಪಟ್ಟಿತು

ಪ್ರತ್ಯಕ್ಷದರ್ಶಿ

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತೀ ನಿಮಿತ್ತವಾಗಿ ಕಾಶೀ ವೀರಶೈವ ವಿದ್ವತ್ಸಂಘದ ವಿಶೇಷಾಧಿವೇಶನವೂ, ಕಾಶೀ ಸುಪ್ರಸಿದ್ಧ ವಿದ್ವಾಂಸರ ಧಾರ್ಮಿಕವ್ಯಾಖ್ಯಾನಗಳೂ

ಶ್ರೀ ಜಗದ್ಗುರುವಿಶ್ವಾರಾಧ್ಯಸಿಂಹಾಸನಜಂಗಮವಾಡೀ ಮಠದಲ್ಲಿ ಶ್ರೀರೇಣುಕಾಚಾರ್ಯಜಯಂತೀನಿಮಿತ್ತವಾಗಿ ಕಾಶೀ ವೀರಶೈವ ವಿದ್ವತ್ಸಂಘದ ವಿಶೇಷಾಧಿವೇಶನವು ಬಹು ವಿಜೃಂಭಣೆಯಿಂದ ನಡೆಯಿತು ತಾ॥ ೨೯-೩-೩೬ನೆಯ ಸೋಮವಾರ ಸಾಯಂಕಾಲ ೭ ಘಂಟೆಯಿಂದ ೧೦ ಘಂಟೆಯವರೆಗೂ ಕಾಶಿಯ ಸುಪ್ರಸಿದ್ಧ ಪಂಡಿತರಾದ ಸಾಹಿತ್ಯಾಚಾರ್ಯ ಮಹೋಪಾಧ್ಯಾಯ ಪಂಡಿತ ಶ್ರೀ ಗೌರೀನಾಥಪಾಠಕರವರ ಅಧ್ಯಕ್ಷತೆಯಲ್ಲಿ ವೀರಶೈವ ವಿದ್ವತ್ಸಂಘದ ಸಭೆಯು ನಡೆಯಿತು ಮೊದಲು ಜಗದಾಚಾರ್ಯರ ಸ್ತವನವಾದ ಬಳಿಕ ಸೆಕ್ರೆಟರಿಯವರ ಸೂಚನೆಯ ಮೇರೆಗೆ ಶ್ರೀ ವಾಗೀಶ ಶಿವಾಚಾರ್ಯರು ಹಿಂದೀಭಾಷೆಯಲ್ಲಿ " ಕಾಶೀ ವೀರಶೈವ ವಿದ್ವತ್ಸಂಘದ ಪರಿಚಯು " ವನ್ನು ಮಾಡಿಕೊಟ್ಟರು ಅನಂತರ ಶ್ರೀ ಮಹಿಷಾಳ ಪಟ್ಟದಸ್ವಾಮಿಗಳವರು " ವೀರಶೈವಮತ " ವೆಂಬ ವಿಷಯವನ್ನು ಸಂಸ್ಕೃತದಿಂದ ಹೇಳಿದರು ಆಮೇಲೆ ಸಭಾಧ್ಯಕ್ಷರು

ಒಳದೇಶದ ವೃತ್ತಾಂತಗಳು.

ಡೆಲ್ಲಿಗೆ ಪ್ರಯಾಣಮಾಡಿದ್ದ ನಮ್ಮ ದಿವಾನ್ ಸಾಹೇಬರವರು 13 ನೆಯ ತಾರೀಖಿನ ದಿವಸ ಬೆಂಗಳೂರಿಗೆ ಆಗಮಿಸಿದರು

ಲೆಫ್ಟಿನೆಂಟ್ ಕರ್ನಲ್ ಗೋಪಾಲರಾಯರನ್ನು ಬಾಣವಿನಿಂದ ಇರಿದು ಕೊಲ್ಲಲೆತ್ನಿಸಿದ ಮುನಿವೆಂಕಟಪ್ಪ ಎಂಬವನಮೇಲೆ ಪೋಲೀಸರು 107 ನೆಯ ವಿಧಿಯ ಪ್ರಕಾರ ಚಾರ್ಜಷೀಟು ಹೂಡಿರುತ್ತಾರೆ, ವಿಚಾರಣೆಯು ಇದೇ ತಿಂಗಳು ೧೬ ನೆಯ ತಾರೀಖಿನ ದಿವಸ ಇರುವುದಾಗಿ ತಿಳಿದುಬರುತ್ತದೆ

ಇಂಗ್ಲೆಂಡ್ ಮೊದಲಾದ ಪಾಶ್ಚಾತ್ಯದೇಶಗಳಲ್ಲಿ ತಮ್ಮ ಪಿಟೀಲುವಾದನ ಸಾಮರ್ಥ್ಯವನ್ನು ಪ್ರದರ್ಶಿಸಿ ಪ್ರಸಿದ್ಧಿಪಡೆದಿರುವ ಹುಜೂರು ಸೆಕ್ರೆಟರಿ ಶ್ರೀ ತಂಬುಚೆಟ್ಟಿಯವರ ಪುತ್ರಿ ಶ್ರೀಮತಿ ಮೆಹೆರೋಮಿನಾ ತಂಬುಚೆಟ್ಟಿಯವರ ಪಿಟೀಲುವಾದನವು ಶ್ರೀಮನ್ಮಹಾರಾಜರವರ ಸಮಕ್ಷಮದಲ್ಲಿ ನಡೆಯುವುದೆಂದು ತಿಳಿದುಬಂದಿದೆ

ದಿವಾನ್ ಬಹದ್ದೂರ್ ರಾಜಸಭಾಭೂಷಣ ಸರ್ ಕೆ ಪಿ ಪುಟ್ಟಣ್ಣಶೆಟ್ಟರಿಗೆ ಮೈಸೂರು ವಿಶ್ವವಿದ್ಯಾಲಯದವರು ಇದೇ ತಿಂಗಳು ೨೧ ನೆಯ ತಾರೀಖಿನ ದಿವಸ ಜಗನ್ಮೋಹನ ಬಂಗಲೆಯಲ್ಲಿ ಎಲ್ ಎಲ್ ಡಿ ಪದವಿಯನ್ನು ಕೊಡುವವರಾಗಿದ್ದಾರೆ ಈ ಮಹಾ ಸಮಾರಂಭಕ್ಕೆ ಮಹಾಪ್ರಭುಗಳವರು ದಯಮಾಡಿಸುತ್ತಾರೆಂದು ತಿಳಿದುಬರುತ್ತದೆ

ರಾಜಧಾನಿಯ ಕುರುಡ ಮೂಕರ ಪಾಠಶಾಲೆಯ ಒಬ್ಬ ಇರುವ ಬಾಲಕನಲ್ಲಿ ರಾಮಯ್ಯನೆಂಬವನು ತನ್ನ ಕತ್ತನ್ನು ಕೊಯ್ದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದನು ಕತ್ತನ್ನು ಸುಮಾರು 1 ಅಂಗುಲ ಕೊಯ್ದುಕೊಂಡಿದ್ದನು ಅಷ್ಟರಲ್ಲಿ ಪೋಲೀಸರಿಗೆ ವರ್ತಮಾನ ತಿಳಿದುಬಂದ ಅವನನ್ನು ಆಸ್ಪತ್ರೆಗೆ ಸಾಗಿಸಿ ಆತ್ಮಹತ್ಯೆಗೆ ಕಾರಣವೇನೆಂಬುದನ್ನು ಶೋಧಿಸುತ್ತಿದ್ದಾರೆ

ಬೆಂಗಳೂರು ಚಿಕ್ಕಪೇಟೆಯಲ್ಲಿ ಪರಿಶೋಭಿಸುತ್ತಿರುವ ಶ್ರೀ ಮಹಂತಮಠದಲ್ಲಿ ಪ್ರತಿ ವರ್ಷ ಪದ್ಧತಿಯಂತೆ ಈ ವರ್ಷವು ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವು ಅಸಾಧಾರಣ ವೈಭವದಿಂದ ನೆರವೇರಿತು ಈ ವರ್ಷ ಅನೇಕ ಜನ ಸುಪ್ರಸಿದ್ಧ ಪುರುಷರ ವ್ಯಾಖ್ಯಾನಗಳು ನಡೆದವು ಇದಕ್ಕೆಲ್ಲಾ ಆ ಮಠಾಧ್ಯಕ್ಷರ ಪ್ರತಿಭಾಶಕ್ತಿಯೂ, ಬೆಂಗಳೂರು ನಗರ ನಿವಾಸಿಗಳಾದ ಗುರುಭಕ್ತ ಶಿಖಾಮಣಿಗಳ ಕರ್ತವ್ಯದಕ್ಷತೆಯೂ ಮೂಲಕಾರಣಗಳಾಗಿವೆಯೆಂದು ಆತ್ಮಾನಂದದಿಂದ ಹೇಳಬಹುದಾಗಿದೆ ಇನ್ನು ಮುಂದೆ ಪ್ರತಿವರ್ಷವೂ ಜಯಂತೀಮಹೋತ್ಸವವು ಈ ಮಠದಲ್ಲಿ ಇತೋಪ್ಯತಿಶಯ ವೈಭವದಿಂದ ನಡೆಯಲೆಂದು ಹಾರೈಸುತ್ತೇವೆ

ಗುಂಡ್ಲುಪೇಟೆಯ ಗೋಪಾಲರಾವ್ ಉರಫ್ ರಾಮನಾಥನೆಂಬಾತನು ಮೈಸೂರಿನ ಮ॥ ಅಬ್ದುಲ್ ವಹಾಬ್ ಎಂಬವರ ಅಂಗಡಿಯಲ್ಲಿ 1-7 35ನೇ ದಿನ ಬೈಸಿಕಲ್ ಬಾಡಿಗೆಗೆ ಪಡೆದು, ಹೋದವನು ಹಿಂತಿರುಗಿ ಬರಲೇ ಇಲ್ಲ ಮ॥ ವಹಾಬ್‌ರವರು ಪೋಲೀಸಿಗೆ ದೂರು ಕೊಟ್ಟರು ಪೋಲೀಸರು ರಾಮನಾಥನನ್ನು ಬಂಧಿಸಿ ತನಿಖೆ ನಡೆಯಿಸಿದಾಗ ಬೈಸಿಕಲ್ಲನ್ನು ಕಡಕೊಳದ ಶ್ರೀ ಕೆ ಎಚ್ ಕೃಷ್ಣಪ್ಪ ಎಂಬವರಿಗೆ ಮಾರಿರುವುದು ಹೊರಬಿತ್ತು ಪೋಲೀಸರು ರಾಮನಾಥನನ್ನು ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ನಿಲ್ಲಿಸಿದರು ವಿಚಾರಣೆಯಲ್ಲಿ ಆತನ ತಪ್ಪಿತವು ಹೊರಬಿದ್ದ ಕಾರಣ ಮ್ಯಾಜಿಸ್ಟ್ರೇಟರು ರಾಮನಾಥನಿಗೆ ಮೂರು ತಿಂಗಳು ಕಠಿನ ಶಿಕ್ಷೆಯನ್ನೂ ಮತ್ತು 15 ರೂಗಳ ದಂಡವನ್ನೂ ವಿಧಿಸಿದ್ದಾರೆ ದಂಡಕೊಡದೆ ಹೋದರೆ ಮತ್ತೆ 15 ದಿನಗಳು ಕಠಿಣಶಿಕ್ಷೆಯನ್ನು ಅನುಭವಿಸಬೇಕೆಂದು ಆಜ್ಞೆಯಾಗಿದೆ

ವರ್ತಮಾನಸಂಗ್ರಹ.

ಕಳೆದವಾರದ ಸುದ್ದಿಯಂತೆ ಇಟಲಿ ಮತ್ತು ಅಬ್ಸೀನಿಯಾದೇಶಗಳೆರಡೂ ಲೀಗ್ ಸಂಸ್ಥೆಯವರು ಹೇಳುವಂತೆ ಅನುಕೂಲವಾದ ಕರಾರುಗಳು ಬರುವಲ್ಲಿ ಸಂಧಿಮಾಡಿಕೊಳ್ಳಲು ಒಪ್ಪಿಗೆ ಇತ್ತಿರುವವೆಂದೂ ಇದನ್ನು ಕುರಿತು ಒಂದು ನಿಶ್ಚಯಕ್ಕೆ ಬರುವವರೆಗೂ ಸದ್ಯಃ ಯುದ್ಧವನ್ನು ನಿಲ್ಲಿಸುವೆವೆಂದೂ ತಿಳಿದುಬಂದಿತ್ತು. ಆದರೆ ಈಚೆಗೆ ತಿಳಿದುಬಂದಿರುವುದರಲ್ಲಿ ಈ ಸುದ್ದಿಯು ನಿರಾಧಾರವಾದುದೆಂದು ಪ್ರಕಟವಾಗಿದೆ

ಮುತ್ತಿಗೆ ಹಾಕಲು ಬರುತ್ತಿದ್ದ ಚೀಣದ 'ಕಮ್ಯೂನಿಸ್ಟ' ರಿಗೂ ಷಾನ್ಸಿ ಪ್ರಾಂತೀಯ ಸೈನ್ಯಕ್ಕೂ ಫ-ಚಾವ ಹತ್ತಿರ ಯುದ್ಧವಾಗಿ ಸರಕಾರದ ಸೈನ್ಯಕ್ಕೆ ಸಂಪೂರ್ಣವಾದ ಜಯವುಂಟಾಯಿತೆಂದು ಚೀಣಾ ವಂದಿಗಳು ತಿಳಿಸುತ್ತವೆ. ಫ-ಚಾವ ಜಿಲ್ಲೆಯಲ್ಲಿ ಕೆಂಪು ಜನರ ತಲೆಯೇ ಇಲ್ಲದಂತೆ ಮಾಡಲಾಗಿದೆಯೆಂದೂ, ಅವರೆಲ್ಲ ಚದಿರಿ ಮಾಯವಾಗಿ ಓಡಿಹೋಗುತ್ತಿರುವರೆಂದೂ ಅವರನ್ನು ಸರಕಾರದ ಸೈನಿಕರು ಅಟ್ಟಿಸಿಕೊಂಡು ಹೋಗುತ್ತಿರುವರೆಂದೂ ಹೇಳಲಾಗಿದೆ

ಏಳುಮಕ್ಕಳ ತಾಯಿ!

ಬರೋಡ ಸಂಸ್ಥಾನಕ್ಕೆ ಸೇರಿದ ದಬಾರಸ ಎಂಬ ಗ್ರಾಮದಲ್ಲಿ ಒಬ್ಬ ಸ್ತ್ರೀಯಳು ಏಕಕಾಲದಲ್ಲಿಯೇ ೪ ಹೆಣ್ಣುಮಕ್ಕಳನ್ನೂ, ೩ ಗಂಡುಮಕ್ಕಳನ್ನೂ ಹಡೆದಿರುವಳಂತೆ! ಆ ಮಕ್ಕಳುಗಳೆಲ್ಲ ಸಜೀವವಾಗಿರುವವಂತೆ! ದೈವಲೀಲೆಯು ವಿಚಿತ್ರವಾದುದು!

ಒಬ್ಬ ಹೆಂಗಸಿಗೆ ೯ ಜನ ಹೆಂಡರು!

ಪಾಶ್ಚಾತ್ಯದೇಶದಲ್ಲಿ ಒಬ್ಬ ಸ್ತ್ರೀಯು ಪುರುಷವೇಷವನ್ನು ಹಾಕಿ ಮೋಸದಿಂದ ೯ ಜನ ಸ್ತ್ರೀಯರನ್ನು ಲಗ್ನವಾಗಿರುವಳಂತೆ! ಲಗ್ನವಾದಕೂಡಲೇ ವಧುವಿನ ತಾಯಿತಂದೆಗಳು ವಧುವಿನ ಮೈಮೇಲೆ ಹಾಕಿರುವ ಬಂಗಾರದ ಸಾಮಾನುಗಳನ್ನು ಅಪಹರಿಸಿಕೊಂಡು ಪಲಾಯನ ಮಾಡುವುದೇ ಇವಳ ಕೆಲಸವಂತೆ!

ಸಾಧುಗಳ ಹಾವಳಿ!

ಲಕ್ನೋ ಪ್ರಾಂತದ ಚಂದ್ರಾವತಿಯೆಂಬಲ್ಲಿಗೆ ಬಂದ ೧೦೦ ಮಂದಿ ಸಾಧುಗಳ ತಂಡವು ಆ ಗ್ರಾಮದವರು ತಮಗೆ ಅಗ್ನಿಕುಂಡಿಕೆಗೆ ಹಾಕಲು ಬೇಕಾದ ೧೦೦ ಹೊರೆ ಕಟ್ಟಿಗೆಯನ್ನು ಒದಗಿಸಿಕೊಡಲಿಲ್ಲವೆಂದು ಸಿಟ್ಟಿಗೆದ್ದು ಹಳ್ಳಿಗರ ಮನೆಗಳಿಗೆ ನುಗ್ಗಿ ದನಕರುಗಳನ್ನು ಬಿಚ್ಚಿಬಿಟ್ಟು ಅನೇಕರನ್ನು ಹೊಡೆದು ಲೂಟಿಮಾಡಿ ಹೊಲದ ಪೈರುಗಳನ್ನು ನಾಶಮಾಡಿ ಕೆಲವು ಮನೆಗಳಿಗೆ ಬೆಂಕಿ ಹಚ್ಚಿ ಪೋಲೀಸರು ಸಹಾಯಕ್ಕೆ ಬರುವ ವೇಳೆಗೆ ಪರಾರಿಯಾದರೆಂದು ತಿಳಿದುಬಂದಿದೆ

ಇಟಲಿ ಅಬ್ಸೀನಿಯಾ ಯುದ್ಧ

ಇಟಲಿಯ ವಿಮಾನಗಳು ಕೋರಂ ಬಳಿ ಬ್ರಿಟಿಷ್ ಉಪಚಾರಪಡೆಯ ಮೇಲೆ ತಿರುಗಿ ಬಾಂಬುಗಳನ್ನು ಹಾಕಿದವು ಇದು ೩ನೆಯಸಾರಿ ಅನೇಕ ಡೇರೆಗಳೂ ಔಷಧಸಾಮಗ್ರಿಗಳೂ ನಾಶವಾಗಿವೆ ಉಪಚಾರ ಪಡೆಯವರಿಗೆ ಬಿಡುವೇ ಇಲ್ಲ ಅನೇಕ ಜನರಿಗೆ ಚಿಕಿತ್ಸೆ ನಡೆಸುತ್ತಿದ್ದಾರೆ ಅಪಾಯಕ್ಕೊಳಗಾದವರಲ್ಲಿ ಅನೇಕರಿಗೆ ನಾಲಿಗೆಯೇ ಸೀದುಹೋಗಿದೆ ಕೆಲವರಿಗೆ ಕಣ್ಣುಹೋಗಿವೆ ಮುಖಗಳೆಲ್ಲ ಭಯಂಕರವಾಗಿ ಸುಟ್ಟುಹೋಗಿವೆ ಇಟಾಲಿಯನರು ಬಿಟ್ಟ ಗ್ಯಾಸಿನ ಪರಿಣಾಮವಿದೆಂದು ಹೇಳುತ್ತಾರೆ ಎರಿಟ್ರಿಯಾ ರಣಕ್ಷೇತ್ರದಲ್ಲಿ ಯುದ್ಧವನ್ನು ಮುಂದುವರಿಸಲು ಎಲ್ಲ ಸಿದ್ಧತೆಗಳೂ ಶೀಘ್ರಗತಿಯಿಂದ ಸಾಗುತ್ತಿವೆ. ಈ ಮಧ್ಯೆ ರಾಸ್‌ದುಲುಘೇಟಾರವರು ಶ್ವಾಸಕೋಶಸಂಬಂಧ ವ್ಯಾಧಿಯಿಂದ ಮರಣಹೊಂದಿದರೆಂದು ತಿಳಿದುಬಂದಿದೆ

ಯೂರೋಪಿನಲ್ಲಿ ಭಯಂಕರ ಪರಿಸ್ಥಿತಿ

ಲೋಕಾರ್ನೋ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ಹಿಟ್ಲರವರು ರ್ಹೈನ್‌ಲ್ಯಾಂಡ್ ಪ್ರದೇಶವನ್ನು ಸೈನ್ಯಗಳಿಂದ ತುಂಬುತ್ತಿರುವುದನ್ನು ನೋಡಿ ಇಡೀ ಯೂರೋಪುಖಂಡವೇ ತಲ್ಲಣಿಸಿಹೋಗಿದೆ ರ್ಹೈನ್‌ಲ್ಯಾಂಡಿನ ಆಕ್ರಮಣವು 7 ನೆಯ ತಾರೀಖಿನ ಪ್ರಾತಃಕಾಲ 5 ಘಂಟೆಗೆ ಪ್ರಾರಂಭವಾಯಿತು ಇದರಿಂದ ಅಲ್ಲಿಯ ಜರ್ಮನ್ ಪ್ರಜೆಗಳಿಗೆಲ್ಲಾ ಪರಮಾನಂದವಾಗಿದೆ

ರ್ಹೈನ್ ನದೀಪ್ರದೇಶದಿಂದ ಫ್ರೆಂಚರು ತಮ್ಮ ಸೈನ್ಯಗಳನ್ನು ತೆಗೆಯುವುದಕ್ಕೆ ಒಪ್ಪಿದರೆ ತಾನೂ ಒಪ್ಪುವುದಾಗಿ ಹಿಟ್ಲರನು ಹೇಳುತ್ತಾನೆ ಆದರೆ ಹಾಗೆಮಾಡಲು ಸಾಧ್ಯವಿಲ್ಲವೆಂದು ಫ್ರೆಂಚರು ಹೇಳುತ್ತಾರೆ ಫ್ರೆಂಚರು ಇದಕ್ಕೆ ಒಪ್ಪುವುದಾದರೆ ಬಹು ಬೆಲೆಯುಳ್ಳ ಅನೇಕ ಕೋಟೆಗಳನ್ನು ನೆಲಸಮಮಾಡಬೇಕಾಗುತ್ತದೆ ಫ್ರೆಂಚರು ರಣದ ಮೇಲೆ ಹೋಗಿರುವ ಎಲ್ಲಾ ಸೈನಿಕರನ್ನೂ ತತ್‌ಕ್ಷಣವೇ ಹಿಂದಕ್ಕೆ ಕರೆಸುವಂತೆ ನಿರ್ಧರಿಸಿ ಗಡಿನಾಡಿನ ಕೋಟೆಗಳನ್ನೆಲ್ಲಾ ಬಲಪಡಿಸಲು ನಿಶ್ಚಯಿಸಿರುತ್ತಾರೆ

ಜರ್ಮನಿಯೊಡನೆ ಸಂಧಾನ ನಡೆಸಲು ಫ್ರಾನ್ಸ್ ಸಿದ್ಧವಾಗಿದೆಯೆಂದೂ ಆದರೆ ಮೊದಲು ಜರ್ಮನಿಯು ತನ್ನ ಸೈನ್ಯಗಳನ್ನೆಲ್ಲಾ ರ್ಹೈನ್‌ಲ್ಯಾಂಡಿನಿಂದ ಹಿಂದಕ್ಕೆ ಕರೆಸಬೇಕೆಂದೂ ಮತ್ತು ಯಾವ ಒಪ್ಪಂದವಾದರೂ ಲೀಗಿನ ಮುಖಾಂತರವಾಗಬೇಕೆಂದೂ ಫ್ರೆಂಚರು ಹೇಳುತ್ತಿದ್ದಾರೆ

ಜರ್ಮನಿಯವರು ಸೈನ್ಯಗಳನ್ನು ಹಿಂದಕ್ಕೆ ಕರೆಸಲು ಸರ್ವಥಾ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ ಇಲ್ಲಿಯವರೆಗೆ ಸುಮಾರು 10 ಸಾವಿರ ಸೈನ್ಯವು ರ್ಹೈನ್‌ಲ್ಯಾಂಡನ್ನು ಪ್ರವೇಶಿಸಿದೆ

ಬ್ರಿಟಿಷ್ ವಿದೇಶ ವ್ಯವಹಾರ ಸಚಿವರಾದ ಶ್ರೀ ಆಂಥೋನಿ ಏಡನ್ನರು ಜರ್ಮನರ ರ್ಹೈನ್‌ಲ್ಯಾಂಡ್ ಆಕ್ರಮಣವನ್ನು ಕುರಿತು ಜರ್ಮನರು ಮಾಡಿರುವುದೇನೋ ತಪ್ಪು! ಅವರು ಲೋಕಾರ್ನೋ ಒಪ್ಪಂದದ ೭ನೇ ವಿಧಿಯನ್ನು ಮೀರಿ ನಡೆದಂತಾಯಿತು ಆದರೆ ಈ ಆಕ್ರಮಣದ ಹಿಂದೆ ಯುದ್ಧದ ಯೋಚನೆ ಇಲ್ಲವೆಂಬುದಕ್ಕೆ ಸಂತೋಷಿಸುತ್ತೇನೆ ಹಾಗೆ ಜರ್ಮನಿಯು ಫ್ರಾನ್ಸಿನ ಮೇಲಾಗಲಿ ಬೆಲ್ಜಿಯಮ್ಮಿನ ಮೇಲಾಗಲಿ ಬೀಳುವುದಾದರೆ ಬ್ರಿಟನ್ನು ಸಹಾಯಮಾಡಲು ಸಿದ್ಧವಾಗಿದೆ ಎಂದು ತಿಳಿಸಿದರು

12ನೆಯ ತಾರೀಖಿನದಿವಸ ಲೋಕಾರ್ನೋ ಒಪ್ಪಂದಕ್ಕೆ ಸಹಿಮಾಡಿರುವ ದೇಶಗಳ ಪ್ರತಿನಿಧಿಗಳೆಲ್ಲ ಲಂಡನ್ ವಿದೇಶವ್ಯವಹಾರ ಕಛೇರಿಯಲ್ಲಿ ಸಭೆ ಸೇರಿದ್ದರು ಆದರೆ ಯಾವ ತೀರ್ಮಾನಕ್ಕೂ ಬರಲಿಲ್ಲ ಜರ್ಮನಿಯು ಒಪ್ಪಂದದ 12 13ನಯ ವಿಧಿಗಳನ್ನೇ ಮೀರಿದಂತಾಯಿತೆಂದು ಎಲ್ಲರೂ ಏಕವಾಕ್ಯತೆಯಿಂದ ಸಿದ್ಧಪಡಿಸಿದರು

ಜರ್ಮನಿಯು ತನಗೆ ಇತರರಿಂದಾಗಿರುವ ತೊಂದರೆಗಳನ್ನು ಸೂಚಿಸಿ ದೊಡ್ಡ ಮೆಮೊರಾಂಡಮನ್ನು ಹೊರಡಿಸಿ ಅದರಲ್ಲಿ ಮುಖ್ಯವಾಗಿ ಫ್ರಾನ್ಸಿನ ನೀತಿಯನ್ನು ತೀವ್ರವಾಗಿ ಖಂಡಿಸಿದೆ

ಫ್ರಾನ್ಸ್‌ದೇಶವು ಪ್ರಪಂಚದ ಇತರ ರಾಜ್ಯಗಳೊಡನೆ ಒಪ್ಪಂದಗಳನ್ನು ಮಾಡಿಕೊಂಡು ತನ್ನ ಕ್ಷೇಮವನ್ನು ಮಾತ್ರ ನೋಡಿಕೊಂಡಿದೆ ಈಗ ರಷ್ಯದ ಸಂಗಡ ಹೊಸದಾಗಿ ಸೈನ್ಯಸಂಬಂಧವಾದ ಕರಾರನ್ನು ಮಾಡಿಕೊಂಡಿದೆ ಇಷ್ಟಾದರೂ ಜರ್ಮನಿಯು ಗಾಬರಿಪಡದೆ ಶಾಂತಿಯಿಂದ ಕೈಕಟ್ಟಿ ಕುಳಿತಿರಬೇಕೆಂದು ಅದು ನಿರೀಕ್ಷಿಸುತ್ತಿದೆ

ನಿಜವಾಗಿ ಶಾಂತಿಯನ್ನು ನೆಲೆಗೊಳಿಸಲು ಜರ್ಮನಿಯು ಏನುಮಾಡಬೇಕಾದರೂ ಸಿದ್ಧವಾಗಿದೆ ನಾವೇನೋ ಲೋಕಾರ್ನೋ ಒಪ್ಪಂದವನ್ನು ಮುರಿದಿರುವುದು ನಿಜ ಆದರೆ ಅದಕ್ಕೆ ಕಾರಣವೇನೆಂಬುದನ್ನು ವಿಚಾರಿಸಬೇಕಾಗಿದೆ ಹಾಗೆಮಾಡಲು ಇತರರು ಸಿದ್ಧರಿಲ್ಲದಿದ್ದರೆ, ಶಾಂತಿಪ್ರಯತ್ನಗಳನ್ನೆಲ್ಲ ಬದಿಗೊತ್ತಿ ಜರ್ಮನಿಯು ಯಾರ ತಂಟೆಯೂ ಬೇಡವೆಂದು ಪ್ರತ್ಯೇಕವಾಗಿ ಜೀವಿಸಬೇಕಾದೀತು ಜನಾಂಗಗಳ ಗುಂಪಿನಲ್ಲಿ ಪಕ್ಷಪಾತಕ್ಕೊಳಗಾಗಿ, ಜನಾಂಗವೆಂಬ ಹೆಸರಿನಿಂದ ಬಾಳುವುದಕ್ಕೆ ಬದಲು, ಗೌರವದಿಂದ ಪ್ರತ್ಯೇಕವಾಗಿರುವುದೇ ಸರಿಯೆಂದು ಜರ್ಮನಿಯು ತಿಳಿಸಿರುತ್ತದೆ

ಬ್ರಿಟಿಷ್ ಸರ್ಕಾರದವರು ಜರ್ಮನಿಗೆ ಈ ಸಮಯದಲ್ಲಿ ನಮ್ಮ ಸಲಹೆಯಂತೆ ರ್ಹೈನ್‌ಲ್ಯಾಂಡ್ ಪ್ರಾಂತದಲ್ಲಿ ಜರ್ಮನಿಯು ಸೈನಿಕರ ಸಂಖ್ಯೆಯನ್ನು ಕಡಮೆಮಾಡಿ ಸೈನ್ಯಬಲವನ್ನು ಹೆಚ್ಚಿಸುವುದಿಲ್ಲವೆಂಬುದಾಗಿ ವಚನಕೊಡಬೇಕೆಂದೂ ಸಂಧಾನದ ಮಾತುಕತೆಗಳನ್ನು ನಡೆಸುವವರೆಗೂ ಯಾವ ಕಾರ್ಯಕ್ರಮಗಳನ್ನೂ ಕೈಗೊಳ್ಳಬೇಡಿರೆಂದೂ ತಿಳಿಸಿದ್ದರು ಅದಕ್ಕೆ ಉತ್ತರವಾಗಿ ಜರ್ಮನಿ ಸರ್ಕಾರದವರು ರ್ಹೈನ್‌ಲ್ಯಾಂಡ್ ಮೇಲೆ ತಮ್ಮ ಅಧಿಕಾರವನ್ನು ತಾತ್ಕಾಲಿಕವಾಗಿ ಕಡಮೆಮಾಡುವ ಅಥವಾ ಮುಂದೆ ನಡೆಯುವ ಯಾವ ಮಾತುಕತೆಗಳಲ್ಲೂ ಜರ್ಮನಿಯು ಭಾಗವಹಿಸುವುದಿಲ್ಲವೆಂದು ತಿಳುಹಿಸಿದೆ.

ಹಿಟ್ಲರನ ವೀರಭಾಷಣ

ರ್ಹೈನ್‌ಲ್ಯಾಂಡಿನಲ್ಲಿ ಹಿಟ್ಲರನ ಶಾಂತಿ ಸಲಹೆಗಳನ್ನು ಕೇಳಲು ಬೇರೆ ಬೇರೆ ಪ್ರಾಂತ್ಯಗಳಿಂದ ಜನರು ೭೦ ಸ್ಪೆಷಲ್ ಟ್ರೈನುಗಳಲ್ಲಿ ಬಂದು ಸೇರಿದ್ದರು

ಕಾರ್ಲ್‌ಸ್ರೂಹಿಯಲ್ಲಿ ೭೦ ಸಾವಿರ ಜನರು ಹಿಟ್ಲರನಿಗೆ ಅಭೂತಪೂರ್ವವಾದ ಸುಖಾಗಮನವನ್ನು ಕೋರಿದರು ಹರ್ ಹಿಟ್ಲರನು ತನ್ನ ಭಾಷಣದಲ್ಲಿ ಜರ್ಮನಿಯೂ, ಫ್ರಾನ್ಸೂ, ಸಮಾನಸ್ಕಂಧರಾಗಿ ಬದುಕಬೇಕೆಂದೂ, ಹಾಗಿದ್ದರೇನೇ ಅನ್ಯೋನ್ಯಗೌರವವುಂಟಾಗುವುದೆಂದೂ, ಜರ್ಮನಿಗೆ ಫ್ರಾನ್ಸಿನ ಮೇಲಾಗಲೀ ಅಥವಾ ಪೋಲೆಂಡಿನ ಮೇಲಾಗಲೀ ಆಕ್ರಮಣಮಾಡಬೇಕೆಂಬ ಉದ್ದೇಶವಿರುವುದಿಲ್ಲವೆಂದೂ ಆದರೆ ಫ್ರಾನ್ಸು ರಷ್ಯಾದೊಂದಿಗೆ ಮಾಡಿಕೊಂಡಿರುವ ಒಪ್ಪಂದವು ಸರಿಯಲ್ಲವೆಂದೂ, ರಷ್ಯಾದೇಶದ ಕಮ್ಯೂನಿಸಂ ತತ್ವದ ಅಪಾಯಗಳು ಜರ್ಮನಿಯ ಜನರಿಗೆ ಚನ್ನಾಗಿ ಅನುಭವವಾಗಿರುವವೆಂದೂ, ಆದುದರಿಂದ ಫ್ರಾನ್ಸು ಮತ್ತು ರಷ್ಯಾ ಒಪ್ಪಂದವನ್ನು ಸಹಿಸಲು ನಮಗಾಗುವುದಿಲ್ಲವೆಂದೂ ಹಿಟ್ಲರನು ತನ್ನ ಶಾಂತಿ ಸಲಹೆಗಳೇ ಅತ್ಯುತ್ತಮವಾದವುಗಳೆಂದೂ, ಈ ಕಾಲು ಶತಮಾನದವರೆಗೆ ಜರ್ಮನಿಯು ೭೦ ಲಕ್ಷ ಜನಗಳಪರವಾಗಿ ಶಾಂತಿ ಸಲಹೆಗಳನ್ನು ಕೊಡಲು ಯಾರಿಗೂ ಸಾಧ್ಯವಿಲ್ಲವೆಂದೂ, ಜನಾಂಗಗಳ ಸಹೋದರಭಾವದಲ್ಲಿ ಜರ್ಮನಿಯನ್ನು ಸರಿಸಮಾನಭಾವದಿಂದ ಸೇರಿಸಿಕೊಳ್ಳುವ ಕಾಲವು ಬರುವುದೆಂಬ ಆಸೆಯು ತನಗಿರುವುದೆಂದೂ ಹಿಟ್ಲರನು ತನ್ನ ಭಾಷಣದಲ್ಲಿ ಸ್ಪಷ್ಟಪಡಿಸಿದನು

ಸ್ವೀಕಾರ

ಕಡೂರು—ಡಿ|| ಶಿವಗಂಗಾಕ್ಷೇತ್ರದಲ್ಲಿ ನೆರವೇರಿದ ಮಾಹೇಶ್ವರದೀಕ್ಷಾ ಸಮಾರಂಭದಲ್ಲಿ ಪ್ರಭಾ ಪೋಷಣಕ್ಕಾಗಿ ತೆಗೆದಿರಿಸಿದ 5 ರೂ ಗಳು ತಿಪ್ಟೂರು ವೇ|| ಬಿ ಎಂ ಶಿವಲಿಂಗಾರಾಧ್ಯರ ದ್ವಾರಾ ತಲ್ಪಿರುತ್ತವೆ

ಶಿವಮೊಗ್ಗಾ ಟೌನ್ ನಿವಾಸಿಗಳಾದ ಮಾ|| ರಾ|| ರಾಜಕೋಟಪ್ಪಶೆಟ್ಟರ ಪುತ್ರಿ ಸ|| ಕುಂ|| ಸೌ|| ಚಿ|| ಸೌ|| ನಂಗಮ್ಮನನ್ನು ಜಯಚಾಮರಾಜಪುರದಲ್ಲಿರುವ ಮ|| ರಾ|| ತರೀಕೆರೆ ಗಣೇಶಪ್ಪನವರ ಪುತ್ರ ಚಿ|| ಸ|| ಚನ್ನಬಸಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವದಲ್ಲಿ ಪ್ರಭಾಪೋಷಣಕ್ಕಾಗಿ ವಧೂವರರಿಂದ ತೆಗೆಯಿಸಿದ 4 ರೂಗಳು ವೇ|| ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳದ್ವಾರ ತಲ್ಪಿರುತ್ತವೆ

ತಿಪ್ಟೂರು ವೀರಶೈವರು ಶ್ರೀ ನಂದೀಶ್ವರಾಲಯದಲ್ಲಿ ಪದ್ಧತಿ ಪ್ರಕಾರ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವನ್ನು ವಿಜೃಂಭಣೆಯಿಂದ ನಡೆಯಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂ ಗಳು ತಿಪ್ಟೂರು ಕೋ ಆಪರೇಟಿವ್ ಸೊಸೈಟಿ ಆನರರಿ ಸೆಕ್ರೆಟರಿಗಳಾದ ಶ್ರೀಮಾನ್ ಸಿ ಕೆ ಕಪ್ಪಣ್ಣನವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

ಅರಕೆಲಗಡ್ಡಿ

ಸೊರಬ ತಾಲ್ಲೂಕು ಅರೇಕೆಲಗಡ್ಡಿಯಲ್ಲಿರುವ ಶಾಂತಪುರವ ರದ ವೀರದೇವಪ್ಪೊಡೆಯರು ಫಾಲ್ಗುಣ ಶು|| ೧೪ ಶುಕ್ರವಾರ ದಿವಸ ತಮ್ಮಲ್ಲಿ ಶ್ರೀಜಗದಾಚಾರ್ಯರ ಜಯಂತಿ ಮಹೋತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಿದರು. ಈ ಕಾರ್ಯದಲ್ಲಿ ಮ|| ರಾ|| ಪಟೇಲ್ ಮಲ್ಲಪ್ಪಗೌಡರು, ಬೆಳಗಲಿ ಪಟೇಲ ಬಸವಪ್ಪಗೌಡರು ಮತ್ತು ಮಲ್ಲಪ್ಪಗೌಡರು ಇತ್ಯಾದಿಯಾಗಿ ಸರ್ವರೂ ಭಾಗಿಗಳಾಗಿದ್ದರು. ಶ್ರೀ ರೇವಣಸಿದ್ಧೇಶ್ವರನು ತನ್ನಲ್ಲಿ ಅಸಾಧಾರಣ ಭಕ್ತಿಯನ್ನು ವಹಿಸಿರುವ ಭಕ್ತಮಂಡಲಿಗೆಲ್ಲಾ ಸೌಖ್ಯವನ್ನೀಯಲೆಂದು ಪ್ರಾರ್ಥಿಸುವ,

ಒಬ್ಬ ಆಚಾರ್ಯಭಕ್ತ

ಚಿಕ್ಕನಾಯಕನಹಳ್ಳಿ

ಇದೇ ಫಾಲ್ಗುಣ ಶುದ್ಧ ಚತುರ್ದಶಿ ತಾ|| ೬ ೩ ೩೬ನೇ ಶುಕ್ರವಾರ ದಿವಸ ಶ್ರೀರೇಣುಕಜಯಂತಿಯನ್ನು ಇಲ್ಲಿಯ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ವೈಭವದಿಂದ ನೆರವೇರಿಸಿದರು. ಶ್ರೀ ವೀರೇಶನಿಗೆ ಅಭಿಷೇಕ, ಪೂಜೆ, ಮಹಾಮಂಗಳಾರತಿಗಳು ನಡೆದವು. ರಾತ್ರಿ ಘಂಟೆಯವರೆಗೆ ರುದ್ರಾಭಿಷೇಕಾದಿಗಳು ನಡೆದವು. ಸಾಯಂಕಾಲ ಶ್ರೀ ರೇವಣಾರಾಧ್ಯರ ವಿಜಯವನ್ನು ಕೀರ್ತನರೂಪವಾಗಿ ರೇಣುಕವಿಜಯ ಕೀರ್ತನವನ್ನು ಮಾಡಿದರು. ಈ ಕಾರ್ಯದಲ್ಲಿ ನಿರತರಾಗಿದ್ದ ಗುರುಭಕ್ತರಿಗೆ ಶ್ರೀರೇಣುಕಾಚಾರ್ಯರು ನಿತ್ಯ ಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಒಬ್ಬ ಗುರುಭಕ್ತ

ಹಾವೇರಿ

ಧಾರವಾಡ ಜಿ|| ಹಾವೇರಿ ಟವನ್ನಿನ ಭಕ್ತಮಹಾಶಯರು ತಾ|| ೬-೩-೩೬ ನೆಯ ಶುಕ್ರವಾರ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವವನ್ನು ನಡಿಸಿದರು. ಇದರಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಪ್ರಾತಃಕಾಲ ಜಗದ್ಗುರುಮೂರ್ತಿಗೆ ಅಭಿಷೇಕ ಪೂಜೆ ಸಮಾರಂಭ ಪೂರ್ತಿಯಾದಮೇಲೆ ಅನ್ನಸಂತರ್ಪಣೆಯಾಯಿತು. ಸಾಯಂಕಾಲ ಸಕಲವಾದ್ಯವೈಭವದಿಂದಲೂ ಛತ್ರಚಾಮರಾದಿ ಬಿರುದಾವಳಿಗಳಿಂದಲೂ ಚತುರಂಗ ಬಲದಿಂದಲೂ, ಭಜನಾಮೇಳಗಳಿಂದಲೂ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರವನ್ನು ಆನೆಯ ಮೇಲಿರಿಸಿ ಮಹೋತ್ಸವವು ಪುರದ ಸರ್ವ ಬೀದಿಗಳಲ್ಲಿ ಹೊರಟಿತು. ದಿವ್ಯಾಂತವರ ಮಧ್ಯದಲ್ಲಿ ಎತ್ತರವಾಗಿ ಆನೆಯ ಮೇಲೆ ಕಂಗೊಳಿಸುವ ನಿರ್ವಾಣಿ ಮೂರ್ತಿಯನ್ನು ನೋಡಲು ಅಸಂಖ್ಯಾತ ಜನರು ಬಂದಿದ್ದರು. ಉತ್ಸವವು ಮನೋಹರವಾಗಿ ಮೆರೆಯುತ್ತ ಸ್ವಸ್ಥಾನವನ್ನು ಸೇರಲು ೧೦ ಘಂಟೆ ರಾತ್ರಿಯಾಯಿತು. ಶ್ರೀ ಗುರುವಿನ ಆರತಿಯ ಮಂಗಳಾರತಿಯೊಡನೆ ಸಕಲ ಭಕ್ತಮಹಾಶಯರು ಗುರುವಿನ ಶುಭಾಶೀರ್ವಾದವನ್ನು ಹೊಂದಿ ಜಯಜಯಕಾರದೊಡನೆ ತಮ್ಮ ತಮ್ಮ ಮನೆಗೆ ತೆರಳಿದರು. ಅಸಾಧಾರಣ ಭಕ್ತಿವಿಶೇಷದಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವವನ್ನು ನೆರವೇರಿಸಿದ ಮಹಾಶಯರಿಗೆ ಗುರುಸಾರ್ವಭೌಮ ರೇಣುಕರು ಆಯುರಾರೋಗ್ಯ ಪುತ್ರಮಿತ್ರ ಕಳತ್ರಾದಿ ಸಕಲ ಸಂಪದಗಳನ್ನೀಯಲೆಂದು ಹಾರೈಸುವ,

ಓರ್ವ ಗುರುಭಕ್ತ

ಶ್ರೀ ಕೊಲ್ಲಿಪಾಕಿ (ಕೊಲನುಪಾಕ) ಮಹಾಕ್ಷೇತ್ರ.

ಹೈದರಾಬಾದ ಸಂಸ್ಥಾನಕ್ಕೆ ಸೇರಿದ ಕೊಲ್ಲಿಪಾಕಿ (ಕೊಲನುಪಾಕ) ಮಹಾಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀ ಸೋಮನಾಥದೇವಾಲಯದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವವು ಅಸಾಧಾರಣವೈಭವದಿಂದ ನೆರವೇರಿತು. ಈ ಶುಭಸಮಯದಲ್ಲಿ—ವೇದತೀರ್ಥ, ಕಾವ್ಯತೀರ್ಥ, ಸ್ಮೃತಿತೀರ್ಥ, ಧರ್ಮಾಚಾರ್ಯ, ವಿದ್ಯಾರತ್ನ, ವಿದ್ಯಾನಿಧಿ ಇತ್ಯಾದಿ ಪದವಿ ಪ್ರತಿಷ್ಠಿತರೂ ಯಾದಗಿರಿ ಶಂಕರ ಸಂಸ್ಕೃತಕಾಲೇಜ ಪ್ರಿನ್ಸಿಪಾಲರೂ ಆದ ವೇ|| ಪಂಡಿತ ಶ್ರೀ ವೀರಭದ್ರ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ವೀರಶೈವಧರ್ಮಪರಿಷತ್ತು ವಿಶೇಷ ಸಂಭ್ರಮದೊಡನೆ ನಡೆಯಿತು. ಈ ಮಹಾಸಭೆಗೆ ಆಂಧ್ರದೇಶದ ಮಹಾಪುರುಷರು ಮುಖ್ಯರೂ, ಕೊಲ್ಲಿಪಾಕಿ ಜಹಗೀರದಾರರೂ ತಾಲೂಕದಾರ ತಹಶೀಲದಾರ ನೌಕರದ ಸರಕಾರಿ ಅಧಿಕಾರಿಗಳೂ, ಸುತ್ತಮುತ್ತಲಿನ ವಿದ್ವಜ್ಜನರೂ ಆಗಮಿಸಿದ್ದರಲ್ಲದೆ, ಕರ್ನಾಟಕದೇಶದಿಂದ ಶ್ರೀ ಮ|| ಬ್ರ|| ವಿಶ್ವನಾಥ ಶಾಸ್ತ್ರಿಗಳವರೂ ಆಗಮಿಸಿದ್ದರು. ಅಧ್ಯಕ್ಷಮಹಾಶಯರು ಆ ಧರ್ಮಭಾಷಣದಿಂದ ವೀರಶೈವಮತಸ್ವರೂಪವನ್ನೂ, ಈ ಮಹಾಚಾರ್ಯರ ಸ್ವರೂಪವನ್ನೂ ಅವರು ಭೂಲೋಕದಲ್ಲಿ ಅವತರಿಸಿ ತೋರಿಸಿದ ಅಗಣಿತ ಲೀಲಾವೈಭವವನ್ನೂ ಸಪ್ರಮಾಣವಾಗಿ ಪ್ರತಿಪಾದಿಸಿ ಸರ್ವರನ್ನೂ ಸಂತೋಷಪಡಿಸಿದರು. ಇದರಲ್ಲಿ ಭಾಗವಹಿಸಿದ ಮಹಾಶಯರು ಪಂಡಿತರ ಸಪ್ರಮಾಣ ಭಾಷಣದಿಂದ ಆಂಧ್ರದೇಶದಲ್ಲಿ ನವ ಚೈತನ್ಯವುಂಟಾಗಿದೆ. ಈ ಉತ್ಸಾಹದಿಂದ ಹೋಗತಕ್ಕ ಸಕಲ ಭಕ್ತಕೋಟಿಯವರೂ ಸಕಲ ದೇಶೀಯರೂ ಆದ ಈ ಮಹನೀಯರು ವೀರಶೈವಮತವನ್ನು ಪರಿಪೋಷಿಸುತ್ತಿರುವರು. ನಮ್ಮ ಮತದ ಪುನರುದಯವೆಂದು ಸಾರಬೇಕಾಗಿದೆ. ಇಂತಹ ಮಹನೀಯರಿಗೆ ಶ್ರೀ ಜಗದಾಚಾರ್ಯರು ಆಯುರಾರೋಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನು ಕರುಣಿಸಲೆಂದು ಆ ಪೂಜ್ಯಾಚಾರ್ಯರನ್ನು ಅನನ್ಯಸಾಧಾರಣ ಭಕ್ತಿಭಾವದಿಂದ ಪ್ರಾರ್ಥಿಸುತ್ತೇನೆ.

ಪುರಂ ನೀಲಕಂಠಯ್ಯ, ಸಕ್ರೆಟರಿ
ವೀರಶೈವಧರ್ಮಪರಿಷತ್,
ಕೊಲನುಪಾಕ

ಸೇಲಂ

ಸೇಲಂ ಜಿಲ್ಲೆಗೆ ಸೇರಿದ ಮೈಲಿ ದೂರದಲ್ಲಿರುವ ಸ್ಥಲವು ಬಹು ಪವಿತ್ರ ಪರ್ವತದಲ್ಲಿ ಗಂಗೆಯು ಸದಾ ಪ್ರವಹಿಸುತ್ತಿರುವ ಇಂಥಹ ಪವಿತ್ರ ಗಂಗಾತೀರದಲ್ಲಿ ಸೇಲಂ ಜಿಲ್ಲೆಯಲ್ಲಿರುವ ಶ್ರೀಮಾನ್ ವೈದ್ಯ ಮಾಡಿರ ಗುರುಸ್ವಾಮಯ್ಯನವರು ಸ್ವಂತ ಖರ್ಚಿನಿಂದ ಆಶ್ರಮಗಳನ್ನು ಕಟ್ಟಿಸಿರುವರು. ಈ ಆಶ್ರಮದಲ್ಲಿ ರೇಣುಕಸಿದ್ಧೇಶ್ವರಾಲಯವು ಪರಿಶೋಭಿಸುತ್ತಿರುವುದು. ಈ ರೇಣುಕಸಿದ್ಧೇಶ್ವರಾಲಯದಲ್ಲಿರುವ ಮಂಟಪದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಭಕ್ತರಿಗಾಗಿ ಅವತಾರ ಕಾಲದಲ್ಲಿ ಆಶೀರ್ವಾದ ಮಾಡುತ್ತಿರುವ ಭಾವಚಿತ್ರವು ಮನೋಹರವಾಗಿ ಕೆತ್ತಲ್ಪಟ್ಟಿರುವುದು. ಈ ರೀತಿಯಾಗಿರುವ ಶ್ರೀ ರೇಣುಕಸಿದ್ಧೇಶ್ವರನ ಸನ್ನಿಧಾನದಲ್ಲಿ ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಜಯಂತೀ ಮಹೋತ್ಸವವು ವಿಶೇಷ ವೈಭವದಿಂದ ನಡೆಯಿತು. ಶ್ರೀ ರೇವಣಸಿದ್ಧೇಶ್ವರನ ಪರಮಭಕ್ತರಾದ ವೈದ್ಯ ಮಾಡಿರ ಗುರುಸ್ವಾಮಯ್ಯನವರಿಗೆ ಶ್ರೀ ಜಗದಾಚಾರ್ಯರು ಸಕಲ ಸೌಭಾಗ್ಯಗಳನ್ನೀಯಲೆಂದು ಪ್ರಾರ್ಥಿಸುವ,

ಬಿ ಸಿದ್ದಯ್ಯ

ಶಿಗ್ಗಾಂವ

ಧಾರವಾಡ ಜಿ|| ಶಿಗ್ಗಾಂವಿಯಲ್ಲಿ ವೀರಶೈವ ತರುಣಸಂಘದವರ ಆಶ್ರಯದಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯು ಶ್ರೀ ಯುವನಾಮಸಂವತ್ಸರ ಫಾಲ್ಗುಣ ಶು|| ೧೪ (ತಾ|| ೬ ೩ ೧೯೩೬) ಶುಕ್ರವಾರ ದಿವಸ ಬಹಳ ವಿಜೃಂಭಣೆಯಿಂದ ಜರುಗಿತು. ಪ್ರಾತಃಕಾಲ ನಗರದಲ್ಲಿ ಗುರುಭಜನೆಯಾಯಿತು. ನಗರವು ತಳಿರುತೋರಣಗಳಿಂದ ಶೃಂಗರಿಸಲ್ಪಟ್ಟಿತ್ತು. ವೀರಶೈವ ತರುಣಸಂಘದವರು ತಮ್ಮ ಸಂಘದೊಳಗೆ ದಿವ್ಯಪೀಠದಲ್ಲಿ ಸ್ಥಾಪಿಸಲ್ಪಟ್ಟ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವದ ಮೂರ್ತಿಯನ್ನು ಸೋಮವಾರ ಪೂಜಿಸಿದರು. ಬಳಿಕ ಪ್ರಮುಖ ಮುಖ್ಯಜನರನ್ನು ಕೂಡಿಕೊಂಡು ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ರಜತಮೂರ್ತಿಯನ್ನು ಪಲ್ಲಕ್ಕಿಯಲ್ಲಿರಿಸಿ ಸಂಜೆ ೫ ಘಂಟೆಗೆ ಮಹೋತ್ಸವವನ್ನು ಹೊರಡಿಸಿದರು. ಸಕಲವಾದ್ಯವೈಭವದೊಡನೆ ಮಹೋತ್ಸವವು ವಿಶೇಷ ವೈಭವದಿಂದ ಪ್ರಾರಂಭವಾಯಿತು. ಅಲ್ಲಲ್ಲಿ ಸುವಾಸಿನಿಯರು ಮಂಗಳಾರತಿಗಳಿಂದ ಹಣ್ಣುಕಾಯಿಗಳನ್ನರ್ಪಿಸಿ ಗುರುಪ್ರಸಾದವನ್ನು ಪಡೆಯುತ್ತಿದ್ದರು. ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷವು ನಭೋಮಂಡಲವನ್ನು ವ್ಯಾಪಿಸಿತ್ತು. ಈ ರೀತಿಯಾಗಿ ಉತ್ಸವವು ಬಹಳ ವೈಭವದಿಂದ ಸಾಗಿ, ರಾತ್ರಿ ೭|| ಘಂಟೆಗೆ ಮರಳಿ ವೀರಶೈವ ತರುಣಸಂಘಕ್ಕೆ ಬಂದು ಮುಟ್ಟಿತು.

ಅನಂತರ ವೇ|| ಶಿಗ್ಗಾಂವ ಹಿರೇಮಠದ ಶ್ರೀ ಚರಮೂರ್ತಿಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕಸಭೆಯು ಕೂಡಿತು. ಸಭೆಗೆ ಮುಖ್ಯವಾಗಿ ಯಜಮಾನ ಅಯ್ಯಪ್ಪಗೌಡರು, ಸರ್ದೇಸಾಯರು, ಮುತ್ತೀಕಲ್ಲ ಸಬ್‌ರಿಜಿಸ್ಟ್ರಾರ್ ಸಾಹೇಬರು, ಶಿಗ್ಗಾಂವದ ವಕೀಲರು, ಪಂಡಿತ ಸಾಲಿಮಠರು, ಶೆಟ್ಟರು ಬ್ರಾಹ್ಮಣರು ಮತ್ತು ಆರ್ಯಜನರು ಬಂದಿದ್ದರು. ಆಪತ್ತಿ ಹಿರೇಮಠ ದಣಿಯವರು ಸೂಚಿಸಿದ ಪ್ರಕಾರ ವೇ|| ಲಿಂಗಪ್ಪನವರು ಹಿರೇಮಠ ಬೇಕನಕಟ್ಟಿ, ಗಾಂವಿ ಶಾಸ್ತ್ರಿ ನಾಗಪ್ಪನವರು ಪರಮಾತ್ಮನ ಶಿವ ಪಿಗೆಳೆದ ಅವತರಿಸಿದ ಪಂಚಾಚಾರ್ಯರು ಭೂಲೋಕದಲ್ಲಿ ವೀರಶೈವಮತವನ್ನು ಸ್ಥಾಪಿಸಿದ ಬಗ್ಗೆ ಭಾಷಣಮಾಡಿದರು. ಬಳಿಕ ವೇ|| ಸುರಗಿಮಠ ವೀರಯ್ಯನವರು ಪಂಚಾಚಾರ್ಯರು ನಾಲ್ಕು ಯುಗಗಳಲ್ಲಿ ಅವತರಿಸಿದ ಬಗ್ಗೆ ಅವರ ಲೀಲೆಗಳ ವಿಷಯವನ್ನೂ ಸಪ್ರಮಾಣವಾಗಿ ಪ್ರತಿಪಾದಿಸಿದರು.

ಆಮೇಲೆ ಶ್ರೀಯುತ ಗುರುಶಾಂತಪ್ಪ ಶಿರಗಾವಿ ಆವರು ರೇಣುಕರ ಪವಾಡ ಲೀಲೆಗಳನ್ನು ವರ್ಣಿಸಿದರು. ಶಿರಗಾವಿ ಮೇಲಿನ ರೇಣುಕ ಜಯಂತಿಯ ವಿಷಯವನ್ನು ಪ್ರತಿಯೊಬ್ಬರಿಗೂ ತಿಳಿಯುವಂತೆ ಸರಳಭಾಷೆಯಿಂದ ಬಹಳ ಸ್ವಾರಸ್ಯಕರವಾಗಿ ಭಾಷಣಮಾಡಿದರು. ಅಮೇಲೆ ವೇ|| ಸಿದ್ದಯ್ಯನವರು ಹಿರೇಮಠ ಇವರು ವೀರಶೈವಮತಸ್ಥಾಪನಾಚಾರ್ಯರ ಇಲ್ಲಿನ ಪ್ರತಿಷ್ಠಾಪನ ಮತದಲ್ಲಿಯೂ ಪುರಸ್ಕಾರದ ಬಗ್ಗೆ ವಿವರ, ಅನ್ಯಮತೀಯರು ತಮ್ಮ ಗುರುಗಳಲ್ಲಿ ಅಸಾಧಾರಣ ಭಕ್ತಿಯನ್ನಿಟ್ಟು ನಡೆದುಕೊಳ್ಳುವಂತೆ ನಾವಾದರೂ ನಮ್ಮ ಆಚಾರ್ಯರ ಸದ್ಯ ಸಂಘಟನದಲ್ಲಿರುವ ರೇಣುಕ ಜಯಂತಿಗಳ ವಿಷಯದಲ್ಲಿ ಅತ್ಯಾದರವಾದ ಭಕ್ತಿಯನ್ನು ಸಲ್ಲಿಸಬೇಕೆಂದೂ, ಪುರಸ್ಕಾರ ಪಂಚಾಚಾರ್ಯರ ಪ್ರಭಾವವನ್ನು ಕಾರಣೀಭೂತರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಉಪಕಾರವನ್ನು ಸರ್ವರೂ ಸ್ಮರಿಸಬೇಕೆಂದೂ ಬಹಳ ಸ್ಫೂರ್ತಿದಾಯಕ ಭಾಷಣಮಾಡಿದರು. ಅನಂತರ ವೇ|| ಬಸಕಯ್ಯನವರು ಹಿರೇಮಠ ಕೋಣ್ಣೂರು ಇವರು ಗುರುಜಯಂತಿಯ ಆವಶ್ಯಕತೆಯ ಬಗ್ಗೆ ಕಿರುಕಳಿಯ ಭಾಷಣಮಾಡಿದರು. ಕಡೆಗೆ ಅಧ್ಯಕ್ಷರ ಸಮಾರೋಪ ಭಾಷಣವಾಗಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಇನ್ನು ಮುಂದೆ ಇದಕ್ಕಿಂತಲೂ ಹೆಚ್ಚು ವೈಭವದಿಂದ ಜಯಂತಿಯನ್ನು ನಡೆಸುವ ಸದ್ಬುದ್ಧಿಯನ್ನು ಶ್ರೀ ಜಗದ್ಗುರು ಪಂಚಾಚಾರ್ಯರು ಸರ್ವರಿಗೂ ಕರುಣಿಸಲೆಂದು ಪ್ರಾರ್ಥಿಸುವ

ವಿ ಯಮ್ ಹಿರೇಮಠ,
ಕಾರ್ಯದರ್ಶಿ,
ವೀರಶೈವ ತರುಣಸಂಘ, ಶಿಗ್ಗಾಂವ

ತುಮುಕೂರು

ತಾ|| 4 3 36ನೆಯ ಬುಧವಾರ ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ತುಮುಕೂರು ಟೌನಿನ ವ ಹಾಜರಿದ್ದ ಪ್ರಾರ್ಥನೆಯೊಂದಿಗೆ ಬೆಂಗಳೂರಿನಿಂದ ದಯಮಾಡಿಸಿದ್ದ ಮಹಂತಿನಮಠದ ಅಧ್ಯಕ್ಷರಾದ ಮ|| ಬ್ರ|| ಗಂಗಾಧರದೇವರು ಸ್ವಾಮಿಗಳವರು "ಧರ್ಮಪ್ರಕಾಶ" ಎಂಬ ವಿಚಾರದಲ್ಲಿ ಸದುಪಯುಕ್ತವಾದ ಭಾಷಣವನ್ನು ಅಪ್ಪಣೆಕೊಡಿಸಿದರು

ತಾ||5 3 36ನೇ ಗುರುವಾರ ಸಾಯಂಕಾಲ ತುಮುಕೂರಿನ ಶ್ರೀ ಶಾರದಾ ಸಹಿತ್ಯಸೇವಾಪ್ರವರ್ತಕಮಂಡಲಿಯ ಗಾಯಕ ಕಲಾಕೋವಿದರು ತಮ್ಮ ಮಂಜುಳಕಂಠದಿಂದ ಶ್ರೀ ಜಗದ್ಗುರುಗಳವರ ಸ್ತೋತ್ರವನ್ನು ಭಜನಾರೂಪವಾಗಿಮಾಡಿದರು. ಅನಂತರ ತುಮುಕೂರು ಮುಂದಿ ವರ್ತಕರಾದ ಶ್ರೀಮಾನ್ ಟಿ ಜಿ ಗುಬ್ಬಿ ಮಲ್ಲಪ್ಪನವರು "ಜಯಂತಿ" ಎಂಬ ವಿಷಯದಲ್ಲಿ ಭಾಷಣ ಮಾಡುತ್ತಾ ಸಕಲ ವೀರಶೈವರು ಇತರ ಜನಾಂಗದವರಂತೆ ಉತ್ಸಾಹದಿಂದ ತಮ್ಮ ಆಚಾರ್ಯರ ಜಯಂತಿಯ ಉತ್ಸವಗಳನ್ನು ನಡೆಸಬೇಕೆಂದು ನೀತಿಯುಕ್ತವಾಗಿ ಭಾಷಣಮಾಡಿದರು

ತಾ||6 3 36ನೇ ಶುಕ್ರವಾರ ಪ್ರಾತಃಕಾಲ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರಕ್ಕೆ ಪೂಜೆಯು ನೆರವೇರಿ ರಜತಪಲ್ಲಕ್ಕಿಯಲ್ಲಿ ವಾದ್ಯವೈಭವಗಳ ಮತ್ತು ಶ್ರೀ ಜಗದ್ಗುರು ವೇದಪಾಠಶಾಲಾ ವಟುಗಳ ವೇದಘೋಷದೊಡನೆ ಮಹೋತ್ಸವವು ಅತ್ಯಂತ ವೈಭವಪೂರ್ವವಾಗಿ ನೆರವೇರಿಸಲ್ಪಟ್ಟಿತು

ಅವೇದಿನ ಸಾಯಂಕಾಲ ಸಮರಿದೇವಾಲಯದಲ್ಲಿ ಶ್ರೀಮಾನ್ ದೇಶದ ಯಜಮಾನ್ ಸಿದ್ದಪ್ಪನವರು "ಶ್ರೀ ಜಗದ್ಗುರು ರೇಣುಕಾಚಾರ್ಯರು ಮತ್ತು ವೀರಶೈವಮತವು" ಎಂಬ ವಿಷಯದಲ್ಲಿ ಉಪಯುಕ್ತವಾದ ಭಾಷಣವನ್ನು ಮಾಡಿದರು. ಅನಂತರ ಸುಪ್ರಸಿದ್ಧ ಕೀರ್ತನಕಾರರಾದ ಶ್ರೀಮಾನ್ ಬೇಲೂರ ದಾಸರವರು ಇಂಪಾದ ವಾದ್ಯಗಳೊಂದಿಗೆ "ಗಿರಿಜಾಕಲ್ಯಾಣ" ಎಂಬ ಕೀರ್ತನವನ್ನು ಮನೋಹರವಾಗಿ ನಡೆಸಿದರು. ಅನಂತರ ಟಿ ಜಿ ಗುಬ್ಬಿ ಮಲ್ಲಪ್ಪನವರು ಉಪನ್ಯಾಸಕರಿಗೂ, ಕೀರ್ತನಕಾರರಿಗೂ ಧನ್ಯವಾದಗಳನ್ನರ್ಪಿಸಿದರು. ತಾ|| ೯ 3 36 ನೇ ಸೋಮವಾರ ತುಮುಕೂರಿನ ಶ್ರೀ ಶಾರದಾಸಾಹಿತ್ಯಸೇವಾಪ್ರವರ್ತಕಮಂಡಲಿಯವರು ನೂತನವಾಗಿ ಅಭ್ಯಾಸಿಸಿರುವ ಮನೋಹರವಾದ "ಶಿವಲೀಲೆ ಅಥವಾ ಗೋಕರ್ಣ

ಕ್ಷೇತ್ರದ ಮಹಿಮೆ" ಎಂಬ ನಾಟಕವನ್ನು ಅಭಿನಯಿಸಿ ಬಂದ ಉತ್ಪತ್ತಿಯನ್ನು ಶ್ರೀ ಜಗದ್ಗುರು ರೇಣುಕಾಚಾರ್ಯ ವೇದಪಾಠ ಶಾಲೆಗೆ ಉಚಿತವಾಗಿ ಕೊಡುತ್ತೇವಾಗಿ ಸಂಘದ ಸೆಕ್ರೆಟರಿಯವರಾದ ಮ|| ರಾ|| ಟಿ ಜಿ ಗುಪ್ಪಿ ಹುಚ್ಚಪ್ಪನವರು ತಿಳಿಯಿಸಿದರು

ಪ್ರತ್ಯಕ್ಷದರ್ಶಿ

ಶ್ರೀ ಜಗದಾಚಾರ್ಯರ ಜಯಂತೀಮಹೋತ್ಸವಗಳು

ಶ್ರೀ ಜಗದ್ಗುರು ಪಂಡಿತಾರಾಧ್ಯ ಶ್ರೀ ಜಗದ್ಗುರು ವಿಶ್ವಾರಾಧ್ಯ ರೇಣುಕಾಚಾರ್ಯರ ಜಯಂತೀಮಹೋತ್ಸವಗಳು ಮಹಾಶಿವರಾತ್ರಿ ದಿವಸ ಹೊಟಗಿ, ಧೋತ್ರಿ, ಶಿರ್ಸಿಹಳ್ಳಿ, ದರ್ಶನಾಳ, ಮುಸ್ತಿ, ಸೋಲಾಪೂರ ಜಿಲ್ಹೆ, ಪಂಢರಪೂರ, ಮಂಗಳವೇಢೆ ಇತ್ಯಾದಿ ಗ್ರಾಮಗಳಲ್ಲಿ ಅತ್ಯಂತ ವೈಭವದಿಂದ ಜರುಗಿಸಲ್ಪಟ್ಟವು.

ತಾ|| ೬-೩-೩೬ ಶು|| ೧೪ ದಿವಸ ಸೋಲಾಪೂರ ಜಿಲ್ಹಾ ವೈರಾಗ ಧೋತ್ರೀ ಗ್ರಾಮದ "ಗುರುಕುಲಾಶ್ರಮ"ದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕಾದಿ ಪೂಜೆಯನ್ನು ವೀರಭದ್ರಪ್ಪ ವರೇಕರ ಇವರು ಅತ್ಯಂತ ಭಕ್ತಿಯಿಂದ ನೆರವೇರಿಸಿದರು. ೧ ಸಾವಿರ ಜನರ (ಭಕ್ತ ಮಾಹೇಶ್ವರ) ತೃಪ್ತಿಯಾಗಿ, ಸಾಯಂಕಾಲಕ್ಕೆ ಅಲಂಕೃತವಾದ ರಥದಲ್ಲಿ ಲಿಂಗೋದ್ಭವ ದಿವ್ಯಮೂರ್ತಿಯನ್ನು ಮೂರ್ತಗೊಳಿಸಿ ಉತ್ಸವವು ಅತ್ಯಂತ ವೈಭವದಿಂದ ಹೊರಟು ಊರೊಳಗಿನ ಶ್ರೀ ಮಲ್ಲಿಕಾರ್ಜುನದೇವಾಲಯಕ್ಕೆ ಮುಟ್ಟಿತು ಅಲ್ಲಿ ಹೊಟಗೀ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಶಿವಲಿಂಗಪ್ಪ ಪಾಟೀಲ, ಮಲಕಪ್ಪ, ಗುರುಸಿದ್ಧಪ್ಪ ವರೇಕರ, ವೀರಯ್ಯಸ್ವಾಮಿ, ಗಂಗಾಧರಯ್ಯ ಮೊದಲಾದವರ ವ್ಯಾಖ್ಯಾನಗಳಾದವು. ವಿಶ್ವಾರಾಧ್ಯ, ರುದ್ರಪ್ಪ, ಅಪ್ಪಾಸಾಹೇಬ ಪಾಟೀಲ, ರಾಮಚಂದ್ರ, ಗುರುಸಿದ್ದಪ್ಪ ಇತ್ಯಾದಿ ಯುವಕರು ವಿಶೇಷಪ್ರಯತ್ನ ಮಾಡಿದರು.

ತಾ|| ೬-೩-೩೬ ಕ್ಕೆ ಅಕ್ಕಲಕೋಟ ಸಂಸ್ಥಾನಕ್ಕೆ ಸೇರಿದ ದರ್ಶನಾಳ ಗ್ರಾಮದಲ್ಲಿ ಶ್ರೀಯುತ ಶಿವಲಿಂಗಪ್ಪ ಮಾಳಗೆ ಇವರ ಭವ್ಯಭವನದಲ್ಲಿ ಶ್ರೀ ೧೦೮ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ, ಸಹಸ್ರದೀಪಗಳಿಂದ ಪೂಜೆಯು ವೈಭವದಿಂದ ನೆರವೇರಿತು. ಶಿವರಾತ್ರಿಯಂತಲೂ ಜನಸಮುದಾಯವು ಹೆಚ್ಚು ಸೇರಿತ್ತು. ಸರ್ವರ ತೃಪ್ತಿಯಾಗಿ ಸಾಯಂಕಾಲಕ್ಕೆ ಶಿವಲಿಂಗಪ್ಪ ಮಾಳಗೆ ಇವರ ಗೃಹದಿಂದ ಪಲ್ಲಕ್ಕಿಮಹೋತ್ಸವವು ಹೊರಟು ಹೊಟಗಿ ಮಠಕ್ಕೆ ತಲ್ಪಿತು. ಅಲ್ಲಿ ಹೊಟಗೀ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ ರಾಮಚಂದ್ರ, ಶ್ರೀ ಶಿವಲಿಂಗಪ್ಪ ಮಾಳಗೆ ಇವರ ವ್ಯಾಖ್ಯಾನಗಳಾದವು.

ತಾ|| ೬-೩-೩೬ ನೆಯ ದಿವಸ ಸೋಲಾಪೂರ ತಾಲೂಕು ಶಿರ್ಸಿಹಳ್ಳಿ "ಶ್ರೀ ಜಗದ್ಗುರು ಸಿದ್ಧಲಿಂಗ ಸೇವಾಸಂಘ"ದ ವತಿಯಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವು ಶ್ರೀ ಮಠ ದೇವಮಂದಿರದಲ್ಲಿ ವಿಶೇಷ ವೈಭವದಿಂದ ನೆರವೇರಿತು.

ಸೋಲಾಪೂರದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಮುಂತಾದ ಜಗದಾಚಾರ್ಯರ ಜಯಂತಿಯು ಅತ್ಯಂತವೈಭವದಿಂದ ನೆರವೇರಿಸಿದರು. ಹೊಟಗಿ ಗ್ರಾಮದಲ್ಲಿಯೂ ಜಗದಾಚಾರ್ಯರ ಜಯಂತೀಮಹೋತ್ಸವವು ಅಪೂರ್ವವಾಗಿ ನೆರವೇರಿಸಲ್ಪಟ್ಟಿತು.

ರಾಮಚಂದ್ರಪ್ಪ,
ಗುರುಭಕ್ತ

ಯಾದಗಿರಿ ಶಂಕರ ಸಂಸ್ಕೃತಕಾಲೇಜಿನ ಸಮಾಚಾರ

ನಮ್ಮ ವೀರಶೈವ ಸಮಾಜದಲ್ಲಿ ಸಂಸ್ಕೃತ ವಿದ್ಯಾಭಿವೃದ್ಧಿ ಮಾಡುವ ಸಂಸ್ಥೆಯೆಂದರೆ ಶಂಕರ ಸಂಸ್ಕೃತ ಕಾಲೇಜಾಗಿದೆ. ಇಂಥ ಮಹಾಸಂಸ್ಥೆಯು ಕಾಲೇಜಿನ ಅನಿರ್ವಾಚ್ಯ ಪಂಡಿತರೆನಿಸಿರುವ ವೇ|| ಪಂಡಿತ ಚನ್ನಮಲ್ಲ ಶಾಸ್ತ್ರಿಗಳ ಮೇಲ್ವಿಚಾರಣೆಯಲ್ಲಿ ನಡೆಯುತ್ತಿರುವದನ್ನು ನೋಡಿದರೆ ಈ ಶಂಕರ ಕಾಲೇಜಿನ ಮತ್ತು ನಮ್ಮ ವೀರಶೈವ ಸಮಾಜದ ಮಹಾ ಭಾಗ್ಯೋದಯವೆಂತಲೇ ಹೇಳಲಿಕ್ಕೆ ಸ್ವಲ್ಪವೂ ಸಂದೇಹವಿರುವದಿಲ್ಲ. ಏಕೆಂದರೆ ಇಂತಹ ಘನವಿದ್ವಾಂಸರು ನಮ್ಮ ವೀರಶೈವ ಸಮಾಜದಲ್ಲಿ ದೊರೆಯುವದೇ ದುರ್ಲಭವು. ಅವರಲ್ಲಿ ಸದಾಚಾರ್ಯದಕ್ಷತ್ವವೂ, ವಿನೀತತ್ವವೂ, ಪಾಂಡಿತ್ಯವೂ, ವಿದ್ಯಾರ್ಥಿಗಳನ್ನು ಮುಂದುವರಿಸಿ ಸಮಾಜಕ್ಕೆ ಹಿತವನ್ನುಂಟು ಮಾಡಬೇಕೆಂಬ ಮಹತ್ವಾಕಾಂಕ್ಷೆಯೂ, ಪಾಂಡಿತ್ಯಕ್ಕೆ ತಕ್ಕ ವಿನಯವೂ, ಸದಾಚಾರಸಂಪನ್ನಶೀಲತ್ವವೂ, ಬ್ರಹ್ಮತೇಜಸ್ವಿನಸತ್ವವೂ ಧಾರ್ಮಿಕ ಮತ್ತು ಪಾರಮಾರ್ಥಿಕಗಳನ್ನು ಹೇಗೆ ಅನುಸರಿಸಿ ನಡೆಯಬೇಕೆಂಬ ನೀತಿಚತುರತೆಯೂ, ಶಿಷ್ಯವತ್ಸಲತೆಯೂ, ಪರಿಶುದ್ಧಾಂತಃಕರಣವೂ ಇತ್ಯಾದಿ ಮಹಾಮಹಾಗುಣಗಳೆಲ್ಲಾ ಈ ಮಹಾನುಭಾವರಲ್ಲಿ ಮೂರ್ತಿಮತ್ತಾಗಿ ನೆಲೆಗೊಂಡಿರುತ್ತವೆಂದು ನಿರಾಳವಾಗಿ ಹೇಳಬಹುದಾಗಿದೆ. ಒಂದೇ ಒಂದು ಮಾತಿನಲ್ಲಿ ಹೇಳಬೇಕಾದರೆ ಇವರು ನಮ್ಮ ವೀರಶೈವಸಮಾಜಕ್ಕೇನೇ ಮಹಾ ದಕ್ಷನ್ಯಾಯವಾಗಿ ಪ್ರಜ್ವಲಿಸುತ್ತಿರುವರೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು.

ಇಂಥ ಪವಿತ್ರ ಶಾಸ್ತ್ರಿಗಳ ಮೇಲೆ ಎಂ ರುದ್ರಮೂರ್ತಿ ನಾಗೇನಹಳ್ಳಿ ಎಂಬವರು ನವಸಂದೇಶ ಪತ್ರಿಕೆಯಲ್ಲಿ ಇಲ್ಲದ ಸಲ್ಲದ ಆರೋಪಣೆಯನ್ನು ಮಾಡಿ ಒಂದು ಲೇಖನವನ್ನು ಪ್ರಕಟಿಸುತ್ತಾರೆ. ವೀರಶೈವ ಸಮಾಜೋನ್ನತಿಗೆ ಬದ್ಧಕಂಕಣರಾಗಿ ನಿಂತಿರುವ ಇಂಥ ಪಂಡಿತವರ್ಯರಮೇಲೆ ಅರೀತಿಯಾಗಿ ಆರೋಪಣೆ ಮಾಡಿರುವದು ಕೇವಲ ದುಷ್ಟಮಾತ್ಸರ್ಯದಿಂದಲೇ ಹೊರತು ಇದರ ನಿಜಾಂಶವು ಎಳ್ಳಷ್ಟು ಇರುವದಿಲ್ಲ. ನಾಗೇನಹಳ್ಳಿ ರುದ್ರಮೂರ್ತಿಯವರೆಂದರೆ ಸಮಾನ್ಯ ಪುರುಷರಲ್ಲ! ಶಂಕರ ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರತಿನಿಧಿಯಾಗಿ ವಿದ್ಯಾರ್ಥಿಯು ಸಂಘದ ಅಧ್ಯಕ್ಷರೂ ಶಿಕ್ಷಕರಲ್ಲಿಯೂ ಕಲಿಯಬೇಕಲ್ಲವೆ! ಕಲಿಸುವವರಿದ್ದರೆ ಅವರಿಗೆ ಹೋಗಿ ಹೇಳುತ್ತಿದ್ದಿಲ್ಲವೆ! ಸಾಕ್ಷಾತ್ ಕೈಲಾಸದಿಂದ ಮಂಜಣ್ಣನವರೇ ನಾಗೇನಹಳ್ಳಿ ರುದ್ರಮೂರ್ತಿಯವರ ಅವತಾರವನ್ನು ತಾಳಿ ಭೂಮಿಗೆ ಅವತರಿಸಿರುತ್ತಾರೆಂದು ಅಲ್ಲಿ ಜನಗಳು ಚರ್ಚಿಸಿದ್ದನ್ನು ನಾನು ಕೇಳಿದೆನಾದರೂ ಶ್ರೀಗುರು ಅನುಗ್ರಹವು ಯಾವಾಗಲೂ ಒಂದು ನಿಜ ತಿಳಿಯಬಹುದು. ಇಂಥ ಮಹಾಪುರುಷರು ಪ್ರಕಟಿಸಿರುವ ಆರೋಪಣೆಯಲ್ಲಿ ನಿಜಾಂಶವು ಎಷ್ಟಿರಬಹುದೆಂಬುದನ್ನು ವಾಚಕಮಹಾನುಭಾವರೇ ಊಹಿಸಲಿ. ಪಂಡಿತ ವೀರಭದ್ರಶಾಸ್ತ್ರಿಗಳು ಅನೇಕ ಪಟ್ಟಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದಿ ಮಹಾಪದವಿ ಪ್ರತಿಷ್ಠಿತರಾಗಿ ಯಾದಗಿರಿ ಶಂಕರ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ಪದವಿಗೆ ಸಾರ್ಥಕವೆಂದು ಹಿರಿಯ ಕೆಲವು ಕುತ್ಸಿತ ಜನರು ನವ ಗಿಂತಲೂ ಅಧಿಕವಾದ ಸದ್ವಿದ್ಯಾಪ್ರತಿಷ್ಠಿತರಾಗಿ ಅಧಿಕವಾದ ಸ್ಥಾನದ ಕಾಲೇಜನ್ನು ವಹಿಸಿದರಲ್ಲ ಎಂಬ ಅಸೂಯೆಯಿಂದ ಅವರಿಗೆ ಯಾತನಾದಿಂದಲೂ ಪರರ ಕಳಂಕವನ್ನು ಹಚ್ಚಿ ನಾವೇ ಮೇಲೆನಿಸಿಕೊಳ್ಳಬೇಕೆಂಬ ಹೇತುವಿನಿಂದ ಈ ರೀತಿಯಾದ ಆರೋಪಣೆ ಪ್ರಕಟಣೆಗಳನ್ನು ಹೊರಡಿಸ ಹತ್ತಿದ್ದಾರೆ. ಈ ರವರ ವರ್ತನವು ಎಷ್ಟು ಸರಿಯಾದುದಲ್ಲವೆಂದು ಹೇಳಬಹುದಾಗಿದೆ. ವಿಚಾರಶೀಲರು ಮುಂದೆ ಇಂಥ ಕುತ್ಸಿತಲೇಖನಗಳನ್ನು ಗಮನಕ್ಕೊಡದಿರಬೇಕಾಗಿ ವಿನಯ ಪೂರ್ವಕವಾದ ವಿನಂತಿ.

ಶಿವಕುಮಾರಸ್ವಾಮಿಗಳು
ತರ್ಕಪಂಚಾನನ, ವಿದ್ಯಾಭೂಷಣ,
ಪುತ್ತೂರು

ಮಾಯಿಪ್ರದರ್ಶನಸಭಾ ಹಾವೇರಿ.

ಮೈಸೂರು ಶ್ರೀಮಾನ್ ರಾಜಕವಿಭೂಷಣ ಹೆಚ್ ಜಿ ಗಂಗಾಧರಶಾಸ್ತ್ರಿಗಳವರು ಪರವಾನಿಗೆಯನ್ನು ಹೊಂದಿದರೆಂಬ ವಿಷಯ ನಮ್ಮ ಪತ್ರಿಕೆಯಲ್ಲಿ ನೋಡಿ ನಮ್ಮ ವೀರಶೈವಸಮಾಜಕ್ಕಾದ ಮಹಾ ತ್ಯಸನವನ್ನು ತೋರಿಸುವದಕ್ಕಾಗಿ ತಾ|| 29 2 36 ನೆಯ ದಿವಸ ನಡೆದಿರುವ ವೇ|| ಮುರಗಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಶ್ರೀಮಾನ್ ಹಳೆ ಲಿಂಗದ ಜಡಿಯವರು ಶೈಲಾಸ ಪಾಸಿಗೆಯನ್ನು ಕೇಳಿ ನಮ್ಮ ವೀರಶೈವಸಮಾಜದ ದುಃಖ ಸಾಗರದಲ್ಲಿ ಮುಳುಗಿದೆ. ವೀರಶೈವದ ತತ್ವ ಸಮಾಚಾರವಾದ ಪಂಚಾಚಾರ್ಯರ ಪಂಚಪೀಠಗಳಲ್ಲೊಂದಾದ ಶ್ರೀ ಉಜ್ಜಯಿನೀ ಪೀಠವು ಸತ್ಪುರುಷ ಆನ ಯತಿಗಳ ಸಿದ್ಧಗಳ್ಳಿಯಲ್ಲಿ ಈ ಕಾರ್ಯವು ನಡೆದಿದ್ದು ಅಸಾಧಾರಣವಿದ್ವಾಂಸರಾದ ಮಹಾಶಯರಾದ ಇವರು ಆ ಪೀಠಕ್ಕೆ ಒಡೆಯರಾಗಿ ಕಲ್ಲಿಸಿ ಪ್ರಮುಖರಾಗಿ ಭಾಗಿಯಾದರು. ಇದರಿಂದ ವೀರಶೈವದ ತತ್ವ ಬೆಳೆಸುತ್ತಿರುವ ಈ ಮಹನೀಯರ ಉಪಕಾರವನ್ನು ನಮ್ಮ ಸಮಾಜವು ಎಷ್ಟು ಜನ್ಮದವರೆಗೆ ಸ್ಮರಿಸಿದರೂ ತೀರದು. ಇಂಥ ಮಹನೀಯರ ವಿಯೋಗವು ನಮಗಾದ ಲಾಭಸಾಮರ್ಥ್ಯಕ್ಕಾಗಿ ನಮ್ಮಂಥ ಪಟ್ಟಕ್ಕೇರುವದು ಇಲ್ಲ. ಏನು ಆಧ್ಯಕ್ಷರಾದಿಯಾಗಿ ಸದ್ಗುಣ ಮಹಿಮ ಪ್ರದರ್ಶನವಾಗಿ ಈಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬವರ್ಗಕ್ಕೆ ಸಮಾಧಾನವನ್ನೂ ಉಂಟುಮಾಡಲೆಂದು ಪ್ರಾರ್ಥಿಸಿ ಸಭೆ ವಿಸರ್ಜನೆಗೊಳಿಸಿದರು.

ಒರ್ವ ಮಾಯಿಭಾಗಿ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ವಿವಾಹಮಹೋತ್ಸವ

ಶಿವಮೊಗ್ಗ ಜಿಲ್ಲೆ ನಿವಾಸಿಗಳಾದ ಮ|| ರಾ|| ರ ಹೊಟ್ಟಪ್ಪಶೆಟ್ಟರ ಇವರ ಸ್ವಗೃಹದಲ್ಲಿ ಇದೇ ಯುವನಾಮ ಸಂ|| ಫಾಲ್ಗುಣ ಶು|| ೧೩ ತಾ|| ೪ ೩ ೩೬ ಬುಧವಾರ ದಿನ ಹಗಲು ಸಲ್ಲುವ ಶುಭ ಮೇಷಲಗ್ನದಲ್ಲಿ ವೇಲ್ಪಂಡ ಮ|| ರ|| ರಾ ಹೊಟ್ಟಪ್ಪಶೆಟ್ಟರ ಪುತ್ರಿ ಚಿ|| ಸೌ|| ಹೆ|| ಕುಂ|| ಶೋ|| ನಾಗಮ್ಮನೆಂಬ ವಧುವಿಗೂ, ಜಯಚಾಮರಾಜಪುರದಲ್ಲಿರುವ ಮ|| ರಾ|| ತಂಗೆಕೆರೆ ಗಣೇಶಪ್ಪನವರ ಪುತ್ರ ಚಿ|| ರಾ|| ಚನ್ನಬಸಪ್ಪನೆಂಬ ವರನಿಗೂ ವಿವಾಹವು ನಾಗವೇದಿ ವೇ|| ವೀರಸಂಗಯ್ಯನವರ ಪೌರೋಹಿತ್ಯದಲ್ಲಿ ವಿಧ್ಯುಕ್ತವಾಗಿ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಕಲ್ಯಾಣಮಹೋತ್ಸವಕ್ಕಾಗಿ ವೇ|| ಗುಪ್ಪಿ ಶಿವರುದ್ರಶಾಸ್ತ್ರಿಗಳು, ನರಸಿಂಹರಾಜಪುರದ ಮ|| ರಾ|| ಸಾ|| ಯಜಮಾನ ಇಂ|| ನಿ|| ಶಿಂಪಶೆಟ್ಟರು, ಮ|| ರಾ|| ಸಾ|| ಚಂದ್ರಪ್ಪಶೆಟ್ಟರು ಜಯಚಾಮರಾಜಪುರದ ಮ|| ರಾ|| ಸಾ|| ಪರಮೇಶ್ವರಪ್ಪಶೆಟ್ಟರು ಮ|| ರಾ|| ಬಸಪ್ಪಶೆಟ್ಟರು, ಮ|| ರಾ|| ಸಿದ್ಧಲಿಂಗಪ್ಪಶೆಟ್ಟರು, ಶಿವಮೊಗ್ಗದ ಮ|| ರಾ|| ಚನ್ನಬಸಪ್ಪಶೆಟ್ಟರು, ಸ್ವಾಮಿ ಮಠದ ಜಯದೇವಪ್ಪ ಬಿ ಎ, ಇವರು ಮೊದಲಾದ ಮ|| ರಾ|| ಗುರುಬಸಪ್ಪಶೆಟ್ಟರು ಬೆಳಗುತ್ತಿ ಮ|| ರಾ|| ಕಾಳಿಂಗಪ್ಪಶೆಟ್ಟರು ಸ್ಥಳ ಪರಿಸರದ ಲೌಕಿಕ ವೈದಿಕ ಮಹೋದಯರು, ಬಂಧುಮಿತ್ರರು ಸಹ ಆಸ್ಥಾನಿಕರಾಗಿದ್ದರು. ಸಮಸ್ತ ಮಹಾಜನರೂ ಈ ನೂತನ ವಧೂವರರ ಶ್ರೇಯೋಭಿವೃದ್ಧಿಯನ್ನು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಹಾರೈಸಿದಬಳಿಕ ವಯೋವೃದ್ಧರೂ, ಜ್ಞಾನವೃದ್ಧರೂ, ಅನುಭವಶೀಲರೂ, ಆಗರ್ಭ ಶ್ರೀಮಂತರೂ ಆದ ನರಸಿಂಹರಾಜಪುರದ ಶ್ರೀಮಾನ್ ಇಂ|| ನಿ|| ಶಿಂಪಶೆಟ್ಟರವರ ಅಧ್ಯಕ್ಷತೆಯಲ್ಲಿ ಕೀರ್ತನಕೇಸರಿ ಕವಿಭೂಷಣ ಇತ್ಯಾದಿ ಬಿರುದಾಂಕಿತರಾದ ಶ್ರೀ|| ಗುಪ್ಪಿ ಶಿವರುದ್ರಶಾಸ್ತ್ರಿಗಳು ಸಂದರ್ಭೋಚಿತವಾಗಿ ಭಾಷಣಮಾಡಿ ಪಂಚಾಚಾರ್ಯ ಪ್ರಭಾಪೋಷಣಕ್ಕಾಗಿ ವಧೂವರರ ಕಡೆಯವರಿಂದ ೪ ರೂಪಾಯಿಗಳನ್ನು ತೆಗೆಯಿಸಿದರು. ಆಯಾ ಸಭಿಕರಿಗೆ ಫಲಪುಷ್ಪತಾಂಬೂಲಗಳು ವಿನಿಯೋಗಿಸಲ್ಪಟ್ಟವು. ಅದೇದಿನ ರಾತ್ರಿ ೯ ಘಂಟೆಯಿಂದ ಶ್ರೀ|| ಗುಪ್ಪಿ ಶಿವರುದ್ರಶಾಸ್ತ್ರಿಗಳವರು ಗಿರಿಜಾಕಲ್ಯಾಣವೆಂಬ ಶಿವಕಥೆಯನ್ನು ಸುಶ್ರಾವ್ಯವಾಗಿ ಅನವಾದಮಾಡಿದರು.

ಈ ಶುಭಕಾರ್ಯದರ್ಶಿಗಳಾದ ಮ|| ರಾ|| ಸಾ|| ವಿ ರುದ್ರಪ್ಪಶೆಟ್ಟರವರು ಇಂ|| ನಿ|| ಮ|| ರ|| ಸಾ|| ಚಂದ್ರಪ್ಪಶೆಟ್ಟರವರು, ಮ|| ರ|| ಸಾ|| ನಿ ರುದ್ರಪ್ಪಶೆಟ್ಟರವರು ಸಹ ಆಗಮಿಸಿದ್ದ ಜನರಿಗೆ ಮಾಡಿದ ವಿಶ್ವಾಸೋಪಚಾರಗಳೂ ತೋರಿಸಿದ ಪ್ರೇಮಾದರಗಳೂ ಬಹು ಶ್ಲಾಘನೀಯವಾದವುಗಳಾಗಿದ್ದವು. ಶ್ರೀ ಜಗದ್ಗುರು ಪಂಚಾಚಾರ್ಯರು ಇವರೆಲ್ಲರಿಗೂ ಸೌಖ್ಯವನ್ನೀಯಲಿ. ಒರ್ವ ಗುರುಚರಣಸೇವಾಭಿಲಾಷಿ

ಓಂ ನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ

ಮಾಹೇಶ್ವರ ದೀಕ್ಷಾಸಮಾರಂಭ ಶ್ರೀ ಶಿವಗಂಗಾಕ್ಷೇತ್ರ

ಕಡೂರುತಾಲ್ಲೂಕು ಯಗಟಿಹೋಬಳಿ ಶ್ರೀ ಶಿವಗಂಗಾ ಮಹಾಕ್ಷೇತ್ರದಲ್ಲಿ ಇದೇ ಸಂವತ್ಸರದ ಫಾಲ್ಗುಣ ಶು|| ೧೩ ದಿವಸ ಶ್ರೀ ಬ್ರ|| ಶ್ರೀ ತಾವರೆಕೆರೆ ಷಟ್ಸ್ಥಲಾಧ್ಯಕ್ಷರ ನೇತೃತ್ವದಲ್ಲಿ ಒಕ್ಕಲಗೇರಿ ಸಿದ್ಧಾಂತಿ ವೇ|| ಹಾಲಪ್ಪಯ್ಯನವರ ಪೌರೋಹಿತ್ಯದಲ್ಲಿ ೫೦ ಜನ ಮಾಹೇಶ್ವರ ವಟುಗಳಿಗೆ ಶಿವದೀಕ್ಷಾ ಸಂಸ್ಕಾರವು ನಡೆಯಿತು. ಎರಡುದಿವಸ ಸಾವಿರಾರು ಜನಗಳಿಗೆ ಅನ್ನಸಂತರ್ಪಣೆಯು ನಡೆಯಿತು. ಈ ಸಮಾರಂಭದಲ್ಲಿ ವೀರಶೈವಧರ್ಮ ಜಾಗೃತಿಗಾಗಿ ಅವತಾರವೆತ್ತಿರುವ ಪ್ರಭಾಪೋಷಣಕ್ಕಾಗಿ ಐದುರೂಪಾಯಿಗಳು ತೆಗೆಯಿಸಲ್ಪಟ್ಟವು. ಈ ಕಾರ್ಯದಲ್ಲಿ ಸದರಿ ಕ್ಷೇತ್ರದ ಮಹಿಮ ಟಿದಾರರಾದ ಒಡೆಯರಹಳ್ಳಿಮಠದ ವೇ|| ವೀರಭದ್ರಾರಾಧ್ಯರೂ, ಇವರ ಅಳಿಯಂದಿರಾದ ಕುಂಕಾನಾಡಮಠದ ವೇ|| ರುದ್ರಾರಾಧ್ಯರೂ ವಿಶೇಷ ಶ್ರಮವಹಿಸಿ ಕಾರ್ಯವನ್ನು ನೆರವೇರಿಸಿದರು. ಶ್ರೀ ಶಿವಗಂಗಾಕ್ಷೇತ್ರಾಧೀಶನಾದ ಶ್ರೀ ಗಂಗಾಧರೇಶ್ವರನೂ, ಶ್ರೀ ಜಗದ್ಗುರು ಪಂಚಾಚಾರ್ಯರೂ ಈ ಉಭಯ ಕಾರ್ಯಕರ್ತರಿಗೆ ಆಯುರಾರೋಗ್ಯಾದಿಸಕಲ ಸಂಪತ್ತನ್ನು ದಯಪಾಲಿಸಲೆಂದು ಅನನ್ಯಭಾವದಿಂದ ಭಜಿಸುತ್ತೇನೆ.

ಎ ಎಂ ಶಿವಲಿಂಗಾರಾಧ್ಯ,
ತಿಪ್ಪೂರು

ಶ್ರೀ ರಾಮೇಶ್ವರ ಕ್ಷೇತ್ರಕ್ಕೆ ಯಾತ್ರಾರ್ಥಿಗಳಾಗಿ ಬರತಕ್ಕ ವೀರಶೈವರಿಗೆ

ಸೂಚನೆ.

ಸುಪ್ರಸಿದ್ಧವಾಗಿರುವ ಶ್ರೀರಾಮೇಶ್ವರಕ್ಷೇತ್ರಕ್ಕೆ ಬರುವ ವೀರಶೈವರಿಗೆ ಯಾವ ಪ್ರಕಾರದ ಸೌಕರ್ಯವೂ ಇಲ್ಲದಿರುವದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ನಾವು ವೀರಶೈವರ ವಸತಿಗಾಗಿ "ಜಂಗಮವಾಡಿ" ಎಂಬ ಸ್ಥಳವನ್ನು ಏರ್ಪಡಿಸಿರುವೆವು. ವೀರಶೈವರಿಗೆ ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಒದಗಿಸಿ ಕೊಡುವೆವಲ್ಲದೆ ದರ್ಶನಾದಿಗಳಿಗೆ ಬೇಕಾಗುವ ಸುವ್ಯವಸ್ಥೆಯನ್ನು ಕಲ್ಪಿಸಿಕೊಡುವೆವು. ಮಾಹಿತಿಗಾಗಿ ನಮ್ಮ ಸಂಗಡ ಪತ್ರವ್ಯವಹಾರ ಮಾಡಬೇಕಾಗಿ ಕೋರಿಕೆ.

ಗುರುಸಿದ್ಧಸ್ವಾಮಿ,
(18) ಜಂಗಮವಾಡಿ ಮಠ, ರಾಮೇಶ್ವರಂ,
ಪೋ|| ರಾಮೇಶ್ವರ (S.I.Ry.)

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸಾನಂದ ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಸದ್ಯೋ ಶಿವಾಚಾರ್ಯರ ... ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶಿ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಧರೆಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
“ಯಥಾ ಪರಮಾಣುತ್ವಂ ಪ್ರಾಪ್ತೋ ವಜ್ರಾದೀನಾಮಪ್ಯಂತಃ ಪ್ರವಿಶತಿ” ಪರಮಾಣುಸಿದ್ಧಿಯನ್ನು ಪಡೆದ ಯೋಗಿಯು ಸೂಕ್ಷ್ಮರೂಪದಿಂದ ವಜ್ರಾದಿಗಳಲ್ಲಿಯೂ ಸಹ ಪ್ರವೇಶಮಾಡುವನು ಎಂದು ಬರೆದಿರುವನು. ಯೋಗಶಾಸ್ತ್ರದ [illegible] ಸಹ [illegible] ಕಂಠದಿಂದ ಹೊಗಳುತ್ತಿರುವರು. [illegible] ವಿಜಾತೀಯಬೀಜಸಂಜನಿತರಾದ ಪಾಖಂಡಿಗಳು ಇದನ್ನಾದರೂ ಒಪ್ಪುವರೋ ಇಲ್ಲವೋ ತಿಳಿಯದಾಗಿದೆ. ಯಮಪಾಶಬದ್ಧನಾದ ಮಾರ್ಕಂಡೇಯನನ್ನು [illegible] ಪರಮೇಶ್ವರನು ಲಿಂಗದಿಂದಲೇ ಅವತರಿಸಿ ಯಮನ ಗರ್ವವನ್ನು ಹರಣಮಾಡಿದ ವಿಷಯವನ್ನು ಈ ಪಾಖಂಡಿಗಳು ಕೇಳಲಿಕ್ಕಿಲ್ಲವೇನು? ಕೇಳಿದ್ದರೂ ಸಹ ಇದನ್ನು ಒಪ್ಪಿದರೆ ಆಚಾರ್ಯರ ಲಿಂಗಾವತಾರವನ್ನಾದರೂ ಒಪ್ಪಬೇಕಾಗುವುದೆಂದು ಭಾವಿಸಿ ಈ ವಿಜಾತೀಯ ಬೀಜಸಂಜಾತರು ಇದನ್ನೂ ಕೂಡ ತಿರಸ್ಕರಿಸಬಹುದೆಂದು ತೋರುತ್ತದೆ. ಇಂತಹ ಪಾಖಂಡಿಗಳ ನೀಚಾಭಿಪ್ರಾಯವನ್ನು ಖಂಡಿಸುವದಕ್ಕಾಗಿಯೇ ವಿರಕ್ತಕುಲತಿಲಕಾಯಮಾನರಾದ ಶ್ರೀಮದಾದಿತೋಂಟದ ಸಿದ್ಧಲಿಂಗಯತೀಶ್ವರರು ತಮ್ಮಿಂದ ರಚಿಸಲ್ಪಟ್ಟ ಷಟ್ಸ್ಥಲವಚನದಲ್ಲಿ—

ಆಯುಷ್ಯ ಶಿವತತ್ವದಲ್ಲಿ ರೇಣುಕನುದಯನ [illegible] ಇಲ್ಲಿ ಶಿವಲಿಂಗದಲ್ಲಿ ಉದಯವಾದ ಪರಿಯಂತೆ । ಆ ಶಿವಲಿಂಗದಲ್ಲಿಯೇ ಹುಟ್ಟಿ ಶಿವಲಿಂಗದಲ್ಲಿಯೇ ಲಯವಾದ [illegible] ಅನಾದಿ ಮುಕ್ತನಲ್ಲ ಅನಾಹತನಾಮಕ [illegible] ಅಜ್ಞಾನಿಗಳಿಗೆ ನಾಯಕ ನರಕ ತಪ್ಪದು । ಸಕಲಕೋಟಿಬ್ರಹ್ಮಾಂಡಕ್ಕಾಧಾರ ಸಮಸ್ತ ಲೋಕಂಗಳ [illegible] ಪರಮೇಶ್ವರನ ನಿಜಚಿತ್ತ [illegible] ವಲ್ಲಿ [illegible] ಗಳುಪಮಾನಾದರು ನೋಡ । ಆ [illegible] ಗಳು ಮತ್ತು ಜಗತ್ಪಾವನ [illegible] ಅವರು ಇದರ ಉದಯವಾದರುವಾಗಿ [illegible] ಎಂದು ಸಂದೇಹಿಸುವ ನಾಯಿಸಾಲಿಗೆಯು [illegible] ವೆ ಪಾಪಕೇ? । ಇವರಿಗೆ ನಾಯಕನರಕ ತಪ್ಪದು । [illegible] ಶಿವನೇ ಸಾಕ್ಷಿಯಾಗಿ [illegible] ಸಿದ್ಧೇಶ್ವರ ಪ್ರಭುವೇ ॥

ಈ ರೀತಿಯಾಗಿ ಅಸಾಧಾರಣ ಭಕ್ತಿಭಾವದಿಂದ ಶ್ರೀ ಜಗದ್ಗುರು ರೇಣುಕಭಗವತ್ಪಾದರನ್ನು ಕೊಂಡಾಡಿರುವರು. ಈ ಕಾಲದ ದುರ್ವಿರಕ್ತರ ಮಾರ್ಗವನ್ನನುಸರಿಸುತ್ತಿರುವ ಪಂಡಬಂಡ ಪಾಖಂಡಿಗಳು ಇದನ್ನಾದರೂ ನೋಡಿ ನಾಚಿ ಗುರುಸಾರ್ವಭೌಮರಲ್ಲಿ ನಿಜವಾದ ಭಕ್ತಿಯನ್ನಿಟ್ಟು ತಮ್ಮ ಪಾಪಪುಂಜವನ್ನು ನಾಶಮಾಡಿಕೊಳ್ಳುವವರಾಗಲಿ. ಅಸ್ತು!

ಶ್ರೀ ಜಗದ್ಗುರು ಪಂಚಾಚಾರ್ಯರು ಶಿವಲಿಂಗಗಳಿಂದ ಅವತರಿಸಿ ಪೂಜ್ಯಾಭಿಧಾನಗಳಿಂದ ಭುವನಪ್ರಸಿದ್ಧರಾಗಿರುವರಷ್ಟೆ! ಈ ಮಹಾತ್ಮರ ದಿವ್ಯನಾಮಗಳು ಸಮಸ್ತ

ಪ್ರಪಂಚದಲ್ಲಿ ಪ್ರಕಾಶಿಸತೊಡಗಿರುವವು. ಈ ಪೂಜ್ಯರ ನಾಮಗಳನ್ನು ಶೈವರು ಮತ್ತು ವೀರಶೈವರು ತಮ್ಮ ತಮ್ಮ ಸಂಪ್ರದಾಯದಲ್ಲಿ ತಮ್ಮ ತಮ್ಮ ಶಿಷ್ಯರಿಗೆ ಇಡುತ್ತ ಬಂದಿರುವರು. ಈ ಮಹಾತ್ಮರ ಪವಿತ್ರಾಭಿಧಾನದಿಂದಲೇ ಕೆಲವರು ಹಿಂದಕ್ಕೆ ಪ್ರಸಿದ್ಧರಾಗಿಹೋಗಿರುವರು. ಈ ವಿಷಯವನ್ನು ತಿಳಿಯದೆ ಇವರೇ ಆದ್ಯ ಪಂಚಾಚಾರ್ಯರೆಂದು ಹಂಡಬಂಡವರ್ಗವು ಹಂಬಲಿಸತೊಡಗಿದೆ. ಶ್ರೀಮದಾದ್ಯ ಜಗದ್ಗುರು ಪಂಚಾಚಾರ್ಯರಿಗೂ ೧೨-೧೩ ನೆಯ ಶತಮಾನದವರೆಂದು ಹೇಳಿಕೊಳ್ಳುವ—ಏಕಾಂತರಾಮಯ್ಯ, ಮಲ್ಲಿಕಾರ್ಜುನ, ಮಂಚಣ್ಣಪಂಡಿತರಿಗೂ ಯಾವ ಸಂಬಂಧವೂ ಇರುವದಿಲ್ಲ. ಆಚಾರ್ಯರ ಪಂಥವು ವೈದಿಕವು, ಆಚಾರ್ಯರ ಸ್ಥಾನದಲ್ಲಿ ಈಗಿನ ಹಂಡಬಂಡಜಾತಿಯ ಜಂಗಮರು ಆರೋಪಿಸುವ ವರ್ಗವು ಅವೈದಿಕವು, ವೈದಿಕಕ್ಕೂ ಅವೈದಿಕಕ್ಕೂ ಭೂಮ್ಯಾಕಾಶದಷ್ಟು ಅಂತರವಿರುವಾಗ ಮೋಕ್ಷಾಂತ ವಿರೋಧಿಗಳನ್ನು ಮತಾಚಾರ್ಯರೆಂದು ಹೇಳುವ ಮಂದಮತಿಗಳ ಬುದ್ಧಿಪ್ರಭಾವವು ಅನುಪಮ್ಯವು. ಚಂದ್ರಸಂತಿರುವುದು ಇಷ್ಟು! ಶ್ರೀ ಜಗದ್ಗುರು ಪಂಚಾಚಾರ್ಯರು ಶಿವಲಿಂಗಗಳಿಂದವತರಿಸಿದರೆಂಬ ವಿಷಯದಲ್ಲಿ—ವೀರಾಗಮ, ಸುಪ್ರಭೇದಾಗಮ, ಸ್ವಾಯಂಭುವಾಗಮ, ಪಾಶುಪತತಂತ್ರ ಮೊದಲಾದ ಪ್ರಮಾಣಗ್ರಂಥಗಳು ಸಿಂಹನಾದವನ್ನು ಮಾಡುತ್ತವೆ. ಈ ಎಲ್ಲಾ ಆಗಮ ಪ್ರಮಾಣಗಳನ್ನೇ ವೀರಶೈವಮತದ ಗ್ರಂಥಕಾರರೆಲ್ಲರೂ ಅಂಗೀಕರಿಸಿರುತ್ತಾರೆ. ಪ್ರಮಾಣಗ್ರಂಥಗಳಲ್ಲಿ ಅಗ್ರಸ್ಥಾನವನ್ನು ಪಡೆದ **'ಸಿದ್ಧಾಂತಶಿಖಾಮಣಿ'** ಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಭೂಮಂಡಲದಲ್ಲಿ ಶೋಭಿಸುವ ಕೊಲ್ಲಿಪಾಕಿ ಸೋಮೇಶ್ವರಲಿಂಗದಿಂದ ಅವತರಿಸಿದ ವಿಷಯವನ್ನು ನೋಡಿಯಾದರೂ ಈ ಹಂಡಬಂಡವರ್ಗವು ಧನ್ಯವಾಗಬೇಕು.

ಅಥ ತ್ರಿಲಿಂಗವಿಷಯೇ ಕೊಲ್ಲಿಪಾಕ್ಯಭಿಧೇ ಪುರೇ ।
ಸೋಮೇಶ್ವರಮಹಾಲಿಂಗಾತ್ ಪ್ರಾದುರಾಸೀತ್ ಸ ರೇಣುಕಃ ॥೧॥
ಪ್ರಾದುರ್ಭೂತಂ ತಮಾಲೋಕ್ಯ ಶಿವಲಿಂಗಾತ್ ತ್ರಿಲೋಚನಃ ।
ವಿಸ್ಮಿತಾಃ ಪ್ರಾಣಿನಸ್ತತ್ರ ಬಭೂವುಸ್ತತ್ರವಾಸಿನಃ ॥೨॥

ಕ್ರಿಸ್ತಶಕ ೧೧೬೦ ರಲ್ಲಿದ್ದ ಶ್ರೀಪತಿಪಂಡಿತರು ತಾವು ರಚಿಸಿದ **"ಶ್ರೀಕರಭಾಷ್ಯ"** ದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರನ್ನು ಈ ಕೆಳಗೆ ಉಲ್ಲೇಖಿಸಿರುವಂತೆ ಸ್ತುತಿಸಿದ್ದಾರೆ.

ಶ್ರೀಮದ್ರೇಣುಕವಿಭುಸ್ತ್ರಿದಶಾದಿದಕ್ಷಂ ಸ್ವಶಿಷ್ಯಸತ್ತ್ರಿದಶವೃಂದನಿಷೇವ್ಯಪಕ್ಷಂ ।
ದುರ್ವಾರಕರ್ಮಪರಿವಾರಕಲ್ಪಭಕ್ತಾಮ್ನಾಯಂ ಸದಾ ಭವಮಹಂ ಭಜತಿಃ ಸ್ಮರಾಮಃ ।

ಈ ಶ್ರೀಕರಭಾಷ್ಯದಲ್ಲಿ ಅನೇಕಕಡೆಗೆ 'ಸಿದ್ಧಾಂತಶಿಖಾಮಣಿ' ಯ ಪ್ರಮಾಣಗಳು ಪ್ರಕಾಶಿಸುತ್ತಿರುವದರಿಂದ ಸಿದ್ಧಾಂತಶಿಖಾಮಣಿಯು ಇದಕ್ಕಿಂತಲೂ ಬಹು ಪ್ರಾಚೀನವೆನ್ನುವದು ಬಹಳ ಸ್ಪಷ್ಟವಾಗಿ ತಿಳಿಯುವಂತಿದೆ. ಸಿದ್ಧಾಂತಶಿಖಾಮಣಿಯು ೨ ಸಾವಿರ ವರ್ಷಗಳಿಗಿಂತಲೂ ಪೂರ್ವದ್ದೆಂದು ಅನೇಕರು ತರ್ಕಿಸುತ್ತಿರುವರು. ಅಂತಿರಲಿ, ಈ ಗ್ರಂಥದಲ್ಲಿ ಉಕ್ತವಾಗಿರುವ ಶ್ರೀ ಜಗದ್ಗುರು ರೇಣುಕಾಚಾರ್ಯರ ಕಾಲವು ಅದಕ್ಕೆ ಸಾವಿರಾರು ವರ್ಷಗಳ ಪೂರ್ವದಲ್ಲಿರಬಹುದೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ೧೧ ನೆಯ ಶತಮಾನದಿಂದ ಇತ್ತೀಚಿನ ವೀರಶೈವಮತಗ್ರಂಥಕರ್ತೃಗಳು ತಮ್ಮ ಗ್ರಂಥಗಳಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರು ಲಿಂಗೋದ್ಭವರಾಗಿ ಮತಸ್ಥಾಪನೆಮಾಡಿದ ವಿಷಯವನ್ನು ಸವಿಸ್ತಾರವಾಗಿ ಬರೆದಿರುತ್ತಾರೆ. ವೀರಶೈವಾಚಾರಪ್ರದೀಪಿಕಾ, ವೀರಶೈವಾನಂದಚಂದ್ರಿಕಾ, ವೀರಶೈವಸದಾಚಾರಸಂಗ್ರಹ, ಶಿವಾದ್ವೈತಮಂಜರೀ ಮೊದಲಾದ ಉದ್ಗ್ರಂಥಗಳಲ್ಲಿ ಜಗದಾಚಾರ್ಯರ ಅವತಾರವರ್ಣನೆಯೂ ಈ ಭಗವತ್ಪಾದರ ಸಾಕ್ಷಿಯಾಗಿ ದೀಕ್ಷೋಪನಯನ ವಿವಾಹಾದಿಮಂಗಳಕಾರ್ಯಗಳಲ್ಲಿ ಪಂಚಕಲಶಸ್ಥಾಪನೆಯನ್ನು ಮಾಡುವ ಸುಪ್ರಸಿದ್ಧ ವಿಷಯಗಳೂ ಪ್ರತಿಪಾದಿಸಲ್ಪಟ್ಟಿರುತ್ತವೆ. ಈ ವಿಷಯವನ್ನಾದರೂ ಈ ಹಂಡಬಂಡಮುಂಡಿಗಳು ಕಣ್ದೆರೆದು ನೋಡಬೇಕು.

ವೀರಶೈವಮತೋತ್ಪತ್ತಿಯ ಬಗ್ಗೆ ಐತಿಹಾಸಿಕ ಸಂಶೋಧಕಶಿರೋಮಣಿಗಳನೇಕರು, ತಾವು ಪರಿಶೋಧಿಸಿದಷ್ಟು ನಿಶ್ಚಿತಕಾಲವು ತಿಳಿಯದೆ "ಇದಕ್ಕೂ ಪೂರ್ವದಲ್ಲಿರಬಹುದು" ಎಂದು ಉಸುರಿರುವದು ಕುತೂಹಲವಾಗ ೧೫ ೧೬ ನೆಯ ಶತಮಾನದ ಪುರಾಣಗಳನ್ನು ನಂಬಿಕೊಂಡಿದ್ದ ಮಂದಮತಿಗಳಿಗೆ ಈ ಅಗಮ್ಯ ವಿಷಯವು ಹೇಗೆ ಗೊತ್ತಾಗಬೇಕು? ಈ ಕನ್ನಡಪುರಾಣಗಳಲ್ಲಿಯೂ ಶ್ರೀ ಜಗದ್ಗುರು ಪಂಚಾಚಾರ್ಯರಬಗ್ಗೆ 'ಲಿಂಗೋದ್ಭವ' ವಿಷಯವನ್ನು ಕೈಬಿಟ್ಟಿರುವದಿಲ್ಲ, ಇವುಗಳನ್ನು ರಚಿಸಿದವರ ಕಾಲಮಾನವನ್ನು ತಿಳಿಯದೆ ಮುಗ್ಧಬುದ್ಧಿಯ ಅನೇಕರಲ್ಲಿ ಸಂದರ್ಭಗಳನ್ನು ತಮಗೆ ತೋರಿದಂತೆ ಸೇರಿಸಿರಬಹುದು. ಆದರೆ ನಿಂಹಸದೃಶವಾಗಿರುವ ಶಿವಾಗಮಪ್ರಮಾಣಗ್ರಂಥಗಳ ಮುಂದೆ ನವೀನರಚಿತವಾದ ಕನ್ನಡಪುಸ್ತಕಗಳು ಪ್ರಮಾಣಗಳಾಗಬಲ್ಲವೇ? ಪಾಲ್ಕುರಿಕೆ ಸೋಮನಾಥಕವಿ, ಭೀಮಕವಿ, ಸಿಂಗಿರಾಜ, ಹರಿಹರ, ಬಸವಕವಿ, ಹಂಪೆಯ ವಿರೂಪಾಕ್ಷಪಂಡಿತರೇ ಮೊದಲಾದವರು ರಚಿಸಿದ ಪುರಾಣಗಳು ಒಂದಕ್ಕೊಂದು ವಿರುದ್ಧವಾದ ಅಭಿಪ್ರಾಯಗಳುಳ್ಳವುಗಳಾಗಿ ಶಿವಭಕ್ತಿಯನ್ನು ಮರೆಮಾಚಿ ಕವಿತ್ವದ ಚಾತುರ್ಯವನ್ನು ತೋರಿಸುತ್ತಲಿದ್ದ ಇವರ ಪುರಾಣಗಳು ಸತ್ಯಸಂಶೋಧಕರ ಗಾಳಿಗೆ ಹಾರಿಹೋಗಿ ಹಾರಿಹೋದವು. ವಿದ್ವತ್ಪೂರಿತಕವಿಶಕ್ತಿಯು ಮಾನ್ಯವಾದರೂ ವಿಷಯಗಳ ಅಸತ್ಯತೆಯು ಪ್ರಾಣಸತ್ವ ಮಲಿನ ಕೂಪದಲ್ಲಿ ಉಪ್ಪಿನಮಳೆಯನ್ನು ಸೇರಿಸಿದಂತಾಗಿದೆ.

ಶ್ರೀ ಜಗದ್ಗುರು ಪಂಚಾಚಾರ್ಯರು ದಿವ್ಯದೇಹದವರಾಗಿ ಶಿವಲಿಂಗದಿಂದ ಅವತರಿಸಿ ಅಖಿಲಪ್ರಪಂಚವನ್ನೇ ಉದ್ಧಾರಮಾಡಿದರು. ಈ ಮಹಾಚಾರ್ಯರ ಅಮೋಘವಾದ ಚರಿತ್ರೆಗಳು ವೀರಶೈವಮತದ ಪವಿತ್ರತೆಯನ್ನು ಪ್ರಕಾಶಪಡಿಸುತ್ತಲಿರುವವು. ಉಭಯಕವಿ ವಿರಾಜಿತನೆನಿಸಿ ಜಗದ್ವಿಖ್ಯಾತನಾಗಿರುವ ಯಳಂದೂರು **ಷಡಕ್ಷರಕವಿವರನು** ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರವಿಷಯವನ್ನು ತನ್ನ '**ರಾಜಶೇಖರವಿಲಾಸ**" ವೆಂಬ ಗ್ರಂಥದಲ್ಲಿ—

ಶಿವನಕ್ಷ್ಮೀಕೃಶ್ಚರೇಣ ಪ್ರಭುವಸನಿಯೋಗಂ ರೇಣುಕಾಚಾರ್ಯಮಾ । ಲ್ವಿದುರ್ವಿಕಲ್ಪಾರ್ಥವಿವರಂ ಪೇಕಿ ವರೇಣ್ಯವಿಶ್ವೇಶ್ವರ ಸ ॥ ವಿಮುಕ್ತಂ ಜಂಗಮಾಶ ದೇವ ಸಾಧವ ಮೀಲಕ್ಷೇತ್ರಮುಂ ಪಾವನಂಗೆ । ದ್ವಿ ನೀಕ್ಷಾರ್ಥಂ... ಜನ್ಮಭಜ ವಿಯಿಪ ನಿರ್ವಾಣಮಂ ಪಡೆಯುತ್ತಂ ॥

ಎಂದು ವರ್ಣಿಸಿರುವನು. ಇದನ್ನಾದರೂ ಈ ಹಂಡಬಂಡಜಾತಿಯವರು ನೋಡಿ ಧನ್ಯರಾಗಲಿ. ಶ್ರೀಜಗದ್ಗುರು ಪಂಚಾಚಾರ್ಯರು ಪಾಂಚಭೌತಿಕರು ಶರೀರಿಗಳಾಗಿದ್ದರೆ ಮಾತ್ರ ಇವರ ಬಗ್ಗೆ ನಾನಾಲೌಕಿಕರಂತೆ ಮಾತಾಪಿತೃಗಳ ಸಂಬಂಧವನ್ನು ಕಲ್ಪಿಸಬಹುದಾಗಿತ್ತು. ಆದರೆ, ಆ ಪೂಜ್ಯಪಾದರು ಆ ರೀತಿಯಾಗಿ ರಕ್ತಮಾಂಸಮಯ ಶರೀರಧಾರಿಗಳಾಗದೆ ಕೇವಲ ತೇಜೋಮಯ ಶರೀರಧಾರಿಗಳಾಗಿ ಶಿವಲಿಂಗಗಳಿಂದ ಅವತರಿಸಿದರೆಂದು ಇವರ ವಿಷಯಕವಾಗಿರುವ ಸಕಲಚರಿತ್ರೆಗಳೂ ಮುಕ್ತಕಂಠದಿಂದ ಏಕಾಭಿಪ್ರಾಯವನ್ನೇ ಉದ್ಘೋಷಿಸುತ್ತವೆ. ಸಿದ್ಧಾಂತಶಿಖಾಮಣಿಯ ೩ ನೆಯ ಪರಿಚ್ಛೇದದಲ್ಲಿ ಶ್ರೀ ಪರಮೇಶ್ವರನು ಶ್ರೀ ರೇಣುಕಗಣಾಧೀಶ್ವರನಿಗೆ ಈ ರೀತಿಯಾಗಿ ಅಪ್ಪಣೆಮಾಡುತ್ತಾನೆ. ಅದೇನೆಂದರೆ—

ಸೋಮೇಶ್ವರಾಭಿಧಾನಸ್ಯ ತತ್ರ ವಾಸವತೋ ಮಮ ।
ಅಸ್ಮಾಲ್ಲಿಂಗಾತ್ ಮಹಾಭಾಗ ಲಿಂಗಾತ್ ಪ್ರಾದುರ್ಭವಿಷ್ಯಸಿ ॥
ಮದದ್ವೈತಪರಂ ಶಾಸ್ತ್ರಂ ವೇದವೇದಾಂತಸಮ್ಮತಂ ।
ಸ್ಥಾಪಯಿಷ್ಯಸಿ ಭೂಲೋಕೇ ಸರ್ವೇಷಾಂ ಹಿತಕಾರಕಂ ॥
ಮಮ ಪ್ರತಾಪಮತುಲಂ ಮದ್ಭಕ್ತಾನಾಂ ವಿಶೇಷತಃ ।
ಪ್ರಕಾಶಯ ಮಹೀಮಧ್ಯೇ ವೇದಮಾರ್ಗಾನುಸಾರತಃ ॥

'ಎಲೈ, ರೇಣುಕಗಣಾಧೀಶ್ವರನೇ! ಕೊಲ್ಲಿಪಾಕಿ ಕ್ಷೇತ್ರದಲ್ಲಿ ಸೋಮೇಶ್ವರಾಭಿಧಾನದಿಂದನೆಲಸಿರುವ ನನ್ನ ಲಿಂಗರೂಪಶರೀರದಿಂದ ನೀನು ಮಾನವರೂಪವನ್ನು ಧರಿಸದೆ ಅರ್ಥಾತ್ ತೇಜೋಮಯಶರೀರಿಯಾಗಿ ಅವತರಿಸು. ಸಮಸ್ತ ಮಾನವರಿಗೆ ಮೋಕ್ಷದಾಯಕವೂ, ವೇದವೇದಾಂತಸಮ್ಮತವೂ ಆದ ಶಿವಾದ್ವೈತಸಿದ್ಧಾಂತವನ್ನು ಭೂಲೋಕದಲ್ಲಿ ಸ್ಥಾಪಿಸು. ನೀನು ಭೂವಲಯದಲ್ಲಿ ನನ್ನ ಮಹಿಮೆಯನ್ನೂ, ವಿಶೇಷವಾಗಿ ನನ್ನ ಭಕ್ತರ ಮಹಿಮೆಯನ್ನೂ ವೇದಮಾರ್ಗಾನುಸಾರವಾಗಿ ಪ್ರಕಾಶಪಡಿಸು" ಈ ರೀತಿಯಾಗಿ ಪರಮೇಶ್ವರನು ಅಪ್ಪಣೆಕೊಡಿಸಿರುವ ವಿಷಯವನ್ನು ಪರಿಶೀಲಿಸಿದರೆ, ಶ್ರೀ ಜಗದ್ಗುರು ಪಂಚಾಚಾರ್ಯರು ಮಾನವರೂಪವನ್ನು ಧರಿಸದೆ, ಕೇವಲ ತೇಜೋಮಯಶರೀರಿಗಳಾಗಿ ಲಿಂಗಮುಖದಿಂದ ಅವತರಿಸಿ ಪರಮವೈದಿಕವಾದ ವೀರಶೈವಸಿದ್ಧಾಂತವನ್ನು ಈ ಭೂಮಂಡಲದಲ್ಲಿ ಸ್ಥಾಪಿಸಿದರೆಂದು ಸ್ಪಷ್ಟವಾಗುತ್ತದೆ.

ಈ ಗುರುಸಾರ್ವಭೌಮರ ಲಿಂಗಾವತಾರಸ್ಮಾರಕದ ಮಹೋತ್ಸವಗಳು ಆಯಾಕ್ಷೇತ್ರಗಳಲ್ಲಿ ವಿರಾಜಿಸುತ್ತಿರುವ ಧರ್ಮಪೀಠಗಳಲ್ಲಿ ಅನಾದಿಕಾಲದಿಂದ ಇಂದಿನವರೆಗೂ ನಡೆಯುತ್ತ ಬಂದಿರುತ್ತವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಫಾ|| ಶು|| ೧೩ ರಂದು ಲಿಂಗದಿಂದ ಅವತರಿಸಿದುದರಿಂದ ಆ ಪರಮಪವಿತ್ರತಿಥಿಯ ದಿವಸ ರಂಭಾಪುರಿ (ಬಾಳೆಹಳ್ಳಿ) ಯಲ್ಲಿ ಪ್ರತಿವರುಷ ಮಹಾರಥೋತ್ಸವವು ಅತ್ಯಂತ ವೈಭವದಿಂದ ನೆರವೇರುತ್ತದೆ. ಇದರಂತೆ ಶ್ರೀ ಜಗದ್ಗುರು ದಾರುಕಾಚಾರ್ಯರು ವೈಶಾಖ ಶುಕ್ಲ ೫ ತಿಥಿಯ ದಿವಸ ಲಿಂಗದಿಂದ ಅವತರಿಸಿದುದರಿಂದ ಅಂದು ಉಜ್ಜಯಿನೀ ಸದ್ಧರ್ಮಸಿಂಹಾಸನದಲ್ಲಿ ಮಹಾರಥೋತ್ಸವವು ಮಹಾವೈಭವದಿಂದ ನೆರವೇರುತ್ತದೆ. ಶ್ರೀಜಗದ್ಗುರು ಏಕೋರಾಮಾರಾಧ್ಯರ ಲಿಂಗಾವತಾರವು ವೈಶಾಖ ಕೃಷ್ಣ ತೃತೀಯಾ, ಶ್ರೀ ಜಗದ್ಗುರು ಪಂಡಿತಾರಾಧ್ಯ ಹಾಗೂ ವಿಶ್ವಾರಾಧ್ಯರ ಲಿಂಗಾವತಾರವು ಮಾಘ ಬ|| ೧೪ ಮಹಾಶಿವರಾತ್ರಿಕಾಲಗಳಲ್ಲಿ ಆದುದರಿಂದ ಆಯಾಯ ತಿಥಿಗಳಲ್ಲಿ ಹಿಮವತ್ಕೇದಾರ (ಊಖೀಮಠ), ಕಾಶೀ ಮತ್ತು ಶ್ರೀಶೈಲ ಮಹಾಕ್ಷೇತ್ರ ಧರ್ಮಪೀಠಗಳಲ್ಲಿ ಮಹೋತ್ಸವಾದಿಗಳು ವಿಶೇಷ ವೈಭವದೊಡನೆ ಜರಗುತ್ತಲಿರುವದು ಸುಪ್ರಸಿದ್ಧ ವಿಷಯವಾಗಿದೆ. ಶ್ರೀಜಗದ್ಗುರುಪಂಚಾಚಾರ್ಯರು ಅವತಾರಮಾಡಿದಂದಿನಿಂದಲೂ ಆಯಾ ಪವಿತ್ರ ತಿಥಿಗಳಲ್ಲಿ ಜಯಂತ್ಯುತ್ಸವಗಳು ಭರತಖಂಡದಲ್ಲಿ ಬಹು ಅಟ್ಟಹಾಸದಿಂದ ನೆರವೇರುತ್ತಲಿವೆ. ವೀರಶೈವ ಧರ್ಮಾನಿಷ್ಠತತ್ವದ ನಾಲಿಯು ಬೀಸತೊಡಗಿದಂದಿನಿಂದಂತೂ ಅಖಿಲ ವೀರಶೈವಪ್ರಪಂಚವೇ ಶ್ರೀ ಜಗದ್ಗುರುಗಳವರ ಜಯಂತ್ಯುತ್ಸವವನ್ನು ಅಸಾಧಾರಣವೈಭವದಿಂದ ನೆರವೇರಿಸತೊಡಗಿದೆ. ಸಾಂಕರ್ಯದ ಸಾಂಕ್ರಾಮಿಕರೋಗಕ್ಕೀಡಾದ ಪಾಪಾಂಧರು ಇವನ್ನೆಲ್ಲಾ ಪ್ರತ್ಯಕ್ಷವಾಗಿ ನೋಡುತ್ತಿದ್ದರೂ ಆ ಗುರುಸಾರ್ವಭೌಮರ ದಿವ್ಯಪ್ರಭಾವವನ್ನು ಹೀಯಾಳಿಸುತ್ತಿರುವದು ಇವರ ಪಾಪಪ್ರಭಾವವೆಂದೇ ಹೇಳಬೇಕಾಗಿದೆ.

ವೀರಶೈವ ಮತಗ್ರಂಥಗಳನ್ನು ವಿಶೇಷ ಪ್ರಯತ್ನದಿಂದ ಸಂಗ್ರಹಗೊಳಿಸಿ ಅಖಿಲವೀರಶೈವ ಪ್ರಪಂಚಕ್ಕೆ ಮಹೋಪಕಾರಮಾಡಿದ ಸೊಲ್ಲಾಪುರದ ರಾ|| ಬ|| ವಾರದ ಮಲ್ಲಪ್ಪನವರು ಮುದ್ರಿಸಿದ ಅನೇಕ ಗ್ರಂಥಗಳಲ್ಲಿ ವೀರಶೈವ ಮತಸ್ಥಾಪನಾಚಾರ್ಯರ ಲಿಂಗಾವತಾರ ವಿಷಯವು ಪ್ರಕಾಶಿಸುತ್ತದೆ. ಇದನ್ನಾದರೂ ಈ ದಿವಾಂಧರ ನೋಡಬಾರದೇ? ಆ ಅದ್ಭುತಪ್ರಕಾಶವು ಈ ದಿವಾಂಧರ ಕಣ್ಣುಗಳನ್ನು ಕುಕ್ಕುತ್ತಿರಬಹುದು ಇಷ್ಟು!

ವೀರಶೈವಮತವನ್ನು ಐವರು ಆಚಾರ್ಯರು ಲಿಂಗೋದ್ಭವರಾಗಿ ಸ್ಥಾಪಿಸಿದರೆಂದು ನ್ಯಾಯಕೋರ್ಟುಗಳಲ್ಲಿ ನ ಪ್ರಸಿದ್ಧಜಡ್ಜರು ಅಭಿಪ್ರಾಯ ಕೊಟ್ಟಿರುವರು. ಕಾಶೀಜಗದ್ಗುರು ಪೀಠದ ಬಗ್ಗೆ ಬನಾರಸ್ ಸಬ್ ಜಡ್ಜ್ ಕೋರ್ಟಿನಲ್ಲಿ ನಡೆದ ಒಂದು ಪ್ರಕರಣದ ಜಡ್ಜ್‌ಮೆಂಟಿನಲ್ಲಿ ಸಬ್ ಜಡ್ಜರಾದ ಮಿ|| ಬಾಬುಶಿಂವ್ಸಾಸಿಪ್ರಸಾದರವರು ಹೀಗೆ ಬರೆದಿರುವರು.

"J N Farquhar M A, D Litt, in his book entitled **the Religious quest of India** gives the History of Veerasaivas beginning from page 259 He says that 'the tradition is that the seat was founded by fine ascetics—**Ekorama, Panditaradhya, Revanaradhya, Marula** and **Viswaradhya** who are said to have sprung from the heads of Shiva, incarnate age after age. These are regarded very ancient.

ಜೆ ಎನ್ ಫಾರ್ಕುಹಾರ್ ಎಂ ಎ, ಡಿ ಲಿಟ್, ಎಂಬವರು ತಮ್ಮ 'ರಿಲಿಜಿಸ್ ಕ್ವೆಸ್ಟ್ ಆಫ್ ಇಂಡಿಯಾ' ಎಂಬ ಗ್ರಂಥದಲ್ಲಿ ೨೫೯ನೇ ಪುಟದಿಂದ ವೀರಶೈವರ ಚರಿತ್ರೆಯನ್ನು ಕೊಟ್ಟಿರು

[6ನೇ ಪುಟವನ್ನು ನೋಡಿ]

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ಫೈಲಾಬು ೮|| ಪಂಚ ವಿಂಗೆ ಒಂಬತ್ತು ವರ್ಷಗಳು ತುಂಬಿ ಹತ್ತನೆಯ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕ ನಿಷ್ಕಾರಣವಾಗಿ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ ಪಿ ಮಾಡಬೇಕಾ ಗುತ್ತದೆ. ವಿ ಪಿ ಮಾಡುವುದರಿಂದ ಸಮಗೂ ತೊಂ ದರೆಯಾಗುವುದು ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗ ಬೀಳುವುದು. ಆದದರಿಂದ ಚಂದಾದಾರರ ಲ್ಲರೂ ಕೂಡಲೆ ೨ ರೂ ೮ ಆಣೆಗಳನ್ನು ಮನಿಯಾ ರ್ಡರ್ ದ್ವಾರಾ ಕಳುಹಿಸಬೇಕು. ವಿ ಪಿ ಮಾಡಿದರ ೨ ರೂ ೧೩ ಆಣೆ ಬೀಳುವುದು. ಒಂದೇ ಗ್ರಾಮದಲ್ಲಿ ಹಲವು ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟು ಕೂಡಿಸಿ ಒಂದೇ ಸಾರ ಮನಿಯಾರ್ಡರ್ ಮಾಡಿಸ ಬೇಕ. ಹೀಗೆ ಮಾಡುವದರಿಂದ ಸರ್ವರಿಗೂ ಹಿತ ವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾ ರರು ತಮ್ಮ ಹೆಸರಿನ ಕಕ್ಷದಲ್ಲಿರುವ ನಂಬರನ್ನು ಮಾತ್ರ ಬರೆಯಿಟ್ಟು ಮರೆಯದೆ ಬರೆಯಬೇಕು. ನಂಬರು ೫ ಪಿನವಿಕ್ಕದ ಲಾಂಗವಾಗುವದು.

ಸಂ —

ಪಂಚಾಚಾರ್ಯ ಪ್ರಭಾ.

೧೯೩೬ ನೆಯ ಮೇ ತಾ|| ೪ ನೆಯ ಸೋಮವಾರ

ಸೂತಕ ವಿಚಾರ.

ವೀರಶೈವಮತದಲ್ಲಿ ಜನ್ಮವೆತ್ತಿದ ಸ್ತ್ರೀಯರಾಗಲಿ, ಪುರುಷರಾಗಲಿ ಎಲ್ಲರೂ ಗುರುವಿನಿಂದ ದೀಕ್ಷಾಸಂಸ್ಕಾರ ಪೂರ್ವಕವಾಗಿ ಅನುಗ್ರಹಿಸಲ್ಪಟ್ಟ ಇಷ್ಟಲಿಂಗವನ್ನು ಎಡಬಿಡದೆ ಮರಣಪರ್ಯಂತವಾಗಿ ಶರೀರದಲ್ಲಿ ಧರಿಸಿ, ಪ್ರತಿನಿತ್ಯವೂ ಸ್ನಾನಸಂಧ್ಯಾದಿಗಳಿಂದ ಪರಿಶುದ್ಧರಾಗಿ ಪೂಜಿಸುತ್ತಿರಬೇಕೆಂಬ ನಿತ್ಯವಿಧಿಯು ಋಗ್ವೇದಾದಿವೇದ ಗಳಲ್ಲಿ ಹೇಳಲ್ಪಟ್ಟಿರುವಂತೆ ಆ ವೇದಗಳನ್ನು ಅನುಸ ರಿಸುವ ಮನು ಪರಾಶರ-ಗೌತಮ-ಶಾತಾತಪಾದ್ಯನಂತ ಸ್ಮೃತಿಗಳ ಆಧಾರದಿಂದಲೂ ಸಿದ್ಧವಾಗುವುದು. ಈ ಸ್ಮೃತಿಗಳಿಂದ ಸಿದ್ಧವಾದ ಲಿಂಗಧಾರಣ ಲಿಂಗಪೂಜಾ ರೂಪವಾದ ಮಹಾವ್ರತವನ್ನು ವೀರಶೈವಮತಸ್ಥಾಪಕ ರಾದ ಶ್ರೀ ಜಗದ್ಗುರು ರೇಣುಕಾದಿಪಂಚಾಚಾರ್ಯರೂ ವ್ಯಾಸಾದಿಮಹರ್ಷಿಗಳೂ ನಾನಾಮುಖದಿಂದ ಪುಷ್ಟೀ ಕರಿಸಿರುತ್ತಾರೆ. ಆದರೂ ಸ್ತ್ರೀಬಾಲ ಸಾಮಾನ್ಯವಾಗಿ ಎಲ್ಲರೂ ಪ್ರತಿದಿವಸವೂ ತಪ್ಪದಂತೆ ಲಿಂಗವನ್ನು ಅಂಗ ದಲ್ಲಿ ಧರಿಸಿರುವುದಾಗಲಿ, ಪೂಜಿಸುತ್ತಿರುವದಾಗಲಿ ಸಂಭವಿಸುವುದಿಲ್ಲ. ಏಕೆಂದರೆ—ಸ್ತ್ರೀಯರು ರಜಸ್ವ ಲೆಯರಾದಾಗ ಅಂಥವರೊಡನೆ ಸಂಭಾಷಣಮಾಡುವು ದಾಗಲಿ, ಸ್ಪರ್ಶಮಾಡುವುದಾಗಲಿ, ಕಣ್ಣಿನಿಂದ ನೋಡು ವುದಾಗಲಿ ಯಾವುದಕ್ಕೂ ಅರ್ಹರಾಗುವುದಿಲ್ಲ. ಇಂಥ ಬಹಿಷ್ಠೆಯರಾದ ಸ್ತ್ರೀಯರು ಧರ್ಮಶಾಸ್ತ್ರ ದಲ್ಲಿ ನಿರ್ಣಯವಾದ ದಿವಸಗಳು ಕಳೆಯುವವರೆಗೂ ದೇವರ ದರ್ಶನಸ್ಪರ್ಶನಪೂಜನಾದಿಗಳಿಗಂತೂ ಯೋ ಗ್ಯರೇ ಅಲ್ಲವೆಂದು ಭಾರತೀಯ ಧರ್ಮಶಾಸ್ತ್ರಗಳು ರಜಸ್ವಲಾ ಸ್ತ್ರೀಯರನ್ನೂ ಪ್ರಸವಿಸಿದ ಸ್ತ್ರೀಯರನ್ನೂ ನಿಷೇಧಮಾಡುತ್ತವೆ. ಧರ್ಮಶಾಸ್ತ್ರನಿಷಿದ್ಧವಾದ ಈ ಸಮಯದಲ್ಲಿ ಪವಿತ್ರವಾದ ಶಿವಲಿಂಗವನ್ನು ಧರಿಸುವು ದೆಂತು? ಮತ್ತು ಪೂಜಿಸುವುದೆಂತು? ರಜಸ್ವಲಾದಿ ದೋಷಗಳಿಂದೊಡಗೂಡಿದ ಸ್ತ್ರೀಯರು ತಾವು ಧರಿಸಿ ರುವ ಶಿವಲಿಂಗಮೂರ್ತಿಯನ್ನು ತೆಗೆದಿಡದೆ ಪ್ರತಿ ದಿವಸದಂತೆ ಅಪವಿತ್ರದಿವಸಗಳಲ್ಲಿಯೂ ಪೂಜಿಸುತ್ತಲೇ ಬಂದರೆ, ಅಂಥ ವೀರಶೈವ ಸ್ತ್ರೀಯರ ಅಶುಚಿಯಾಗಿ ರುವ ಶರೀರಸಂಬಂಧದಿಂದ ಶಿವಲಿಂಗದಲ್ಲಿ ನೆಲೆಗೊಂಡ ಶಿವಕಳೆಯೂ ಹೊರಟುಹೋಗಿ ಲಿಂಗವೂ ಸಹ ಅಶು ಚಿಯಾಗಿಹೋಗುವ ಸಂಭವವು ಪ್ರಾಪ್ತವಾಗುವುದೆಂ ದರೆ ಅದು ವೀರಶೈವಸಿದ್ಧಾಂತಕ್ಕೆ ಸರಿಹೋಗುವುದಿಲ್ಲ. ಸ್ಥಾವರಲಿಂಗಗಳಂತೆ ಇಷ್ಟಲಿಂಗವನ್ನು ಪುನಃ ಪುನಃ ಸಂಸ್ಕರಿಸಕೂಡದೆಂದು ಸಿದ್ಧಾಂತನಿಯಮವಿರುತ್ತದೆ.

ಸ್ತ್ರೀಣಾಂ ಶಾಪುಪತಂ ಸ್ಯಾತ್ ಲಿಂಗೇ ಪ್ರತಿಷ್ಠಾ ।
ಏವಂ ಪ್ರತಿಪತ್ತ್ಯಾ ನ ಪಾಶುಪತಾ ಪೂಜ್ಯಾಯೇತ್ ॥

ಇತ್ಯಾದಿ ವಾಕ್ಯಗಳು ಲಿಂಗಧಾರಣವನ್ನು ನಿಷೇಧಗೊಳಿ ಸಿರುತ್ತವೆ. ಲಿಂಗಧಾರಣವಿರೋಧಿಗಳಾದ ವಾದಿಗಳು ಹೀಗೆ ಅನಂತಶಂಕೆಗಳನ್ನು ಮಾಡುವುದರಿಂದ ರಜಸ್ವ ಲಾದಿ ಸಾಧಾರಣ ಕಾಲಗಳಲ್ಲಿಯೂ ಪ್ರತಿದಿವಸದ ತಪ್ಪದೆ ಲಿಂಗವನ್ನು ಧರಿಸಿದ್ದು ಪೂಜಿಸುತ್ತಿರಬೇಕೆಂಬ ನಿಧಾ ನವು ಯದ್ಯಪಿ ಪ್ರಮಾಣಸಿದ್ಧವಾದರೂ ಯುಕ್ತಿಗ ವಿರೋಧವುಂಟಾಗುವದರಿಂದ ಲಿಂಗಧಾರಣವನ್ನು ವಿಧಿಸುವ ಶ್ರುತಿಸ್ಮೃತ್ಯಾದಿ ವಾಕ್ಯಗಳು ಅಂತ ಲಿಂಗಧಾರಣವಿಷಯಕಗಳಾಗಿ ಪ್ರಯುಕ್ತವಾದ ವಾಗುವುದೆಂದು ವಾದಿಗಳು ನಾನಾವಿಧ ಶಂಕೆಯನ್ನು ಸಿದ್ಧಾಂತಿಗಳು ಪರಿಹರಿಸಿಕೊಳ್ಳಬೇಕಾಗಿದೆ.

ಶ್ರುತಿ ಸ್ಮೃತಿ ಶಾಸ್ತ್ರಗಳಲ್ಲಿ ಸಾಮಾನ್ಯಶಾಸ್ತ್ರ ವೆಂದೂ ವಿಶೇಷಶಾಸ್ತ್ರವೆಂದೂ ಎರಡು ಪ್ರಕಾರವಾದ ಶಾಸ್ತ್ರಗಳನ್ನು ಹೇಳಿರುತ್ತಾರೆ. ಇವೆರಡರಲ್ಲಿ ಸಾಮಾ ನ್ಯಶಾಸ್ತ್ರವೆಂಬುದ ವಿಶೇಷಶಾಸ್ತ್ರಸ್ಥಿತಿಯಿಂದ ದುರ್ಬ ಲವಾಗಿಹೋಗುತ್ತದೆ. ವಿಶೇಷಶಾಸ್ತ್ರ ಪ್ರವರ್ತಿಸದ ಕಡೆಯಲ್ಲಿ ಮಾತ್ರ ಸಾಮಾನ್ಯಶಾಸ್ತ್ರ ಪ್ರವರ್ತಿಸು ತ್ತದೆ. ಎಂದರೆ ಸಿಧವಿಷಯ ಅಧಿಕರಾದ ಮಾನವ ರೆಲ್ಲರೂ ಅಹಿಂಸಾಪರರಾಗಿರಬೇಕಾಗಿದೆ. ಎಂದರೆ "ಮಾ ಹಿಂಸ್ಯಾತ್ ಸರ್ವಾ ಭೂತಾನಿ" "ನ ಮಾಂಸ ಮಶ್ನೀಯಾತ್" "ನೋಪಜನ್ಯಂ ಕಸ್ಯಚಿದ್ದದ್ಯಾತ್ ನಾದ್ಯಾಚ್ಛಿಷ್ಟಂ" ಇತ್ಯಾದಿ.

ಯಾವ ಪ್ರಾಣಿಗೂ ಹಿಂಸೆಯನ್ನು ಮಾಡಕೂಡ ದು, ಮಾಂಸಭಕ್ಷಣವನ್ನು ಮಾಡಲಾಗದು. ಉಚ್ಛಿ ಷ್ಟವನ್ನು ಯಾರೂ ಪರಿಷ್ಕರಿಸಿ ಭಕ್ಷಿಸಲಾಗದು ಇತ್ಯಾದಿ ಶ್ರುತಿಸ್ಮೃತ್ಯಾದಿವಾಕ್ಯಗಳಲ್ಲಿಯೂ ಸಾಮಾನ್ಯ ವಾಕ್ಯಗಳಿರುತ್ತವೆ.

ಸೋಮಸ್ಯ ಉಚ್ಛಿಷ್ಟಂ ಭಕ್ಷಯೇತ್ ಯಜ್ಞೀಯಂ ಪಶುಮಾಲಭೇತ

ಸೋಮಯಾಗೀಯವಾದ ಉಚ್ಛಿಷ್ಟವನ್ನು ಭುಂಜಿ ಸಬೇಕು. ಯಜ್ಞೀಯವಾದ ಪಶುವನ್ನು ಹಿಂಸಿಸ ಬೇಕೆಂದು ಅದೇ ಶ್ರುತಿಸ್ಮೃತ್ಯಾದಿಗಳಲ್ಲಿ ಅದಕ್ಕೆ ವಿರೋಧವಾಗಿ ವಿಶೇಷ ವಾಕ್ಯಗಳು ಹೇಳಲ್ಪಟ್ಟಿರು ತ್ತವೆ. ಈ ವಿಶೇಷವಾಕ್ಯಗಳು ಸಾಮಾನ್ಯವಾಕ್ಯಗಳನ್ನು ದುರ್ಬಲಗೊಳಿಸಿ ಅಂತಹ ವಿಶೇಷವಾಕ್ಯಗಳು ಪ್ರವರ್ತಿ ಸುವಕಾಲದಲ್ಲಿ ಆ ಸಾಮಾನ್ಯವಾಕ್ಯಗಳು ಅಪ್ರಮಾಣ ಗಳಾಗಿಹೋಗುತ್ತವೆಂಬ ಪೂರ್ವಮೀಮಾಂಸಾಶಾಸ್ತ್ರದ ನಿಯಮವಿರುತ್ತದಷ್ಟೆ! ಅದರಂತೆ 'ಸರ್ವಲಿಂಗಂ ಸ್ಥಾಪಯತಿ' ಮುಂತಾದ ಶ್ರುತಿವಾಕ್ಯಗಳಲ್ಲಿ ಲಿಂಗ ಪೂಜಾದಿಗಳ ಯಾವಜ್ಜೀವಕರ್ತವ್ಯವಾದ ಮಹಾವ್ರತ ವೆಂದು ವಿಧಾನಮಾಡಲ್ಪಟ್ಟಿದ್ದು ಮಧ್ಯದಲ್ಲಿ ಆ ಲಿಂಗ ಧಾರಣಪೂಜಾಪ್ರತಿಬಂಧಕಗಳಾದ ಸೂತಕಗಳು ಒದ ಗಿದಲ್ಲಿ ಆ ಮಹಾವ್ರತವನ್ನೇ ನಿರ್ವಹಿಸಿ ಮುಕ್ತಿಯನ್ನು ಸಂಪಾದಿಸಲೆಂದ —

ಸ್ವದೇಹೇ ಯಸ್ಮಿನ್ ಪ್ರಸೂತೇ ತ್ರ್ಯಹಂ ಸೂತಕಂ ಸತ್ಯ ನಿಶ್ಚಯಃ ।
ಲಿಂಗಾರ್ಚನರತಾ ಯಾ ಸ್ಯಾತ್ ನಾಸ್ಯಾ ವೈ ಸೂತಕಂ
ರಜಃ ಪ್ರಸೂತಿಕಾಯಾಶ್ಚ ಸೂತಕಂ ನೈವ ವಿದ್ಯತೇ ॥
ಲಿಂಗಾರ್ಚನರತಾ ನಾರೀ ಸೂತಕೇ ತು ರಜಸ್ವಲಾ ।
ಲಿಂಗಸ್ಯ ಧಾರಣಾ ನಾಯಾ ಶೋಧಿತಾ ಕೋಟಿಗುಣಾ ಶ್ರುತಿಃ ॥
ತದ್ವಾರಣಾತ್ ಪ್ರಮಾಣಾಚ್ಚ ಯತೀನಾಂ ಸೂತಕಾದಯಃ ।

ಲಿಂಗಧಾರಿಣಿಯಾದ ಸ್ತ್ರೀಯರು ರಜಸ್ವಲೆಯಾದರೆ ಪ್ರಸವಿಸಿದರೆ ತಾವು ಅಶುಚಿಭಾವನೆಯನ್ನು ಮಾಡದೆ ಲಿಂಗಪೂಜಾಸಂಬಂಧವಾದ ಮಹಾವ್ರತವನ್ನು ನಡೆಯಿ ಸಲೇಬೇಕೆಂದು ಸಿದ್ಧಾಂತಶಿಖಾಮಣಿ ವೀರಾಗಮಾದಿಗ ಳಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವುದರಿಂದ ಧರ್ಮಶಾಸ್ತ್ರ ವಿಹಿತವಾದ ಆಶೌಚ ನಿರ್ಣಯವೆಂಬ ಸಾಮಾನ್ಯ ವಾಕ್ಯ ಗಳು ಮೇಲಿನ ವಿಶೇಷ ವಾಕ್ಯಗಳ ದೃಷ್ಟಿಯಲ್ಲಿ ದುರ್ಬಲ ವಾಗಿ ವಿಶೇಷ ಶಾಸ್ತ್ರಗಳೇ ಪ್ರಮಾಣಗಳಾಗತ್ತವೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರ ಹುಜೂರು ಸೆಕ್ರೆಟರಿ ಯವರಾದ ಮಿ|| ಟಿ ತಂಬುಚೆಟ್ಟಿಯವರು ಮುಂದಿನ ಸೆಪ್ಟೆಂಬರ್ ತಿಂಗಳಿನಲ್ಲಿ ಕೆಲಸದಿಂದ ರಿಟೈರ್ ಆಗುವ ರೆಂದು ಸುದ್ದಿಯಿದ್ದು ಆದರೆ ಶ್ರೀ ಚೆಟ್ಟಿರವರಿಗೆ ಘನ ಸರ್ಕಾರದವರು ಇನ್ನೊಂದು ವರ್ಷ ಎಕ್ಸ್‌ಟೆನ್‌ಷನ್ ಕೊಟ್ಟಿರುವರೆಂದು ತಿಳಿದುಬಂದಿದೆ.

ಬೆಂಗಳೂರಿನಲ್ಲಿರುವ ರಿಟೈರ್ಡ್ ಡಾ|| ಉಸ್ಮಾನ್ ಸಾಹೇಬರ ಬಂಗಲೆಯಿಂದ ಕೆಲವು "ಟ್ರೋಫಿ" ಕಪ್ಪುಗಳು ಕಳುವಾದುವೆಂದು ಪೋಲೀಸರಿಗೆ ದೂರು ಬಂದು ಶೋಧವು ನಡೆದು ಆ ಕಪ್ಪುಗಳನ್ನು ಒಬ್ಬ ಮಾರ್ವಾಡಿಯಲ್ಲಿ ಗಿರವಿ ಇಟ್ಟಿರುವುದಾಗಿ ತಿಳಿಯಿತು ಕದ್ದವನನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ.

ಬೆಂಗಳೂರಿನಲ್ಲಿರುವ ಹುಚ್ಚಾಸ್ಪತ್ರೆಯ ಕಟ್ಟಡವು ಸ್ಥಳಸಂಕೋಚಾದಿಗಳಿಂದ ಬಹಳ ಅನನುಕೂಲವಾಗಿ ರುವುದರಿಂದ ಲಾಲ್‌ಬಾಗಿನ ಹಿಂದೆ ಪ್ರತ್ಯೇಕವಾಗಿ ನಿರ್ಮಿಸುವ ಕಟ್ಟಡವನ್ನು ಕಟ್ಟಲು ಸರ್ಕಾರದವರು ೨,೧೬,೦೦೦ ರೂ ಗಳನ್ನು ಮಂಜೂರ್ ಮಾಡಿರುವರೆಂದೂ, ಈ ಕಟ್ಟಡದ ಕೆಲಸವು ಇಷ್ಟರಲ್ಲಿಯೇ ಪ್ರಾರಂಭವಾ ಗುವುದೆಂದೂ ತಿಳಿದುಬರುತ್ತದೆ.

ಮುಂಡ್ಯದ ಸಕ್ಕರೆ ಕಾರ್ಖಾನೆಯ ಹಾಲಿ ಮ್ಯಾನೇ ಜಿಂಗ್ ಡೈರೆಕ್ಟರಾಗಿರುವ ಮಿ|| ಸಿ ಜೆ ಎಚ್ ವನ್ನಿಂಗ್‌ರವರು ಸರ್ಕಾರದವರೊಡನೆ ಒಪ್ಪಂದಮಾಡಿ ಕೊಂಡು ಕೆಲಸಮಾಡುತ್ತಿರುವರು. ಅವರ ಅವಧಿಯು 1937 ನೆಯ ಜನವರಿಗೆ ಮುಗಿಯುವುದು. ಆದರೆ ಘನ ಸರ್ಕಾರದವರು ಮಿ|| ವೆನ್ನಿಂಗರವರಿಗೆ ಮತ್ತೆ ಎರಡು ವರುಷಗಳ ಅವಧಿಯನ್ನು ಕೊಟ್ಟಿರುವರೆಂದು ಕೇಳುತ್ತೇವೆ.

ಬಿನ್ನಿಮಿಲ್ಲಿನ ಏಜಂಟರಾದ ಮಿ|| ರಾಮನಾರಾಯಣ ರವರು ಮೈಸೂರುಬ್ಯಾಂಕಿನ ಪಕ್ಕದಲ್ಲಿರುವ ಹುಚ್ಚರ ಆಸ್ಪತ್ರೆಯ ಹತ್ತಿರ ಒಂದು ಹೆರಿಗೆ ಆಸ್ಪತ್ರೆಯನ್ನು ಕಟ್ಟಲು ರೆಡ್‌ಕ್ರಾಸ್ ಸಂಸ್ಥೆಯವರಿಗೆ 10000 ರೂ ಗಳನ್ನು ದಾನಮಾಡಿರುವರೆಂದೂ ಈ ಕಟ್ಟಡದ ಶಂಕು ಸ್ಥಾಪನೋತ್ಸವವನ್ನು ಈ ತಿಂಗಳ ೧ನೇ ತಾರೀಖು ಸ್ವೀಕರಿಸಿ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ರವರು ನೆರವೇರಿಸುವರೆಂದೂ ಕೇಳುತ್ತೇವೆ.

ಚಾಮರಾಜನಗರದಿಂದ ಸತ್ಯಮಂಗಲಕ್ಕೆ ರೈಲ್ವೆ ರಸ್ತೆಯನ್ನು ವಿಸ್ತರಿಸುವ ವಿಚಾರದಲ್ಲಿ ನೂತನವಾಗಿ ಆ ಪ್ರದೇಶದ ಸರ್ವೆಯನ್ನು ನಡೆಸಬೇಕೆಂದೂ ಅದಕ್ಕೆ ತಗಲುವ ಖರ್ಚನ್ನು ಮೈಸೂರು ಸರ್ಕಾರದವರು ವಹಿ ಸಬೇಕೆಂದೂ ಬ್ರಿಟಿಷ್ ಸರ್ಕಾರದವರು ಸೂಚಿಸಿ ದ್ದರು. ಇದಕ್ಕೆ ಉತ್ತರವಾಗಿ ಮೈಸೂರು ಸರ್ಕಾರ ದವರು ಸರ್ವೆಯ ಖರ್ಚನ್ನು ವಹಿಸಲು ತಾವು ಸಿದ್ಧ ರಿಲ್ಲವೆಂದೂ, ಅದಕ್ಕೆ ಬದಲಾಗಿ ಬೇರೆ ಏರ್ಪಾಡನ್ನು ತಾವು ಮಾಡುವರೆಂದೂ, ಘಟ್ಟಪ್ರದೇಶದಲ್ಲಿ ರೈಲ್ವೆ ಯನ್ನು ಹಾಕಿಸಲು ಆಗುವ ಖರ್ಚನ್ನು ತಾವೇ ವಹಿಸಿ ನಡೆಸುವ ಆಡಳಿತವನ್ನು ತಮಗೆ ಬಿಟ್ಟು ಕೊಟ್ಟಲ್ಲಿ ಆಗಬಹುದೆಂದೂ ಬ್ರಿಟಿಷ್ ಸರ್ಕಾರಕ್ಕೆ ತಿಳುಹಿಸಿರುತ್ತಾರೆಂದು ತಿಳಿದುಬರುತ್ತದೆ.

ವರ್ತಮಾನಸಂಗ್ರಹ.

ಡಾಕ್ಟರುಗಳಿಗೆ ಸುಸಮಯ ೩ ಕೋಟಿ ರೂಪಾಯಿಗಳ ದಾನ

ಹೈದರಾಬಾದ ನಿಜಾಮರ ನೊಮ್ಮಗನಿಗೆ ಅಜೀರ್ಣ ವ್ಯಾಧಿಯು ಬಂದಿರುತ್ತದಂತೆ! ಎಷ್ಟು ಔಷಧೋಪ ಚಾರಗಳು ನಡೆದರೂ ಅಜೀರ್ಣವು ಗುಣವಾಗಿರುವು ದಿಲ್ಲವಂತೆ! ಆದ್ದರಿಂದ ಯಾರಾದರೂ ಈ ಅಜೀರ್ಣ ವನ್ನು ಗುಣಮಾಡುವದಾದರೆ ಅವರಿಗೆ ೩ ಕೋಟಿ ರೂಪಾಯಿಗಳನ್ನು ಕೊಡುವುದಾಗಿ ನಿಜಾಮರು ಪ್ರಕ ಟಿಸಿರುತ್ತಾರೆ. ಯುವರಾಣಿಯವರು ರಾಜಕುಮಾರ ರನ್ನು ಯೂರೋಪಿಗೆ ಕರೆದುಕೊಂಡು ಹೋಗುವರೆಂದು ವದಂತಿಯಿದೆ.

೧೩೦ ವರ್ಷ ವಯಸ್ಸಿನ ಮುದುಕನ ಮದುವೆ!

ಅಲೆಕ್ಸಾಂಡ್ರಿಯಾದಲ್ಲಿ ಒಬ್ಬ ೧೩೦ ವಯಸ್ಸಿನ ಮುದುಕನು ೨೫ ವರ್ಷ ವಯಸ್ಸಿನ ಯುವತಿಯನ್ನು ಮದುವೆಯಾಗಲಿರುವನು. ಇದು ಅವನ ೧೯ ನೆಯ ಮದುವೆಯಂತೆ! ಆದರೆ ಅವನ ೨೫ ಮಂದಿ ಮಕ್ಕಳಿಗೆ ಈ ಮದುವೆಯಾಗುವುದರಲ್ಲಿ ಅಭಿಪ್ರಾಯವಿಲ್ಲವಂತೆ! ವರನಿಗೂ ವಧುವಿಗೂ ಇರುವ ೧೦೫ ವರ್ಷ ವಯಸ್ಸಿನ ವ್ಯತ್ಯಾಸವೇ ಈ ಅಸಮ್ಮತಿಗೆ ಕಾರಣವಂತೆ!

ಸತ್ತವರ ಕಣ್ಣಿನಭಾಗವನ್ನು ಕುರುಡರ ಕಣ್ಣಿಗೆ ಸೇರಿಸುವುದು.

ಸತ್ತವರ ಕಣ್ಣಿನ ಕಾರ್ನಿಯಾ ಎಂಬ ಭಾಗವನ್ನು ತೆಗೆದು ಕಣ್ಣುಕಾಣದಿರುವವರ ಕಣ್ಣಿಗೆ ಜೋಡಿಸಿ ದೃಷ್ಟಿ ಬರುವಂತೆ ಮಾಡಬಹುದೆಂದು ಮಾಸ್ಕೋ ನಗರಕ್ಕೆ ಬಂದಿರುವ ಒಡೆಸ್ಸಾ ಕಣ್ಣಾಸ್ಪತ್ರೆಯ ಡಾಕ್ಟರಾದ ಪ್ರೊಫೆಸರ್ ವಿ. ಪಿ. ಫಿಲಾಟೋವ್ ಎಂಬವರು ಹೇಳಿದ್ದಲ್ಲದೆ ತಮ್ಮ ಆಸ್ಪತ್ರೆಯಲ್ಲಿ ಈ ರೀತಿಯಾಗಿ ಸತ್ತವರ ಕಣ್ಣಿನ ಭಾಗವನ್ನು ದೃಷ್ಟಿ ಇಲ್ಲದೆ ಕಷ್ಟಪಡುತ್ತಿರುವವರ ಕಣ್ಣಿಗೆ ಸೇರಿಸಿದರೆಂತಲೂ, ಕಳೆದ ವರ್ಷ 250 ರಲ್ಲಿ 100 ಮಂದಿಗೆ ಒಡನೆಯೇ ದೃಷ್ಟಿ ಬಂದಿರುತ್ತದೆಂದೂ ಹೇಳಿದರು.

ಎರಡು ತಿಂಗಳು ವ್ಯತ್ಯಾಸವಾಗಿ ಜನಿಸಿದ ಅವಳಿಮಕ್ಕಳು!

ಯುಗೋಸ್ಲಾವಿಯದ ಜಿಕೋಸ್ಲೋವೇಕಿಯ ಪ್ರಾಂತದಲ್ಲಿ ಆನಿಕೌಲಿಟ್ಕೊ ಎಂಬವಳು ತನ್ನ ಮನೆಯಲ್ಲಿ ಒಂದು ಶಿಶುವನ್ನು ಪ್ರಸವಿಸಿದನಂತರವೂ ವೇದನೆಯು ತಪ್ಪಲಿಲ್ಲವಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟಳು. ಅಲ್ಲಿ 2 ತಿಂಗಳು ಉಪಚರಿಸಲ್ಪಟ್ಟನಂತರ ಇನ್ನೊಂದು ಮಗುವನ್ನು ಪ್ರಸವಿಸಿದ ಮೇಲೆ ಗುಣಹೊಂದಿದಳು. ಈಗ ಎರಡು ಮಕ್ಕಳೂ ತಾಯಿಯೂ ಆರೋಗ್ಯವಾಗಿದ್ದಾರೆ. ಡಾಕ್ಟರುಗಳು ಮಾತ್ರ ಈ ವಿಚಿತ್ರಘಟನೆಯನ್ನು ನೋಡಿ ಚಕಿತರಾಗಿದ್ದಾರೆ. ದೈವಲೀಲೆಯು ವಿಚಿತ್ರವಾದುದು!

ಕೋಪದಿಂದ ಮೂಗನಿಗೆ ನಾಲಿಗೆ ಬಂದಿತು

ಪೋಲೆಂಡಿನ ಜೋರ್ಟ್ಕೋ ಎಂಬವನು ೩೦ ವರ್ಷಗಳಿಂದ ಹುಟ್ಟುಮೂಗನಾಗಿದ್ದನು. ಇವನು ಕೆಲವು ದಿವಸಗಳ ಹಿಂದೆ ವಿವಾಹಿತನಾದನು. ಒಂದು ದಿವಸ ಇವನಿಗೆ ತನ್ನ ಹೆಂಡತಿಯಮೇಲೆ ಬಹಳ ಕೋಪಬಂದು ಆಕೆಯನ್ನು ಶಪಿಸಹೋಗಿ ಮನಸ್ಸಿನಲ್ಲಿದ್ದುದನ್ನು ಬಾಯಿಯಿಂದ ಉಚ್ಚರಿಸಿಯೇಬಿಟ್ಟನು. ಹೀಗೆ ಇವನಿಗೆ ನಾಲಿಗೆಬಂದುದು ಕೋಪಾತಿರೇಕದ ಪರಿಣಾಮವೆಂದು ಊಹಿಸಲಾಗಿದೆ. ಇದಾದ ಸ್ವಲ್ಪ ಕಾಲದಲ್ಲೇ ಇವನ ಹೆಂಡತಿಯು ಅಕಸ್ಮಾತ್ ಮರಣಹೊಂದಿದಳು. ಈಗ ಇವನು ಚನ್ನಾಗಿ ಮಾತನಾಡುತ್ತಾನಂತೆ!

ಎರಡುತಲೆಗಳುಳ್ಳ ಸರ್ಪ!

ಅಸ್ಸಾಂ ದೇಶದಲ್ಲಿ ಅನೇಕ ವಿಚಿತ್ರಜಾತಿಯ ಹಾವುಗಳಿವೆ. ಇವುಗಳಲ್ಲಿ 17 ಅಡಿ ಉದ್ದವಿದ್ದು ಎರಡು ತಲೆಗಳಿಂದ ಕೂಡಿರುವ ಹಾವುಗಳು ಬಹು ಭಯಂಕರವಾಗಿರುವುವು. ಈ ಎರಡು ತಲೆಗಳೂ ಒಂದರೊಡನೊಂದು ಸ್ನೇಹವಾಗಿರದೆ ಹೋರಾಡುವವಂತೆ! ಒಂದರ ಬಾಯಿಯಲ್ಲಿರುವ ಆಹಾರವನ್ನು ಇನ್ನೊಂದು ಕಿತ್ತುಕೊಳ್ಳಲು ಪ್ರಯತ್ನಪಡುವುದಂತೆ! ಮನುಷ್ಯರನ್ನು ಕಂಡಕೂಡಲೆ ಈ ಸರ್ಪವು ಅಟ್ಟಿಕೊಂಡುಬಂದು ಕಚ್ಚಿಕೊಲ್ಲಲು ಪ್ರಯತ್ನಪಡುವದಂತೆ! ಇತರ ಎಲ್ಲಾ ಜಾತಿಯ ನಾಗರಹಾವುಗಳನ್ನೂ ಈ ಸರ್ಪವು ತಿನ್ನುವುದಂತೆ! ಇದು ಭೂಮಿಯಿಂದ ಹತ್ತುಹನ್ನೆರಡು ಅಡಿಗಳ ಎತ್ತರದವರೆಗೆ ತಲೆಯನ್ನು ಎತ್ತಿ ಎರಡು ಹೆಡೆಗಳನ್ನೂ ಬಿಚ್ಚಿ ಬಂದವರನ್ನು ಕೊಲ್ಲುವುದಂತೆ! ಹೀಗೆ ಇದು ಹೊಡೆಯಲು ಪ್ರಯತ್ನಿಸುವಾಗ ಇದನ್ನು ಹಿಡಿಯಬಲ್ಲ ಅಲ್ಲಿಯ ಕಾಡುಜನರು ಇದರ ತಲೆಯ ಮೇಲೆ ಒಂದು ಬಟ್ಟೆಯನ್ನೆಸೆಯುವರಂತೆ! ಆ ಬಟ್ಟೆಯನ್ನು ಕಚ್ಚಲು ಸರ್ಪವು ಅದರಲ್ಲಿ ಹಲ್ಲೂರಿದ ಕೂಡಲೇ ಈ ಜನರು ಬಟ್ಟೆಯನ್ನು ಒಂದು ಕೊಕ್ಕೆಯಿಂದ ತಿರುಗಿಸುವರಂತೆ! ಆ ತಿರುಗಿಸುವ ರಭಸಕ್ಕೆ ಸರ್ಪದ ವಿಷದಹಲ್ಲು ಮುರಿದುಹೋಗುವುದಂತೆ! ಹಿಡಿದರೆ ಇದು ಉಪವಾಸವನ್ನು ಮಾಡಿ ಸಾಯುವದಂತೆ!

ಬೊಂಬಾಯಿಯಲ್ಲಿ ಮೋಟಾರ್ ಕಾರ್ಖಾನೆ

ನಮ್ಮ ಭರತಖಂಡದಲ್ಲಿ ಮೋಟಾರು ತಯಾರಿಸುವ ಕಾರ್ಖಾನೆಯನ್ನು ತೆರೆಯಬೇಕೆಂದಿರುವ ಪ್ರಮುಖರ ಸಭೆಯು ೨೧ ನೆಯ ತಾರೀಖಿನ ದಿವಸ ಬೊಂಬಾಯಿಯಲ್ಲಿ ನಡೆಯಿತು. ಇದರಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ತಾವು ವಿಷಯಸಂಗ್ರಹಕ್ಕಾಗಿ ಯೂರೋಪು ಅಮೇರಿಕೆಗಳಲ್ಲಿ ಸುತ್ತಿ ತಿಳಿದುಕೊಂಡು ಬಂದ ವಿಷಯಗಳನ್ನು ಸಮೂಹಿಸಿ ತಮ್ಮ ಸಲಹೆಯನ್ನು ತಿಳುಹಿಸಿದರು. ಅದರಂತೆ ಬೊಂಬಾಯಿಯಲ್ಲಿ ಕಾರ್ಖಾನೆಯನ್ನು ತೆರೆಯಲು ಕಾಲವು ಸರಿಯಾಗಿದೆಯೆಂದೂ ಇದಕ್ಕೆ ಕನಿಷ್ಟಪಕ್ಷ 1 ಕೋಟಿ 50 ಲಕ್ಷ ರೂಪಾಯಿಗಳಾದರೂ ಆಗಬೇಕೆಂದೂ ಹೇಳಿದರು. ಇದರಿಂದ ಒಂದು ವರ್ಷದಲ್ಲಿ 10 ಸಾವಿರ ಕಾರುಗಳನ್ನೂ ೫ ಸಾವಿರ ಲಾರಿಗಳನ್ನೂ ತಯಾರುಮಾಡಬಹುದೆಂದೂ, ಈ ಪ್ರಯತ್ನವು ಯಶಸ್ವಿಯಾಗಿ ನಡೆಯಬೇಕಾದರೆ ಸರ್ಕಾರದವರ ಸಹಾನುಭೂತಿಯು ಮುಖ್ಯವಾಗಿರಬೇಕೆಂದೂ, ಈಗ ಹೊರಗಿನಿಂದ ಇಂಡಿಯಾಕ್ಕೆ ತರಿಸುವ ಮೋಟಾರುಗಳ ಮೇಲೆ ಹಾಕುತ್ತಿರುವ ಸುಂಕವನ್ನು ಮುಂದಯೂ ಇದೇ ರೀತಿಯಾಗಿ ಇಟ್ಟದ್ದರೆ ಈ ಕೈಗಾರಿಕೆಯು ಲಾಭದಾಯಕವಾಗಿ ನಡೆಯುವುದೆಂದೂ ಹೇಳಿದರು.

ಈಜಿಪ್ಟಿನ ರಾಜರ ಮರಣ!

ಈಜಿಪ್ಟಿನ ದೊರೆಗಳಾದ ಕಿಂಗ್ ಫೌಡ್‌ರವರು ವ್ಯಾಧಿಗ್ರಸ್ತರಾಗಿದ್ದವರು ಎಷ್ಟು ಚಿಕಿತ್ಸೆ ನಡೆಸಿದರೂ ಪ್ರಯೋಜನವಾಗದೆ ಕಳೆದ ೨೮ನೆಯ ತಾರೀಖಿನದಿವಸ ಮೃತರಾದರು. ಇವರು ಬಹಳ ಬುದ್ಧಿವಂತರೂ ದೂರದರ್ಶಿಗಳೂ ಆಗಿದ್ದು ತಮ್ಮ ಪ್ರಜೆಗಳನ್ನು ವಿಶೇಷವಾಗಿ ಪ್ರೀತಿಸುತ್ತಿದ್ದರು. ಇಂಥವರ ಮರಣದಿಂದ ಈಜಿಪ್ಟ್‌ದೇಶವೆಲ್ಲಾ ದುಃಖಿಸುತ್ತದೆ. ಇವರ ಮಕ್ಕಳಾದ ಯುವರಾಜ ಫರೂಕ್‌ರವರನ್ನು ಮುಂದಿನ ಈಜಿಪ್ಟಿನ ಅರಸರೆಂದು ಪ್ರಕಟಿಸಲಾಗಿದೆ. ಇವರು ಇಂಗ್ಲೆಂಡಿನಿಂದ "ವೈಸ್‌ರಾಯ್ ಆಫ್ ಇಂಡಿಯಾ" ಎಂಬ ಜಹಜಿನ ಮೂಲಕ ಹೊರಟು ಮೇ ೬ನೇ ತಾರೀಖಿನ ದಿವಸ ಅಲೆಕ್ಸಾಂಡ್ರಿಯಾ ರೇವಿನಲ್ಲಿ ಬಂದಿಳಿಯುವರು. ಇವರಿನ್ನೂ ಅಪ್ರಾಪ್ತವಯಸ್ಕರಲ್ಲವಾದುದರಿಂದ ರೀಜನ್ಸಿ ಕೌನ್ಸಿಲ್‌ನ ಮೂಲಕವಾಗಿ ಆಡಳಿತವನ್ನು ನಡೆಸುವದು. ಇಂಥವರು ಈ ಕೌನ್ಸಿಲಿನ ಸದಸ್ಯರೆಂಬುದು ೧೯೩೩ನೇ ಇಸವಿಯಲ್ಲೇ ನಿಶ್ಚಯಿಸಲ್ಪಟ್ಟು ಮೊಹರುಮಾಡಿದ ಲಕೋಟೆಯಲ್ಲಿಡಲ್ಪಟ್ಟಿದೆ. ಈಗ ಆ ಲಕೋಟೆಯನ್ನು ಒಡೆದು ಅದರಲ್ಲಿ ನಮೂದಾಗಿರುವವರಲ್ಲಿ ಯಾರಾದರೂ ಕೌನ್ಸಿಲಿಗೆ ಸೇರಲು ಅಶಕ್ತರೆಂದು ಕಂಡುಬಂದರೆ ಅವರಿಗೆ ಪ್ರತಿಯಾಗಿ ಬೇರೊಬ್ಬರನ್ನು ಆರಿಸುವ ಅಧಿಕಾರವನ್ನು ಮಂತ್ರಿಮಂಡಲವು ಹೊಂದಿರುತ್ತದೆ.

ಇಟಲಿ ಅಬ್ಸೀನಿಯಾ ಯುದ್ಧವಾರ್ತೆ

ಉತ್ತರದಲ್ಲಿ ತಮ್ಮ ಸೈನ್ಯಕ್ಕೆ ಸೋಲಾದ ಬಾಗಾಯಿತು ಗುಪ್ತವಾಗಿದ್ದ ಅಬ್ಸೀನಿಯಾ ಚಕ್ರವರ್ತಿಗಳು ರಾಜಧಾನಿಯಾದ ಅಡಿಸ್ ಅಬಾಬಕ್ಕೆ ಬಂದಿರುವರು. ಅವರ ಉತ್ಸಾಹವೇನೂ ಕಡಿಮೆಯಾಗಿಲ್ಲವಂತೆ. ಇಟಲಿಯವರು ಇನ್ನು ಎಷ್ಟೇ ಮುಂದೆನುಗ್ಗಿದರೂ ಅವರಿಗೆ ಪೂರ್ಣಜಯವಾವಂತೆ ಆಗಲಿಲ್ಲವೆಂದು ಹೇಳುತ್ತಾರೆ. ದೆಸ್ಸಿಯಿಂದ 50 ಮೈಲು ದೂರದಲ್ಲಿರುವ ಕೈಗಾರಿಕೆ ಕ್ಷೇತ್ರವಾದ ಒರಾಲು ಎಂಬುದನ್ನು ಇಟಲಿಯವರು ಆಕ್ರಮಿಸಿಕೊಂಡರು. ಇಲ್ಲಿ ಇಟಲಿಯವರಿಗೆ ಪ್ರೀತಿಪೂರ್ವಕ ಸ್ವಾಗತವೇ ದೊರೆಯಿತಂತೆ! ಅಡಿಸ್ ಅಬಾಬಕ್ಕೆ ಹೋಗುವ ದಾರಿಯಲ್ಲಿ ಇಥಿಯೋಪಿಯಾ ಸೈನ್ಯದ ಹೆಸರೇ ಇಲ್ಲವೆಂದೂ ಅಬ್ಸೀನಿಯಾ ರಾಜಕುಮಾರರು ಶರಣಾಗತರಾಗಲು ಇಷ್ಟವುಳ್ಳವರಾಗಿರುವರೆಂದು ವರ್ತಮಾನ ಹುಟ್ಟಿದೆ. ಇಟಾಲಿಯನ್ ಸೈನಿಕರು ಯಾವ ಪ್ರತಿಭಟನೆಯೂ ಇಲ್ಲದೆ ಮುಂದುವರಿಯುತ್ತಿದ್ದಾರೆ. ಅಡಿಸ್ ಅಬಾಬಕ್ಕೆ ಸುಮಾರು ಎಂಭತ್ತು ಮೈಲಿ ದೂರದಲ್ಲಿರುವ ಮೈದಾನಪ್ರದೇಶದಲ್ಲಿ ಅಬ್ಸೀನಿಯರ ದಂಡು ಕೂಡುತ್ತಿದೆ. ಕೊನೆಯದಾಗಿ ಇಲ್ಲಿ ಇಟಲಿಯವರನ್ನು ಎದುರಿಸುವರೆಂದು ಯೋಚಿಸಲಾಗಿದೆ. ಚಕ್ರವರ್ತಿಯವರ ಸೈನ್ಯದ ಭಾರಿ ಅಪಜಯಕ್ಕೆ ಇಟಲಿಯವರು ವಿಷವಾಯುವನ್ನು ಉಪಯೋಗಿಸಿದುದೇ ಕಾರಣವೆಂದು ಹೇಳುತ್ತಾರೆ.

ಸ್ವೀಕಾರ

ವಿಜಾಪುರ ಜಿ|| ಹುನಗುಂದ ತಾ|| ಕೃಷ್ಣಾಪುರದ ಮಠದ ವೇ|| ಒಗನಯ್ಯನವರಿಗೆ ಬಾಬಿನ ಸಂಬಂಧವಾದ ಇದಿಕಾರವು ಶ್ರೀಶೈಲಸೀಮದ ಸರ್ಕ್ಯೂಟಿನ ಅಧಿಕಾರಿಗಳಿಂದ ಕೊಡಲ್ಪಟ್ಟ ಸಮಯದಲ್ಲಿ ಅಧಿಕಾರಿಗಳು ಪ್ರಭಾಪ್ರೋತ್ಸಾಹಕ್ಕಾಗಿ 2 ರೂ ಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಧಾರವಾಡ ಜಿ|| ಗದಗ ಶಹರ ನಿವಾಸಿಗಳಾದ ವೇ|| ಗುರುಸ್ವಾಮಿಮಠದ ಶಿವಲಿಂಗಾರ್ಯರ ಪುತ್ರ ಚಿ|| ಶಿವಾನಂದನಿಗೆ ಕಳೆದ ಮಾಘ ಶು|| ೧ಕ್ಕೆ ೯ ವರ್ಷಗಳು ತುಂಬಿ ೧೦ ನೆಯ ವರ್ಷವು ಪ್ರಾರಂಭವಾಗಿ ತತ್ಸಂಬಂಧದಲ್ಲಿ ನೆರವೇರಿದ ವರ್ಧಂತಿ ಸಮಯದಲ್ಲಿ ಪ್ರಭಾಪ್ರೋತ್ಸಾಹಕ್ಕಾಗಿ ತೆಗೆಯಿಸಿದ 2 ರೂ ಗಳು ಶ್ರೀ ಗದಗಿನ ಬೃಹನ್ಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಮಳವಳ್ಳಿ ತಾ|| ಹಲಗೂರು ಹೋಬಳಿ ಬೂವಳ್ಳಿ ಗ್ರಾಮದಲ್ಲಿರುವ ಮ|| ರಾ|| ಯಡೆಯೂರಪ್ಪನವರ ಮಗ ಸಿದ್ದಪ್ಪನ ಗೃಹಪ್ರವೇಶ ಸಮಯದಲ್ಲಿಯೂ ಇದೇ ಸಂದರ್ಭದಲ್ಲಿ ನಡೆದ ದೀಕ್ಷಾಸಮಯದಲ್ಲಿಯೂ ಪತ್ರಪ್ರೋತ್ಸಾಹಕ್ಕಾಗಿ ಸಮರ್ಪಿಸಿದ 1 ರೂ ಯು ಶ್ರೀಗುರುವಿನಪುರ ಮಠದ ಶ್ರೀ ಸಿದ್ಧಲಿಂಗಸ್ವಾಮಿಗಳ ದ್ವಾರಾ ತಲುಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಜಯಂತೀವಿಷಯಕಲೇಖಗಳು.

ಶ್ರೀ ಜಗದಾಚಾರ್ಯರ ಜಯಂತೀವಿಷಯಕವಾದ ಲೇಖಗಳು ವಿಶೇಷವಾಗಿ ಬಂದಿರುವುದರಿಂದ ಅವುಗಳೆಲ್ಲವನ್ನೂ ಮುಂದಿನವಾರದ ಪತ್ರಿಕೆಯಲ್ಲಿ ಪ್ರಕಟಿಸುವುದಾಗುವುದು.

ಸಂ—

ಗೋಕರ್ಣಕ್ಷೇತ್ರಕ್ಕೆ ಪ್ರಯಾಣ

ಶ್ರೀ ವಿಶ್ವಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳವರು ಮೈಸೂರು ರಾಜಧಾನಿಯಲ್ಲಿರುವ ಶಿವರಾಮಪೇಟೆ ಆರ್ಯವೈಶ್ಯರ ದೇವಾಲಯದಲ್ಲಿ ಶ್ರೀ ಕನ್ಯಕಾಪರಮೇಶ್ವರೀ ಅಮ್ಮನವರನ್ನೂ ಶ್ರೀ ಸತ್ಯನಾರಾಯಣಮೂರ್ತಿಯನ್ನೂ ಪ್ರತಿಷ್ಠೆಮಾಡಲು ಆಹ್ವಾನಿತರಾಗಿ ವೈಶಾಖ ಶು|| ೧೦ ಶುಕ್ರವಾರ ವಿಧ್ಯುಕ್ತವಾಗಿ ಪ್ರತಿಷ್ಠಾದಿ ಕಾರ್ಯಗಳನ್ನು ಮುಗಿಸಿದರು. ಈಗ ಚನ್ನರಾಯಪಟ್ಟಣದ ತಾ|| ಅನೇಕೆರೆಯ ಚನ್ನಕೇಶವಮೂರ್ತಿಯನ್ನು ಪ್ರತಿಷ್ಠೆಮಾಡುವುದಕ್ಕೂ ಗೋಕರ್ಣಕ್ಷೇತ್ರದಲ್ಲಿ ನಡೆಯಲಿರುವ ದೈವಜ್ಞಬ್ರಾಹ್ಮಣಮಹಾಸಭೆಗೆ ಸಭೆಯವರ ಪ್ರಾರ್ಥನೆಯಂತೆ ಅಧ್ಯಕ್ಷಸ್ಥಾನವನ್ನು ವಹಿಸುವುದಕ್ಕೂ ಆಹ್ವಾನಿತರಾಗಿರುವುದರಿಂದ ಈ ಪ್ರತಿಷ್ಠಾಕಾರ್ಯವನ್ನು ಮುಗಿಸಿ ಇದೇ ತಿಂಗಳು ೮ ನೇ ತಾರೀಖಿನದಿನ ಶಿಷ್ಯಮಂಡಲಿಯೊಡನೆ ಗೋಕರ್ಣಕ್ಷೇತ್ರಕ್ಕೆ ಪ್ರಯಾಣಮಾಡುತ್ತಾರೆ.

ನಾಗಲಿಂಗಸ್ವಾಮಿ.

[೩ನೇ ಪುಟದಿಂದ ಮುಂದುವರಿದುದು]

ತ್ತಾರೆ. ಅವರು ಅವರಲ್ಲಿ ಪ್ರತಿಯೊಂದರಲ್ಲಿಯೂ ಶಿವನ ಮುಖಗಳಿಂದ ಉದ್ಭವಿಸಿದ ಏಕೋರಾಮ, ಪಂಡಿತಾರಾಧ್ಯ, ರೇವಣಾರಾಧ್ಯ, ಮರುಳಾರಾಧ್ಯ ಮತ್ತು ವಿಶ್ವಾರಾಧ್ಯ ಎಂಬ ಐದು ಜನ ಯತಿಗಳಿಂದ ಈ ಮತವು ಸ್ಥಾಪಿಸಲ್ಪಟ್ಟಿತು. ಇವರು ಬಹಳ ಪ್ರಾಚೀನಕಾಲದವರು.'

ಎಂದು ಬರೆದಿರುವುದನ್ನು ನೋಡಿದರೆ ಪಂಚಾಚಾರ್ಯರು ಪರಶಿವನ ಮುಖಗಳಿಂದ ಉದ್ಭವರಾಗಿ ಭೂಮಂಡಲದಲ್ಲಿ ಲಿಂಗಮುಖದಿಂದ ಅವತರಿಸಿದರೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಜಗದ್ವಿಖ್ಯಾತರಾಗಿಹೋದ ಡಾ|| ಸರ್ ಭಾಂಡಾರಕರರವರು ತಾವು ಬರೆದ "ವೈಷ್ಣವಿಸಂ ಅಂಡ್ ಶೈವಿಸಂ" ಎಂಬ ಗ್ರಂಥದಲ್ಲಿ ಶ್ರೀಪಂಚಾಚಾರ್ಯರು ಬಹುಪುರಾತನರೆಂಬ ವಿಷಯವನ್ನು ಸ್ಪಷ್ಟವಾಗಿ ಬರೆದಿದ್ದಾರೆ. ಇದನ್ನೆಲ್ಲಾ ಈ ನವೀನ ನಾಸ್ತಿಕರು ಪಾಪಬುದ್ಧಿಯಿಂದ ದೂರರಾಗಿ ಪವಿತ್ರ ಹೃದಯದಿಂದ ಪರಿಶೀಲಿಸಿ ನಿಜತತ್ವವನ್ನು ಅರಿತುಕೊಂಡು ಧನ್ಯರಾಗಲೆಂದು ಬಯಸಿ ಈ ಲೇಖನವನ್ನು ಪೂರೈಸುತ್ತೇನೆ.

ಜಪಾನಿನ ಈಗಿನ ಸಮಸ್ಯೆ

ಲೇಖಕರು—ಆರ್. ಕೃಷ್ಣಸ್ವಾಮಿ, ಮೈಸೂರು

ಈಗ ಜಪಾನಿಗೆ ಬರುವ ಪ್ರಮುಖ ಸಮಸ್ಯೆಗಳಲ್ಲಿ ಪ್ರಜಾಸಂಖ್ಯೆಯ ಸಮಸ್ಯೆಯೇ ಅತ್ಯಂತ ಮುಖ್ಯವಾದುದು. ಪ್ರಪಂಚದ [illegible] ಜನಸಂಖ್ಯೆಯು [illegible] ಜಪಾನಿನಲ್ಲಿ [illegible] ಶತಮಾನದಲ್ಲಿ [illegible] ವಾಗಿ ಎಲ್ಲಾ ಜಪಾನೀಯರ ಜನಸಂಖ್ಯೆಯನ್ನು ಇದಕ್ಕೆ [illegible] ಒಂದು [illegible] ಜಪಾನಿನಲ್ಲಿಯಾದರೆ [illegible] ವರ್ಷದಿಂದ ವರ್ಷಕ್ಕೆ ವೃದ್ಧಿಯಾಗಿ ಜಪಾನಿನ ಮಟ್ಟಿಗೆ ಇಲ್ಲಿ ಪ್ರಮುಖವಾದ ಒಂದು ಸಮಸ್ಯೆಯಾಗಿ ಕುಳಿತಿದೆ.

[illegible] ಬೆಳೆವಣಿಗೆಯ ವೃದ್ಧಿಯ [illegible] ಜಪಾನಿನಲ್ಲಿ ಅದು ಈ ಸಮಸ್ಯೆ ಜನಸಂಖ್ಯೆ [illegible] ಒಂದು [illegible] ವಾಗಿ [illegible] ಜಪಾನಿನ [illegible] ಆಹಾರವನ್ನು [illegible] ಪರದೇಶಗಳಿಂದ [illegible] ವಸ್ತುಗಳನ್ನು [illegible] ಈಗಿನ ಅಧಿಕವಾಗುತ್ತಿರುವ ಜನಸಂಖ್ಯೆಗೆ ಸ್ವದೇಶದ [illegible] ಪರದೇಶಗಳಿಂದ ತರಿಸಿಕೊಳ್ಳಬೇಕಾಗಿದೆ. [illegible] ರವನ್ನೆಲ್ಲ ಅಲ್ಲಿಯೇ ಬೆಳೆಸಲು ಸಾಧ್ಯವಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ.

ಜಪಾನ್ ಅತ್ಯಂತ ವಿಸ್ತಾರವಾದ ದೇಶವಲ್ಲ. ಅದರ ಮುಕ್ಕಾಲು ಭಾಗವೆಲ್ಲವೂ ಬೆಟ್ಟಗುಡ್ಡಗಳಿಂದ ತುಂಬಿರುವುದರಿಂದ ಅಲ್ಲಿನ ಜನಸಂಖ್ಯೆಗೆಲ್ಲವೂ ಫಲವತ್ತಾದ ಸಮಪ್ರದೇಶದ ಒದಗಿರುವುದಿಲ್ಲ. ಅಮೆರಿಕದ ಸಂಯುಕ್ತ ಸಂಸ್ಥಾನದ ಅರ್ಧದಷ್ಟು ಪ್ರಜಾಸಂಖ್ಯೆಯನ್ನು ಜಪಾನು ತನ್ನ ಸ್ವಲ್ಪ ಪ್ರದೇಶದಲ್ಲಿ ಸಾಕಬೇಕಾಗಿರುವುದರಿಂದ ಅಲ್ಲಿ ಜನರು ಕೃಷಿಯನ್ನೇ ಮುಖ್ಯವೃತ್ತಿಯನ್ನಾಗಿಟ್ಟುಕೊಂಡು ದಿನಕ್ಕೆ ಬೇಕಾದ ಆಹಾರವನ್ನೆಲ್ಲ ವನ್ನು ತಾವೇ ಒದಗಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಇನ್ನೂ ಅಷ್ಟು ಕಷ್ಟಕರವಾದ ಸಂಗತಿಯೇ. ಈಗ ಅವರ ಜೀವನದ ಮಟ್ಟವು (standard of life) ಹೆಚ್ಚುತ್ತಿರುವುದರಿಂದ ಅಲ್ಲಿ ಬೆಳೆಯುವ ಆಹಾರ ಸಾಮಗ್ರಿಗಳು ಸಾಲದೆ ಹೋಗುತ್ತಿದೆ. ಒಂದು ಪ್ರತಿ ವರ್ಷವೂ ಪರದೇಶಗಳಿಂದ ಮತ್ತಷ್ಟು ಆಹಾರ ಸಾಮಗ್ರಿಗಳನ್ನು ತರಿಸಿಕೊಳ್ಳುವ ಸ್ಥಿತಿ ಬಂದಿದೆ. ಅಲ್ಲಿ ಜನರು ಉಪಯೋಗಿಸುವ ಆಹಾರದಲ್ಲಿ ಮೂರರಲ್ಲೊಂದು ಪಾಲು ಪರದೇಶಗಳಿಂದ ಬರುವುದೆಂದು ತಿಳಿದುಬಂದಿದೆ.

ಈಗ ಜಪಾನಿನಲ್ಲಿ ಆಹಾರ ಸಾಮಗ್ರಿಗಳ ಬೆಲೆಯು ಕ್ರಮೇಣ ಏರುತ್ತಿದೆ. ಅಲ್ಲಿಯ ಕೃಷಿಕರ ಗೋಳನ್ನು ಒದಗಿಸುವ ಪಟ್ಟು ಹೆಚ್ಚುತ್ತಿರುವುದು. ಅಲ್ಲದೆ ಆಹಾರವನ್ನೊದಗಿಸಲು ತಗಲುವ ಖರ್ಚು ಕ್ರಮೇಣ ಏರುತ್ತಿದೆ. ಜಪಾನಿನಲ್ಲಿರುವ ಈಗಿನ ಜೀವನದ ಮಟ್ಟವು ಕಡಿಮೆಯಾಗದೆ ಇರಬೇಕಾದರೆ, ವರ್ಷೇ ವರ್ಷೇ ಹೆಚ್ಚುತ್ತಿರುವ ಜನಸಂಖ್ಯೆಗೆ ಅಲ್ಲೇ ಬೆಳೆಯುವ ಆಹಾರವಸ್ತುಗಳ ಸಾಲವು, ಪರದೇಶಗಳಿಂದ ಹೆಚ್ಚು ಹೆಚ್ಚು ಆಹಾರವನ್ನು ತರಿಸಿಕೊಳ್ಳಬೇಕಾಗುವುದು. ಇಲ್ಲದಿದ್ದರೆ ಪ್ರಜಾಭಿವೃದ್ಧಿಯನ್ನು ತಗ್ಗಿಸಿ ಬಿಡಲು ಪ್ರಯತ್ನಿಸಬೇಕು. ಇವೆರಡರ ಹೊರತು ಮತ್ತಾವ ಉಪಾಯವೂ ಸದ್ಯಕ್ಕೆ ಗೋಚರವಾಗುವಂತಿಲ್ಲ.

ಹೀಗೆ ಹೆಚ್ಚುತ್ತಿರುವ ಪ್ರಜಾಸಂಖ್ಯೆಯು ನಿಜವೆನ್ನುವ ಈ ಲೇಖನದಲ್ಲಿ ಸೂಕ್ಷ್ಮವಾಗಿ ವಿವರಿಸಿದೆ. ಜಪಾನಿನ ಪ್ರಜಾಸಂಖ್ಯೆಯು ಕಳೆದ ವರ್ಷಗಳಲ್ಲಿ ಈ ಕೆಳಗೆ ಕೊಟ್ಟಿರುವಂತೆ ಇದೆ:—

ವರ್ಷ	ಜನಸಂಖ್ಯೆ
೧೮೭೨	೩೩೦ ಲಕ್ಷ
೧೮೯೨	೪೧೦ ,,
೧೯೧೨	೫೦೩ ,,
೧೯೨೫	೫೯೭ ,,
೧೯೩೪ (ಡಿಸೆಂಬರ್)	೬೮೦ ,,

ಸುಮಾರು ೬೦ ವರ್ಷಗಳ ಅವಧಿಯಲ್ಲಿ ಜಪಾನಿನ ಜನಸಂಖ್ಯೆಯು ಇಮ್ಮಡಿಯಾಗಿದೆಯೆಂದು ಮೇಲೆ ಕೊಟ್ಟಿರುವ ಪಟ್ಟಿಯಿಂದ ಸ್ಪಷ್ಟವಾಗುತ್ತದೆ. ಕಳೆದ ೨೫ ವರ್ಷಗಳಿಂದಲೂ ಅಲ್ಲಿ ಜನಸಂಖ್ಯೆಯು ವರ್ಷಕ್ಕೆ ಸರಾಸರಿ ೯ ಲಕ್ಷದಂತೆ ಹೆಚ್ಚುತ್ತಿದೆಯೆಂದು ಪ್ರಕಟವಾಗಿದೆ. ಪ್ರಸ್ತುತ ಸಂದರ್ಭಗಳಲ್ಲಿ ಈಗಿನ ಸಂಖ್ಯೆಯು ಇನ್ನು ಸುಮಾರು ೩೦ ವರ್ಷಗಳಲ್ಲಿ ಇಮ್ಮಡಿಯಾಗುತ್ತದೆಂದು ಊಹಿಸಲ್ಪಟ್ಟಿದೆ.

ಜಪಾನಿನ ಮುಖ್ಯ [illegible] ಇಲ್ಲ [illegible] ಹೇಳಿದರೆ? ಇದರಿಂದ ಅಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯು ಬಹಳ ಕಡಿಮೆ ಇರುತ್ತದೆ. ಅಲ್ಲಿ ಒಟ್ಟು ನೆಲದ ೧/೫ ರಷ್ಟು ಭೂಮಿಯು ಮಾತ್ರ ಕೃಷಿಯೋಗ್ಯವಾಗಿದೆ. ಈ ೧/೫ ರಲ್ಲಿ ನೆಲದಲ್ಲಿ ಶೇಕಡ ೬೫ ರಷ್ಟು (ಎಂದರೆ ಒಟ್ಟು ನೆಲದ ೧/೮ ಪಾಲು) ವ್ಯವಸಾಯದಲ್ಲಿದೆ. [illegible] ನೆಲವು ಕೃಷಿಯೋಗ್ಯವೇ ಆದ್ದನ್ನು ಜಪಾನರು ಉಪಯೋಗಿಸಿಕೊಂಡಿದ್ದಾರೆ ಎಂದು ಹೇಳಬಹುದು. [illegible] ಉಳಿದಿರುವ ನೆಲವನ್ನು ವಿಸ್ತರಿಸಿದರೂ ಕೇವಲ [illegible] ವ್ಯವಸಾಯಕ್ಕೆ ಯೋಗ್ಯವಾಗಿದೆ.

ಪ್ರಜಾಸಂಖ್ಯೆಯು ಏರುವುದನ್ನು ತಡೆಯುವುದು [illegible] ಎಂದು ಅರ್ಥಮಾಡಿಕೊಂಡಿರುವರು. ಯಾವ ದೇಶದಲ್ಲಿ [illegible] ಎಂದು ಚದರಮೈಲಿ ಭೂಮಿಗೆ ಸರಾಸರಿ ಪ್ರಜಾಸಂಖ್ಯೆಯ ಜನಸಾಂದ್ರತೆಯು ಸಾಧಾರಣ ಅಧಿಕ ವ್ಯವಸಾಯಕ್ಕೆ ಯೋಗ್ಯವಾದ ಒಂದು ಚದರಮೈಲಿ ನೆಲಕ್ಕೆ ಇರುವ ಸರಾಸರಿ ಜನಸಂಖ್ಯೆಯು ಇನ್ನೂ ಹೆಚ್ಚು ಇರುತ್ತದೆ ಎಂದು [illegible].

ಈ ಕೆಳಗಿನ ಪಟ್ಟಿಯಲ್ಲಿ, ಪ್ರಪಂಚದ ಮುಖ್ಯದೇಶಗಳಲ್ಲಿ ವ್ಯವಸಾಯಯೋಗ್ಯ ಭೂಮಿಯ ಒಂದು ಚದರಮೈಲಿಗೆ ಸರಾಸರಿ ಪ್ರಜಾಸಂಖ್ಯೆಯನ್ನು ಕೊಟ್ಟಿದೆ.

ದೇಶ	ವ್ಯವಸಾಯಯೋಗ್ಯ ಚದರಮೈಲಿಗೆ ಸರಾಸರಿ ಜನಸಂಖ್ಯೆ
ಇಂಗ್ಲೆಂಡು	೧೮೦
ಚೀನ	೮೦
ಅಮೆರಿಕಾ ಸಂಯುಕ್ತ ಸಂಸ್ಥಾನ	೩೩೧
ಇಂಡಿಯಾ	೪೦೦
ಜಪಾನ	೧೦೬೬

ಜಪಾನಿನ ಜನಸಾಂದ್ರತೆಯು ಅತ್ಯಂತ ಹೆಚ್ಚಾಗಿದೆ. [illegible] ಈ ಪಟ್ಟಿಯಿಂದ ತಿಳಿಯಬಹುದು. ಇಷ್ಟು ಅಧಿಕ ಜನಸಾಂದ್ರತೆಯನ್ನು [illegible] ಬೆಳೆಯುತ್ತಿರುವ ಪ್ರಜಾಸಂಖ್ಯೆಗೆ ಯಾವ ಕಡಿಮೆಯನ್ನೂ [illegible] ಇನ್ನು [illegible] ಮತ್ತು ವ್ಯವಸಾಯ ಯೋಗ್ಯವಾದ ಅಲ್ಪಸ್ವಲ್ಪ ಭೂಮಿಯನ್ನು [illegible] ಇದರ ಇಷ್ಟು [illegible] ನೆಲವು [illegible] ಬೆಳೆಸುವುದರಿಂದ ಕಡಿಮೆ [illegible] ಮತ್ತು [illegible] ಅವಶ್ಯಕ [illegible] ಭೂಮಿಯ [illegible] ಇಷ್ಟು [illegible] ಲಕ್ಷ ಜನರು ಇರಲು [illegible] ವೃದ್ಧಿಯಾಗುತ್ತಿರುವ ಪ್ರಜಾಬಲವು ಅವನತಿ [illegible] ಇದರಿಂದ ಹೆಚ್ಚು ಹೆಚ್ಚು [illegible] ವಿದೇಶಗಳಿಗೆ ಹೋಗಿ [illegible] ತ್ತಿರುವ ಪ್ರಶ್ನೆಯನ್ನು ಪರಿಗಣಿಸಬೇಕೆಂದು ಬಯಸಿದ್ದಾರೆ.

ಇದನ್ನು ಬಿಟ್ಟು, ಜಪಾನರು ಇತರ ಯಾವ ದೇಶಗಳಿಗಾದರೂ ವಲಸೆ ಹೋಗಿ ತಮ್ಮ ಸ್ವದೇಶದಲ್ಲಿ ಪ್ರಜಾಭಾರವನ್ನು ಕಡಿಮೆ ಮಾಡಬಹುದೇ ಎಂಬ ವಿಷಯವನ್ನು ಪರೀಕ್ಷಿಸೋಣ — ಆಸ್ಟ್ರೇಲಿಯಾ, ಬ್ರಿಟಿಷರಿಗೂ ವಿಸ್ತಾರವಾದ ಮತ್ತು ಹೆಚ್ಚು ಜನ ಇರುವ ಪ್ರಾಂತಗಳಿಲ್ಲದ ಸ್ವತಂತ್ರ ಸ್ಥಳಗಳು ಜಪಾನರಿಗೂ ಇದ್ದರೆ ಅವರು ಮಂಜೂರಿಯದ ಅರ್ಧಕ್ಕಿಂತ ಹೆಚ್ಚಿನ ಭಾಗದ ಗೊಡವೆಗೆ ಹೋಗುವ ಅವಶ್ಯಕತೆಯಿರುತ್ತಿರಲಿಲ್ಲ. ಅಮೆರಿಕದ ಸಂಯುಕ್ತ ಸಂಸ್ಥಾನಗಳು, ಆಸ್ಟ್ರೇಲಿಯ, ನ್ಯೂಜೀಲೆಂಡ್ ಮುಂತಾದ ದೇಶಗಳಲ್ಲಿ ಜನಸಾಂದ್ರತೆಯು ಅತಿ ವಿರಳವಾಗಿದ್ದರೂ ಅವುಗಳಲ್ಲಿ ಜಪಾನರು ಹೋಗಿ ನೆಲಸಲು ಅವಕಾಶವಿಲ್ಲ. ಬಣ್ಣದ ಜನರಿಗೆ 'ಕಪ್ಪುಜನರ' ಆಸ್ಟ್ರೇಲಿಯಾ ಬಿಂದರಿಂದಲೇ ಉಚ್ಚಾಟಿಸುತ್ತಿರುವಾಗ, ಇನ್ನು ಈ ದೇಶಗಳಲ್ಲಿ ಜಪಾನರು ನೆಲಸುವ ಯೋಚನೆ ಏಕೆ? ಅಲ್ಲಿ ಅವರಿಗೆ ಪ್ರವೇಶವಿಲ್ಲ.

ಜಪಾನಿಗೆ ತನ್ನ ಪ್ರಜೆಗಳು ಹೋಗಿ ನೆಲಸಿಕೊಳ್ಳಬಹುದಾದ ಸ್ವಾತಂತ್ರ್ಯವಾದರೂ ಇಲ್ಲ. ಕೊರಿಯದಲ್ಲಿ (korea) ಹೋಗಿ ನೆಲಸೋಣವೆಂದರೆ ಅಲ್ಲಿನ ಜನಸಂಖ್ಯೆಯು ಜಪಾನಿಗಿಂತಲೂ ಅಧಿಕವಾಗಿ ಬೆಳೆಯುತ್ತಿದೆ. ಅದು ಬರುವ ೪೦ ವರ್ಷಗಳಲ್ಲಿ ದ್ವಿಗುಣವಾಗುವುದೆಂದು ಲೆಕ್ಕ ಹಾಕಲ್ಪಟ್ಟಿದೆ. ಅಲ್ಲದೆ ಕೊರಿಯದಲ್ಲಿ ಜಪಾನರಿಗೆ ಯಾವ ಆರ್ಥಿಕ ಸೌಲಭ್ಯವೂ ಇಲ್ಲ. ಅಲ್ಲಿ ಜನಜೀವನದ ಮಟ್ಟವು ಕೇವಲ ಕನಿಷ್ಠವಾದುದು. ಜಪಾನರೇ ಕೊರಿಯದಿಂದ ಕೂಲಿಗಳನ್ನು ತರಿಸಿಕೊಳ್ಳುತ್ತಿರುವರು. ಏಕೆಂದರೆ ಕಾಯಕಷ್ಟದ ಕೆಲಸಗಳಲ್ಲಿ ಜಪಾನರು ಕೊರಿಯನವರನ್ನು ವಿರೋಧಿಸಲಾರರು. ಅಲ್ಲಿ ನೆಲಸಿರುವ ಅಲ್ಪಸ್ವಲ್ಪ ಜಪಾನರು ಅಧಿಕ ಶ್ರಮವಿಲ್ಲದ ನೌಕರಿಗಳಲ್ಲಿದ್ದಾರೆ. ಆದುದರಿಂದ ಕೊರಿಯದಲ್ಲಿ ಜಪಾನರು ನೆಲಸಲಾಗುವುದೆಂದು ಹೇಳಲಾಗುವುದಿಲ್ಲ.

ಜಪಾನರು ಹಸ್ಸೈ ದ್ವೀಪಗಳಿಗೂ ಕ್ಯಾಲಿಫೋರ್ನಿಯಾಗಳಿಗೂ ಹೋಗಿ ನೆಲಸಿಯೂ ನೆಲಸುತ್ತಲೂ ಇರುವುದನ್ನು ನೋಡಿದರೆ ಅವರು ಪಶ್ಚಿಮಕರಿಗೆ ಯುರೋಪಿಯನ್ನರನ್ನು ಹೋಲುವರೆಂದು ತೋರುತ್ತದೆ. ಏಕೆಂದರೆ ಅವರು ವಲಸೆ ಹೋಗಿ ನೆಲಸುವ ದೇಶಗಳಲ್ಲಿ ತಮಗೆ ಬೇಕಾದ ಅನುಕೂಲ ಸೌಲಭ್ಯಗಳು ಸುಲಭವಾಗಿ ದೊರಕಬೇಕೆಂದು ಅವರ ಬಯಕೆ.

ಕೊರಿಯ ಹಾಗೆಯೇ ಫಾರ್ಮೋಸಾ ದ್ವೀಪದಲ್ಲಿಯೂ ಜಪಾನರು ನೆಲಸುವುದಕ್ಕೆ ಅನುಕೂಲಗಳಿಲ್ಲ. ಅಲ್ಲಿಗೆ ಹೋಗಿ ನೆಲಸಿಕೊಂಡಿರುವ ಜಪಾನರು ಸರಕಾರಿ ಹುದ್ದೆಗಳಲ್ಲಿಯೂ, ವ್ಯಾಪಾರ, ಯಂತ್ರ ಶಿಲ್ಪ (ಕಾರ್ಖಾನೆ ಇತ್ಯಾದಿ) ಮೊದಲಾದ ಕೆಲಸಗಳಲ್ಲಿ ಪ್ರವೃತ್ತರಾಗಿರುವರು. ಫಾರ್ಮೋಸಾ ದ್ವೀಪದ ವಿಸ್ತೀರ್ಣವು ೧೩,೮೩೮ ಚದರ ಮೈಲಿಗಳು ಮಾತ್ರ. ಅದರಲ್ಲಿ ಮುಕ್ಕಾಲುಪಾಲೆಲ್ಲವೂ ಬೆಟ್ಟಗಳೇ. ಈ ದ್ವೀಪದ ಅರ್ಧಭಾಗದಲ್ಲಿ ಬೇಸಾಯವಾಗುವ ಪ್ರದೇಶದ ಜನಸಾಂದ್ರತೆಯು ತೀರ ಹೆಚ್ಚಾಗಿದೆ. ಅಲ್ಲಿ ಸಾಗುವಳಿಯಾದ ಪ್ರತಿಯೊಂದು ಚದರ ಮೈಲಿಗೂ ಸರಾಸರಿ ೧೩೦೦ ಜನರಿರುವರು. ಇದರಿಂದ ಫಾರ್ಮೋಸಾ ದ್ವೀಪದಲ್ಲಿ ಜನಸಾಂದ್ರತೆಯು ಜಪಾನಿನಲ್ಲಿರುವುದಕ್ಕಿಂತಲೂ ಹೆಚ್ಚಾಗಿದೆಯೆಂದು ವ್ಯಕ್ತವಾಗುವುದು. ಈ ಕಾರಣಗಳಿಂದ ಜಪಾನರು ಆ ದ್ವೀಪದಲ್ಲಿ ನೆಲಸುವುದೂ ಅಸಾಧ್ಯವೇ.

ಮಂಚೂರಿಯದಲ್ಲಿಯೂ ಇದೇ ಸಮಸ್ಯೆ. ಜಪಾನರು ನೆಲಸದಿರುವ ಕಾರಣ ಅವರು ಚೀಣರೊಂದಿಗೆ ಸ್ಪರ್ಧಿಸಲಾರರು. ಇದನ್ನು ಮನಗಂಡೇ ಆಂಗ್ಲಲೇಖಕರೊಬ್ಬರು (Garr-Saunders) ಜಪಾನು ಮಂಚೂರಿಯವನ್ನು ತನ್ನ ವಶದಲ್ಲಿ ಹಾಕಿಕೊಂಡರೂ ಅದರಿಂದ ಜಪಾನಿಗೆ ಪ್ರಯೋಜನವು ತೀರ ಕಡಿಮೆ ಎಂದು ಅಭಿಪ್ರಾಯಪಟ್ಟಿರುವರು.

ಜಪಾನಿನ ಸುತ್ತಮುತ್ತ ಇರುವ ಪೆಸಿಫಿಕ್ ಸಾಗರದ ದ್ವೀಪರಾಶಿಯಲ್ಲಿ ಕೆಲವು ದ್ವೀಪಗಳನ್ನು ಬಿಟ್ಟು ಮಿಕ್ಕವೆಲ್ಲವೂ ಯೂರೋಪಿನ ಜನಾಂಗಗಳಿಗೆ ಸೇರಿವೆ. ಆ ದ್ವೀಪಗಳಲ್ಲಿ ಯೂರೋಪಿಯನ್ ಜನಾಂಗಗಳು ನೆಲಸಲಾರವು, ಏಕೆಂದರೆ ಅಲ್ಲಿನ ಉಷ್ಣಸ್ಥಿತಿಯಾದ ಹವೆಯು ಅವರಿಗೆ ತಕ್ಕುದಾಗಿಲ್ಲ. ಅಲ್ಲದೆ ಯೂರೋಪಿಯನರಿಗೆ [illegible] ಆ ದ್ವೀಪಗಳಲ್ಲಿರುವ ಭೂಮಿ ಸಂಪತ್ತಿಯನ್ನು [illegible] ಸಾಧ್ಯವಿಲ್ಲ. ಜಪಾನರು ಸುಲಭವಾಗಿ ಜೀವನ ಮಾಡುವರು. ಆ ದ್ವೀಪಗಳಲ್ಲಿ ನೆಲಸಿ, ಅಲ್ಲಿನ ಖನಿಜಗಳನ್ನು ಉಪಯೋಗಿಸಿಕೊಳ್ಳಬಲ್ಲರು. ಆದರೆ ಯೂರೋಪಿಯನ್ ಜನಾಂಗಗಳು ಆ ದ್ವೀಪಗಳನ್ನು ಜಪಾನರಿಗೆ ಬಿಟ್ಟುಕೊಡುವುದೂ ಇಲ್ಲ. ಅವುಗಳ ಖನಿಜಗಳನ್ನು ತೆಗೆಯಲು ಅವಕಾಶಗಳನ್ನು ಕಲ್ಪಿಸಿಕೊಡುತ್ತಿಲ್ಲ. ಜಪಾನರು ತಮ್ಮ ಪ್ರಜಾಭಿವೃದ್ಧಿಯನ್ನು ತಡೆದು ಮಾಡಬೇಕೆಂಬುದೇ ಅವರ ಹಟ. [illegible] ಜಪಾನರು ಜನಸಂಖ್ಯೆಯನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳುವ ಪಕ್ಷಕ್ಕೆ ಅವರಿಗೆ ಹೆಚ್ಚು ಭೂಮಿಯ ಹಾಗೂ ಹಣಸಂಪತ್ತಿಯ ಅವಶ್ಯಕತೆಯು ಇರುವುದಿಲ್ಲವೆಂಬುದೇ ಅವರ ವಾದ.

ಮಿತಸಂತಾನವನ್ನು ಅನುಸರಿಸಲು ಜಪಾನರ ಮತ ಮತ್ತು ಪದ್ಧತಿಗಳಿಗೆ ವಿರೋಧವಾದುದು. ಅಲ್ಲಿ ಬ್ರಹ್ಮಚರ್ಯ ನಿಂಬ ಮಾತೇ ಇಲ್ಲ. ನಮ್ಮ ದೇಶದಲ್ಲಿರುವಂತೆಯೇ ಅಲ್ಲಿಯೂ ಎಲ್ಲರೂ ಗೃಹಸ್ಥರಾಗಿ ವಿವಾಹಮಾಡಿಕೊಳ್ಳಬೇಕು. ಸರಕಾರವೂ ಕೂಡ ಪೂರ್ವಾಚಾರಗಳನ್ನೇ ಅನುಮೋದಿಸಿ ಸಂತಾನ ನಿರೋಧ ಪದ್ಧತಿಯನ್ನು ಅನಿಷ್ಟವಾಗಿ ಕಾಣುತ್ತಿದೆ. ಮಿತ ಸಂತಾನ ಮತ್ತು ಸಂತಾನ ನಿರೋಧ ಈ ವಿಷಯಗಳನ್ನೊಳಗೊಂಡ (ದೇಶಭಾಷೆಯಲ್ಲಿ ಬರೆಯಲ್ಪಟ್ಟ) ಪುಸ್ತಕಗಳಿಗೆ ಅಲ್ಲಿ ಪ್ರವೇಶವೇ ಇಲ್ಲ.

ಆದುದರಿಂದ, ಇನ್ನು ಕೆಲವು ವರ್ಷಗಳಲ್ಲೇ ಜಪಾನಿನ ಪ್ರಜಾಸಂಖ್ಯೆಯು ಪ್ರಬಲವಾಗಿ ಬೆಳೆದು ಬರುವ ಅದ್ಭುತ ಸಮಸ್ಯೆಯೊಂದರಲ್ಲಿ ನಾವೇನು ಆಶ್ಚರ್ಯಪಡಬೇಕಾಗಿಲ್ಲ.

ಕೈಗಾರಿಕೆಗಳು

ಜಪಾನರು ವಲಸೆಹೋಗಿ ನೆಲಸುವುದಕ್ಕೆ ಇರುವ ಪ್ರತಿಬಂಧಕಗಳನ್ನು ನೋಡಿ ಜಪಾನಿನ ರಾಜಕೀಯ ಪ್ರಭೃತಿಗಳು ಹೆಚ್ಚುತ್ತಿರುವ ಪ್ರಜೆಗಳ ರಕ್ಷಣೆಗೆ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಬೇಕೆಂದು ಹೇಳುತ್ತಿದ್ದಾರೆ. ಅವರ ಕೈಗಾರಿಕೆಗಳು ಹೆಚ್ಚುವುದರಿಂದ ಅನೇಕ ಅಂತರ್ರಾಷ್ಟ್ರೀಯ ಸಮಸ್ಯೆಗಳು ತಲೆದೋರುತ್ತವಲ್ಲದೆ ಅದರ ಉದ್ದೇಶವು ವ್ಯರ್ಥವೇ ಆಗುವುದು. ನಮ್ಮ ಜೀವನದ ಮಟ್ಟವನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಈಗ ಜಪಾನರು ತಮ್ಮ ಕೈಗಾರಿಕೆಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಜಪಾನಿನಲ್ಲಿ ಈಗಿರುವುದಕ್ಕಿಂತ ಹೆಚ್ಚಾಗಿ ಕೈಗಾರಿಕೆಗಳು ಬೆಳೆಯಲಾರವು ಎಂಬುದಕ್ಕೆ ಅನೇಕ ಕಾರಣಗಳುಂಟು. ಅವುಗಳಲ್ಲಿ ಇವು ಕೆಲವು:—

ಜಪಾನಿನಲ್ಲಿ ಯಾವುದೊಂದು ಕೈಗಾರಿಕೆಯ ಅಭಿವೃದ್ಧಿಗೆ ಬೇಕಾಗುವಷ್ಟು ಖನಿಜಸಂಪತ್ತಿಯೇನೂ ಇಲ್ಲ. ಕೈಗಾರಿಕೆಗಳಿಗೆ ಮುಖ್ಯವಾಗಿ ಬೇಕಾಗುವ ಕಬ್ಬಿಣ ಕಲ್ಲಿದ್ದಲುಗಳ ಗಣಿಗಳು ಅಲ್ಲಿ ವಿಶೇಷವಾಗಿಲ್ಲ. ಎರಡನೆಯದಾಗಿ, ಜಪಾನು ಪ್ರಪಂಚದ ಮಾರ್ಕೆಟ್ಟುಗಳಲ್ಲಿ ಸ್ಪರ್ಧಿಸಬೇಕಾಗುವುದು. ಅದರಲ್ಲಿ ಜಪಾನೇ ಜಯಶೀಲನಾಗುವನೆಂಬ ನಂಬಿಕೆ ಎಲ್ಲಿಯದು?

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯವೀರಾದಿಕಾಃ | ಪಂಚಕ್ಲೇಶನಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ |
ಪಂಚಾಚಾರನಿಯಾಮಕಾಃ ಸಕಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಸ್ತು ವಿಃಲೋಕನುಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು

ಮುಂಗಡವಾರ್ಷಿಕ ೧ ರೂ ೧೧ | ಬಿಡಿ ಪ್ರತಿ ೧ಕ್ಕೆ ೮ ಪೈ | ಪರಸ್ಥಳದವರಿಗೆ ೨ ರೂ. ೮ ಆ. ೧ ಪೈ ಹಾರ್ಜು ಪ್ರತ್ಯೇಕ

ಸಂಪುಟ ೧೦.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೧ನೇ ಮೇ ೧೯೩೬ [ಸಂಚಿಕೆ ೩

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಪ್ರಭಾವಿಜಯ

ಚರಸಾರ್ವಭೌಮನೆನಿಪ |
ಗುರುಪಂಚಾಚಾರ್ಯರ ಕೃಪೆಯಿಂದ ಧಾರುಣಿಯೊಳ್ |
ನಿರತಿಶಯಮಾರ್ತಿಕನೆನಿಪ |
ವರಪಂಚಾಚಾರ್ಯಪ್ರಭೆಯೆ ಧನ್ಯತ್ವ ವಿಃ ||೧||

ಪಲಕಾಲ ಸೈಪಕ್ಕಿ ದ |
ನೆರೆ ಜನದೆ ಒಸಿರುವೆರ್ಗೆ ಜನ ಗನ ವಿಂ ||
ನತಿ ಸಮಾರಿಕಾಸಿಲರ್ಗಂ |
ಸಲಿಂಪವೆರೆದ ವತ್ತ್ ತಾಜಕಾರಿಸಿ ಪ್ರೆ ಶಿವ್ಯ ||೨||

ಚ ತನ ನ ಶಿಖದ ದವರಂ |
ಪುರಾತಯಜ್ಜಾನರತು ನಿರಂತರ ದರರಿಂ ||
ಕೌತುಕವಿತ್ತ್ವದಿ ನಿನ್ನಂ |
ಪಾಡಿಸಿದಪರಿಸುತಿಯಾರೋ ಮಾನದೊಳಿನಿಂ ||೩||

ವರ್ಣಾಶ್ರಮಂಗಳಂದವಂ |
ನಿರ್ಣಯಗೆ ಶಳಿಸುತಿ ಧರ್ಮಶಾಸ್ತ್ರ ದ ಒಡಮ ||
ತ್ರೀರ್ಣವೆಲಿಸಬಹುದೆ ಭಾಸ್ಯ |
ವರ್ಣಿಸಲಳವಲ್ಲ ನಿನ್ನ ವ್ಯಸುಂಯಸನಾತಂ ||೪||

ಆಗಣಿತಮಹಿಮಾಧಾರರ್ |
ನಿಗಮಾಗಮವೇದ್ಯ ರ್ಯ ವೆ ಶವಿಶದಸಾಗರ್ ||
ಜಗದಾರಾಧ್ಯಗುರೂತ್ತಮ |
ಬಾಗಿಸಿದೀಯಿಂ ನಿನ್ನೊಳ್ ಕೃಪೆಗೆಂದಿಪರ್ಶ್ನ ||೫||

ಪಂಡಿತವರ್ಯಂ ಗುಣಗಣ |
ಮಂಡಿತನಾ ಲೋಕಮಾನ್ಯ ಗುರುಕುಲದೀಪಂ ||
ಪಂಡಿತಕಾಶೀನಾದನ
ಖಂಡಾಶ್ರಯನಿತ್ತು ಪೊರೆವನೆಂ ಧನ್ಯಯೊ ನೀಂ ||೬||

ನಿನ್ನಯ ಪುಟ್ಟಿಂ ಶಿವಮತ |
ಮುನ್ನತಿಯಂ ಪಡೆದು ಮೆರೆವುದೆಂಬುದು ಸತ್ಯಂ |
ನಿನ್ನಂ ನೋಡದವ ಕೆಲಜನ |
ನಿನ್ನಂ ನಿಜತತ್ವ ಮಾಣದೇಂ ಮುಸ್ಕೃತರೋ ||೭||

ಸ್ಥಾವರ ಜಂಗಮಗಳೊಳಗಿಪ್ಪ ಶಿವ ಪ್ರಕಾಶಿಸುವರ್ಗೆ ಶ್ರೀಮದಾಚಾರ್ಯರ ಪರಿಸರದಿಂ ನಿನ್ನಂ ನಲಂ ಭಾಸಿಪರ್ ||
ಶಿವತತ್ವದಿನೆ ಸನಾತನಮತಾ ನಿನ್ನೊಳ್ ಗೆಲಾ ರಂಜಿಕುಂ |
ದೇವರ್ಗೆ ನಿನ್ನಯ ದಿವ್ಯತೇಜ ಪಸರ್ಸತ್ತಿಲ್ಲವೆಲ್ಲಯುಂಬಂದದಿಂ||

ವೇದಶಾಸಿತಧರ್ಮಮಾರ್ಗವ |
ಬೋಧಿಸುತ್ತಿಹ ಪ್ರಭೆಯೆ ನಿನ ನು |
ಸಾದರದೊಳಿಸುವುದರಿ ಪಾಲಿಪ ಪಂಡಿತಪ್ರಿಯನಂ ||
ವೇದಪುರುಷನನಾದಿರೂಪನು |
ಸಾಧುಸತ್ವ ಪರಿಶ್ರ ಪಾತನು |
ನೋದದಿಂ ಶುಭನಿಧಿಪವನುತತಿಯಿತ್ತು ಪೊರೆಗೆ ಸದಾ ||೮||

ಪ್ರಭಾಪಾಠಕ,
ಪಂಡಿತ ಎಸ್. ಎಂ. ಬಸವಯ್ಯ,
ಹೈಸ್ಕೂಲ್, ಶಿವಮೊಗ್ಗ

ವಿವಾಹಮಹೋತ್ಸವ

ಅರಸೀಕೆರೆ ತಾಲ್ಲೂಕು ಹಾರನಹಳ್ಳಿ ಗ್ರಾಮದ ಶ್ರೀಮಾನ್ ಮ|| ರಾ|| ಸಾಹುಕಾರ್ ವೀರಬಸಪ್ಪಶೆಟ್ಟರ ಪುತ್ರ ಚಿ|| ಶಿವಲಿಂಗಪ್ಪನೆಂಬ ವರನಿಗೂ, ಸಸಿವಾಳಗ್ರಾಮದ ಮ|| ರಾ|| ಗುರುಲಿಂಗಶೆಟ್ಟರ ಮಕ್ಕಳು ಶಿವಲಿಂಗಪ್ಪಶೆಟ್ಟರ ಪುತ್ರಿ ಚಿ|| ಸೌ|| ಶಂಕರಮ್ಮನೆಂಬ ವಧುವಿಗೂ ವೈಶಾಖ ಶು|| ೭ ಸೋಮವಾರ (ತಾ|| 27 - 4 - 1936) ದಿನದ ವಿವಾಹವು ವಿಜೃಂಭಣೆಯಿಂದ ನೆರವೇರಿತು. ಈ ವಿವಾಹ ಮಹೋತ್ಸವಕ್ಕೆ ಅನೇಕ ಜನ ಪ್ರಮುಖರು ಆಗಮಿಸಿದ್ದರು. ಅಕ್ಷತಾರೋಪಣ ಸಮಯದಲ್ಲಿ ರಾಮಪುರದ ಮಠದ ಆರ್. ಎಸ್. ಸಿದ್ಧಾಂತಿ ಮಹಾದೇವಶಾಸ್ತ್ರಿಗಳು ವೇದೋಕ್ತಮಂಗಳಾಶೀರ್ವಾದ ಮಾಡಿದ್ದು ವಲ್ಲದೆ ಪಂಚಾಚಾರ್ಯರ ಅವತಾರದ ವಿಷಯ ವಲ್ಲಿಯೂ ಮಹಿಮೆ ಪ್ರಭಾವದ ವಿಚಾರದಲ್ಲಿಯೂ ಸುಂದರ ಉಪನ್ಯಾಸವನ್ನು ಮಾಡಿದರು. ಇದೇ ಸಮಯ ದಲ್ಲಿ ಪ್ರಭಾಪೋಷಣಕ್ಕಾಗಿ ವಧೂವರರಿಂದ ಎರಡು ರೂಪಾಯಿ ಗಳನ್ನು ಕಳುಹಿಸಿದರು. ಬಳಿಕ ಸರ್ವರೂ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷವನ್ನು ಮಾಡಿದರು. ಇದೇ ಅರಸೀಕೆರೆ ತಾಲ್ಲೂಕು ಸಸಿವಾಳಗ್ರಾಮದಲ್ಲಿರುವ ಮುದುಕೇಗೌಡರ ಮಕ್ಕಳು ಪುಟ್ಟೇಗೌಡರ ಪುತ್ರಿ ಚಿ|| ಸೌ|| ಬೂ|| ಚಿ|| ಸೌ|| ಗೌರಮ್ಮನೆಂಬ ವಧುವಿಗೂ ಹಾರನಹಳ್ಳಿ ಗ್ರಾಮದಲ್ಲಿರುವ ಮ|| ರಾ|| ಗಂಗಾಧರಗೌಡರ ಪುತ್ರ ಚಿ|| ಸ|| ವೀರಭದ್ರಪ್ಪನೆಂಬ ವರನಿಗೂ ವೈಶಾಖ ಶುದ್ಧ ೮ ಗುರುವಾರ (ತಾ|| 30 - 4 - 1936) ದಿನದ ವಿವಾಹವು ವಿಜೃಂಭಣೆಯಿಂದ ನೆರವೇರಿತು. ಈ ವಿವಾಹಕ್ಕೆ ಅನೇಕ ಜನ ಬಂಧುಬಾಂಧವರು ಆಗಮಿಸಿದ್ದರು. ಈ ವಿವಾಹಮಹೋತ್ಸವ ವಾದರೂ ವೇದೋಕ್ತದ ಶಾಸ್ತ್ರೋಕ್ತವಾದರಿಂದಲೇ ನೆರವೇರಿತು. ಶಾಸ್ತ್ರಗಳು ಮಹತ್ವ ವಿಷಯಗಳಿಂ ಭಾಷಣಮಾಡಿ ಸರ್ವರನ್ನೂ ಸಂತೋಷಪಡಿಸಿದರು. ಈ ವಿವಾಹದಲ್ಲಿಯೂ ಪ್ರಭಾಪೋಷಣಕ್ಕಾಗಿ ೨ ರೂ ಗಳು ಕಳುಹಿಸಲ್ಪಟ್ಟಿವೆ. ಪ್ರತ್ಯಕ್ಷದರ್ಶಿ

ಪ್ರಸಿದ್ಧ ಪತ್ರಿಕೆ

ಧಾರವಾಡ ಡಿಸ್ಟ್ರಿಕ್ಟ್ ಹುಲಗೂರಿನಲ್ಲಿರುವ ವೇ|| ಬಸವಣ್ಣಯ್ಯನವರು ಬಸವನಾಳು ವರದ ರುದ್ರಾರಾಧ್ಯಶಾಸ್ತ್ರಿಗಳು ಜ್ಯೋತಿಷ ಮತ್ತು ವೈದಿಕ ವಿದ್ಯಾಭ್ಯಾಸವನ್ನು ಮಾಹೇಶ್ವರ ವಿದ್ಯಾರ್ಥಿಗಳಿಗೆ ಅನ್ನಕೊಟ್ಟು ಮಾಡಿಸುತ್ತಿರುವರು. ಬರತಕ್ಕ ವಿದ್ಯಾರ್ಥಿಗಳು ಮೇಲ್ಕಂಡ ಶಾಸ್ತ್ರಿಗಳವರಿಗೆ ಮೊದಲೇ ಅರ್ಜಿಯನ್ನು ಬರೆದುಕೊಳ್ಳಬೇಕು. ವಿಚಾರಣೆಯಿಂದ ಇದರಲ್ಲಿ ಪಾಸಾದ ವಿದ್ಯಾರ್ಥಿಗಳನ್ನು ಪಾಠಶಾಲೆಗೆ ಸೇರಿಸಿಕೊಳ್ಳಲಾಗುವುದು. ಈ ವಿಷಯಕವಾದ ವಿಚಾರಣೆ. ಶ್ರಾವಣಮಾಸದಲ್ಲಿ ನೆರವೇರುವುದು.

ಜ್ಯೋತಿರ್ಮಾರ್ತಂಡ ಪಾಠಶಾಲಾ,
ಪೋ|| ಹುಲಗೂರು, ಜಿ|| ಧಾರವಾಡ

ಸ್ವೀಕಾರ

ರಾಜಧಾನಿಯ ಚಾಮುಂಡಿ ಎಕ್ಸ್‌ಟೆನ್‌ಷನ್ನಿನಲ್ಲಿರುವ ಜನರಲ್ ಮರ್ಚೆಂಟ್ ಮ|| ಕೆಂಪಣ್ಣನವರು ತಮ್ಮ ಪುತ್ರಿ ಪ|| ಕುಂ|| ಸೋ|| ಚಿ|| ಸೌ|| ಪಾರ್ವತಮ್ಮನನ್ನು ಬಿ. ಎ. ಕ್ಲಾಸಿನಲ್ಲಿ ಅಭ್ಯಾಸಮಾಡುತ್ತಿರುವ ಚಿ|| ಸ|| ಪುಟ್ಟಸ್ವಾಮಿ ಎಂಬ ವರನಿಗೆ ಕೊಟ್ಟು ವಿಶೇಷ ವೈಭವದಿಂದ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ವಧೂವರರಿಂದ ಪ್ರಭಾಪೋಷಣಕ್ಕಾಗಿ 4 ರೂ ಗಳನ್ನು, ಶ್ರೀ ಜಗದಾಚಾರ್ಯರ ಸಿಂಹಾಸನಾರೂಢನಾಗಿ 2 ರೂ ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಅರಸೀಕೆರೆ ತಾಲ್ಲೂಕು ಮಾಡಾಳುಗ್ರಾಮದಲ್ಲಿರುವ ಮ|| ರಾ|| ಸಾಹುಕಾರ್ ವೀರಬಸಪ್ಪಶೆಟ್ಟರ ಪುತ್ರ ಚಿ|| ಶಿವಲಿಂಗಪ್ಪನಿಗೆ ಸಸಿವಾಳಗ್ರಾಮದ ಮ|| ರಾ|| ಶಿವಲಿಂಗಪ್ಪಶೆಟ್ಟರ ಪುತ್ರಿ ಚಿ|| ಸೌ|| ಶಂಕರಮ್ಮನನ್ನು ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು, ಮತ್ತು ಇದೇ ತಾಲ್ಲೂಕು ಸಸಿವಾಳಗ್ರಾಮದಲ್ಲಿರುವ ಮ|| ರಾ|| ಮುದುಕೇಗೌಡರ ಮಕ್ಕಳು ಪುಟ್ಟೇಗೌಡರ ಪುತ್ರಿ ಚಿ|| ಸೌ|| ಗೌರಮ್ಮನನ್ನು, ಮಾಡಾಳು ಗ್ರಾಮದಲ್ಲಿರುವ ಮ|| ರಾ|| ಗಂಗಾಧರಗೌಡರ ಪುತ್ರ ಚಿ|| ಸ|| ವೀರಭದ್ರಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಇದೇ ತಾಲೂಕು ದಾಸಪುರಗ್ರಾಮದಲ್ಲಿರುವ ಪೋಲೀಸ್ ಪಟೇಲ್ ನಂಜೇಗೌಡರಪುತ್ರಿ ಚಿ|| ಸೌ|| ಗೌರಮ್ಮನನ್ನು ಪಂಚನಹಳ್ಳಿ ಬಸವೇಗೌಡರಪುತ್ರ ಸಿದ್ಧರಾಮಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹದಲ್ಲಿ ವಧೂವರರು ಸಮರ್ಪಿಸಿದ 1 ರೂಪಾಯಿ ಒಟ್ಟು 5 ರೂ ಗಳು ರಾಂಪುರದಮಠದ ಆರ್. ಎಸ್. ಸಿದ್ಧಾಂತಿ ಮಹಾದೇವಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ರಾಜಧಾನಿಯಲ್ಲಿರುವ ಪೋಲೀಸ್ ಜಮಾದಾರ್ ಮ|| ರಾ|| ನಂಜಪ್ಪನವರು ತಮ್ಮ ಪುತ್ರಿ ಪ|| ಕುಂ|| ಸೋ|| ಚಿ|| ಸೌ|| ಶಿವಮ್ಮನನ್ನು ದಿಡ್ಡಹಳ್ಳಿಗ್ರಾಮದ ಸಿದ್ಧಲಿಂಗದೇವರ ಪುತ್ರ ಚಿ|| ಸ|| ಸಿದ್ಧಲಿಂಗದೇವರಿಗೆ ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವಧೂವರರಿಂದ 2 ರೂ ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬೆಂಗಳೂರು ಸಿಟಿಯಲ್ಲಿರುವ ಮ|| ರಾ|| ಸರಾಫ್ ಬಿ. ಬಸಪ್ಪನವರು ತಮ್ಮ ಪುತ್ರ ಚಿ|| ನಂಜುಂಡಯ್ಯನ ದೀಕ್ಷಾ ಮಹೋತ್ಸವವನ್ನು ಬೆಂಗಳೂರು ಮಹಂತಿನ ಮಠದ ಶ್ರೀಗಳವರ ಮತ್ತು ಹೋಟಗಿ ಬೃಹನ್ಮಠದ ಶ್ರೀಗಳವರ ಸನ್ನಿಧಿಯಲ್ಲಿ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ಅರಳೀಪೇಟೆ ವೀರಭದ್ರಶೆಟ್ಟರು ಮ|| ರಾ|| ರುದ್ರಪ್ಪಶೆಟ್ಟರ ದ್ವಾರಾ ತಲ್ಪಿರುತ್ತವೆ.

ವಿಜಾಪುರ ಡಿಸ್ಟ್ರಿಕ್ಟ್ ರಾಮದುರ್ಗಸಂಸ್ಥಾನದಲ್ಲಿರುವ ಮ|| ರಾ|| ಚನ್ನಬಸಪ್ಪ ಜೋಳಶೆಟ್ಟಿ ಇವರ ಪುತ್ರಿ ಚಿ|| ಸೌ|| ಶಿವಗಂಗಾವಾಯಿಯು ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರು ಸಮರ್ಪಿಸಿದ 2 ರೂ. ಗಳು ರಾಮದುರ್ಗ ಬೃಹನ್ಮಠದ ಶ್ರೀ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

ಶ್ರೀ ಜಗದ್ಗುರು ಏಕೋರಾಮಾರಾಧ್ಯ ಮತ್ತು ದಾರುಕಾಚಾರ್ಯರ ಜಯಂತ್ಯುತ್ಸವಗಳು.

ಉಜ್ಜಯಿನಿ

ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿ ರೂಪವಾದ ಮಹಾ ರಥೋತ್ಸವವು ವೈಶಾಖ ಶು|| ೫ ಆದಿತ್ಯವಾರ ದಿವಸ ವಿಶೇಷ ವೈಭವದಿಂದ ನೆರವೇರಿತು. ಈ ಮಹಾ ರಥೋತ್ಸವಕ್ಕೆ ೧೫೦೦೦ ಸಾವಿರದವರೆಗೆ ಜನರು ಸಮ್ಮಿಲಿತರಾಗಿದ್ದರು

ವೈಶಾಖ ಶು|| ೬ ದಿವಸ ಅತಿಥಿಅಭ್ಯಾಗತರ ಸಂತರ್ಪಣೆಯಾಯಿತು. ಅನಂತರ ಹಗಲು ಮೂರು ಘಂಟೆಯಿಂದ ಐದು ಘಂಟೆಯವರೆಗೆ ಶ್ರೀ ದೇವಾಲಯದ ಎದುರಿಗೆ ಕೈಲಾಸೋತ್ಸವ ಮಹೋತ್ಸವವು ನಡೆಯಿತು. ಅನಂತರ ಸದ್ಧರ್ಮ ಪರಿಷತ್ತು ಪ್ರಾರಂಭವಾಯಿತು. ವೇ|| ಶ್ರೀ ಯ. ವೀ. ಶಂಕರಶಾಸ್ತ್ರಿಗಳು ಬಿ.ಎ|| ಎಲ್|| ಎಲ್|| ಬಿ|| ಸೊಲ್ಲಾಪುರದ ಸದ್ಧರ್ಮಪ್ರವರ್ತಕರು ಮತ್ತು ವೇ|| ಬಿ. ಯ. ವೀ. ಗುರುಸ್ವಾಮಯ್ಯನವರು "ರಥೋತ್ಸವೇ ಕಲಿಂ ಕಾಲೇ ದೃಷ್ಟ್ವಾ ಮುಕ್ತಿಮವಾಪ್ನುಯಾತ್" ಇತ್ಯಾದಿ ಪ್ರಮಾಣಾನುಸಾರವಾಗಿ ಗುರುವಿನ ಸಂತೋಷಾರ್ಥವಾಗಿ ರಥೋತ್ಸವಾದಿಕಾರ್ಯಗಳು ನಡೆಯಬೇಕೆಂತಲೂ "ಶಿವಕ್ಷೇತ್ರಾಣಿ ತೀರ್ಥಾನಿ ವಿಶಿಷ್ಟಾನಿ ವಿಶಾರದಃ | ಶಿವಯಾತ್ರೋತ್ಸವಂ ನಿತ್ಯಂ ಸೇವೇತ ಸದಯಾ ಮುದಾ||" ಇತ್ಯಾದಿ ಪ್ರಮಾಣಾನುಸಾರವಾಗಿ ಶಿವಯಾತ್ರೋತ್ಸವಾದಿಗಳನ್ನು ಶಿವಭಕ್ತನು ಯಾವಾಗಲೂ ಮಾಡುತ್ತಿರಬೇಕೆಂತಲೂ "ಅನ್ಯಕ್ಷೇತ್ರೇ ಕೃತಂ ಪಾಪಂ ಶಿವಕ್ಷೇತ್ರೇ ವಿನಶ್ಯತಿ | ಶಿವಕ್ಷೇತ್ರೇ ಕೃತಂ ಪಾಪಂ ಗುರುಕ್ಷೇತ್ರೇ ವಿನಶ್ಯತಿ || ಗುರುಕ್ಷೇತ್ರೇ ಕೃತಂ ಪಾಪಂ ವಜ್ರಲೇಪೋ ಭವಿಷ್ಯತಿ||" ಇತ್ಯಾದಿ ಪ್ರಮಾಣಗಳಿಂದ ದೇವಯಾತ್ರೋತ್ಸವಗಳಿಗೆ ಪುಣ್ಯಸಂಪಾದನೆಗಾಗಿ ಹೋಗುವುದರಿಂದ ಅಂಥ ಸ್ಥಳದಲ್ಲಿ ಕುಕರ್ಮಗಳನ್ನು ಮಾಡಬಾರದೆಂದೂ, ಒಂದುವೇಳೆ ಇತರ ಕ್ಷೇತ್ರಗಳಲ್ಲಿ ಅಕಸ್ಮಾತ್ ದೋಷವನ್ನು ಮಾಡಿದರೆ ಆ ದೋಷವನ್ನು ಶಿವಕ್ಷೇತ್ರಕ್ಕೆ ಹೋಗಿ ಕಳೆದುಕೊಳ್ಳಬೇಕೆಂದೂ, ಶಿವಕ್ಷೇತ್ರದಲ್ಲಿ ಮಾಡಿದ ದೋಷವು ಗುರುಕ್ಷೇತ್ರದಲ್ಲಿ ನಷ್ಟವಾಗುವದೆಂದೂ, ಗುರುಕ್ಷೇತ್ರದಲ್ಲಿ ಮಾಡಿದ ದೋಷವು ವಜ್ರಲೇಪದಂತೆ ನಿವಾರಿಸಲಸಾಧ್ಯವಾಗುವದೆಂದೂ, "ಸೂರ್ಯೋದಯೇ ತಮೋ ಯದ್ವದ್ವಿನಾಶಮುಪಯಾತಿ ಹಿ | ಗುರುದರ್ಶನತಸ್ತದ್ವತ್ ಪಾಪರಾಶಿಃ ಪ್ರಣಶ್ಯತಿ | ಕಾರ್ಯೇಷ್ವಕಾರ್ಯೇ ಸರ್ವತ್ರ ಗುರುರೇವ ಹಿ ಕಾರಣಂ | ಗುರುದೈವಾತ್ಪರಂ ನಾಸ್ತಿ ತಸ್ಮೈ ಶ್ರೀಗುರವೇ ನಮಃ ||" ಇತ್ಯಾದಿ ಪ್ರಮಾಣಗಳಿಗನುಸಾರವಾಗಿ ಸೂರ್ಯೋದಯದಲ್ಲಿ ಕತ್ತಲೆಯು ನಿವಾರಣೆಯಾಗುವಂತೆ ಗುರುದರ್ಶನದಿಂದ ಸಕಲ ಪಾಪಗಳು ನಿವಾರಣೆಯಾಗುತ್ತವೆಂದೂ, ಸಕಲ ಕಾರ್ಯಾಕಾರ್ಯಗಳಿಗೆ ಗುರುವೇ ಕಾರಣಭೂತನಾದುದರಿಂದ ಗುರುವಿನ ಹೊರತು ಮತ್ತಾರಿಂದಲೂ ನಮ್ಮ ದೋಷಗಳು ನಾಶವಾಗುವುದಿಲ್ಲವೆಂದೂ, ಆದಕಾರಣ ಇತರ ಸ್ಥಳಗಳಲ್ಲಾಗುವ ಯಾತ್ರೋತ್ಸವಗಳಿಗಿಂತಲೂ ಆಚಾರ್ಯಸ್ಥಾನದಲ್ಲಿ ನಡೆಯುವ ಯಾತ್ರೋತ್ಸವಗಳು ಮಹಾಫಲದಾಯಕಗಳೆಂದೂ, ಗುರುಯಾತ್ರೋತ್ಸವ ವಿಷಯವನ್ನು ಕುರಿತು ಬಹು ಸಮರ್ಪಕವಾಗಿ ಭಾಷಣ ಮಾಡಿದರು

ಅನಂತರ ಶ್ರೀ ಜಗದ್ಗುರು ಸಿದ್ಧೇಶ್ವರಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಅಮೃತವಾಣಿಯಿಂದ ಆ ವಿಷಯಗಳನ್ನೆಲ್ಲಾ ಕ್ರೋಢೀಕರಿಸಿ ಭಕ್ತಮಂಡಳಿಗೆಲ್ಲಾ ಬೋಧಿಸಿ ಸರ್ವರನ್ನೂ ತೃಪ್ತಿಗೊಳಿಸಿದರು. ಅನಂತರ ಗಾನವಿದ್ಯಾವಿಶಾರದ ಸಂಸ್ಥಾನದ ಆಸ್ಥಾನ ಸಂಗೀತವಿದ್ವಾನ್ ಕೊಟ್ಟೂರು ಕೆಂಭಾವಿ ಮಠದ ಚನ್ನಬಸವಶಾಸ್ತ್ರಿಗಳು, ಹರಪುರ ಮರಿ ಕೊಟ್ರಯ್ಯನವರು ಪಿಟೀಲ್ ವಾದನ ಗಾನಾದಿಗಳಿಂದ ಸಭಿಕರನ್ನು ಆನಂದಗೊಳಿಸಿದರು. ಬಳಿಕ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ವೈಶಾಖ ಶು|| ೭ ಮಂಗಳವಾರ ಶ್ರೀಮನ್ಮಹೀಶೂರ ರಾಜಸ್ಥಾನಪಂಡಿತರೂ ಉಜ್ಜಯಿನೀ ಜಗದ್ಗುರು ಮಹಾಸಂಸ್ಥಾನಾಸ್ಥಾನ ಪಂಡಿತರೂ ಆದ ದರ್ಮಾಂಬುಧಿ ವೇ|| ಉಮಾಪತಿಗಿರಿ ಮಠದ ಶಂಕರಶಾಸ್ತ್ರಿಗಳವರು ಪ್ರಧಾನಮಾಡಿ ವಿವಿಧ ಪ್ರಮಾಣಗಳಿಂದ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವಿಷಯವಾಗಿ ಪಂಡಿತಪಾಮರರೆಲ್ಲರೂ ತಿಳಿಯುವಂತೆ ಮನೋಹರವಾದ ಭಾಷಣಮಾಡಿದರು. ಬಳಿಕ ವೇ|| ಬಿ. ಯಂ. ಗುರುಸಿದ್ಧಶಾಸ್ತ್ರಿಗಳವರು "ಆಚಾರ ಏವ ಸರ್ವೇಷಾಮುಲಂಕಾರಾಯ ಕಲ್ಪತೇ | ಆಚಾರಹೀನ ಪುರುಷೋ ಲೋಕೇ ಭವತಿ ನಿಂದಿತಃ ||" ಎಂಬ ಶ್ರೀಮದ್ರೇಣುಕಜಗದ್ಗುರುಗಳ ಮಹೋಕ್ತಿಯಂತೆ ಎಲ್ಲರಿಗೂ ಆಚಾರವು ಮುಖ್ಯವೆಂತಲೂ, ವೀರಶೈವಮತದಲ್ಲಿ ಶಿವಾಚಾರ, ಗಣಾಚಾರ, ಭೃತ್ಯಾಚಾರ, ಲಿಂಗಾಚಾರ, ಸದಾಚಾರಗಳೆಂಬ ಐದು ವಿಧವಾದ ಆಚಾರಗಳು ಹೇಳಲ್ಪಡುತ್ತವೆಂತಲೂ, ಮನುಷ್ಯವರ್ಗದಲ್ಲಿ ವಿಶುದ್ಧ ಪ್ರಾಕೃತ ಎಂದು ಎರಡು ಭೇದಗಳುಂಟಾಗಿ ವರ್ಣಾಶ್ರಮಾದಿ ವ್ಯವಸ್ಥೆಯೂ ಕೂಡ ಎರಡುವಿಧವಾಗಿರುತ್ತದೆಂತಲೂ ಒಂದು ಶಿವನಿಂದಲೂ ಮತ್ತೊಂದು ಬ್ರಹ್ಮನಿಂದಲೂ ಹೇಳಲ್ಪಟ್ಟಿರುವದೆಂತಲೂ, ಶಿವ ಧರ್ಮವು ಲಿಂಗಧಾರಿಗಳಾದ ವಿಶುದ್ಧವಿಪ್ರರಿಗೂ ಸಿತಾಮತಧರ್ಮವು ಅಲಿಂಗಿಗಳಿಗೂ ಹೇಳಲ್ಪಟ್ಟಿರುವದೆಂತಲೂ, ಲಿಂಗಪೂಜಾದಿ ಕರ್ಮನಿರತರಾದ ವೀರಶೈವರು ಸದಾಚಾರವನ್ನು ಯಾವಾಗಲೂ ಅನುಸರಿಸಬೇಕೆಂತಲೂ, ಈ ಸಮಾಜಾಂದದಲ್ಲಿ ಬ್ರಾಹ್ಮಣಾದಿ ವರ್ಣಚತುಷ್ಟಯವೂ ಬ್ರಹ್ಮಚರ್ಯಾದ್ಯಾಶ್ರಮ ಚತುಷ್ಟಯವೂ ಬರುವುದೆಂತಲೂ, ಬ್ರಾಹ್ಮಣನು ಯಜನ ಯಾಜನ ಅಧ್ಯಯನ ಅಧ್ಯಾಪನ-ದಾನ ಪ್ರತಿಗ್ರಹಗಳೆಂಬ ಆರು ಕರ್ಮಗಳನ್ನು ಆಚರಿಸಬೇಕೆಂತಲೂ, ಕ್ಷತ್ರಿಯನು ದುಷ್ಟನಿಗ್ರಹ ಶಿಷ್ಟಪರಿಪಾಲನದೊಡನೆ ರಾಜ್ಯಪಾಲನೆ ಮಾಡಬೇಕೆಂತಲೂ, ಕ್ಷತ್ರಿಯ ವೈಶ್ಯರಿಬ್ಬರು, ಯಜನ, ಅಧ್ಯಯನ, ದಾನ ಈ ಮೂರು ಕರ್ಮಗಳಿಗೆ ಅರ್ಹರೆಂತಲೂ, ಶೂದ್ರನು ತ್ರಿವರ್ಣಗಳ ಸೇವಾಪರನಾಗಿರಬೇಕೆಂತಲೂ, ಈ ತಮ್ಮ ತಮ್ಮ ಸ್ವಧರ್ಮಗಳನ್ನು ಪ್ರತಿಯೊಂದು ಜಾತಿಯವರೂ ಅವಲಂಬಿಸಬೇಕೆಂತಲೂ, ತಮ್ಮ ಜಾತಿಧರ್ಮವನ್ನು ಬಿಟ್ಟು ಅನ್ಯಜಾತಿಯ ಧರ್ಮದಲ್ಲಿ ಪ್ರವೇಶಿಸುವವನು ಸಕಲ ಕರ್ಮಗಳಿಗೂ ಅನರ್ಹನಾದ ಚಂಡಾಲನಾಗುತ್ತಾನೆಂತಲೂ, ಈ ವರ್ಣಾಶ್ರಮಾಚಾರಗಳನ್ನು ಕ್ರಿಯಾಪರರಾದ ಪ್ರತಿಯೊಬ್ಬ ಭಕ್ತಮಾಹೇಶ್ವರರೂ ಧರ್ಮಬೋಧಕರಾದ ಗುರುವರ್ಗದವರೂ ಅವಶ್ಯವಾಗಿ ಆಚರಿಸಲೇಬೇಕೆಂತಲೂ, ಲೌಕಿಕಾಚಾರದಲ್ಲಿ ಹೆಣ್ಣನ್ನು ತರುವಾಗಲೂ ಕೊಡುವಾಗಲೂ ಈ ಜಾತ್ಯಾಶ್ರಮ ವಿಚಾರವು ಅತ್ಯವಶ್ಯವಾದುದೆಂತಲೂ ಶಂಕರಸಂಹಿತಾ ಸಿದ್ಧಾಂತಶಿಖಾಮಣಿ, ಕ್ರಿಯಾಸಾರ, ಸೂಕ್ಷ್ಮಾಗಮ, ಶಿವಯೋಗಪ್ರದೀಪಿಕಾ ಮೊದಲಾದ ಅನೇಕಪ್ರಮಾಣಗಳನ್ನು ಉದಾಹರಿಸಿ ಸರ್ವರಿಗೂ ತಿಳಿಯುವಂತೆ ಸದಾಚಾರವನ್ನು ಬೋಧಿಸಿದರು. ಭಸ್ಮಧಾರಣ, ರುದ್ರಾಕ್ಷಧಾರಣ, ಮಂತ್ರಪಠನ, ಲಿಂಗಧಾರಣ, ತೀರ್ಥಪ್ರಸಾದಸೇವನ ಇವುಗಳಿಂದ ಶಿವಭಕ್ತನು ಮುಕ್ತನಾಗಿ ಶಿವಲೋಕವನ್ನು ಸೇರುತ್ತಾನಾದಕಾರಣ ಲಿಂಗಧಾರಿಯು ಶಿವಸ್ವರೂಪನಾಗುವನೆಂದು ಹೇಳುವುದೇ ಶಿವಾಚಾರವೆನಿಸುವುದೆಂದೂ, ಶ್ರೀ ಗುರುವು ಲಿಂಗವನ್ನು ಕೊಡುವಾಗ ಇದು ನಿನ್ನ ಪ್ರಾಣಲಿಂಗವು, ಇದನ್ನು ನಿನ್ನ ಪ್ರಾಣದಂತೆ ರಕ್ಷಿಸು; ಆಕಸ್ಮಾತ್ತಾಗಿ ಲಿಂಗವು ಲೋಪವಾದರೆ ಪ್ರಾಣತ್ಯಾಗವನ್ನು ಮಾಡು, ಎಂದು ವಿಧಿಸಿದಪ್ರಕಾರ ಗುರುವಿನ ವಿಷಯದಲ್ಲಿ ಕಿಂಕರಭಾವವನ್ನು ವಹಿಸಿದ ಶಿಷ್ಯನು ಲಿಂಗಪ್ರತಲೋಪಾದಿಗಳಲ್ಲಿ ಪ್ರಾಣತ್ಯಾಗವಂ ಮಾಡಿಕೊಳ್ಳುವುದೇ ಲಿಂಗಾಚಾರವೆಂದೂ, ಶಿವನಿಂದೆ, ಶಿವಾಚಾರನಿಂದೆ, ಗುರುನಿಂದೆಗಳನ್ನು ಕೇಳಿದೊಡನೆ ನಿಂದಕರನ್ನು ಶಿಕ್ಷಿಸುವುದಕ್ಕೆ ಸಿದ್ಧವಾಗುವುದೇ ಗಣಾಚಾರವೆಂದೂ, ಗುರುಲಿಂಗಜಂಗಮರಲ್ಲಿ ಭೃತ್ಯಭಾವವನ್ನು ವಹಿಸುವುದೇ ಭೃತ್ಯಾಚಾರವೆಂದೂ ಪ್ರಮಾಣಪುರಸ್ಸರವಾಗಿ ಬೋಧಿಸಿ ತಮ್ಮ ಭಾಷಣವನ್ನು ಮುಗಿಸಿದರು. ಬಳಿಕ ಶ್ರೀ ಜಗದ್ಗುರುಗಳವರು ಭಕ್ತವೃಂದಕ್ಕೆ ಸದುಪದೇಶವನ್ನು ಮಾಡಿ ಪ್ರತಿವರ್ಷ ಎಲ್ಲರೂ ಸದ್ಧರ್ಮಪರಿಷತ್ತಿಗೆ ತಪ್ಪದೆ ಬಂದು ಧರ್ಮಪರಿಗ್ರಹಮಾಡತಕ್ಕದ್ದು, ಶ್ರೀ ಗುರು ಕೃಪಾವೀಕ್ಷಣಕ್ಕೆ ಪಾತ್ರರಾಗಬೇಕೆಂದು ಅಪ್ಪಣೆ ಮಾಡಿದರು. ಅನಂತರ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು.

ವೈಶಾಖ ಶು|| ೮ ಬುಧವಾರ ಸಾಯಂಕಾಲ ೬ ಘಂಟೆಯಿಂದ ೯ ಘಂಟೆಯವರೆಗೆ ಕರೂರು ಹಿರೇಮಠದ ಗುರುಬಸವಾರ್ಯರೆಂಬ ಗಾಯಕರು ತಮ್ಮ ಗಾನವೈಖರಿಯನ್ನು ತೋರಿಸಿದರು. ಶ್ರೀ ಜಗದ್ಗುರುಗಳವರು ಇವರ ಗಾಯನಕ್ಕೆ ಸಂತುಷ್ಟರಾಗಿ ಸಂಭಾವನೆಯೊಡನೆ ಇವರಿಗೆ 'ಗಾನಭೂಷಣ' ಎಂಬ ಪದವಿಯನ್ನು ಅನುಗ್ರಹಿಸಿದರು

ಪ್ರತ್ಯಕ್ಷದರ್ಶಿ

ಶ್ರೀಕ್ಷೇತ್ರಕಾಶಿ

ಕಾಶೀ ಶ್ರೀ ಜಗದ್ಗುರು ವಿಶ್ವಾರಾಧ್ಯಪೀಠ (ಜಂಗಮವಾಡೀಮಠ) ದಲ್ಲಿ ವೈಶಾಖ ಶು|| ೩ ಶುಕ್ರವಾರ ಶ್ರೀ ಜಗದ್ಗುರು ಏಕೋರಾಮಶಿವಾಚಾರ್ಯರ ಜಯಂತ್ಯುತ್ಸವವೂ, ವೈಶಾಖ ಶು|| ೫ ಭಾನುವಾರ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತ್ಯುತ್ಸವವೂ ವಿಜೃಂಭಣೆಯಿಂದ ಜರುಗಿದವು. ಆ ದಿನಗಳ ಪ್ರಾತಃಕಾಲದಲ್ಲಿ ಕೇದಾರೇಶ್ವರನಿಗೂ, ಸಿದ್ಧೇಶ್ವರನಿಗೂ, ಶ್ರೀಮದಾಚಾರ್ಯ ಲಿಂಗೋದ್ಭವಮೂರ್ತಿಗಳಿಗೂ ಮಹಾರುದ್ರಾಭಿಷೇಕಾದಿಪೂಜೆಯು ಶ್ರೀ ಸಂಸ್ಥಾನಮಠದ ವೈದಿಕವೃಂದದಿಂದ ನೆರವೇರಿಸಲ್ಪಟ್ಟಿತು. ಸಂಜೆಗೆ ೮ ಘಂಟೆಯಿಂದ ೧೨ ಘಂಟೆಯವರೆಗೂ ಶ್ರೀ ವಿಶ್ವಾರಾಧ್ಯಗುರುಕುಲವಾಸಿಗಳಿಂದ ಸಂಗೀತಸಹಾಯದೊಡನೆ ಆಚಾರ್ಯ ಭಜನೆಯೂ, ಮಂಗಲಾರತಿಯೂ ನಡೆಯಿಸಲ್ಪಟ್ಟು ಶ್ರೀಮತ್ಪಂಚಾಚಾರ್ಯಭಕ್ತಮಂಡಲಿಗೆಲ್ಲರಿಗೂ ಪ್ರಸಾದವು ವಿನಿಯೋಗಿಸಲ್ಪಟ್ಟಿತು. ಪ್ರತಿವರ್ಷ ಪದ್ಧತಿಯಂತೆ ವೈಶಾಖ ಶು|| ೩ (ಅಕ್ಷಯತೃತೀಯಾ) ದಿವಸ ಶ್ರೀ ವಿಶ್ವಾರಾಧ್ಯ ಜಗದ್ಗುರು ಪೀಠಕ್ಕೆ ಸೇರಿದ ಸಕಲ ದೇವತೆಗಳಿಗೂ, ಶಿವಲಿಂಗಾದಿಗಳಿಗೂ ಮಹಾಪೂಜೆಯೂ, ಶೀತಕುಂಭೋದಕಾಭಿಷೇಕಾದಿಗಳೂ ಸಾಂಗವಾಗಿ ನೆರವೇರಿದವು. ತಾ|| ೨೭-೪-೩೭ ನೆಯ ದಿವಸ ಬಂಕಾಪುರ ಅರಳೆಮಠದ ವೇ|| ಪಂ|| ಸಿದ್ಧಲಿಂಗಶರ್ಮರವರಿಂದ ಶ್ರೀ ರೇಣುಕ ವೈದ್ಯಾಲಯದ ವಾರ್ಷಿಕೋತ್ಸವವೂ ನಡೆಯಿಸಲ್ಪಟ್ಟಿತು.

ಈ ಶುಭಸಮಯದಲ್ಲಿ ಏಕೋರಾಮ ಶಾಖಾನುವರ್ತಿಗಳಾದ ಮುತ್ತಿನಾಳ ಬೃಹನ್ಮಠದ ಶ್ರೀ ಪಟ್ಟದಸ್ವಾಮಿಗಳವರೂ ರಾವಲುಡಿಕೆ ಹಿರಿಯಮಠದ ವೇ|| ಪಂ|| ಸದಾಶಿವಶರ್ಮರವರೂ ವಿಶೇಷ ಭಕ್ತಿಯನ್ನು ವಹಿಸಿ, ಜಯಂತ್ಯುತ್ಸವಕಾರ್ಯವನ್ನು ನೆರವೇರಿಸಿದರು. ಶ್ರೀ ಜಗದಾಚಾರ್ಯವರ್ಯರು ಸಕಲ ವೀರಶೈವರಿಗೂ ಸುಖಸಂಪದಗಳನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುವ,

ಸೆಕ್ರೆಟರಿ,
ಕಾಶೀವೀರಶೈವ ವಿದ್ವತ್ಸಂಘ

ಸೊಲ್ಲಾಪುರ.

ಸೊಲ್ಲಾಪುರದಲ್ಲಿರುವ ಸುಪ್ರಸಿದ್ಧ ಹಿರೇಮಠ (ನಂದೀಮಠ) ದಲ್ಲಿ ವೈಶಾಖ ಶು|| ೩ ಶುಕ್ರವಾರ ದಿವಸ ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ ಜಯಂತೀ ಮಹೋತ್ಸವವು ವೀರಶೈವ ಸ್ತ್ರೀಸಮಾಜವತಿಯಿಂದ ಒಳ್ಳೇ ವೈಭವದಿಂದ ನೆರವೇರಿಸಲ್ಪಟ್ಟಿತು. ಪ್ರಥಮತಃ ಜಗದಾಚಾರ್ಯರ ಭಾವಚಿತ್ರವನ್ನೂ, ಲಿಂಗೋದ್ಭವ ಮೂರ್ತಿಯನ್ನೂ ಸಿಂಹಾಸನದ ಮೇಲೆ ವಿರಾಜಮಾನಗೊಳಿಸಿ, ಷೋಡಶೋಪಚಾರಗಳಿಂದ ಪೂಜಿಸುವುದರಲ್ಲಿ ಬಂದಿತು. ಅನಂತರ ಕುಮಾರಿಯವರು ಸ್ತೋತ್ರವನ್ನು ಪಾಡಿದರು. ಆಮೇಲೆ ಸೌ|| ಬಸವಮ್ಮ ನಂದೀಮಠ

ಮತ್ತು ಸೌ॥ ಸೋನುಬಾಯಿ ಕಾಸೇಗಾಂವಕರ ಇವರು ಶ್ರೀಮಜ್ಜಗದ್ಗುರು ಏಕೋರಾಮರ ಲೀಲಾವಿಷಯವಾಗಿ ಒಳ್ಳೇ ಮನೋಹರವಾಗಿ ಭಾಷಣಮಾಡಿದರು. ಜನಂಕರ, ಸೌ॥ ಭಾಗೀರಥೀಬಾಯಿಯವರು ಜನಮೇಜಯ ಭೂಪಾಲನು ತನ್ನ ತಾಯಿಯ ಹೆಸರಿನಿಂದ ಕೇದಾರಪೀಠಕ್ಕೆ ಭೂದಾನವನ್ನು ಮಾಡಿದ ವಿಷಯವನ್ನೂ, ಜಗದಾಚಾರ್ಯರ ಪ್ರಾಚೀನತ್ವ ವಿಷಯವನ್ನೂ, ಗುರುಭಕ್ತಿ, ಅಷ್ಟಾವರಣ ವಿಷಯವನ್ನೂ ಕುರಿತು ಭಕ್ತಿರಸವು ಉಕ್ಕೇರುವಂತೆ ಉಪನ್ಯಾಸ ಮಾಡಿದರು. ಮಂಗಳಾರತಿಯಾದನಂತರ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ವೈಶಾಖ ಶು॥ ೫ ದಿವಸ ಇದೇ ಮಠದಲ್ಲಿ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವು ಸ್ತ್ರೀಸಮಾಜದ ವತಿಯಿಂದ ಮಾಡಲ್ಪಟ್ಟಿತು. ಪ್ರಥಮದಲ್ಲಿ ಜಗದಾಚಾರ್ಯರ ಭಾವಚಿತ್ರಕ್ಕೂ ಲಿಂಗೋದ್ಭವ ಮೂರ್ತಿಗೂ ಯಥಾವಿಧಿಯಾಗಿ ಪೂಜೆಯಾದನಂತರ ಕುಮಾರಿಯ ಪದ ಸ್ತೋತ್ರವೂ. ಸೌ॥ ಬಸವಮ್ಮ ನಂದೀಮಠ, ಸೌ॥ ಸೋನಾಬಾಯಿ ಕಾಸೇಗಾಂವಕರ ಇವರ ಭಾಷಣಗಳಾಗಿ ಮಂಗಳಾರತಿಯಾದನಂತರ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ

ಹೋಟಗಿ

ಜಯಂತಿಯೇ ಜಾತ್ರೆಯಾಗಿ ಪರಿಣಮಿಸಿತು!

ಪ್ರತಿ ವರುಷ ಪದ್ಧತಿಗನುಸರಿಸಿ ಈ ವರ್ಷವಾದರೂ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವು ಒಳ್ಳೇ ವೈಭವದಿಂದ ಸಾಗಿತು.

ಚೈ॥ ಬ॥ ೧೦ ಸೋಮವಾರ ಮೊದಲ್ಗೊಂಡು ವೈ॥ ಶು॥ ೫ ವರೆಗೆ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಗಳಿಗೂ, ಹೋಟಗಿ ಬೃಹನ್ಮಠಾಧೀಶ್ವರ ಸ್ವಾಮಿಗಳವರ ಗದ್ದುಗೆಗಳಿಗೂ ರುದ್ರಾಭಿಷೇಕವು, ಮಹಾಗಣಾರಾಧನೆಯೂ ವೈಭವದಿಂದ ಜರಗಿದವು.

ಚೈತ್ರ ವದ್ಯ ಅಮಾವಾಸ್ಯೆಗೆ ಸರಿಯಾಗಿ ವಾರ್ಷಿಕ ಪದ್ಧತಿಯ ಪ್ರಕಾರ ಅಲ್ಲಮಪ್ರಭು ಆಲೂರು ಇವರು ಶ್ರೀಜಗದ್ಗುರು ರೇಣುಕವಿಜಯಪುರಾಣಾಂತರ್ಗತ ಗೋರಕ್ಷಗರ್ವಹರಣದ್ವಾದಶಸಹಸ್ರಕನ್ಯಾಜೀವದಾನ ವಿಷಯಗಳನ್ನು ಮನೋಹರವಾಗಿ ಬೋಧಿಸಿದರು.

ವೈಶಾಖ ಶು॥ ೨ ದಿವಸ ಸುಪ್ರಸಿದ್ಧ ಕೀರ್ತನಕಾರರಾದ ಶ್ರೀ ಸದಾನಂದಬುವಾ ಇವರ ವ್ಯಾಖ್ಯಾನವಾಯಿತು. ವೈಶಾಖ ಶು॥ ೩ ದಿವಸ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ದಿವ್ಯಲಿಂಗೋದ್ಭವಮೂರ್ತಿಯನ್ನು ಭವ್ಯವಾದ ಮಂಟಪದಲ್ಲಿ ಮೂರ್ತಗೊಳಿಸಿದ ಮೇಲೆ ಷೋಡಶೋಪಚಾರ ಪೂಜೆಯಾಯಿತು. ಬಳಿಕ ಶ್ರೀ ಸದಾನಂದಬುವಾ ಇವರು "ಗುರುಮಹತ್ವ" ವಿಷಯದಲ್ಲಿ ಕೀರ್ತನವನ್ನು ಮಾಡಿದರು. ಬಳಿಕ ಜಗದ್ಗುರುಗಳ ಮೂರ್ತಿಯನ್ನು ಪಲ್ಲಕ್ಕಿಯಲ್ಲಿರಿಸಿ ಅಡ್ಡಪಲ್ಲಕ್ಕಿಮಹೋತ್ಸವವು ಜರುಗಿಸಲ್ಪಟ್ಟಿತು. ಅಲ್ಲಮಪ್ರಭುಗಳ ಅಧ್ಯಕ್ಷತೆಯಲ್ಲಿ ಸಭೆಸೇರಿ, ನೀಲಕಂಠ ಕರಸೆ, ಶಿಟ್ಟಪ್ಪ ಈ ಬಾಲಕರ ಧಾರ್ಮಿಕವಿಷಯದಲ್ಲಿ ವ್ಯಾಖ್ಯಾನಗಳಾದವು. ಪಂಚಾಕ್ಷರಿ, ಬಂಡಪ್ಪ ಇವರು ಲಿಂಗದ ವಿಷಯದಲ್ಲಿ ಸಂವಾದಿಸಿದರು.

ವೈಶಾಖ ಶು॥ ೪ ದಿವಸ ಸದಾನಂದಬುವಾ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ, ನೀಲಪ್ಪ, ನೀಲಕಂಠಪ್ಪ, ರಾಚಪ್ಪ, ಹೋಟಗೀ ಶ್ರೀಗಳು ಇವರ ವ್ಯಾಖ್ಯಾನಗಳಾದವು. ರಾತ್ರಿ ೮ ಘಂಟೆಗೆ ವಾರ್ಷಿಕ ಪದ್ಧತಿಯಂತೆ, ಲಿಂಬೀಚಿಂಚೋಳಿಯಿಂದ ನಂದಿಧ್ವಜಗಳು ಬಂದವು. ಅವುಗಳನ್ನು ಒಳ್ಳೇ ವೈಭವದಿಂದ ಬೃಹನ್ಮಠಕ್ಕೆ ತಲ್ಪಿಸಿದರು. ಬಾಗಲಕೋಟೆ ಕಡೆಯಿಂದ ಬಂದ ಓರ್ವ ಮುಸಲ್ಮಾನನು ವೀರಶೈವಧರ್ಮಪರವಾಗಿ ಪದ್ಯಗಳನ್ನು ಹಾಡಿದನು.

ವೈಶಾಖ ಶು॥ ೫ ದಿವಸ ಶ್ರೀ ದಾರುಕಾಚಾರ್ಯಲಿಂಗೋದ್ಭವಮೂರ್ತಿಗೂ, ಗದ್ದುಗೆಗೂ ಪಂಚಾಮೃತ ರುದ್ರಾಭಿಷೇಕವು ನೆರವೇರಿಸಲ್ಪಟ್ಟಿತು. ಬಳಿಕ ಮಹಾಗಣಾರಾಧನೆಯು ನೆರವೇರಿತು. ಈ ದಿವಸ ಆಕಸ್ಮಾತ್ತಾಗಿ, ಸಮಾಜಕಾರ್ಯಧುರಂಧರರೂ, ಗುರುವರ್ಗದ ಮುಕುಟಮಣಿಗಳೂ ಆದ ಶ್ರೀ ರೇಚಲಿಂಗಸ್ವಾಮಿಗಳು ಪರಾಂಡಕರ ಇವರ ಆಗಮನವೂ, ಪಂಡಿತಪ್ರಕಾಂಡರೂ, ಶಾಂತಮೂರ್ತಿಗಳೂ, ಸದಾಚಾರನಿಷ್ಠರೂ ಆದ ಪಂಡಿತ ಶ್ರೀ ಜಗದೀಶಶಾಸ್ತ್ರಿಗಳವರು ಸೊಲ್ಲಾಪುರದ ಸಂಸ್ಕೃತಪಾಠಶಾಲಾಧ್ಯಾಪಕರು ಸೋಲಾಪೂರ ಈ ಮಹನೀಯರ ಆಗಮನವೂ ಆಯಿತು. ಚಪ್ಪಳಗಾಂವವಾಡಿ, ದಿಂಡೂರು, ಲಿಂಬೀಚಿಂಚೋಳಿ, ತೀರ್ಥ, ದರ್ಗನಹಳ್ಳಿ, ರಾಮಪುರ ಈ ಗ್ರಾಮಗಳ ಪಂಚಾಚಾರ್ಯ ಭಜನಾಸಂಘದವರ ಭಜನೆಯೂ, ಚಪ್ಪಳಗಾಂವವಾಡಿ ಬಾಲಕರ ಸಂವಾದವೂ, ಚಿಂಚೋಳಿಗ್ರಾಮದಬಾಲಕರ ಸಂವಾದವೂ ನಡೆದವು. ಕುಮಾರಿ ಗೌರಾಬಾಯಿ ಕಟಾಪ, ಶಾಂತಾಬಾಯಿ ಮಾಣಿಬಳೆ, ಸುಶೀಲಾಬಾಯಿ ಮಾಣಿಬಳೆ ಈ ಚಿಕ್ಕಮಕ್ಕಳು ಗುರುಮಹತ್ವವನ್ನು ಸಂವಾದಿಸಿದರು. ಧೊಂಡಾಬಾಯಿ ಇಟ್ಟಣೆ, ಪಂಢರಬಾಯಿ ಕರಸೆ, ಗುರುಬಾಯಿ ಮರೆಪತ್ತಿ, ಸೌ॥ ಭಾಗೀರಥೀಬಾಯಿ ಕಟಾಪ ಇವರ ವ್ಯಾಖ್ಯಾನಗಳು ಸ್ತ್ರೀನೀತಿ, ಅಷ್ಟಾವರಣವಿಷಯಗಳಲ್ಲಿ ಅತ್ಯಂತ ಮನೋಹರವಾಗಿ ನಡೆದವು.

ರಾಮಶೆಟ್ಟಿಯವರ ಸುಪುತ್ರಿಯರು ಒಂದು ಮನೋಹರವಾದ ನೂಲಿನ ಮಾಲೆಯನ್ನು ಜಗದಾಚಾರ್ಯರ ಪಾದಕ್ಕೆ ಸಮರ್ಪಿಸಿದರು. ಸಿದ್ಧವೀರಶರ್ಮಾ ಜೈನಾಪುರ, ಶಿವಲಿಂಗಶರ್ಮಾ ಹಂಗರಗಿ, ಶಂಕರಶರ್ಮಾ ದೇವಣಗಾಂವ, ಸಿದ್ಧವೀರಶರ್ಮಾ ಪತಗಾನೂರು ಇವರ ಸಂವಾದಗಳಾದವು. ನಾನಯ್ಯ ಎಂಬವರು ಮನೋಹರವಾಗಿ ಮರಾಠಿಯಿಂದ ಕೆಲವು ಪದ್ಯಗಳನ್ನು ಹಾಡಿದರು. ಅಷ್ಟಕ್ಕೆ ಸಭೆಯ ಕಾರ್ಯಕ್ರಮವನ್ನು ಸ್ವಲ್ಪಹೊತ್ತು ನಿಲ್ಲಿಸಿ, ಪುನಃ ೮ ಘಂಟೆಗೆ ಸಭೆಯು ಸೇರಿಸಲ್ಪಟ್ಟಿತು. ಶ್ರೀ ಪರಾಂಡಕರ ಶ್ರೀಗಳು ಶ್ರೀ ಜಗದೀಶಶಾಸ್ತ್ರಿಗಳವರು ಅಧ್ಯಕ್ಷಪದವನ್ನು ಸ್ವೀಕರಿಸಬೇಕೆಂದು ಸೂಚಿಸಿದರು. ಸೋಲಾಪುರದ ಸುಪ್ರಸಿದ್ಧ ಶ್ರೀಮಂತರಾದ ಸಿದ್ಧರಾಮಪ್ಪ ಪಟ್ಣೆ ಇವರು ಅನುಮೋದಿಸಿದರು. ಹೋಟಗೀ ಶ್ರೀಗಳು ಪ್ರಾಸ್ತಾವಿಕ ವಿಷಯವನ್ನು ಸೂಚಿಸಿದಮೇಲೆ ಅಧ್ಯಕ್ಷರಾದ ಪಂಡಿತಾಗ್ರಗಣ್ಯರು ಮನೋಹರವಾದ ಉಪನ್ಯಾಸವನ್ನು ಮಾಡಿದರು. "ಮುಕ್ತಿಮೂಲಂ ಗುರೋಃ ಕೃಪಾ" "ಮಂತ್ರಮೂಲಂ ಗುರೋರ್ವಾಕ್ಯಂ" ಈ ವಿಷಯವನ್ನೆತ್ತಿಕೊಂಡು ಜಯಂತಿಯ ತತ್ವವನ್ನೂ, ಜಯಂತಿಯನ್ನು ಮಾಡುವವರಿಗಾಗುವ ಲಾಭವನ್ನೂ ಪ್ರಮಾಣಪುರಸ್ಸರವಾಗಿ ಬೋಧಿಸಿದರಲ್ಲದೆ ಇವನ್ನು ವಿರೋಧಿಸುವವರಿಗೆ ಆಗುವ ದುಷ್ಫಲವನ್ನೂ ಪ್ರತಿಪಾದಿಸಿದರು. ಶ್ರೀ ಸದಾನಂದಬುವಾ ಕೀರ್ತನಕಾರರಿಗೆ, ಈ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವದಲ್ಲಿ ಜಗದಾಚಾರ್ಯರ ಕೃಪಾಶೀರ್ವಾದರೂಪವಾದ ಒಂದು ಸುವರ್ಣಪದಕವನ್ನು 'ಕೀರ್ತನಕಂಠೀರವ' ಎಂಬ ಪದವಿಯೊಡನೆ ಪಂಡಿತ ಶ್ರೀ ಜಗದೀಶಶಾಸ್ತ್ರಿಗಳವರ ಹಸ್ತದಿಂದ ಹೋಟಗಿ ವೀರಶೈವರ ಅಗ್ರಹದಿಂದ ಆಶೀರ್ವದಿಸುವುದರಲ್ಲಿ ಬಂದಿತು. ಅಷ್ಟಕ್ಕೆ ಸಭೆಯು ವಿರಮಿಸಲ್ಪಟ್ಟಿತು. ಬಳಿಕ ಅಡ್ಡಪಲ್ಲಕ್ಕಿಯಲ್ಲಿ ಜಗದಾಚಾರ್ಯರ ಲಿಂಗೋದ್ಭವಮೂರ್ತಿಯನ್ನು ಮೂರ್ತಗೊಳಿಸಿ, ನಾನಾವಿಧ ವಾದ್ಯವೈಭವದೊಡನೆಯೂ, ನಂದಿಧ್ವಜಗಳೊಡನೆಯೂ ಮಹೋತ್ಸವವು ಬೃಹನ್ಮಠದಿಂದ ಹೊರಟು ಗ್ರಾಮವನ್ನೆಲ್ಲಾ ಪವಿತ್ರಗೊಳಿಸಿ, ಪುನಃ ಬೃಹನ್ಮಠಕ್ಕೆ ಬಂದು ತಲುಪಿತು. ಜಗದಾಚಾರ್ಯರ ಜಯಜಯಕಾರದೊಡನೆ ಕಾರ್ಯಕ್ರಮವು ಪೂರೈಸಲ್ಪಟ್ಟಿತು.

ವೈಶಾಖ ಶು॥ ೬ ದಿವಸ ಪ್ರಾತಃಕಾಲ ೮ ಘಂಟೆಗೆ ನಾನಯ್ಯನವರು ವೀರಶೈವಧರ್ಮಪರ ಪದ್ಯಗಳನ್ನು ಹಾಡಿ ಸಭಿಕರನ್ನು ಆನಂದಗೊಳಿಸಿದರು. ಪರಾಂಡಕರ, ಶ್ರೀಗುರುವರ್ಯಸ್ವಾಮಿ ಸುತ್ತಗಟ್ಟಿ, ಸದಾನಂದಬುವಾ, ಶಂಕರ ಭಾದುಲೆಯವರ ವ್ಯಾಖ್ಯಾನಗಳಾದವು. ಹೋಟಗೀ ಶ್ರೀಗಳು ಸರ್ವರ ಆಭಾರಮನ್ನಿಸಿದರು. ಪುರಾಣಿಕರಿಗೂ, ಗವಾಯಿಗಳಿಗೂ ಮರ್ಯಾದೆಗಳು ಮಾಡಲ್ಪಟ್ಟಮೇಲೆ ಸರ್ವಕಾರ್ಯಕ್ರಮಗಳು ಪೂರೈಸಿದವು. ಜಗದಾಚಾರ್ಯರ ಜಯಂತೀಮಹೋತ್ಸವಕ್ಕೆ ಬಾರ್ಸಿ, ಪಂಢರಪೂರ, ಕರಕಂಬ, ಸೋಲಾಪೂರ, ಕುಂಭಾರಿ, ಭೋರಾಮಣಿ, ಸಂಗದರಿ, ದರ್ಗನಹಳ್ಳಿ, ಸಿರ್ಸನಹಳ್ಳಿ, ಎತ್ತನಹಳ್ಳಿ, ಲಿಂಬೀಚಿಂಚೋಳಿ, ಘೋತ್ರಿ, ಸಿಂಗಡಗಾಂವ, ದಿಂಡೂರು, ಬೋರೇಗಾಂವ, ಚಪ್ಪಳಗಾಂವ, ಚಪ್ಪಳಗಾಂವವಾಡಿ, ಅಕ್ಕಲಕೋಟ, ನೇಗಾಂವ, ಕಣಮಸೆ, ಮಳಸಂಗ, ಕರಜಗೀ, ಮಣೂರ, ಜಹಿರವಾಡಿ, ಸಿಂದಖೇಡ, ವಿಜಾಪೂರ, ಇಂಡಿ, ಮಾನಾಪೂರ, ಸರಸಂಬ, ಪಿಲಂಜಿ, ಮೋಸ್ನೇ, ಶಾಕಾಪೂರ ಇತ್ಯಾದಿ ಗ್ರಾಮಗಳಿಂದ ಸಹಸ್ರಾರು ಜನರು ಬಂದಿದ್ದರು. ಹೋಟಗಿಯಲ್ಲಿ ಜಯಂತೀಮಹೋತ್ಸವವನ್ನು ಹಬ್ಬಗಳಂತೆ ಸರ್ವರೂ ತಮ್ಮ ತಮ್ಮ ಗೃಹಗಳಲ್ಲಿ ಮೃಷ್ಟಾನ್ನವನ್ನು ಮಾಡಿ, ಜಗದ್ಗುರುವಿಗೆ ನಿವೇದಿಸಿ ಭೋಜನಗೈದರು. ಸ್ವಲ್ಪ ಇದ್ದದ್ದನ್ನು ಹೆಚ್ಚಾಗಿ ಬೆಳೆಯಿಸಿ ಹೇಳುವ ಉತ್ಸವಗಳು ವಿಶೇಷವಾಗಿ ಕಂಡರೂ ಇಲ್ಲಿಯ ಉತ್ಸವವನ್ನು ನಿಜವಾಗಿ ಎಷ್ಟು ಬರೆದರೂ ಸ್ವಲ್ಪವೇ ಎಂದು ಪ್ರತ್ಯಕ್ಷಕಂಡವರಿಗೆ ಗೋಚರಿಸದಿರದು. ಈ ಪ್ರಕಾರ ಜಯಂತೀಮಹೋತ್ಸವವನ್ನು ನೆರವೇರಿಸುವ ಹೋಟಗೀ ವೀರಶೈವರೇ ಧನ್ಯರು! ಈ ವರ್ಷ ಸೋಲಾಪೂರದಿಂದ, ಪಟ್ಣೆ, ಹಿರೇಹಬ್ಬು, ದರ್ಗೋಪಾಟೀಲ, ಲಿಗಾಡೆ, ಬುಗಡೆ, ಶೀಲವಂತ, ಇತ್ಯಾದಿ ಶ್ರೀಮಂತರು ಬಂದಿದ್ದರು. ಇಲ್ಲದೆ ಸೌ॥ ಭಾಗೀರಥೀಬಾಯಿ ಕಟಾಪ ಈ ಮಾತೃಶ್ರೀಯವರ ಉಪದೇಶದಿಂದಲೂ, ಇವರ ಗುರುಭಕ್ತಿ ವಿಶೇಷದಿಂದಲೂ, ಶೇಟೆ ಮುಕ್ತಾಬಾಯಿ, ಶಂಕರವ್ವ ಚಾಕೋತೆ, ರತ್ನವ್ವ ಹಿರೇಹಬ್ಬು, ಪಾರ್ವತೀಬಾಯಿ ತಮಶೆಟ್ಟಿ ಗಾಬಣೆ, ಕೊಂಡಾಬಾಯಿ ಮಾಳಗೆ, ಇತ್ಯಾದಿ ಸುಪ್ರಸಿದ್ಧ ಶ್ರೀಮಂತರ ಮನೆತನದ ಮಾತೃಶ್ರೀಯವರು ಬಂದು ಗುರುಸೇವೆಯನ್ನು ಮಾಡಿ ತಮ್ಮಲ್ಲಿಯ ಗುರುಭಕ್ತಿಯನ್ನು ಇಮ್ಮಡಿಯಾಗಿ ಮಾಡಿಕೊಂಡರು. ಇದೇ ಸದ್ಬುದ್ಧಿಯು ಸರ್ವಪುರುಷರಲ್ಲಿಯೂ, ಮಾತೃಶ್ರೀಯವರಲ್ಲಿಯೂ ನಿಜವಾಗಿ ಉಳಿಯುವಂತೆ ಜಗದಾಚಾರ್ಯರು ಕರುಣಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ. ರಾಮಚಂದ್ರಪ್ಪ ದರ್ಗನಹಳ್ಳಿಕರ, ಮು॥ ಸೋಲಾಪೂರ ಇವರು ಸ್ವತಃ ಬಡವರಾಗಿದ್ದರೂ ಗುರುಭಕ್ತಿವಿಶೇಷದಿಂದ ಒಂದು ಭವ್ಯವಾದ ಸಿಂಹಾಸನ, ಒಂದು ಕುರ್ಚಿ, ಒಂದು ಟೇಬಲ್, ಒಂದು ಪೇಟಿ, ಇಂತಿಷ್ಟು ಸಾಮಾನುಗಳನ್ನು ಜಯಂತಿ ಸಮಯದಲ್ಲಿ ಸ್ವತಃ ತಯಾರಿಸಿ ಅರ್ಪಿಸಿದರು. ಈ ಭಕ್ತವೃಂದವು ಜಗದಾಚಾರ್ಯರಲ್ಲಿ ಇದಕ್ಕಿಂತಲೂ ಹೆಚ್ಚಾಗಿ ಭಕ್ತಿಯನ್ನಿಟ್ಟರೆ ನಿತ್ಯಸುಖರೂಪಮೋಕ್ಷವನ್ನು ಪಡೆಯುವುದರಲ್ಲಿ ಯಾವ ಸಂಶಯವೂ ಇಲ್ಲ.

ಬೋಲೋ ಬೋಲೋ, ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜಯ!

ಉತ್ಸವಭಾಗಿಯಾದ ಜಗದ್ಗುರು ಪಾದಸೇವಕ

ಆರೇತೆಲಗಡ್ಡಿ

ಸೊರಬ ತಾ॥ ಅರೆತೆಲಗಡ್ಡಿಯಲ್ಲಿ ಇದೇ ಧಾತೃ ಸಂ॥ ವೈಶಾಖ ಶು॥ ೩ ದಿವಸ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವವು ಶು॥ ೫ ದಿವಸ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವು ಪ್ರತಿವರ್ಷ ಮಾಡುವ ಪದ್ಧತಿಯ ಮೇರೆಗೆ ವಿಶೇಷ ವೈಭವದಿಂದ ನೆರವೇರಿದವು. ಶಾಂತನೀರಮಠದ ವೀರದೇವರೊಡೆಯರು ಗ್ರಾಮದಲ್ಲಿ ಸರ್ವರಿಗೂ ತಿಳುಹಿಸಿ ಈ ದಿವಸಗಳನ್ನು ದೊಡ್ಡ ಹಬ್ಬದಂತೆ ನೆರವೇರಿಸಿದರು. ಜಗದಾಚಾರ್ಯರ ಮೂರ್ತಿಗೆ ಷೋಡಶೋಪಚಾರಪೂಜೆಯಾಗಿ ಅನ್ನಸಂತರ್ಪಣೆಯಾಯಿತು. ಪಟೇಲ ಮಲ್ಲಪ್ಪಗೌಡರು ಬಿಳಗಲಿ ಪಟೇಲ ಬಸಪ್ಪಗೌಡರು ವಿಶೇಷಭಾಗವಹಿಸಿ ಕೆಲಸ ಮಾಡಿದರು. ಈ ಗ್ರಾಮದ ಭಕ್ತಮಹೇಶ್ವರರಿಗೆಲ್ಲಾ ಜಗದ್ಗುರು ಪಂಚಾಚಾರ್ಯರು ಸಕಲಸಂಪತ್ತುಗಳನ್ನೀಯಲೆಂದು ಪ್ರಾರ್ಥನೆ.

ಗುರುಶಂಕರ.

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮತಾಳಿ [illegible] ೮|| ವರ್ಷ [illegible] ಗೆ [illegible] ವರ್ಷಗಳು ತುಂಬಿ ಹತ್ತನೆಯ ವರ್ಷವು ಪ್ರಾರಂಭವಾಗಿರುವುದ[illegible] ಕೆಲವರು ಮೊದಲನಂತೆ [illegible] ಚಂದಾದಾರರಾಗಬೇಕೆಂದು ಕೋರಿಕೆ [illegible] ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾ[illegible] ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ [illegible] ಬೇಕಾಗುವುದು [illegible] ಹೊರಟಿ[illegible] ಮನಿಯಾ[illegible] ವಿ. ಪಿ. ಮಾಡಿದರೆ [illegible] ಚಂದಾದಾರರನ್ನು [illegible] ಚಂದಾದಾರರ [illegible] ಮನಿಯಾರ್ಡರ್ ಮಾಡಿಸ[illegible] ಹೀಗೆ ಮಾಡದವರಿಂದ [illegible] ಮನಿಯಾರ್ಡರ [illegible] ತಮ್ಮ [illegible] ನ್ನು [illegible] ಮಾತ್ರ [illegible]

[illegible]

ಪಂಚಾಚಾರ್ಯ ಪ್ರಭಾ.

[illegible] ೧೯೩೬ [illegible] ಸೋಮವಾರ

ಸೂತಕವಿಚಾರ

[illegible] |
[illegible] ||
[illegible] |
[illegible] |

ಕೆಲವು ಜಂಗಮರಲ್ಲಿ ಹಾಗೂ [illegible] ಸಮಯದಲ್ಲಿ [illegible] ಕಬ್ಬಿಣದ [illegible] ಹೀಗೆ ಮೂಡಿ ರುವುದಿಲ್ಲವೋ, ಹಾಗೆಯೇ ಶಿವಲಿಂಗಸಂಬಂಧವುಳ್ಳ [illegible] ಕೇವಲ ಪ್ರಾಕೃತಭಾವನೆಂದ [illegible] ಲಾಗ ಸ್ಪದಿಲ್ಲ ಎಲ್ಲಿಯಲ್ಲಿ ತೋರುವ ಶಕ್ತಿಯು [illegible] ನಿಯಮದಲ್ಲಿ ಆ ಶಕ್ತಿ [illegible] ಜ್ಯೋತಿ ಸ್ವರೂಪವಾಗಿ ಹೇಗೆ ತೋರುತ್ತದೆಯೋ, ಹಾಗೆಯೇ ಶಿವಜ್ಯೋತಿಯು [illegible] ಲಿಂಗಸಂಬಂಧದಿಂದ ಲಿಂಗಸ್ವರೂಪನಾಗಿಯೇ ತೋರು ತ್ತಾನೆ ಎಂದು ಬೋಧಿಸುವ [illegible] ವಿದ್ವಜ್ಜನಗಳ ಪ್ರಮಾಣಬಲದಿಂದಲೇ

[illegible] ಲಿಂಗಾರ್ಚನು ಯಸ್ಯ [illegible] ಪವಿತ್ರಃ |
[illegible] ಯತೀನಾಂ ಚ [illegible] ನಾಸ್ತಿ ಸೂತಕಂ ||

ಯಾವನು ಯಾವಾಗಲೂ ಶಿವಲಿಂಗಾರ್ಚನೆಮಾಡು ವುದರಲ್ಲಿ ಆಸಕ್ತನಾಗಿರುವನೋ, ಯಾವನು ಲಿಂಗದೇವ [illegible] ನಲ್ಲಿ ಆರಾಧಿಸುತ್ತ ಆಹಿತಾಗ್ನಿಯೆನಿಸಿಕೊಂ ಡಿರುವನೋ, [illegible] ವಾನಪ್ರಸ್ಥ ಯತ್ಯಾಶ್ರಮಗ ಳನ್ನು ಹೊಂದಿರುವರೋ, ಅಂಥವರಿಗೆ ಸೂತಕದೋಷಗಳಿರುವು ದಿಲ್ಲವೆಂದು ವರಾರಹಸ್ಯ [illegible] ಉಕ್ತಿಯಿರುವುದರಿಂದ, ಸ್ತ್ರೀಯರು ರಜಸ್ವಲಾದಿಸೂತಕಗಳಿಂದೊಡಗೂಡಿದರೂ ಗುರುವಿನಿಂದ ಧರಿಸಲ್ಪಟ್ಟ ಶಿವಲಿಂಗವನ್ನು ದೇಹದಿಂದ ತೆಗೆಯಬಾರದೆಂದೂ, ಸೂತಕಗಳೊದಗಿದ ದಿವಸಗಳ ಲ್ಲಿಯೂ ಲಿಂಗಪೂಜೆಯೆಂಬ ನಿತ್ಯವ್ರತವನ್ನು ಬಿಡಬಾರ ದೆಂದೂ ಸ್ಪಷ್ಟವಾಗುತ್ತದೆ ಪ್ರಮಾಣವಾಕ್ಯಗಳನ್ನತಿ ಕ್ರಮಿಸಿ ಕೇವಲ ಯುಕ್ತಿವಾದವನ್ನೇ ಮುಂದುಮಾಡಿ ಸೂತಕವು ಬಂದಕಾಲದಲ್ಲಿ ಶರೀರವು ಅಶುಚಿಯಾಗು ವದು ಇಂಥ ಅಶುಚಿಶರೀರದಲ್ಲಿ ಶಿವಲಿಂಗವನ್ನು ಧರಿಸು ವುದರಿಂದಲೂ ಪೂಜಿಸುವುದರಿಂದಲೂ ಲಿಂಗವು ಅಪವಿತ್ರ ವಾಗಿಬಿಡುವುದೆಂದು ಹೇಳುವವರ ಅಂಥ ಹಠ ವನ್ನು ಯುಕ್ತಿವಾದದಿಂದಲೇ ಪರಿಹರಿಸಬೇಕಾಗುವದು ಹಾಗಾದರೆ ಅಶುಚಿಯಾದ ಶರೀರಸಂಬಂಧದಿಂದ ಪಂಚ ಸೂತ್ರ ಘಟಿತವಾದ ಆ ಶಿವಲಿಂಗದಲ್ಲಿ ಗುರುವಿನಿಂದ ನೆಲೆಗೊಳಿಸಿದ ಚಿತ್ಕಲಾಸ್ವರೂಪವಾದ ಆ ಪರಶಿವನೇ ಅಪವಿತ್ರನಾಗುತ್ತಾನೆಯೋ ಅಥವಾ ಆ ಪರಶಿವನಿಗ ನಿತ್ಯಾವಾಸಸ್ಥಾನವೆನಿಸಿದ ಶಿವಲಿಂಗಮೂರ್ತಿಯು ಅಪ ವಿತ್ರವಾಗುತ್ತದೆಯೋ ಎಂಬ ಎರಡು ಸಂಶಯಗಳು ಉದಯಿಸುವವು ಶಿವಲಿಂಗಮೂರ್ತಿಯಲ್ಲಿರುವ ಚಿತ್ಕಲಾ ಸ್ವರೂಪನಾದ ಪರಶಿವನೇ ಅಪವಿತ್ರನಾಗುವನೆಂಬುದ ಎಂದು ಸಂಭವಿಸುವುದಿಲ್ಲ

"[illegible] ಶಿವಃ [illegible] ನಿರವದ್ಯಂ ನಿರಂಜನಂ"
"[illegible] ಸರ್ವಗತಸ್ತ್ವ[illegible] |"

[illegible] ಪರಮಾತ್ಮನು ಸಮಸ್ತ [illegible] ಬದಲ್ಪಟ್ಟಿರುವ ಪ್ರಪಂಚದಲ್ಲಿ [illegible] ಚೇತನವಿಲ್ಲದ [illegible] ಹೇಗೆ ಎಲ್ಲೆಲ್ಲಿಯೂ ವ್ಯಾಪಿಸಿದು ವನೋ ಹಾಗೆಯೇ ಪವಿತ್ರ ಅಪವಿತ್ರಸಾಧಾರಣವಾಗಿ [illegible] ಪದಾರ್ಥಗಳಲ್ಲಿಯೂ [illegible] ಶ್ರುತಿವಚನ ಹೇಳುವಂತೆ ಎಲ್ಲೆಲ್ಲಿಯೂ ಅಂತರ್ಯಾಮಿಯಾಗಿ [illegible] ಆ ಚಿತ್ಕಲಾಸ್ವರೂಪನಾದ ಪರಶಿವನಿಗೆ [illegible] ಅಶುಚಿಶರೀರಸಂಬಂಧದಿಂದ ಅಶುಚಿತ್ವ ವನ್ನು ಕಲ್ಪಿಸುವದು ಹಾಸ್ಯವಾದುದು ಮತ್ತು ಅಸು [illegible] ಹೋಗಲಿ, ಅಂತರ್ಯಾಮಿ ಯಾದ ಪರಶಿವನು ಅಪವಿತ್ರನಾಗದಿದ್ದರೂ ಆ ಪರಶಿವನ ನಿತ್ಯವಾಸವೆನಿಸಿದ ಲಿಂಗಮೂರ್ತಿಯು ಅಪವಿತ್ರವಾಗ ಲು ಸಂಶಯವೇನೆಂದು ಹೇಳುವುದಾದರೆ, ಅದೂ ಸಂಭ ವಿಸಲಾರದು ಏಕೆಂದರೆ, ದೇಹದಲ್ಲಿ ಧರಿಸಲ್ಪಟ್ಟಿರುವ ಲಿಂಗಮೂರ್ತಿಗೂ ಆ ಲಿಂಗಮೂರ್ತಿಯಲ್ಲಿ ವಾಸವಾ ಗಿರುವ ಚಿತ್ಕಲೆಗೂ ನಿತ್ಯಸಂಬಂಧವಿರುವುದರಿಂದ ಪವಿತ್ರತರವಾದ ಯೋಗಸಂಬಂಧವಾದ ಆ ಚಿತ್ಕಲಾಸ್ವರೂಪ ನಾದ ಪರಶಿವನಿಗೆ ಅಧಿಷ್ಠಾನವಾದ ಶಿವಲಿಂಗ ಮೂರ್ತಿಯೂ ಸಹ ಆ ಪರಮೇಶ್ವರನಂತೆ ಪವಿತ್ರವಾದು ದೆಂದೇ ಸಿದ್ಧವಾಗುತ್ತದೆ ಇದರ ಮೇಲೆ ಸೂತಕದೋ ಷದಿಂದ ಲಿಂಗಶರೀರವು ಅಪವಿತ್ರವಾಗಬೇಕೆಂದು ಎಣಿಸುವುದರಿಂದ ಹೇಳಿದ ಅದು ಸಂಭೋಗವುದಿಲ್ಲ ಏಕೆಂದರೆ ಶ್ರೀಗುರುವು ಶಿವಲಿಂಗವನ್ನು ಕೊಡುವುದಕ್ಕಿಂತ ಮುಂಚಿತವಾಗಿ ದೀಕ್ಷಾಸಮಯದಲ್ಲಿ ಪಂಚಾಮೃತ ಪಂಚ ಗವ್ಯಾದಿಗಳಿಂದ ಆ ಶಿವಲಿಂಗವನ್ನು ಸ್ನಾನಮಾಡಿಸಿ ಧಾನ್ಯಾದಿವಾಸಾದಿಗಳಿಂದಲೂ, ಷಡಧ್ವಶೋಧನಾದಿ ಸಂಸ್ಕಾರಗಳಿಂದಲೂ ಶುದ್ಧಿಗೊಳಿಸಿ ತನ್ನ ಕಲೆಯನ್ನು ಆವ್ಹಾನಮಾಡಿ ಆ ಶಿವಲಿಂಗಮೂರ್ತಿಯನ್ನು ಸಂಸ್ಕರಿ ಸಿರುತ್ತಾನಷ್ಟೆ! ಹೀಗೆ ದೃಢವಾಗಿ ನೆಲೆಗೊಂಡಿರುವ ಸಂಸ್ಕಾರವಿದ್ದರೂ ಸಾಧಾರಣವಾದ ಅಶುಚಿಶರೀರ ಸಂಬಂಧದಿಂದ ಆ ಲಿಂಗವು ಅಪವಿತ್ರವಾಗಬಹುದು. ಆದದರಿಂದ ತಿಳಿಯಬೇಕು ಅಪವಿತ್ರವಾಗುವುದಕ್ಕಿಂತ ಮುನ್ನವೇ ಆ ಗುರುವಿನಿಂದ ಮಾಡಲ್ಪಟ್ಟ ಸಂಸ್ಕಾರಗಳೆ ಲ್ಲವೂ ನಷ್ಟವಾಗಬೇಕಾಗುವುವು ಹಾಗೆ ಗುರು ಕೃತ ಲಿಂಗಸಂಸ್ಕಾರವೆಲ್ಲ ನಾಶವಾಗುವುದೆಂದು ಹೇಳುವುದು ಅಸಂಭವವೇ ಸರಿ! ಏಕೆಂದರೆ—ಒಬ್ಬನು ಸ್ವರ್ಗಸಿದ್ಧಿ ಗಾಗಿ ಧರ್ಮಪತ್ನೀಸಹಿತನಾಗಿ ಒಂದು ಯಜ್ಞವನ್ನು ಮಾಡುತ್ತಾನಷ್ಟೆ! ಆ ಯಾಗವು ಪ್ರಮಾಣಬದ್ಧವಾಗಿ ನಡೆದುದಲ್ಲದೆ, ಒಂದೆರಡು ದಿನಗಳಲ್ಲಿ ಮುಗಿದು ಹೋಗತಕ್ಕದಾಗಿದೆ ಆ ಯಾಗವು ಮುಗಿದೊಡನೆಯೇ ಯಾರೂ ಸ್ವರ್ಗವನ್ನಾರೋಹಣಮಾಡುವುದಿಲ್ಲ ಯಾಗ ವು ಮುಗಿದ ಎಷ್ಟೋ ವರ್ಷಗಳವರೆಗೆ ಆ ದಂಪತಿ ಗಳು ಇದೇ ಮನುಷ್ಯಶರೀರದಿಂದಲೇ ಜೀವಿಸುತ್ತಾರೆ ಹಾಗೆ ಜೀವಿಸುವವರಿಗೂ ತಾವು ಮಾಡಿದ ಯಾಗದಿಂದ ಅಪೂರ್ವವಾದ ಒಂದು ಸಂಸ್ಕಾರವು ಸ್ವರ್ಗರೂಪ ಫಲವು ಸಿದ್ಧಿಸುವವರೆಗೆ ಆ ಯಾಗಕರ್ತೃವಿನ ದೇಹದಲ್ಲಿಯೇ ಸ್ಥಿರವಾಗಿದ್ದುಕೊಂಡು ದೇಹತ್ಯಾಗಮಾಡಿದ ಮೇಲೆ ಸ್ವರ್ಗಸಿದ್ಧಿಯನ್ನುಂಟುಮಾಡುವುದಷ್ಟೆ! ಹೀಗೆ ಯಾಗ ಮಾಡಿದಮೇಲೆ ಎಷ್ಟೋ ದಿವಸ ಜೀವಿಸಿಕೊಂಡಿರುವಲ್ಲಿ ಮಧ್ಯಕಾಲದಲ್ಲಿ ಅನೇಕ ವಿಧಗಳಾದ ಜಾತಾಶೌಚ ಮೃತಾಶೌಚಾದಿ ಸೂತಕದೋಷಗಳು ಆ ಯಾಗಕರ್ತೃ ರಿಗೆ ಬಂದೊದಗಬಹುದು ಆಗ ಯಾಗಜನ್ಯಸಂಸ್ಕಾರ ಗಳು ಸಹ ನಷ್ಟವಾಗಿ ತಾವು ಮಾಡಿದ ಯಾಗವೇ ನಿಷ್ಫಲವಾಗಿ ಪರಿಣಮಿಸಬೇಕಾಗುವುದರಿಂದ ಯಾವ ಆಶೌಚಗಳೊದಗಿದರೂ ಆ ಯಾಗಜನ್ಯವಾದ ಸಂಸ್ಕಾರ ಗಳು ನಾಶವಾಗದೆ ಫಲೋದಯಪರ್ಯಂತವಾಗಿ ಸ್ಥಿರ ವಾಗಿರಬೇಕೆಂದು ಅಂಗೀಕಾರಮಾಡಿರುವಂತೆ, ಮುಕ್ತಿ ಯೆಂಬ ಮಹಾಫಲಕ್ಕಾಗಿ ಶ್ರೀ ಗುರುಗಳಿಂದ ಷಡಧ್ವ ಶೋಧನಪೂರ್ವಕವಾಗಿ ಮಾಡಲ್ಪಟ್ಟ ಶಿವದೀಕ್ಷೆಯು ನಷ್ಟವಾಗಿ ಹೋಗಿದ್ದರೂ ಆ ದೀಕ್ಷೆಯಿಂದಾದ ಒಂದು ಸಂಸ್ಕಾರವು ಶಿವಲಿಂಗದಲ್ಲಿ ಸ್ಥಿರವಾಗಿ ನೆಲೆಗೊಳಿಸಲ್ಪ ಟ್ಟಿರುವುದರಿಂದ ಶಿವಲಿಂಗಸಂಬಂಧವುಳ್ಳ ಅಂಗನಿಗೆ (ಜೀವನಿಗೆ) ನಿರ್ವಾಣಮುಕ್ತಿಯು ದೊರೆಯುವವರೆಗೂ ನಿತ್ಯಸಂಕಲ್ಪಿತವಾದ ಧಾರಣಪೂಜಾನಿವೇದನಾದಿಗಳಿಂದ ಆ ಲಿಂಗದಲ್ಲಿರುವ ಕಲೆಯು ಅಭಿವೃದ್ಧಿಹೊಂದುತ್ತಿರುವು ದರಿಂದ ಲಿಂಗದಲ್ಲಿ ನೆಲೆಗೊಂಡಿರುವ ಸಂಸ್ಕಾರವು ಮಧ್ಯ ದಲ್ಲಿ ಸಂಭವಿಸಬಹುದಾದ ರಜಸ್ವಲಾದಿ ಸೂತಕಗಳಿಂದ ನಾಶವಾಗಲಾರದು

ಸುಸ್ಥ[illegible] ಗುರುಣಾ ದತ್ತಮಿಷ್ಟಲಿಂಗಮುಪಾಶ್ರಿತಃ |
ನಿತ್ಯಂ ಸ್ವಕಾಮಕಸ್ಥಾನೇ ಸಾವಧಾನೇನ ಪೂಜಯೇತ್ ||

ಶ್ರೀಗುರುವಿನಿಂದ ಸಂಸ್ಕರಿಸಿಕೊಡಲ್ಪಟ್ಟ ಇಷ್ಟ ಲಿಂಗವನ್ನು ತನ್ನ ಹಸ್ತವೆಂಬ ಸಿಂಹಾಸನದಮೇಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಬೇಕೆಂದು ವೀರ ಶೈವಸಿದ್ಧಾಂತಸ್ಥಾಪಕರಾದ ಶ್ರೀಪಂಚಾಚಾರ್ಯರು ಆಜ್ಞೆಯನ್ನಿತ್ತಿರುವುದರಿಂದ ಇಂಥ ಶಿವಲಿಂಗದಿಂ ದೊಡಗೂಡಿದ ಶಿವನು ಸ್ಥೂಲದೇಹತ್ಯಾಗಪೂರ್ವಕ ಮುಕ್ತಿಸಾಮ್ರಾಜ್ಯವನ್ನು ಹೊಂದುವವರೆಗೆ ಆ ಸಂಸ್ಕಾರ ಪ್ರತಿಯನ್ನು ಯಾವ ಸೂತಕಗಳೂ ಮುಟ್ಟುವುದಿಲ್ಲವೆ ನ್ನುವುದೇ ಸಿದ್ಧಾಂತವು

ಒಳದೇಶದ ವೃತ್ತಾಂತಗಳು.

ಮೈಸೂರ ಮೈಜಾಂಡ್ರಿವರೋಧಕ ಮಸೂದೆಯನ್ನು ವಿಮರ್ಶಿಸಲು ಸಭೆಸೇರಿದ್ದ ಸೆಲೆಕ್ಟ್ ಕಮಿಟಿಯವರು ಈ ಕಾನೂನು ಸಧ್ಯ ಮದರಾಸಿನಲ್ಲಿರುವ ರೀತಿಯಲ್ಲಿ ಮೈಸೂ ರಿನಲ್ಲಿಯೂ ಜಾರಿಯಲ್ಲಿ ಬರಬೇಕೆಂದು ನಿರ್ಧರಿಸಿರುವು ದಾಗಿ ತಿಳಿದುಬರುತ್ತದೆ

ಮೊನ್ನೆಯದಿನ ಬೆಂಗಳೂರಿಗೆ ೩೮ ಮೈಲಿ ದೂರ ದಲ್ಲಿರುವ ಚನ್ನಪಟ್ಟಣದ ಸಮೀಪದಲ್ಲಿ ಅನೇಕಲ್ಲಿನಿಂದ ಕೂಡಿದ ವಿಪರೀತ ಮಳೆಯಿಂದ ಒಂದು ದೊಡ್ಡ ತೆಂಗಿನ ಮರವು ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಪ್ರಯಾಣಿಕನ ಮೇಲೆ ಬಿದ್ದು ತಲೆಯೊಡೆದುಹೋಯಿತು

ಬೆಂಗಳೂರು ಸಿಟಿ ಅರಳೇಪೇಟೆಗೆ ಸೇರಿದ ಗೌಡನ ಪೇಟೆಯ ಒಂದು ಮನೆಯಲ್ಲಿ ಜೂಜುನಡೆಯುತ್ತಿರುವು ದೆಂದು ತಿಳಿದು ಪೋಲೀಸರು ಮನೆಯನ್ನು ಪ್ರವೇಶಿಸಿ ಜೂಜಾಡುತ್ತಿದ್ದ 11 ಜನರನ್ನು ದಸ್ತಗಿರಿಮಾಡಿ ಅವ ರಲ್ಲಿದ್ದ ೫೧ ರೂ ಗಳನ್ನು ವಶಪಡಿಸಿಕೊಂಡು ಅವರುಗಳ ಮೇಲೆ ಮೊಕದ್ದಮೆಯನ್ನು ಹೂಡಿರುತ್ತಾರೆ

ನಿನ್ನೆಯದಿನ ಮೈಸೂರು ಮತ್ತು ಅರಸೀಕೆರೆ ಲೈನಿ ನಲ್ಲಿ ಹೊಸೆನರಸೀಪುರ ಮತ್ತು ಮಂದಗೆರೆ ಸ್ಟೇಷನ್ನು ಗಳ ಮಧ್ಯೆ ರೈಲ್ವೆ ಅಪಾಯತವು ಸಂಭವಿಸಿತು ಪ್ರಾಣಾ ಪಾಯವು ಯಾರಿಗೂ ಆಗಿಲ್ಲ ಆದರೆ 12 ಗೂಡ್ಸ್ ಗಾಡಿಗಳೂ ಮತ್ತು 2 ಜನರು ಕೂಡುವ ಗಾಡಿಗಳು ಕಂಬಿ ತಪ್ಪಿ ತಲೆಕೆಳಗಾದವು ಗಾಡಿಗಳ ಮತ್ತು ಇತರ ಸಾಮಾನುಗಳ ಸಾಗಿಸುವಿಕೆಯು ನಡೆಯುತ್ತಿದೆ

ಬೆಂಗಳೂರು ಶಂಕರಪುರದ ಪೋಸ್ಟಾಫೀಸಿನಲ್ಲಿ ಸುಮಾ ರು ೫00 ರೂಗಳ ವರಗೂ ದುರುಪಯೋಗವಾಗಿದೆಯಂ ತೆ! ಈ ಕೃತ್ಯವನ್ನು ಸಬ್ ಪೋಸ್ಟ್ ಮಾಸ್ಟರನು ನಡೆ ಯಿಸಿ ಪರಾರಿಯಾಗಿದ್ದಾನೆ ಈತನು ಹೋಗುವಾಗ ತನಗೆ ಪ್ರಪಂಚದಲ್ಲಿ ಜುಗುಪ್ಸೆಯುಂಟಾದುದರಿಂದ ಕೆಂ ಪಾಂಬುಧಿಕೆರೆಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರು ವುದಾಗಿ ಕಾಗದ ಬರೆದಿಟ್ಟು ಹೋಗಿದ್ದಾನೆ. ಪೋಲೀ ಸರು ಶೋಧಮಾಡುತ್ತಿದ್ದಾರೆ

ಮೈಸೂರು ಕಲಾಸಂಘದ ಆಶ್ರಯದಲ್ಲಿ ಆರನೇ ವಾರ್ಷಿಕ ಕಲಾಪ್ರದರ್ಶನವು ಈ ತಿಂಗಳು 28 ನೆಯ ತಾರೀಖಿನಿಂದ ಜೂನ್ 8 ನೆಯ ತಾರೀಖಿನ ವರೆಗೆ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟಿನಲ್ಲಿ ನಡೆಯ ಲು ಏರ್ಪಾಡಾಗಿದೆ. ಪ್ರದರ್ಶನಕ್ಕಾಗಿ ಕಳುಹಿಸತಕ್ಕ ಸಾಮಾನುಗಳೆಲ್ಲವೂ ಈ ತಿಂಗಳು 24-25 ರೊಳಗಾಗಿ ಕಾರ್ಯದರ್ಶಿಗಳಿಗೆ ತಲಪಬೇಕೆಂದು ಪ್ರಕಟಿಸಿದ್ದಾರೆ.

ಪ್ರದರ್ಶಿತ ವಸ್ತುಗಳಲ್ಲಿ ಉತ್ತಮವಾದವುಗಳಿಗೆ ಬೆಳ್ಳಿ ಬಟ್ಟಲು ಮೊದಲಾದ ಬಹುಮಾನಗಳನ್ನು ಕೊಡಲಾಗುವದು

ವರ್ತಮಾನಸಂಗ್ರಹ.

ಚಿತ್ರ್ಯಾಲಿನಲ್ಲಿ ನೀರಿನ ಹಾರಾಟ!

ಚಿತ್ರ್ಯಾಲಿನಲ್ಲಿ ಬೇಸಗೆಯ ಬಿಸಿಲು ಅಸಾಧ್ಯವಾಗಿ 106 ಡಿಗ್ರಿಗಳವರೆಗೂ ಉಷ್ಣವು ಹೆಚ್ಚಿದೆ. ಕೆರೆಕಟ್ಟೆಗಳೆಲ್ಲಾ ಒಣಗಿ ಕುಡಿಯುವುದಕ್ಕೆ ನೀರಿಲ್ಲದೆ ಒಂದು ಕೊಡ ನೀರಿಗೆ ಅರ್ಧಾಣೆಯಂತೆ ಹೊರಗಿನಿಂದ ಕೊಂಡುಕೊಳ್ಳುತ್ತಿರುವರೆಂದು ತಿಳಿದುಬರುತ್ತದೆ.

ಮದ್ರಾಸ್ ಪ್ರೆಸಿಡೆನ್ಸಿಗೆ ಹಿಂದೂಗವರ್ನರರು

ಮದರಾಸಿನ ಗವರ್ನರಾದ ಲಾರ್ಡ್ ಎರ್ಸ್ಕಿನರಿಗೆ ಜೂನ್ 18ನೆಯ ತಾರೀಖಿನಿಂದ 4 ತಿಂಗಳು ರಜಾ ಮಂಜೂರಾಗಿರುವುದರಿಂದ, ಅವರ ರಜಾಕಾಲದಲ್ಲಿ ದಿ ಆನರಬಲ್ ರಾವ್‌ಬಹದ್ದೂರ್ ಕೂರ್ಮಾವೆಂಕಟ ರೆಡ್ಡಿ ನಾಯುಡು, ಕೆ ಟಿ ಇವರು ಗವರ್ನರ್ ಕೆಲಸ ನೋಡಬೇಕೆಂದು ಆಜ್ಞೆಯಾಗಿದೆ ಇವರು ಕೇವಲ ಬಡತನದಲ್ಲಿ ಜನ್ಮತಾಳಿದ್ದರೂ ತಮ್ಮ ಬುದ್ಧಿಪ್ರತಿಭೆಯಿಂದ ಇಂದು ಗವರ್ನರ್ ಪದವಿಯನ್ನು ಅನುಭವಿಸುವವರಾಗಿದ್ದಾರೆ

ಡಾರ್ಡನಲ್ಸ್ ದುರ್ಗನಿರ್ಮಾಣ!

ತುರ್ಕಿ, ಜುಗೊಸ್ಲೋವಿಯಾ, ಗ್ರೀಸ್ ಮತ್ತು ರೊಮೇನಿಯಾರಾಷ್ಟ್ರಗಳ ಪ್ರತಿನಿಧಿಗಳು ಸೇರಿ ಚರ್ಚಿಸಿ ತುರ್ಕಿಸರ್ಕಾರದ ಡಾರ್ಡನಲ್ಸ್ ಜಲದುರ್ಗನಿರ್ಮಾಣಕ್ಕೆ ಒಪ್ಪಿಗೆಕೊಟ್ಟರು ಈ ಮಿತ್ರರಾಷ್ಟ್ರಗಳಲ್ಲಿ ಯಾವುದೊಂದನ್ನಾದರೂ ಇತರ ರಾಷ್ಟ್ರಗಳು ಆಕ್ರಮಿಸಿದರೆ ಡಾರ್ಡನಲ್ಸ್ ದುರ್ಗದಲ್ಲಿ ನಡೆಯಿಸಬೇಕಾದ ಕಾರ್ಯಕ್ರಮಗಳು ಎಲ್ಲಾ ರಾಷ್ಟ್ರಗಳ ಸಮ್ಮೇಳನದಲ್ಲಿ ತೀರ್ಮಾನವಾಗಬೇಕೆಂಬುದು ಒಪ್ಪಿಗೆಯ ನಿಬಂಧನೆಗಳಲ್ಲಿ ಒಂದಾಗಿದೆ

೮ ಕೋಟಿ ರೂಪಾಯಿ ಬೆಲೆಬಾಳುವ ಸಿಮೆಂಟ್ ಕಾರಖಾನೆ

ಇಂಡಿಯಾದಲ್ಲಿಯ 10 ಚಿಕ್ಕ ಸಿಮೆಂಟ್ ಕಂಪೆನಿಗಳನ್ನು ಒಟ್ಟು ಸೇರಿಸಿ ಒಂದು ದೊಡ್ಡ ಕಂಪೆನಿಯಾಗಿ ಮಾಡಬೇಕೆಂದು ನಡೆದ ಪ್ರಯತ್ನಗಳು ಸಫಲವಾಗಿ ಎಲ್ಲ ಕಂಪೆನಿಗಳೂ ಇದಕ್ಕೆ ಒಪ್ಪಿಗೆ ಕೊಟ್ಟಿವೆ. ದೊಡ್ಡ ಕಂಪೆನಿಗೆ 'ಅಸೋಸಿಯೇಟೆಡ್ ಸಿಮೆಂಟ್ ಕಂಪೆನಿ ಲಿಮಿಟೆಡ್" ಎಂದು ಹೆಸರಿಡಲಾಗುವುದು ಇದರ ಒಟ್ಟು ಬಂಡವಾಳವು 8 ಕೋಟಿ ರೂಪಾಯಿಗಳು ಬರುವ ಜುಲೈ 1ನೇ ತಾರೀಖಿನಿಂದ ಇದು ತನ್ನ ಕೆಲಸವನ್ನು ಆರಂಭಿಸುವುದೆಂದು ತಿಳಿದುಬರುವುದು.

ಸಿಡಿಲನ್ನು ನಿರ್ಮಿಸುವ ಯಂತ್ರ!

ದೂರದಿಂದಲೇ ಶತ್ರುಪಕ್ಷದ ಪಟ್ಟಣಗಳನ್ನೂ, ವಿಮಾನಗಳನ್ನೂ ಭಸ್ಮಮಾಡಬಲ್ಲ ಕಿರಣಗಳನ್ನು ಶೋಧಮಾಡಿರುವುದಾಗಿ ವಿಜ್ಞಾನಶಾಸ್ತ್ರಜ್ಞರು ಹೇಳುತ್ತಿದ್ದರು ಆದರೆ ಈಗ ಇವುಗಳೆಲ್ಲಕ್ಕಿಂತಲೂ ಅತಿ ಭಯಂಕರವೂ, ವಿನಾಶಕರವೂ ಆದ ಸಿಡಿಲನ್ನೆಸೆಯುವ ಯಂತ್ರವನ್ನು ನಿರ್ಮಿಸಿ ನೂರಾರು ಮೈಲು ದೂರದವರೆಗಿರುವ ಪ್ರತಿಪದಾರ್ಥವನ್ನೂ ಭಸ್ಮಮಾಡಬಹುದೆಂದೂ ಇದರ ಮುಂದೆ ಈಗಿನ ಯುದ್ಧಸಾಧನಗಳಾದ ಬಾಂಬು ಷೆಲ್ಲು ಮೊದಲಾದವುಗಳು ಮಕ್ಕಳಾಟದಂತಿರುವುವೆಂದೂ ಹೇಳುತ್ತಾರೆ

ಇಲಿಗಳ ನಾಶಪ್ರಯತ್ನದಿಂದ ಪ್ರಾಣಹಾನಿ!

ಮಾರ್ಸೇಲ್ಸ್ ರೇವಿನಲ್ಲಿ ಫ್ರೆಂಚ್ ಸೈನಿಕರ ಉಪಯೋಗಾರ್ಥವಾಗಿ ಕಟ್ಟಿರುವ ಕಣಜದಲ್ಲಿ ಇಲಿಹೆಗ್ಗಣಗಳು ಸೇರಿ ಧಾನ್ಯವನ್ನು ತಿಂದು ಹಾಳುಮಾಡುವುದನ್ನು ನೋಡಿ ಮಿಲಿಟರಿ ಅಧಿಕಾರಿಗಳು ಅವುಗಳನ್ನು ಕೊಲ್ಲಲು ವಿಷವಾಯುವನ್ನು ಕಣಜದಲ್ಲೆಲ್ಲಾ ಬಿಡಬೇಕೆಂದು ತೀರ್ಮಾನಮಾಡಿದರು. ಇದರಿಂದ ರೇವಿನ ಸುಂಕದ ಕಚೇರಿಯ ಕಲವು ಅಧಿಕಾರಿಗಳಿಗೆ ಉಸಿರುಕಟ್ಟಿತು ಒಬ್ಬ ಕಾವಲುಗಾರನನ್ನು ಆಸ್ಪತ್ರೆಗೆ ಸಾಗಿಸಬೇಕಾಯಿತು. ವಿಷವಾಯುವು ಅಲ್ಲಿಯ ದರೋಗನಮನೆಗೆ ವ್ಯಾಪಿಸಿದ್ದರಿಂದ ಅವನು ಮರಣಹೊಂದಿದನು

ಖನಿಜಗಳಿರುವ ಸ್ಥಳವನ್ನು ಗುರ್ತಿಸುವ ಯಂತ್ರ!

ಇಟಲಿ ಅಕಾಡೆಮಿ ಪ್ರೊಫೆಸರ್ ಸ್ಕಿಯವೆಟಿಯವರಿಂದ ನಿರ್ಮಿತವಾದ ಭೂಗರ್ಭಾಂತರ್ಗತ ಖನಿಜಗಳನ್ನು ಶೋಧಮಾಡುವ ಯಂತ್ರವನ್ನು ಇಟಲಿ ಸರ್ಕಾರದವರು ಪಡೆಸಿಕೊಂಡರು ಇದರ ಉಪಯೋಗದಿಂದ ಕಬ್ಬಿಣ, ಕಲ್ಲಿದ್ದಲು, ಎಣ್ಣೆ ಮೊದಲಾದ ಖನಿಜಗಳು ಯಾವ ಯಾವ ಸ್ಥಳಗಳಲ್ಲಿರುವುವೆಂಬುದು ಸರಿಯಾಗಿ ತಿಳಿದುಬರುತ್ತದೆ. ಈ ಯಂತ್ರವು ಕೆಲಸಮಾಡುವಾಗ್ಗೆ ಭೂಮಿಯಲ್ಲಿರುವ ಪ್ರತಿಪದಾರ್ಥದಿಂದಲೂ ಅದರ ಸ್ವಭಾವಕ್ಕೆ ಅನುಗುಣವಾದ ಒಂದು ಮಾದರಿಯ ಅಲೆಯು ಹೊರಡುತ್ತಿರುತ್ತದೆ ಆ ಅಲೆಗಳಿಂದಲೇ ಖನಿಜ ಪದಾರ್ಥಗಳನ್ನು ತಿಳಿಯಬಹುದಾಗಿದೆ

ಮಾನಹೋದಮೇಲೆ ಪ್ರಾಣಬಿಡುವುದೇ ಲೇಸು!

ಜಬ್ಬಲ್‌ಪುರದ ಗಾದರವಾಡಿಸ್ಟ್ರಿಕ್ಟಿನ ಪೋಲೀಸ್ ಅಧಿಕಾರಿಯು ಯಾವುದೋ ತನಿಖೆಗಾಗಿ ಎರಡು ಮನೆಗಳನ್ನು ಪ್ರವೇಶಿಸಿ ಅಲ್ಲಿ ಒಂಟಿಯಾಗಿದ್ದ ಇಬ್ಬರು ಸ್ತ್ರೀಯರನ್ನು ಬಲಪ್ರಯೋಗದಿಂದ ಮಾನಭಂಗಮಾಡಿದನೆಂದೂ, ಪೋಲೀಸ್ ಅಧಿಕಾರಿಗೆ ಹೆದರಿ ಅಕ್ಕಪಕ್ಕದವರಾರೂ ಸಹಾಯಕ್ಕೆ ಬರಲಿಲ್ಲವೆಂದೂ, ಮಾನಹೋದಮೇಲೆ ಪ್ರಾಣಬಿಡುವುದೇ ಲೇಸೆಂದು ಆ ಸ್ತ್ರೀಯರಿಬ್ಬರೂ ಬಾವಿಯಲ್ಲಿ ಬೀಳಲು, ಇದನ್ನು ನೋಡಿದವರಾರೋ ಅವರನ್ನು ಮೇಲಕ್ಕೆತ್ತಿ ಉಳಿಸಿದರು ಆತ್ಮಹತ್ಯೆಗೆ ಪ್ರಯತ್ನಿಸಿದರೆಂದು ಇವರನ್ನು ಕೋರ್ಟಿಗೆ ಕಳುಹಿಸಲು, ಹೆಂಗಸರು ನಡೆದ ವಿಷಯವನ್ನೆಲ್ಲಾ ತಿಳುಹಿಸಿ ಮಾನಹೋದಮೇಲೆ ಪ್ರಾಣಬಿಡುವುದು ಲೇಸೆಂದರು ಈ ವಿಷಯದಲ್ಲಿ ಮುಂದಿನ ವಿಚಾರಣೆ ನಡೆಯುತ್ತಿದೆ

ಲಂಡನ್ನಿಗೆ ಇಂಡಿಯಾದೇಶದ ಸರ್ಪಗಳು!

ಸಿಂಗಪುರದ ಬಳಿ ಇರುವ ಸಲಂಗರ್ ಎಂಬಲ್ಲಿ ಎಂಟು ಜನರು ಎಂಟು ದಿವಸಗಳವರೆಗೆ ಕಷ್ಟಪಟ್ಟು ಸುಮಾರು 16 ಅಡಿ ಉದ್ದವಿರುವ ಒಂದು ಮಹಾಸರ್ಪವನ್ನು ಹಿಡಿದು ಲಂಡನ್ನಿನ ಮೃಗಾಲಯದಲ್ಲಿಡಲು ಕಳುಹಿಸಿದರು ಆ ಸರ್ಪವು ಕಚ್ಚಿದರೆ 2 ನಿಮಿಷಗಳಲ್ಲಿಯೇ ಮರಣ ಸಂಭವಿಸುವುದೆಂದು ಹೇಳುತ್ತಾರೆ ಇದಲ್ಲದೆ ಅದರ ಜೊತೆಗೆ ಇನ್ನೆರಡು ದುಷ್ಟವಾದ ಬೇರೆಸರ್ಪಗಳೂ ಕಳುಹಿಸಲ್ಪಟ್ಟಿವೆಯೆಂದೂ, ಈ ಮಾದರಿಯ ಬಿಳಿಯ ಸರ್ಪಗಳು ಇಲ್ಲಿಯವರೆಗೂ ಎಲ್ಲಿಯೂ ಸಿಕ್ಕಿರಲಿಲ್ಲವೆಂದೂ ತಿಳಿದುಬರುತ್ತದೆ ಈ ಮೂರು ಸರ್ಪಗಳೂ ಮಲಯದ್ವೀಪದ ಕಾಡಿನಲ್ಲಿ ಬಾಟು ಎಂಬ ಗುಹೆಯಲ್ಲಿ ಕತ್ತಲೆಯಲ್ಲಿ ವಾಸವಾಗಿದ್ದುವಂತೆ! ಮೃಗಾಲಯದ ಬೆಳಕಿನಲ್ಲಿಟ್ಟರೆ ಎಲ್ಲಿ ಸತ್ತುಹೋಗುವವೋ ಎಂಬ ಭೀತಿಯುಂಟಾಗಿದೆ

ಇಲಿಗಳ ನಾಶಪ್ರಯತ್ನದಿಂದ ಬೆಕ್ಕಿನ ಕಾಟ ಬಂದಿತು!

ಸ್ವೀಡನ್ನಿನ ಉಪ್ಸಾಲಾ ಎಂಬೂರಿನಲ್ಲಿ ಇಲಿಗಳ ಹಾವಳಿಯು ಹೆಚ್ಚಿ ಜನಗಳು ಬದುಕುವುದೇ ಕಷ್ಟವಾಗಲು, ಮುನಿಸಿಪಾಲಿಟಿಯವರ ಅಭಿಪ್ರಾಯದ ಮೇರೆಗೆ ಊರಿನವರೆಲ್ಲಾ ಬೆಕ್ಕುಗಳನ್ನು ಸಾಕಲು ಪ್ರಾರಂಭಿಸಿದರು ಇದರಿಂದ ಇಲಿಗಳೇನೋ ನಿರ್ಮೂಲವಾದವು, ಆದರೆ ಬೆಕ್ಕುಗಳು ಲೆಕ್ಕವಿಲ್ಲದಷ್ಟು ಹೆಚ್ಚಿ ಅವುಗಳಿಂದ ಮನುಷ್ಯರ ಆಹಾರಪದಾರ್ಥಗಳು ಉಳಿಯುವುದೇ ಕಷ್ಟವಾಯಿತು ಪುನಃ ಪುರಪ್ರಮುಖರು ಸಭೆಸೇರಿ ಬೆಕ್ಕುಗಳನ್ನು ನಾಶಪಡಿಸಲು, ಒಂದು ಬೆಕ್ಕನ್ನು ಕೊಂದುತಂದವರಿಗೆ ಇಷ್ಟು ಬಹುಮಾನಕೊಡುವುದಾಗಿ ಪ್ರಸಿದ್ಧಿಪಡಿಸಿದರು. ಈಗ ಎಲ್ಲಿ ನೋಡಿದರೂ ಬೆಕ್ಕಿನ ಬೇಟೆಯು ಪ್ರಾರಂಭವಾಗಿದೆ.

ಇಟಲಿ-ಅಬ್ಸೀನಿಯಾ ಯುದ್ಧವು ಮುಗಿಯಿತು
ಅಬ್ಸೀನಿಯಾ ಚಕ್ರವರ್ತಿಗಳು ರಾಜ್ಯಭ್ರಷ್ಟರಾದರು

ಇಟಲಿ ಅಬ್ಸೀನಿಯಾ ಯುದ್ಧವು ಕೊನೆಮುಟ್ಟಿದಂತಾಯಿತು ಚಕ್ರವರ್ತಿಯವರು ಕೊನೆಯವರೆಗೂ ತಡೆದು ಇನ್ನುಮುಂದೆ ಇಟಲಿಯನ್ನು ಎದುರಿಸಲು ನಿಸ್ಸಹಾಯರಾದ ತಮ್ಮಿಂದ ಆಗುವುದಿಲ್ಲವೆಂಬುದು ಖಂಡಿತವಾಗಿ ತಿಳಿದಕೂಡಲೆ ಮುಂದೆ ವ್ಯರ್ಥಪ್ರಾಣಹಾನಿಯಿಂದ ಉಪಯೋಗವಿಲ್ಲವೆಂದು ತೀರ್ಮಾನಿಸಿ ರಣರಂಗದಿಂದ ರಾಜಧಾನಿಗೆ, ಬಂದು ತಮ್ಮ ಪ್ರಜೆಗಳಿಗೂ ತಮ್ಮ ವಿಶ್ವಾಸಿ ಭೃತ್ಯರಿಗೂ ಅರಮನೆಯ ಪದಾರ್ಥಗಳನ್ನೆಲ್ಲಾ ದಾನಮಾಡಿ ರಾಜ್ಯಭಾರವನ್ನು ಮಂತ್ರಿಗಳಿಗೊಪ್ಪಿಸಿ, ಪತ್ನೀಪುತ್ರರೊಡಗೂಡಿ ರೈಲುಹತ್ತಿ ದಿಬೂತಿಗೆ ಬಂದಿಳಿದು ಬ್ರಿಟಿಷ್ ಯುದ್ಧನೌಕೆಯಾದ ಹೆಚ್ ಎಂ ಎಸ್. ಎಂಟರ್‌ಪ್ರೈಸ್ ಹಡಗನ್ನು ಹತ್ತಿ ಪ್ಯಾಲಸ್ಟೈನಿನ ಹೈಫಾ ನಗರಕ್ಕೆ ಪ್ರಯಾಣಮಾಡಿದರು. ಇವರು ರಾಜ್ಯವನ್ನು ತ್ಯಾಗಮಾಡುವ ಮೊದಲು ಸೆರೆಯಲ್ಲಿದ್ದ ರಾಸ್‌ಹೈಲುವೇ ಮೊದಲಾದ ಅನೇಕ ರಾಜಕೀಯ ಕೈದಿಗಳನ್ನು ಬಿಡುಗಡೆಮಾಡಿಸಿದರು ಇದೇ ಅವರ ಆಡಳಿತದ ಕಡೆಯ ಕೆಲಸವಾಯಿತು ಚಕ್ರವರ್ತಿಗಳು ತಮ್ಮ ಪತ್ನೀಪುತ್ರರನ್ನು ಬಿಟ್ಟುಬಿಟ್ಟು ತಾವು ಇಂಗ್ಲೆಂಡಿಗೆ ಹೋಗುವರೆಂದು ಯೋಚಿಸಲಾಗಿದೆ

ಚಕ್ರವರ್ತಿಗಳು ಹೊರಟುಹೋದಮೇಲೆ ಅನೇಕ ಪುಂಡರು ಪುಂಡಾಟದಿಂದ ರಾಜಧಾನಿಯಲ್ಲಿ ಅನೇಕ ಮನೆಮಠಗಳನ್ನು ಸುಟ್ಟು ಕೈಗೆ ಸಿಕ್ಕಿದ್ದನ್ನು ಲೂಟಿಮಾಡಿ ಬಹಳ ದಾಂಧಲೆಯನ್ನು ನಡೆಯಿಸಿದರು. ಬ್ರಿಟಿಷ್ ರಾಯಭಾರಿ ಕಚೇರಿಯು ಪ್ರದೇಶವು ಭಾರತ ಸೈನ್ಯನಿಕರಿಂದ ರಕ್ಷಿಸಲ್ಪಟ್ಟದ್ದರಿಂದ ಅದಕ್ಕೆಮಾತ್ರ ಯಾವ ವಿಧವಾದ ತೊಂದರೆಯೂ ಉಂಟಾಗಲಿಲ್ಲ ಸೈನ್ಯನಿಕರು ಅನೇಕ ತೊಂದರೆಗಳಿಗೆ ಸಿಕ್ಕ ಇತರರನ್ನೂ ರಕ್ಷಿಸಿದರು ಅಮೆರಿಕನ್ ರಾಯಭಾರಿಗಳು ಬ್ರಿಟಿಷ್ ರಾಯಭಾರಿ ಕಚೇರಿಯಲ್ಲಿ ಆಶ್ರಯಹೊಂದಿದರು ಇಟಲಿಯ ಸೈನ್ಯಗಳು ೫ ನೆಯ ತಾರೀಖಿನ ದಿವಸ ಅಡಿಸ್‌ಅಬಾಬವನ್ನು ಪ್ರವೇಶಿಸಿವೆ ನಗರವು ಈಗ ಮಿಲಿಟರಿಯವರ ಆಡಳಿತಕ್ಕೆ ಒಳಪಟ್ಟಿದೆ ಮುಂದೆ ಇಟಲಿಯಪಕ್ಷವಾಗಿ ರಾಜ್ಯವಾಳಲು ದೇಶದ್ರೋಹಿಯಾದ ರಾಸ್‌ಗುಗ್ಸನಿಗೆ ನೇಗಸ್ ಪದವಿಯು ಕೊಡಲ್ಪಡುವುದೆಂದು ವದಂತಿಯಿದೆ

ವಿವಾಹಮಹೋತ್ಸವ

ರಾಜಧಾನಿಯಲ್ಲಿ ಮೈಸೂರು ಬ್ಯಾಂಕ್ ಮ್ಯಾನೇಜರಾಗಿರುವ ಮ॥ ರಾ॥ ಎ ಎಸ್ ಮಲ್ಲಪ್ಪನವರ ಪುತ್ರಿ ಚಿ॥ ಸೌ॥ ಲಲಿತಮ್ಮನನ್ನು ಬೆಂಗಳೂರು ಸಿಟಿ ಕಂಟ್ರ್ಯಾಕ್ಟರ್ ಮ॥ ರಾ॥ ಕೆ ಸಂಜೀವಪ್ಪನವರ ಪುತ್ರ ಚಿ॥ ಸೌ॥ ಚನ್ನಬಸಪ್ಪ ಬಿ ಎ, ಇವರಿಗೆ ಕೊಟ್ಟು ಪಂಚಬ್ರಹ್ಮಕಲಶಸ್ಥಾಪನಪೂರ್ವಕ ಪಾಣಿಗ್ರಹಣಮಹೋತ್ಸವವು (ತಾ॥ ೧೦ ೫-೩೬) ಭಾನುವಾರ ದಿವಸ ವಿಶೇಷ ವೈಭವದಿಂದ ನೆರವೇರಿತು ಈ ಸಮಯದಲ್ಲಿ ಅನೇಕ ಜನ ಬೆಂಗಳೂರು, ಮೈಸೂರು ಪ್ರಮುಖರು ಆಗಮಿಸಿದ್ದರು ಶ್ರೀಮತ್ಪಂಚಾಚಾರ್ಯ ಜಗದ್ಗುರುಗಳವರು ವಧೂವರರ ಶ್ರೇಯಸ್ಸನ್ನು ಕೋರಿ ಆಶೀರ್ವಾದರೂಪವಾಗಿ ಕಳುಹಿಸಿದ್ದ ಉಡುಗರೆಗಳು ವಧೂವರರಿಗೆ ಪ್ರಥಮತಃ ಅರ್ಪಿಸಲ್ಪಟ್ಟುವು ಆ ಮೇಲೆ ಬೆಂಗಳೂರಲ್ಲಿರುವ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಕಾಲೇಜ್ ಸಂಬಂಧವಾಗಿ ವಧೂವರರಿಂದ 15 ರೂ. ಗಳು ತೆಗೆಯಿಸಲ್ಪಟ್ಟು ಸದರಿ ಸಂಸ್ಥೆಯ ಬೋರ್ಡಿಂಗ್ ಸೆಕ್ರೆಟರಿ ಮ॥ ರಾ॥ ಎಸ್ ರುದ್ರಯ್ಯನವರ ವಶಕ್ಕೆ ಕೊಡಲ್ಪಟ್ಟವು. ಬಳಿಕ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಸಂಘಕ್ಕಾಗಿ 10 ರೂ ಗಳು ತೆಗೆಯಿಸಲ್ಪಟ್ಟು ಸಂಘದ ಮೆಂಬರಾದ ಮ॥ ರಾ॥ ಡಾಕ್ಟರ್ ಟಿ. ಎಸ್ ಸಿದ್ಧಪ್ಪನವರ ವಶಕ್ಕೆ ಕೊಡಲ್ಪಟ್ಟವು.

ಪ್ರತ್ಯಕ್ಷದರ್ಶಿ

ನಾಲತವಾಡ

ವಿಜಾಪುರ ಜಿ|| ನಾಲತವಾಡದಲ್ಲಿರುವ ಶ್ರೀ|| ಜಗದ್ಗುರು ರೇಣುಕಾಚಾರ್ಯ ಮಠದ ಗುರುಪರಂಪರಾಗತ ಹಿರೇಮಠಾಧ್ಯಕ್ಷರು ತಮ್ಮ ಶ್ರೀ ಅಮರೇಶ್ವರ ಡಿಸ್ಪೆನ್ಸರಿಯಲ್ಲಿ ವೀರಶೈವಮತಸಂಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವನ್ನು ಇದೇ ವೈಶಾಖ ಶು|| ೫ ಭಾನುವಾರದ ದಿವಸ ವಿಜೃಂಭಣೆಯಿಂದ ನೆರವೇರಿಸಿದರು

ಪ್ರಾತಃಕಾಲ ಶ್ರೀ ಜಗದ್ಗುರುಗಳ ಭಾವಚಿತ್ರವನ್ನು ಅಲಂಕೃತವಾದ ಉನ್ನತಪೀಠದಲ್ಲಿ ಸ್ಥಾಪಿಸಿ ವೇದಮಂತ್ರಗಳಿಂದರ್ಚಿಸಿ ಅಷ್ಟೋತ್ತರಶತನಾಮೋಚ್ಚಾರಣಪೂರ್ವಕ ಬಿಲ್ವಪತ್ರಗಳನ್ನು ಧರಿಸಿ ಪುಷ್ಪಾಂಜಲಿಯನ್ನಿತ್ತ ಮೇಲೆ ಜಗದಾಚಾರ್ಯರ ಜಯಘೋಷ ಮಾಡಲ್ಪಟ್ಟಿತು ಅನಂತರ ಮಹಾಗಣಾರಾಧನೆಯು ನೆರವೇರಿತು ಸಾಯಂಕಾಲ ೫ ಘಂಟೆಗೆ ಶ್ರೀ ಅಮರೇಶ್ವರ ಡಿಸ್ಪೆನ್ಸರಿಯ ಹಾಲಿನಲ್ಲಿ ಡಾಕ್ಟರ್ ಹಿರೇಮಠ ಇವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು ಸರ್ವ ಸ್ಥಳಪರಸ್ಥಳಗಳ ಭಕ್ತಮಾಹೇಶ್ವರರು ಆಗಮಿಸಿದ್ದರು ವೇ|| ಮಹಾಲಿಂಗಶಾಸ್ತ್ರಿಗಳು ಪಂಚಾಚಾರ್ಯಪ್ರಭೆಯಲ್ಲಿ ಪ್ರಕಟಿಸಿರುವಮೇರೆಗೆ ನಿಜವಾದ ವೀರಶೈವಲಿಂಗಾಂಗಿಧರ್ಮದವರು ಮೇಲ್ಕಂಡ ಜಯಂತೀಮಹೋತ್ಸವವನ್ನು ಗುರುಭಕ್ತಿನಿಷ್ಠರಾಗಿ ಆಚರಿಸಿ ಧನ್ಯರಾಗಬೇಕೆಂದೂ, ವೀರಶೈವರಿಗೆ ಪಂಚಾಚಾರ್ಯರ ಹೊರತು ಅನ್ಯಗುರುಗಳೇ ಇಲ್ಲವೆಂದೂ ಇತ್ಯಾದಿ ವಿಷಯಗಳನ್ನು ಕುರಿತು ಭಾಷಣಮಾಡಿದರು ಬಳಿಕ ಶ್ರೀ ಜಗದ್ಗುರು ದಾರುಕಾಚಾರ್ಯರ ಭಾವಚಿತ್ರವನ್ನು ಶೃಂಗರಿಸಿದ ಪಲ್ಲಕ್ಕಿಯಲ್ಲಿರಿಸಿ ಅನಂತ ವಾದ್ಯವೈಭವಗಳಿಂದಲೂ ಸಮಸ್ತ ಬಿರುದಾವಳಿಗಳಿಂದಲೂ ಮೆರವಣಿಗೆಯು ಹೊರಟು ಊರೊಳಗಿನ ಹಿರೇಮಠಕ್ಕೆ ತಲುಪಿ ಅಲ್ಲಿದ್ದ ಮೂಲಕರ್ತೃಗದ್ದುಗೆಗೆ ಮಂಗಲಾರತಿ ಕಾಯಿಕರ್ಪೂರವನ್ನು ಮಾಡಿಸಿ ಅಲ್ಲಿಂದಹೊರಟು ಸ್ವಸ್ಥಾನಕ್ಕೆ ಬಂದು ತಲುಪಿತು ಉತ್ಸವಕಾಲದಲ್ಲಿ ಗ್ರಾಮವು ತಳಿರುತೋರಣಗಳಿಂದಲೂ, ಪತಾಕೆಗಳಿಂದಲೂ ಶೃಂಗರಿಸಲ್ಪಟ್ಟಿತ್ತು ಅನೇಕಜನ ಮುತ್ತೈದೆಯರು ಉತ್ಸವಸಮಯದಲ್ಲಿ ಆರತಿಗಳನ್ನು ಹಿಡಿದುಕೊಂಡುಬಂದು ತಮ್ಮ ಭಕ್ತಿಯನ್ನು ಸಮರ್ಪಿಸಿದರು ಸ್ಥಳದ ಪ್ರಮುಖ ಭಕ್ತಮಾಹೇಶ್ವರರು ಉತ್ಸವಕಾಲದಲ್ಲಿ ಭಾಗವಹಿಸಿದ್ದರು ಉತ್ಸವಸಮಯದಲ್ಲಿ ಸ್ಥಾನಿಕ ಪೋಲೀಸಿನವರ ಉಸ್ತುವಾರಿಯೂಸಹ ಚೆನ್ನಾಗಿ ಇರಿಸಲ್ಪಟ್ಟಿದ್ದಿತು ಒಟ್ಟಿಗೆ ಹಿರೇಮಠಾಧ್ಯಕ್ಷರು ಜಯಂತೀಮಹೋತ್ಸವವನ್ನು ಮನೋಹರವಾಗಿ ನೆರವೇರಿಸಿ ಸಕಲ ಭಕ್ತಾದಿಗಳ ಸ್ತುತಿಗೆ ಪಾತ್ರರಾದುದು ಬರೆಯಲು ಪರಮಸಂತೋಷವೆನಿಸುತ್ತದೆ

ವೈಶಾಖ ಶು|| ೬ ಶುಕ್ರವಾರ ದಿವಸ ಇಲ್ಲಿಯ ಶ್ರೀ ಜಗದ್ಗುರು ಏಕೋರಾಮಾರಾಧ್ಯ ಶಾಖಾಮಠದ ಗುರುಪರಂಪರಾಗತ ರಾಮಗಿರಿಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ವೇ|| ಸಿದ್ಧಲಿಂಗಯ್ಯ ಮತ್ತು ಗುರುಬಸವಯ್ಯ ಇವರು ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವವನ್ನು ಬಹುವಿಜೃಂಭಣೆಯಿಂದ ನೆರವೇರಿಸಿದರು ಆ ದಿವಸ ಪ್ರಾತಃಕಾಲ ಶ್ರೀ ಜಗದ್ಗುರುಗಳ ಭಾವಚಿತ್ರವನ್ನು ಉಚ್ಚಸ್ಥಾನದಲ್ಲಿ ಸ್ಥಾಪಿಸಿ ವೇದಮಂತ್ರಗಳಿಂದರ್ಚಿಸಿ ಅಷ್ಟೋತ್ತರಶತನಾಮೋಚ್ಚಾರಣಪೂರ್ವಕ ಬಿಲ್ವಪತ್ರಗಳನ್ನು ಧರಿಸಿ, ಪುಷ್ಪಾಂಜಲಿಸಮರ್ಪಣವಾಯಿತು ಅನಂತರ ಮಹಾಗಣಾರಾಧನೆಯು ನೆರವೇರಿತು

ಸಾಯಂಕಾಲ ೫ ಘಂಟೆಗೆ ರಾಮಗಿರಿಮಠದಲ್ಲಿ ಡಾಕ್ಟರ್ ಹಿರೇಮಠ ಇವರ ಅಧ್ಯಕ್ಷತೆಯಲ್ಲಿ ಸಭೆಗೂಡಿತು, ವೇ|| ಗುರುಮಹಾಲಿಂಗಶಾಸ್ತ್ರಿಗಳು ಶಿಕ್ಷಾಪ್ರವೃತ್ತರು ಇವರ ಗುರುಭಕ್ತಿಯ ವಿಷಯದಲ್ಲಿ ಮನೋಹರವಾದ ಭಾಷಣವನ್ನು ಮಾಡಿದರು, ಬಳಿಕ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಭಾವಚಿತ್ರವನ್ನು ಶೃಂಗರಿಸಿದ ಪಲ್ಲಕ್ಕಿಯಲ್ಲಿ ಇರಿಸಿ ವಾದ್ಯವೈಭವದಿಂದಲೂ, ಬಿರುದಾವಳಿಗಳಿಂದಲೂ ಮೆರವಣಿಗೆಯು ವಿಶೇಷ ವೈಭವದಿಂದ ನೆರವೇರಿತು ಜಗದಾಚಾರ್ಯರ ಜಯಂತೀಮಹೋತ್ಸವದಲ್ಲಿ ಭಾಗಿಗಳಾದ ಸಮಸ್ತ ಭಕ್ತಮಾಹೇಶ್ವರರಿಗೆ ಶ್ರೀ ಜಗದಾಚಾರ್ಯರು ಸಮಸ್ತಸನ್ಮಂಗಲಗಳನ್ನೀಯಲೆಂದು ಪ್ರಾರ್ಥಿಸುವ,

ಓರ್ವ ಗುರುಭಕ್ತ

ಲಕ್ಷ್ಮೇಶ್ವರ

ಮಿರಜಸಂಸ್ಥಾನ ಲಕ್ಷ್ಮೇಶ್ವರದಲ್ಲಿ ಪದ್ಧತಿಪ್ರಕಾರ ಜಗದಾಚಾರ್ಯರ ಜಯಂತ್ಯುತ್ಸವಗಳು ನಿರ್ವಿಘ್ನವಾಗಿ ಸಾಗಿದವು ವೈಶಾಖ ಶು|| ೬ ದಿವಸ ಶ್ರೀ ೧೦೮ ಜಗದ್ಗುರು ಏಕೋರಾಮಾರಾಧ್ಯರ ಜಯಂತ್ಯುತ್ಸವಕ್ಕೆ ಹೋದವರ್ಷ ಆದ ವಿಘ್ನದಂತೆ ಆಗದೆ ಇರಲಿಕ್ಕೆ ಈ ಸಾರೆ ಹೊಸದಾಗಿಬಂದ ಮ|| ಸಬ್‌ಇನ್ಸ್‌ಪೆಕ್ಟರ್‌ರವರ ವಿಶಾಲಹೃದಯವೇ ಕಾರಣವು ಇವರು ಬ್ರಾಹ್ಮಣರಿದ್ದು ಗುರುದೇವತಾದಿಗಳಲ್ಲಿ ಪೂಜ್ಯಬುದ್ಧಿಯುಳ್ಳವರಾಗಿರುವರಲ್ಲದೆ ಯಾರ ದಯಾದಾಕ್ಷಿಣ್ಯಕ್ಕೂ ಒಳಗಾಗುವವರಲ್ಲ ಆದುದರಿಂದ ಪದ್ಧತಿಯ ಪ್ರಕಾರ ಉತ್ಸವಾದಿಕಾರ್ಯಗಳ ಬಗ್ಗೆ ಪೂರ್ಣ ಸಹಾನುಭೂತಿಯನ್ನು ತೋರಿಸಿದರು ಇವರಿಗೆ ಶ್ರೀ ಜಗದೀಶ್ವರನು ಆಯುರಾರೋಗ್ಯಭಾಗ್ಯ ಸುಖಸಂಪತ್ತುಗಳನ್ನು ದಯಪಾಲಿಸಲೆಂದು ವಿನಮ್ರಭಾವದಿಂದ ಪ್ರಾರ್ಥಿಸುತ್ತೇನೆ ಇದೇ ವೈಶಾಖ ಶು|| ೫ ರವಿವಾರ ಶ್ರೀ ೧೦೮ ಜಗದ್ಗುರು ದಾರುಕಾಚಾರ್ಯರ ಜಯಂತ್ಯುತ್ಸವವು ವೇ|| ಪುರಾಣಿಕಮಠದ ಮಹಾಲಿಂಗಯ್ಯನವರ ಮಠದಲ್ಲಿ ವಿಧ್ಯುಕ್ತವಾಗಿ ಪೂಜಾ ಗಣಾರಾಧನೆಯು ನಡೆದು ಸಾಯಂಕಾಲ ಆಂದೋಳಿಕೋತ್ಸವವು ನೆರವೇರಿತು ಈ ಉತ್ಸವಕ್ಕೆ ನಾಲ್ಕೈದು ಪಂಚಾಚಾರ್ಯ ಭಜನಾಸಂಘದವರು ಬಂದಿದ್ದರು ಇವರ ದಿವ್ಯ ಗುರುಭಜನೆಗಳಿಂದಲೂ, ಅನೇಕ ವಾದ್ಯವೈಭವಗಳಿಂದಲೂ, ಉತ್ಸವವು ಅಲಂಕೃತವಾದ ಪೇಟೆಯಲ್ಲಿಯೂ, ಮುಖ್ಯಮುಖ್ಯ ಬೀದಿಗಳಲ್ಲಿಯೂ ವಿಜೃಂಭಣೆಯಿಂದ ಸಾಗಿ ರಾತ್ರಿ ೧೦ ಘಂಟೆಗೆ ತಿರುಗಿ ಬಂದಿತು ವೇ|| ಪುರಾಣಿಕಮಠದ ವರಗೃಹದ ಮಂಟಪದಲ್ಲಿ ನಿರ್ಮಿಸಿದ ಭವ್ಯ ಮಂಟಪದಲ್ಲಿ ಉತ್ಸವಮೂರ್ತಿಯು ವಿರಾಜಮಾನವಾದ ಕೂಡಲೆ ವೇ|| ಕಾಶಪ್ಪಯ್ಯ ಹಿರೇಮಠ ಇವರು ಶುದ್ಧ ಸಂಪ್ರದಾಯದ ಪ್ರತಿಯೊಬ್ಬ ವೀರಶೈವನು ಅಷ್ಟವರ್ಣಾಂತರ್ಗತ ಗುರುಜಯಂತಿಯನ್ನು ಅವಶ್ಯವಾಗಿ ಮಾಡಿಯೇತೀರಬೇಕೆಂದೂ ಬಿಟ್ಟಿದ್ದರ ಅವನಿಗೆ ತಪ್ಪದೆ ಅಧೋಗತಿಯು ಪ್ರಾಪ್ತವಾಗುವುದೆಂದೂ. ಆತ್ಮನಿಗೂ ಲಿಂಗರೂಪಿಯಾದ ಗುರುವಿಗೂ ಅಭೇದವಿರುವುದೆಂದೂ ಪಂಡಿತ ಪಾಮರರುಗಳಿಗೆ ಸ್ಪಷ್ಟವಾಗಿ ತಿಳಿಯುವಂತೆ ಯುಕ್ತಿಯುಕ್ತವಾಗಿ ಉಪನ್ಯಾಸಮಾಡಿದರು ಈ ಪ್ರಕಾರದ ಭಾಷಣದಿಂದ ಅಲ್ಲಿ ನೆರೆದ ವೀರಶೈವರಿಗೆಲ್ಲಾ ಅನ್ಯಜಯಂತಿಗಳನ್ನಾಗಲಿ ಇತರ ದೇವತಾರಾಧನೆಗಳನ್ನಾಗಲಿ ಮಾಡದೆ ಅಷ್ಟಾವರಣಗಳಲ್ಲಿಯೇ ಪೂಜ್ಯಬುದ್ಧಿಯುಳ್ಳವರಾಗತಕ್ಕದ್ದೆಂದು ಪರಿಣಾಮವಾಯಿತು ಅನಂತರ ಮಂಗಲಾರತಿಯಾಗಿ ಪ್ರಸಾದವಿನಿಯೋಗವಾಯಿತು

ಬಸಪ್ಪ ಚನ್ನಬಸಪ್ಪ, ಕಲ್ಲೂರ

ಸಾತಾರಾ

ಒಸ್ಲಿಕ್ಕಿನ ಮುಖ್ಯಸ್ಥಾನವಾದ ಸಾತಾರಾಪಟ್ಟಣದಲ್ಲಿ ಈ ವರ್ಷ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವವು ಶ್ರೀಮಂತ ಶಂಕರರಾವ ಭಾವುಪೇಠ ಇವರ ಶ್ರೀ ಪ್ರಭುಶಂಕರರಾಲಿನಲ್ಲಿ ವಿಶೇಷಸಂಭ್ರಮದೊಡನೆ ನೆರವೇರಿತು ವೈಶಾಖ ಶು|| ೬ ದಿವಸ ಜಗದಾಚಾರ್ಯರಮೂರ್ತಿಗೆ ಪಂಚಾಮೃತಾಭಿಷೇಕಾದಿಪೂಜೆಗಳು ನೆರವೇರಿ ಪಲ್ಲಕ್ಕಿಮಹೋತ್ಸವವು ಪ್ರಾರಂಭವಾಯಿತು. ಈ ಮಹೋತ್ಸವದಲ್ಲಿ ಪಟ್ಟಣದಲ್ಲಿರುವ ಸಮಸ್ತ ಸ್ತ್ರೀ ಪುರುಷರೂ ಭಾಗಿಗಳಾಗಿದ್ದರು ಉತ್ಸವವು ನಗರದಲ್ಲೆಲ್ಲಾ ನೆರವೇರಿ, ಸ್ವಸ್ಥಾನವನ್ನು ಬಂದು ಸೇರಿತು ಬಳಿಕ ಸಭೆಯು ಪ್ರಾರಂಭವಾಯಿತು ಮ|| ರಾ|| ಬೆಂಚ್‌ಮ್ಯಾಜಿಸ್ಟ್ರೇಟ್ ಸಾವಳಾರಾಂ ಬಾಜಾರೆಯವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಆಮೇಲೆ ವೇ|| ಗಂಗಾಧರಶಾಸ್ತ್ರಿಗಳು ಆಚಾರ್ಯರ ಲೀಲಾವಿಷಯದಲ್ಲಿಯೂ ವೀರಶೈವಮತತತ್ವವಿಷಯದಲ್ಲಿಯೂ ಭಾವಗರ್ಭಿತವಾದ ಭಾಷಣವನ್ನುಮಾಡಿದರು ಬಳಿಕ ಮ|| ರಾ|| ಪನ್ನಾಳಕರ್ ಹೆಡ್ಮಾಸ್ಟರ್, ಮ|| ರಾ|| ಶಂಕರಣ್ಣಾ ಮುಸೂರಕರ್‌ಸ್ವಾಮಿ, ಮ|| ರಾ|| ಕಾಶೀನಾಥಲಖಪತಿ ಇವರೇ ಮೊದಲಾದವರು ಮತಧರ್ಮದ ವಿಷಯದಲ್ಲಿ ಭಾಷಣಗಳನ್ನು ಮಾಡಿದರು ಇದೇ ಶುಭಸಮಯದಲ್ಲಿ (ಶ್ರೀ ಜಗದ್ಗುರು ಪಂಚಾಚಾರ್ಯ ವೀರಶೈವಯುವಕಸಂಘ) ಎಂಬ ಹೆಸರಿನಿಂದ ಒಂದ ಸಂಘವುಸ್ಥಾಪಿಸಲ್ಪಟ್ಟಿತು ಬಳಿಕ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಗಂಗಾಧರಶಾಸ್ತ್ರಿ, ಸಾತಾರಕರ್

ಮಂಗಳವೇಢೆ.

ಸಾಂಗಲಿ ಸಂಸ್ಥಾನಕ್ಕೆ ಸೇರಿದ ಮಂಗಳವೇಢ ಗ್ರಾಮದಲ್ಲಿ ಪ್ರತಿ ವರ್ಷ ಪದ್ಧತಿಯಂತೆ ಶ್ರೀ ಜಗದ್ಗುರು ಏಕೋರಾಮಾರಾಧ್ಯ ಮತ್ತು ಶ್ರೀ ಜಗದ್ಗುರು ಮರುಳಾರಾಧ್ಯರ ಜಯಂತೀಮಹೋತ್ಸವಗಳು ಈ ವರ್ಷವೂ ಬಹು ಅಟ್ಟಹಾಸದಿಂದ ನೆರವೇರಿದವು ವೈಶಾಖ ಶು|| ೬ ಮತ್ತು ವೈಶಾಖ ಶು|| ೧೫ ಈ ಉಭಯದಿವಸಗಳಲ್ಲಿಯೂ ಜಗದಾಚಾರ್ಯರ ಪಲ್ಲಕ್ಕಿ ಮಹೋತ್ಸವವು ಶ್ರೀ ರೇವಣಸಿದ್ಧೇಶ್ವರ ದೇವಾಲಯದಿಂದ ಪ್ರಾರಂಭವಾಗಿ ವಾದ್ಯಘೋಷದೊಡನೆಯೂ, ಜಗದಾಚಾರ್ಯರ ಜಯಘೋಷದೊಡನೆಯೂ, ಶ್ರೀ ಕೇದಾರಸ್ವಾಮಿಮಠಕ್ಕೆ ಬಂದು ತಲುಪಿತು ಬಳಿಕ ಸಭೆಯು ನೆರವೇರಿ ಮ|| ರಾ|| ಪಟ್ಟಣಶೆಟ್ಟಿ, ಮ|| ರಾ|| ಅಪ್ಪಾಸಾಹೇಬ ಮಾಸ್ತರ, ಮ|| ರಾ|| ಮೈತ್ರಿ, ಮ|| ರಾ|| ಪಟಪತೆ, ಮ|| ರಾ|| ಬುರಕುಲ ಇತ್ಯಾದಿ ವ್ಯಾಖ್ಯಾತೃಗಳು ಮತಸ್ಥಾಪನಾಚಾರ್ಯರ ಲೀಲಾವಿಷಯವಾಗಿಯೂ, ಲಿಂಗೈಕ್ಯರಾದ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಲೀಲಾ ವಿಷಯಕವಾಗಿಯೂ ಮನೋಹರವಾಗಿ ಭಾಷಣಗಳನ್ನು ಮಾಡಿದರು ಬಳಿಕ ನೀರಾಜನವಾಗಿ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಕೇದಾರಸ್ವಾಮಿ, ಬೃಹನ್ಮಠ

ಘೋಡಂಬೆ

ನಾಸಿಕಜಿಲ್ಲೆಗೆ ಸೇರಿದ ಘೋಡಂಬೆ ಗ್ರಾಮದಲ್ಲಿ ಇದೇ ಧಾತ್ರನಾಮಸಂವತ್ಸರದ ವೈಶಾಖ ಶು|| ೬ ದಿವಸ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತೀ ಮಹೋತ್ಸವವೂ ವೈಶಾಖ ಶು|| ೫ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವೂ, ಶ್ರೀ ಬಾಪೂಜಿಯಯ್ಯಸ್ವಾಮಿ ಮಾಣೂರಕರ ಇವರ ನೇತೃತ್ವದಲ್ಲಿ ವಿಶೇಷ ವೈಭವದಿಂದ ನೆರವೇರಿದವು ಉಭಯದಿನಗಳಲ್ಲಿಯೂ ಶ್ರೀ ಜಗದಾಚಾರ್ಯರ ಮೂರ್ತಿಗಳಿಗೆ ರುದ್ರಾಭಿಷೇಕ ಪೂಜಾದಿಗಳು ನೆರವೇರಿ ಸಾಯಂಕಾಲ ಪಲ್ಲಕ್ಕಿಮಹೋತ್ಸವಗಳು ಬಹು ಅಟ್ಟಹಾಸದಿಂದ ನೆರವೇರಿದವು ಈ ಜಯಂತೀಮಹೋತ್ಸವಕ್ಕೆ ಅಂಗಭೂತವಾದ ಸಭೆಯಲ್ಲಿ ಮ|| ರಾ|| ಬಳವಂತ ದಿವಟೆ, ಮ|| ರಾ|| ಪಂಚಾಕ್ಷರಿ ಮೋಸಕುದಳೆ, ಮ|| ರಾ|| ಲಿಂಗಪ್ಪಾ ಹಿಂಗಮಿರೆ, ಮ|| ರಾ|| ದಿವಟೆ ಮಾಸ್ತರ, ಮ|| ರಾ|| ಪಾಟೀಲ್, ಮ|| ರಾ|| ಬಾಪೂರಾವ್ ಕುಮ್ಹಾರ, ಇವರೇ ಮೊದಲಾದವರು ಮತಸ್ಥಾಪನಾಚಾರ್ಯರ ಲೀಲಾವಿಷಯದಲ್ಲ ಮನೋಹರವಾದ ಭಾಷಣಗಳನ್ನು ಮಾಡಿದರು ಈ ಎರಡು ದಿವಸಗಳನ್ನೂ ಇಲ್ಲಿಯ ಗುರುಭಕ್ತರು ದೊಡ್ಡ ಹಬ್ಬದಂತೆ ಆಚರಿಸಿದರು

ಗುರುಕಿಂಕರ,

ಕಾಶೀನಾಥಬಿದವಯಿ.

ಹಾರನಹಳ್ಳಿ

ಶಿವಮೊಗ್ಗ ಜಿ|| ಹಾರನಹಳ್ಳಿ ಗ್ರಾಮದಲ್ಲಿರುವ ಸಮಸ್ತ ವೀರಶೈವರೂ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಮತ್ತು ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವನ್ನು ವಿಶೇಷ ಭಕ್ತಿಪೂರ್ವಕವಾಗಿ ನೆರವೇರಿಸಿದರು ವೈಶಾಖ ಶು|| ೩ ಮತ್ತು ವೈಶಾಖ ಶು|| ೫ ಈ ಉಭಯ ಪುಣ್ಯ ದಿನಗಳಲ್ಲಿಯೂ ಪ್ರತಿಯೊಬ್ಬರೂ ತಮ್ಮತಮ್ಮ ಮನೆಗಳಲ್ಲಿ ಜಗದಾಚಾರ್ಯರ ಭಾವಚಿತ್ರವನ್ನು ಪೂಜಿಸಿ ಮಾಹೇಶ್ವರರನ್ನು ಕರೆದು, ಈ ದಿನಗಳನ್ನು ದೊಡ್ಡ ಹಬ್ಬದಂತೆ ಆಚರಿಸಿ ತಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಂಡರು

ಓರ್ವ ಗುರುಭಕ್ತ

ಪಂಢರಪುರ

ಸೊಲ್ಲಾಪುರ ಡಿಸ್ಟ್ರಿಕ್ಟ ಪಂಢರಪುರ ಶಹರದಲ್ಲಿ ನವ ವೀರಶೈವ ತರುಣಸಂಘದವರು ಪ್ರತಿವರ್ಷ ಪದ್ಧತಿಯಂತೆ ಶ್ರೀ ಮನ್ಮಥಸ್ವಾಮಿಮಠದಲ್ಲಿ ವೈಶಾಖ ಶು|| ೩ ಶುಕ್ರವಾರದ ದಿವಸ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಮಹೋತ್ಸವವನ್ನೂ ಶು|| ೫ ಭಾನುವಾರದ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವನ್ನೂ ವಿಶೇಷವೈಭವದಿಂದ ನೆರವೇರಿಸಿದರು ಆಚಾರ್ಯಮೂರ್ತಿಗೆ ಆಯಾ ದಿವಸ ರುದ್ರಾಭಿಷೇಕ ಪೂರ್ವಕ ಷೋಡಶೋಪಚಾರ ಪೂಜೆಯು ನೆರವೇರಿ ಪ್ರಸಾದವಿನಿಯೋಗವಾಯಿತು ಪ್ರತಿವರ್ಷವೂ ಅಸಾಧಾರಣಭಕ್ತಿಯಿಂದ ಜಗದಾಚಾರ್ಯರ ಜಯಂತೀಮಹೋತ್ಸವವನ್ನು ನೆರವೇರಿಸುತ್ತಿರುವ ವೀರಶೈವ ತರುಣಮಂಡಲಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು, ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಪ್ರಾರ್ಥಿಸುವ,

ಓರ್ವ ಗುರುಭಕ್ತ

ಬಳ್ಳಾರಿ

ಬಳ್ಳಾರಿ ಟೌನಿನಲ್ಲಿರುವ ಶ್ರೀ ಮರಿಸ್ವಾಮಿಗಳವರ ಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ವೈಶಾಖ ಶು|| ೫ ದಿವಸ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವು ವಿಶೇಷ ವಿಜೃಂಭಣೆಯಿಂದ ನೆರವೇರಿತು ಪ್ರಸಿದ್ಧಪತ್ರಿಕೆಯಲ್ಲಿ ಮೊದಲೇ ಪ್ರಕಟಿಸಿದ ಮೇರೆಗೆ ಕಾರ್ಯಕ್ರಮಗಳು ಸರಿಯಾಗಿ ನೆರವೇರಿದವು ಇದಕ್ಕೆ ಅಂಗಭೂತವಾಗಿ ಲಿಂಗೈಕ್ಯರಾದ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯಮಹಾಸ್ವಾಮಿಗಳವರ ಸ್ಮರಣೋತ್ಸವವೂ ನೆರವೇರಿತು ಈ ಮಹೋತ್ಸವ ಕಾರ್ಯದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾಸಂಘದ ನಿರ್ವಾಹಕರಾದ ಶ್ರೀಮಾನ್ ಎಂ ಚನ್ನಬಸವಯ್ಯನವರು, ಬಿ ಎ, ಮ|| ರಾ|| ಕವಿತಾಳದ ಶಾಂತರುದ್ರಪ್ಪನವರು ಇವರೇ ಮೊದಲಾದವರು ವಿಶೇಷ ಶ್ರಮವಹಿಸಿ, ಕಾರ್ಯವನ್ನು ಮಾಡಿದರು ಶ್ರೀ ಜಗದಾಚಾರ್ಯರು ತಮ್ಮ ಸೇವೆಯಲ್ಲಿ ನಿರತರಾಗಿರುವ ಸಮಸ್ತ ಗುರುಭಕ್ತರಿಗೂ, ಶುಭಪರಂಪರೆಯನ್ನೀಯಲೆಂದು ಆ ಪೂಜ್ಯಪಾದರನ್ನು ಪ್ರಾರ್ಥಿಸುವ

ಜಗದ್ಗುರು ಪಾದಸೇವಕ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೌಲ್ಯಂತ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಲಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲಿ ಉಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ ಬೆಲೆ ೧೨ ಆಣೆ ವಿ ಪಿ ಚಾರ್ಜ ಪ್ರತ್ಯೇಕ

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಒಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿರುವರು ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಮುಕ್ತಕಂಠದಿಂದ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಂಡಿತರಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ದಿವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮುಕ್ತಿನಗರಿಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ **೮ ರೂಪಾಯಿ** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು ವಿ ಪಿ ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ [illegible] —೧—೦
ಶ್ರೀ [illegible]
[illegible] ೦—೧—೬
[illegible]
ಶ್ರೀ ಜಗದ್ಗುರು [illegible] ೦—೧—೬
ಶ್ರೀ [illegible] ೦—೨—೯
ಶ್ರೀ [illegible] ಪಂಚಾಚಾರ್ಯ [illegible] ೦—೧—೯
ಶ್ರೀ [illegible] ಜಗದ್ಗುರು [illegible] —೨—೯
ಶ್ರೀ ಜಗದ್ಗುರು [illegible] —೧—೯
ಶ್ರೀ [illegible] —೦—೯
ಶ್ರೀ [illegible]
[illegible] —೯
ಶ್ರೀ [illegible] —೯
ಶ್ರೀ [illegible] ೦— —
ಪಂಚಾ[illegible] —೯
ಶ್ರೀ ಜಗ[illegible] ೦—೧—
ಶ್ರೀ ಜಗದ್ಗುರ [illegible] —
ಶ್ರೀ ಜಗದ್ಗುರು [illegible] ೦— —೯
ಶ್ರೀ ಜಗದ್ಗುರು [illegible] —೦—೯
ಶ್ರೀ [illegible] —೯
[illegible] ೦— —೯
[illegible] — —
[illegible]
[illegible]

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್, ಮೈಸೂರು

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು [illegible], ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕಳುಹಿಸಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ [illegible], ಒಂದೆ ತಲೆನೋವು ತಲೆಯಲ್ಲಿಯ [illegible], [illegible] ಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು ಜಲದೋಷ ಮೊದಲಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ [illegible] ವ್ಯಾಧಿಗಳನ್ನು ನಷ್ಟಪಡಿಸಿ [illegible] ಸಹ ಹೆಚ್ಚು ಮಾಡುತ್ತದೆ. ಮೂರುವರ್ಷದ [illegible] ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು [illegible] ಮಿಶ್ರಮಾಡಿದರೆ ಎಲ್ಲಕ್ಕೂ [illegible] ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ [illegible] ಉಪಯೋಗಿಸುತ್ತಾರೆ [illegible] ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ [illegible] ೦-೪-೦ ಡಜನ್ [illegible] ರೂ ೨-೦-೦ [illegible]

[illegible]

[illegible] ಕಂಪೆನಿ ಲಿಮಿಟೆಡ್,

[13] [illegible], [illegible]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು [illegible]	೩ ಆಣೆ
[illegible]	೧ ಆಣೆ
[illegible]	೧ ಆಣೆ
ಸನ್ಯಾಸಾಶ್ರಮ [illegible]	೧ ಆಣೆ
[illegible] (೨ನೇ ಆವೃತ್ತಿ)	[illegible]
ಶ್ರೀ [illegible]	೧ ಆಣೆ
[illegible]	೧ [illegible]
ಬಸವ [illegible] (ಆವೃತ್ತಿ)	[illegible]
ಶ್ರೀ [illegible] (ಆವೃತ್ತಿ)	[illegible] ಆಣೆ
ಪಂಚಾಚಾರ್ಯ [illegible]	೨ ಆಣೆ
ಶಿವ[illegible]	೩ ಆಣೆ
ಶ್ರೀ[illegible]	೨ ಆಣೆ
ಗುರು[illegible]	[illegible]
ಶ್ರೀ [illegible]	೩ ಆಣೆ
ವೀರಶೈವ[illegible]	೩ ಆಣೆ
ವೀರಶೈವ [illegible] (ಆವೃತ್ತಿ)	೩ ಆಣೆ
[illegible] (ಆವೃತ್ತಿ)	೪ ಆಣೆ
ಸನ್ಯಾಸಾಶ್ರಮ [illegible] (ಆವೃತ್ತಿ)	೬ ಆಣೆ
ವೈದಿಕ[illegible] ರಹಸ್ಯ	೪ ಆಣೆ
ಆಗಮಸಂಜ್ಞಾನ	೬ ಆಣೆ
ಶಿವಾಧಿಕ್ಯ[illegible] (ಕಡಪ್ಪರ ಕವಿಕೃತ)	೬ ಆಣೆ
ಬಸವಸಿದ್ಧಾಂತ ದಿವಾಕರ (ಆವೃತ್ತಿ)	೮ ಆಣೆ

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣವು ([illegible])	೮ ಆಣೆ
पंडित श्री काशीनाथशास्त्री यांचे भाषण (मराठी)	८ आणे
Speeches by Pandit Shri Kashinatha Shastri (English)	12 As
[illegible] (೪ನೇ ಆವೃತ್ತಿ)	೧೨ ಆಣೆ
ವೈದಿಕ[illegible] ([illegible])	೧೨ ಆಣೆ
ಶ್ರೀ ಜಗದ್ಗುರು [illegible]	೧೨ ಆಣೆ
[illegible] (ಆವೃತ್ತಿ)	೧೨ ಆಣೆ
[illegible] (ಶ್ರೀ[illegible])	೧೨ ಆಣೆ
[illegible]ಸಿದ್ಧಾಂತದರ್ಪಣ	೧೨ ಆಣೆ
[illegible]ವಿಜಯ (೨ನೇ ಆವೃತ್ತಿ)	೧ ರೂ
ಸಿದ್ಧಾಂತ[illegible] (ವೀರಶೈವಭಾಷ್ಯ)	೧ ರೂ
[illegible]ಉಪನಿಷತ್ (ವೀರಶೈವಭಾಷ್ಯ)	೧ ರೂ
[illegible] (ಕನ್ನಡ ಟೀಕಾ ಸಹಿತ)	೧ ರೂ
ವೀರಶೈವ ಸಿದ್ಧಾಂತ[illegible]	೨ ರೂ
[illegible] (ಕನ್ನಡವ್ಯಾಖ್ಯಾನ [illegible])	೪ ರೂ
लिंगधारणचंद्रिका (संस्कृत)	२ रु.
महानारायणोपनिषत् (वीरशैवभाष्य-संस्कृत) .	१ रु.
वीरशैवशेखर (संस्कृत) . . .	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ [illegible] ರೂ ಗಳ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು [illegible] ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible] ಪಂಡಿತ [illegible] ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M. 2266 || ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು || REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಸ್ಸುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು

ಸ್ಥಳದವರಿಗೆ ೧ ರೂ ೧೧ ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೬ ಆ ೨ ೬ ಪೋಸ್ಟೇಜ್ ಪ್ರತ್ಯೇಕ

ಸಂಪುಟ ೧೦.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೭ನೇ ಮೇ ೧೯೩೭ [ಸಂಚಿಕೆ ೪

|| ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಜೀಯಾಚ್ಛ್ರೀರೇಣುಕಾಚಾರ್ಯಃ ಶಿವಾಚಾರ್ಯಶಿಖಾಮಣಿಃ ।
ಯೋ ವೀರಶೈವಸಿದ್ಧಾಂತಂ ಸ್ಥಾಪಯಾಮಾಸ ಭೂತಲೇ ॥

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರ ಸುವರ್ಣರಜತನಿರ್ಮಿತ

ಅಡ್ಡಪಲ್ಲಕ್ಕಿ ಮಹೋತ್ಸವ

ಧಾರವಾಡ ಜಿಲ್ಹಾ ಬಂಕಾಪುರ ಶಹರನಿವಾಸಿಗಳಾದ ವೀರಶೈವ ಮಂಡಳಿಯವರು ವಿನಯಪೂರ್ವಕವಾಗಿ ಪ್ರಕಟಪಡಿಸಿಕೊಳ್ಳುವುದೇನೆಂದರೆ—

ನಮ್ಮಗಳ ಪ್ರಾರ್ಥನಾಪ್ರಕಾರ ಶ್ರೀ ಮಹಾ|| || ಸನ್ನಿಧಿಯವರು ಇದೇ ಧಾತೃನಾಮಸಂವತ್ಸರದ ಜ್ಯೇಷ್ಠ ಶು|| ೫ (ತಾ|| ೨೫-೫-೩೭) ಸೋಮವಾರ ಪ್ರಾತಃಕಾಲ ೯ ಘಂಟೆಯಿಂದ ಸಕಲ ಬಿರುದಾವಳಿಗಳೊಡನೆ ದಯಮಾಡಿಸುತ್ತಾರಾದ ಪ್ರಯುಕ್ತ ಅತ್ಯಂತವಿಜೃಂಭಣೆಯಿಂದ ಜರುಗುವ ಶ್ರೀ ಜಗದ್ಗುರುಗಳವರ ತಿರ್ಯಗಾಂದೋಲಿಕಾ (ಅಡ್ಡಪಲ್ಲಕ್ಕಿ) ಮಹೋತ್ಸವಕ್ಕೆ ಗುರುಭಕ್ತರು ಪುತ್ರಮಿತ್ರಕಲತ್ರರೊಡನೆ ಆಗಮಿಸಿ ಉತ್ಸವಭಾಗಿಗಳಾಗಿ ಶ್ರೀಮಹಾ || || ಸನ್ನಿಧಾನದ ದರ್ಶನಾಶೀರ್ವಾದಗಳಿಗೆ ಪಾತ್ರರಾಗುವುದಲ್ಲದೆ ನಮ್ಮಗಳ ಮನಸ್ಸಿಗೆ ಸಂತೋಷವನ್ನುಂಟುಮಾಡಬೇಕೆಂದು ಆಶಿಸುತ್ತೇವೆ

ಬಂಕಾಪುರ,
೧೨ ೫ ೧೯೩೭

ಶ್ರೀಮಹಾ || || ಸನ್ನಿಧಿಯ ಸೇವಾನಿರತರಾದ
ವೀರಶೈವ ಮಂಡಳಿಯವರು

ವಿವಾಹಮಹೋತ್ಸವ

ಶಿವಮೊಗ್ಗಾ ಟಿಪ್ಪುನಗರದ ವ|| ರಾ|| ಬ... ಶಿವಲಿಂಗಪ್ಪಶೆಟ್ಟರ ಪುತ್ರ ಚಿ| ಸೌ| ಚಂದ್ರಪ್ಪಶೆಟ್ಟಿ ... ನಗರ ರಾ| ರಾ| ತಮ್ಮಣ್ಣಶೆಟ್ಟಿ ... ಚನ್ನಬಸಪ್ಪನವರ ಪುತ್ರಿ ಚಿ| ಸೌ| ಕನ್ಯಾರತ್ನವನ್ನು ಕೊಟ್ಟು ವಿವಾಹದ ಮಹೋತ್ಸವವು ಮ| ರಾ| ಶಿವಲಿಂಗಪ್ಪಶೆಟ್ಟರ ಗೃಹದಲ್ಲಿ ತಾ| ೬-೫-೩೭ನೆಯ ಗುರುವಾರ ದಿವಸ ಅತಿ ವೈಭವವಾಗಿ ನೆರವೇರಿತು ವಿವಾಹಮಂಟಪವು ಬಗೆ ಬಗೆ ತೋರಣಗಳಿಂದಲೂ ನಾನಾವಿಧವಾದ ವಿದ್ಯುದ್ದೀಪಗಳಿಂದಲೂ ಬಹು ಮನೋಹರವಾಗಿ ಶೃಂಗರಿಸಲ್ಪಟ್ಟಿತ್ತು ಮರುದಿವಸ ಮೈಸೂರು ರಾಜಧಾನಿಯಿಂದ ಆಗಮಿಸಿದ್ದ ಮ|| ರಾ| ಆಸ್ಥಾನ ಸಂಗೀತವಿದ್ವಾನ್ ... ವೀರಭದ್ರಪ್ಪನವರ ಸಂಗೀತ ಕಚೇರಿಯು ... ನಡೆಯಿತು ಆ ಸಮಯದಲ್ಲಿ ಶಿವಮೊಗ್ಗ ಜಿಲ್ಲೆಯ ದೊಡ್ಡ ಉದ್ಯೋಗಸ್ಥರು ಮತ್ತು ಇತರ ಅಧಿಕಾರಿಗಳು, ಪುರಪ್ರಮುಖರು ಆಗಮಿಸಿ ವಧೂವರರಿಗೆ ಮಾಲೆಗಳನ್ನು ಹಾಕಿದರು ೧೦ ನೆಯ ಶನಿವಾರ ದಿವಸ ಮ ರಾ|| ಸಂಗೀತವಿದ್ವಾನ್ ... ಶೇಷಣ್ಣನವರ ಸಂಗೀತಕಚೇರಿಯಾಯಿತು ಈ ದಿವಸ ಪುರದ ಮಹನೀಯರೆಲ್ಲಾ ಆಗಮಿಸಿ ಸಂತೋಷವನ್ನು ಪಡೆದರು ಈ ಮಂಗಳಮಹೋತ್ಸವ ಸಮಯದಲ್ಲಿ ... ಮೇಲೆ ಮಂಗಲಕರವಾದ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷವ ನಡೆಯುತ್ತಲೇ ಇತ್ತು ಮ| ರಾ| ಶಿವಲಿಂಗಪ್ಪಶೆಟ್ಟರು ತಮ್ಮ ಅವಸಾನಕಾಲದಲ್ಲಿ ದಾನ ಮಾಡಿದ ಪ್ರಕಾರ ದೊಡ್ಡಪೇಟೆ ಬಸವೇಶ್ವರ ದೇವಾಲಯಕ್ಕೆ 101 ರೂ.ಗಳು ಸಮರ್ಪಿಸಲ್ಪಟ್ಟಿತು ಜಗದಾಚಾರ್ಯರು ವಧೂವರರಿಗೆ ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಕೋರುವೆ

H M R Aradhya

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀಮದ್ವೀರಶೈವ ಫ್ರೀ ಬೋರ್ಡಿಂಗ್,

ಗುಲಬರ್ಗಾ

ನಮ್ಮ ಫ್ರೀ ಬೋರ್ಡಿಂಗಿನಲ್ಲಿ ಪ್ರವೇಶಿಸಲಿಚ್ಛಿಸುವ ವಿದ್ಯಾರ್ಥಿಗಳು ಅಮುಕ್ತಾದ ತಿಂಗಳಲ್ಲಿಯೇ ನಮ್ಮ ಬೋರ್ಡಿಂಗಿನ ಪ್ರವೇಶಪತ್ರಿಕೆಯ ಫಾರಮ್ಮನ್ನು ಪಡೆದು ಅರ್ಜಿಯನ್ನು ಬರೆದುಕೊಳ್ಳಬೇಕು ಕಮಿಟಿಯಿಂದ ಒಪ್ಪಿಗೆಯಾಗಿ ಬಂದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುವದು ಸದ್ಯಕ್ಕೆ ೬ ನೆಯ ಕ್ಲಾಸಿನಿಂದ ಮೊದಲ್ಗೊಂಡು ಅಭ್ಯಾಸಮಾಡುವವರಿಗೆ ಆಶ್ರಯವು ದೊರೆಯುತ್ತದೆ ವಿದ್ಯಾರ್ಥಿಗಳು ನಿಜವಾಗಿ ಬಡವರಿದ್ದಲ್ಲಿ ಬರಬೇಕು ಜೀವರು ಅನುಕೂಲಿಸಿಕೊಟ್ಟರಲು ಕೃಪಣತನದಿಂದ ಬಡವರೆಂದು ಬಂದು ಸೇರಬಾರದು ನಾವೀ ಬೋರ್ಡಿಂಗನ್ನು ಕೇವಲ ಬಡವರಿಗಾಗಿಯೇ ಸ್ಥಾಪಿಸಿದ್ದು, ಮಹಾತ್ಯಾಗದಿಂದ ಸಾಗಿಸುತ್ತೇವೆ ಬೋರ್ಡಿಂಗಿಗೆ ಹೆಚ್ಚು ಶಕ್ತಿಯು ಬರುವವರೆಗೂ ಸದ್ಯ ಯೋಗ್ಯತಾನುಸಾರವಾಗಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತೇವೆ ವಿದ್ಯಾರ್ಥಿಗಳು ಸಚ್ಛವರ್ತನದವರಾಗಿರಬೇಕು

ಕಾರ್ಯದರ್ಶಿಗಳು,
ಮುಲಕೂಡ ಹಿರೇಮಠದ ಶ್ರೀಗಳು.

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

ವೀರಶೈವ ಸಂಧಾರಣೆ

(ಲೇಖನ ೮)

ಲೇಖಕ || ಶಾಸ್ತ್ರಾರ್ಥ, ಸಾಹಿತ್ಯಾಚಾರ್ಯ, ವೇದಾಂತಶಾಸ್ತ್ರೀ ಶ್ರೀನಾಗೇಂದ್ರಾಚಾರ್ಯ, ಬೃಹನ್ಮಠ, ಮುದೇನೂರು

ಇದೂ ಅಲ್ಲದೆ ಸ್ಕಂದಮಹಾಪುರಾಣದ ಶಿವರಹಸ್ಯ ಖಂಡದಲ್ಲಿ ಹೀಗೆ ವರ್ಣಿಸಲಾಗಿದೆ—

ಶಿವಸಾಧುರ್ಗತಶ್ರೇಷ್ಠ! ಪಾತ್ರಂ ವಿಪ್ರಸ್ಯಸಾತನಂ। ಲಿಂಗಿನಂ ಬ್ರಾಹ್ಮಣಂ ಪ್ರಾಹು ಬ್ರಾಹ್ಮಣಂ ಬಾಹ್ಯಲಿಂಗಿನಂ॥

(ಶ್ರೇಷ್ಠ ಭಕ್ತಶ್ರೇಷ್ಠನೇ! ಹಿರಿಯರ ಶಿವಲಿಂಗಧಾರಿಯಾದ ಬ್ರಾಹ್ಮಣ (ಮಾಹೇಶ್ವರ) ನನ್ನು ದಾನಕ್ಕೆ ಯೋಗ್ಯನನ್ನಾಗಿ ಹೇಳುವರು. ಅಥವಾ ಶಿವಲಿಂಗದ ಬಿಂದುವಾಗದ ಬ್ರಾಹ್ಮಣನನ್ನು ಹೇಳುವರೋ?) ಇನ್ನೊಂದು ಕಡೆ ಹೀಗೆ ಹೇಳಲಾಗಿದೆ —

ನಪ್ರತ್ಯುಪಿ ವಿಪ್ರಾಯ ಲಿಂಗಿನೇ ಜೀತರಾಯ ಚ। ವೇದಾಧ್ಯಯನಸಂಪನ್ನ ರಾಜನ್ ಯುವಾಯೇ ತಪಸ್ವಿನಃ॥

(ಇಲ್ಲಿ ಧರ್ಮರಾಜನೇ! ಶಿವಲಿಂಗಧಾರಿಯಾದ ವೀರಶೈವ ಜಂಗಮ ಬ್ರಾಹ್ಮಣನೇ ಆಗಲಿ, ಅದಾಗಿತರವರ ಬ್ರಾಹ್ಮಣನೇ ಆಗಲಿ, ಕರ್ಮದಿಂದ ತಪಸ್ವಿಗಳೇ ಆಗಿದ್ದರೂ ಅವರ ಆಚಾರ ಪಾಲನೆಯನ್ನು ನೋಡಿ ಕನ್ಯೆಯನ್ನಾಗಿ ತಂದುಕೊಂಡು ದಾನಮಾಡಬೇಕು [illegible] (ಅವರ) ಮೂಲಕವಾಗಿ ಉತ್ತರ ನನ್ನ ಮೇಲಿನ ಸಮನಾಗಿದೆ. ಮಹಾಭಾರತದ ಧರ್ಮಶಾಸ್ತ್ರ ಗ್ರಂಥ, ಅನುಶಾಸನ ಪರ್ವ (ದಾನಧರ್ಮವೇ ಕೊಟ್ಟದ್ದಾಗಿ ಹೀಗೆ ಹೇಳುವರು) ಎಂಬುದಾಗಿಯೇ ಶಾಸ್ತ್ರ ಯೋಗ್ಯ ಕಂಡ ಬಹುಶ ಪರಿಂದ ವೀರಶೈವರು ಮಹಾಭಾರತ ಕಾಲಕ್ಕೆ ಎಷ್ಟೋ ಹಿಂದಿನವರೆಂದು ಗೊತ್ತಾಗುತ್ತದೆ. ಶಿವಲಿಂಗಧಾರಿಗಳೂ ಇದರಲ್ಲಿ ಬ್ರಾಹ್ಮಣ ವರ್ಣದವರಾಗಿಯೇ ಎಂದು ತಿಳಿದುಬರುತ್ತದೆ. [illegible]

ಹೀಗಿದ್ದ ಬಳಿಕವೇ! ವರ್ಣಾಶ್ರಮಬದ್ಧರಾದ ನಮ್ಮೀ ವೀರಶೈವರನ್ನು ಯಾರು ಹೀಗೆ ಸೇರಿಸಿಕೊಂಡಾರಿಲ್ಲ? ಈಗಿನ ಕೆಲವು ಕಾರರು ಹೇಳುವಂತೆ ವೀರಶೈವರಿಗೆ ನಮ್ಮ ಗುರುಗಳು ಮಾನ್ಯಗಳಾಗಿದ್ದರೆ, ಇವರಲ್ಲಿ ವರ್ಣಾಶ್ರಮಾದಿ ಇಲ್ಲದ್ದಿದ್ದರೆ, ಇವರ ಸಂಪ್ರದಾಯ ನಮ್ಮ ಮೂಲವಾಗಿ ಬಂದದ್ದೇ ಸರ್ವದಾ ಪೂರ್ವಕಾಲದ ಆಚಾರ್ಯರು, ಮಹರ್ಷಿಗಳು, ಯೋಗಿಗಳು, ಪಂಡಿತ ಸಾರ್ವಭೌಮರು ತಮ್ಮ ತಮ್ಮ ಗ್ರಂಥಗಳಲ್ಲಿ ವೀರಶೈವರ ಶಿವಲಿಂಗಧಾರಣಾದಿ ವಿಷಯವನ್ನು ಶಿವಲಿಂಗಧಾರಿಗಳು ಪವಿತ್ರರೆಂಬ ಸಿದ್ಧಾಂತವನ್ನು ಹೀಗೂ ಬರೆಯುತ್ತಿರಲಿಲ್ಲ. ಈ ವಿಷಯವನ್ನು ಓದುಗರು ಸ್ವತಃ ತಿಳಿಯಬೇಕು! ಇತ್ತೀಚಿನ ಸಂಕರಕಾರರ ಕಲ್ಪಿತ ಗ್ರಂಥಗಳನ್ನು ಶಿವಶರಣರ ಶಿಷ್ಯರೂ ಪಂಡಿತರೂ ಕೆಲವರಿದ್ದಾರೆ. ಅವರೆ 'ಸಂಸರ್ಗಜಾ ದೋಷಗುಣಾ ಭವಂತಿ' ಎಂಬ ಅಭಿಯುಕ್ತೋಕ್ತಿಯಂತೆ ಧರ್ಮಲಂಡರ ಸಹವಾಸದಿಂದ ಆ ಪಂಡಿತರ ಗುಣ ಕೀರ್ತನೆಗೆ ಬಹಳ ಅಂಟಿಕೊಳ್ಳುತ್ತ ನಡೆದಿದೆ. ನಾವೇನ್ಮಾಡೇನು, ಉಪಾಯವಿಲ್ಲ. ಇದು ಕಲಿಕಾಲದ ಪ್ರಭಾವವೆಂದು ಕಾಲವನ್ನೇ ನಿಂದಿಸಿಯೇ ಮೋಕ್ಷಾರ್ಥಿಗಳಾಗಿ ವಿರೋಧ! ಅವರೆ ಪಂಡಿತರಾಗಿಯೂ ಸುಮಾರರಿಗೆ ಕಡೆಯವಾಗಿ ನಡೆಯುತ್ತಿರುವರಲ್ಲ, ಎಂಬುದೊಂದೇ ನಮಗೆ ವಿಶೇಷವಾದ ಚಿಂತೆ! ಇರಲಿ.

ವರ್ಣಾಶ್ರಮಗಳನ್ನೊಪ್ಪುವ ವೀರಶೈವಮತದ ಅಣ್ಣಗಳು ಎಲ್ಲಾ ಪರೂ ತಮ್ಮ ಆಚಾರವನ್ನು ಬಿಟ್ಟು ನಡೆಯುವುದಕ್ಕೆ ಅನುಕೂಲವಾಗಲೆಂಬ ಸದುದ್ದೇಶದಿಂದಲೂ, ನಮ್ಮ ವಾಚಕ ವೃಂದಕ್ಕೆ ಇನ್ನೂ ವಿಶೇಷವಾಗಿ ಅನುಭವವಾಗಲೆಂಬ ಇಚ್ಛೆಯಿಂದಲೂ ಈ ವರ್ಣಾಶ್ರಮನಿರ್ಣಯ ವಿಷಯವನ್ನು ಇನ್ನು ಸ್ವಲ್ಪ ಮುಂದೆ ಸಾಗಿಸಬೇಕಾಗಿದೆ. ಇದೋ ನೋಡಿ!—ವೀರಶೈವ ರಾಜರಾದ ಕೆಳದಿಯ ಬಸವಪ್ಪನಾಯಕರು ತಮ್ಮ "ಶಿವತತ್ವರತ್ನಾಕರ" ವೆಂಬ ಗ್ರಂಥದಲ್ಲಿ ಆಗಮಾದಿಪ್ರಾಚೀನಪ್ರಮಾಣಗಳನ್ನು ಅಲ್ಲಲ್ಲಿಯೇ ತೆಗೆದುಕೊಂಡಿರುವರು.

ಮರಸ್ಥಲಸಮುತ್ಪನ್ನಃ ಶ್ಯಾಪ್ರಶ್ರೀನಾಗಸಮಾರ್ಥವಿತ್ ॥೫೨॥ ವಿರುದ್ಧದೇಹಃ ಕುಲಜಃ ಶೀಲಾಚಾರಸಮನ್ವಿತಃ ॥೫೪॥ ವರ್ಣಾಶ್ರಮಕ್ರಿಯಾನಿಷ್ಠೋ ವೇದವಿಚ್ಛಾಸ್ತ್ರಕೋವಿದಃ ॥೫೫॥ ಮರಸ್ಥಲವಿಹೀನಸ್ಯ ಗುರುಪಟ್ಟಿಂ ಶಿವಾಧ್ವೈ ॥೬೨॥ ಗುರುಲಕ್ಷಣಮಿತ್ಯುಕ್ತಂ, ಶಿಷ್ಯ ದ್ವಿಜಾತಿರ್ವಾತಥಾಶೂದ್ರಃ ಸ್ವಸ್ಥೋ ಬಸವಥ್ವಾಂತ ದಿವಾಕರ [illegible] ತೇರಕ್ತಂತಥಾಸೀತಂ

ಕೃಷ್ಣಂ ಚೇತಿ ಚತುರ್ವಿಧಂ। ವಿಪ್ರಾದೀನಾಂ ತು ವರ್ಣಾನಾಂ ಲಿಂಗಂ ಧಾರ್ಯಂ ಯಥಾಕ್ರಮಂ ॥೬೭॥

(ಕಲ್ಲೋಲ ೯, ತರಂಗ ೭)

(ಮಹಾಕ್ಷೇತ್ರದ ಶುದ್ಧ ವಂಶದಲ್ಲಿ ಹುಟ್ಟಿದವನೂ, ಮಹಾಸೂತ್ರಗಳನ್ನೂ, ಶಾಸ್ತ್ರ ಸೂತ್ರ ಸ್ಮೃತಿಗಳ ವೇದಗಳ ಅರ್ಥವನ್ನು ತಿಳಿದವನೂ, ನಿರೋಗಶರೀರನೂ, ಶೀಲಸದಾಚಾರಗಳಿಂದ ಕೂಡಿದವನೂ, ವರ್ಣಾಶ್ರಮೋಚಿತಗಳಾದ ಕರ್ಮಗಳನ್ನು ಆಚರಿಸತಕ್ಕವನೂ, ಅವನೇ ಗುರುವೆನಿಸುವನು. ಇಂತಹ ಗುರುವಾಗದವ ಗುರುಪಟ್ಟ (ಪಟ್ಟಾಧಿಕಾರ)ಕ್ಕೆ ಸಲ್ಲುವುದಿಲ್ಲ. ಇಂತಹ ಬ್ರಾಹ್ಮಣಾದಿ ವರ್ಣಗಳಲ್ಲಿ ಅವರವರ ನಿಯಮದಂತೆ, ಆಯಾ ವರ್ಣಗಳವರು ತಮತಮಗೆ ಉಚಿತವಾದ ಲಿಂಗಗಳನ್ನು ಧರಿಸುವುದು ಶಿಷ್ಯನ ಸ್ವಭಾವಲಕ್ಷಣವಾಗಿಹುದು. ಶಿವ ಧ್ಯಾನಿಸುವ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ಚತುರ್ವರ್ಣದವರು ಕ್ರಮವಾಗಿ ಬಿಳಿ, ಕೆಂಪು, ಹಳದಿ, ಕಪ್ಪು ಬಣ್ಣದ ಶಿವಲಿಂಗಗಳನ್ನು ಧರಿಸಿಕೊಳ್ಳಬೇಕು) ಇಂತಹ ವಚನಗಳೆಲ್ಲ ಈ ಶ್ಲೋಕಗಳು ವೀರಶೈವರ ವರ್ಣಾಶ್ರಮಧರ್ಮಗಳನ್ನು ಚೆನ್ನಾಗಿ ನೋಡಬಹುದಾಗಿದೆ.

ಇದೂ ಅಲ್ಲದೆ 'ಕ್ರಿಯಾಸಾರ' ದಲ್ಲಿ ವೀರಶೈವರ ಧರ್ಮಧಾರಣೆಯ ವಿಷಯ ಹೀಗೆ ವಿವರಿಸಲ್ಪಟ್ಟಿದೆ

ಬ್ರಾಹ್ಮಣಸ್ಯತು ಗೌರಶ್ಚೈತಾರಕ್ತಾ ಗೌ ಕ್ಷತ್ರಿಯಸ್ಯ ತು। ಪೀತವರ್ಣಸ್ತು ವೈಶ್ಯಸ್ಯ ಕೃಷ್ಣಃ ಶೂದ್ರಸ್ಯ ಚೋಚ್ಯತೇ ॥೧೧॥ ಪ್ರತ್ಯೇಕಂ ವರ್ಣ ತದಾ ಸ್ವಾತ್ವರ್ಣಂ ದ್ವಿಜಾನಾಮೇವ ಕೀರ್ತಿತಂ। ಏಕೈಕಸ್ಯಾನುಪಿನರ್ವ್ಯಾಮವರೇಂ ಜನ್ಮ ಲೌಕಿಕಂ ॥೮॥

(ಕ್ರಿ ಉಪದೇಶ ೬, ಶ್ಲೋಕ ೯೭–೯೮)

(ವೀರಶೈವರಲ್ಲಿ ಬ್ರಾಹ್ಮಣಾದಿ ಚತುರ್ವರ್ಣದವರ ವಸ್ತ್ರವಿನ್ಯಾಸಕ್ಕಾಗಿ ಕ್ರಮ ಶ್ವೇತಾದಿವರ್ಣಗಳ ಬಳಕೆಯು ಪ್ರತ್ಯೇಕವಾಗಿ ಹೇಳಲ್ಪಟ್ಟಿದ್ದು, ಪ್ರತಿಷ್ಠಿತರಲ್ಲಿ ಹೇಳುವುದಾದರೆ ಸಾಮಾನ್ಯವಾಗಿ ಬ್ರಾಹ್ಮಣಾದಿ ತ್ರಿವರ್ಣದವರು ದಾಸಿಕೊಳ್ಳಬೇಕಾದ ಶ್ವೇತವಸ್ತ್ರ ಉತ್ತರೀಯ ಧಾರಣೆಗೆ ಅವಕಾಶವಿದ್ದು [illegible]) ಹೀಗೆ ಹೇಳಿದೆ. ಈ ಶ್ಲೋಕಗಳಲ್ಲಿ ವೀರಶೈವರ ನಾಲ್ಕು ವರ್ಣಗಳ ಹೆಸರು ಸ್ಪಷ್ಟವಾಗಿ ಉಕ್ತವಾಗಿದೆ. ಇನ್ನು ನೋಡಿ!—

" ಸ್ವರಾಂಶಿನೇತ್ರ ವಟವರ್ ಶಿವಸ್ಯಾಚಾರ್ಯಂ " ಇತ್ಯಾರಭ್ಯ ದ ಪ್ರಸ್ತೋಚ ಬ್ರಾಹ್ಮಣಾದಿಭಿರ್ವೀರಶೈವೈಃ ವಿಶೇಷೇಣಾಸ್ತಿ ಶ್ವೇತ, ರಕ್ತ, ಪೀತ, ಕೃಷ್ಣ ವರ್ಣಂ ಗ್ರಾಹ್ಯಂ। ಉಕ್ತವರ್ಣಾಲಾಭೇ ರಕ್ತಾದಿತ್ರಯಂ ಕ್ಷತ್ರಿಯೈಃ, ಪೀತಾದಿದ್ವಯಂ ವೈಶ್ಯೈಃ, ಶೂದ್ರೈಸ್ತು ಕೃಷ್ಣವರ್ಣ ಮೇವ ಧಾರ್ಯಂ। ಸನ್ನ್ಯಾಸಿನಾ ಸರ್ವಂ ಯಥಾಲಾಭಂ ಧಾರ್ಯಂ॥

(ಕ್ರಿಯಾಸಾರ, ಉಪದೇಶ ೧೪ ಪುಟ)

("ಸ್ವರಾಂಶಿ ನೇತ್ರ ವಟವರ್ ಶಿವಸ್ಯಾಚಾರ್ಯಂ" ಮುಂತಾದ ಆಗಮೋಕ್ತಿಯಂತೆ ಬ್ರಾಹ್ಮಣಾದಿ ಚತುರ್ವರ್ಣದವರಾದ ವೀರಶೈವರು ವಿಶೇಷ (ಮುಖ್ಯ)ವಾಗಿ ಬಿಳಿ, ಕೆಂಪು, ಹಳದಿ, ಕಪ್ಪು ಬಣ್ಣದ ರುದ್ರಾಕ್ಷಗಳನ್ನೇ ಕ್ರಮವಾಗಿ ಧರಿಸಿಕೊಳ್ಳಬೇಕು. ಒಂದು ವೇಳೆ ಆ ವರ್ಣದವರಿಗೆ ಆ ವರ್ಣದ ರುದ್ರಾಕ್ಷಗಳು ದೊರೆಯದಿದ್ದರೆ ವೀರಶೈವಕ್ಷತ್ರಿಯರು ಕೆಂಪು, ಹಳದಿ, ಕಪ್ಪು ಬಣ್ಣದ ರುದ್ರಾಕ್ಷಗಳಲ್ಲಿ ಯಾವುದನ್ನಾದರೂ ಧರಿಸಿಕೊಳ್ಳಬಹುದು. ವೀರಶೈವ ವೈಶ್ಯರು ಹಳದಿ ಕಪ್ಪು ಬಣ್ಣಗಳಲ್ಲಿ ಯಾವುದನ್ನಾದರೂ ಧರಿಸಿಕೊಳ್ಳಬಹುದು. ವೀರಶೈವ ಶೂದ್ರರಾದವರೋ ಕಪ್ಪು ಬಣ್ಣದ ರುದ್ರಾಕ್ಷಗಳನ್ನೇ ಧರಿಸಿಕೊಳ್ಳಬೇಕು. ಒಂದು ವೇಳೆ ಸನ್ಯಾಸಿಯಾಗಿ ಬೇರೆ ಬೇರೆ ಬಣ್ಣದ ರುದ್ರಾಕ್ಷಗಳು ದೊರೆಯದಿದ್ದರೆ ದೊರೆತ ಯಾವ ಬಣ್ಣದ ರುದ್ರಾಕ್ಷಗಳನ್ನಾದರೂ ಸರ್ವರೂ ಧರಿಸಿಕೊಳ್ಳಬೇಕು) ಎಂಬೀ ಪ್ರಮಾಣದಲ್ಲಿ "ಬ್ರಾಹ್ಮಣಾದಿಭಿರ್ವೀರಶೈವೈಃ" (ವೀರಶೈವರಲ್ಲಿ ಬ್ರಾಹ್ಮಣರೇ ಮೊದಲಾದವರಿಂದ) ಎಂಬ ಪದಗಳು ಸುವರ್ಣಾಕ್ಷರಗಳಂತೆ ಥಳಥಳ ಹೊಳೆಯುತ್ತಿರುವುದರಿಂದ ವೀರಶೈವರಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರೂ ಅವರಿಗೆ ಮಿಕ್ಕ ಸಾಮಾನ್ಯ ಜಾತಿಯವರೂ ಉಂಟೇ ಉಂಟೆಂದು ಶ್ರೋತೃಗಳಿಗೆ ಸಿದ್ಧವಾದ ಮಾತಾಯಿತು.

ವಾಚಕಮಹೋದಯರೇ! ನಮ್ಮ ಸಮಾಜದಲ್ಲಿ ಕೆಲವರು ವರ್ಣನಿರ್ಣಾಯಕಗಳಾದ ಇಂತಹ ಪ್ರಮಾಣಗಳನ್ನು ನೋಡಿ ಸಹಿಸಲಾರದೆ ವ್ಯರ್ಥವಾಗಿ ಶ್ರಮವನ್ನು ವಹಿಸಿ ಮೇಲಿಂದಮೇಲೆ ವೀರಶೈವರಲ್ಲಿ ವರ್ಣಾಶ್ರಮಗಳಿಲ್ಲ, ಇವರು ಅಶ್ರಾಶ್ರಮಿಗಳು, ಇವರು ಅತಿವರ್ಣಾಶ್ರಮಿಗಳು ಎಂದು ವಾನಪ್ರಸ್ಥ ಸನ್ಯಾಸಿ, ಅವಧೂತ, ವೈರಾಗಿ ಮುಂತಾದವರಿಗೆ ಪರವಾಗಿರುವ ಆ ನಾಮಗಳನ್ನು ಸಮಸ್ತ ವೀರಶೈವರ ಪರವಾಗಿ ಅಂಟಿಸುವುದಕ್ಕೆ ಪ್ರಯತ್ನ ಪಡುತ್ತಿರುವರು. ಪಾಪ! ಶಾಸ್ತ್ರಗಳಲ್ಲಿ ಗತಿಯಿಲ್ಲದವರು ಧರ್ಮಗ್ರಂಥಗಳ ಅರ್ಥವನ್ನು ತಿಳಿಯಲು ಹೇಗೆ ತಾನೆ ಸಮರ್ಥರಾಗುವರು? ಎಂದೂ ಇಲ್ಲ. ಸಮಸ್ತ ವೀರಶೈವರೂ ಅತಿವರ್ಣಾಶ್ರಮಿಗಳೆಂದು ಹೇಳುವ ಇವರ ಮಾತು ಎಷ್ಟು ಸತ್ಯವಾಗಿದೆಯೋ ನೋಡೋಣ!—

ಯಸ್ಯ ವರ್ಣಾಶ್ರಮಾಚಾರೋ ಗಲಿತಃ ಸ್ವಾತ್ಮದರ್ಶನಾತ್ । ಸವರ್ಣಾನಾಶ್ರಮಾಚಾರಾನತೀತ್ಯ ಸ್ವಾತ್ಮನಿ ಸ್ಥಿತಃ ॥ ಯೋಽತೀತ್ಯ ಸ್ವಾಶ್ರಮಾನ್ ವರ್ಣಾನಾತ್ಮನ್ಯೇವ ಸ್ಥಿತಃ ಪುಮಾನ್ । ಸೋಽತಿವರ್ಣಾಶ್ರಮೀ ಪ್ರೋಕ್ತಸ್ಸರ್ವವೇದಾರ್ಥವಾದಿಭಿಃ ॥೧೦೬॥

(ಶಿವತತ್ವರತ್ನಾಕರ, ಕಲ್ಲೋಲ ೮, ತರಂಗ ೬)

(ಆತ್ಮಜ್ಞಾನದಿಂದ ಯಾವನ ವರ್ಣಾಶ್ರಮಾಚಾರವೆಲ್ಲವೂ ಜಾರಿ ಹೋಗಿರುವುದೋ, ಆತನು ವರ್ಣಾಶ್ರಮಗಳನ್ನು ದಾಟಿ (ಮೀರಿ) ಆತ್ಮನಿಷ್ಠನಾಗಿರುವನು. (ಯಾವನು ತನ್ನ ವರ್ಣಾಶ್ರಮಗಳನ್ನು ದಾಟಿ ಪರಮಾತ್ಮನಲ್ಲಿ ಲೀನನಾಗಿ ವರ್ತಿಸುತ್ತಿರುವನೋ, ಆತನು ಸಕಲ ವೇದಾರ್ಥಗಳನ್ನು ಬಲ್ಲವರಿಂದ ಅತಿವರ್ಣಾಶ್ರಮಿಯೆಂದು ಹೇಳಲ್ಪಟ್ಟಿರುವನು) ಮೇಲಿನ ಈ ಪದ್ಯಾರ್ಥವನ್ನು ವಿಚಾರಮಾಡುತ್ತ ಶಿವಾಗಿ ಅತಿವರ್ಣಾಶ್ರಮಿಯು ಸ್ವಭಾವವಾಗಿ ಆತ್ಮಜ್ಞಾನಿಯಾದ ಯಾವ ಮನುಷ್ಯನು ಬೇಕಾದರೂ ಆಗಬಹುದೆಂದು ತೋರುತ್ತದೆ. ಜನಸಾಮಾನ್ಯಕ್ಕೆ ಇದು ಸ್ವಲ್ಪ ನಿಗೂಢವಾಗಿದೆ. ಆತ್ಮಜ್ಞಾನವು ಉಂಟಾದ ಬಳಿಕ ನಾನು ಇಂತಹ ವರ್ಣದವನು, ಇಂತಹ ಆಶ್ರಮದವನೆಂಬ ಭಾವನೆಯೇ ಉಳಿಯುವುದಿಲ್ಲ. ಆದುದರಿಂದ ಅತಿವರ್ಣಾಶ್ರಮಿಯು ಆತ್ಮಜ್ಞಾನಿಯಾದ ಯಾವ ಮನುಷ್ಯನು ಬೇಕಾದರೂ ಆಗಬಲ್ಲನು. ಆದರೆ ವೀರಶೈವನೇ ಅತಿವರ್ಣಾಶ್ರಮಿಯೆಂಬುದು ತಪ್ಪು. ಇವರ ಹೊರತಾಗಿ ಇನ್ನುಳಿದವರೂ ಅತಿವರ್ಣಾಶ್ರಮಿಗಳೆಂದು ಹೇಳುವುದಕ್ಕೆ ಬಲವಾದ ಪ್ರಮಾಣಗಳಿಲ್ಲವು. ಒಟ್ಟಿನ ಮೇಲೆ ಈ ಅತಿವರ್ಣಾಶ್ರಮವು ಜ್ಞಾನ ಸ್ವರೂಪಲಕ್ಷಣಲಕ್ಷಿತವಾದ ನಿವೃತ್ತಿಮಾರ್ಗಕ್ಕೆ ಮಟ್ಟಲೆನಿಸುವುದರಿಂದ ಕೇವಲ ಜ್ಞಾನಮಾರ್ಗದಲ್ಲಿ ವರ್ತಿಸುತ್ತ ಅನಾತ್ಮವಸ್ತುಗಳ ಸ್ವರೂಪ ಚೆನ್ನಾಗಿ ತಿಳಿದು ಆತ್ಮಲೀನನಾಗಿ ವೈರಾಗ್ಯಸಂಪನ್ನನಾಗಿ ಯೋಗಿಗಳೂ "ಸೋಽಹಂ" ಭಾವನೆಯುಳ್ಳವರೂ ಆದ ಅವಧೂತರು, ಸನ್ಯಾಸಿಗಳೂ ಸಲ್ಲುವರಲ್ಲದೆ ಇತರರು ಸಲ್ಲುವುದಿಲ್ಲ.

ಹೀಗೆ ಅತಿವರ್ಣಾಶ್ರಮವು ಇಂತವರಿಗೆ ಸಲ್ಲುವುದೆಂದರೂ ತ್ರಿಕಾಲ ಇದರಿಂದ ಜನಸಾಮಾನ್ಯ ವರ್ಣಾಶ್ರಮಗಳೇ ಇಲ್ಲವೆಂದು ಹೇಳಲು ಬರುವುದಿಲ್ಲ. ಹಿಂದಿನ ವೇದಗಳಲ್ಲಿ ಪ್ರವೃತ್ತಿ (ಕರ್ಮ) ಮಾರ್ಗವೆಂದೂ, ನಿವೃತ್ತಿ (ಜ್ಞಾನ) ಮಾರ್ಗವೆಂದೂ ಎರಡು ಬಗೆಯ ಧರ್ಮಗಳು ಹೇಳಲ್ಪಟ್ಟಿವೆ. ಇವುಗಳಲ್ಲಿ ಕೆಲವರು ಪ್ರವೃತ್ತಿ (ಪ್ರವೃತ್ತ, ಕರ್ಮ) ಮಾರ್ಗದಲ್ಲಿಯೂ, ಕೆಲವರು ನಿವೃತ್ತಿ (ನಿವೃತ್ತ, ಜ್ಞಾನ) ಮಾರ್ಗದಲ್ಲಿಯೂ ಕೆಲವರು ಪ್ರವೃತ್ತಿ ನಿವೃತ್ತಿ (ಪ್ರವೃತ್ತ, ನಿವೃತ್ತ, ಕರ್ಮಜ್ಞಾನ) ಸಮ್ಮಿಶ್ರವಾದ ಮಾರ್ಗದಲ್ಲಿಯೂ ನಡೆಯುತ್ತಿದ್ದಾರೆ. ದ್ವೈತಾದ್ವೈತಿಗಳಾದ ವೀರಶೈವರು 'ಕ್ರಿಯಾಶೂನ್ಯಂ ಜ್ಞಾನಂ ಜ್ಞಾನಶೂನ್ಯಾ ಕ್ರಿಯಾ' ಎಂಬ ಆಗಮೋಕ್ತಿಯ ಪ್ರಕಾರವಾಗಿ ಕರ್ಮಜ್ಞಾನಗಳೆರಡನ್ನೂ ಸಮನ್ವಯದಿಂದ ನಡೆಸುತ್ತಿರುವರು. ಶಂಕರಮತದವರು ವರ್ಣಾಶ್ರಮಗಳೆಂದರೂ ಜ್ಞಾನಿಯಾದವರು ಉಪಾಸಕರು ಕರ್ಮಮಾರ್ಗಗಳಲ್ಲಿರೆಂದು ಹೇಳುತ್ತ ವೇದವಿಹಿತಗಳಾದ ಕರ್ಮಗಳನ್ನು ಮೊದಲು ಆಚರಿಸಿ ಕೊನೆಗೆ (ವಾನಪ್ರಸ್ಥಾಶ್ರಮಾನಂತರ) ನಿವೃತ್ತಿಲಕ್ಷಣವುಳ್ಳ ಜ್ಞಾನವನ್ನೇ ಪ್ರಧಾನವಾಗಿ ಅಂಗೀಕಾರಮಾಡಿ "ಸನ್ನ್ಯಾಸವೆಂಬ ಅನಾತ್ಮವಸ್ತುಗಳೆಲ್ಲವನ್ನು ತ್ಯಾಗಮಾಡುವುದು" ಎಂದು ಸನ್ಯಾಸವನ್ನು ಸ್ವೀಕರಿಸಿ "ಜ್ಞಾನಾದೇವತು ಕೈವಲ್ಯಂ" ಎಂದು ನಡೆಯುತ್ತಿರುವರು. ಎಂದಮೇಲೆ ಯಾವ ಕಡೆಯಿಂದಲೇ ಆಗಲಿ, ವರ್ಣಾಶ್ರಮಾಚಾರಗಳನ್ನು ಜಗತ್ತಿನಲ್ಲಿರುವ ಎಲ್ಲರೂ ಆಚರಿಸುತ್ತಿರುವರೆಂಬ ಸಂಶಯವಿಲ್ಲದ ಮಾತು.

ಮೊದಲು ವರ್ಣಾಶ್ರಮಾಚಾರಗಳನ್ನು ಆಚರಿಸದೆ ಯಾವ ಮನುಷ್ಯನೂ ಅತಿವರ್ಣಾಶ್ರಮಿಯೆನಿಸಲಾರನು. ಒಂದು ವೇಳೆ ವರ್ಣಾಶ್ರಮಗಳೇ ಇಲ್ಲದಿದ್ದರೆ ಅತಿವರ್ಣಾಶ್ರಮಿ (ವರ್ಣಾಶ್ರಮಗಳನ್ನು ದಾಟಿದವನು) ಎಂಬ ಶಬ್ದಕ್ಕಾದರೂ ಬೆಲೆ ಉಂಟಾಗುತ್ತಿದ್ದಿತೆ? ಆದುದರಿಂದ ಅತಿವರ್ಣಾಶ್ರಮಿಯೆನಿಸುವವರೆ ಸ್ವಸ್ವಜಾತ್ಯನುಗುಣವಾದ ವರ್ಣಾಚಾರಗಳನ್ನೂ, ಆಶ್ರಮಾಚಾರಗಳನ್ನೂ ಆಚರಿಸಿ ಕೊನೆಗೆ ಆತ್ಮಜ್ಞಾನಿ, ಅಥವಾ ಬ್ರಹ್ಮಜ್ಞಾನಿಯೆಂದು ಹೇಳಬೇಕು. ಹಾಗಲ್ಲದೆ ತಾಯಿಯೊಡಲಿನಿಂದ ಹೊರಗೆ ಬಂದು ಜಾತಕಸಂಸ್ಕಾರವನ್ನು ಹೊಂದುತ್ತಿರುವ ಬಾಲಕನನ್ನು ನೋಡಿ ಈತನು ಅತಿವರ್ಣಾಶ್ರಮಿಯು, ಅತಿವರ್ಣಾಶ್ರಮಿಯು ಇವನು, ಎಂದು ಹೇಳಿದರೆ ಎಲ್ಲರೂ ಚಪ್ಪಾಳೆ ಹೊಡೆದು ನಕ್ಕೇ ಬಿಡುವರು. ಅದುದರಿಂದ ಜಗತ್ತಿನಲ್ಲಿರುವವರೆಲ್ಲರಾಗಲಿ, ಅಥವಾ ಎಲ್ಲಾ ವೀರಶೈವರಾಗಲಿ ಅತಿವರ್ಣಾಶ್ರಮಿಗಳೆಂದು ಎಂದೂ ಹೇಳಿಸಿಕೊಳ್ಳಲಾರರು. ಅತಿವರ್ಣಾಶ್ರಮಿಶಬ್ದದಿಂದ ಕರೆಯಿಸಿಕೊಳ್ಳುವುದಕ್ಕೆ ಮೇಲೆ ನಿರ್ದೇಶಿಸಿದಂತೆ ಸರ್ವಕರ್ಮತ್ಯಾಗಿಗಳಾಗಿ ಬ್ರಹ್ಮಜ್ಞಾನಿಗಳಾದ ಯೋಗಿಗಳೂ, ಅವಧೂತರೂ, ಸನ್ಯಾಸಿಗಳೂ, ವೈರಾಗಿಗಳೂ ಅರ್ಹರೆಂಬುವೇ ಸಿದ್ಧಾಂತವು.

ಸನ್ಯಾಸವಾದರೋ ಜಗತ್ತಿನಲ್ಲಿ ಜನಿಸಿದ ಪ್ರತಿಯೊಬ್ಬನಿಗೂ ಒಂದುದಿನ ಉಂಟೇ ಉಂಟು. ಮನುಷ್ಯನು ಜಗತ್ತನ್ನು ಬಿಟ್ಟು ಪರಮಾತ್ಮನಲ್ಲಿ ಪರಮಾತ್ಮಸ್ವರೂಪನಾಗಿ ಬೆರೆಯುವ ಸಮಯದಲ್ಲಿ ಎಲ್ಲರೂ ಅತಿವರ್ಣಾಶ್ರಮಿಗಳೇ ಆಗುವರು. ಒಟ್ಟಿನ ಮೇಲೆ ವರ್ಣಾಶ್ರಮ ಧರ್ಮಗಳಲ್ಲಿ ನಡೆಯುವವನೇ ಕೊನೆಗೆ ಅತಿವರ್ಣಾಶ್ರಮಿಯೂ ಆಗಬಲ್ಲನೇ ಹೊರತು ಮೊದಲು ವರ್ಣಾಶ್ರಮಧರ್ಮಗಳಲ್ಲಿ ನಡೆಯ

ಜನನು ಎಂದೆಂದಿಗೂ ಅತಿವರ್ಣಾಶ್ರಮಿ, ಅಥವಾ ಅತ್ಯಾಶ್ರಮಿ ಯೆನಿಸಲಾರನೆಂಬುದನ್ನು ಎಲ್ಲರೂ ಚೆನ್ನಾಗಿ ನೆನಪಿನಲ್ಲಿಡಬೇಕು ಈ ಕೆಳಗಿನ ಶ್ಲೋಕಗಳಲ್ಲಿಯೂ ಕೂಡ ಇದೇ ಅಭಿಪ್ರಾಯವೇ ಸ್ಪಷ್ಟವಾಗಿ ತೋರುವುದು ಇದನ್ನೋ ನೋಡಿರಿ! "ಸ್ವಾತ್ಮವರ್ಣಾಶ್ರಮಾಚಾರೋಗಲಿತಾ" (ಆತ್ಮಜ್ಞಾನದಿಂದ ವರ್ಣಾಶ್ರಮಗಳ ಆಚಾರವು ಕಳಚಿತು) ಎಂಬ ಪದಗಳು ಸೋದಲು ವರ್ಣಾಶ್ರಮಾಚಾರಗಳನ್ನು ಆಚರಿಸುತ್ತ ಆತ್ಮಜ್ಞಾನಿಯಾದವನ ಕರ್ಮತ್ಯಾಗವನ್ನು ಮಾತ್ರ ಸೂಚಿಸುವವು. ಹಾಗೆಯೇ "ಸವರ್ಣಾಶ್ರಮಾಚಾರಾತೀತ್ಯಸ್ವಾತ್ಮನಿಷ್ಠಃ |" (ವರ್ಣಾಶ್ರಮಾಚಾರಗಳನ್ನು ದಾಟಿ ಸ್ವಾತ್ಮನಿಷ್ಠನಾದವನು) ಎಂಬ ಪದಗಳು ಮಾನವನು ವರ್ಣಾಶ್ರಮಾಚಾರಗಳನ್ನು ಚೆನ್ನಾಗಿ ಆಚರಿಸಿದ ಮೇಲೆಯೇ ಸದಾತ್ಮನಲ್ಲಿ ಲೀನನಾಗುವನೆಂಬ ಅಭಿಪ್ರಾಯವನ್ನು ಸ್ಪಷ್ಟವಾಗಿ ಪ್ರಕಟಪಡಿಸುತ್ತಿರುವೆ [illegible] "[illegible] ಮೊಳೆಯುವ [illegible] ಹುಟ್ಟಿದನು" ಎಂದು [illegible] ಪದಗಳು [illegible] ಸಂಬಂಧವನ್ನು [illegible] ಸಂಬಂಧವನ್ನು ಹೇಳುವುದು [illegible] "ವರ್ಣಾಶ್ರಮಾಚಾರಗಳನ್ನು ದಾಟಿ ಸ್ವಾತ್ಮನಿಷ್ಠನಾದವನು" ಎಂಬ [illegible] ಮನುಷ್ಯನಿಗೆ [illegible] ವರ್ಣಾಶ್ರಮಾಚಾರ ಸಂಬಂಧವನ್ನು, ಆಮೇಲೆ ಸ್ವಾತ್ಮಸಂಬಂಧವನ್ನು ಹೇಳುವುದು [illegible] ಹಾಗೆಯೇ "ಯೋತೀತ್ಯಸ್ವಾಶ್ರಮಾನ್ ವರ್ಣಾನ್" (ಮಾನವನು ತನ್ನ ವರ್ಣಾಶ್ರಮಗಳನ್ನು ದಾಟಿ) ಎಂಬ ಪದಗಳು [illegible] ತನ್ನ ವರ್ಣಾಶ್ರಮಗಳನ್ನು ದಾಟುವಾಗ ಅವುಗಳ ಸಂಬಂಧಸತ್ವವನ್ನು [illegible] ವರ್ಣಾಶ್ರಮಗಳನ್ನು ದಾಟುವಾಗ ಮನುಷ್ಯನು ಅವುಗಳ [illegible] ತನ್ನ ಶರೀರವು [illegible] ದಾಟುವುದು ಎಂದಿಗೂ ಸಾಧ್ಯವಿಲ್ಲವಷ್ಟೆ? [illegible] ಸಂಬಂಧವಿಲ್ಲದೆ ಹೀಗೆ [illegible] ದಾಟಿ ಹೋಗಬಲ್ಲನೋ? [illegible] ವರ್ಣಾಶ್ರಮಗಳನ್ನು ದಾಟುವುದಕ್ಕೆ [illegible] ವರ್ಣಾಶ್ರಮಗಳ [illegible] ವರ್ಣಾಶ್ರಮಗಳ ಸಂಬಂಧವನ್ನು [illegible]

ಇದೇ ಅಲ್ಲದೆ ಶಿವತತ್ವರತ್ನಾಕರದ ಈ ಹಿಂದೆ [illegible] ಶ್ಲೋಕದಲ್ಲಿ "ಸ್ವಾಶ್ರಮಾನ್ ವರ್ಣಾನ್" (ತನ್ನ ವರ್ಣಾಶ್ರಮಗಳನ್ನು) ಎಂದು [illegible] "ಸ್ವ" (ತನ್ನ) ಎಂಬ ಪದವನ್ನು [illegible] ವರ್ಣಾಶ್ರಮಿಯೆಂದು [illegible] ವರ್ಣಾಶ್ರಮಗಳಿಂದ [illegible] ಹಾಗೆ ಎಂದು [illegible] ವರ್ಣಾಶ್ರಮವನ್ನು [illegible] "ಸ್ವಾಶ್ರಮಾನ್ ವರ್ಣಾನ್" (ತನ್ನ ವರ್ಣಾಶ್ರಮಗಳನ್ನು) [illegible] ಕಾರಣವೇ ಇಲ್ಲ [illegible] ನಾಲ್ಕು ವರ್ಣಗಳೂ, ನಾಲ್ಕು ಆಶ್ರಮಗಳೂ [illegible] ಅವುಗಳ ಆಚಾರಗಳನ್ನು ಪ್ರತಿಯೊಬ್ಬರೂ ಆಚರಿಸತಕ್ಕದ್ದೆಂಬುದೇ [illegible] ಸಿದ್ಧಾಂತವಾದ ಮಾತು

(ಸಶೇಷ)

ಜಗದಾಚಾರ್ಯರ ಜಯಂತೀ ಮಹೋತ್ಸವ.

ಹಿರೇಹಡಗಲಿ

[illegible] ಹಿರೇಹಡಗಲಿ ಗ್ರಾಮದ ಶ್ರೀ ಪಂಚಾಚಾರ್ಯ ಭಜನಾಸಂಘದವರು ನಿರ್ಣಯಿಸಿದ ಪ್ರಕಾರ ಶ್ರೀ ಜಗದ್ಗುರು [illegible] ಶ್ರೀ ಜಗದ್ಗುರು [illegible] ಪ್ರಯುಕ್ತ ಶ್ರೀ [illegible] ಅಧ್ಯಕ್ಷತೆಯಲ್ಲಿ [illegible] ಶ್ರೀಯುತ [illegible] ಜಗದ್ಗುರುಗಳವರ ಸನ್ನಿಧಿಯಲ್ಲಿಯೇ [illegible] ಜಗದಾಚಾರ್ಯರ ಲಿಂಗಪೂಜಾದಿಗಳ [illegible] ಭಜನಾಸಂಘದ ಸದಸ್ಯ ಭಕ್ತಮಹಾಶಯರು [illegible] ಭಕ್ತಿಯಿಂದ ಭಜನೆಯನ್ನು ಮಾಡಿ ಕೀರ್ತಿ ಪ್ರಸಾದಗಳನ್ನು [illegible] ಗ್ರಾಮಕ್ಕೆ ಹೋದರು. [illegible] ದಿವಸ ಜಗದ್ಗುರು ದಾರು ಕಾಚಾರ್ಯರ ಜಯಂತಿಯು ಹಿರೇಹಡಗಲಿ ಪಂಚಾಚಾರ್ಯ ಭಜನ ಸಂಘದ [illegible] ಪಂಚಲೋಹದ ಲಿಂಗೋದ್ಭವ ಮೂರ್ತಿಗೆ [illegible] ಪಂಚಕಲಶಗಳಿಂದ ಅಲಂಕರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಮೂರ್ತಿಗಳನ್ನಿರಿಸಿ [illegible] ತಳಿರುತೋರಣಗಳಿಂದಲಂಕರಿಸಲ್ಪಟ್ಟ ಗ್ರಾಮಬೀದಿಗಳಲ್ಲಿ ಅನೇಕ ವಾದ್ಯವೈಭವಗಳಿಂದಲೂ ತರುಣಸಂಘದ [illegible] ಜಗದಾಚಾರ್ಯರ ಜಯಜಯಕಾರಗಳಿಂದಲೂ ಮಹೋತ್ಸವವು ವಿಶೇಷ ಜನಸಮುದಾಯದೊಡನೆ ಉತ್ಸವವು ನೆರವೇರಿ [illegible] ಮಂದಿರಕ್ಕೆ ತಲ್ಪಿ ಅಲ್ಲಿ ಜಯಂತಿಯಾಚರಣೆಯಾಗಿ

ಭೋಂಗಣಸಮಾರಾಧನೆಯು ಜರುಗಿಸಲ್ಪಟ್ಟಿತು. ಈ ಜಯಂತ್ಯುತ್ಸವದಲ್ಲಿ ಈ ಸಂಘದ ತರುಣರು ಅತ್ಯಂತ ಭಕ್ತಿಯಿಂದ ಮಾಡಿದ ಸೇವೆಯು ಶ್ಲಾಘನೀಯವಾಗಿದೆ. ಕಾರ್ಯನಿರ್ವಾಹಕ ಮುಖಂಡರಾದ ಶ್ರೀ [illegible] ಮಠದ [illegible] ಸೊಪ್ಪಿನವರು, [illegible] ಶಿವರುದ್ರಗೌಡರ [illegible] ಬಸವನಗೌಡರು, [illegible] ಅವರು [illegible] ಕೊಟ್ರಪ್ಪನವರು, [illegible] ಕೊಟ್ರಬಸಪ್ಪನವರು, [illegible] ಕೊಟ್ರಪ್ಪನವರು, [illegible] ಹಾಲಪ್ಪನವರು ಮುಂತಾದವರು ಅತ್ಯುತ್ಸಾಹದಿಂದ ಕೆಲಸಮಾಡಿದರು.

[illegible] ಗುರುಭಕ್ತ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಪಾಲಕ್ಸ್ವಾಮಿ ಜಾತ್ರೆಯು

ಸಂಕಲದು

[illegible] ಮೈಸೂರು [illegible] ಬಸವಪಟ್ಟಣ ಗ್ರಾಮದ [illegible] ಶ್ರೀ ಜಗದ್ಗುರು [illegible] ಪ್ರತಿಬಿಂಬ [illegible] ಶ್ರೀ [illegible] ದಿನದ [illegible] ಈ [illegible] ಮಾಡಿ [illegible] ಮೊದಲಾದ [illegible] [illegible] ಶ್ರೀ ಜಗದ್ಗುರು [illegible] ಮಾಡಿಸಿದ [illegible] ಗ್ರಾಮದಲ್ಲಿ [illegible] ಕೊಟ್ಟೂರು, ಅಪ್ಪಳ್ಳಿ, ಬಳ್ಳಿ, [illegible] ಗ್ರಾಮಗಳಲ್ಲಿ ತಮ್ಮ [illegible] ಶ್ರೀ ಗುರುದರ್ಶನವೆಂಬ [illegible] ಶ್ರೀ [illegible] ಶ್ರೀ ಗುರುಗಳ [illegible] ಫಲಪ್ರಾಪ್ತಿಯಾಗಲು ಕೇಳಿ ವಿನಂತಿಸಿದರು.

ಸಂಕಲದು ಗ್ರಾಮದ [illegible] ಹಿರೇಮಠದ [illegible] ಪಾಟೀಲ, [illegible] ಬಸಪ್ಪ [illegible] ಹೊಸಗೌಡ್ರ [illegible] ಪಟೇಲರು [illegible] ಶಿವಪ್ಪ [illegible] ಮಹದೇವಪ್ಪನವರು [illegible] ಕುಲಕರ್ಣಿ, ಚಂದ್ರಪ್ಪನವರು [illegible] ಶಿವಲಿಂಗಪ್ಪನವರು [illegible] ಪಾಟೀಲ, [illegible] ಕುಲಕರ್ಣಿ ಮಲ್ಲಪ್ಪ [illegible] ಶಿವಲಿಂಗಪ್ಪ ಕಂಪ್ಲೂರ, ಬಳ್ಳಾರಿ [illegible] ಗ್ರಾಮದ [illegible] ಹಿರೇಮಠದ, ಮಹಾದೇವಪ್ಪ [illegible] ಪಾಟೀಲ [illegible] ಪಕ್ಕೀರಪ್ಪ [illegible] ಹನುಮಪ್ಪ [illegible] ಬಸ್ಸಿ [illegible] ಮಹದೇವಪ್ಪ [illegible] ಕುಲಕರ್ಣಿ, [illegible] ಪಾಟೀಲರು, ಪರಶಪ್ಪ ಕುಲಕರ್ಣಿ, [illegible] ಈ ಗ್ರಾಮಗಳ ಭಕ್ತರು [illegible] ಜಾತ್ರೆ [illegible] ಶ್ರೀಗಳ [illegible] ಶ್ರೀ ಗುರುಗಳು [illegible] ಭೂಮಿ, ಧನ, ಧಾನ್ಯ [illegible] ಈ ನಡುವೆ [illegible] ಶ್ರೀಗಳನ್ನೂ, ಹಾಗೂ ಹಿರೇಹಡಗಲಿ ಗ್ರಾಮದ [illegible] ಶಿವರುದ್ರಗೌಡರು, [illegible] ಸಿಂಗಪ್ಪ, [illegible] ಮಲ್ಲಪ್ಪ, [illegible] ಶಿವಪ್ಪ, [illegible] ಹಾಲಪ್ಪ ಮುಂತಾದವರನ್ನು [illegible] ಜಾತ್ರೆಯನ್ನು ಪೂರೈಸಿದರು. ಚೈತ್ರ ಬ|| ೨ ದಿವಸ [illegible] ಶ್ರೀಗಳವರ [illegible]

ಗೊಂಡ ವನ್ನು, ಬ|| ೩ ದಿವಸ ರಥೋತ್ಸವ, ಬ|| ೪ ದಿವಸ [illegible] ಬ|| ೫ ದಿವಸ [illegible] ಈ ಉತ್ಸವಕ್ಕೆ ಬಂದ ೬೧೦ [illegible] ಶ್ರೀ ಮಠದ [illegible] ಅನ್ನೋದಕಗಳು ಕೊಡಲ್ಪಟ್ಟವು. ಶ್ರೀಗಳ ಅಧ್ಯಕ್ಷತೆಯಲ್ಲಿ [illegible] ಸಭೆಯು ನಡೆಯಿತು [illegible] ಶಿವರುದ್ರಗೌಡರು [illegible] ಭಾಷಣಮಾಡಿದರು. [illegible] ಧರ್ಮಜಾಗೃತಿ [illegible] ಸಂಘಟಿಸಿದರು [illegible] ತಮ್ಮ ಸಂಗೀತ [illegible] ಶಿವಕೀರ್ತನವನ್ನು [illegible] ಈ ಮಹೋತ್ಸವಕ್ಕಾಗಿ [illegible] ಶ್ರೀ ಪಾಲಕ್ಸ್ವಾಮಿ [illegible]

ಗುರುಕಾರ್ಯಕಾರಿ

ವಿವಾಹಮಹೋತ್ಸವವು..

[illegible]

[illegible] ದಿವಸ [illegible] ಶ್ರೀ ಕಾರೇಹಳ್ಳಿ [illegible] ಅಧ್ಯಕ್ಷತೆಯಲ್ಲಿ [illegible] ಶ್ರೀ [illegible] ವಿವಾಹ ಮಹೋತ್ಸವವನ್ನು [illegible] ಶ್ರೀ [illegible] ಅನೇಕ [illegible] ಭಕ್ತಿ [illegible] ಅನೇಕ [illegible] ಅನೇಕ ಅಧಿಕಾರಿಗಳೂ [illegible] ವಿವಾಹ [illegible] ಶ್ರೀ [illegible] ಈ ನೂತನ ದಂಪತಿಗಳು [illegible] ಗುರುಭಕ್ತರಾದ ಶ್ರೀ ಕೆಂಪಣ್ಣನವರಿಗೆ [illegible] ವಿವಾಹಮಹೋತ್ಸವವು [illegible] ವಿಶೇಷವಾಗಿ ನಡೆಯಿತ್ತಲ್ಲದೆ [illegible] ಶ್ರೀಯುತ ಕೆಂಪಣ್ಣನವರು [illegible] ಗುರುಭಕ್ತರೂ [illegible] ವಿವಾಹ [illegible] ಅನೇಕ [illegible] ಸ್ವಾಗತ [illegible] ಅನೇಕ ಮಠದ [illegible] ಶಿವದೀಕ್ಷಾ [illegible] ಭೂರಿಭೋಜನ [illegible] ಕೆಂಪಣ್ಣನವರು [illegible] ಶ್ರೀ ರೇಣುಕ [illegible] ಭಕ್ತಿಯುಕ್ತ [illegible] "ಯಾದೃಶೀ ಭಾವನಾ ಯಸ್ಯ ಸಿದ್ಧಿರ್ಭವತಿ ತಾದೃಶೀ" ಎಂಬುವಂತೆ [illegible] ರೇಣುಕರು ಈ ಮಹಾಶಯರಿಗೆ [illegible] ನೂತನ ವಧೂವರರಿಗೆ ದೀರ್ಘಾಯುಶ್ಶ್ರೇಯೋಭಿವೃದ್ಧಿಗಳನ್ನೀಯಲೆಂದು ಕೋರುವ,

[illegible]

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ಪ್ರಕಾಶ ಶು|| ಪಂಚಮಿಗೆ ಒಂಭತ್ತು ವರ್ಷಗಳು ತುಂಬಿ ಹತ್ತನೆಯ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತೆ ಆಶೀರ್ವಾದಸಹಿತ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೬ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರು ಪ್ರಾಂತ ಕೂಡಲೆ ೨ ರೂ. ೪ ಆಣೆಗಳನ್ನು ಮನಿಯಾರ್ಡರ್ ಮೂಲಕ ಕಳುಹಬೇಕು. ವಿ. ಪಿ. ಮಾಡಿದರೆ ೨ ರೂ. ೧೦ ಆಣೆ ಬೀಳುವುದು. ಯಾವ ಗ್ರಾಮದಲ್ಲಿ ಹೆಚ್ಚಿನ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಒಬ್ಬರಾದರೂ ಚಂದಾದಾರರ ಹಣವನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಸಾರಿ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ದಯವಿಟ್ಟು ಮರೆಯದೆ ತಿಳುಹಿಸಬೇಕು. [illegible] ತೊಂದರೆಯಾಗುವುದು.

ಸಂ—

ಪಂಚಾಚಾರ್ಯ ಪ್ರಭಾ.

೧೯೩೬ ನೆಯ ಮೇ ತಾ|| ೧೮ ನೆಯ ಸೋಮವಾರ

ಇಟಲಿ-ಅಬಿಸೀನಿಯಾ ಸಮಸ್ಯೆ!

ಇಟಲಿಯವರು ಅಬಿಸೀನಿಯಾದೇಶವನ್ನು ಅಧರ್ಮಯುದ್ಧದಿಂದ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿರುವ ವಿಷಯವು ಇಡೀ ಜಗತ್ತಿಗೆಲ್ಲಾ ತಿಳಿದುಹೋಗಿರುವುದಷ್ಟೆ! ಇಟಲಿಯವರು ಮಾನವನ್ನುಳಿದವಕ್ಕೆ ಸಲ್ಲದ ವಿಷವಾಯು ಪ್ರಯೋಗಾದಿಗಳಿಂದ ಅಸಂಖ್ಯ ಜನರನ್ನು ಮೃತ್ಯುವಿನ ಬಾಯಿಗೆ ತುತ್ತಾಗಿಮಾಡಿ ಆ ಪರಮದ್ರೋಹವನ್ನು ತಮ್ಮ ಹಣೆಯಲ್ಲಿ ಕಟ್ಟಿಕೊಂಡರೆಂಬುದು ಚಿಕ್ಕಮಕ್ಕಳಿಗೂ ಗೊತ್ತಿದೆ. ಅಬಿಸೀನಿಯಾದೇಶದವರು ಅನಾಗರಿಕರು. ಅವರಲ್ಲಿ ನಾಗರಿಕತೆಯನ್ನುವುದೇ ಕಾಣುವುದಿಲ್ಲ. ಆದರೂ ಮಹಾಶೂರರು. ಇಟಲಿಯವರು ಇತರರೊಡನೆ ಯುದ್ಧವನ್ನು ಮಾಡಿದ್ದರೆ ಆಗ ಅವರ ಸಾಮರ್ಥ್ಯವು ಗೊತ್ತಾಗುತ್ತಿತ್ತು. ಈ ರೀತಿಯಾಗಿ ವಿಮಾನಗಳಿಂದ ಬಾಂಬುಗಳನ್ನು ಸುರಿಸುವುದು, ವಿಷವಾಯುವನ್ನು ಪ್ರಯೋಗಿಸುವುದು ಇತ್ಯಾದಿ ರಾಕ್ಷಸಕೃತಿಗಳನ್ನೆಸಗಿ ಇಟಲಿಯವರು ಸಮಸ್ತ ಪ್ರಪಂಚದವರ ಅವಹೇಳನೆಗೆ ಪಾತ್ರರಾಗಿ ಹೋಗಿರುವರು. ಇಟಲಿಯವರ ಈ ರಾಕ್ಷಸೀಕೃತಿಯನ್ನು ಎಲ್ಲಾ ರಾಷ್ಟ್ರಗಳವರೂ ಖಂಡಿಸುತ್ತಿರುವರು. ಹೀಗಿದ್ದರೂ ಇಟಲಿಯ ಸರ್ವಾಧಿಕಾರಿಯಾದ ಮುಸಲೋನಿಯು ತಲೆಬಾಗದೆ ತನ್ನ ದರ್ಪವನ್ನೇ ಮುಂದುವರಿಸುತ್ತಿರುವುದು ಆಶ್ಚರ್ಯಕರವಾಗಿದೆ. ಮುಸಲೋನಿಯು ಅಬಿಸೀನಿಯಾದೇಶವನ್ನು ಇಟಲಿಯ ಚಕ್ರವರ್ತಿಗಳಿಗೊಪ್ಪಿಸಿ ಆ ದೇಶಕ್ಕೆ ತನ್ನ ದೇಶದ ಸೈನ್ಯಾಧಿಕಾರಿಯನ್ನೇ ವೈಸರಾಯನನ್ನಾಗಿ ಮಾಡಿರುವನೆಂದು ಸಾರಿರುವನು. ಇತ್ತ ಅಬಿಸೀನಿಯಾದೇಶದ ಚಕ್ರವರ್ತಿಗಳಾದ ರಾಸ್‌ತಫಾರಿಯವರು ಇಟಲಿಯವರಿಂದ ತಮ್ಮ ಪ್ರಜೆಗಳಿಗೆ ಅಪಾರವಾದ ಮರಣವು ಸಂಭವಿಸುತ್ತಿರುವುದನ್ನು **ನೋಡಿ ತಾನೇ ರಾಜ್ಯವನ್ನು ತ್ಯಜಿಸಿ ಅನ್ಯರಾಜ್ಯದಲ್ಲಿ ವಾಸವಾಗಿರುವರು. ಚಕ್ರವರ್ತಿಗಳು ಅನ್ಯರಾಜ್ಯದಲ್ಲಿ ವಾಸವಾಗಿದ್ದುಕೊಂಡು ಲೀಗಿಗೆ ಇಟಲಿಯವರ ಕ್ರೂರಕೃತಿಗಳನ್ನೂ ಅವರ ಉನ್ಮತ್ತತೆಯನ್ನೂ ಅರಿಕೆಮಾಡಿಕೊಂಡು ನಮ್ಮ ರಾಜ್ಯವನ್ನು ನಮಗೆ ತಿರುಗಿ ಕೊಡಿಸಬೇಕೆಂದು ಬೇಡಿಕೊಂಡಿರುವರು. ಮೊನ್ನೆ ಲೀಗ್ ಸಭೆಯು ಸೇರಿದಾಗ ಅಬಿಸೀನಿಯಾ ರಾಯಭಾರಿಗಳು ಇಟಲಿಯ ವರ್ತನೆಯನ್ನು ವಿಶೇಷವಾಗಿ ಖಂಡಿಸಿದರು. ಆಗ್ಗೆ ಇಟಲಿಯ ರಾಯಭಾರಿಗಳೂ ಇನ್ನು ಮುಂದೆ** ಅಬಿಸೀನಿಯಾದೇಶದಪರವಾಗಿ ಮೊದಲಿನವರನ್ನು ರಾಯಭಾರಿಗನ್ನಾಗಿ ಮನ್ನಿಸಕೂಡದೆಂದು ಲೀಗಿಗೆ ತಿಳುಹಿಸಿದರು. ಅದಕ್ಕೆ ಲೀಗಿನವರು ಒಪ್ಪದಿದ್ದುದರಿಂದ ಇಟಲಿಯ ರಾಯಭಾರಿಗಳು ಸಿಟ್ಟಿನಿಂದ ಆ ಸಭೆಯನ್ನು ಬಿಟ್ಟುಹೋದರೂ ಲೀಗಿನವರು ಅದಕ್ಕೆ ಗಮನಕೊಡದೆ ತಮ್ಮ ಕಾರ್ಯಕ್ರಮಗಳನ್ನು ಮುಂದುವರಿಸಿದರು. ಲೀಗಿನವರಿಗೂ ಕೂಡ ಈ ಯುದ್ಧದ ದುಷ್ಟಯೋಚನೆಯು ಬಂದು ಕುಳಿತಿದೆ. ಪ್ರಪಂಚದಲ್ಲಿ ಯಾವಾಗಲೂ ಯುದ್ಧವಾಗಬಾರದೆನ್ನುವುದೇ ಲೀಗಿನ ಮುಖ್ಯತತ್ವವಾಗಿದೆ. ಈ ತತ್ವವನ್ನು ಕಾಪಾಡಿಕೊಂಡು ಇಟಲಿಯನ್ನು ದಾರಿಗೆತರುವುದು ಲೀಗಿನ ಬುದ್ಧಿಗೆ ತೋಚದಾಗಿದೆ. ಆದುದರಿಂದ ಈ ವಿಷಯವನ್ನು ದೀರ್ಘವಾಗಿ ಯೋಚಿಸುವುದಕ್ಕೋಸ್ಕರ ಜೂನ್ ೧೫ನೆಯ ತಾರೀಖಿನ ದಿವಸ ಪುನಃ ಸಭೆಯು ಕೂಡುವುದಾಗಿದೆ. ಆಗ್ಗೆ ಏನಾಗುವುದೋ ಎನ್ನುವುದನ್ನು ಸರ್ವರೂ ಕುತೂಹಲದಿಂದ ನೋಡುವವರಾಗಿದ್ದಾರೆ. ಇಟಲಿ ಸರ್ವಾಧಿಕಾರಿಯ ದರ್ಪದ ಮಾತುಗಳನ್ನು ಕೇಳಿ ಎಲ್ಲಾ ರಾಷ್ಟ್ರಗಳವರಿಗೂ ಕೋಪವು ಬಂದಿದೆ. ಇಟಲಿಯ ಮೇಲೆ ಈ ಮೊದಲು ಹಾಕಿದ್ದ ನಿರ್ಬಂಧಗಳನ್ನು ಇನ್ನೂ ಯಾವರಾಜ್ಯದವರೂ ತೆಗೆದಿರುವುದಿಲ್ಲ. ಆ ನಿರ್ಬಂಧಗಳು ಜೂನ್ ೧೫ ನೆಯ ತಾರೀಖಿನವರೆಗೆ ಜಾರಿಯಲ್ಲಿಯೇ ಇರಬೇಕೆಂದು ಲೀಗಿನಲ್ಲಿ ನಿರ್ಣಯವಾಯಿತು. ಯುರೋಪ್ ಖಂಡದ ಈಗಿನ ವಾತಾವರಣವನ್ನು ನೋಡಿದರೆ ಪುನಃ ಘೋರವಾದ ಯುದ್ಧವು ಎಲ್ಲಿ ಪ್ರಾರಂಭವಾಗುವುದೋ ಎನ್ನುವಂತೆ ಭಾಸವಾಗುತ್ತದೆ. ಬ್ರಿಟಿಷ್ ಮುಖ್ಯಮಂತ್ರಿಗಳು ಮೊನ್ನೆ ನಡೆದ ಒಂದಾನೊಂದು ಸಭೆಯಲ್ಲಿ, ಇಟಲಿಯಮೇಲೆ ಮಿಲಿಟರಿ ಸ್ಯಾಂಕ್ಷನ್ನುಗಳನ್ನು ಹಾಕಬೇಕಾಗುವ ಸಂಭವವು ಪ್ರಾಪ್ತವಾಗುವುದೇನೋ ಎಂದು ನುಡಿದಿದ್ದಾರೆ. ಒಟ್ಟಿಗೆ ಇಟಲಿ ಅಬಿಸೀನಿಯಾ ಸಮಸ್ಯೆಯು ಎಂದಿಗೆ ಪೂರ್ತಿಯಾಗಿ ಜಗತ್ತಿನಲ್ಲಿ ಸುಖಶಾಂತಿಗಳು ನೆಲೆಗೊಳ್ಳುವುವೋ ಯಾರಿಗೂ ತಿಳಿಯದಾಗಿದೆ. ಜಗದೀಶ್ವರನ ಕೃಪೆಯಿಂದ ಈ ಸಮಸ್ಯೆಯು ಶೀಘ್ರವಾಗಿ ಸಮಾಪ್ತಿಗೊಂಡು ಪ್ರಜೆಗಳಿಗೆ ಸೌಖ್ಯವು ಪ್ರಾಪ್ತವಾಗಲೆಂದು ಸರ್ವರೂ ಜಗದೀಶ್ವರನನ್ನು ಪ್ರಾರ್ಥಿಸುತ್ತಿರುವರು.

ವರ್ತಮಾನಸಂಗ್ರಹ.

ಡಾಕ್ಟರ್. ಅನ್ಸಾರಿಯವರ ಮರಣ '

ಸುಪ್ರಸಿದ್ಧ ಕಾಂಗ್ರೆಸ್ ಭಕ್ತರಾಗಿದ್ದ ಡಾಕ್ಟರ್ ಅನ್ಸಾರಿಯವರು ಮುಸ್ಸೂರಿಯಿಂದ ದಿಲ್ಲಿಗೆ ಬರುತ್ತಿರುವಾಗ ರೈಲ್ವೆಯಲ್ಲಿಯೇ ಮರಣಹೊಂದಿದರು. ಮರಣವು ಹೃದಯವಿಕಾರದಿಂದ ಸಂಭವಿಸಿತೆಂದು ಹೇಳಲಾಗಿದೆ. ಜಗದೀಶನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ಸಿಡುಬುಹಾಕುವ ಹೊಸ ವಿಧಾನ

ರಾಕ್ ಫೆಲರ್ ಔಷಧ ಶೋಧನಾಲಯದ ಡಾ|| ಥಾಮಸ್ ಎಂ ರಿವರ್ಸ್ ಎಂಬವರು ಹೊಸಮಾದರಿಯ ಸಿಡುಬು ಹಾಕುವ ವಿಧಾನವನ್ನು ಕಂಡುಹಿಡಿದಿರುತ್ತಾರೆ. ಈ ರೀತಿ ಸಿಡುಬುಹಾಕುವುದರಿಂದ ಈಗಿನಂತೆ ವಾಸಿಯಾದ ಮೇಲೆ ಕಲೆಯು ನಿಲ್ಲುವುದಿಲ್ಲವಂತೆ! ಇಪ್ಪತ್ತೊಂಬತ್ತು ಮಕ್ಕಳಿಗೆ ಈ ರೀತಿ ಹಾಕಿ ಪರೀಕ್ಷಿಸಿದ್ದರಲ್ಲಿ ಒಂದಕ್ಕಾದರೂ ಹುಣ್ಣಾಗಲಿ ಕಲೆಯಾಗಲಿ ಆಗಲಿಲ್ಲವಂತೆ!

ಮಾರ್ಕ್ವೆಸ್ ಪದವೀದಾನ.

ಭರತಖಂಡದ ವೈಸ್ರಾಯರಾಗಿದ್ದು ನಿವೃತ್ತರಾದ ಲಾರ್ಡ್ ವಿಲಿಂಗ್ಡನ್‌ರವರಿಗೆ ಸಾರ್ವಭೌಮರು 'ಮಾರ್ಕ್ವೆಸ್" ಎಂಬ ಪದವಿಯನ್ನು ದಯಪಾಲಿಸಿದರು. ಆ ದಿವಸ ವಿಲಿಂಗ್ಡನ್ ದಂಪತಿಗಳು ಸಾರ್ವಭೌಮರೊಡನೆಯೂ ಮೇರಿ ರಾಣಿಯವರೊಡನೆಯೂ ಉಪಹಾರವನ್ನು ತೆಗೆದುಕೊಂಡರು. ಇಂಗ್ಲೆಂಡಿನ ಶ್ರೀಮಂತರಲ್ಲಿ ಪ್ರಥಮ ಶ್ರೇಣಿಯವರು "ಡ್ಯೂಕ್" ಎಂದೂ, ದ್ವಿತೀಯ ಶ್ರೇಣಿಯವರು "ಮಾರ್ಕ್ವೆಸ್" ಎಂದೂ ತೃತೀಯ ಶ್ರೇಣಿಯವರು "ಅರ್ಲ್" ಎಂದೂ ಚತುರ್ಥ ಶ್ರೇಣಿಯವರು ಬ್ಯಾರನ್ ಎಂದೂ ಕರೆಯಲ್ಪಡುತ್ತಾರೆ.

ಬೆಂಕಿಯ ಅನಾಹುತ.

ಬೊಂಬಾಯಿ ಕೋಟೆ ಪ್ರದೇಶದಲ್ಲಿರುವ ಭಾರಿ ಸ್ಟೇಷನರಿ ಸಾಮಾನುಗಳ ಅಂಗಡಿಗೆ ಬೆಂಕಿಬಿದ್ದು ಅಪಾರ ನಷ್ಟವಾಗಿದೆ. ಈಚೆಗೆ ಬೊಂಬಾಯಿಯಲ್ಲಿ ಇಷ್ಟು ಭಾರಿ ಬೆಂಕಿಯ ಅನಾಹುತವಾಗಿದ್ದೇ ಇಲ್ಲ. 4 ಅಂತಸ್ತಿನ ಈ ಕಟ್ಟಡದ ಮೇಲಿನ ಅಂತಸ್ತಿಗೆ ರಾತ್ರಿ ಸುಮಾರು 7-30 ಕ್ಕೆ ಬೆಂಕಿಬಿದ್ದು ಅರ್ಧರಾತ್ರಿಯವರೆಗೂ ಜ್ವಾಲಾಮುಖಿಯಂತೆ ಉರಿಯುತ್ತಿತ್ತು. ಬೊಂಬಾಯಿಯ ಬೆಂಕಿ ಆರಿಸುವ ಯಂತ್ರಗಳೆಲ್ಲವೂ ಅಲ್ಲಿ ಕೂಡಿ ಕೈಲಾದ ಪ್ರಯತ್ನವನ್ನೆಲ್ಲಾ ನಡೆಯಿಸಿ ಮಧ್ಯರಾತ್ರಿ ವೇಳೆಗೆ ಉರಿಯನ್ನು ಶಾಂತಿಗೆ ತಂದವು. ಈ ಕಟ್ಟಡಕ್ಕೆ ಬಿದ್ದ ಬೆಂಕಿಯು ಪಕ್ಕದ ಕಟ್ಟಡಗಳಿಗೆ ವ್ಯಾಪಿಸಿ ನಾಲ್ಕು ಮಹಡಿಮನೆಗಳು ಭಸ್ಮವಾಗಿವೆ. ಸುಮಾರು 25 ಲಕ್ಷ ರೂ.ಗಳಿಗೆ ಮೇಲ್ಪಟ್ಟು ಬೆಲೆಬಾಳುವ ಪದಾರ್ಥಗಳು ನಾಶವಾಗಿವೆಯೆಂದು ಪ್ರಕಟವಾಗಿದೆ. ಈ ಬೆಂಕಿಗೆ ಕಾರಣವಿನ್ನೂ ತಿಳಿದಿಲ್ಲ. ಮುಖ್ಯ ಕಾಗದಪತ್ರಗಳೂ ಹಣಕಾಸುಗಳಿದ್ದ ಕಬ್ಬಿಣದ ಪೆಟ್ಟಿಗೆಗಳೂ ಕುಸಿದುಬಿದ್ದಿರುವ ಮಣ್ಣಿನಲ್ಲಿ ಹೂತುಹೋಗಿವೆ.

ಹೊರಗಿನ ಸಹಾಯವಿಲ್ಲದೆ ಜರ್ಮನಿಯು ಬದುಕಬಲ್ಲದು!

ಕಲ್ಲಿದ್ದಲಿನಿಂದ ಎಣ್ಣೆ ತೆಗೆಯಲು ಕಂಡುಹಿಡಿದು ನೋಬೆಲ್ ಬಹುಮಾನವನ್ನು ಸಂಪಾದಿಸಿದ ಜರ್ಮನ್ ಡಾಕ್ಟರ್ ಬರ್ಗಿಯಸ್ ಎಂಬವರು ಈಗ ಮರದಿಂದ ಮನುಷ್ಯನಿಗೆ ಬೇಕಾದ ಪ್ರತಿ ಪದಾರ್ಥವನ್ನೂ ತಯಾರು ಮಾಡಬಹುದೆಂದು ಅದನ್ನು ಕಂಡುಹಿಡಿಯಲು ಪ್ರಯತ್ನಪಡುತ್ತಿದ್ದಾರೆ. ಉಪಯೋಗವಿಲ್ಲವೆಂದು ಬಿಸಾಡುವ ಮರದ ಪದಾರ್ಥಗಳಿಂದ ರಸಾಯನಶಾಸ್ತ್ರರೀತ್ಯಾ ಮನುಷ್ಯರೂ, ಪ್ರಾಣಿಗಳೂ ಉಪಯೋಗಿಸುವ ಆಹಾರವನ್ನೂ, ಯುದ್ಧಕಾಲದಲ್ಲಿ ಉಪಯೋಗಿಸುವ ಸ್ಫೋಟವಸ್ತುಗಳನ್ನೂ ನಿರ್ಮಾಣಮಾಡಬಹುದಂತೆ! ಜರ್ಮನಿಯ ಜನರಿಗೆ ಬೇಕಾಗುವ ಸಕಲ ಸಾಮಗ್ರಿಗಳನ್ನೂ ಮರದಿಂದ ನಿರ್ಮಿಸುವುದರಿಂದ ಒಂದುವೇಳೆ ಯುದ್ಧವು ಸಂಭವಿಸುವುದಾದರೆ ಜರ್ಮನಿಯು ಯಾವ ಪದಾರ್ಥಕ್ಕೂ ಇತರರ ಸಹಾಯವನ್ನು ಪ್ರಾರ್ಥಿಸಬೇಕಾಗಿಲ್ಲವೆಂದು ಡಾ|| ಬರ್ಗಿಯಸ್‌ರವರು ತಿಳುಹಿಸಿದ್ದಾರೆ.

ದ್ವಿತೀಯ ವಿವಾಹಕ್ಕಾಗಿ ಗಂಡಹೆಂಡಂದಿರ ವಿಚಿತ್ರ ಮರಣ '

ಈಗ್ಗೆ 15-20 ದಿವಸಗಳ ಹಿಂದೆ ಬೊಂಬಾಯಿಯ ಸಬ್-ಇನ್ಸ್‌ಪೆಕ್ಟರ್ ಮಂಗೇಕರ್ ಎಂಬವರ ಪತ್ನಿ ಇಂದಿರಾ ಎಂಬಾಕೆಯು 'ನಾನು ಯಾರಿಗೂ ಪ್ರಯೋಜನವಿಲ್ಲವಾದುದರಿಂದ ನನ್ನನ್ನು ಸೃಷ್ಟಿಸಿದ ಭಗವಂತನ ಪಾದವನ್ನು ಸೇರಿಕೊಳ್ಳುವೆನು" ಎಂದು ಒಂದು ಪತ್ರವನ್ನು ಬರೆದಿಟ್ಟು ಪಿಸ್ತೂಲಿನಿಂದ ಆತ್ಮಹತ್ಯೆಮಾಡಿಕೊಂಡಿದ್ದಳು. ಈ ಆತ್ಮಹತ್ಯೆಗೆ ಮಂಗೇಕರರವರು ಹಿಂದಿನ ದಿನ ಎರಡನೆಯ ಮದುವೆಯನ್ನು ಮಾಡಿಕೊಂಡುದೇ ಕಾರಣವೆಂದು ಯೋಚಿಸಲಾಗಿದೆ. ಕಳೆದ **11** ತಾರೀಖಿನ ದಿವಸ ಮಂಗೇಕರರೂ ಅವರ ದ್ವಿತೀಯ ಪತ್ನಿಯೂ ಸಹ ತಮ್ಮ ಕೊಠಡಿಯಲ್ಲಿ ಆತ್ಮಹತ್ಯೆಮಾಡಿಕೊಂಡಿದ್ದರು. ಮಂಗೇಕರರವರು ಬರೆದಿಟ್ಟಿದ್ದ ಕಾಗದದಲ್ಲಿ 'ನಾನು ನನ್ನ ಮೊದಲನೆಯ ಹೆಂಡತಿ ಇಂದಿರೆಯ ಬಳಿಗೆ ಹೋಗುತ್ತೇನೆ. ನಮ್ಮಿಬ್ಬರ ದೇಹಗಳೂ ಒಂದೇ ಚಿತೆಯ ಮೇಲೆ ದಹನವಾಗಬೇಕೆಂಬುದೇ ನನ್ನ ಕೊನೆಯ ಆಸೆ' ಎಂದಿದ್ದಿತು. ಮಂಗೇಕರರ ದ್ವಿತೀಯ ಪತ್ನಿಯು ಬರೆದಿಟ್ಟಿದ್ದ ಕಾಗದದಲ್ಲಿ 'ನನ್ನ ಗಂಡನನ್ನು ಹಿಂಬಾಲಿಸಿ ನನಗೆ ಸಹೋದರಿಯ ಸಮಾನಳಾದ ಇಂದಿರೆಯ ಬಳಿಗೆ ಹೋಗುತ್ತೇನೆ' ಎಂದಿದ್ದಿತು. ಈ ಕಾಗದಗಳು ಕೋರ್ಟಿನಲ್ಲಿ ಓದಲ್ಪಟ್ಟವು. ಕೇಳಿದವರೆಲ್ಲರೂ ಈ ವಿಷಾದವಾದ ಘಟನೆಗಾಗಿ ವ್ಯಸನಪಟ್ಟರು.

ಅಬ್ಸೀನಿಯವು ಹೇಗೆ ಜಯಿಸಲ್ಪಟ್ಟಿತು ?

ಇಟಲಿಯು ಅಬ್ಸೀನಿಯವನ್ನು ಜಯಿಸಿದೆನೆಂದು ಹೇಳುತ್ತಿದ್ದ ಮುಸ್ಸೋಲಿನಿಯು ಕೈಗೊಂಬೆಯಂತಿರುವ ಇಟಲಿಯ ಅರಸನು ಅಬ್ಸೀನಿಯದ ಚಕ್ರವರ್ತಿಯೆಂದು ಹೆಸರಿಟ್ಟುಕೊಂಡು ತನ್ನ ದೇಶದವರು ಅಬ್ಸೀನಿಯವನ್ನು

ಗೆದ್ದರೆಂದು ಹೇಳುತ್ತಿದ್ದಾನೆ. ಮುಸ್ಸೋಲಿನಿಯ ಆನಂದಕ್ಕೆ ಪಾರವೇ ಇಲ್ಲ. ರೋಮ್ ಪತ್ರಿಕೆಯಲ್ಲಿ ಈ ವರ್ಷವು ಸ್ವರ್ಣಾಕ್ಷರಗಳಿಂದ ಬರೆಯಲ್ಪಡಬೇಕೆಂದೂ ತನ್ನ ದೇಶದ ನಾಗರಿಕರು ಅನಾಗರಿಕರಾದ ಅಬಿಸೀನಿಯರನ್ನು ಸೋಲಿಸಿದರೆಂದೂ ಪ್ರಕಟಿಸಿದ್ದಾನೆ. ಆದರೆ ನಿಶ್ಚಯಾಂಶವನ್ನು ನೋಡಿದರೆ ಇದೆಲ್ಲವೂ ಸುಳ್ಳೆಂದು ಸ್ಪಷ್ಟವಿಷಯಮಾನಗಳನ್ನು ತಿಳಿದವರು ಹೇಳುವರು. ಅಬಿಸೀನಿಯವನ್ನು ಬಾಹುಬಲದಿಂದ ಗೆಲ್ಲಲು ಇನ್ನೊಂದು ವರ್ಷ ಹೆಚ್ಚಿದ್ದರೂ ಇಟಲಿಯವರಿಂದ ಸಾಧ್ಯವಾಗುತ್ತಿರಲಿಲ್ಲ. ಗೆದ್ದವರು ಆಫ್ರಿಕದ ಅಸ್ಕಾರಿ ಸೈನಿಕರು. ಇಟಲಿಯವರು ಗೆದ್ದದ್ದು ರಾಕ್ಷಸ ಉಪಕರಣಗಳಿಂದ ಅನ್ಯಾಯದ ಅಧರ್ಮಯುದ್ಧ ಕೋಟಿಯಿಂದ. ಹಿಂದಿನ ರೋಮಿನ ಚಕ್ರಾಧಿಪತ್ಯದ ಸೈನಿಕರು ಸ್ವಬಾಹುಬಲದಿಂದ ದೇಶವನ್ನು ಗೆದ್ದರು. ಅನ್ಯರ ಬಾಹುಬಲದಿಂದಲ್ಲ, ಧರ್ಮಯುದ್ಧದಿಂದಲ್ಲ.

ದೆಸ್ಸಿಯಿಂದ ಅಡಿಸ್ ಅಬಾಬಾದವರೆಗೂ ಇಟಲಿ ಸೈನ್ಯದ ಸಂಗಡವಿದ್ದ ಇಟಲಿ ಪತ್ರಿಕೋದ್ಯೋಗಿಯ ಹೇಳಿಕೆಯಂತೆ ಇಟಲಿಯವರು ಅಬಿಸೀನಿಯರನ್ನು ಸೋಲಿಸಿದರೆಂದು ಹೇಳುವುದು ಶುದ್ಧ ತಪ್ಪು. ಆ ಸಾಹಸಿಗಳನ್ನು ಬಾಹುಬಲದಿಂದ ಸೋಲಿಸಲು ಇಟಲಿಯವರಿಗೆ ಸಾಧ್ಯವೇ ಇಲ್ಲ. ಪೈಶಾಚಸದೃಶ ವಿಷವಾಯುವಿನಿಂದ ಮಾತ್ರ ಅಬಿಸೀನಿಯರು ಸೋತರೇ ಹೊರತು ಅನ್ಯಥಾ ಇಲ್ಲ.

ಅಡಿಸ್ ಅಬಾಬಕ್ಕೆ 90 ಮೈಲಿ ದೂರದಲ್ಲಿರುವಾಗ ಅನೇಕ ಸಾಹಸಿಗಳಾದ ಅಬಿಸೀನಿಯರು ಶತ್ರುಗಳ ಮೇಲೆ ಬಿದ್ದು, ಅವರನ್ನು ತುಂಡರಿಸುತ್ತಿದ್ದರು. ಆ ಕೂಡಲೆ ವಿಷವಾಯುವು ಪ್ರಯೋಗಿಸಲ್ಪಟ್ಟುದರಿಂದ ಒಬ್ಬರ ಮೇಲೊಬ್ಬರು ಕಲ್ಲುಬೊಂಬೆಗಳಂತೆ ನೆಲಕ್ಕುರುಳಿದರು. ದೃಶ್ಯವು ಬಹುಘೋರವಾಗಿತ್ತು. ಮೃತರ ದೇಹಗಳಿಂದ ಆ ಪ್ರದೇಶವೆಲ್ಲವೂ ಹರಡಲ್ಪಟ್ಟಿತ್ತು. ರಕ್ತದ ಕಲೆಯಿಲ್ಲ, ಶಸ್ತ್ರಾಘಾತವಿಲ್ಲ, ಗುಂಡಿನ ಗುರುತೂ ಇಲ್ಲ. ಎಲ್ಲಿದ್ದವರಲ್ಲಿಯೇ ಅಬಿಸೀನಿಯರೆಲ್ಲರೂ ಮೃತರಾಗಿದ್ದರು. ಸುತ್ತುಮುತ್ತಿನ ಅರಣ್ಯದಲ್ಲಿನ ಮೃಗಪಕ್ಷಿಗಳೂ ಸತ್ತು ಬಿದ್ದಿದ್ದವು. ಕಪಿಗಳು ಮರದ ರೆಂಬೆಗಳನ್ನು ಹಿಡಿದು ತಾಯಿಗಳು ಮರಿಗಳನ್ನು ಅಪ್ಪಿಕೊಂಡು ಹಾಗೆ ಹಾಗೆಯೇ ಸತ್ತುಹೋಗಿದ್ದವು. ನಿಷ್ಕಾರಣವಾಗಿಯೇ ನೊಂದ ಬಡ ಅನೇಕ ಪ್ರಾಣಿಗಳು ಇಟಲಿಯವರ ಅಧರ್ಮ ರಾಜ್ಯತೃಷೆಗೆ ಬಲಿಯಾದವು.

ಇವಲ್ಲದೆ ಯುದ್ಧಮಾಡಿದವರು ಇಟಲಿಯವರಲ್ಲ, ಅಸ್ಕಾರಿಗಳು. ತ್ರಿಪೋಲಿಯಿಂದ ಬಲೋತ್ಕಾರವಾಗಿ ಕರೆತಂದಿದ್ದ ಅರಬ್ಬಿ ಸೈನಿಕರು. ಈ ಅನಾಗರಿಕರನ್ನು ಮೃತ್ಯುವಿನಬಾಯಿಗೆ ತುತ್ತಾಗಿಸಿ ಇಟಲಿಯವರು ಮುಂದರಿದರು. ಕೊನೆಯ ಯುದ್ಧವೊಂದರಲ್ಲಿಯೇ 15000 ಅರಬ್ಬಿಗಳೂ ಅಸ್ಕಾರಿಗಳೂ ಮಡಿದರು. ಉಳಿದ ಎಲ್ಲವನ್ನೂ ಲೆಕ್ಕಹಾಕಿದರೆ ಇಟಲಿಯವರ ಹೆದರಿಕೆಗಾಗಿ ಎಷ್ಟುಸಾವಿರ ಜನರು ಮಡಿದಿರಬಹುದೆನ್ನುವುದನ್ನು ಊಹಿಸಬಹುದಾಗಿದೆ.

ಲೀಗ್‌ಸಭೆಗೆ ಅಬಿಸೀನಿಯಾ ಚಕ್ರವರ್ತಿಗಳ ತಂತಿ

ಅಂತರರಾಷ್ಟ್ರೀಯ 'ಒಪ್ಪಂದಗಳ'ನ್ನೆಲ್ಲಾ ಉಲ್ಲಂಘಿಸಿ ಬಲಾತ್ಕಾರದಿಂದ ಇಟಲಿಯು ಆಕ್ರಮಿಸಿರುವ ಯಾವ ಪ್ರದೇಶದ ಅಧಿಕಾರವನ್ನೇ ಆಗಲಿ ಲೀಗ್ ಸಭೆಯು ಅನುಮೋದಿಸಕೂಡದೆಂದು ಅಬಿಸೀನಿಯಾ ಚಕ್ರವರ್ತಿಗಳು ಲೀಗಿಗೆ ತಂತಿಕೊಟ್ಟಿರುತ್ತಾರೆ. ಈಗಿನ ಕಾಲದಲ್ಲಿ ಬಹಳ ಅನ್ಯಾಯವೂ ಕ್ರೌರ್ಯಯುತವೂ ಆದ ಈ ಯುದ್ಧವನ್ನು ಕೊನೆಗಾಣಿಸಲು ನಿರ್ಧರಿಸಿ ರಾಜ್ಯವನ್ನು ಬಿಟ್ಟು ಅನ್ಯದೇಶೀಯರಲ್ಲಿ ನ್ಯಾಯಭಿಕ್ಷೆಗಾಗಿ ಬಂದಿದ್ದೇನೆಂದೂ, ಅಬಿಸೀನಿಯದ ಸ್ವಾತಂತ್ರ್ಯ ಸಾಧನೆಯಲ್ಲಿ ಶಾಂತಿಯುತವಾಗಿ ನಡೆದುಕೊಳ್ಳುವುದೇ ನನ್ನ ಧ್ಯೇಯವೆಂದೂ, ಇಟಲಿಯು ಅಪವಿತ್ರವನ್ನಾಗಿ ಮಾಡಿರುವ ಅಂತರರಾಷ್ಟ್ರೀಯ ಜವಾಬುದಾರಿಗಳ ಪವಿತ್ರತೆಯನ್ನು ಕಾಪಾಡಲು ನಾನು ಇಲ್ಲಿಗೆ ಬಂದಿದ್ದೇನೆಂದೂ ಚಕ್ರವರ್ತಿ ನೇಗಸ್ಸರು ಲೀಗಿಗೆ ತಿಳಿಸಿರುತ್ತಾರೆ.

ಅಬಿಸೀನಿಯಾ ಪ್ರತಿನಿಧಿಗಳಾದ ವೋಲ್ಡೆ ಮರಿಯಮರು ಇಟಲಿ ಸರ್ಕಾರವು 50 ಜನಾಂಗಗಳನ್ನು ತುಚ್ಛವಾಗಿ ಕಂಡು ಅವರೆಲ್ಲರೂ ತನ್ನ ಬೆದರಿಕೆಗೆ ಸೊಪ್ಪಾಗಬೇಕೆಂದು ನಿರೀಕ್ಷಿಸಿದೆಯೆಂದೂ, ಅದು ಕ್ರೌರ್ಯಕ್ಕೆ ಗುರಿಯಾದವರ ರಕ್ತದಿಂದ ಕೊಬ್ಬಿಹೋಗಿ ಇತರರ ವಿಷಯದಲ್ಲಿ ತುಚ್ಛವಾಗಿ ವರ್ತಿಸುತ್ತದೆಂದೂ, ತಾನು ಮಾಡಿರುವ ನೀಚಕಾರ್ಯಗಳನ್ನು ಯೂರೋಪು ಅನುಮೋದಿಸುವುದಾದರೆ ತಾನು ಅವುಗಳ ಸಂಗಡ ಸಹಕರಿಸಲು ಸಿದ್ಧವಾಗಿರುವುದಾಗಿ ನಾಚಿಗೇಡಾದ ಮಾರ್ಗವನ್ನು ಸೂಚಿಸಿದೆಯೆಂದೂ, ಇಟಲಿಯ ಅತ್ಯಾಚಾರಕ್ಕೆ ಗುರಿಯಾಗಿರುವ ಲೀಗೂ ಸಹ ಅದರ ದೌಷ್ಟ್ಯಕ್ಕೆ ತಲೆಬಾಗುವುದೇ? ಎಂದೂ, ಲೀಗಿಗೆ ಪತ್ರವನ್ನು ಬರೆದು ಅದನ್ನು ಸಕ್ರೆಟರಿಯವರ ವಶಕ್ಕೆ ಒಪ್ಪಿಸಿರುವರು.

ಮೈಸೂರು ಪ್ರಜಾಪ್ರತಿನಿಧಿಸಭೆಯ ಅಧಿವೇಶನವು ಜೂನ್ 2 ನೆಯ ತಾರೀಖಿನ ದಿವಸ ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಪ್ರಾರಂಭವಾಗುವುದೆಂದು ಪ್ರಕಟವಾಗಿದೆ.

ಈ ತಿಂಗಳು 31 ನೆಯ ತಾರೀಖಿನ ದಿವಸ ನಡೆಯುವ ನಮ್ಮ ಶ್ರೀಮನ್ಮಹಾರಾಜರವರ ವರ್ಧಂತೀ ಮಹೋತ್ಸವದಲ್ಲಿ ಭಾಗಿಗಳಾಗಲು, ಪೈರಪುರದ ನವಾಬರು, ಸರ್ ವಿ ಟಿ ಕೃಷ್ಣಮಾಚಾರ್ಯರು, ಮೈಸೂರು ಸಂಸ್ಥಾನದ ರೆಸಿಡೆಂಟರು ಮತ್ತು ಮೇಜರ್ ಜನರಲ್ ಇಸ್ಪೋರ್ಟೆಸ್ ಜೆ ಒ ಸಿ ಕಾ-ಚೇಸ್‌ರವರು ಅತಿಥಿಗಳಾಗಿ ಆಹ್ವಾನಿತರಾಗಿರುವರೆಂದು ತಿಳಿದುಬರುತ್ತದೆ.

ಶ್ರೀಮನ್ಮಹಾರಾಜರವರು ಕಳೆದವಾರ ಬೆಂಗಳೂರಿನಿಂದ ನೀಲಗಿರಿಬೆಟ್ಟಕ್ಕೆ ದಯಮಾಡಿಸಿರುವರು. ಅಲ್ಲಿಯ ಹವೆಯು ಹಿತವಾಗಿರುವವರೆಗೂ ಅಲ್ಲಿದ್ದು ವರ್ಧಂತೀ ಮಹೋತ್ಸವದ ವೇಳೆಗೆ ರಾಜಧಾನಿಗೆ ದಯಮಾಡಿಸುವರೆಂದು ಕೇಳುತ್ತೇವೆ. ಶ್ರೀಯುವರಾಜರೂ ಸಹ ತಮ್ಮ ಪುತ್ರ ಪುತ್ರಿಯರೊಡನೆ ಅಲ್ಲಿಯೇ ಇದ್ದಾರೆ. ದಿವಾನರವರೂ ಸಹ ನೀಲಗಿರಿಯಲ್ಲಿಯೇ ಇರುವರು.

ಸ್ವೀಕಾರ

ಶಿವಮೊಗ್ಗ ಜಿ॥ ನೇಸರ್ತಿ ಗ್ರಾಮನಿವಾಸಿಗಳಾದ ಮ॥ ರಾ॥ ಕವಿ ಚನ್ನಬಸಪ್ಪನವರ ಪುತ್ರಿ ಚಿ॥ ಸೌ॥ ಕೊಟ್ರಮ್ಮನೆಂಬ ವಧುವಿಗೂ ಮ॥ ರಾ॥ ಹೊಸಕೆರೆ ರಾಮಜ್ಜನವರ ಹಂಪಣ್ಣನವರ ಪುತ್ರ ಚಿ॥ ಮ॥ ಮುದ್ದುವೀರಪ್ಪನೆಂಬ ವರನಿಗೂ ಮತ್ತು ಮ॥ ರಾ॥ ಗುಡಿಕೋಟೆ ಚಂಬಪ್ಪನವರ ಪುತ್ರ ಚಿ॥ ಮ॥ ಸರ್ವೇಶ್ವರಪ್ಪನೆಂಬ ವರನಿಗೂ ಮೇಲ್ಕಂಡ ಮ॥ ರಾ॥ ಹಂಪಣ್ಣನವರ ಪುತ್ರಿ ಚಿ॥ ಸೌ॥ ಪಾರ್ವತಮ್ಮನೆಂಬ ವಧುವಿಗೂ ವಿವಾಹಮಹೋತ್ಸವವು ವಿಶೇಷವೈಭವದಿಂದ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಮ॥ ರಾ॥ ಕವಿ ಚನ್ನಬಸಪ್ಪನವರು ಸಮರ್ಪಿಸಿದ 5 ರೂ ಗಳು ಮತ್ತು ಇದೇ ಗ್ರಾಮದ ಮ॥ ರಾ॥ ಆನಗೋಡು ರಾಚಪ್ಪನವರ ಪ್ರಥಮ ಪುತ್ರಿ ಚಿ॥ ಸೌ॥ ಚನ್ನವೀರಮ್ಮನೆಂಬ ವಧುವಿಗೂ, ಮ॥ ರಾ॥ ಕವಿ ಕೊಟ್ರಪ್ಪನವರ ಪುತ್ರ ಚಿ॥ ಮ॥ ಶಿವಲಿಂಗಪ್ಪನೆಂಬ ವರನಿಗೂ ಮತ್ತು ಮೇಲ್ಕಂಡ ರಾಚಪ್ಪನವರ ದ್ವಿತೀಯ ಪುತ್ರಿ ಚಿ॥ ಸೌ॥ ಗಿರಿಜಮ್ಮನೆಂಬ ವಧುವಿಗೂ, ಮ॥ ರಾ॥ ಸಾಗರದ ಮಾಲಪ್ಪನವರ ಪುತ್ರ ಚಿ॥ ಮ॥ ರಾಚಪ್ಪನೆಂಬ ವರನಿಗೂ ವಿಶೇಷ ವೈಭವದಿಂದ ನೆರವೇರಿದ ವಿವಾಹಸಮಯದಲ್ಲಿ ವಧೂವರರ ಪರವಾಗಿ ಪ್ರಭಾಪೋಷಣಕ್ಕೋಸ್ಕರ ಮ॥ ರಾ॥ ರಾಚಪ್ಪನವರು ಸಮರ್ಪಿಸಿದ 2 ರೂ ಗಳು ಮ॥ ರಾ॥ ಕವಿ ಮಹಾಲಿಂಗಪ್ಪನವರು ಸಮರ್ಪಿಸಿದ 2 ರೂ ಗಳು ಒಟ್ಟು 9 ರೂ ಗಳು ಮ॥ ರಾ॥ ಹೊಸ್ಮುರಡಿ ಸಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗದಲ್ಲಿರುವ ಮ॥ ರಾ॥ ಬಂಡಿಗಡಿ ಸಾಹುಕಾರ್ ಶಿವಲಿಂಗಪ್ಪಶೆಟ್ಟರ ಪುತ್ರ ಚಿ॥ ಮ॥ ಬಿ ಎಸ್ ಚಂದ್ರಪ್ಪಶೆಟ್ಟಿ ಎಂಬ ವರನಿಗೆ ತುಮ್ಮಿನಕಟ್ಟೆಯಲ್ಲಿರುವ ಮ॥ ರಾ॥ ಹಂಪಾಳಿ ಚನ್ನಬಸವಪ್ಪನವರ ಪುತ್ರಿ ಚಿ॥ ಸೌ॥ ಕಲ್ಯಾಣಮ್ಮನೆಂಬ ಕನ್ಯೆಯನ್ನು ತಂದು ವಿಶೇಷ ವೈಭವದಿಂದ ನೆರವೇರಿಸಿದ ವಿವಾಹಮಹೋತ್ಸವಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 5 ರೂ ಗಳು ಮ॥ ರಾ॥ ನರಸಿಂಹರಾಜಪುರದ ಯಜಮಾನ ಶಾಂತಪ್ಪಶೆಟ್ಟರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರು ಸಿಟಿಯಲ್ಲಿರುವ ಕಂಟ್ರಾಕ್ಟರ್ ಮ॥ ರಾ॥ ಕೆ ನಂಜುಂಡಪ್ಪನವರ ಪುತ್ರ ಚಿ॥ ಮ॥ ಚನ್ನಬಸವಪ್ಪ ಬಿ ಎ ಇವರಿಗೆ ರಾಜಧಾನಿಯಲ್ಲಿ ಮೈಸೂರು ಬ್ಯಾಂಕ್ ಮ್ಯಾನೇಜರಾಗಿರುವ ಮ॥ ರಾ॥ ಎ ಮಲ್ಲಪ್ಪನವರ ಪುತ್ರಿ ಚಿ॥ ಸೌ॥ ಲಲಿತಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಶ್ರೀ ಜಗದಾಚಾರ್ಯರ ಪವಿತ್ರಾಧಿಷ್ಠಾನದಿಂದ ಸಂಭಾವನಾರೂಪವಾಗಿ ಸಮರ್ಪಿಸಿದ 5 ರೂ ಗಳು ಮ॥ ರಾ॥ ಕೆ. ನಂಜುಂಡಪ್ಪನವರ ದ್ವಾರಾ ತಲ್ಪಿರುತ್ತವೆ.

ತುಮಕೂರು ತಾ॥ ಅರಿಯೂರುಮಠದ ವೇ॥ ಚನ್ನವೀರದೇವರ ಪುತ್ರ ಚಿ॥ ಮ॥ ಚಂದ್ರಶೇಖರಾರಾಧ್ಯನಿಗೆ ಸಿರಾ ತಾ॥ ಪುರದಲ್ಲಿರುವ ಗುರುಸಿದ್ದೇಶ್ವರಮಠದ ವೇ॥ ಮೂಡಲಗಿರಿ ವೀರಯ್ಯನವರ ಪುತ್ರಿ ಚಿ॥ ಸೌ॥ ದೇವೀರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 3 ರೂ ಗಳು ಅರಿಯೂರು ಮಠದ ವೇ॥ ಎ. ಚನ್ನದೇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಜಿ॥ ಹಿರೇಹಡಗಲಿಯಲ್ಲಿರುವ ವೇ॥ ಗುರುಪಾದದೇವರಮಠದ ಶ್ರೀ ಹಾಲಸ್ವಾಮಿಗಳವರು ಶಿರಹಟ್ಟಿ ತಾ॥ ಸಂಕದಾಳಗ್ರಾಮದಲ್ಲಿರುವ ತಮ್ಮ ಮಠದಲ್ಲಿ ನೆರವೇರಿಸಿದ ಶ್ರೀ ಹಾಲಸ್ವಾಮಿಜಾತ್ರೆಯು ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪಾಬಲದಿಂದ ನಿರ್ವಿಘ್ನವಾಗಿ ನೆರವೇರಿದ ಸಂತೋಷಕ್ಕಾಗಿ, ಪ್ರಭಾಪೋಷಣಕ್ಕೋಸ್ಕರ ಕಳುಹಿಸಿದ 2-8-0 ರೂ ಗಳು ವೇ॥ ಎಂ ಪಿ ಎಂ ಶಿವರುದ್ರಗೌಡರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗ ಜಿ॥ ಹಾನ್ಗಲ್ಲಿಯಲ್ಲಿರುವ ಮ॥ ರಾ॥ ಹುಲ್ಮನಿ ಶಿವಲಿಂಗಪ್ಪ ಶ್ರೇಷ್ಠಿಯವರ ದ್ವಿತೀಯ ಪುತ್ರಿ ಚಿ॥ ಸೌ॥ ಶಿವಲಿಂಗಮ್ಮನನ್ನು ಕಡೂರು ಜಿ॥ ಕೊಪ್ಪದ ತಾಲ್ಲೂಕು ಖಂಡಿಗಡಿ ಮ॥ ರಾ॥ ಹೊಸೂರು ವೀರಪ್ಪ ಶ್ರೇಷ್ಠಿಯವರ ಜ್ಯೇಷ್ಠಪುತ್ರ ಚಿ॥ ನಾಗಪ್ಪಶ್ರೇಷ್ಠಿಗೆ ಕೊಟ್ಟು ನಡೆಯಿಸಿದ ವಿವಾಹಮಹೋತ್ಸವ ಸಮಯದಲ್ಲಿ ವಧೂವರರ ಕಡೆಯವರಿಂದ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂ ಗಳು ವೇ॥ ಗುಪ್ಪಿ ಶಿವಕಥಾ ಪಂಡಿತ ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿ ಟೌನ್ನಿನಲ್ಲಿರುವ ವೇ॥ ನಂದಿಕೇಶ್ವರಮಠದ ವಿರೂಪಾಕ್ಷಯ್ಯನವರ ಮಾತೃಶ್ರೀಯವರು ತಮ್ಮ 80 ನೆಯ ವಯಸ್ಸಿನಲ್ಲಿ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ವೇ॥ ಹುಬ್ಬಳ್ಳಿ ಎರೇಮಠದ ಸೋಮನಾಥಯ್ಯನವರ ದ್ವಾರಾ ತಲ್ಪಿರುತ್ತವೆ.

ಮುಕ್ತಲ್ ತಾಲೂಕು ನೀರಲಗುಂಡದ ಮಾಲಿಪಾಟೀಲ ಶ್ರೀಮತಿ ಶರಣಮ್ಮನವರು ಬಿಜಾಪುರ್ ಪೋ॥ ತಾ॥ ಗುಡ್ಡಪ್ಪಗೌಡರ ಪುತ್ರ ಚಿ॥ ಶರಣಪ್ಪನನ್ನು ವೈಶಾಖ ಶು॥ ೯ ರವಿವಾರ ದಿವಸ ವಿಧ್ಯುಕ್ತ ಹೋಮಾದಿ ಕ್ರಿಯೆಗಳಿಂದ ದತ್ತಪುತ್ರನನ್ನಾಗಿ ಸ್ವೀಕರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ರಾಯಚೂರು ಚಿಕ್ಕಸುಗೂರಲ್ಲಿ ನೆರವೇರಿದ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿ ಸಮಯದಲ್ಲಿ ತೆಗೆಯಿಸಿದ 1 ರೂ ಒಟ್ಟು 2 ರೂ. ಗಳು ವೇ॥ ನಿಜಾರ್ಮಪುರ ಬಸವರಾಜಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರು ಸಿಟಿಯಲ್ಲಿರುವ ಮ॥ ರಾ॥ ಮೋಕ ಜಪ್ರಪ್ಪನವರ ಸಹೋದರ ಪುಟ್ಟಬಸಪ್ಪನವರ ಪುತ್ರ ಚಿ॥ ಮ॥ ನಂದೀಶ್ವರಯ್ಯನಿಗೆ ತುಮಕೂರಿನಲ್ಲಿರುವ ಮ॥ ರಾ॥ ಎ ಎನ್ ರೇವಣ್ಣ, ಬಿ ಎ ಇವರ ಮಾವ ಮ॥ ರಾ॥ ಗಂಗಪ್ಪನವರ ಪುತ್ರಿ ಚಿ॥ ಸೌ॥ ಗೌರಮ್ಮನನ್ನು ಕೊಟ್ಟು ನಡೆಯಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ಬೆಂಗಳೂರು ಅರಳೇಪೇಟೆ ವೀರಭದ್ರಶೆಟ್ಟಿ ಮ॥ ರಾ॥ ಬಿ. ರುದ್ರಪ್ಪಶೆಟ್ಟರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಸ್ತುತಿ ಸಾಮ್ರಾಜ್ಯ

(ಲೇಖಕರ — ಸಾವಿರದೇವರು ಬಿಜ್ಜಾಪುರ)

ದೇವರ ಸೃಷ್ಟಿರಚನೆಯಲ್ಲಿ ಅನಂತಾನಂತ ವಸ್ತುಗಳ ಹ್ರಾಸ ವಿಕಾಸಗಳು ಪ್ರತ್ಯಕ್ಷ ಸಿದ್ಧವಾಗಿದ್ದರೂ ಅದರಲ್ಲಿ ಹೆಸರಿಗಿಲ್ಲದಂತೆ ನಷ್ಟವಾಗಿರುವ ಸದ್ಯಃ ನಷ್ಟವಾಗುತ್ತಲಿರುವ ಕೆಲವು ವಸ್ತುಗಳನ್ನು ನಾವು ನೆನೆಯುತ್ತಲೂ ಕಾಣುತ್ತಲೂ ಇರುವಂತೆ, ಅನಾದಿಪರಂಪರೆಯಿಂದ ಉಳಿದುಬಂದವುಗಳನ್ನೂ ಕಾಣಬಹುದಾಗಿದೆ ಇವುಗಳಲ್ಲೊಂದಾಗಿರುವುದು ಸ್ತುತಿಯೆಂದು ಸುಜ್ಞರು ಅರಿಯದೆ ಇರಲಾರರು ನಿರುಪಾಯಸ್ಥಿತಿಯಲ್ಲಿಯೂ ಕೂಡ ಸ್ತುತಿಸಾಮ್ರಾಜ್ಯವು ವಿಶ್ವವ್ಯಾಪಿಯಾಗಿ ಉಳಿಯುತ್ತಬಂದಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು

ಸ್ತುತಿಯಿಂದ ಜಗತ್ತಿನಲ್ಲಿ ಪ್ರತಿಯೊಂದು ಪದಾರ್ಥವೂ ತನ್ನ ನಿಜಸ್ಥಿತಿಯಿಂದ ಬೇರೆನಿಸಿ ತೋರುತ್ತಿರುವುದು ಸಹಜವೂ ಅನುಭವಸಿದ್ಧವೂ ಆಗಿದೆ ಮನುಷ್ಯನಿಗೆ ಅಗ್ರಾಹ್ಯವು ಗ್ರಾಹ್ಯವೆನಿಸುವುದಾಗಲಿ, ದೂಷ್ಯವು ನಿರ್ದೋಷವೆನಿಸುವುದಾಗಲಿ, ಅನಾದರಣೀಯವು ಆದರಣೀಯವೆನಿಸುವುದಾಗಲಿ, ಅರುಚಿಯಾದುದು ರುಚಿಯೆನಿಸುವುದಾಗಲಿ ಸ್ತುತಿಯ ಪ್ರಭಾವದಿಂದಲ್ಲವೇ?

ಸ್ತುತಿಯು ಲೌಕಿಕ ಪಾರಮಾರ್ಥಿಕ ಸಂಬಂಧದ ಮುಖ್ಯ ಸುಲಭ ಸಾಮಗ್ರಿಯಾದಾಗ್ಯೂ ಇದಕ್ಕೆ ಲಕ್ಷ್ಯಕೊಡದ ಪದಾರ್ಥದ ಗುಣದೋಷ ಪಾತ್ರಾಪಾತ್ರಗಳ ಜ್ಞಾನವಿಲ್ಲದೆ ಸ್ವಾರ್ಥಿಗಳೆನಿಸಿದ ಕೆಲವರು ಸ್ತುತಿಯ ಸ್ವಾಶ್ರಯದಿಂದ ತಾವು ಧನಿಕರಾಗುವುದಲ್ಲದೆ ಅನ್ಯರನ್ನೂ ಕೆಟ್ಟದಾದ ಮಾರ್ಗದಲ್ಲಿ ಪ್ರವೃತ್ತಿಯುಳ್ಳವರನ್ನಾಗಿಮಾಡುತ್ತಿರುವರು ಶ್ರೋತೃವಿನ ಹೃದಯದಲ್ಲಿ ಆಪಾತತಃ (ಶ್ರವಣಮಾತ್ರದಿಂದ) ಪ್ರೇರಣೆಗೊಳಿಸುವುದೇ ಸ್ತುತಿಯ ಸ್ವಭಾವವಾಗಿದೆ ಆದಕಾರಣ ಸ್ತುತಿಯು ಮನುಷ್ಯನ ಪ್ರವೃತ್ತಿಗೆ ಕಾರಣವಾಗಿರುವುದಲ್ಲವೇ! ಒಬ್ಬನಿಗೆ ಬೇಡವಾಗಿದ್ದ ಪದಾರ್ಥವನ್ನೇ ಮತ್ತೊಬ್ಬನು ಸ್ತುತಿಸಿದರೆ ಸಾಕು, ಮರಳಿ ಆ ಪದಾರ್ಥವನ್ನು ಗ್ರಹಿಸಲು ಅವನೇ ಯತ್ನಿಸುವನು ವೈದ್ಯನು, ಈ ಔಷಧವು ಸಕಲ ರೋಗಗಳ ಮೇಲೆ ರಾಮಬಾಣವಾಗಿದೆಯೆಂದು ಪ್ರಶಂಸಾತ್ಮಕ ನೋಟೀಸನ್ನು ಹೊರಗೆಡವಿದರಾಯಿತು, ಅದನ್ನು ಸ್ವೀಕರಿಸಲು ಸರ್ವರೂ ಯತ್ನಿಸುತ್ತಾರೆ

ಆದರೆ ಯಾವ ಮನುಷ್ಯನು ವಸ್ತುಸ್ವಭಾವವನ್ನು ಶಾಸ್ತ್ರಾದಿಗಳಿಂದರಿಯಬಲ್ಲನೋ ಅವನೇ ಸ್ತುತಿಯಿಂದ ಪರಮಲಾಭವನ್ನು ಪಡೆಯಬಲ್ಲನೆಂದು ಖಂಡಿತವಾಗಿ ಹೇಳಬಹುದು

ಈ ಕಲಿಯುಗಪ್ರಭಾವದಿಂದಂತೂ ನೂತನ ಪ್ರಗತಿಗೆ ಮೆಚ್ಚಿ ತಮ್ಮ ಪುರಾತನವಾದ ಸಭ್ಯತೆಗೆ ತಿಲಾಂಜಲಿಯನ್ನು ಬಿಟ್ಟ ಕೆಲವರಾದ ಹೊಗಳುಭಟ್ಟರು ತಮ್ಮ ಹುಳುಕು ಮುಚ್ಚುವುದಕ್ಕೋಸ್ಕರವಾಗಿ ಅಸಾರವೂ, ದೋಷಮಯವೂ, ಪುರಾತನತತ್ವಕ್ಕೆ ವಿರುದ್ಧವೂ, ಸ್ವೇಚ್ಛಾಚಾರಕ್ಕನುಕೂಲವೂ ಆದ ವಸ್ತುವಿನ ಸ್ತುತಿಗೆ ಕೈಹಾಕಿ ಅಧರ್ಮಾಚರಣೆಗಳನ್ನು ಮುಂದಕ್ಕೆ ತರಲು ಯತ್ನಿಸುತ್ತಿದ್ದಾರಲ್ಲ ಇವರು ಹೊರಡಿಸುವ ವೃತ್ತಪತ್ರಿಕೆಗಳಲ್ಲಂತೂ ತಮ್ಮ ಮನೆದೇವರಾದ ಸಾಂಕರ್ಯರಾಯನ ಸ್ತುತಿಯೇ ತುಂಬಿತುಳುಕುತ್ತಿದೆ ಈಗಾಗಲೇ ಅಲ್ಲಲ್ಲಿ ಕೆಲವರು ಉಪಾಸಕರಾಗತೊಡಗಿದ್ದಾರೆ ತರುಣರೇ! ಎಚ್ಚರಗೊಳ್ಳಿರಿ! ಇದಕ್ಕೆ ಯಾರೂ ಮೋಸ ಹೋಗಬೇಡಿರಿ! ಸ್ತುತಿಯೆಂಬುದು ಶುಭಕರ್ಮವೆಂದು ಭಾವಿಸಿರಿ ತನಗಿಂತ ಅಧಿಕಫಲವನ್ನು ಕೊಡುವುದೇ ಶುಭಕರ್ಮದ ಲಕ್ಷಣವಾಗಿದೆ

ವೇದಾಗಮಗಳೂ ಕೂಡ ಅವುದನ್ನು ನಿತ್ಯವೂ, ಶುದ್ಧವೂ ಸರ್ವಶ್ರೇಷ್ಠವೂ, ನಿತ್ಯಮುಕ್ತಿಗೆ ಸಾಧನವೂ, ಎಂದು ಘಂಟಾಘೋಷವಾಗಿ ಸಾರುತ್ತಿರುವವೋ ಆ ವಸ್ತುವಿನ ಸ್ತುತಿರೂಪವಾದ ಶುಭಕರ್ಮವು ಶ್ರೇಷ್ಠಫಲವನ್ನು ಕೊಡುವುದಾಗಿದೆ

ಶುಭಕರ್ಮದ ಫಲವು ಮಾತ್ರ ಶುಭಕರ್ಮಕ್ಕಿಂತಲೂ ಹಚ್ಚು ಅಂಶಗಳಿಂದ ಬಹು ದೊಡ್ಡದಾಗಿರುತ್ತದೆ ಬೇರೆ ಕರ್ಮಗಳ ಫಲವು ಹಾಗಿಲ್ಲ 'ಯಾವತ್ ಕರ್ಮ ತಾವತ್ ಫಲಂ' ಎಂಬಂತೆ ಕರ್ಮಕ್ಕೆ ಸಮಾನವಾಗಿರಲೀ ಕರ್ಮಕ್ಕಿಂತಲೂ ನ್ಯೂನಪರಿಮಾಣವುಳ್ಳದುದಾಗಿರಲೀ ಇರಬಹುದು

ಅದಕ್ಕೋಸ್ಕರವಾಗಿ ಕರ್ಮವು ಅನ್ವಯಿ ವ್ಯತಿರೇಕಿ ಎಂದು ಎರಡು ಪ್ರಕಾರವಾಗಿದೆ ಒಂದು ಜೋಳದ ಕಾಳನ್ನು ಹೊಲದಲ್ಲಿ ಬಿತ್ತಿದರೆ ಅದು ಸಸಿಯೊಡೆದು ಮುಂದೆ ಫಲೋನ್ಮುಖವಾದಲ್ಲಿ ಅಧಿಕಾಂಶ ಫಲಪ್ರಾಪ್ತಿಯಾಗುವಲ್ಲಿ ಯಾವ ಸಂದೇಹವೂ ಇಲ್ಲ ಇದವೇ ಅನ್ವಯಿಕ್ರಿಯೆಯೆನ್ನಿಸಿಕೊಳ್ಳುವುದು ಒಂದೇ ಧಾನ್ಯವನ್ನು ಬೆಂಕಿಯಲ್ಲಿ ಹಾಕಿದರೆ ಒಡೆಯಂದೇ ಸುಡುವುದಲ್ಲದೆ, ಇನ್ನುಳಿದ ತತ್ಸಜಾತೀಯ ಧಾನ್ಯಗಳು ಸುಡುವಂತಿಲ್ಲ ಇದಕ್ಕಿಂತ ಅಧಿಕಫಲವಿಲ್ಲವೆಂಬುದೇ ಇದರ ಸಾರಾಂಶವಾಗಿದೆ ಇದುವೇ ವ್ಯತಿರೇಕಿ ಕ್ರಿಯೆಯೆನಿಸುವುದು ಸ್ವಲ್ಪ ಫಲವನ್ನಾಗಲಿ ಫಲಾಭಾವವನ್ನಾಗಲಿ ತೋರಿಸುವುದೇ ವ್ಯತಿರೇಕಿ ಕ್ರಿಯೆಯ ಸ್ವಭಾವವಾಗಿದೆ ಜಲತಾಡನಾದಿ ಕ್ರಿಯೆಗಳಿಂದ ಫಲವಿಲ್ಲವೆಂದು ದಾಶನಿಕರು ಅವುಗಳ ಪರಿಹಾರಕ್ಕೆ ಯತ್ನಿಸುತ್ತಿರುವುದು ಸರ್ವದಾ ಸುಳ್ಳಲ್ಲವು

ಇದರಂತೆ ಪ್ರಕೃತದಲ್ಲಿ ಜಗತ್ಕರ್ತೃವೆನಿಸಿದ ಪರಶಿವನನ್ನೂ, ಶಿವಕಳೆಯನ್ನನುಗ್ರಹಿಸುತ್ತಿರುವ ಸಂಪ್ರದಾಯ ಪುರುಷನಾದ ಸದ್ಗುರುವನ್ನೂ ತದಂಗಗಳೆನಿಸಿದ ಅನ್ಯಾನ್ಯವಸ್ತುಗಳನ್ನೂ ಸ್ತುತಿಸುವುದು ಅನ್ವಯಿ (ಅನುಕೂಲ) ಕ್ರಿಯೆಯೆಂದೂ, ಇನ್ನು ಶಾಸ್ತ್ರದ ನಿಯಮ ನಿರ್ಬಂಧಗಳಿಗೆ ಕುಂದುಕೊರತೆಗಳನ್ನು ತರುವ ಅಸಾರವೂ ಗುಣಶೂನ್ಯವೂ ಆಗಿರುವ ವಸ್ತುವನ್ನು ಅತ್ಯುತ್ತಮವಾಗಿ ಸ್ತುತಿಸುವುದು ವ್ಯತಿರೇಕಿ (ಪ್ರತಿಕೂಲ) ಕ್ರಿಯೆಯೆಂದೂ ಸಿದ್ಧವಾಯಿತು ಹೀಗೆಯೇ ಸಾತ್ವಿಕಾತ್ತ್ವಗಳನ್ನನುಸರಿಸಿ ಸ್ತುತಿಯು ಫಲವು ಸುಖಮಯವೂ ದುಃಖಮಯವೂ ಆಗಿದ್ದು ಸ್ತುತಿಯು ಶ್ರೋತೃಗಳ ಹೃದಯದಲ್ಲಿ ಒಂದು ಬಗೆಯಾದ ಚೇತನವನ್ನು ಕೊಡುವ ಸಾಮಗ್ರಿಯಾಗಿದೆ ಇದು ಮನಸ್ಸಿನಲ್ಲಿ ಬಿಂಬಿಸಿ ಕಾರ್ಯಮಾಡದೆ ಎಂದೂ ಬಿಡುವುದಿಲ್ಲ ಸಿಂಬೆಹಣ್ಣಿನ ನೆನಪು ಬಾಯಿಯಲ್ಲಿ ನೀರು ತಂದೇ ತೀರುವುದು ಸಹಜವಾಗಿದೆ ಉದಾತ್ತವ್ಯಕ್ತಿಗಳ ಅಥವಾ ವೀರರ ಪರಾಕ್ರಮಾದಿ ಗುಣಗಳ ಪ್ರಶಂಸೆಯನ್ನು ಕೇಳಿದ ಮಾತ್ರದಿಂದಲೇ ಬಾಲಕನೂ ನಾನು ಪರಾಕ್ರಮಿಯೆನಿಸಿ ಯಶಸ್ವಿಯಾಗಬೇಕೆಂದಾಶಿಸುತ್ತಾನೆ

ಸ್ತುತ್ಯಪದವಸ್ತುವಿನ ಸ್ತೋತ್ರವೇ ಸ್ವಾಭೀಷ್ಟಸಿದ್ಧಿಯನ್ನು ಕೊಡುವ ಕಲ್ಪವೃಕ್ಷವಾಗಿದೆ ಈ ಸ್ತುತಿಯು ನವವಿಧ ಭಕ್ತಿಗಳಲ್ಲೊಂದಾದ ಕೀರ್ತನವೆನಿಸುವುದು

ವಿಘ್ನಗಳನ್ನು ಧ್ವಂಸಮಾಡಿ ಶದ್ದ್ವಾರಾ ಕಾರ್ಯಸಮಾಪ್ತಿಗೆ ಸಾಧನವೆನಿಸಿದ ತನ್ನ ಇಷ್ಟದೇವತಾಸ್ತುತಿಯನ್ನು ಅದಿಕವಿಗಳಾಗಿದ್ದ ಮಹರ್ಷಿಗಳೂ, ಪರಮವಿದ್ವನ್ಮಣಿಗಳೂ, ಕಲಾವಿದರೂ, ತಮ್ಮ ಗ್ರಂಥರಚನೆಯ ಆದಿಯಲ್ಲಿ ಮಂಗಲವನ್ನಾಗಿ ಭಾವಿಸಿದ್ದಾರೆ ಮಂಗಲವೆಂದರೆ "ಮಂಗಂ ವಿಘ್ನಂ ಲುನಾತಿ ಛಿನತ್ತೀತಿ ಮಂಗಲಂ" ಎಂಬ ವ್ಯುತ್ಪತ್ತಿಯಂತೆ ಸಕಲವಿಘ್ನಗಳನ್ನು ಕತ್ತರಿಸುವುದೆಂದು ಅರ್ಥವಾಗುತ್ತದೆ ಈ ಮಂಗಲಸ್ತುತಿಯು ಮಾನಸಿಕವೆಂತಲೂ, ಉಲ್ಲೇಖಾತ್ಮಕವೆಂತಲೂ ಎರಡು ವಿಧವಾಗಿದೆ ಕೆಲವರು ಇದನ್ನು ಮನಸ್ಸಿನಲ್ಲಿಯೇ ಅನುಸಂಧಿಸಿ ಗ್ರಂಥರಚನೆಯನ್ನು ಪ್ರಾರಂಭಿಸಿದ್ದಾರೆ ಕಿರಣಾವಲಿ ಮುಂತಾದ ಗ್ರಂಥಗಳ ಆದಿಯಲ್ಲಿ ಮಂಗಲಸ್ತೋತ್ರವಿರುವುದಿಲ್ಲ ಇದರಿಂದ ವಿಶೇಷಾನಭಿಜ್ಞರಿಗಾಗುವ ಅಶ್ರದ್ಧೆಯನ್ನು ದೂರಮಾಡುವುದಕ್ಕೋಸ್ಕರವೂ ಶಿಷ್ಯರ ಶಿಕ್ಷಣೆಗಾಗಿಯೂ ಕೆಲವರು ಉಲ್ಲೇಖಾತ್ಮಕ ಮಂಗಲವನ್ನು ಬರೆಯುವ ಸಂಪ್ರದಾಯವನ್ನಿಟ್ಟುಕೊಂಡಿದ್ದಾರಲ್ಲವೇ! ಮಂಗಲಸ್ತುತಿಯನ್ನು ಮಾಡಿಯೇ ತೀರಬೇಕೆಂಬ ಶಾಸ್ತ್ರನಿರ್ಬಂಧವುಂಟು

ಹೀಗೆ ನಾನಾ ಹೆಸರುಗಳಿಂದ ಹೇಳಿಸಿಕೊಳ್ಳುವ ಮಾನವರ ಪರಮಾನಂದಪ್ರಾಪ್ತಿಗೆ ಮುಖ್ಯವೆನಿಸಿದ ಈ ಸ್ತುತಿಸಾಮ್ರಾಜ್ಯವು ಅನಾದಿಸಂಸಿದ್ಧವಾಗಿದ್ದು ಬಹು ದೂರ ವ್ಯಾಪಿಸಿದೆ ಆದರೆ ಇದರ ದುರುಪಯೋಗವನ್ನು ಸ್ವಪ್ನದಲ್ಲಿಯೂ ಕೂಡ ಬಯಸದಿರುವುದು ಉಪಸಕರ ಮುಖ್ಯಕರ್ತವ್ಯವಾಗಿದೆ

"ಭೂಯಿಷ್ಠಾಂತೇ ನಮ ಉಕ್ತಿಂ ವಿಧೇಯ."

ಎಂಬ ಶ್ರುತಿಯೂ ಕೂಡ ನಮ್ರಭಾವಪೂರ್ವಕ ಆನಂದದಿಂದ ಶಿವನನ್ನು ಸ್ತುತಿಸುವುದೇ ಮನುಷ್ಯನ ಕರ್ತವ್ಯವಾಗಿದೆಯೆಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿದೆ

ಗುರುವರ್ಗದ ಮುಖ್ಯ ಗುರಿಯೇನು?

(ಬರೆವವ — ಪ್ರ್ಯಾಜ್ಞಲಿಪ್ಯ?)

ವೀರಶೈವ ಮತಸಾಮ್ರಾಜ್ಯದ ಮೇಲೆ ಕವಿದುಕೊಂಡು ಬಂದ ವಿಪತ್ಪರಂಪರೆಯ ತೊಡಕನ್ನು ಬಿಡಿಸಲು ಗುರುವರ್ಗವು ಜಾಗ್ರತವಾದೊಡನೆಯೇ ಇದಕ್ಕೆ 'ಗುರುವರ್ಗದವರ ಚಳವಳಿ' ಎಂಬ ಹೆಸರು ಒದಗಿತು ಅಖಿಲವೀರಶೈವ ಜನಾಂಗವು ಮೊದಲು ಸ್ವಧರ್ಮಜ್ಞಾನಶೂನ್ಯವಾಗಿ ನಾನಾವಿಧವಾಗಿ ನರಳತೊಡಗಿತ್ತು, ವೀರಶೈವಶಿರೋರಕ್ಷಸ್ವರೂಪವಾದ ಗುರುವರ್ಗವು ತನ್ನ ಭಕ್ತಕೋಟಿಗೆ ಬಂದ ಕ್ಲೇಶಾಧಿಕ್ಯವನ್ನು ನಿಮೂರ್ಲಿಸುವ ಶಕ್ತಿಯು ಶೂನ್ಯವಾಗಲಾರಂಭಿಸಿದಾಗ ಪರಶಿವಾನುಗ್ರಹದಿಂದ ಮತೋದ್ಧಾರಕವಾದ ಈ ಚಳವಳಿಯು ಪ್ರಾರಂಭವಾಯಿತು ವೀರಶೈವಮತಕ್ಕೆ ಮುಖ್ಯಾಂಗಸ್ವರೂಪರಾದ ಗುರುವರ್ಗದವರ ಅತ್ಯುಜ್ವಲವಾದ ಮತಧರ್ಮನಿಜಜ್ಞಾನಪ್ರಕಾಶನ ಪ್ರಚಾರದಿಂದ ಅಖಿಲಪ್ರಪಂಚವೇ ಈ ಮತದ ಘನತೆಯನ್ನು ಕಣ್ಣಾರೆ ನೋಡತೊಡಗಿತು ಪರಮಾಸ್ತಿಕಶಿರೋಮಣಿಗಳಾದ ಭಾರತೀಯರಿಗೆ ಮೂಲಾಧಾರಗಳಾದ ವೇದಾಗಮಗಳಲ್ಲಿ ಪ್ರಜ್ವಲಿತವಾಗಿ ಪ್ರತಿಪಾದಿಸುತ್ತಲಿದ್ದ ವೀರಶೈವದ ತತ್ವ ಪ್ರಾಶಸ್ತ್ಯವನ್ನರಿಯದ ಮುಂದಿಗಳು ಸರ್ವಜಾತಿಯವರಲ್ಲಿ 'ಉಡಾಡಿ'ಗಳಾಗಬೇಕೆಂಬ ಬಡಬಡಿಕೆಯಿಂದ ವೈದಿಕವಿರೋಧಮಾರ್ಗಗಾಮಿಗಳಾಗಿರುವರಲ್ಲ! ವೈದಿಕವಾಙ್ಮಯನಿಧಿಯಿಂದ ಗುರುವರ್ಗದವರು ವೀರಶೈವಮತಸಿದ್ಧಾಂತರತ್ನಹಾರವನ್ನು ಪೂಜ್ಯರಾದ ವೇದಮಾತೆಯು ಧರಿಸಿಕೊಂಡಿರುವದನ್ನು ಪ್ರಪಂಚಕ್ಕೆ ತೋರಿಸಿದರು ಗೀರ್ವಾಣಭಾಷೆಯ ಸಹಾಯವಿಲ್ಲದ್ದರಿಂದ ವೇದಾಗಮಸಾಗರದಲ್ಲಿ ಹೋಗದ ಹಾಡಿಗಳು ಅವೈದಿಕವಿಚಾರಪ್ರವಾಹಕ್ಕೆ ಸಿಕ್ಕು 'ಶೂದ್ರ ಅತಿಶೂದ್ರ' ಎಂಬ ಅವಹೇಳನ ನುಡಿಗೆ ಗುರಿಯಾಗತೊಡಗಿದರು ಈ ಮಂದಮತಿಗಳಾದ ಮಂಗಗಳ ಪಾಲಿಗೆ ಬಂದ ದುರಪವಾದವು ಇಡೀ ವೀರಶೈವಮತಕ್ಕೆ ಬಾರದಂತೆ ಮಾಡುವುದೇ ಈ ಗುರುವರ್ಗದ ಚಳವಳಿಯ ಮುಖ್ಯಸಲ್ಲೋದಯವೆಂದು ಹೇಳಬೇಕಾಗಿದೆ ಪರಮತೀಯರು "ವೀರಶೈವರಲ್ಲಿ ಸನಾತನವೈದಿಕಪಂಥದವರೂ ಅವೈದಿಕಸಾಂಕರ್ಯಪಂಥದವರೂ ಬೇರೆಬೇರೆಯಾಗಿರುವರು" ಎಂಬ ಅಭಿಪ್ರಾಯವನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ ಒಟ್ಟಿನಮೇಲೆ ನಮ್ಮ ಗುರುವರ್ಗದ ಚಳವಳಿಯಿಂದ ವೀರಶೈವಮತದ ನಿಜಸ್ವರೂಪವು ಪ್ರಕಾಶಕ್ಕೆ ಬಂದಿತು ಈ ಚಳವಳಿಯ ಮುಖ್ಯಗುರಿಯು ಸತ್ಯಸಂಶೋಧನದ ಕಡೆಗಿದ್ದುದರಿಂದ ಸರ್ವಜನಸಮ್ಮತವಾಗುವ ಯೋಗವು ಬರತೊಡಗಿತು ಶುದ್ಧಸಂಪ್ರದಾಯದ ವೀರಶೈವಮಹಾಜನಗಳಂತೂ ಗುರುವರ್ಗದವರ ನಿಜತತ್ವಪ್ರಚಾರಕಾರ್ಯಕ್ಕೆ ಅತ್ಯಾನಂದದಿಂದ ಸಹಾಯಕರೂ ಚಾಲಕರೂ ಆಗಿ ನಿಂತರು ವೀರಶೈವಮತೋದ್ಧಾರ ಕಾರ್ಯಭಾಗಿಗಳಾದರು ವೀರಶೈವಪಂಡಿತವರ್ಗವು ಈ ಮತೋದ್ಧಾರಕಾರ್ಯದಲ್ಲಿ ನಿರತವಾಯಿತು ಸಾಮಾನ್ಯವಾಗಿ ನಾಸ್ತಿಕಶಿಕ್ಷಣದಲ್ಲಿ ಕಾಲಕಳೆದ ಕೆಲಜನರು ವಿರೋಧಿಸತೊಡಗಿದ್ದರಿಂದಲೇ ಗುರುವರ್ಗದ ಚಳವಳಿಯು ಮೂರ್ತಸ್ವರೂಪವನ್ನು ಧರಿಸಿತು ಗುರುವರ್ಗದವರಿಂದ ವೀರಶೈವಮತದಮೇಲೆ ಆಗಿರುವ ಮಹೋಪಕಾರದ ಋಣದ ಭಾರವನ್ನು ಭಕ್ತಕೋಟಿಯು ಗುರುಭಕ್ತಿರೂಪ ಧನವನ್ನರ್ಪಿಸಿ ಕೃತಾರ್ಥನಾಗಲೆಂದು ವಿನೋದನ ಅಭಿಲಾಷೆಯು

ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತೀ ಮಹೋತ್ಸವವು.

ರಾಯಚೂರು

ರಾಯಚೂರಿನಲ್ಲಿ ಸುಪ್ರಸಿದ್ಧ ಪುರಾತನ ಸ್ಥಾನವೆನಿಸಿದ ಸಾವಿರದೇವರು ಕಿಲ್ಲೇಮಠದಲ್ಲಿ ವೈಶಾಖ ಶು|| ೩ ಶುಕ್ರವಾರದಿವಸ ಶ್ರೀ ಜಗದ್ಗುರು ಏಕೋರಾಮ ಭಗವತ್ಪಾದರ ಜಯಂತೀಮಹೋತ್ಸವವು ಅತ್ಯಂತ ವೈಭವದಿಂದ ಸಾಗಿತ.

ಶುಕ್ರವಾರ ಮಧ್ಯಾಹ್ನ ೨ ಘಂಟೆಯೊಳಗಾಗಿ ಶ್ರೀ ಭಗವತ್ಪಾದರ ದಿವ್ಯಚಿತ್ರಕ್ಕೆ ಷೋಡಶೋಪಚಾರಗಳಿಂದ ಪೂಜೆಯೂ, ಮಹಾಗಣಾರಾಧನಾದಿಕಾರ್ಯಗಳೂ ಜರುಗಿದಬಳಿಕ ಸಾಯಂಕಾಲ ೬ ಘಂಟೆಗೆ ಸರಿಯಾಗಿ ಪುರವಾಸಿಗಳೆಲ್ಲರೂ ಸತ್ಸಂಗಾಕಾಂಕ್ಷೆಯಿಂದ ಸೇವಾಭಾಗಿಗಳಾಗಿ ಆಗಮಿಸಿದ್ದರು ಅದೇ ಸಮಯದಲ್ಲಿ ಬಿಜ್ಜಾಪುರಿಯಿಂದ ಆಗಮಿಸಿದ್ದ ಸಾವಿರದೇವರು ವೃಷಭಲಿಂಗಶಿವಾಚಾರ್ಯರು ತಮ್ಮ ಮಂಜುಳವಾದ ಸ್ವರದಿಂದ ಸ್ವರಚಿತವಾದ ಏಕೋರಾಮಸ್ತೋತ್ರವನ್ನು ಮನೋಹರವಾಗಿ ಹಾಡಿ ಜಗದಾಚಾರ್ಯರ ದಿವ್ಯಚರಿತ್ರಕ್ಕೆ ಸಂಬಂಧಿಸಿದ ಕೆಲವು ಅಂಶಗಳಮೇಲೆ ವಿಸ್ತೃತಭಾಷಣವನ್ನು ಮಾಡಿದರು ಬಳಿಕ ಜಗದಾಚಾರ್ಯರ ಜಯಘೋಷದೊಡನೆ ಕಾರ್ಯವು ಸಮಾಪ್ತಿಗೊಳಿಸಲ್ಪಟ್ಟಿತು

ಹಿಂದಕ್ಕೆ ಮಹಾತಪಸ್ವಿಗಳೂ ಮಹಿಮಾಶಾಲಿಗಳೂ ಆಗಿಹೋದ ಈ ಮಠದ ಕರ್ತೃಗಳಾಗಿದ್ದ ಗುರುವಾದ ಶಿವಾಚಾರ್ಯಮಹಾಸ್ವಾಮಿಗಳವರ ಪುಣ್ಯತಿಥಿ ಸಮಾರಂಭದ ಸುಯೋಗವೂ ಕೂಡ ಈಗಲೇ ಬಂದುದರಿಂದ ಉತ್ಸವವು ಮತ್ತಷ್ಟು ಮನೋಹರವಾಗಿ ತೋರಿತು ಈ ಗುರುಸ್ಥಾನವು ಮೊದಲಿನಂತೆ ಓಜಸ್ವಿಯಾಗಲು ನೂತನ ಪಟ್ಟಿಗಳಾದ ಗುರುಪಾದ ಶಿವಾಚಾರ್ಯರಿಗೆ ತಕ್ಕ ಗುರುತ್ವದ ಕಳೆಯನ್ನನುಗ್ರಹಿಸಲೆಂದು ಗುರುಸಾರ್ವಭೌಮರನ್ನು ಬೇಡಿಕೊಳ್ಳುತ್ತೇನೆ

"ಓರ್ವ ಗುರುಭಕ್ತ"

ವಿವಾಹಮಹೋತ್ಸವಗಳು.

ಶಿವಮೊಗ್ಗ ತಾ|| ಸೇವಾ ನಿವಾಸಿಗಳಾದ ಶ್ರೀ|| ರಾ|| ರುದ್ರಗೌಡ ಪಾಟೀಲರವರ ಸೋದರ ಸೊಸೆಯವರ ಪುತ್ರಿ ಚಿ|| ಸೌ|| ಪಾರ್ವತಮ್ಮನೆಂಬ ವಧುವಿಗೂ ಮ|| ರಾ|| ಗವೀಗೋಡಿ ಜಂಬಪ್ಪನವರ ಪುತ್ರ ಚಿ|| ಪರಮೇಶ್ವರಪ್ಪನೆಂಬ ವರನಿಗೂ ಮ|| ರಾ|| ಕವಿ ಹಣ್ಣುಬುಕ್ಕಸವರ ಪುತ್ರಿ ಚಿ|| ಸೌ|| ಕೊಟ್ರಮ್ಮನೆಂಬ ವಧುವಿಗೂ ಮ|| ರಾ|| ದುರ್ಗದ ಬಸವಣ್ಣನವರ ಹೊಸಣ್ಣನವರ ಪುತ್ರ ಚಿ|| ಮುದ್ದುವೀರಪ್ಪನೆಂಬ ವರನಿಗೂ ವೈಶಾಖ ಬ|| ೨ ಶುಕ್ರವಾರ ಪಾಣಿಗ್ರಹಣ ಮಹೋತ್ಸವವು ಮ|| ರಾ|| ಕವಿ ಹಣ್ಣುಬುಕ್ಕಸವರ ಗೃಹದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತು ನೂತನ ವಧೂವರರ ಸುಕೃತಭಾಗ್ಯೋದಯದಿಂದ ಶ್ರೀಮನ್ನಗರದ ಬೃಹನ್ಮಠದ ಶ್ರೀ ಗುರುಸಿದ್ಧನಾಗಾರ್ಜುನ ಶಿವಾಚಾರ್ಯಸ್ವಾಮಿಗಳವರು ಆಕಸ್ಮಿಕವಾಗಿ ದಿಜಯಂಗೆಯ್ದುದರಿಂದಂತೂ ವಿಶೇಷ ಶೋಭೆಗೆ ಆಸ್ಪದವಾಯಿತು ಶ್ರೀಗಳವರ ಅಧ್ಯಕ್ಷತೆಯಲ್ಲಿ ಕೀರ್ತನ ಕೇಸರಿ ಶಿವಭೋಜಶಾಸ್ತ್ರಿ ಎರಡುಮಾರಿತರವರ ಪೇಟೆಯ ಶಿವಮೂರ್ತಿ ಸ್ವಾಮಿಗಳು "ಆಂಬುಮತಿಕಲ್ಯಾಣ ಜಗದ್ಗುರುವಿಲಾಸ" ಎಂಬೆರಡು ಶಿವಸಂಕೀರ್ತನೆಗಳನ್ನು ನೀತಿ ಧರ್ಮಬೋಧಪ್ರದವಾಗಿ ಬಯಸತಕ್ಕವಾಗಿ ಅನುವಾದ ಮಾಡಿದರು

ಇದೇ ರೀತಿಯಾಗಿ ಮ|| ರಾ|| ಆನುಗೋಡು ದಾಸಪ್ಪನವರು ತಮ್ಮ ಪ್ರಥಮ ಪುತ್ರಿ ಚಿ|| ಸೌ|| ಚನ್ನವೀರಮ್ಮನನ್ನು ಮ|| ರಾ|| ಕನಿಕೊಟ್ರಪ್ಪನವರ ಪುತ್ರ ಚಿ|| ಸ|| ಶಿವಲಿಂಗಪ್ಪನಿಗೂ, ದ್ವಿತೀಯ ಪುತ್ರಿ ಚಿ|| ಸೌ|| ಗಿರಿಜಮ್ಮನನ್ನು ಮ|| ರಾ|| ಸಾಗರದ ಹಾಲಪ್ಪನವರ ಪುತ್ರ ಚಿ|| ಸ|| ರಾಚಪ್ಪನಿಗೂ ಕೊಟ್ಟು ತಮ್ಮ ಗೃಹದಲ್ಲಿಯೇ ವಿಶೇಷ ವೈಭವದಿಂದ ವಿವಾಹವನ್ನು ನೆರವೇರಿಸಿ ಕನ್ಯಾದಾನವನ್ನು ಮಾಡಿದರು ಈ ಉಭಯ ವಿವಾಹಮಹೋತ್ಸವಗಳಲ್ಲಿಯೂ ಕಾರ್ಯಕರ್ತೃಗಳು ವೀರಶೈವಮತೋದ್ಧಾರಕ್ಕಾಗಿ ಪತ್ರ ವೃತ್ತಿಯ ಪಂಚಾಚಾರ್ಯ ಪ್ರಭಾ ಪೋಷಣಕ್ಕಾಗಿ ಪೋಷಕ ಪ್ರಸ್ಥವನ್ನು ಸಮರ್ಪಿಸಿದರು ಜಗದಾಚಾರ್ಯರು ನೂತನ ವಧೂವರರಿಗೆ ಸಕಲಸನ್ಮಂಗಲಗಳನ್ನುಂಟುಮಾಡಲೆಂದು ಪ್ರಾರ್ಥಿಸುವ

ಓರ್ವ ಕಾರ್ಯಭಾಗಿ

ಅಪೂರ್ವ ಸುಸಂಧಿ

ನಾವು ಬಡವರು ಎಂದು ದುಃಖಿಸಬೇಡಿರಿ!

ನೀವು ಆರೋಗ್ಯವಂತರಾಗಿ, ಸುಖಿಗಳಾಗಬೇಕೆಂದು ನಮ್ಮ ಇಚ್ಛೆ ಆದುದರಿಂದ ನಿಮಗೋಸ್ಕರ ಒಂದು ರೂಪಾಯಿಯಲ್ಲಿ ನಿಮ್ಮ ರೋಗವು ಗುಣವಾಗುವಂತೆ ಶಾಸ್ತ್ರೋಕ್ತ ರೀತಿಯಿಂದ ಸಿದ್ಧಪಡಿಸಿದ ಹಿಮಾಲಯದ ದಿವ್ಯ ವನಸ್ಪತಿಗಳ ಔಷಧಗಳನ್ನು ಕಳಿಸಿಕೊಡುವೆವು ಕ್ಷಯ, ದಮ್ಮು, ಕೆಮ್ಮು, ಸಂಗ್ರಹಣಿ, ಮೂಲವ್ಯಾಧಿ, ಸ್ತ್ರೀಯರ ಗರ್ಭಾಶಯ ಸಂಬಂಧಿ ಯಾವತ್ತೂ ರೋಗಗಳು ನಪುಂಸಕತೆ, ಧಾತುಕ್ಷೀಣತೆ, ಇಂದ್ರಿಯ ದುರ್ಬಲತೆ ಮೊದಲಾದ ಸ್ತ್ರೀಪುರುಷರ ಗುಹ್ಯ ರೋಗಗಳಿಗೂ ಔಷಧಗಳನ್ನು ಕಳಿಸುವದರಲ್ಲಿ ಬರುವುದು ರೋಗವು ಯಾವುದೇ ಇರಲಿ, ಬಡವರಿಗಾಗಿ ಒಂದೇ ರೂಪಾಯಿಯಲ್ಲಿ ಔಷಧವು ಕಳಿಸಲ್ಪಡುವುದು ಪತ್ರವ್ಯವಹಾರವನ್ನು ಪ್ರಸಿದ್ಧಿಸುವುದಿಲ್ಲ ರೋಗಿಗಳು ತಮ್ಮ ರೋಗದ ಎಲ್ಲಾ ಲಕ್ಷಣಗಳನ್ನು ಬರೆದು ತಿಳಿಸಬೇಕು ಅಥವಾ ಒಂದು ರೂಪಾಯಿ ನಾಲ್ಕಾಣೆ ಕಳಿಸಿದಲ್ಲಿ ರೋಗಗಳ ವಿಷಯವಾಗಿ ತುಂಬಿ ಕಳಿಸುವ ಪತ್ರಿಕೆಯನ್ನು ಕಳಿಸುವೆವು ಪತ್ರಿಕೆಯನ್ನು ತುಂಬಿ ಕಳುಹಿಸಿದನಂತರ ಔಷಧವನ್ನು ಕಳುಹಿಸಿಕೊಡುವೆವು ಅವಶ್ಯವಿದ್ದವರು ಒಂದುರೂಪಾಯಿ ನಾಲ್ಕಾಣೆ ಮನಿಆರ್ಡರ್ ಮಾಡಿ ರೋಗದಿಂದ ಮುಕ್ತರಾಗಬೇಕು ವಿಳಾಸವನ್ನು ಇಂಗ್ಲೀಷಿನಿಂದ ಬರೆಯಬೇಕು

ಕಾಲ್ಸ್ ಫಿರಾನ್

ಇದೊಂದು ಅತ್ಯತಿಮಶಕ್ತಿಪ್ರದವಾದ ಔಷಧಿ ರಕ್ತವೃದ್ಧಿ, ರಕ್ತಶುದ್ಧಿಯನ್ನು ಮಾಡುವುದರಲ್ಲಿಯೂ, ಸ್ತ್ರೀಪುರುಷರ ಸರ್ವಪ್ರಕಾರವಾದ ಅಶಕ್ತತೆಗಳನ್ನು ಹೋಗಲಾಡಿಸುವುದರಲ್ಲಿಯೂ ಹೆಸರಾಗಿದೆ ಶಾರೀರಿಕ, ಮತ್ತು ಬೌದ್ಧಿಕ ಕಾರ್ಯಗಳನ್ನು ಮಾಡುವವರಿಗೆ ಇದು ಅತ್ಯಾವಶ್ಯಕವಾಗಿದೆ ವಿದ್ಯಾರ್ಥಿಗಳಿಗಂತೂ ಪರಮೋಪಕಾರಿಯಾಗಿದೆ 30 ಮಾತ್ರೆಯುಳ್ಳ ಒಂದು ಬಾಟ್ಲಿಗೆ ಒಂದೇ ರೂಪಾಯಿ ಟಪಾಲು ಖರ್ಚು ಬೇರೆ ಪ್ರಚಾರಕ್ಕಾಗಿ ಏಜಂಟರು ಬೇಕು ಒಂದೇ ಬಾಟ್ಲಿ ಬೇಕಾದವರು ೧೮ ಆಣೆ ಮನಿಯಾರ್ಡರ್ ಮಾಡಬೇಕು

Address—
National Phrmacy
Kamacha Benares city

ನಮ್ಮ ವಿಳಾಸ—
ನ್ಯಾಶನಲ್ ಫಾರ್ಮಸಿ
ಕಮಚ್ಛ, ಬನಾರಸ ಸಿಟಿ

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಶೋಭಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಕಾಶಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ಪೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೭ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಡಿತರಿಗೆ ಆಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೬೫ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ ೮ **ರೂಪಾಯಿ** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವದು. ವಿ. ಪಿ ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಧುತ್ತು ಅಮೃತಶಿಲೆಯಿಂದ ಕೂಡಿದ ಫೋಟೋ ಸೈಜು ೨೦ X ೧೫ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರ ಲೋಕಗುರುತ್ವಕರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ X ೧೫ ಬೆಲೆ	೦—೧—೬
ಸಮ್ಮೇಳನ ಪಿ ದಾರೋಹಣಮಹೋತ್ಸವ ಅವರು ಅಧ್ಯಕ್ಷರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೦ X ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೫ X ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ X ೬ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನ ಮೇರೆಗಾಗಿ ಏಕಕಾಲದಲ್ಲಿಯೇ ಮೂರುಕೋಟಿ ರೂಪುಗಳನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತ ಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರದ ಗಾಡವಿಸ್ತಾರ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಲಿಪಾಕದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಯ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸ ಬಹುದಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಮೈಸೂರು

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ.—ಸೀನತಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಘಮಘಮಿಸುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಬಳಕೆಯಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವಿ. ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ. ಪಿ. ೮ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[11] ಪೋ. ಬಾ. ೨೧೧೦, ಮದರಾಸು.

(Registered Trade Mark)

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ ..	೨ ಆಣೆ
ಮರುಳಸಿದ್ಧೇಶ್ವರ ಸ್ತೋತ್ರ . .	೧ ಆಣೆ
ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) . .	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ) .	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ) ..	೨ ಆಣೆ
ಪಂಚಾಚಾರ್ಯ ಪ್ರಭಾಕರ ...	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಗುರುಸ್ವರೂಪಸ್ತವನದೀಪಿಕೆ	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಮತಮೀಮಾಂಸಾ .	೩ ಆಣೆ
ವೀರಶೈವಾಚಾರನಿಧಿ (೩ ನೆಯ ಆವೃತ್ತಿ) .	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಸನ್ಯಾಸಾಶ್ರಮವಿಮರ್ಶ ತತ್ತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे
Speeches by Pandit Shri Kashinatha Shastri (*English*)	12 As
ವೀರಶೈವರತ್ನ (೮ ನೆಯ ಆವೃತ್ತಿ)	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ...	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೦ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) ...	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ ..	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) ..	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) ...	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕೆಯುಳ್ಳದು)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೦೩ ಪುಟ)	೮ ರೂ
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಷ್ಟಾವಧಾನಿ ವೇ|| ಪಂಡಿತ ಶಿರ್ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಕ್ಷರೀವಾದಿನಃ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋತ್ಥಿತಾನ್ ||
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂತ್ತಮವರಾನ್ ಪಾಲಿಷ್ಟ್ರವೀಲೋಕವಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು

ಸ್ಥಳದವರಿಗೆ ೧ ರೂ ೧೧ ಬಿಡಿ ಪ್ರತಿ ೧ಕ್ಕೆ ೧ ಪೈ ಪರಸ್ಥಳದವರಿಗೆ ೨ ರೂ ೦ ಅ ೯ ಪಿ ಬಾಬ್ತು ಪ್ರತ್ಯೇಕ

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೫ನೇ ಮೇ ೧೯೩೬ [ಸಂಚಿಕೆ ೫

ಬಾರ್ಸಿ ಪರಾಂಡಕರಸ್ವಾಮಿಗಳವರ ಸಂಕ್ಷಿಪ್ತ ಪರಿಚಯ

ಸ್ವಾರ್ಥಕ್ಕಾಗಿ ಜೀವಿಸುವ ಪರರೇನೇಕರುಂಟು, ಪರ ಹಿತಕ್ಕಾಗಿ ಜೀವಿಸುವ ಮಹಿಮರು ಅತಿ ವಿರಳ. ಪರಾರ್ಥದಿಂದ ಸ್ವಾರ್ಥವೂ ಪರಾರ್ಥವೂ ಸಾಧಿಸುತ್ತವೆ. ಸ್ವಾರ್ಥದಿಂದ ಸ್ವಾರ್ಥವು ಸಾಧಿಸುವುದು ವಿರಳವೇ! "ಪರೋಪಕಾರಾರ್ಥಮಿದಂ ಶರೀರಂ" ಎಂಬ ಉಕ್ತಿಯಂತೆ ಈ ಶರೀರವು ಕೇವಲ ಪರೋಪಕಾರಕ್ಕಾಗಿಯೇ ಇರುವುದು. ಈ ವಿಷಯವನ್ನು ಪುರಾಣಾದಿಗಳಲ್ಲಿಯೂ, ವ್ಯಾಖ್ಯಾನ ಕೀರ್ತನಾದಿಗಳಲ್ಲಿಯೂ ಎಲ್ಲರೂ ಹೇಳಬಲ್ಲರು. ಅದರಂತೆಯೇ ಕೇಳಬಲ್ಲರು. ಪರಂತು ವರ್ತನದಲ್ಲಿ ತಂದ ವ್ಯಕ್ತಿಗಳನ್ನು ಕಾಣುವುದೇ ಕಷ್ಟವು! ನುಡಿದಂತೆ, ಕೇಳಿದಂತೆ, ನಡೆಯುವವರೇ ಮಹಾತ್ಮರು. ಇಂಥ ಮಹಾತ್ಮರು ಅಲ್ಲಲ್ಲಿ ಪ್ರಕಾಶಿಸುತ್ತಿರುವರು. ಅವರಲ್ಲಿ ನಮ್ಮ ಮಹಾರಾಷ್ಟ್ರ ಭಾಗದಲ್ಲಿಯೂ ಒಂದು ದಿವ್ಯರತ್ನವು ಹೊಳೆಯುತ್ತಿರುವುದು. ಆ ರತ್ನದ ಬೆಲೆಯನ್ನು ಕಟ್ಟಲು ನಮ್ಮಂಥ ಜನರೂ ಸಮರ್ಥರಲ್ಲವು. ಕೇವಲ ಗುರು ಸಾರ್ವಭೌಮರೇ ಅದರ ಕ್ರಯವನ್ನು ನಿಶ್ಚಯಿಸಬಲ್ಲರು. ಈ ರತ್ನವನ್ನು ಯಾರು ಎಷ್ಟು ಪ್ರೇಮದಿಂದ ತಮ್ಮ ಮುಕುಟಗಳಲ್ಲಿ ಧರಿಸಲಪೇಕ್ಷಿಸಿದರೂ ಅದು ಅವರ ಮುಕುಟವನ್ನು ಸೇರದೆ ಕೇವಲ ಗುರುಪಾದಗಳಲ್ಲಿಯೇ ಅಲಂಕಾರವಾಗಿ ಕುಳಿತಿದೆ. ಆ ರತ್ನವಾವುದೆಂದರೆ "ಬಾರ್ಸಿಗ್ರಾಮದಲ್ಲಿ ಮೆರೆಯುವ ಶ್ರೀ|| ಷ|| ಬ್ರ|| ಶ್ರೀ ರಾಚಲಿಂಗಸ್ವಾಮಿಗಳು ಪರಾಂಡಕರ ಈ ಮಹನೀಯರೇ" ಈ ಮಹನೀಯರು ಮಾಡಿದ ಕಾರ್ಯಗಳು ಅಷ್ಟು ಇಷ್ಟೆಂದು ಹೇಳಲು ಸಾಧ್ಯವಿಲ್ಲ. ಇವರು ವೀರಶೈವರ ಉನ್ನತಿಗಾಗಿ ವಿಶೇಷ ಪ್ರಯತ್ನಪಟ್ಟು, ಬಾರ್ಸೀನಗರದಲ್ಲಿ ಶಾಲಿವಾಹನಶಕ ೧೮೩೩ರಲ್ಲಿ ಬೋರ್ಡಿಂಗನ್ನು ಸ್ಥಾಪಿಸಿದರು. ಈ ಪೂಜ್ಯರು ಆ ಬೋರ್ಡಿಂಗಿನ ಸಲುವಾಗಿ ಅನಂತ ಹಳ್ಳಿ, ಪಟ್ಟಣಗಳಲ್ಲಿ ಸಂಚರಿಸಿ ಹಣವನ್ನು ಸಂಚಯಿಸಿ ಆ ಬೋರ್ಡಿಂಗು ಚಿರಕಾಲ ಬಾಳುವಂತೆ ಮಾಡಿದರು. ಈ ಬೋರ್ಡಿಂಗಿನಿಂದ ಎಷ್ಟೋ ಜನರು ತಯಾರಾಗಿರುವುದಲ್ಲದೆ ತಯಾರಾಗುತ್ತಿರುವರು. ಇದೂ ಅಲ್ಲದೆ ಸ್ವತಃ ತಮ್ಮ ಮಠದಲ್ಲಿ "ವೈದಿಕಪಾಠಶಾಲೆ" ಯೊಂದನ್ನು ಸ್ವಂತ ಖರ್ಚಿನಿಂದಲೇ ನಡೆಯಿಸಿರುವರು. ಈ ಗುರುವರ್ಯರು ವೀರಶೈವರ ಉನ್ನತಿಗಾಗಿ ಪ್ರಥಮದಲ್ಲಿ "ವೀರಶೈವಕೇಸರಿ" ಎಂಬ ವೃತ್ತಪತ್ರವನ್ನು ಹೊರಡಿಸಿದರು. ಆ ಸಮಯದಲ್ಲಿ ಹೊಟ್ಟೆ ತುಂಬ ಅನ್ನವನ್ನು ತಿನ್ನದೆ ಎಲ್ಲಾ ಕಡೆ ಸಂಚರಿಸಿ ಆ ಪತ್ರಿಕೆಗೆ ಎಷ್ಟೋ ನಿಧಿಯನ್ನು ಕೂಡಿಸಿದರು. ನಮ್ಮ ವೀರಶೈವರ ದುರ್ದೈವದಿಂದ ಆ ವೃತ್ತಪತ್ರವು ಬಹು ದಿವಸ ಬಾಳದೆ ಕಾಲನ ವಶವಾಗಿ ಹೋಯಿತು. ಇವರು ನಿರಾಶರಾಗದೆ, ಧೈರ್ಯದಿಂದ ಪುನಃ ಅದೇ ಕಾರ್ಯವನ್ನೇ ನೆರವೇರಿಸಬೇಕೆಂಬ ಅಭಿಲಾಷೆಯಿಂದ "ವೀರಶೈವ ಸಜ್ಜನ" ವೃತ್ತಪತ್ರವನ್ನು ನಡೆಯಿಸಿದರು. ಈ ಪತ್ರಿಕೆಯ ದರಿದ್ರದಲ್ಲೂ, ಇವರಿಗಾದ ಪರಿಶ್ರಮವಂತೂ ಪ್ರತ್ಯಕ್ಷವಾದ್ದರಿಂದ ಬರೆಯಲು ಶಕ್ಯವಲ್ಲ. ಅಹೋರಾತ್ರಿ ಇವರಿಗೆ ಗುರುವರ್ಗದ ಉನ್ನತಿಯ ಬಲವಾದ ಚಿಂತೆ! ಈ ಗಡ್ಡಿನಗರದ ಸ್ವಾಮಿಗಳವರಿಗೆ ಬಂದ ದುಷ್ಪ್ರಸಂಗವನ್ನು ಪ್ರತ್ಯಕ್ಷ ತಮ್ಮ ದೇಹದ ಮೇಲೆ ಬಂದ ಕಷ್ಟವೆಂದು ತಿಳಿದು ಅದನ್ನು ನಿವಾರಿಸಲು ಹೆಣಗಿದರು. ಇವರ ಪರಿಶ್ರಮವನ್ನು ಹೇಳಲು ಶಕ್ಯವಲ್ಲ. ಕಷ್ಟನಷ್ಟಗಳನ್ನು ಅನುಭವಿಸಿದ ಸ್ವಾಮಿಗಳವರ! ಪರಾಂಡಕರ ಶ್ರೀಗಳವರ ವರ್ತನವನ್ನು ಅನುಸರಿಸುವವರು ನೋಡಿರಿ! ಈ ಪರಾಂಡಕರ ಶ್ರೀಗಳು ನಿಷ್ಠೆಯಿಂದ ಎಷ್ಟು ಕಷ್ಟಗಳು ಬಂದರೂ ಅವೆಲ್ಲವನ್ನೂ ಸಹಿಸುತ್ತಿರುವರು. ಅವರಿಗೆ ಬೇರೆ ಸಂಸಾರದ ಬಾಧೆ ಬಂಧನವೇ ಇಲ್ಲ. ನಮ್ಮ ಗುರುವರ್ಗದವರಿಗಾಗಿ ಈ ಮಹಾತ್ಮರು ಎಷ್ಟು ಕಷ್ಟವನ್ನನುಭವಿಸುತ್ತಿರುವರಲ್ಲ, ಅಯ್ಯೋ! ಗುರುವರ್ಗವೇ ಇನ್ನಾದರೂ ಈ ಪೂಜ್ಯರ ಕಷ್ಟವನ್ನು ಕಡಿಮೆ ಮಾಡಬಾರದೇ? ಅವರ ಉಪಕಾರವನ್ನು ಏನು ತೀರಿಸುವಿರಿ? ಅವರಿಂದಾದ ಉಪಕಾರವು ಗುರುವರ್ಗವನ್ನೆಲ್ಲಾ ಚಿರಋಣಿಯನ್ನಾಗಿ ಮಾಡಿದೆ. ಅವರಿಗೆ ವಯಸ್ಸು ವಿಶೇಷವಾಗಿದ್ದು ವಾರ್ಧಕ್ಯದ ಸಮಯವಿದ್ದರೂ, ತರುಣರಿಗಿಂತಲೂ ಹೆಚ್ಚಾಗಿ ಕಾರ್ಯಗಳನ್ನು ಈಗಲೂ ಮಾಡುತ್ತಿರುವರು. ವೃದ್ಧಪಿತಾಮಹರಾದ ಶ್ರೀಗಳನ್ನು ಸಲ್ಲಿಸಿ, ಅವರ ಆಜ್ಞೆಯನ್ನು ತರುಣರಾದ ನಾವು ಪಾಲಿಸುವುದು ವಿಹಿತವಲ್ಲವೇ? ಇಂಥ ಕಳಕಳಿಯ ಧರ್ಮಮೂರ್ತಿಯು ಮುಂದೆ ಸಿಗುವುದು ಕಷ್ಟವು! ಆದುದರಿಂದ ಈಗಲೇ ಆ ಪೂಜ್ಯರನ್ನು ಆರಾಧಿಸುವುದು ವಿಹಿತವಲ್ಲವೇ? ಮಹಾರಾಷ್ಟ್ರಭಾಗದಲ್ಲಿ ಇವರನ್ನು ಬಿಟ್ಟರೆ ಬೇರೆ ಇತರರಾದರೂ ಪಟ್ಟಾಧಿಕಾರಿಗಳು ಸಮಾಜಸೇವೆಯನ್ನು ಮಾಡುವರೇ ಇಲ್ಲವೆಂದು ಸ್ಪಷ್ಟ ಹೇಳುತ್ತೇನೆ. ಇವರು ಸ್ವಲ್ಪ ಅಭ್ಯಾಸವನ್ನು ಮಾಡಿದರೂ ತಮ್ಮ ಬುದ್ಧಿಯಿಂದ ಅನೇಕ ಕಾರ್ಯಗಳನ್ನು ಮಾಡಿ ತೋರಿಸುತ್ತಾರೆ. 'ಶಾಂತ್ಯಾದಿಮೂರ್ತಿ' ಇತ್ಯಾದಿ ಪದವಿಗಳನ್ನು ಬರೆದುಕೊಳ್ಳುವ ಮೂಲಿಯಮುಖಂಡರನ್ನು ಕರೆದುಕೊಂಡು ಮಾಡುವದೇನು? ಎಲ್ಲಾ ಪಟ್ಟಾಧಿಕಾರಿಗಳು ಅವಶ್ಯವಾಗಿ ಅವರ ಕಾರ್ಯಕ್ಕೆ ಕೈಹಾಕಬೇಕು. ಗುರುವರ್ಗದವರಿಂದಾದ ಅಪಮಾನವನ್ನು ನೋಡಲಾರದೆ ಅವರು ಸಹಿಸುವರು. ಇವರು ನಾನು ಅಧಿಕಾರಿಯಾಗಿದ್ದೇನೆಂಬ ಭಾವನೆಯನ್ನು ಅಳಿಸಿರುತ್ತಾರೆ. ಪ್ರತಿಯೊಂದು ಸಭೆಗಳಿಗೂ ಹೋಗುತ್ತಾರೆ. ಅಲ್ಲಿ ತಮ್ಮ ಗುರುವರ್ಗದ ಮೇಲ್ಮೆಗೆ ಬೇಕಾದ ಠರಾವುಗಳನ್ನು ಮಾಡಿಸುತ್ತಾರೆ. ಇವರಿಗೆ ಗರ್ವದ ಲೇಶವೂ ಇಲ್ಲ. ಗುರುಗಳಲ್ಲಿ ನನ್ನ ನಿನ್ನ ಪಾದಪೂಜೆಯಾಗಬೇಕೆಂದು ಹೊಡೆದಾಡುವದನ್ನು ಸಂಪೂರ್ಣ ಬಿಟ್ಟಿರುವರು. ಎಲ್ಲಿ ಗುರುವಿನ ಅಪಮಾನವಾಗುವದೋ ಅಲ್ಲಿ ಪ್ರಾಣವನ್ನು ಕೊಡಲು ಹಿಂಜರಿಯದೆ, ಗುರುವಿನ ಮಾನವನ್ನು ಉಳಿಸುವರು. ಇವರು ಸ್ತುತಿಪ್ರಿಯರಲ್ಲ, ಹಿಂದೆಗೆ ನಾಚುವವರಲ್ಲ, ಕೇವಲ ಕಾರ್ಯದಕ್ಷರು. 'ನಮಗೇಕೆಬೇಕು' ಅನ್ನುವವರು ಗುಪ್ಪಾದರಿ ಎನ್ನುವ ಮುಗ್ಗಲಗೇಡಿಗಳಲ್ಲ. ಎಲ್ಲಿಯೂ ಸ್ವತಃ ಮರ್ಯಾದೆಯನ್ನು ಕಾಯ್ದುಕೊಂಡು ಗುರುವಿನ ಮಾನವನ್ನು ಕಳೆಯುವವರಲ್ಲ. ಸ್ವಮಾನಭಂಗವಾದರೂ ಗುರುವಿನ ಮಾನವನ್ನು ಉಳಿಸಲು, ಎಷ್ಟು ಬೇಕಷ್ಟು ಸಾಹಸಮಾಡಲು ಹಿಂಜರಿಯುವವರಲ್ಲ. ಗುರುನಿಂದೆಯು ಇವರಿಗೆ ಎಷ್ಟೂ ಸಹನವಾಗುವದಿಲ್ಲ. ಇವರಿಗೆ ಗುರುಕುಲವೊಂದನ್ನು ಸ್ಥಾಪಿಸಬೇಕೆಂಬುದೊಂದು ದೊಡ್ಡ ಚಿಂತೆ! ಅಪ್ಪಣೆ? ಅದೊಂದು ದುರ್ಭಾಗ್ಯವಾಗಿದೆ. ಇವರು ಇನ್ನು ಅನಂತ ಕಾರ್ಯಗಳನ್ನು ಮಾಡಿದ್ದಾರೆ. ಮತ್ತು ಮಾಡುವವರಿದ್ದಾರೆ. ಈ ಮಹಿಮರ ವಿಷಯವನ್ನು ಬರೆಯಬೇಕಾದರೆ ದೊಡ್ಡ ಹೊತ್ತಿಗೆಯೇ ಆಗುತ್ತದೆ. ಅದಕ್ಕೀಗ ಸಮಯವಿಲ್ಲ. ಒಟ್ಟಿನ ಮೇಲೆ ನಾನು ಪ್ರಾರ್ಥಿಸುವದೇನೆಂದರೆ—ಮಹಾರಾಷ್ಟ್ರದಲ್ಲಿಯ ಗುರುವರ್ಗವು ಬಹಳ ನಿದ್ರೆಯಲ್ಲಿದೆ. ಅದರಿಂದ ಸರಾಂಡಕರ ಶ್ರೀಗಳವರ ಒಬ್ಬರೇ ಶ್ರಮಪಡುತ್ತಿರುವದರಿಂದ ಕರ್ನಾಟಕದಲ್ಲಿಯ ಗುರುವರ್ಗದವರು ಈ ಕಡೆಗೆ ವಿಶೇಷ ಲಕ್ಷ್ಯಕೊಟ್ಟು ಪರಾಂಡಕರ ಶ್ರೀಗಳ ಪರಿಶ್ರಮವನ್ನು ಸಲಿಸುವಂತೆ ಮಾಡಬೇಕೆಂದು ನನ್ನ ಪಟ್ಟಾಧಿಕಾರಿಗಳಲ್ಲಿ ಪ್ರಾರ್ಥನೆಯು. ಕರ್ನಾಟಕದಲ್ಲಿಯ ಜಾಗೃತ ಗುರುವರ್ಗದವರು ಮಹಾರಾಷ್ಟ್ರದಲ್ಲಿಯ ಗುರುವರ್ಗದವರನ್ನು ಎಬ್ಬಿಸುವಿರಾ? ಹಾಗಾದರೆ ಸರ್ವರೂ ಮರಾಠಿ ಓದಲಿಕ್ಕೆ ಬರದಿದ್ದರೆ ಭಾಷಾ ತಿಳಿಯದಿದ್ದರೂ ವೀರಶೈವ ಸಜ್ಜನ ವೃತ್ತಪತ್ರವನ್ನು ತರಿಸುವಿರಲ್ಲವೇ? ಇದು ಗುರುವರ್ಗದ ಸಲುವಾಗಿ ನಡೆಯುವ ಪತ್ರವು. ಪತ್ತಾ: ವೀರಶೈವ ಸಜ್ಜನ ಆಫೀಸ, ಪೋಸ್ಟ್ ಬಾರ್ಸಿ, ಡಿಸ್ಟ್ರಿಕ್ಟ್ ಸೋಲಾಪೂರ ಪಾರ್ಸಲ್ ಚಂದಾ ೨|| ರೂಪಾಯಿ

ಓರ್ವ ಸಮಾಜಸೇವಕ

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀಮದ್ವೀರಶೈವ ಫ್ರೀ ಬೋರ್ಡಿಂಗ್,

ಗುಳಬರ್ಗಾ

ನಮ್ಮ ಫ್ರೀಬೋರ್ಡಿಂಗಿನಲ್ಲಿ ಪ್ರವೇಶಿಸಲಿಚ್ಛೆಯುಳ್ಳ ವಿದ್ಯಾರ್ಥಿಗಳು ಆವರ್ತ್ಯಾದ ತಿಂಗಳಲ್ಲಿಯೇ ನಮ್ಮ ಬೋರ್ಡಿಂಗಿನ ಪ್ರವೇಶಪತ್ರಿಕೆಯ ಫಾರಮ್ಮನ್ನು ಪಡೆದು ಅರ್ಜಿಯನ್ನು ಬರೆದ ಕೊಳ್ಳಬೇಕು. ಕಮಿಟಿಯಿಂದ ಒಪ್ಪಿಗೆಯಾಗಿ ಬಂದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುವದು. ನಮ್ಮಲ್ಲಿ ೮ನೆಯ ಕ್ಲಾಸಿನಿಂದ ಮೊದಲ್ಗೊಂಡು ಅಭ್ಯಾಸಮಾಡುವವರಿಗೆ ಆಶ್ರಯವು ದೊರೆಯುತ್ತದೆ. ವಿದ್ಯಾರ್ಥಿಗಳು ನಿಜವಾಗಿ ಬಡವರಿದ್ದಲ್ಲಿ ಬರಬೇಕು. ದೇವರು ಅನುಕೂಲಿಸಿಕೊಟ್ಟಿರಲು ಕೃಪಣತನದಿಂದ ಬಡವರೆಂದು ಬಂದು ಸೇರಬಾರದು. ಫ್ರೀ ಬೋರ್ಡಿಂಗನ್ನು ಕೇವಲ ಬಡವರಿಗಾಗಿಯೇ ಸ್ಥಾಪಿಸಿದ್ದು, ಮಹಾಪ್ರಯಾಸದಿಂದ ಸಾಗಿಸುತ್ತೇವೆ. ಬೋರ್ಡಿಂಗಿಗೆ ಶಕ್ತಿ ಬರುವವರೆಗೂ ಸಣ್ಣ ಯೋಗ್ಯತಾನುಸಾರವಾಗಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತೇವೆ. ವಿದ್ಯಾರ್ಥಿಗಳು ಸಭ್ಯವರ್ತನದವರಾಗಿರಬೇಕು.

ಕಾರ್ಯದರ್ಶಿಗಳು,
ಮಲಕೂಡ ಹಿರೇಮಠದ ಶ್ರೀಗಳು

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ

ಕಳೆದವಾರದ ನಮ್ಮ ಪತ್ರಿಕೆಯಲ್ಲಿ ಶ್ರೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವವು ಧಾರವಾಡ ಡಿ|| ಬಂಕಾಪುರದಲ್ಲಿ ಇದೇ ತಿಂಗಳು ೨೫ನೆಯ ತಾರೀಖಿನದಿನ ನೆರವೇರುವುದೆಂದು ಪ್ರಕಟವಾಗಿತ್ತಷ್ಟೆ! ಕಾರಣಾಂತರದಿಂದ ಸದರಿ ಮಹೋತ್ಸವವು ಜೂನ್ ೧ನೆಯ ತಾರೀಖಿನದಿವಸ ನೆರವೇರುವುದೆಂದು ಬಂಕಾಪುರದ ವೀರಶೈವಮುಖಂಡರು ತಿಳಿಸುತ್ತಾರೆ.

ಪತ್ರವ್ಯವಹಾರ

ಬರಹಗಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

ವೀರಶೈವ ಸುಧಾರಣೆ.

(ಲೇಖಾಂಕ ೮)

ಲೇಖಕ—ಕಾವ್ಯತೀರ್ಥ, ಸಾಹಿತ್ಯಾಚಾರ್ಯ, ವೇದಾಂತರತ್ನ ಶ್ರೀ ಶ್ರೀ ಜಗದೀಶಶಿವಾಚಾರ್ಯ, ಬೃಹನ್ಮಠ, ಮುದೇನೂರು

ಮುಸ್ಲಿಮರ ಸಮೀರ ಯಾವುದೊಂದು ವಿಷಯವನ್ನು ಆಗೂ ಯಾವ ಮತದ ಗ್ರಂಥ ವಿಚಾರವಾಗಲೀ ನಡೆಸಿ ಆ ವಿಚಾರದಲ್ಲಿ ಉತ್ತೀರ್ಣರಾಗಿರುವುದು ತಮ್ಮ ಮನಸ್ಸಿಗೆ ತಿಳಿದಂತೆ ಆಚಾರ ಸ್ವಾತಂತ್ರ್ಯ, ಸಾಮಾನ್ಯತನವೇ ಅಲ್ಲ ಈಗ ನೋಡಿರಿ! ಜನಾಂಗ ಸಂಸ್ಕೃತವನ್ನರಿಯದ ನಮ್ಮ ಕೆಲವು ಅಣ್ಣಗಳು ಎಲ್ಲಿಯೋ ಎಲ್ಲಿಯೋ ಹುಡುಕಿಕೊಟ್ಟ ಕೆಲವು ಶಬ್ದಗಳನ್ನು ನೆನಪಿನಲ್ಲಿಟ್ಟುಕೊಂಡು, ಒಲ್ಲದವರ ಸ್ವರ್ಥವಾಗಿ ವಾದಿಸುತ್ತಿರುವರು. ನಮಗೇನೋ ಅವರು ವಾದಿಸುತ್ತಿರುವುದು "ಶಿವ ಶಿವ ತಿಳಿಯದ ವಿಷಯವನ್ನು ವಿಶದಪಡಿಸಲಿ" ಎಂಬುವುದಕ್ಕಾಗಿಯೇ ಅಂತಲೇ ಕಂಡುಬರುತ್ತದೆ. ಅಲ್ಲಿ ನೋಡೋಣ! ಅವರನ್ನು ಅಣ್ಣಗಳು ಹೀಗೆ ಹೇಳಿಕೊಂಡಿದ್ದಕ್ಕಾಗಿ ಯಾಕೆ ಕಷ್ಟಪಡಬೇಕು? ಸ್ವಾಮಿ! ನಾವು ಈ ವಿಷಯ ಗ್ರಹಿಸಿದೆವೋ? ಎಂದು ಕೇಳುವವರು ಎಷ್ಟು ಸುಲಭ ನೋಡಿ! ತಿಳಿದವರು ಉತ್ತರವನ್ನು ಹೇಳದೇ ಹೋದ ರೀತಿ ಒಬ್ಬನೇ ಒಂದೇ ಈ ವಿಷಯವನ್ನು ಅವಶ್ಯವಾಗಿ ತಿಳಿಸಿಕೊಂಡು ನಮ್ಮ ಅಣ್ಣಗಳು ಸಮಾಜದಲ್ಲಿ ಶಾಂತಿಯನ್ನು ತರಬಲ್ಲರೆಂದು ನಂಬುತ್ತೇನೆ.

ಇರಲೀ ನೋಡಿರಿ! ಪ್ರಸ್ತುತವಾದ ಜಂಗಮರು ಸನ್ಯಾಸಿಗಳಾದ ಮೇಲೆ, ಕರ್ಮವನ್ನು ಬಿಡುವರು ಎಂಬ ವಿಷಯವನ್ನು ಅರಿಯದೆ ಸಾಗುತ್ತಿರುವ "ಅತ್ಯಾಶ್ರಮ" ಅಥವಾ ಅತಿವರ್ಣಾಶ್ರಮಿ ಎಂಬ ಅಭಿಪ್ರಾಯ ಇವರಿಗೆ ಎಲ್ಲಿಂದ ಬಂತು ತಿಳಿಯದು? ಅವರ ಸಂಶಯವನ್ನು ಬಲ್ಲವರಿಂದ ಯಾಕೆ ತಿಳಿದುಕೊಳ್ಳಲಾರರು? ನಮ್ಮ ವೀರಶೈವರು ಅತಿವರ್ಣಾಶ್ರಮಿಗಳೆಂದು ಹೇಳುವ ಪ್ರಮಾಣಗಳು ಯಾವುವು ಎಂಬುದನ್ನು ಅವರು ಕೇಳಬೇಕು. ಶಾಸ್ತ್ರಪ್ರಮಾಣಗಳು ಕೇಳಿದ್ದೀರಾ! ಹಾಗಾದರೆ "ವೀರಶೈವರೆಲ್ಲರೂ ಅತಿವರ್ಣಾಶ್ರಮಿಗಳಾಗಿದ್ದಾರೆ" ಎಂದು ಹೇಳುವುದಕ್ಕೆ ಯಾವಾಗಲೂ ಅವರ ಮಾತಿನಲ್ಲೇ ಲಕ್ಷ್ಯಗೊಡಬೇಕು. ಇತ್ಯಾದಿ ವೀರಶೈವರಲ್ಲಿಯೂ ನಿವೃತ್ತಿಮಾರ್ಗದ ಲಿಂಗೈಕ್ಯ ಯತಿಗಳು ಇರುತ್ತಾರೆ. ಅಂದರೆ ವಾನಪ್ರಸ್ಥ, ಸನ್ಯಾಸಿ, ಅವಧೂತ ಮೊದಲಾದವರು ಅತಿವರ್ಣಾಶ್ರಮಿಗಳೆನಿಸುವರು. ಅಂದರೆ ಅವರು ಸಂಸಾರದ ಸಂಬಂಧವಿಲ್ಲದವರು. ಪ್ರವೃತ್ತಿಧರ್ಮವಾದ ಕರ್ಮಗಳಲ್ಲಿ ಇವರಿಗೆ ಅಧಿಕಾರವಿಲ್ಲವೆಂದು ಸರ್ವಜನವಿದಿತ. ಈ ವಿಷಯದಲ್ಲಿ ಧರ್ಮಶಾಸ್ತ್ರಕಾರರ—

ವಾನಪ್ರಸ್ಥ ಯತೀನಾಂತು ಗುರುತ್ವಂ ನೈವ ವಿದ್ಯತೇ ॥

ಎಂಬಲ್ಲಿ "ನಿರಾಚಾರ್ಯಗೋಷ್ಠಿಯಲ್ಲಿ" ಎಂಬ ಮಾತು ಹೇಳಿರುವರು ಅವರನ್ನಾಗಿ ವಾನಪ್ರಸ್ಥಾಶ್ರಮಿಯು, ಸನ್ಯಾಸಿಯೂ ಅಂತಿಕೊಳ್ಳುವ ಅತಿವರ್ಣಾಶ್ರಮಿ ಅಥವಾ ಅತ್ಯಾಶ್ರಮಿಗೆ ಗುರುತ್ವ ಇಲ್ಲವೆಂದು ಹೇಳಿದೆ. ಗುರುತ್ವವಿಲ್ಲವೆಂದು ಹೇಳುವುದರಿಂದ ವಾನಪ್ರಸ್ಥನಿಗೂ, ಸನ್ಯಾಸಿಗೂ ಗುರುತ್ವವಿಲ್ಲವೆಂದು ಇಲ್ಲಿಂದಲೇ ಸನ್ಯಾಸಾಶ್ರಮಿ ಇಂತಹವನಾಗಿದ್ದರೆ "ಅತ್ಯಾಶ್ರಮಿ (ವರ್ಣಾಶ್ರಮ ಗಳನ್ನು ದಾಟಿದವ) ಗೆ ಗುರುತ್ವವಿಲ್ಲವೆಂದಬಲ್ಲರೇಕೆ?"

ಎಂದಮೇಲೆ ವೀರಶೈವರೆಲ್ಲರೂ 'ಅತಿವರ್ಣಾಶ್ರಮಿಗಳು' (ವರ್ಣಾಶ್ರಮಗಳಿಲ್ಲದವರ) ಎಂಬ ಇವರ ಹೇಳಿಕೆಯಂತೆ ಶರಣು ಧರ್ಮಗುರುಗಳ ಗುರುತ್ವಕ್ಕೆ ಜಂಗಮರು ಅತ್ಯಾಶ್ರಮಿಗಳಾದರೆ ಹೇಳಬೇಕಾದೀತು. ಕೆಲವು ಕಡೆ ಅತಿವರ್ಣಾಶ್ರಮಿ "ಬ್ರಹ್ಮ ಸನ್ಯಾಸಿ" ಎಂದಾಗಿ ಹೇಳುವರಲ್ಲ. ಎಂದರೆ ಆ ವಿಷಯದ ಆ ಬಗ್ಗೆ ಅದರ ಪ್ರಯೋಗವು ವಿರೋಧವಾಗಿಲ್ಲವೆಂದು ತಿಳಿಯಬೇಕು.

ವೀರಶೈವರಲ್ಲಿ ಕೇವಲ ವಿರಕ್ತರು ಮಾತ್ರ ಅತಿವರ್ಣಾಶ್ರಮಿಗಳೆನಿಸುವವರೆಂದೇ, ಕ್ರಿಯಾಸಾರದಲ್ಲಿ—

ಯೇ ಪುನರ್ಗೃಹಿಣಸ್ತೇಷಾಮಾಚಾರಾ ಮುಖ್ಯ ಹೇತವೇ । ಎತ್ಯಾಶ್ರಮಿಣಾ ಆಚಾರಾ ನೈತೇಷಾಂ ಯುಜ್ಯತೇ ಪುನಃ ॥೭೩॥

(ಉಪದೇಶ ೫)

(ಗೃಹಸ್ಥಾಶ್ರಮಿಗಳಾದ ವೀರಶೈವರಿಗೆ ವರ್ಣಾಶ್ರಮಾಚಾರಗಳೇ ಮುಖ್ಯವಾದವುಗಳು, ಅತ್ಯಾಶ್ರಮಿಗೆ ಸಂಬಂಧಪಟ್ಟ ಆಚಾರಗಳು ಇವರಿಗೆ ಸಂಬಂಧಪಡುವುದಿಲ್ಲ) ಎಂಬುದಾಗಿಯೇ ವೀರಶೈವಗೃಹಸ್ಥನು ಅತಿವರ್ಣಾಶ್ರಮಿಯೆನಿಸಲಾರನು, ಎಂಬ ಸ್ವಾಯವನ್ನು ಸಾರಿದ್ದಾರೆ; ಎಂದಮೇಲೆ ವೀರಶೈವರೆಲ್ಲರೂ ಅತಿವರ್ಣಾಶ್ರಮಿಗಳೆಂದು ಹೇಳುವುದು ಸರ್ವಥಾ ಅಸಮಂಜಸವಲ್ಲವೇ?

ಇದೂ ಅಲ್ಲದೆ ವೀರಶೈವರ ಭಸ್ಮಧಾರಣವನ್ನು ಕ್ರಿಯಾಸಾರವು 'ಬೃಹಜ್ಜಾಬಾಲೋಪನಿಷದಿ ಎಂಬ ಭಸ್ಮಸ್ನಾನಸ್ನಾನ ಆರಂಭಿಸಿ 'ತ್ರೈವರ್ಣಿಕಾನಾಮಗ್ನಿಹೋತ್ರಾಗ್ನಿಜಂ ಗೃಹಸ್ಥಾನಾಂ ತದೇವ, ವಿವಾಹಾಗ್ನಿಜಂ ವಾ, ಬ್ರಹ್ಮಚಾರಿಣಾಂ ಸಮಿದಗ್ನಿಜಂ, ವಿರಕ್ತಾನಾಮತಿವರ್ಣಾಶ್ರಮಿಣಾಂ ವಿರಜಾನಲಜಂ, ಶೂದ್ರಾಣಾಂ ಶ್ರೋತ್ರಿಯಾಗಾರಪಚನಾಗ್ನಿಜಂ, ಅನ್ಯೇಷಾಂ ದಾವಾನಲಸಮುದ್ಭವಂ, ಯತೀನಾಂ ಸರ್ವತ್ರ ಸ್ಥಿತಂ, ಅತಿವರ್ಣಾಶ್ರಮಿಣಾಂ ತದೇವ, ತತ್ರಾಪಿ ವಿರಕ್ತಾನಾಂ ಸರ್ವತ್ರ ಸ್ಥಿತಂ, ಸರ್ವೇಷಾಂ ದೇವಾಲಯಸ್ಥಿತಮಿತಿ, ಶಿವಯೋಗಿನಾಂ ಶಿವಾಗ್ನಿಜಾ ಭೂತಿಃ" ॥

(ಬ್ರಾಹ್ಮಣಾದಿ ಮೂರುವರ್ಣದ ವೀರಶೈವರೂ, ಆಯಾ ವರ್ಣದ ಗೃಹಸ್ಥರ ಯಜ್ಞಾಗ್ನಿಯಿಂದ ಸಂಸ್ಕರಿಸಲ್ಪಟ್ಟ ವಿಭೂತಿಯನ್ನು, ಬ್ರಹ್ಮಚಾರಿಗಳು ಕಟ್ಟಿಗೆಯ ಬೆಂಕಿಯಿಂದ ಸಂಸ್ಕರಿಸಲ್ಪಟ್ಟ ವಿಭೂತಿಯನ್ನು, ವಿರಕ್ತರೆಂದು ಕರೆಯಲ್ಪಡುವ ಅತಿವರ್ಣಾಶ್ರಮಿಗಳಾದ ಸನ್ಯಾಸಿಗಳು ಗರಿಕೆಮುತ್ತುಗ ಬೆಂಕಿಯಿಂದ ಸಂಸ್ಕರಿಸಲ್ಪಟ್ಟ ವಿಭೂತಿಯನ್ನೂ, ವೀರಶೈವಮತದ ಶೂದ್ರರು ವೀರಮಾಹೇಶ್ವರರ ಒಲೆಯ ಬೆಂಕಿಯಿಂದ ಸಂಸ್ಕರಿಸಲ್ಪಟ್ಟ ವಿಭೂತಿಯನ್ನೂ) ಧರಿಸಬೇಕು, ಎಂಬುದಾಗಿ ಹೇಳಿರುವುದು ಕಂಡುಬರುವುದು. ಈ ರೀತಿಯ ಪ್ರಮಾಣದಲ್ಲಿ "ಅತಿವರ್ಣಾಶ್ರಮಿ" ಶಬ್ದವು ಬಂದಿದೆ, ಅದರ ಆ ಶಬ್ದವನ್ನು ಒಂದುಸಾರೆ ವಿರಕ್ತಶಬ್ದವನ್ನುಂಟುಮಾಡಿ ಯತಿಶಬ್ದವೆಂದೂ ಹೇಳಿದ ಕಾರಣದಿಂದ ವಿರಕ್ತರೇ ಯತಿಗಳೆಂದೂ, ಅತಿವರ್ಣಾಶ್ರಮಿಗಳೆಂದೂ ಹೇಳಬಹುದು ದಿಟವು. ಎಲ್ಲರೂ ಅತಿವರ್ಣಾಶ್ರಮಿಗಳಾದರೆ ಬೇರೆಬೇರೆ ಅಗ್ನಿಗಳ ವಿಚಾರಕ್ಕೆ ಇಲ್ಲಿ ಏನೂ ಕಾರಣವೇ ಇರುತ್ತಿರಲಿಲ್ಲ. ಇಲ್ಲಿ ಸ್ಪಷ್ಟವಾಗಿ ಬ್ರಾಹ್ಮಣಾದಿವರ್ಣಾಂತರವಾದ ನಾಲ್ಕು ವರ್ಣಗಳವರೂ ಬಂದಿದೆ. ಬ್ರಹ್ಮಚಾರಿ ಗೃಹಸ್ಥ ಎಂಬ ಎರಡು ಆಶ್ರಮಗಳ ಹೆಸರನ್ನು ತೆಗೆದುಕೊಂಡು ವಾನಪ್ರಸ್ಥ ಸನ್ಯಾಸಾಶ್ರಮಗಳ ಹೆಸರನ್ನು ಒಂದೇ ಶಬ್ದದಿಂದ ತೆಗೆದುಕೊಳ್ಳುವ ನಾನಾರ್ಥವಾಚಿ ಆ ಆಶ್ರಮಾರ್ಥಗಳನ್ನು ಹೇಳುವ ವಿರಕ್ತ, ಯತಿ, ಅತಿವರ್ಣಾಶ್ರಮಿ ಎಂಬ ಶಬ್ದಗಳಿಂದ ತೆಗೆದುಕೊಂಡಿರುವರು. ಅಂತು ಒಟ್ಟಿನಮೇಲೆ ವೀರಶೈವರಲ್ಲಿಯೂ ಬ್ರಾಹ್ಮಣಾದಿ ನಾಲ್ಕು ವರ್ಣದವರಿಗೂ, ಬ್ರಹ್ಮಚರ್ಯಾದಿ ನಾಲ್ಕು ಆಶ್ರಮದವರಿಗೂ ಭಸ್ಮಧಾರಣವು ಉಕ್ತವಾಗಿದೆ. ಇಲ್ಲಿ ವಾನಪ್ರಸ್ಥ, ಸನ್ಯಾಸಿಗಳೆಂಬ ಆಶ್ರಮಗಳಿಗೆ ಒಟ್ಟಾಗಿ ವಿರಕ್ತ, ಯತಿ, ಅತಿವರ್ಣಾಶ್ರಮಿ ಎಂಬ ಶಬ್ದಗಳು ಹೇಳಲ್ಪಟ್ಟಿರುವುದರಿಂದ ಅತಿವರ್ಣಾಶ್ರಮಿಶಬ್ದದಿಂದ ಕೇವಲ ವಿರಕ್ತರನ್ನೇ, ವಾನಪ್ರಸ್ಥ, ಸನ್ಯಾಸಾಶ್ರಮಿಗಳೇ ಅನುಸರಿಸಬೇಕು. ಸ್ಪಷ್ಟವಾಗಿ ತಿಳಿಯುತ್ತಿರುವುದು ಆಮೂಲಾಗ್ರದಿಂದ ವೀರಶೈವರಲ್ಲಿ ಯೋಗಿಗಳ ವಿರಕ್ತರೇ ವಿರಕ್ತತೆಯಾದವರೆ; ವರ್ಣಾಶ್ರಮಿಗಳು ಬೃಹ್ಮಚಾರಿ, ಗೃಹಸ್ಥಾಶ್ರಮಿಗಳು ಎಂದಿಗೂ ವರ್ಣಾಶ್ರಮಿಗಳಲ್ಲದ ಅತಿವರ್ಣಾಶ್ರಮಿಗಳೆಂದು ಹೇಳಿಸಿಕೊಳ್ಳಲಾರರು.

ವೀರಶೈವಮತದ ವಾನಪ್ರಸ್ಥ, ಸನ್ಯಾಸಾಶ್ರಮದವರು ಅತಿವರ್ಣಾಶ್ರಮಿಗಳೆನಿಸುವರೆಂಬ ಮಾತ್ರಕ್ಕೆ ಇತರ ಮತದವರಂತೆ ಕರ್ಮತ್ಯಾಗಿಗಳಾಗುವುದಕ್ಕೆ ಬರುವುದಿಲ್ಲ. ಏಕೆಂದರೆ ಶಿವಶೈವರಲ್ಲಿಯ ಆತಿ ಶಾಸ್ತ್ರಕಾರರೂ ಶಿವಯೋಗಶತಕ ಮೊದಲಾದ "ಜ್ಞಾನಾಸನಯುಕ್ತ ಯಾಚಾರವರ್ಜಿತಃ" ಅನಿಸಬೇಕೆಂಬ ಶಿವಸಿದ್ಧಾಂತಶಿಖಾಮಣಿ, ಶಂಕರಸಂಹಿತೆ ಮುಂತಾದ ಗ್ರಂಥಗಳು ಉದ್ಘೋಷಿಸುತ್ತಲಿವೆ.

ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ । ತಸ್ಮಾದಾಚಾರವಾನ್ ಜ್ಞಾನೀ ಭವೇದಾದೇಹಪಾತನಂ ॥ ಜ್ಞಾನೇ ಸಿದ್ಧೇಽಪಿ ವಿದುಷಾಂ ಕರ್ಮಾಪಿ ವಿನಿಯುಜ್ಯತೇ। ಫಲಾಭಿಸಂಧಿರಹಿತಂ ತಸ್ಮಾತ್ಕರ್ಮ ನ ಸಂತ್ಯಜೇತ್ ॥ ಉಪದೇಶಗುರುವನ್ಯೋನ್ಯಂ ಸಾಪೇಕ್ಷ್ಯ ಜ್ಞಾನಕರ್ಮಣೀ । ಫಲೋತ್ಪತ್ತೌ ವಿರಕ್ತಾನಾಂ ತಸ್ಮಾತ್ತದ್ದ್ವಯಮಾಚರೇತ್ ॥

ಹೀಗಿದ್ದೂ ವೀರಶೈವರಲ್ಲಿ ಎಷ್ಟೋ ಜನರು ನಾವು ವಿರಕ್ತರ, ನಾವು ವೈರಾಗಿಗಳೆಂದು ಹೇಳುತ್ತ ಗರುಕೆಟ್ಟ ನೋಕ್ಷವಾಯಿತ ನಾವೆ ಶಿವಲಿಂಗವನ್ನು ಪೆಂಪಿನಿಂದ ಕಳೆದು "ಆಸಾಧ್ಯವಾಸ್ಸಿ! ಎಂದು ಮಾರುಹಸಿದಾತವರ್ಣಗಳನ್ನು ಹಿಂದು ತಿರುಗುತ್ತಿದ್ದಾರೆ. ಇಂತಹ ಅಣ್ಣಾಜಿಗಳ ಒಂದು ಇದೀಗ ನಮ್ಮ ಕರ್ನಾಟಕದಲ್ಲಿ ದಿನೇ ದಿನೇ ಹೆಚ್ಚುತ್ತ ನಡೆದ ಇದಕ್ಕೆ ತಮ್ಮ ವಾರ್ಗಕ್ಕೆ ತರುವುದು ಸರ್ವಥಾ ವೀರಶೈವರ ಪ್ರತಿಭಾ ಕರ್ತವ್ಯವಾಗಿದೆ.

ಏನು ಸ್ವಾಮಿ! ಶಿವತತ್ವರತ್ನಾಕರದಲ್ಲಿ ಶಿವಲಿಂಗಧಾರಿಗಳೇ ಅತ್ಯಾಶ್ರಮಿಗಳೆಂದು ಬರೆದಿದೆಯಲ್ಲ! ಶೀವು ಅತ್ಯಾಶ್ರಮಿಗಳು ಎಲ್ಲರೂ ಆಗುತ್ತಿಲ್ಲವೆಂದು ಹೇಳುವಿರಲ್ಲ! **ಈ ವಿಷಯವನ್ನು ನಮಗೆ ಇನ್ನಷ್ಟು ಸ್ಪಷ್ಟವಾಗಿ ತಿಳಿಸಿರೆಂದು ಸದ್ಭಕ್ತರಾದವರು ಕೇಳಬಹುದು. ಇದೋ! ನೋಡಿರಿ! ಶಿವತತ್ವರತ್ನಾಕರನನ್ನು ಬರೆದ ಕೆಳದಿಸಾಲ ಬಸವಪ್ಪನಾಯಕರಿಗೆ ವೀರಶೈವರೆಲ್ಲರೂ ವರ್ಣಾಶ್ರಮಿಗಳಲ್ಲದ ಅತಿವರ್ಣಾಶ್ರಮಿಗಳೆಂಬುದು ಒಪ್ಪಿಗೆಯಾಗಿದ್ದ ಪಕ್ಷದಲ್ಲಿ—**

ಮರಸ್ಥಲಸಮುತ್ಪನ್ನಃ ಶಾಸ್ತ್ರಶೈವಾಗಮಾರ್ಥವಿತ್ ॥೫೨॥ ವಿಶುದ್ಧದೇಹಃ ಕುಲಜಃ ಶೀಲಾಚಾರಸಮನ್ವಿತಃ ॥೫೩॥ ವರ್ಣಾಶ್ರಮಕ್ರಿಯಾನಿಷ್ಠೋ ವೇದವಿದ್ಯಾಪ್ರಕೋವಿದಃ ॥೫೪॥ ಮರಸ್ಥಲವಿಹೀನಸ್ಯ ಗುರುತ್ವಂ ನಚೇಚ್ಛಿರ! ॥೬೨॥ ಗುರುಲಕ್ಷಣಮಿತ್ಯುಕ್ತಂ ಶಿಷ್ಯಲಕ್ಷಣಮುಚ್ಯತೇ । ದ್ವಿಜಾತಿರ್ವಾ ತಥಾ ಶೂದ್ರಃ ಸ್ವಸ್ವೋಕ್ತಾಚಾರವಾನ್ ಶುಚಿಃ ॥೬೩॥

ಶ್ವೇತಂ ರಕ್ತಂ ತಥಾ ಪೀತಂ ಕೃಷ್ಣಂ ಚೇತಿ ಚತುರ್ವಿಧಂ । ವಿಪ್ರಾದೀನಾಂ ತು ವರ್ಣಾನಾಂ ಲಿಂಗಂ ಧಾರ್ಯಂ ಯಥಾಕ್ರಮಂ ॥೭೭॥

(ಕಳೆಶ್ಲೋಲ ೯, ತರಂಗ ೭)

ಈ ಪ್ರಮಾಣಶ್ಲೋಕಗಳನ್ನು ಎಂದೂ ಎತ್ತಿಕೊಳ್ಳುತ್ತಲೇ ಇರಲಿಲ್ಲ. ವೀರಶೈವರಲ್ಲಿ ವರ್ಣಾಶ್ರಮಾಚಾರಗಳು ಬೇರೆ ಇರುವವೆಂಬುದು ಈ ಗ್ರಂಥಕರ್ತರಿಗೆ ತಿಳಿದಿದ್ದುದರಿಂದಲೇ ವೀರಶೈವರಲ್ಲಿ ವರ್ಣಾಶ್ರಮಗಳನ್ನು ಹೇಳುವ ಈ ಪ್ರಾಚೀನಪ್ರಮಾಣಗಳನ್ನು ಆಧಾರಕ್ಕಾಗಿ ತೆಗೆದುಕೊಂಡಿರುವರು. ಇನ್ನು ಶಿವಲಿಂಗಧಾರಿಗಳೇ ಅತ್ಯಾಶ್ರಮಿಗಳೆಂದು ಕೇವಲ ಪರಿಶೀಲನೆಗಾಗಿ ಆಚರಿಸುತ್ತಿರುವ ನಾವ, ನನ್ನ ಮಿಗಿಲಾದ ವೀರಶೈವರಲ್ಲಿರುವವರಿಂದ ಅವರಿಗೆ ಯೋಗ್ಯಗಳೇ—

ಲಿಂಗಂ ಶಿವೋ ಭವೇತ್ ಕ್ಷೇತ್ರಮಂಗಂ ಸಂಯೋಗೀ ಅಪ್ಯಯಃ । ತಸ್ಮಾಲ್ಲಿಂಗಾಂಗಸಂಯುಕ್ತೋ ಯೋಽಪಿ ಸೋಽತ್ಯಾಶ್ರಮೀ ಭವೇತ್ ॥

(ಶಿವತತ್ವರತ್ನಾಕರ ಕಲ್ಲೋಲ ೪, ತರಂಗ ೬)

ಮುಂತಾದ ಶ್ಲೋಕಗಳನ್ನು ತೆಗೆದುಕೊಂಡಿದ್ದಾರೆ. ಈ ಶ್ಲೋಕದಲ್ಲಿರುವುದು ಅಂಗಲಿಂಗಸಂಬಂಧವೇ ಅರ್ಥಾತ್ ಅಂಗಾಂಗ ಸಂಬಂಧ ವಿಷಯವೇ ಉಕ್ತವಾಗಿದೆ. ಶಿವಜೀವೈಕ್ಯವಿಷಯವಾದರೆ ಜ್ಞಾನಸ್ವರೂಪನಾದ ಶಿವನ ಅಂಗರಿಂದ ವಿಶೇಷವಾಗಿ ಜ್ಞಾನಮಾರ್ಗದಲ್ಲಿ ಸಂಚರಿಸುವ ಲಿಂಗದ ವಿಚಾರವೇ ವಾನಪ್ರಸ್ಥ, ಸನ್ಯಾಸಿ ಅವಧೂತ ಮುಂತಾದ ವರ್ಗದವರಿಗಾಗಿಯೇ ಈ ಶ್ಲೋಕವು ಹೇಳಲ್ಪಟ್ಟಿದೆ ಎಂದು ತಿಳಿಯಬೇಕು. ಈ ಶ್ಲೋಕದಲ್ಲಿಯ "ಯೋಽಪಿ" (ಯಾವನಾದರೂ) ಎಂಬ ಪದಗಳು (ವೀರಶೈವರಲ್ಲಿಯ ಬ್ರಾಹ್ಮಣಾದಿ ನಾಲ್ಕು ಜಾತಿಗಳ ಯಾವ ಸ್ವಾಮಿ, ಸನ್ಯಾಸಿಯಾದರೂ) ಎಂಬ ಅರ್ಥವನ್ನೇ ಕೊಡುತ್ತವೆ. ಅದುದರಿಂದ ಸಂಸಾರದಲ್ಲಿ ವೈರಾಗ್ಯ ಹುಟ್ಟಿ ಶಿವಜೀವೈಕ್ಯಜ್ಞಾನವನ್ನು ಪಡೆದು ಪಟ್ಟಕ್ಕೆ ಪಂಚಾಸ್ತ್ರ ನಿಷ್ಠೆಗೆ ಪಾತ್ರರಾಗಿ, ಕರ್ಮಲ ಛಿನ್ನ, ತಮಗೆಲ್ಲವನ್ನೂ ಕೈಕೊಂಡಿರುವ ಲಿಂಗಧಾರಿಗಳಾದ ನಾಲ್ಕು ಜಾತಿಯ ವೈರಾಗಿಗಳೂ ಅತ್ಯಾಶ್ರಮಿ ಅಥವಾ ಅತಿವರ್ಣಾಶ್ರಮಿಗಳೆಂದು ಕರೆಯಲ್ಪಡುವರು. ಇದರಲ್ಲೇನೂ ಸಂದೇಹವಿಲ್ಲ.

"ಲಿಂಗಂ ಶಿವೋ ಭವೇತ್" ಮುಂತಾದ ಈ ಶ್ಲೋಕವು ಕೇವಲ ನಿವೃತ್ತಿ (ಜ್ಞಾನ) ಮಾರ್ಗದ ಸನ್ಯಾಸಿ ಮುಂತಾದವರಿಗೆ ವಿಶೇಷವಾಗಿ ಅನ್ವಯಿಸುವುದೆಂದು ನೋಡಿ ಹೇಳಿರುವೆವಷ್ಟೆ! ಇಗೋ ನೋಡಿರಿ! ನಮ್ಮ ಮಾತು ಯೋಗ್ಯವಾಗಿಯೇ ಇದೆ, ಏಕೆಂದರೆ "ಲಿಂಗಂ ಶಿವೋ" ಮುಂತಾದ ಈ ಶ್ಲೋಕಕ್ಕಿಂತಲೂ ಮೊದಲು ಕೇವಲ ಜ್ಞಾನಮಾರ್ಗಿಗಳ ವಿಷಯವೇ ತುಂಬಿರುವ—

ಉದ್ಧೂಳನಂ ತ್ರಿಪುಂಡ್ರಂ ಚ ಜ್ಞಾನಾಂಗತ್ವೇನ ಕೇವಲಂ । ಆಮನಂತಿ ಮುನಿಶ್ರೇಷ್ಠಾಃ ಶ್ರೌತಾಸ್ತತ್ರ ವಾದಿನಃ ॥೧೨೨॥ ಅಯಮತ್ಯಾಶ್ರಮೋ ಧರ್ಮೋ ಯೈರನ್ನಮಾಚರಿತೋ ಮುದಾ । ತೇಷಾಮೇವ ಹಿ ಜ್ಞಾನಂ ಸಂಸಾರೋಚ್ಛೇದಕಾರಣಂ ॥೧೨೪॥

(ಶಿವತತ್ವರತ್ನಾಕರ, ಕಲ್ಲೋಲ ೪, ತರಂಗ ೬)

ಈ ಶ್ಲೋಕಗಳು ಹೇಳಲ್ಪಟ್ಟವೆ. ಅಲ್ಲಿಯೂ "ಅತ್ಯಾಶ್ರಮ" ಶಬ್ದವು ಸ್ವಚ್ಛವಾಗಿ ಬಂದಿರುತ್ತದೆ. ಇವುಗಳಿಂದ ವೀರಶೈವಮತದ ಸಾಧು ಸನ್ಯಾಸಿಗಳವರು, ಅತ್ಯಾಶ್ರಮಿ, ಅತ್ಯಾಶ್ರಮಿ, ಅತಿವರ್ಣಾಶ್ರಮಿಗಳೆಂದು ಹೇಳಿಸಿಕೊಳ್ಳುತ್ತಾರೆ ಎಂಬುದು ಮುಂತಾದವರೂ ಹೇಳಿಕೊಳ್ಳಬಹುದೆಂಬುದು ಸುಸ್ಪಷ್ಟವಾಗಿ ತಿಳಿಯಬರುವುದು ಒಟ್ಟಿನಮೇಲೆ "ಲಿಂಗಂ ಶಿವೋ" ಮುಂತಾದ ಶ್ಲೋಕವು ಕೇವಲ ಜ್ಞಾನಮಾರ್ಗದ ವೈರಾಗಿಗಳಿಗಾಗಿಯೇ ಹೇಳಲ್ಪಟ್ಟುದಾಗಿ ಸ್ಪಷ್ಟವಾಯಿತು.

ಇದು ಒಂದಿರಲಿ! ಅತಿವರ್ಣಾಶ್ರಮಿವಿಷಯದಲ್ಲಿ ಇನ್ನೊಂದು ಮಾತು ಸ್ವಾರಸ್ಯಕ್ಕೆ ಬಂದಿತು: ಶ್ರೀಕರ (ಶ್ರೀಕರಭಾಷ್ಯ) ಶ್ರೀಕರಭಾಷ್ಯಕಾರರಾದ ಶ್ರೀಪತಿಪಂಡಿತಾರಾಧ್ಯರು ಅತಿವರ್ಣಾಶ್ರಮಿಗೂ ವರ್ಣ ಮತ್ತು ಆಶ್ರಮಗಳನ್ನು ಹೇಳಿದ್ದಾರೆ. ಈ ಪೂರ್ವಾಚಾರ್ಯರು ಅತಿ ಎಂಬ ಉಪಸರ್ಗಕ್ಕೆ ಶ್ರೇಷ್ಠ ಅಥವಾ ಮೇಲಾದ ಎಂಬ ಅರ್ಥವನ್ನು ಸ್ವೀಕರಿಸಿ "ಅತಿವರ್ಣಾಶ್ರಮಿ" (ಸರ್ವೋತ್ತಮನಾದ ವರ್ಣಾಶ್ರಮಿಗಳುಳ್ಳವನು) ಎಂಬ ಅಭಿಪ್ರಾಯವನ್ನು

ಪ್ರಕಟಮಾಡುವದು ಈ ಶಿವಾಚಾರ್ಯವರ್ಯರ ಅಭಿಪ್ರಾಯವು ವರ್ಣಾಶ್ರಮಸಂಯುಕ್ತವಾದ ಸನಾತನ ವೀರಶೈವ ಸವರ್ಣಸಂದಿರಕ್ಕೆ ರಕ್ಷಕಲಶಪ್ರಾಯವಾಗಿದೆ ಎಂದು ಅತಿಹರ್ಷದಿಂದ ಹೇಳಬೇಕಾಗಿದೆ

ಇನ್ನು "ಅತೀತ್ಯ ಸ್ವಾಶ್ರಮಾನ್ ವರ್ಣಾನ್" ಮುಂತಾದ ಪ್ರಮಾಣಗಳಲ್ಲಿಯಾದರೋ ವರ್ಣಾಶ್ರಮಗಳಿಲ್ಲದವನು ಅತಿವರ್ಣಾಶ್ರಮಿಯೆಂದು ಪ್ರತಿಪಾದನೆಮಾಡಿಯೂ ಇಲ್ಲ, ಅಲ್ಲಿ ಕೇವಲ "ವರ್ಣಾಶ್ರಮಗಳನ್ನು ದಾಟಿದವನು" ಎಂಬ ಅರ್ಥವೇ ತೋರಿ ಬರುವುದರಿಂದ ನಾಲ್ಕು ಆಶ್ರಮಗಳನ್ನೂ ಅವುಗಳ ಆಚಾರಗಳನ್ನೂ ಚನ್ನಾಗಿ ಆಚರಿಸಿ ಅವಕ್ಕಿಂತಲೂ ಮುಂದೆ ಸಾಗಿದವನು ಎಂಬ ಅಭಿಪ್ರಾಯವೇ ಒಡೆದುಕಾಣುವುದು ವೀರಶೈವಮತದ ಇಂತಹ ಯತ್ಯಾಶ್ರಮವರ್ಣದವರು ಅತ್ಯಾಶ್ರಮಿಗಳೂ ಆಗ್ನಿಕೊಳ್ಳಲಿ, ಅತಿವರ್ಣಾಶ್ರಮಿಗಳೂ ಅನ್ನಿಸಿಕೊಳ್ಳಲಿ ನಮಗೂ ಬಾಧಕವಿಲ್ಲ

ನಾವು ನಮ್ಮ ಪೂರ್ವಾಚಾರ್ಯರ ಸಿದ್ಧಾಂತದಂತೆ ಅತಿವರ್ಣಾಶ್ರಮಿಶಬ್ದಕ್ಕೆ "ಸರ್ವೋತ್ತಮವಾದ ವರ್ಣಾಶ್ರಮಗಳುಳ್ಳವನು" ಎಂದು ಅರ್ಥವನ್ನು ಸ್ವೀಕರಿಸುತ್ತೇವೆ ಎಂದರೆ ವೀರಶೈವಮತದ ಮಾಹೇಶ್ವರ, ಸನ್ಯಾಸಿಗಳು ಪತಿತವರ್ಣಾಶ್ರಮಿಯುಳ್ಳವರಾಗಿರುವದರಿಂದ ಇತರ ಮತದವರಿಗಿಂತ ಉತ್ಕೃಷ್ಟವಾದ ವರ್ಣಾಶ್ರಮಗಳುಳ್ಳವರೆಂಬುದಾಗಿಯೇ ನಾವು ಹೇಳುತ್ತೇವೆ ಆದ್ದರಿಂದ ನಮ್ಮ ಆಗಮಗಳು ಅತಿವರ್ಣಾಶ್ರಮಿಶಬ್ದಕ್ಕೆ ವರ್ಣಾಶ್ರಮಗಳಿಲ್ಲದವನೆಂಬ ಅರ್ಥವನ್ನು ಮಾಡುವದಕ್ಕೆ ಇನ್ನು ಮುಂದೆ ಸರ್ವಥಾ ಪ್ರಯತ್ನಪಡದೆ ವೀರಶೈವಮತದ ಪೂರ್ವಾಚಾರ್ಯರ ಅಭಿಪ್ರಾಯದಂತೆ ಅತಿವರ್ಣಾಶ್ರಮಿಶಬ್ದಕ್ಕೆ ಸರ್ವೋತ್ತಮವಾದ ವರ್ಣಾಶ್ರಮಗಳುಳ್ಳವನು ಎಂಬ ಅರ್ಥವನ್ನೇ ಸ್ವೀಕರಿಸಿ ತಮ್ಮ ತಮ್ಮ ವರ್ಣಾಶ್ರಮೋಚಿತಗಳಾದ ಕರ್ಮಗಳನ್ನು ಆಚರಿಸುವದರಲ್ಲಿ ತತ್ಪರರಾಗಬೇಕೆಂಬುದಾಗಿ ನಾವು ನಮ್ರವಾದ ಮನಸ್ಸಿನಿಂದ ಸನ್ಮತಜನರನ್ನೇ ಪ್ರಾರ್ಥಿಸುತ್ತೇವೆ ಅಲ್ಲದೆ ನಮ್ಮ ವಾಚಕ ಮಹೋದಯರೂ ಈ ವೀರಶೈವ ವರ್ಣಾಶ್ರಮ ಸದ್ಧರ್ಮಪ್ರಕಾಶವನ್ನು ಕಣ್ಣಾರೆಕಂಡು, ನಿತ್ಯನೈಮಿತ್ತಿಕಗಳಾದ ತಮ್ಮ ವರ್ಣಾಶ್ರಮದ ಆಚಾರಗಳನ್ನು ಎಚ್ಚರದಿಂದ ನಡೆಯಿಸಿಕೊಂಡು ಬರುವವರಾಗಲೆಂದು ಬಯಸುತ್ತೇನೆ

(ಸಶೇಷ)

ಮಹನೀಯರ ಹಿತೋಕ್ತಿಗಳು

(೧) ನಮ್ಮ ಆರ್ಯಧರ್ಮದ ಪದ್ಧತಿಯ ಪ್ರಕಾರವಾಗಿ ಆಕಳು ನಮಗೆ ಅತ್ಯಂತ ಪೂಜನೀಯವಾದ ಪ್ರಾಣಿಯಾಗಿರುವುದು ಇಂಥ ಪಶುವಿನ ರಕ್ಷಣೆಯು ಮನುಷ್ಯನು ಪಾಲಿಸತಕ್ಕ ಸದಾಚಾರಗಳಲ್ಲಿ ಒಂದಾಗಿರುವುದು. ನಮ್ಮ ದೇಶದ ಮುಖ್ಯ ಜೀವನಾಧಾರವಾದ ವ್ಯವಸಾಯಕ್ಕೆ ಬೇಕಾಗುವ ರಾಸುಗಳನ್ನು ಕೊಡುತ್ತದೆ ತನ್ನ ಅಮೃತಮಯವಾದ ಹಾಲಿನಿಂದ ಪ್ರಾಣಿಗಳನ್ನು ಕಾಪಾಡುತ್ತದೆ ಅದರ ತುಪ್ಪ, ಗೋರೋಚನ, ಗಂಜಲ ಇವು ಅತ್ಯಂತ ಉಪಯುಕ್ತಗಳಾಗಿರುವುವು ಸಗಣಿಯಿಂದ ಗೊಬ್ಬರವೂ ಮತ್ತು ಪರಮಶ್ರೇಷ್ಠವೂ ಪವಿತ್ರದಾಯಕವೂ ಆದ ಭಸ್ಮವೂ ಆಗುವುದು ಇಂಥ ಗೋಮಾತೆಯ ಸೇವೆಯಿಂದಲೂ ದಾನದಿಂದಲೂ ನಮ್ಮ ಪೂರ್ವಿಕರು ಎಂತಹ ಪುಣ್ಯಫಲಗಳನ್ನು ಹೊಂದುತ್ತಾರೆಂಬ ವಿಷಯವು ಪುರಾಣೇತಿಹಾಸಗಳಲ್ಲಿ ಉಲ್ಲೇಖಿಸಿರುವುದು ಸರ್ವರಿಗೂ ವೇದ್ಯವೇ ಇರುವುದು ಅದರೆ ಇಂಥ ಪಶುವಿನ ಅನಾದರಣೆಮಾಡುವುದೂ, ಅದರ ಹತ್ಯಾಕಾರ್ಯವನ್ನು ನೋಡುವುದೂ ಅತ್ಯಂತ ಅಪ್ರಿಯಸ್ಕರವು ಏಸುಕ್ರಿಸ್ತನು ಜನ್ಮವಾದಾಗ ಒಂದು ಆಕಳು ಅವನ ಮೈಮೇಲೆ ಉಸಿರು ಬಿಡುತ್ತಾ ಅವನ ಶರೀರದಲ್ಲಿ ಉಷ್ಣತೆಯನ್ನು ಹುಟ್ಟಿಸಿ ಅವನನ್ನು ರಕ್ಷಿಸಿತೆಂದು ಸ್ವೀಡ ದೇಶದಲ್ಲಿ ಈಗಲೂ ಅಲ್ಲಿಯ ಜನರು ಕ್ರೈಸ್ತನ ಜನ್ಮದಿನ ಆಕಳುಗಳಮೇಲೆ ಬಹು ಪ್ರೀತಿಯನ್ನು ತೋರಿಸುತ್ತಿರುವರಂತೆ ಮತ್ತು ಹಿಂದೆಯಿದ್ದ ದಿಲೀಪನೆಂಬ ರಾಜನು ದೇವಲೋಕದ ಧೇನುವಿಗೆ ವಂದಿಸದೆ ಉಪೇಕ್ಷೆಮಾಡಿದಮಾತ್ರದಿಂದಲೇ ಅವನ ಸಂತತಿಗೇ ಕೊರೆಯಾಗಿಹೋಯಿತು ಆಮೇಲೆ ಅವನು ತನ್ನ ರಾಜ್ಯವೈಭವವನ್ನು ಒಂದುಕಡೆ ಮುದುರಿಟ್ಟು ಒಂದು ಧೇನುವಿನ ಉಪಾಸನೆಮಾಡಿದಮೇಲೆಯೇ ಅವನ ಪಾಪಫಲವು ಹಿಮ್ಮೆಟ್ಟಿತು ಮತ್ತು ಆ ದಿಲೀಪನು ತಾನು ಉಪೇಕ್ಷಿಸಿದ ಪಾಪಕ್ಷಾಲನಕ್ಕಾಗಿ ಒಂದು ಗೋವಿನ ರಕ್ಷಣೆಮಾಡುವುದಕ್ಕಾಗಿ ತನ್ನ ದೇಹವನ್ನೇ ಒಂದು ಸಿಂಹಕ್ಕೆ ಸೂರೆಗೊಟ್ಟನೆಂದು ರಘುವಂಶಕಾವ್ಯವು ಹೇಳುತ್ತದೆ ಮತ್ತು ಗೋರಿಮಹಮ್ಮದನು ಒಂದುಸಾರೆ ದಂಡೆತ್ತಿಬಂದಾಗ ರಜಪುತ್ರರ ಪರಾಕ್ರಮವನ್ನು ನೋಡಿ ಅವರೊಡನೆ ಹೋರಾಡಲಾರದೆ ಉಪಾಯದಿಂದ ಗೆಲ್ಲಬೇಕೆಂದು ತನ್ನ ಸೈನ್ಯದ ಸುತ್ತಲೂ ಆಕಳುಗಳನ್ನು ನಿಲ್ಲಿಸಿಕೊಂಡನಂತೆ ಆಗ ರಜಪೂತರು ಯುದ್ಧಮಾಡಿದರೆ ಗೋವಧೆಯಾಗುವದೆಂಬ ಪಾಪದ ಭೀತಿಯಿಂದ "ರಾಜ್ಯವು ಹೋದರೂ ಹೋಗಲಿ, ಅನಿತ್ಯವಾದ ರಾಜ್ಯಾಸೆಯಿಂದ ಯುದ್ಧವನ್ನು ಮಾಡಿ ಗೋವಧೆಯನ್ನು ಮಾಡುವುದಿಲ್ಲ" ವೆಂದು ಧರ್ಮವನ್ನು ರಕ್ಷಿಸಿಕೊಂಡು ರಾಜ್ಯವನ್ನು ಸೂರೆಗೊಟ್ಟರೆಂಬ ಇತಿಹಾಸವಿರುವುದು ಇವರು ಹೀಗೆ ಮಾಡಿದ್ದು ಅವರ ತ್ಯಾಗಬುದ್ಧಿಯನ್ನೂ ಅಹಿಂಸಾವ್ರತವನ್ನೂ, ಗೋವಿನ ಮಹತ್ವವನ್ನೂ ವ್ಯಕ್ತಪಡಿಸುವುದು ಆದ್ದರಿಂದ ಹಿಂದೂಧರ್ಮಾನುಯಾಯಿಯಾದ ಪ್ರತಿಯೋರ್ವನೂ ತನ್ನಿಂದಾದಷ್ಟು ಒಂದಲ್ಲೊಂದುಬಗೆಯಲ್ಲಿ ಗೋಸೇವೆಯನ್ನು ಮಾಡಿದ ಹೊರತು ತನ್ನ ಧಾರ್ಮಿಕಕರ್ತವ್ಯವು ಸಾಗಿದಂತಾಗಲಿಲ್ಲವೆಂಬ ಭಾವನೆಯನ್ನು ಹೊಂದಿ ಗೋರಕ್ಷಣೆಗಾಗಿ ತನ್ನ ತನುಮನಧನಗಳನ್ನು ಅರ್ಪಿಸುವನು ಅಸ್ತಿಕಮತಾನುಯಾಯಿಗಳಿಗೆ ಧರ್ಮವಾಗಿರುವುದು ವಾಚಕಮಹಾಶಯರೆ! ಈ ಪ್ರಾಂತದಲ್ಲಿ ಸರ್ವತ್ರ ಮಾಡಿಯುತ್ತಿರುವ ಪೂಜ್ಯ ಗೋಮಾತೆಯನ್ನು ಎತ್ತು ಕೋಣಗಳಂತೆ ವ್ಯವಸಾಯಕ್ಕೆ ಗಾಡಿಗಳಿಗೂ ಉಪಯೋಗಿಸುತ್ತಾರೆ ಶಾಂತಂ ಪಾಪಂ! ಈ ಕೃತ್ಯವನ್ನು ಯಾರುಮಾಡುವರೋ ಅವರ ಅವನತಿಯು ಖಂಡಿತವಾಗಿಯೂ ಆಗುವುದು ಅದರೆ ಈ ಕೃತ್ಯ ಜೀವಿಗೆ ಮುಂಬಯಿ, ದಿಲ್ಲಿ ಆಗ್ರಾ, ಕಾಶಿ, ಕಾಶ್ಮೀರ ಮೊದಲಾದ ಮುಖ್ಯವಾದ ಪಟ್ಟಣಗಳಲ್ಲಿ ಎಷ್ಟು ಮಹತ್ತರವಾದವುಗಳಿದ್ದವು ಗೋಶಾಲೆಗಳಿದ್ದವು ಶಿಷ್ಟಜನರು ಪ್ರತ್ಯಕ್ಷವಾಗಿಯಾಗಲಿ, ಇಲ್ಲವೆ ಪತ್ರಿಕೆಗಳಿಂದಾಗಲಿ ತಿಳಿದುಕೊಂಡರೆ ಅಂಥವರು ಎಂದೂ ಇವುಗಳ ಹೆಗಲಮೇಲೆ ನೊಗಗಳನ್ನು ಹಾಕರು! ಪ್ರೀತಿಯಿದ್ದರೂ ಹಿಂಸಿಸಬಾರದು

(೨) ವಾಚಕ ಮಹಾಶಯರೆ! ಮನುಷ್ಯನು ಪಾಲಿಸತಕ್ಕ ನಿಯಮಗಳಲ್ಲಿ ಕರ್ತವ್ಯದಕ್ಷತೆ ಎಂಬುದು ಅತಿ ಮಹತ್ವದ್ದಾಗಿರುವ ಒಂದು ಗುಣವಾಗಿರುವುದು ಕರ್ತವ್ಯದಕ್ಷತೆ ಎಂದರೆ ಸ್ವಾರ್ಥತ್ಯಾಗದಿಂದ ಎಂತಹ ಸಂದಿಗ್ಧತೆಯಲ್ಲಿಯೂ ಧರ್ಮಸಮ್ಮತವಾದ ಹಿಡಿದ ಕಾರ್ಯವನ್ನು ಕೈಬಿಡದೆ ಮಾಡುವಿಕೆ ಮತ್ತು ಧರ್ಮಸಮ್ಮತವಾದ ವಚನವನ್ನು ಪರಿಪಾಲನಮಾಡುವಿಕೆ ಎಂದು ಹೇಳಬಹುದು "ಜಗತ್ತಿನಲ್ಲಿ ಕೆಲಜನರು ನಾವು ಸುಸ್ಥಿತಿಯಲ್ಲಿರುವಾಗ ಕೊಡಬೇಕಾದ್ದನ್ನು ಕೊಡುವ ಪ್ರಸಂಗದಲ್ಲಿಯೂ, ದಾನಧರ್ಮ ಕೊಡುವಾಗಲೂ ಒಬ್ಬರಿಗೆ ಸಹಾಯಮಾಡುವ ಪ್ರಸಂಗದಲ್ಲಿಯೂ ವಚನಕೊಟ್ಟುಬಿಡುತ್ತಾರೆ ಆದರೆ ಅವರು ತಮ್ಮ ವಾಕ್ಯಪರಿಪಾಲನೆಮಾಡುವ ಪ್ರಸಂಗಬಂದಾಗ ಒಬಳೆ ಬಹಳ ಸಾತತನಾದಿ ಬಿಳಿಗಿರೆ ಪುರಾಣದಲ್ಲಿ ಎಲ್ಲ ಹೋದನೆಂಬ ಗಾದೆಯಂತೆ ಕರ್ತವ್ಯಭ್ರಷ್ಟರಾಗುತ್ತಾರೆ ಈ ವರ್ತನವು ಬಹು ಹೀನವೂ ನೀಚತರವೂ ಆಗಿರುವುದು ಇದು ಕಾರಣ ಹೀಗೆ ಮಾಡುವವನು ಸರ್ವತ್ರ ನಿಂದ್ಯನು. ಪ್ರಿಯಸಹೋದರರೇ! ತಮ್ಮ ವಚನ ಪರಿಪಾಲನೆಯನ್ನು ಮಾಡಿ ಕೀರ್ತಿಯನ್ನು ಪಡೆದಿರುವ ಕೆಲ ದಿವ್ಯಜ್ಯೋತಿಗಳ ಉದಾಹರಣೆಯನ್ನು ನೋಡಿರಿ! ಸತ್ಯದರ್ಶನಕ್ಕಾಗಿ ಸತ್ಯಹರಿಶ್ಚಂದ್ರನನ್ನು ನೋಡೋಣ! ಎಂದು ಪ್ರಸಂಗದಲ್ಲಿ— ರಾಜ್ಯವನ್ನಾದರೂ ಬಿಟ್ಟೇನು ಹೊರತು ತನ್ನ ಧರ್ಮವನ್ನು ಬಿಡೆನೆಂದು ವಿಶ್ವಾಮಿತ್ರರೆದುರಿಗೆ ಶ್ರೇಯಾಕಾಂಕ್ಷಿಯಾಗಿ ಆದವನು ಆ ಮಾತಿಗೆ ಸಿಕ್ಕಿಬಿದ್ದು ವಿಶ್ವಾಮಿತ್ರರು ಅವನ ರಾಜ್ಯವನ್ನು ಬೇಡಿದರು. "ಮಾತಾಪಿತರೆ ಹೋಯಿತು, ಮುಕ್ತಿ ದೊರೆತರೆ ಹೋಯಿತು" ಎಂಬ ಗಾದೆಯಂತೆ ಹರಿಶ್ಚಂದ್ರನು ತಾನು ಆಡಿದಂತೆ ನಡೆಯುವುದಕ್ಕೆ ಸಿದ್ಧನಾದನು ನಿಜವಾಗಿ ಅವನು ಆ ಅರ್ಥವನ್ನಿಟ್ಟುಕೊಂಡು ಮಾತಾಡಿರಲಿಲ್ಲ ಹೀಗೆಂದು ಹೇಳಿದರೆ ವಿಶ್ವಾಮಿತ್ರರು ಸುಮ್ಮನಾಗುತ್ತಿದ್ದರು. ಆದರೆ ಅವನ ಮಾತು ಸಟಿಯಾಗುತ್ತಿತ್ತು ಅವನು ತನ್ನ ಬಾಯಿಂದ ಹೊರಬಿದ್ದ ಮಾತನ್ನು ಉಳಿಸಿಕೊಳ್ಳುವ ಧರ್ಮಶ್ರದ್ಧೆಯುಳ್ಳ ರಾಜ್ಯವನ್ನೇ ತ್ಯಾಗಮಾಡಿದನು ಅವನಿಗೆ ತನ್ನ ಒಂದು ಮಾತಿನ ತೂಕವು ತನ್ನ ಸಮಸ್ತ ಭೂಮಂಡಲಾಧಿಪತ್ಯದ ತೂಕಕ್ಕಿಂತ ಹೆಚ್ಚು ನಡೆಸಿತು ಆ ಮೇಲೆ ಅವನು ವಚನವಿತ್ತಂತೆ ಸಾರೆ ಆ ವಿಶ್ವಾಮಿತ್ರರಿಗೇನೇ ಅಪರಿಮಿತ ದಕ್ಷಿಣಾದ್ರವ್ಯವನ್ನು ಕೊಡುವದಕ್ಕಾಗಿ ತನ್ನ ಧರ್ಮಪತ್ನಿಯನ್ನು ಸತ್ಪುತ್ರನನ್ನು ಮಾರಿದನಲ್ಲದೆ ತಾನೂ ಸಹ ಹೊಲೆಯನಲ್ಲಿ ಆಳಾದನು ಮತ್ತು ತಾನೇ ತನ್ನ ಹೆಂಡತಿಯನ್ನು ಕತ್ತಿಯಿಂದ ಕತ್ತರಿಸುವ ಭಯಂಕರ ಪ್ರಸಂಗವೂ ಬಂದಿತು ಆದರೂ ಅವನ ಧರ್ಮಶ್ರದ್ಧೆಯು ಹೀನವು ಕೂದಲಿನಷ್ಟು ಕೊಂಕಲಿಲ್ಲ ಆದರೆ ಅವನು ತನ್ನ ಒಂದು ಮಾತನ್ನು ವ್ಯರ್ಥವಾಗಗೊಟ್ಟಿದ್ದರೆ ಯಾವ ಸಂಕಟವೂ ಬರುತ್ತಲೇ ಇರಲಿಲ್ಲ ಇದು ಅವನಿಗೆ ತಿಳಿದಿದ್ದರೂ ಚಿಂತಾಮಣಿಯಂಥ ತನ್ನ ಧರ್ಮವನ್ನು ವಿಕ್ರಯಿಸಿ ಲೌಕಿಕಸಂಪತ್ತೆಂಬ ಗಾಜಿನಚೂರನ್ನು ಕೊಳ್ಳುವ ಯತ್ನವನ್ನೇ ಮಾಡಲಿಲ್ಲ ಧನ್ಯ! ಧನ್ಯ! ಸತ್ಯಹರಿಶ್ಚಂದ್ರ ನೀನೇ ಧನ್ಯನು!

ಮತ್ತು ಕರ್ಣನು ತನ್ನ ತಾಯಿಗೆ ಕೊಟ್ಟ ಬಾಣವನ್ನು ಪುನಃ ತೊಡುವುದಿಲ್ಲವೆಂದು ವಚನಕೊಟ್ಟ ಪ್ರಕಾರ ತನಗೆ ಅಪಜಯವಾಗುತ್ತಿದ್ದರೂ ಅರ್ಜುನನ ಮೇಲೆ ಎರಡನೇ ಸಾರೆ ಸರ್ಪಾಸ್ತ್ರವನ್ನು ಬಿಡದೆ ವಚನವನ್ನು ಪಾಲಿಸಿದನು ಒಂದು ಸಾರೆ ವೇಷಧಾರಿಯಾಗಿ ಇಂದ್ರನು ಬಂದು ಭಿಕ್ಷೆ ಕೇಳಿದಾಗ ನಿನಗೆ ಬೇಕಾದ್ದನ್ನು ಕೇಳಿಕೋ ಎಂದನು ಇಂದ್ರನು ಅವನ ವಜ್ರಕವಚವನ್ನು ಕೇಳಿದನು ಈ ದಾನದಿಂದ ತನ್ನ ಬಲಕುಂದುವದೆಂದು ತಿಳಿದಿದ್ದರೂ ಅದನ್ನು ಕೊಟ್ಟು ತನ್ನ ವಚನಪರಿಪಾಲನೆಮಾಡಿಕೊಂಡನು ಒಂದು ಸಾರೆ ಅರ್ಜುನನಿಗೂ ಕರ್ಣನಿಗೂ ಯುದ್ಧವು ನಡೆಯುವಾಗ ಕರ್ಣನ ರಥದ ಚಕ್ರವು ಕೆಸರಿನಲ್ಲಿ ಸಿಕ್ಕಿಹೋಗಿತ್ತು ಆಗ ಅವನು ಹೆಗಲುಕೊಟ್ಟು ರಥವನ್ನು ಎತ್ತುತ್ತಿರುವಾಗ ಶ್ರೀಕೃಷ್ಣನು ವೇಷಧಾರಿಯಾಗಿ ಬಂದು ಕರ್ಣಕುಂಡಲಗಳನ್ನು ಯಾಚಿಸಿದನು ಅವುಗಳನ್ನು ಧಾರೆಯೆರೆಯುವದಕ್ಕೆ ನೀರು ಇಲ್ಲದ್ದರಿಂದ ಮಹಾತ್ಮಾಗಿಯೂ ಧೀರನೂ ಆದ ಕರ್ಣನು ಕಠಾರಿಯಿಂದ ತನ್ನ ಹೊಟ್ಟೆಯನ್ನು ಬಗೆದು ಅಲ್ಲಿದ್ದ ಅಮೃತಕಲಶದ ನೀರಿನಿಂದ ಧಾರೆಯೆರೆದು ತನ್ನ ವಚನಪರಿಪಾಲನೆಮಾಡಿಕೊಂಡನು ಅನಂತ ಧನ್ಯವಾದಗಳು! ಹನುಮಂತನು ಚಂದ್ರಭಾನುವಿಗೆ ಮಾತುಕೊಟ್ಟ ಪ್ರಕಾರ ಪ್ರತ್ಯಕ್ಷ ತನ್ನ ಸ್ವಾಮಿಯಾದ ಶ್ರೀರಾಮಚಂದ್ರನ ಮೇಲೆ ಯುದ್ಧಮಾಡುವ ಪ್ರಸಂಗಬಂದರೂ ಹಿಂಜರಿಯದೆ ಯುದ್ಧಮಾಡಿ ತನ್ನ ವಚನವನ್ನು ಪರಿಪಾಲನೆಮಾಡಿದನು ಭೀಷ್ಮಾಚಾರ್ಯರು ತಮ್ಮ ತಂದೆಯಾದ ಶಂತನುಚಕ್ರವರ್ತಿಗೂ, ಯೋಜನಗಂಧಿಗೂ ಲಗ್ನವಾಗುವ ಪ್ರಸಂಗದಲ್ಲಿ "ನಾನು ಆಜನ್ಮ ಲಗ್ನವಾಗುವದಿಲ್ಲ. ಸಿಂಹಾಸನವನ್ನೇರುವದಿಲ್ಲ" ವೆಂದು ವಚನಕೊಟ್ಟದ್ದರಿಂದ ಕೊನೆಯವರೆಗೆ ತಂದೆ ಯವರ, ಚಿತ್ರಾಂಗದ ವಿಚಿತ್ರವೀರ್ಯರ ಪ್ರಸಂಗವಶಾತ್ ಕಾಶೀರಾಜನ ಮಗಳಾದ ಅಂಬಿಕೆಯನ್ನು ಲಗ್ನವಾಗುವಂತೆ, ಅವರ ಗುರುಗಳಾದ ಪರಶುರಾಮರು ಬಹಳವಾಗಿ ಹೇಳಲು ಒಪ್ಪಲಿಲ್ಲ ಈ ಸಂದರ್ಭದಲ್ಲಿ ಗುರುಶಿಷ್ಯರಿಬ್ಬರಿಗೂ ಇಪ್ಪತ್ತೊಂದು ದಿವಸ ಯುದ್ಧವಾಗಿ ಕೊನೆಗೆ ಭೀಷ್ಮಾಚಾರ್ಯರೇ ಜಯಶೀಲರಾಗಿ ತಮ್ಮ ವಚನಪಾಲಿಸಿದರು ಶಿವಿಚಕ್ರವರ್ತಿಯು ಪಾರಿವಾಳಕ್ಕೆ ವಚನ ಕೊಟ್ಟ ಪ್ರಕಾರ, ಬೇಡನಿಗೆ ಕೊಡುವುದಕ್ಕೆ ತನ್ನ ಕೈಕಾಲುಗಳನ್ನು ಕತ್ತರಿಸಿಕೊಂಡದಲ್ಲದೆ ಕೊನೆಗೆ ತನ್ನ ಶಿರಸ್ಸನ್ನೇ ಕತ್ತರಿಸಲಿಕ್ಕೆ ಸಿದ್ಧನಾಗಿ ತನ್ನ ವಚನಪರಿಪಾಲನೆಮಾಡಿಕೊಂಡನು ಇಂಥ ಪುಣ್ಯಜೀವಿಗಳು ಹೀಗೆ ಎಷ್ಟೋ ಆಗಿಹೋಗಿರುವರು ವಾಚಕ ಮಹಾಶಯರೇ ಅಂಥ ಮಹಾತ್ಮರುಗಳು ಈಗಬರುವರೆ! ಅವರೆ ಆತಿವಿರಳ! ಎಷ್ಟು! ವಚನಪಾಲನೆಯುಳ್ಳ ಮಹಾತ್ಮರು ಸಿಗುವರು! ಮೂಢಜೀವಿಗಳೇ! ಮೇಲ್ಕಂಡ ಮಹನೀಯರ ವಿಮರ್ಶನೆಯನ್ನು ನೋಡಿ ನಿಮ್ಮ ನಡೆನುಡಿಗಳನ್ನು ಸಧಾರಿಸಿಕೊಂಡು ಕರ್ತವ್ಯದಕ್ಷತೆಯನ್ನು ಮೈಗೂಡಿಸಿಕೊಳ್ಳುವಮತ್ತಬುದ್ಧಿಯೇ? ಸಂದಿಕಟ್ಟುವದಿಲ್ಲ ಆಸ ನಂದಿಗೆನಾದಿ ಬದುಕಿದವರಿಲ್ಲ

(೩) ಮನುಷ್ಯನು ತನ್ನ ಮುಖವನ್ನು ನೋಡುವ ಉದ್ದೇಶದಿಂದ ಕನ್ನಡಿಯನ್ನು ನೋಡುತ್ತಾನಷ್ಟೆ? ಹಾಗೆ ಅವನು ನೋಡುತ್ತಿರುವಾಗ ತನ್ನ ಮುಖವನ್ನು ಅದರ ಸ್ವರೂಪ ಆನಂದದಿಂದ ನೋಡಿದ್ದ ನೋಡುವದರಿಂದ ಕೈಯಲ್ಲಿರುವ ಕನ್ನಡಿಯನ್ನೇ ಮರೆತಿರುವನಂತೆ, ಮನುಷ್ಯರೂ ತಮ್ಮಲ್ಲಿರುವ ಆತ್ಮವನ್ನು ನೋಡಿಕೊಂಡು ಆತ್ಮಾನಂದದಲ್ಲಿಯೇ ತಲ್ಲೀನರಾಗಿ ದೇಹಭಾವನೆಯನ್ನು ಮರೆತರೆ ಅಂಥ ಸ್ಥಿತಿಗೇ 'ಸಮಾಧಿ' ಎನ್ನುವರು. ಬೀಗಿರುವ ಇತ್ತೀಚಿನಲ್ಲಿ ಎಂಟು ಅಕ್ಷರಗಳು ಎರಡೇ ಪ್ರಧಾನವೆಂದು ತಿಳಿದುಕೊಂಡು ಅವರ ಹಾಗೆ ಪಟ್ಟಣದಲ್ಲಿಯೇ ಮಿಶ್ರ ಮಾಡಿದ ಬಿ ಬರುತ್ತಲಿರುವಾಗ ಅದರ ಸ್ಥಿತಿಯೇ ಪರಮಶರಣಗಿ ಜನ್ಮತತ್ವ ಮರೆಯುವ ಹಾಗೆ ಮರಿಯ ಮಾಯದ, ಹೊರ ದಿವಸ ಸನ್ನಿಧಾನ ಸಂಸ್ಕೃತಿಗಳನ್ನು ಸ್ವಾರ್ಥದಲ್ಲಿ ಇದೇ ಅಜಮಿಳನ(?) ಬಿಟ್ಟು ಎಲ್ಲವೂ ಬರಿಯದಾದ ಮಹಿಮೆಗಳಲ್ಲಿ ಜಲದಾಗಿ ಬ್ರಹ್ಮಾಪಾದಿಗಳೂ... ಬ್ರಹ್ಮ ಹೋಗಲಾರದು, ಹೊರಗಿನ ಕೃತ್ಯಗಳನ್ನು ಮಾಡಿ, ಪಾಪವನ್ನು ಸಂಚಿತವಾಗಿಸಿ ತಂದ ವಾಚಕರೇ! ಈ ಸಂಸಾರಸ್ವರೂಪದ ನಿವಾರಣೆಗೆ ಉಪಕರಣವಿರುವುದು? ವರ್ತಮಾನಿಗೆ ಸನ್ನಿಹಿತನಾಗಿರುವ ಈ ಘೋರ ತುಕಡ ಹೃದಯದಲ್ಲಿ ಉತ್ತಮ ನಡತೆ ಹುಟ್ಟುವದೆಂದು ಹೇಗೆ? ಮತ್ತು ಇಂತಹ ರಾಕ್ಷಸ ರೂಪದವರಲ್ಲಿಯೂ ಮನುಷ್ಯರು ನೋಡಿಕೊಳ್ಳುವುದಾದರೂ ಸಾಧ್ಯವೆ? ಈ ಧೂರ್ತರು ತಮ್ಮ ಸ್ವಾರ್ಥಸಾಧನಕ್ಕಾಗಿ ಅಂಥ ಶ್ರದ್ಧಾಳುವಾದ ಹೊಯ್ದಿದ್ದಾರೆಂದು ಹೇಳುವ ಜನರು ದಾರಿಯಂತೆ ಗಟ್ಟಿಯಾಗಿ ಮಂತ್ರಗಳನ್ನು ಜಪಿಸುತ್ತ ಶಂಖ, ಜಾಗಟೆ, ಘಂಟೆಗಳ ನಾದದಿಂದ ಜೋರಾಗಿ ಆರತಿಗಳನ್ನು ಬೆಳಗುತ್ತಾ ಪೂಜಾವಿಧಾನಗಳನ್ನು ಮಾಡುತ್ತಾರೆ ಆದರೆ ಈ ಗಾವ ಬಾಗಿಲಿನಲ್ಲಿಯ ಪಕ್ಕ ಸಂಭಾವಿತರಾದ ನಡೆನುಡಿಗಳು ಅವರಲ್ಲಿ ಇರುವವರಿಗೆ ಮಾತ್ರ ಸರಿಹೋಗಬಹುದು ಆ ನಿರ್ವಾಣಿಕ್ಷೇತ್ರದ ಪವಿತ್ರಮೂರ್ತಿಗೆ ಖಂಡಿತವಾಗಿಯೂ ಒಪ್ಪಿಗೆಯಾಗುವುದಿಲ್ಲವು ಇವರ ಅಂಧಶ್ರದ್ಧೆಯ ಪೂಜೆಯ ಪ್ರತಿಫಲವು ಹ್ಯಾಗಾಗುವದೆಂದರೆ— ಮೂಕನು ಒಂದು ಸ್ವಪ್ನವನ್ನು ಹೇಳದಂತೆಯೂ, ಕಿವುಡನು ಕೇಳದಂತೆಯೂ, ಹೆಳವನು ಬರದಂತೆಯೂ ಹಸಿದ ಕುರುಡನು ಬಡಿಸಿದ್ದನ್ನು ನೋಡಿ ಬಹು ಪ್ರಶಂಸಿಸಿದಂತೆಯೂ, ಹೆಳವನು ಸಾಹಸದಿಂದ ಪಟ್ಟಣದಲ್ಲಿ ಹೋಗಿ ಕುಳಿತಂತೆಯೂ, ಹುಟ್ಟುಬಂಜೆಯು ಶಿಶುಗಳ ಪೋಷಣೆಯನ್ನು ಬಹು ಆದರದಿಂದ ನಡೆಸಿದಂತೆಯೂ ಹಾಸ್ಯಾಸ್ಪದವಾಗುವುದು ದೇವನ್ನ ಪ್ರಿಯಸಹೋದರ ಸಹೋದರಿಯರೇ! ನಾವು ಈ ಜಡಜಗತ್ತಿನ ಸಂಬಂಧಿಕರ ವಿಶ್ವಬಾಂಧವರ ಅವಿದ್ಯಾ ಸಕ್ತರು ಭಗವಂತನ ಕೃಪೆಗೂ ದೂರರಾಗಿದ್ದೇವೆ ಮುಂದೆ ನಮ್ಮ ಗತಿಯೇನೆಂದು ತಿಳಿದುಕೊಳ್ಳಬೇಡಿರಿ! ಆದರೆ ಭಗವಂತನ ಕರುಣಾಮೃತವರ್ಷವು ಬಹು ಅನಂತಕಾಲದಿಂದಲೂ, ಮುಂದೆ ಅನಂತ ಕಾಲದವರೆಗೂ ಧಾರೆಯಾಗಿ ಸುರಿಯುತ್ತಲೇ ಇರುವುದು ಯಾವಯಾವ ಪಾತ್ರೆಗಳ ಮುಚ್ಚಳಗಳು ತೆರೆದು ಸಿದ್ಧವಾಗಿರುವವೋ ಅವುಗಳು ಕ್ಷಣಮಾತ್ರದಲ್ಲಿ ತುಂಬಿಕೊಳ್ಳುವುವು. ಆದ್ದರಿಂದ ಮೊದಲನೆಯದಾಗಿ ನಿಮ್ಮನಿಮ್ಮ ಹೃದಯಪಾತ್ರೆಗಳನ್ನು ಸತ್ಕಾರ್ಯದಿಂದಲೂ ತೊಳೆದು ಶುದ್ಧಿಗೊಳಿಸಿಕೊಳ್ಳತಕ್ಕದ್ದು ನಿಮ್ಮ ಮುಖ್ಯವಾದ ಕರ್ತವ್ಯವು! ಆದಿಯಿಂದ ಪೂರ್ವಜನ್ಮ ಸಾಯುಕ್ತರೊಡನೆಯೇ ಭಗವಂತನು ಬಳಗದವನು, ಒಡನೆಯೇ ಪ್ರಕಟನಾಗುವನು, ಈ ವಿಷಯದಲ್ಲಿ ಖಂಡಿತವಾಗಿಯೂ ಸಂಶಯವಿಲ್ಲ "ವಿಶ್ವಾಸೋ ಫಲದಾಯಕಃ" ಎಂಬ ವಾಕ್ಯದಂತೆ ವಿಶ್ವಾಸವಿಟ್ಟು ನಡೆಯುತ್ತೀರಿ ಆದರೆ - ಮರಳಾಗಿ ಹೋಗುವುದು, ಭಯಪಡಬೇಡಿರಿ!!! ಯಾರೋ ಆಗಲಿ ದಾರಿಯಲ್ಲಿ ಹೋಗುವಾಗ ಉದ್ದೇಶಪೂರ್ವಕವಾಗಿ ದಾರಿಯಲ್ಲಿ ಬಿದ್ದಿರುವ ಸಗಣಿಯನ್ನು ತುಳಿದು ಅದನ್ನು ತೊಳೆದುಕೊಳ್ಳುವ ಶ್ರಮವನ್ನು ತಗೆದುಕೊಳ್ಳುವುದಕ್ಕಿಂತಲೂ ಬದಿಯಾಗಿ ಹೋಗುವುದು ಸರಿಯಲ್ಲವೇ? ಇದು ವಿವೇಕಿಗಳ ಲಕ್ಷಣವು

(ಸಶೇಷ)

ಆರ್. ಮಲ್ಲಿಕಾರ್ಜುನಾರಾಧ್ಯ,
ಶಿವಮೊಗ್ಗ.

ಚಂದಾದಾರರಲ್ಲಿ ವಿಜ್ಞಾಪನೆ

[illegible]

ಪಂಚಾಚಾರ್ಯಪ್ರಭಾ

[illegible]

ಸೂತಕ ವಿಚಾರ.

ಪ್ರಥಮ ಪ್ರಾರಂಭದ ದಿವಸದಲ್ಲಿ ಯಾಗ ವನ್ನು ಮಾಡುವುದಕ್ಕಾಗಿ ದೀಕ್ಷೆಯನ್ನು ವಹಿಸಿ ಧರ್ಮಪತ್ನೀಯುತನಾಗಿ ಯಜ್ಞಾರಂಭವನ್ನು ಮಾಡಿದ ಕಾಲದಲ್ಲಿ ಅಂಥ ಯಜ್ಞಕರ್ತನ ಪತ್ನಿಗೆ ರಜಸ್ವಲಾದಿ ಸೂತಕಗಳು ಒದಗಿದರೂ ಪ್ರಾರಂಭಿಸಿದ ಯಜ್ಞಕ್ರಿಯೆಯನ್ನು ನಿಲ್ಲಿಸಲು ಅವಕಾಶವಿಲ್ಲದಿರುವಂತೆ ದೀಕ್ಷಾನ್ವಿತೆಯಾದ ವೀರಶೈವ ಸ್ತ್ರೀಯರು ಯಾವಜ್ಜೀವವೂ ಇಷ್ಟಲಿಂಗಧಾರಣೆಯೆಂಬ ಮಹಾಯಾಗವನ್ನು ಆರಂಭಮಾಡಿರುವರಾದ್ದರಿಂದ ಮಧ್ಯಕಾಲದಲ್ಲಿ ರಜಸ್ವಲಾದ್ಯಶೌಚಗಳು ಒದಗಿದರೂ ಲಿಂಗಪೂಜೆಯನ್ನು ಬಿಡಲಿಕ್ಕೆ ಬರುವುದಿಲ್ಲ.

ಸ [illegible] ನಿಧಿಯ ॥
[illegible]

ಇತ್ಯಾದಿ ಶಿವಾಗಮೋಕ್ತಿಗಳು ಈ ವಿಷಯದಲ್ಲಿ ವಿಶೇಷವಾಗಿ ಪ್ರವರ್ತಿಸುವವು. ಇದಲ್ಲದೆ ಯಜಮಾನನು ತನ್ನ ಕನ್ಯೆಯನ್ನು ಅಷ್ಟವರ್ಷಾ ಭವೇತ್ಕನ್ಯಾ ಎಂಬುದರಂತೆ ಎಂಟು ವರ್ಷದ ಮೇಲೆ ಋತುಮತಿಯಾಗುವುದರೊಳಗಾಗಿ ವಿವಾಹವನ್ನು ಮಾಡಬೇಕು. ಋತುಮತಿಯಾದ ಬಳಿಕ ವಿವಾಹಮಾಡುವುದು ದೋಷವಹವಾದುದೆಂದು ಧರ್ಮಶಾಸ್ತ್ರವಿದ್ದರೂ ಕನ್ಯೆಯ ತಂದೆಯು ಬಡವನಾದುದರಿಂದಲೋ ಅಥವಾ ಇನ್ನಾವ ಪ್ರತಿಬಂಧಕದಿಂದಲೋ ಹನ್ನೆರಡು ವರ್ಷಗಳವರೆಗೂ ಮದುವೆಯನ್ನು ಮಾಡದೆ ಸುಮ್ಮನಿದ್ದು ರಜಸ್ವಲೆಯಾಗುವ ಸಮಯದಲ್ಲಿ ವಿವಾಹವನ್ನು ಮಾಡಬೇಕೆಂದು ಸಂಕಲ್ಪಿಸಿ ಮಾಂಗಲ್ಯಧಾರಣಾದಿ ಕಾರ್ಯಗಳೆಲ್ಲವೂ ಮುಗಿದಮೇಲೆ ಆ ಕನ್ಯೆಯು ಋತುಮತಿಯಾದಳೆಂದು ತಿಳಿದುಬಂದರೆ—

ವಿವಾಹೇ ವಿತತೇ ತಂತ್ರೇ ಹೋಮಕಾಲ ಉಪಸ್ಥಿತೇ ।
ಕನ್ಯಾಮೃತುಮತೀಂ ದೃಷ್ಟ್ವಾ ಕಥಂ ಕುರ್ವಂತಿ ಯಾಜ್ಞಿಕಾಃ ॥

ಎಂಬ ಉಕ್ತಿಯಂತೆ ಯಜ್ಞಕರ್ತನು ವಿವಾಹಾಂಗಭೂತವಾದ ಹೋಮವನ್ನು ಮಾಡಬೇಕೋ ಅಥವಾ ಬಿಡಬೇಕೋ ಎಂದು ಆಕ್ಷೇಪವುಂಟಾಗಲಾಗಿ, ಋತುಮತಿಯಾದ ಆ ಕನ್ಯೆಯನ್ನು—

“ ಪವಿತ್ರಾಂ ಇಮಾ ಆಪೋ ಹವಿಷ್ಮತೀಃ ದೇವೀರಧ್ವರಃ ।

ಎಂಬ ಮಂತ್ರದಿಂದ ಸ್ನಾನಮಾಡಿಸಿ ಶುದ್ಧವಸ್ತ್ರಗಳಿಂದಲಂಕರಿಸಿ,

ಯುಂಜಾನಃ ಪ್ರಥಮಂ ಮನಃ”

ಎಂಬ ಮಂತ್ರದಿಂದ ಎರಡಾವರ್ತಿ ಆಹುತಿಯನ್ನು ಕೊಡಿಸಬೇಕೆಂದು ಭಟ್ಟೀಯ ವಿವಾಹಖಂಡದಲ್ಲಿ ನಿರ್ಣೀತವಾಗಿದೆ. ಇದರಿಂದ ವಿವಾಹದೀಕ್ಷೆಯನ್ನು ಹೊಂದಿದವರಿಗೆ ಮಧ್ಯಕಾಲದಲ್ಲಿ ಒದಗಿದ ರಜಸ್ವಲಾದ್ಯಶೌಚದೋಷಗಳಿಲ್ಲವೆಂದು ಸ್ಪಷ್ಟವಾಗುತ್ತದೆ.

[illegible] ಪ್ರಸಕ್ತ [illegible] ।
[illegible] ॥

ಇತ್ಯಾದಿ ಧರ್ಮಶಾಸ್ತ್ರವಾಕ್ಯಗಳ ಅರ್ಥದಿಂದ ಗೃಹಯಜ್ಞಾದಿಗಳನ್ನು ಮಾಡತಕ್ಕ ಋತ್ವಿಜರನ್ನು ವರಿಸುವುದು, ಪ್ರಾರಂಭವು, ಚಾಂದ್ರಾಯಣ, ತೀರ್ಥಯಾತ್ರೆ, ಲಿಂಗಧಾರಣ, ಲಿಂಗಪೂಜಾದಿವ್ರತಗಳಲ್ಲಿಯೂ ಪೌಂಡರೀಕಾದಿ ದೀರ್ಘಯಜ್ಞಗಳಲ್ಲಿಯೂ ಸಂಕಲ್ಪವು ಪ್ರಾರಂಭವು, ಮದುವೆ ಮುಂತಾದ ಕಾರ್ಯಗಳನ್ನು ನಡೆಯಿಸುವಲ್ಲಿ ನಾಂದೀಮುಖವೇ ಪ್ರಾರಂಭವು, ಶ್ರಾದ್ಧಕರ್ಮದಲ್ಲಿ ಪಾಕಪರಿಗ್ರಹವೇ ಪ್ರಾರಂಭವು. ಹೀಗೆ ತಿಳಿಯತಕ್ಕ ಇವನ್ನು ಪ್ರಾರಂಭಿಸಿದ ಮೇಲೆ ಅಶೌಚಗಳು ಒದಗಿದರೂ ತಾವು ಪ್ರಾರಂಭಿಸಿದ ಆಯಾ ಗೃಹಯಜ್ಞಾದಿ ಕರ್ಮಗಳನ್ನಾಗಲಿ, ಚಾಂದ್ರಾಯಣ, ಲಿಂಗಧಾರಣ, ಲಿಂಗಪೂಜಾದಿವ್ರತಗಳನ್ನಾಗಲಿ ಶ್ರಾದ್ಧಾದಿಗಳನ್ನಾಗಲಿ ಬಿಡಕೂಡದು. ಹೀಗೆ ದಾನ ದಾನಗಳು [illegible] ಸಂದರ್ಭಗಳಲ್ಲಿ ಸೂತಕಗಳು ಎಲ್ಲಿಯೂ ಸಂಕೋಚಮಾಡಲ್ಪಟ್ಟಿರುವುದನ್ನು ಬಹಳವಾಗಿ ನೋಡತಕ್ಕದ್ದಾಗಿದೆ. ಆದುದರಿಂದ—

[illegible] ।
[illegible] ಲಿಂಗಾಶ್ರಯಮಾಗತಃ ॥

ಎಂಬ ಲಿಂಗಪುರಾಣಪ್ರಮಾಣಬಲದಿಂದ ಗುರುವು ಸ್ಥೂಲಸೂಕ್ಷ್ಮಕಾರಣಶರೀರಗಳಲ್ಲಿರುವ ಆಣವಾದಿ ಮಲಗಳನ್ನು ವೇಧಾ ಮಂತ್ರ ಕ್ರಿಯಾ ಎಂಬ ಮೂರು ದೀಕ್ಷೆಗಳಿಂದ ನಾಶಗೊಳಿಸಿ ಇಷ್ಟ ಪ್ರಾಣ ಭಾವ ಎಂಬ ಮೂರು ಲಿಂಗಗಳನ್ನು ಧಾರಣ ಮಾಡಿ

[illegible] ಜಯ ।
[illegible] ಪೂಜಯ ॥

ಆಯುಷ್ಮಾನ್ ಶಿಷ್ಯ! ತ್ವಮ್ ಈ ಇಷ್ಟಲಿಂಗವನ್ನು ನಿನ್ನ ಶರೀರವಿರುವವರೆಗೂ ಅಗಲಿರಬೇಡ, ಪ್ರತಿನಿತ್ಯವೂ ಸ್ನಾನದಿಂದ ಪರಿಶುದ್ಧನಾಗಿ ನಿನ್ನ ಎಡಹಸ್ತದಲ್ಲಿರಿಸಿ ವಿಧಾನದಿಂದ ಪೂಜಿಸು, ಎಂದು ಒಲವಿನ ಅನುಜ್ಞೆಯನ್ನಿತ್ತಿರುತ್ತಾನೆ.

[illegible] ಪ್ರಾಣ [illegible] ।
[illegible] ಸಂತ್ಯಜೇತ್ ॥

ಎಂದು ಸ್ಕಾಂದಾದಿಪುರಾಣಗಳೂ ಸಹ ಇದೇ ಅರ್ಥವನ್ನು ವಿಶೇಷವಾಗಿ ಅನುವಾದಮಾಡುತ್ತಲಿವೆ. ಮತ್ತು ರೇಣುಕಭಗವತ್ಪಾದಾಚಾರ್ಯರು ಲಿಂಗಧಾರಣಸ್ಥಲದಲ್ಲಿ ಗುರುವು ಶಿಷ್ಯನನ್ನು ಶಿವದೀಕ್ಷೆಯಿಂದ ಸಂಸ್ಕರಿಸಿ ಆ ಶಿಷ್ಯನ ಪ್ರಾಣವನ್ನು ಲಿಂಗದಲ್ಲಿ ಸಂಯೋಜಿಸಿ ಆ ಲಿಂಗವನ್ನು ಪ್ರಾಣದಲ್ಲಿ ಸಂಯೋಜಿಸಿ ಶಿವಲಿಂಗವನ್ನು ಅನುಗ್ರಹಿಸಿ ಯಾವಜ್ಜೀವವೂ ಅಂಗದಿಂದ ಶಿವಲಿಂಗವಿಯೋಗವಾಗಬಾರದೆಂದೂ ಪ್ರತಿದಿವಸವೂ ಪೂಜಿಸುತ್ತಿರಬೇಕೆಂದೂ ಪ್ರಮಾದದಿಂದ ಇಂಥ ಶಿವಲಿಂಗವು ಅಂಗದಿಂದ ಅಗಲುವುದಾದರೆ ತನ್ನ ಪ್ರಾಣವನ್ನು ಬಿಡಲು ಸಿದ್ಧನಾಗಿರಬೇಕೆಂದೂ ಆಗಸ್ತ್ಯರಿಗೆ ಬೋಧಿಸಿರುತ್ತಾರೆ.

ಶಿಷ್ಯಸ್ಯ ಪ್ರಾಣಮಾದಾಯ ಲಿಂಗೇ ತತ್ರ ನಿಧಾಪಯೇತ್ ।
ಲಿಂಗಂ ತಸ್ಯ ತು ಪ್ರಾಣೇ ಸ್ಥಾಪಯೇದೇಕಭಾವತಃ ।
ಏವಂ ಕೃತ್ವಾ ಗುರುರ್ಲಿಂಗಂ ಶಿಷ್ಯಹಸ್ತೇ ನಿಧಾಪಯೇತ್ ।
ಪ್ರಾಣವದ್ಧಾರಣೀಯಂ ತತ್ ಪ್ರಾಣಲಿಂಗಮಿದಂ ತವ ।
ಕದಾಚಿತ್ಕುತ್ರಚಿದ್ವಾಪಿ ನ ವಿಯೋಜಯ ದೇಹತಃ ।
ಯದಿ ಪ್ರಮಾದಾತ್ಪತಿತೇ ಲಿಂಗೇ ದೇಹಾನ್ನಿಪಾತಲೇ ।
ಪ್ರಾಣಾನ್ ವಿಮುಂಚ ಸಹಸಾ ಪ್ರತ್ಯಯೇ ಮೋಕ್ಷಸಂಪದಃ ॥

ಆದ್ದರಿಂದ ದೀಕ್ಷಾಸಂಸ್ಕೃತನಾದ ವೀರಶೈವನಿಗೆ ಲಿಂಗಪೂಜಾದಿಗಳೇ ಯಾವಜ್ಜೀವವೂ ಮಾಡಬೇಕಾದ ಮಹಾವ್ರತಗಳಾದುದರಿಂದ ಮಧ್ಯಕಾಲದಲ್ಲಿ ಜಾತಾಶೌಚ ಮೃತಾಶೌಚಾದಿ ಸೂತಕಗಳ ಸಂಬಂಧದಿಂದ ಗುರುಕರುಣಾಸಂಸ್ಕಾರವು ನಷ್ಟವಾಗದೆ ಎಂದಿನಂತೆ ಸ್ಥಾಯಿಯಾಗಿಯೇ ಇರುವುದರಿಂದ ಆ ಅಂಥ ಮಹಾ ಸೂತಕಗಳು ಮಹಾವ್ರತವೆನಿಸಿದ ಲಿಂಗಧಾರಣ ಪೂಜಾದಿಗಳನ್ನು ಸುತರಾಂ ನಿಷೇಧಿಸುವುದಿಲ್ಲವು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವ ಸಮಯದಲ್ಲಿ ಮದ್ರಾಸ್ ಗವರ್ನರವರು ಅರಮನೆಯ ಅತಿಥಿಗಳಾಗಿ ಬರುವರೆಂದು ವದಂತಿಯಿದೆ.

ರಾಜಧಾನಿಯಲ್ಲಿ ಈಗ್ಗೆ ೧೨೦ ದಿನಗಳಿಂದಲೂ ಪ್ರತಿದಿವಸವೂ ಮಳೆಯಾಗುತ್ತಿರುವುದರಿಂದ ಬಿಸಿಲಿನ ಬೇಗೆಯು ಕಡಿಮೆಯಾಗಿ ಹವೆಯು ಸುಖವಾಗಿರುವುದು. ಈ ಭಾಗದಲ್ಲಿ ಸರ್ವತ್ರ ಮಳೆಯಾಗಿರುವುದರಿಂದ ಪೈರುಗಳು ಚೆನ್ನಾಗಿರುವುವು.

ಶಿವಮೊಗ್ಗ [illegible] ಬಳಿ ಕೂಡ್ಲಿ [illegible] ಜವಾನನು [illegible] ಯುವತಿಯೊಡನೆ [illegible] ಕಡಿಯೊಂದು ಅವನ ಮೇಲೆ [illegible] ಗೆಡವಿ [illegible] ಅಷ್ಟರಲ್ಲಿ ಸುತ್ತಲಿದ್ದ ಜನರು ಗಲಭೆಯನ್ನು ಕೇಳಿ ಸಹಾಯಕ್ಕೆ ಎರಲು [illegible] ಓಡಿಹೋಯಿತು. ಆಳು ಮಾತ್ರ ಮರಣ ಹೊಂದಿದನು.

ಕೋಲಾರ [illegible] ಕೃತಿಮ [illegible] ಗಳನ್ನು ತಯಾರಿಸುತ್ತಿದ್ದರೆಂದು [illegible] ಇವರ ಮೇಲೆ ಮೊಕದ್ದಮೆಯನ್ನು ಹೂಡಿದ್ದರು. ಇದು ವಿಚಾರಣೆಯಾಗಿ ಬೆಂಗಳೂರು ಡಿವಿಜನ್ ಮತ್ತು ಸೆಷನ್ಸ್ ಜಡ್ಜ್ ಮ॥ ಟಿ. ಸಿಂ [illegible] ದಲಿಯೂರ್ರವರು [illegible] ೩ ವರ್ಷಗಳ ಕಠಿನಶಿಕ್ಷೆಯನ್ನು ವಿಧಿಸಿ [illegible] ಯನ್ನು ಬಿಡುಗಡೆಮಾಡಿದರು.

ಮೈಸೂರು ಯೂನಿವರ್ಸಿಟಿಯಲ್ಲಿ ಈವರೆಗೆ ಮ॥ರಾ॥ ಡಿ. ಶ್ರೀನಿವಾಸಾಚಾರ್ಯರವರು ಸಂಸ್ಕೃತ ಪ್ರೊಫೆಸರರಾಗಿದ್ದರು. ಈಗ ಇವರು ತಮ್ಮ ಕೆಲಸದಿಂದ ನಿವೃತ್ತರಾಗುವುದರಿಂದ ಆ ಸ್ಥಾನಕ್ಕೆ ಯೋಗ್ಯರಾದವರನ್ನು ಆ ಸ್ಥಾನಕ್ಕೆ ನಿಯಮಿಸಬೇಕಾಗಿದೆ. ಯಾರನ್ನು ನಿಯಮಿಸಬೇಕೆಂಬ ಆಲೋಚನೆಗಾಗಿ ಮೈಸೂರು ಗವರ್ನಮೆಂಟಿನವರು ಮ॥ ಜನರಲ್ ಶ್ರೀನಿವಾಸರಂಗನವರನ್ನು [illegible] ಬೊಂಬಾಯಿ ಮೊದಲಾದ ಸ್ಥಳಗಳ ಕೆಲ ಸುಪ್ರಸಿದ್ಧ ವ್ಯಕ್ತಿಗಳನ್ನೂ ಆಹ್ವಾನಿಸಿ [illegible] ಜನರು [illegible] ಕೈಕೊಂಡಿದ್ದಾರಂತೆ.

ವರ್ತಮಾನಸಂಗ್ರಹ.

ದಾರಿದ್ರ್ಯದಿಂದ ಆತ್ಮಹತ್ಯೆ!

[illegible] ಎಂಬವನು ತನ್ನ ಅಲ್ಪ ಸಂಪಾದನೆಯಿಂದ ಸಂಸಾರವನ್ನು ನೀಗಿಸಲು ಬಹಳ ಕಷ್ಟಪಡುತ್ತಿದ್ದುದರಿಂದ ಜೀವನದಲ್ಲಿ ಜುಗುಪ್ಸೆಹುಟ್ಟಿ ತನ್ನ ಮನೆಯ ಮುಂದೆ ದೊಡ್ಡ ಅಗ್ನಿಕುಂಡವನ್ನು ನಿರ್ಮಿಸಿ [illegible] ಮಕ್ಕಳನ್ನೂ [illegible] ಯನ್ನೂ [illegible] ಪ್ರಾಣ ಕಳೆದುಕೊಂಡನಂತೆ. ಈ ದಾರಿದ್ರ್ಯಬಾಧೆಯು ಮಹಾ ಕಷ್ಟಕರವಾದುದು!

ಮಧ್ಯಪ್ರಾಂತಕ್ಕೆ ಹಿಂದೀ ಗವರ್ನರರವರು!

ಮಧ್ಯಪ್ರಾಂತಗಳ ಹೋಂ ಮೆಂಬರಾಗಿದ್ದ ಆನರಬಲ್ ಮಿ॥ ಇ. ರಾಘವೇಂದ್ರರಾಯರು ಚಕ್ರವರ್ತಿಗಳವರ ಅಪ್ಪಣೆಯಮೇರೆಗೆ ನಾಗಪುರ ಪ್ರಾಂತದ ಗವರ್ನರ್ ಪದವಿಯನ್ನು ಸ್ವೀಕರಿಸಿರುವರು. ಇಂತಹ ಮಹಾಜವಾಬ್ದಾರಿಯ ಅಧಿಕಾರವನ್ನು ಹಿಂದೂಜನರಿಗೆ ವಹಿಸಿದ ದನ್ನು ನೋಡಿದರೆ ಅದು ಹಿಂದೂಜನರಿಗೆ ಸುದೈವವೆಂದೇ ಹೇಳಬೇಕಾಗಿದೆ.

ಸುಭಾಷಬೋಸರನ್ನು ಅವರ ಸಹೋದರರ ಗೃಹಕ್ಕೆ ಸಾಗಿಸಿದರು

ಸುಭಾಷಬೋಸರ ಆರೋಗ್ಯವು ದಿನೇದಿನೇ ಕೆಡು ನಡೆದುದನ್ನು ನೋಡಿ ಸರ್ಕಾರದವರು ಅವರನ್ನು ಸೆರೆಮನೆಯಿಂದ ಬಿಡಿಸಿ ಲಕ್ನೋ ಮಾರ್ಗವಾಗಿ ಕುರಿಯಾಂಗ್ ಎಂಬಲ್ಲಿರುವ ಅವರ ಸಹೋದರರ ಮನೆಗೆ ಸಾಗಿಸಿದರು. ಇವರನ್ನು ಪಿ. ಎನ್. ಡಬ್ಲ್ಯು. ರೈಲ್ವೆಯ ಪ್ಯಾಸೆಂಜರ್ ಗಾಡಿಯಲ್ಲಿ ಬಂಗಾಳ ಪೋಲೀಸರು ಕರೆದೊಯ್ಯುತ್ತಿದ್ದರು. ಇವರು ಬಹಳ ಇಳಿದು ಹೋಗಿದ್ದಾರೆಂದು ತಿಳಿದುಬಂದಿದೆ. ಇವರು ತಮ್ಮ ಸಹೋದರರ ಮನೆಯಲ್ಲಿದ್ದರೂ ಎಲ್ಲಿಯೂ ಹೋಗಕೂಡದೆಂದು ಸರಕಾರದ ಆಜ್ಞೆಯಾಗಿದೆ.

ಕಾಮನ್ಸ್ ಸಭೆಯಲ್ಲಿ ಬ್ರಿಟಿಷ್ ಮುಖ್ಯ ಮಂತ್ರಿಗಳ ಸಿಂಹನಾದ !

ಅಬಿಸೀನಿಯಾ ದೇಶದ ವ್ಯವಹಾರದಲ್ಲಿ ಮುಸ್ಸೊಲಿನಿಯವರು ಬಲಾತ್ಕಾರದಿಂದ ಪ್ರವೇಶಿಸಿದ್ದರೆ ಬ್ರಿಟಿಷ್ ಸರಕಾರವು ಇಟಲಿ ದೇಶದವರನ್ನು ಪ್ರತಿಭಟಿಸುವರೆ ಮಾ. ಈ ಪ್ರತಿಭಟನೆಯಲ್ಲಿ ಬ್ರಿಟನ್ನು ತನ್ನ ಸಾಮರ್ಥ್ಯವನ್ನೆಲ್ಲಾ ತೋರಿಸುವುದೆಂದೂ ಮುಖ್ಯಮಂತ್ರಿಗಳಾದ ಮಿ॥ ಬಾಲ್ಡ್ವಿನ್ನರವರು ೨೧ ನೆಯ ತಾರೀಖಿನ ದಿವಸ ನಡೆದ ಕಾಮನ್ಸ್ ಸಭೆಯಲ್ಲಿ ಭಾಷಣಮಾಡಿದರು. ಆಗ್ಗೆ ಸಭೆಯಲ್ಲಿ ಎತ್ತ ನೋಡಿದತ್ತ ಜಯಘೋಷವೇ ಜಯಘೋಷವಾಗಿತ್ತು.

ಗುಪ್ತಕೊಲೆ !

ರಾವಲ್ಪಿಂಡಿ ಡಿಸ್ಟ್ರಿಕ್ಟಿನ ಒಂದು ಹಳ್ಳಿಯಲ್ಲಿ ಒಬ್ಬ ಮನುಷ್ಯನು ಅನ್ನವಿಲ್ಲದೆ ... ಸಾವಿರ ... ಈತನ ಮನೆಗೆ ಕೆಲವರು ಬಂದು ಒಂದು ಪ್ರಶ್ನೆಯನ್ನು ತೀರ್ಮಾನಿಸಲು ಎಳೆದೊಯ್ದರೆಂದು ಈತನ ಹೆಂಡತಿ ಹೇಳಿಕೊಳ್ಳುವಳು. ಅವನು ಅವರೊಂದಿಗೆ ಹೋದನಂತೆ! ಎರಡು ಮೂರು ದಿವಸಗಳವರೆಗೂ ಅವರು ಹಿಂದಿರುಗಿ ಬರಲಿಲ್ಲವಾದುದರಿಂದ ಅವನ ಮಗನು ಅವನನ್ನು ಹುಡುಕಿಕೊಂಡು ಹೋಗಲು ದಾರಿಯಲ್ಲಿ ಒಬ್ಬ ಹಳ್ಳಿಯವನು ನಿನ್ನ ತಂದೆಯನ್ನು ಆಗಲೇ ಕೊಂದು ಸುಟ್ಟುಬಿಟ್ಟರೆಂದು ತಿಳಿಯಿಸಲು ಇದು ಪೋಲೀಸರಿಗೆ ವರದಿಯಾಗಿ ಶೋಧವು ನಡೆಯುತ್ತಿದೆ.

ಜವಾಹಿರಲಾಲರ ಸಾಮ್ಯವಾದಿತ್ವಕ್ಕೆ ಬೊಂಬಾಯಿ ವರ್ತಕರ ಪ್ರತಿಭಟನೆ

ಬೊಂಬಾಯಿನಗರದ ಹಲವು ಪ್ರಮುಖ ವರ್ತಕರು ಈಗ ಕಾಂಗ್ರೆಸ್ ಅಧ್ಯಕ್ಷರಾಗಿರುವ ಪಂಡಿತ ಜವಹರಲಾಲರು ಬೋಧಿಸುತ್ತಿರುವ ಶ್ರೀಮಂತರೂ ಬಡವರೂ ಒಂದೇ ಆಗಬೇಕೆಂಬ ವಾದವನ್ನು ಪ್ರತಿಭಟಿಸಿ ಪ್ರಸಿದ್ಧಪತ್ರಿಕೆಯೊಂದನ್ನು ಹೊಡಿಸಿರುವರು. ಅಂದೂ ಸ್ವತಂತ್ರ್ಯ ಸಮರದಲ್ಲಿ ಧನವಂತರೂ ಜಮೀನ್ದಾರರೂ ಬಹು ಮುಖ್ಯ ಭಾಗವನ್ನು ವಹಿಸಿರುತ್ತಾರೆ. ಇಂಥವರನ್ನು ಸಂಪೂರ್ಣ ನಾಶಮಾಡುವ ಕೆಟ್ಟ ಚಳವಳಿಯನ್ನು ಪಂಡಿತರು ಪ್ರಾರಂಭಿಸಿರುವುದರಿಂದ ದೇಶದಲ್ಲಿ ಪಕ್ಷ ಪ್ರತಿಪಕ್ಷಗಳು ಹುಟ್ಟಿ ಪರಿಸ್ಥಿತಿಯು ವಿಷಮವಾಗುವುದಾಗಿ ಪ್ರಸಿದ್ಧ ಪತ್ರಿಕೆಯ ತಿಳಿಸುತ್ತದೆ.

60 ವರ್ಷದ ಗರ್ಭ !

ಸಿಂಗಪುರದ ಹೆರಿಗೆ ಆಸ್ಪತ್ರೆಗೆ 60 ವರ್ಷ ವಯಸ್ಸಿನ ಚೀನಾ ಸ್ತ್ರೀಯೊಬ್ಬಳು ಹೆರಿಗೆಗಾಗಿ ಬಂದಿದ್ದಳು. ಡಾಕ್ಟರು ಆಕೆಯನ್ನು ಪರೀಕ್ಷಿಸಿ ಆಕೆಯು ಗರ್ಭವತಿಯಾಗಿ ೬೦ ವರ್ಷಗಳಾಗಿರುವುದಾಗಿಯೂ, ಆಗಿನಿಂದ ಗರ್ಭವು ಬಹಳ ನಿಧಾನವಾಗಿ ಬೆಳೆಯುತ್ತಾ ಬಂದಿರುವುದಾಗಿಯೂ, ಆಗಾಗ್ಗೆ ಇಂಥ ಸಂದರ್ಭಗಳು ಒದಗುವವಾಗಿಯೂ, ಯೂರೋಪಿನಲ್ಲಿ ಈ ವಿಧವಾದ ಸನ್ನಿವೇಶಗಳು ಹೆಚ್ಚಿರುವುದಾಗಿಯೂ ತಿಳುಹಿಸಿದರು. ಗರ್ಭದಲ್ಲಿಯ ಪಿಂಡವು ಅನೇಕ ವರ್ಷಗಳಕಾಲ ಗುಪ್ತಸ್ಥಿತಿಯಲ್ಲಿದ್ದು ಅನಂತರ ಬೆಳೆಯುಬಹುದಂತೆ! ಎಷ್ಟೋ ಸ್ತ್ರೀಯರು ಹೀಗೆ ಗರ್ಭಧಾರಣವಾಗಿರುವುದರಿಂದ ವೈದ್ಯಪರೀಕ್ಷೆಯಲ್ಲಿ ಅದು ತಿಳಿಯುವುದಿಲ್ಲವಂತೆ! ಸಿಂಗಪುರದ ಸತ್ತುಮುತ್ತಿನ ಹಳ್ಳಿಗಳ ಜನರಿಗೆಲ್ಲಾ ಇದರಿಂದ ಭಯಾಶ್ಚರ್ಯಗಳುಂಟಾಗಿವೆ. ಬುದ್ಧನು ಪುನರವತಾರ ಮಾಡಿದನೆಂದು ಅವರ ನಂಬಿಗೆಯಾಗಿದೆಯಂತೆ.

ಸಂಗೀತದ ರಾಣಿ !

ಸ್ವೀಡನ್ನಿನ ೧೨ ವರ್ಷ ವಯಸ್ಸಿನ ಓಟಯಾನ ಎಂಜಲಿನಿ ಎಂಬ ಹುಡುಗಿಯನ್ನು ಹಳ್ಳಿಯವರು 'ಸಂಗೀತದ ರಾಣಿ' ಎಂದು ಕರೆಯುತ್ತಿದ್ದರೆ ಇವಳು ೫ ವರ್ಷ ವಯಸ್ಸಿನವಳಾಗಿದ್ದಾಗ ಒಂದು ದಿವಸ ಉದ್ಯಾನವನದಲ್ಲಿ ಕುಳಿತು ಹಾಡುತ್ತಿದ್ದುದನ್ನು ಇವಳ ತಾಯಿತಂದೆಗಳು ಕೇಳಿ, ಇವಳು ಪ್ರಸಿದ್ಧ ಸಂಗೀತಗಾರಳಾಗುವಳೆಂದು ಭಾವಿಸಿ ಸಂಗೀತಾಭ್ಯಾಸ ಮಾಡಿಸಲು ಏರ್ಪಡಿಸಿದರು. ಈಗ ಈಕೆಯು ಲಂಡನ್ನಿನಲ್ಲಿಯೂ ತನ್ನ ಅದ್ಭುತ ಗಾನಶಕ್ತಿಯನ್ನು ತೋರಿಸುತ್ತಿರುವುದನ್ನು ನೋಡಿ ಹಿರಿಯರಾದ ಪಂಡಿತರೆಲ್ಲರೂ ಈಕೆಯು ಶ್ರೇಷ್ಠವಲ್ಲದೆ ಅದ್ವಿತೀಯ ಪಂಡಿತಳಾಗುವಳೆಂದು ಹೇಳುತ್ತಿದ್ದಾರೆ. ಹೀಗಿದ್ದರೂ ಇವಳು ತನ್ನ ಬಾಲ್ಯಭಾವವನ್ನು ಇನ್ನೂ ಬಿಟ್ಟಿರುವುದಿಲ್ಲ. ಸಣ್ಣ ಬೊಂಬೆಗಳನ್ನಿಟ್ಟುಕೊಂಡು ಆಡುವುದೆಂದರೆ ಈಕೆಗೆ ಬಹಳ ಪ್ರೀತಿಯಂತೆ!

ಪಾಶ್ಚಾತ್ಯದಾಂಪತ್ಯದ ವಿಚಿತ್ರ ದೃಶ್ಯ

ಫ್ರಾನ್ಸಿನ ಒಬ್ಬ ಸುಂದರಯುವತಿಯು ವಿವಾಹವಾದ ಎರಡು ವರ್ಷಗಳಲ್ಲಿ ಗಂಡನ ಒಂದು ತಪ್ಪಿಗಾಗಿ ವಿವಾಹವಿಚ್ಛೇದನಕ್ಕೆ ಅರ್ಜಿ ಹಾಕಿಕೊಂಡಿರುತ್ತಾಳೆ. ಆಕೆಯು ಗಂಡನ ಎಲ್ಲಾ ವಿಷಯದಲ್ಲಿಯೂ ಆಕೆಯನ್ನು ಗೌರವದಿಂದ ನಡೆಸಿಕೊಂಡು ಹೋಗುತ್ತಿದ್ದರೂ ಇದುವರೆಗೂ ಒಂದು ದಿವಸವಾದರೂ ಆಕೆಯನ್ನು ಆಲಿಂಗಿಸಿ ಚುಂಬಿಸಲಿಲ್ಲವೆಂಬುದೇ ಆಕ್ಷೇಪಣೆ. ಈಕೆಯು ಆತನನ್ನು ಒಪ್ಪಿಸಲು ಪ್ರಯತ್ನಪಟ್ಟರೂ ಅವನಿಗೆ ಪರಿವೆ ಇತ್ತಿರಲಿಲ್ಲವಂತೆ. ಇದರಿಂದ ಅವಳಿಗೆ ಆತನ ಮೇಲೆ ಆಗ್ರಹವುಂಟಾಗಿ ದಾಂಪತ್ಯವಿಚ್ಛೇದನಕ್ಕೆ ಕೋರ್ಟಿಗೆ ಬಂದಿದ್ದಾಳೆ. ಗಂಡನು ಮಾತ್ರ ಇದುವರೆಗೂ ಕೋರ್ಟಿಗೆ ಬಂದಿಲ್ಲ. ಪತ್ನಿಯು ತನ್ನನ್ನು ತ್ಯಜಿಸಿದರೂ ಸರಿ ಕೆಯುಸ್ಸನ್ನು ಕೊಡುವುದಿಲ್ಲವೆಂಬುದೇ ಅವನ ಹಟವಂತೆ. ಈ ಪರಿಸ್ಥಿತಿಗೆ ದಾಂಪತ್ಯ ವಿಚ್ಛೇದನ ಕಾನೂನು ಇದೆಯೇ ಎಂಬುದನ್ನು ನಿರ್ಧರಿಸುವುದು ಕೋರ್ಟಿನವರಿಗೂ ಕೂಡ ಒಂದು ದೊಡ್ಡ ಸಮಸ್ಯೆಯಾಗಿ ಕುಳಿತಿದೆ.

ಸತ್ತುಬದುಕಿದಳು

ಡೈಸಿ ಲಿಕ್ ಎಂಬ ೨೩ ವರ್ಷ ವಯಸ್ಸಿನ ಯುವತಿಯು ದೀರ್ಘ ರೋಗದಿಂದ ಗಣಾಮುಖವಾಗುತ್ತಿದ್ದವಳನ್ನು ಡಾಕ್ಟರು ಪ್ರತಿನಿತ್ಯ ಬಂದು ನೋಡಿಕೊಂಡು ಹೋಗುತ್ತಿದ್ದರು. ಹೀಗಿರುವಲ್ಲಿ ಒಂದು ದಿವಸ ಡಾಕ್ಟರು ಬರುವ ವೇಳೆಗೆ ಆಕೆಯು ಹೊರಗೆ ತಿರುಗಾಡಲು ಹೋಗಿ ಬಂದು ಆಯಾಸದಿಂದ ಮಲಗಿದ್ದಳು. ಡಾಕ್ಟರರು ಪರೀಕ್ಷಿಸುವಲ್ಲಿ ಅವಳ ಹೃದಯಚಲನೆಯು ನಿಂತುಹೋಗಿತ್ತು. ಡಾಕ್ಟರರು ಪರೀಕ್ಷಿಸಿ ಆಕೆಯು ಮೃತಳಾದಳೆಂದು ತೀರ್ಮಾನಿಸಿದರು. ಆಗ ಡಾ॥ ಜಸ್ಟಿನ್ನರು ತಮ್ಮಲ್ಲಿದ್ದ ಹೃದಯದ ಬಲಕ್ಕೆ ಬಹಳ ಪ್ರಖ್ಯಾತ ಔಷಧವಾದ ಕೊರಮೈನ್ ಎಂಬ ಔಷಧವನ್ನು ಆಕೆಯ ಹೃದಯಕ್ಕೆ ಇಂಜೆಕ್ಷನ್ ಮಾಡಿದರು. ಇದರಿಂದ ಹೃದಯವು ಚಲಿಸಲಾರಂಭಿಸಿ ೧೦ ನಿಮಿಷಗಳ ಮೇಲೆ ಆ ಯುವತಿಯು ಬದುಕಿದಳು. ಅವಳನ್ನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡಿದ್ದರಮೇಲೆ 12 ಘಂಟೆಗಳ ತರುವಾಯ ಪ್ರಜ್ಞೆ ಬಂದಿತಂತೆ. ಆಕೆಯು ಈಗ ಉತ್ತಮಗೊಳ್ಳುತ್ತಿರುವಳೆಂದು ತಿಳಿದುಬರುತ್ತದೆ.

ವೀರಶೈವ ಫ್ರೀಬೋರ್ಡಿಂಗಿನ ವರದಿ

ಗುಲಬರ್ಗಾದಲ್ಲಿ ಶ್ರೀ ಮುಗಳನಾಗಾವಿ ಪಟ್ಟದ ಸ್ವಾಮಿಗಳವರಿಂದ ಸ್ಥಾಪಿಸಲ್ಪಟ್ಟಿರುವ ಮೇಲ್ಕಂಡ ಬೋರ್ಡಿಂಗಿನ ವಾರ್ಷಿಕವರದಿಯು ನಮ್ಮಕಡೆಗೆ ಬಂದಿದೆ. ಈ ಬೋರ್ಡಿಂಗಿನಲ್ಲಿ ಸದ್ಯಃ ೧೭ ಜನ ವಿದ್ಯಾರ್ಥಿಗಳು ಇರುವುದಾಗಿ ತಿಳಿದುಬರುತ್ತದೆ. ಈ ಬೋರ್ಡಿಂಗು ಕೇವಲ ಏಕಾಂಗಿ ಮನಲೀಲೆಯಿಂದ ಸಾಗಿದೆ. ಈ ಸತ್ಕಾರ್ಯಕ್ಕಾಗಿ ಅನೇಕಜನ ಧರ್ಮಾತ್ಮರು ದ್ರವ್ಯವನ್ನೂ, ಧಾನ್ಯಗಳನ್ನೂ ಸಹಾಯ ಮಾಡಿದ್ದರೆ ಒಟ್ಟಿಗೆ ಬೋರ್ಡಿಂಗಿನ ಕಾರ್ಯವು ಶ್ರೀಮಾನ್ ದೊಡ್ಡಪ್ಪ ಅಪ್ಪಾ ಶರಣಬಸವೇಶ್ವರಸಂಸ್ಥಾನದ ಇವರ ಅಧ್ಯಕ್ಷತೆಯಲ್ಲಿ ಸಮರ್ಪಕವಾಗಿ ನಡೆದಿರುವುದಾಗಿ ಗೊತ್ತಾಗುತ್ತದೆ. ಇದಕ್ಕಾಗಿ ಒಂದು ದ್ರವ್ಯನಿಧಿಯಾದರೆ ಚಿರಕಾಲವಾಗಿ ಈ ಕಾರ್ಯವು ನಡೆಯುವುದು ಸಹಜವಿದೆ. ಧರ್ಮಾತ್ಮರು ಈಗ್ಗೆ ಸಹಾಯಮಾಡಿ ತಮ್ಮ ಉದಾರಹೃದಯವನ್ನು ವ್ಯಕ್ತಗೊಳಿಸುವುದು ಒಳ್ಳೆಯದು. ... ವಿದ್ಯಾದಾನರೂಪ ... ಕ್ಕೆ ಸಹಾಯ ಮಾಡಿ ಈ ಬೋರ್ಡಿಂಗನ್ನು ಚಿರಸ್ಥಾಯಿಗೊಳಿಸಬೇಕೆಂದು ಬಯಸುತ್ತೇವೆ.

ಸ್ವೀಕಾರ

ಬೆಂಗಳೂರು ಸಿಟಿಯ ... ಮ॥ ರಾ॥ ಸಂಗಪ್ಪನವರ ಪುತ್ರ ಚಿ॥ ಸ॥ ... ದಯ್ಯನಿಗೆ ... ನಲ್ಲಿರುವ ಮ॥ ರಾ॥ ಯಜಮಾನ ... ಪುತ್ರಿ ಚಿ॥ ಸೌ॥ ... ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾ ಪ್ರೋತ್ಸಾಹಣಕ್ಕಾಗಿ ಸಮರ್ಪಿಸಿದ 2 ರೂ ಮತ್ತು ಮ॥ ರಾ॥ ... ಅಪ್ಪನವರ ... ಗಾಹದಲ್ಲಿ ನೂತನ ವಧೂವರರ ಸಂಬಂಧವಾಗಿ ನಡೆದ ... ಮಹೋತ್ಸವದಲ್ಲಿ ಸಮರ್ಪಿಸಿದ 2 ರೂ ಒಟ್ಟು 4 ರೂ ಗಳು ಮ॥ ರಾ॥ ... ದೇಶದ ಶೆಟ್ರು ... ರವರ ದ್ವಾರಾ ತಲ್ಪಿರುತ್ತವೆ.

... ತಿಪ್ಪಶೆಟ್ಟಿ ... ಮಹಾಸ್ವಾಮಿಗಳ ... ಕೊಟ್ಟಯ್ಯ ... ಇವರ ಪುತ್ರಿ ಚಿ॥ ಸೌ॥ ... ಳನ್ನು ... ಹಟ್ಟಿ ... ಸಿಗೆ ... ಕಟ್ಟಿ ಮನಿ ಚನ್ನಬಸವಯ್ಯನವರ ಪುತ್ರ ಚಿ॥ ಸ॥ ಶಿವಯ್ಯನಿಗೆ ಕೊಟ್ಟು ನೆರವೇರಿಸಿದ ನಿಶ್ಚಯ ಕಾರ್ಯದಲ್ಲಿ ಪ್ರಭಾ ಪ್ರೋತ್ಸಾಹಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ಮ॥ ... ಹಳ್ಳಿ ... ರದ ... ವಣ್ಣಯ್ಯನವರ ದ್ವಾರಾ ತಲ್ಪಿರುತ್ತವೆ.

... ಟವನ್ ... ಸಿಗೆ ... ಗವಳಿಗರ ... ವಿತ್ರಮ್ಮನವರ ಪುತ್ರ ಚನ್ನಪ್ಪನವರು ಶಿವಧೀನರಾದ ಸಮಯದಲ್ಲಿ ಮೃತರ ಆತ್ಮಶಾಂತ್ಯರ್ಥವಾಗಿ ಜಗದ್ಗುರುಗಳ ಹೆಸರಿನಿಂದ ಸಮರ್ಪಿಸಿದ 1 ರೂ ಯು ಮ॥ ರಾ॥ ಯಜಮಾನ ... ಪ್ಪನವರ ದ್ವಾರಾ ತಲ್ಪಿರುತ್ತದೆ.

ಬೆಂಗಳೂರು ಸಿಟಿಯಲ್ಲಿರುವ ಚಿಕ್ಕನಹಳ್ಳಿಮಠದ ನಂಜುಂಡದೇವರ ಪುತ್ರ ಚಿ॥ ಸ॥ ಚನ್ನಬಸವಾರಾಧ್ಯನ ವಿವಾಹಸಮಯದಲ್ಲಿ ಪ್ರಭಾ ಪ್ರೋತ್ಸಾಹಣಕ್ಕಾಗಿ ತೆಗೆಯಿಸಿದ 1 ರೂ ಯು ವೇ॥ ... ಸ್ವಾಮಿಗಳ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರ ... ಪಿತ್ಯಾಶೀರ್ವಾದ ... ಗಳಿವೆಯೆಂದು ಪ್ರಾರ್ಥಿಸುತ್ತೇವೆ.

ಶ್ರೀಜಗದ್ಗುರು ಪಂಚಾಚಾರ್ಯ ಪ್ರಸಾದಿತ

ಶ್ರೀಗುರುನಿವಾಸ ಸಂಸ್ಕೃತಪಾಠಶಾಲಾ ಬಳ್ಳಾರಿ

ವಿದ್ಯಾರ್ಥಿಗಳಿಗೆ ಸೂಚನೆ—

ಈ ಸಂಸ್ಕೃತ ವಿದ್ಯಾಲಯವು ಜೂನ್ ತಿಂಗಳು ೭ ನೆಯ ತಾರೀಖಿನ ದಿವಸ ಪ್ರಾರಂಭವಾಗುವುದು. ಹೊಸದಾಗಿ ಸೇರುವ ಮತ್ತು ಎಂಟ್ರೆನ್ಸ್ ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳು ಮೇ ತಿಂಗಳು 30 ನೆಯ ತಾರೀಖಿನೊಳಗಾಗಿ ಕೆಳಗಿನ ಅಡ್ರೆಸ್ಸಿಗೆ ಬರೆದುಕೊಳ್ಳಬೇಕು.

ಗುರುನಿವಾಸ ಸಂಸ್ಕೃತ ಪಾಠಶಾಲಾ ಸೆಕ್ರೆಟರಿ,
ಕೋಟೆಹುಂದಿ ಭೋಗಪ್ಪ ಬಳ್ಳಾರಿ

ಶ್ರೀ ಜಗದ್ಗುರು ಕೇದಾರಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿಮಹೋತ್ಸವ ಚಿಕ್ಕಮಣ್ಣೂರು

ಧಾರವಾಡಜಿಲ್ಲಾ [illegible] ಚಿಕ್ಕಮಣ್ಣೂರು ಗ್ರಾಮಕ್ಕೆ ಶ್ರೀ [illegible] ಶ್ರೀ [illegible] ಜಗದ್ಗುರು [illegible] ಸ್ವಾಮಿಗಳವರು [illegible] ಪ್ರಾತಃಕಾಲ [illegible] ಜನಸ್ತೋಮವಲ್ಲಿ [illegible] ಪ್ರಾರಂಭವಾಯಿತು [illegible] ಭಜನೆ [illegible] ಮಾಡುತ್ತ [illegible] ತಾಲ್ಲೂಕು [illegible] ಶ್ರೀ ಜಗದ್ಗುರು [illegible] ಶ್ರೀ ಗುರುದೇವ [illegible] ವೀರಶೈವಧರ್ಮದ ರಹಸ್ಯ ವಿಷಯವಾಗಿಯೂ [illegible] ಮತ್ತು [illegible] ಶ್ರೀಗುರುಸ್ವಾಮಿಗಳು [illegible] ಪಂಚ [illegible] ಶ್ರೀ ಕನಕಗಿರಿ ಬೃಹನ್ಮಠದ ಪಟ್ಟದಸ್ವಾಮಿಗಳು [illegible] ಶ್ರೀ ಮಲ್ಲಿಕಾರ್ಜುನಶಿವಾಚಾರ್ಯಸ್ವಾಮಿಗಳು [illegible] ವ್ಯಾಖ್ಯಾನ [illegible] ಶ್ರೀ ಜಗದ್ಗುರುಗಳವರು [illegible] ಶ್ರೀಮಂತ [illegible] ಬಸಪ್ಪನವರ ಸಹಾಯವಾದಿದ್ದಕ್ಕೆ ಸಭೆಯಲ್ಲಿ ಇವರಿಗೆ ಆಭಾರವು ಸಲ್ಲಿಸಲ್ಪಟ್ಟಿತು

ಪ್ರತ್ಯಕ್ಷದರ್ಶಿ

ಹಂಡಬಂಡಜಾತಿಯವರ ಹಾವಳಿಯನ್ನು ತಡೆಯುವದು ಹೇಗೆ?

(ಕಳಸ—ಸ್ವಸಜ್ಞಮಿಸ್ರ)

[illegible] ವೀರಶೈವಮತದಮೇಲೆ [illegible] ಜಾತಿಸಾಂಕರ್ಯವೆಂಬ [illegible] 'ದೈವಜ್ಞವಿನೋದ' ನೆ ಮಹಾ [illegible] ಪ್ರಸಿದ್ಧವಾಗಿರುವದು [illegible] ಪರಿಶೋಧಿಸುತ್ತಿರುವ [illegible] ಜಾಗ್ರತವಾಗಿರುವ [illegible] ಸಾಂಕರ್ಯದ [illegible] ಹಂಡಬಂಡರ ಹಾವಳಿ [illegible] 'ವೀರಶೈವದಲ್ಲಿ ಜಾತಿಭೇದಗಳಿಲ್ಲ' ವೆಂದು [illegible] ಜಾತಿಭೇದಗಳಿಲ್ಲ [illegible] ಕ್ರಿಶ್ಚಿಯನ್ನರು [illegible] ಮಾಡಬಹುದೇ? [illegible] ಅದೊಂದು ವಿಚಿತ್ರಸಂಕೀರ್ಣದ ವಾರ್ತೆಯೇನು! ಜಾತಿಸಾಂಕರ್ಯದ ತತ್ವವು [illegible] ಅತ್ಯಂತ [illegible] ವಾಗಿರುವುದು [illegible] ವೀರಶೈವದ [illegible] ಸಾಂಕರ್ಯದ [illegible] ಧರ್ಮ [illegible] ತಡೆಯುತ್ತಿರುವರು [illegible] ವೀರಶೈವಮತದಲ್ಲಿ [illegible] ಜಾತಿಭೇದಗಳನ್ನು ನಾಶಮಾಡುವುದು ಯಾರಿಂದಲೂ ಸಾಧ್ಯವಿಲ್ಲ [illegible] ಸಾಧಕರು ತಮ್ಮ ಕುಲಪರಂಪರೆಯಾದರೂ ಬೇರೆಯವರೊಡನೆ ಬೆರಕೆಯಾಗುವಷ್ಟು ಸಾಮರ್ಥ್ಯವಿಲ್ಲದಿರೆ ಸಾಗಿ, ಆಯಾ ವೀರಶೈವರಲ್ಲಿರುವ ಸಾವಿರಾರು ಪಂಗಡಗಳನ್ನು ನಾಶಮಾಡುವ ಸಾಹಸವು ನಮಗೆ ಫಲಕಾರಿಯಾಗಿರು

ವದು ಈವರೆಗೆ ಈ ಸಂಸ್ಥೆಯ ವಿಶೇಷಕಾರ್ಯಗಳ [illegible] ಗ್ರಂಥಗಳನ್ನೂ ಭಾಷಣಗಳನ್ನೂ ನಾನಾವಿಧವಾಗಿ [illegible] ವೀರಶೈವಸಿದ್ಧಾಂತದರ್ಶನವನ್ನು ತೋರಿಸಿದ್ದಾಗಿರುವದು [illegible] ಅಲ್ಲದೆಯೇ [illegible] ಸಮಸ್ತ [illegible] ಗುರುವರ್ಗ [illegible] ಪ್ರಾತಸ್ಮರಣೀಯ [illegible] ಗುರುವರ್ಗದಲ್ಲಿ ಭಕ್ತವರ್ಗ [illegible] ಶ್ರೀ ಜಗದ್ಗುರು [illegible] ಜಂಗಮರು [illegible] ಜಂಗಮರ [illegible] ಭಕ್ತಸಮುದಾಯವನ್ನು ರಕ್ಷಿಸುವ ಸಾಮರ್ಥ್ಯವನ್ನು [illegible] ಸರ್ವಶಕ್ತ [illegible] ಪ್ರಾರ್ಥಿಸುತ್ತೇನೆ

ವಿವಾಹಮಹೋತ್ಸವ

ಬೆಂಗಳೂರು ಸಿಟಿ [illegible] ಬಸಪ್ಪನವರು ತಮ್ಮ ಪುತ್ರನ ವಿವಾಹಮಹೋತ್ಸವ [illegible] ಬೆಂಗಳೂರುಸಿಟಿ ವಿಶ್ವೇಶ್ವರಪುರದಲ್ಲಿರುವ [illegible] ಚಿಕ್ಕನಹಳ್ಳಿಯ ನಂಜುಂಡದೇವರ ಪುತ್ರಿಯರ [illegible] ಬಸವಾರಾಧ್ಯರ ವಿವಾಹಮಹೋತ್ಸವವನ್ನು [illegible] ವಿಜೃಂಭಣೆಯಿಂದ ನಡೆಸಿ [illegible] ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡಿಗೆ [illegible] ರೂಪಾಯಿಯನ್ನು, ಶ್ರೀ ಜಗದ್ಗುರು ರೇಣುಕಾಚಾರ್ಯ [illegible] ಸಂಸ್ಕೃತಕಾಲೇಜು ಫಂಡಿಗೆ ಒಂದು ರೂಪಾಯಿಯನ್ನೂ, ಮೈಸೂರು ರಾಜಧಾನಿಯಲ್ಲಿ ಹೊರಡುತ್ತಿರುವ ಪಂಚಾಚಾರ್ಯಪ್ರಭಾಪತ್ರಿಕೆಯ [illegible] ಒಂದು ರೂಪಾಯಿಯನ್ನೂ [illegible] ಕಳುಹಿಸಿಕೊಟ್ಟಿರು [illegible] ಧರ್ಮಾತ್ಮರು ಶ್ರೀ ಜಗದ್ಗುರು ರೇಣುಕಾದಿಪಂಚಾಚಾರ್ಯ ಸಂಸ್ಕೃತಕಾಲೇಜ್ ಫಂಡಿಗೆ **5000** ರೂ [illegible] ಕೊಟ್ಟಿರುವರು [illegible] ವಿವಾಹಗಳನ್ನು ನಡೆಸುತ್ತಿರುವರು ಇವರಿಗೆ ಶ್ರೀ ಜಗದಾಚಾರ್ಯರು ಇನ್ನೂ [illegible] ಶ್ರೇಯಸ್ಸನ್ನು [illegible] ವೆಂದು ಪ್ರಾರ್ಥಿಸುವ,

ಗುರುಭಕ್ತ

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತಕಾಲೇಜ್ ಫಂಡ್ ಸ್ವೀಕಾರ

ಹೊಸಪುರದ ದುರ್ಗದ ವೀರಭದ್ರಪ್ಪನವರ ಪುತ್ರ ಜಮದೇವಪ್ಪ ಇವರ ಶಿವದೀಕ್ಷಾ ಕಾಲದಲ್ಲಿ ಬಂದ ರೂಪಾಯಿ 5 0 0

ಹೊಸೂರುಪುರದ ಮುನಿಸಿಪಲ್ ವೈಸ್‌ಪ್ರೆಸಿಡೆಂಟ್ ದುರ್ಗದ ನಂಜುಂಡಪ್ಪನವರ ಮಗನ ದೀಕ್ಷಾಕಾಲದಲ್ಲಿ ಬಂದ ರೂ 5 0 0

ಹೊಸೂರುಪುರದ [illegible] ನಂಜುಂಡಪ್ಪ [illegible] ರಾಮಲಿಂಗಯ್ಯನವರ ಶಿವದೀಕ್ಷಾಕಾಲದಲ್ಲಿ ಬಂದ ರೂಪಾಯಿ 5 0 0

ಬೆಂಗಳೂರು ಸಿಟಿ ಸರ್ರಾಫ್ ಬಿ ಬಸಪ್ಪನವರ ಪುತ್ರ ನಂಜುಂಡಪ್ಪನವರ ಶಿವದೀಕ್ಷಾಕಾಲದಲ್ಲಿ ಬಂದ ರೂಪಾಯಿ 5 0 0

ಮೈಸೂರು ಬ್ಯಾಂಕ್ ಸ್ಟಾಕೀಪರ್ ಎ ಎಸ್ ಮಲ್ಲಪ್ಪನವರ ಪುತ್ರಿ ಲಲಿತಮ್ಮ ಮತ್ತು ಕಂಟ್ರಾಕ್ಟರ್ ಕೆ ನಂಜುಂಡಪ್ಪನವರ ಪುತ್ರ ಚನ್ನಬಸವಪ್ಪ ಬಿ ಎ ಇವರುಗಳ ವಿವಾಹಮಹೋತ್ಸವಕಾಲದಲ್ಲಿ ಬಂದ ರೂಪಾಯಿ 5 0 0

ಬೆಂಗಳೂರು ಸಿಟಿ ಸರ್ರಾಫ್ ಬಿ ಬಸಪ್ಪನವರ ಪುತ್ರ ಎಸ್ ಬಿ ನಂಜುಂಡಯ್ಯ ಮತ್ತು ಕಂಟೋನ್ಮೆಂಟ್ ಬಿ ಚಿಕ್ಕರಾಚಪ್ಪನವರ ಕುಮಾರಿ ಪ್ರಮೀಳಾ ಇವರುಗಳ ವಿವಾಹಮಹೋತ್ಸವ ಕಾಲದಲ್ಲಿ ಬಂದ ರೂಪಾಯಿ 5 0 0

ನಗರ್ತಪೇಟೆ ಕೆ ಗೌರಿ ಶಂಕರಪ್ಪನವರ ಕುಮಾರ ಶಿವಪ್ಪ ಮತ್ತು ಗೌರಮ್ಮ ಇವರುಗಳ ವಿವಾಹಮಹೋತ್ಸವ ಕಾಲದಲ್ಲಿ ಬಂದ ರೂಪಾಯಿ 2 0 0

ದೊಡ್ಡಪೇಟೆ ಗ್ರಂಧಿಗೆ ಅಂಗಡಿ ಸೋಮಶೇಖರಪ್ಪನವರ ತಮ್ಮನವರ ಪುತ್ರ ನಂಜುಂಡಯ್ಯ ಮತ್ತು ಗೌರಮ್ಮ ಇವರುಗಳ ವಿವಾಹಮಹೋತ್ಸವಕಾಲದಲ್ಲಿ ಬಂದ ರೂಪಾಯಿ 1 0 0 ಒಟ್ಟು 43 0 0 ರೂಪಾಯಿ ಜಮಾ ಬಂದಿರುತ್ತವೆ

ಈ ಮಹನೀಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ಶ್ರೇಯಸ್ಸನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ

ಎಸ್ ರುದ್ರಯ್ಯ
ಆನರರಿ ಸೆಕ್ರೆಟರಿ,
ಶ್ರೀ ಜ॥ ಪ॥ ಸಂಸ್ಕೃತ ಕಾಲೇಜು,
ಮಹಂತಿನಮಠ, ಬೆಂಗಳೂರು ಸಿಟಿ

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ ನಂ 70 ಚಿಕ್ಕಪೇಟೆ, ಬೆಂಗಳೂರು ಸಿಟಿ

ಸ್ವೀಕಾರ.

1 ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದ ಟ್ರೆಜರರ್ ಮ॥ ರಾ॥ ಶ್ರೀ॥ ಸಂಕಪ್ಪ ಎ ಬಸಪ್ಪನವರು ತಾ॥ 4 5 1936 ರಲ್ಲಿ ತಮ್ಮ ಪುತ್ರ ಚಿ॥ ಎಸ್ ಬಿ ನಂಜುಂಡಯ್ಯನಿಗೆ ವಿಶ್ವೇಶ್ವರಪುರದಲ್ಲಿರುವ [illegible] ಎಂಬ ತಮ್ಮ ಗೃಹದಲ್ಲಿ ಬೆಂಗಳೂರು ಸಿಟಿ ಶ್ರೀ ಮಹಂತಿನಮಠದ ಪಟ್ಟಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಶ್ರೀ ಗಂಗಾಧರಶಿವಾಚಾರ್ಯಸ್ವಾಮಿಗಳವರು ಮತ್ತು ಹೊಸೂರು ಶ್ರೀ ಬೃಹನ್ಮಠಾಧೀಶ ಶ್ರೀ [illegible] ಪಟ್ಟಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಶ್ರೀ ಚನ್ನವೀರಶಿವಾಚಾರ್ಯಸ್ವಾಮಿಗಳವರು ಇವರ ಸನ್ನಿಧಿಯಲ್ಲಿ ನಡೆಸಿದ ಶಿವದೀಕ್ಷಾ ಸಂಸ್ಕಾರ ಮಹೋತ್ಸವಕಾಲದಲ್ಲಿ ಮ॥ ರಾ॥ ಶ್ರೀ॥ ಸರ್ರಾಫ್ ಬಿ ಬಸಪ್ಪನವರಿಂದ ಬಂದ ರೂಪಾಯಿ 5 0 0

2 ಬೆಂಗಳೂರು ಸಿಟಿ ಮ॥ ರಾ॥ ಶ್ರೀ॥ ಸೋಮಭದ್ರಪ್ಪನವರ ಸಹೋದರರ ಮ॥ ರಾ॥ ಶ್ರೀ॥ ಪುಟ್ಟಬಸಪ್ಪನವರ ಪುತ್ರ ಚಿ॥ ರಾ॥ ನಂಜುಂಡಯ್ಯನೆಂಬ ವರನಿಗೂ [illegible] ಚಿ॥ ಸೌ॥ ಗೌರಮ್ಮನೆಂಬ ವಧುವಿಗೂ ತಾ॥ 13-5-36 ರಲ್ಲಿ ನಡೆದ ವಿವಾಹಮಹೋತ್ಸವದಲ್ಲಿ ಮ॥ ರಾ॥ ಸೋಮಭದ್ರಪ್ಪನವರಿಂದ ಮ॥ ರಾ॥ ಶ್ರೀ॥ ಮೇಕಲ ಎ ರುದ್ರಪ್ಪಶೆಟ್ಟರ ಮೂಲಕವಾಗಿ ಬಂದ ರೂಪಾಯಿ 1 0 0

3 ಬೆಂಗಳೂರು ಸಿಟಿ ಅರಳೇಪೇಟೆ ಮ॥ ರಾ॥ ಶ್ರೀ॥ ಸಿದ್ಧಪ್ಪನವರ ಕುಮಾರಿ ಚಿ॥ ಸೌ॥ ಕಲ್ಯಾಣಮ್ಮ ಎಂಬ ವಧುವಿಗೂ, ತಿಪಟೂರು ಮ॥ ರಾ॥ ಶ್ರೀ॥ ಲಿಂಗಶೆಟ್ಟಪ್ಪನವರ ಮಾದಪ್ಪನವರ ಕುಮಾರ ಚಿ॥ ರಾ॥ ಗುರುಪ್ಪ ಎಂಬ ವರನಿಗೂ ತಾ॥ 17 5 36 ರಲ್ಲಿ ನಡೆದ ವಿವಾಹಮಹೋತ್ಸವದಲ್ಲಿ, ವಧುವಿನ ಕಡೆಯವರಿಂದ ಮ॥ ರಾ॥ ಶ್ರೀ॥ ಕೆ ಎನ್ ಅಯ್ಯಣ್ಣಶೆಟ್ಟರವರಿಂದ ಬಂದ ರೂಪಾಯಿ 3 0 0

4 ಕಾವಲಹಳ್ಳಿ [illegible] ತಾಲ್ಲೂಕು ದೊಡ್ಡಮರಳವಾಡಿಯಲ್ಲಿರುವ ಮ॥ ರಾ॥ ಪಟೇಲ್ ನಂಜುಂಡಪ್ಪನವರ ಕುಮಾರಿ ಚಿ॥ ಸೌ॥ [illegible] ಎಂಬ ವಧುವಿಗೂ [illegible] ಮ॥ ರಾ॥ ಪಟೇಲ್ ಪುಟ್ಟಯ್ಯನವರ ಮಕ್ಕಳು ಚಿ॥ ರಾ॥ ಮಲ್ಲಯ್ಯನೆಂಬ ವರನಿಗೂ ತಾ॥ [illegible] 5 36 ರಲ್ಲಿ ನಡೆದ ಕಲ್ಯಾಣದಲ್ಲಿ ವಧು ವರರಿಂದ ಕೆಂಗೇರಿ [illegible] ಎ ಎಸ್ ಶಿವಪ್ಪನವರಿಂದ [illegible] ಮೂಲಕವಾಗಿ ಬಂದದ್ದು ರೂಪಾಯಿ 3—0—0

5 ಬೆಂಗಳೂರು ಸಿಟಿ ವಿಶ್ವೇಶ್ವರಪುರದಲ್ಲಿರುವ ಮ॥ ರಾ॥ ಸರ್ರಾಫ್ ಬಿ ಬಸಪ್ಪನವರು ತಮ್ಮ ಸ್ವಗೃಹದಲ್ಲಿ ತಾ॥ 1/5 36 ರಲ್ಲೂ ಧರ್ಮಾರ್ಥವಾಗಿ [illegible] ನಂಜುಂಡದೇವರ ಪುತ್ರ ಚಿ॥ ರಾ॥ ಚನ್ನಬಸವಾರಾಧ್ಯ ಎಂಬ ವರನಿಗೆ ನಡೆಸಿದ ವಿವಾಹಮಹೋತ್ಸವಕಾಲದಲ್ಲಿ ಮ॥ ರಾ॥ ಸರ್ರಾಫ್ ಬಿ ಬಸಪ್ಪನವರಿಂದ ಮ॥ ರಾ॥ ಜಿ [illegible] ರುದ್ರಾರಾಧ್ಯರ ಮೂಲಕವಾಗಿ ಬಂದದ್ದು ರೂಪಾಯಿ 1—0—0

ಬೆಂಗಳೂರು ಸಿಟಿ
ತಾ॥ 21 5 36

ಎ ಚನ್ನಯ್ಯ,
ಸೆಕ್ರೆಟರಿ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದವರಿಗೂ ಸಾವಿರಾರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ನಾಲ್ಕುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅವರೆಲ್ಲರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳುವ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಮಾಡಿಸಲ್ಪಟ್ಟಿದೆ. ಇದರಲ್ಲಿ ಬರೆಯುವ ವಿಷಯಗಳು ವಿವರವಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಈ ಪುಸ್ತಕವನ್ನು ಶಿಷ್ಯರ ಪ್ರತಿಯೊಬ್ಬ ಗುರುವರ್ಗದವರೂ ತರಿಸಿ ಅಪೇಕ್ಷಿಸಿದಂತೆ ವಿವರವನ್ನೆಲ್ಲ ಬರೆದು ಮಠದಾರರ ಪತ್ರವಾಗಿ ಇಡಬೇಕು. ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂಥ ಶಿಷ್ಯ ಕಾಗದಗಳನ್ನು ಉಪಯೋಗಿಸಿರವದಲ್ಲದೆ ಸುಂದರವಾದ ಮುತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಿಂಹಾಸನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಗಳು ಅತಿ ಕಡಿಮೆ ಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೬—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂದೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೬—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುತ್ತಾಶಿಪಿಭಸ್ಮ	೧	೦—೮—೦
ಕಾಂತಭಸ್ಮ	೧	೦—೮—೦
ಯಶದಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೯—೦—೦
ಮಾಣಿಕ್ಯಭಸ್ಮ	೧	೬೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೪—೦
ಜಿಂಕೆಕೊಂಬಿನ ಭಸ್ಮ	೧	೦—೮—೦
ಗೋದಂತಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್— ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು.

ವಿಳಾಸ— ಮ್ಯಾನೇಜರ್,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಅಂದವಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಸಮಾಜಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವಿಯ ನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವಿನಾಮಾವಳಿ, ಷಣ್ಮುಖಸ್ವಾಮಿ ನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳೂ ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲಿರುವಂತೆ ನಿತ್ಯದಲ್ಲಿಯೂ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. ಬೆಲೆ ೧೨ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಶೋಭಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶೀಕ್ಷೇತ್ರವಾಸಿಗಳಾದ ಸ್ವಪ್ರಕಾಶಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತ-ಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಆ ಗ್ರಂಥದ ರಚನೆಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಸಂಸ್ಕೃತ ಟೀಕೆಯನ್ನು ಬರೆಯುತ್ತಿದ್ದಾರೆ. ಈ ಮೂಲಗ್ರಂಥವು ಕೇವಲ ೩೬ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩೪ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಸಂತೋಷಪೂರ್ವಕವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ರಚನೆಯನ್ನು ಕಂಡು ಪಂಡಿತರನ್ನು ಪ್ರಶಂಸಿಸುತ್ತಿರುವವಲ್ಲದೆ ಈ ಗ್ರಂಥವನ್ನು ಪರಿಶೋಧಿಸಿದವರಿಗೆ ಸಹಾಯವಾದ ದ್ರವ್ಯವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೩೪ ಪುಟಗಳಿಂದ ಕೂಡಿದ್ದು ಬಿಳಿ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುರ್ಲಭವಾದ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದು ರೂಪಾಯಿಗೆ ಸಾಹಿತ್ಯಸೇವಾಸಂಘದ ಸಭಾಸದರಾಗ ಹೋಗಲಾಗಿ ೬ ರೂ. ಗೆ ದೊರೆಯುವದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಎಂಭತ್ತು ಅವತಾರಗಳ ತೋರಿಸುವ ಫೋಟೋ ಸೈಜು ೩೦×೧೪ ಬೆಲೆ ಒಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಬೋಧಿಸುತ್ತಿರುವ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ವ ರ್ಗರ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಸದ್ಯಃ ಹಿಂದಿನ ಹಾನಗಲ್ಲಿನ ತಪಸ್ವಿಗಳವರು ಎಷ್ಟೋ ಜನ ಭಕ್ತರೊಡನೆ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ದಿವ್ಯಾಸನದ ಫೋಟೋ ಸೈಜು ೧೪×೧೦ ಬೆಲೆ ಒಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ದಿವ್ಯಾಸನದ ಫೋಟೋ ಸೈಜು ೧೦×೬ ಬೆಲೆ ಒಕ್ಕೆ	೦—೦—೯
ಶ್ರೀ ಕಾಶೀ ಪೀಠಸ್ಥ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಮಿಯಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಲಿಂಗಗಳನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಒಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೮
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ಒಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರ ಹಿಮಾಲಯದ ಸ್ನಾನ ಘಟ್ಟದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ— ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸಲಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್, ಮೈಸೂರು

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ನೆಗಡಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು

(Registered Trade Mark)

ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವಿ ಪಿ ೦-೪-೦ ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ ಪಿ ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[15] ಪೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಪೈ
ಮರುಳಸಿದ್ಧೇಶ್ವರ ಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೨ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೨ನೆಯ ಆವೃತ್ತಿ)	೧ ಆಣೆ
ಬಸವಾದಿ ಸಿದ್ಧತತ್ತ್ವದರ್ಪಣ (೮ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವರಹಸ್ಯ ವಿಲಾಸ	೨ ಆಣೆ
ಶ್ರೀಗುರುತತ್ತ್ವ ಪದಗಳು	೨ ಆಣೆ
ಗುರುಸ್ವರೂಪಸ್ವವರದೀಪಿಕ	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ವೀರಶೈವಾಚಾರವಿಧಿ (೨ ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೪ ಆಣೆ
ಸನ್ಯಾಸಾಶ್ರಮವಿಮರ್ಶ ತತ್ತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಸಿದ್ಧಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचे भाषण (मराठी)	८ आणे
Speeches by Pandit Shri Kashinatha Shastri (*English*)	12 As
ವೀರಶೈವರತ್ನ (೪ನೆಯ ಆವೃತ್ತಿ)	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕೆಯುಳ್ಳದು)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೨-೨ ಪ್ರತಿ)	೮ ರೂ
लिंगधारणचंद्रिका (संस्कृत)	१ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಚ್ಚುಮಾಡಿಸಿ ವೇ|| ಪಂಡಿತ ಶ್ರೀ ಗುರುಪಂಚಾಕ್ಷರಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಸತತರ್ ಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು

ಸ್ಥಳದವರಿಗೆ ೧ ರೂ ೧೧ — ಬಿಡಿ ಪ್ರತಿ ೧ಕ್ಕೆ ೯ ಪೈ — ಪರಸ್ಥಳದವರಿಗೆ ೩ ರೂ ... ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೧೦.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧ನೇ ಜೂನ್ ೧೯೩೬ [ಸಂಚಿಕೆ ೬

ಚೀನಾದೇಶದಲ್ಲಿ ಪ್ರಾಪ್ತವಾಗಿರುವ ಪ್ರಾಚೀನಗ್ರಂಥಗಳು

ಈಗ್ಗೆ ನಾಲ್ಕುವರ್ಷಗಳ ಕೆಳಗೆ ಜಪಾನಿನವರಿಗೂ, ಚೀನರಿಗೂ ಘೋರಯುದ್ಧವು ಪ್ರಾರಂಭವಾಯಿತು ಚೀನರು ಎಷ್ಟು ಹೆಣಗಾಡಿದರೂ ಶತ್ರುಗಳ ಏಟನ್ನು ತಡೆಯಲಾರದೆ ಬೆನ್ನುಕೊಟ್ಟು ಓಡಿಹೋದರು ಆಗ ಅವರನ್ನು ಅಟ್ಟಿಕೊಂಡುಹೋದ ಜಪಾನರು ತಮ್ಮ ಪರಾಕ್ರಮವನ್ನು ತೋರಿಸುತ್ತ ಬಾಂಬುಗಳನ್ನು ಹಾಕುತ್ತ ಹೋದರು ಆ ಬಾಂಬುಗಳಲ್ಲೊಂದು ಚೀನದ ದೊಡ್ಡ ಗೋಡೆಗೆ ತಗುಲಿ ಆ ಭಾಗವು ಬಿದ್ದುಹೋಯಿತು ಬಿದ್ದ ಗೋಡೆಯ ತಳದಲ್ಲಿ ಅತ್ಯಮೂಲ್ಯವಾದ ಕೆಲವು ಕಾಗದಪತ್ರಗಳು ಸಿಕ್ಕಿವು ಆ ಕಾಗದ ಪತ್ರಗಳು ಚೀನ, ಭಾರತ ಇತ್ಯಾದಿ ಪೂರ್ವರಾಷ್ಟ್ರಗಳ ಇತಿಹಾಸವನ್ನು ಕುರಿತು ಕಟ್ಟಿರುವ ಊಹಾಪೋಹಗಳನ್ನೆಲ್ಲ ತಲೆಕೆಳಕುಮಾಡುತ್ತವೆ ಆ ದೇಶಗಳ ಸಾಂಸ್ಕೃತಿಕ ಸಂಪತ್ತು ಪಶ್ಚಿಮ ರಾಷ್ಟ್ರದ ಸಾಂಸ್ಕೃತಿಕವೈಭವಕ್ಕಿಂತ ಕಡಿಮೆಯಾಗಿಲ್ಲವೆಂಬುದನ್ನಾದರೂ ಸ್ಪಷ್ಟವಾಗಿ ತೋರುತ್ತವೆ

ಆ ಕಾಗದಪತ್ರಗಳು ದೊಡ್ಡಗೋಡೆಯ ಕೆಳಗೆ ಸಿಕ್ಕಿರುವುದೂ ವಿಚಿತ್ರವಾಗಿದೆ ಈಗ್ಗೆ ಸುಮಾರು ೧೦ ಸಾವಿರ ವರ್ಷಗಳ ಹಿಂದೆ ಚೀ ಇಷೆ ವಾಂಗ್ ಎಂಬ ದುಷ್ಟ ಹುಚ್ಚು ಚಕ್ರವರ್ತಿಯು ಚೀನಾದೇಶವನ್ನು ಆಳುತ್ತಿದ್ದನಂತೆ! ಆಗ ಅತ್ಯುನ್ನತಸ್ಥಿತಿಯಲ್ಲಿದ್ದ ಚೀನರ ನಾಗರಿಕತೆಯೆಲ್ಲ ತನ್ನ ಕಾಲದಲ್ಲಿಯೇ ತನ್ನ ಸ್ವಂತ ಸ್ಫೂರ್ತಿಯಿಂದಲೇ ಉದ್ಭವಿಸಿತೆಂದು ಮುಂದಿನ ಪೀಳಿಗೆಯವರು ತಿಳಿಯುವಂತೆ ಮಾಡಬೇಕೆಂಬ ಹುಚ್ಚುಹಿಡಿದು, ಆತನು ಪುರಾತನಕಾಲದ ಎಲ್ಲ ನಾಗರಿಕತೆಯ ಚಿಹ್ನಗಳನ್ನೂ ನಾಶಮಾಡಿ, ಎಲ್ಲವನ್ನೂ ಸುಟ್ಟು ಕಟ್ಟಿಸಿದನಂತೆ! ಹಾಗೆಯೇ ಹಿಂದಿನಕಾಲದ ಗ್ರಂಥಗಳನ್ನೂ ಸಹ ಸುಟ್ಟುಹಾಕಿಬಿಟ್ಟನಂತೆ! ಈ ಹುಚ್ಚುದೊರೆಯ ದರ್ಬಾರನ್ನು ನೋಡಿ ನೊಂದುಕೊಂಡ ಮೇಧಾವಿಯೊಬ್ಬನು ಆಗಿನಕಾಲದ ಅನೇಕ ಉದ್ಗ್ರಂಥಗಳನ್ನು ಗಂಟುಕಟ್ಟಿ ಒಂದು ಗುಡಾಣದಲ್ಲಿ ಹಾಕಿ ಆ ದೊಡ್ಡಗೋಡೆಯ ಅಡಿಯಲ್ಲಿ ಹೂತನಂತೆ! ಈ ಅಂಶವನ್ನೂ ಕೂಡ ಆ ಮೇಧಾವಿಯು ಬರೆದಿಟ್ಟಿದ್ದಾನೆ

ಈಗ ಆ ಕಾಗದಪತ್ರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ ಅನೇಕ ಆಶ್ಚರ್ಯಕರವಾದ ಅಂಶಗಳು ಇದರಿಂದ ಹೊರಬೀಳಹತ್ತಿವೆ ಆ ಕಾಗದಪತ್ರಗಳು ೧೦ ಸಹಸ್ರ ವರ್ಷಗಳ ಹಿಂದಿನಕಾಲಕ್ಕೆ ಸೇರಿದವಂತೆ! ಸೂಕ್ಷ್ಮವಾಗಿ ನೋಡುತ್ತ ಹೋದರೆ, ಅಲ್ಲಿ ಕಾಣಬರುವ ಸಾಮಾಜಿಕನೀತಿಗಳು, ಧರ್ಮರಹಸ್ಯಗಳು ಮನುಧರ್ಮಶಾಸ್ತ್ರಕ್ಕೆ ಸ್ವಲ್ಪವೂ ಹೆಚ್ಚುಕಡಿಮೆಯಿಲ್ಲದೆ ತಾಳೆಯಾಗುತ್ತವಂತೆ! ಕೆಲವು ಕಡೆ ಮನುಧರ್ಮಶಾಸ್ತ್ರವನ್ನು ಆಧಾರವಾಗಿಟ್ಟುಕೊಂಡು ಬರೆದಂತೆ ಕೂಡ ತೋರುತ್ತವೆಯಂತೆ!

ಇನ್ನೊಂದು ಆಶ್ಚರ್ಯಕರವಾದ ಸಂಗತಿಯೆಂದರೆ, ಕಳೆದ ಶತಮಾನದಲ್ಲಿ ಡಾರ್ವಿನ್ ಎಂಬ ಆಂಗ್ಲಧೀಮಂತನು ವಿಕಾಸವಾದವನ್ನು ಹೂಡಿದನು ಪ್ರಾಣಿಗಳು ದೇಶಕಾಲಪರಿಸ್ಥಿತಿಗಳಿಗನುಗುಣವಾಗಿ ರೂಪಭೇದವನ್ನು ಪಡೆದವೆಂದು ಆ ವಾದವು ಹೇಳುತ್ತದೆ ಈ ಕಾಲದಲ್ಲಿ ಡಾರ್ವಿನ್ನನೇ ಈ ತತ್ವವನ್ನು ಸಪ್ರಮಾಣವಾಗಿ ಸಿದ್ಧಾಂತಮಾಡಿದನು ಈಗ ಸಿಕ್ಕಿರುವ ಹಳೆಯ ಕಾಲದ ಆ ಚೀಣದ ಕಡತದಲ್ಲಿ ಈ ವಿಕಾಸತತ್ವ ವಿಷಯಕವಾಗಿ ಕೆಲವು ಭಾಗಗಳಿವೆ ಜೀವಿಗಳು ನಾನಾ ಕಾರ್ಯಕಾರಣಗಳಿಂದ ರೂಪಭೇದವನ್ನು ಪಡೆದು, ಕಡೆಗೆ ಅತ್ಯುತ್ತಮವಾದ ಮಾನವತೆಯನ್ನು ಪಡೆದವೆಂದು ಅನೇಕ ಪ್ರಮೇಯಗಳಲ್ಲಿ ಹೇಳಿದೆ

ಈ ಕಡತದಿಂದ ಭಾರತದ ಇತಿಹಾಸಕ್ಕೂ ಬಹಳ ಸಹಾಯವಾಗಿದೆ ಈಗ್ಗೆ ೧೦ ಸಹಸ್ರವರ್ಷಗಳ ಹಿಂದೆ ಮನುಧರ್ಮಶಾಸ್ತ್ರವು ದೂರದಲ್ಲಿರುವ ಚೀನಾದೇಶವನ್ನು ಹೊಕ್ಕಿರಬೇಕಾದರೆ ಆ ಗ್ರಂಥರಚನೆಯು ಯಾವಾಗ ಆಗಿರಬೇಕು? ವೇದಗಳ ಕಾಲವು ಮತ್ತೆಷ್ಟು ಹಿಂದಿನದಾಗಿರಬೇಕು? ಪರಕೀಯರಾದ ಚೀನರು ಈ ಧರ್ಮತತ್ವಗಳನ್ನು ಆಧಾರವಾಗಿ ಸ್ವೀಕರಿಸಬೇಕೆಂದರೆ ಭಾರತೀಯರು ಎಷ್ಟು ವಿಶ್ವವ್ಯಾಪಿಗಳಾಗಿರಬೇಕು? ಅವರ ಪ್ರಭಾವವು, ಎಷ್ಟು ವರ್ಣನೀಯವಾಗಿರಬೇಕು?

ವಿಲಕ್ಷಣ ವಿವಾಹ!

ಬೆಳಗಾಂವ ಡಿ॥ ಗಂದಿವಾಡ ಎಂಬ ಗ್ರಾಮದಲ್ಲಿ ಮೊನ್ನೆಮೊನ್ನೆ ಒಂದು ವಿವಾಹವು ನಡೆಯಿತು. ವಧೂವರರಿಗೆ ಕಂಕಣಧಾರಣವಿಲ್ಲ, ಸಪ್ತಪದಿಯಿಲ್ಲ. ಫಲಫಲಕಧಾರಣವಿಲ್ಲ ದೇವತಾಕಾರ್ಯವಿಲ್ಲ ಒಟ್ಟಿಗೆ ವೈದಿಕಸಂಸ್ಕಾರಗಳು ಯಾವುವೂ ಇಲ್ಲ ಮಡಿವೈಲಿಗೆಗಳಂತೂ ಮೊದಲೇ ಇಲ್ಲ ಇದನ್ನು ಬ್ಯಾಹಟ್ಟಿ ರಾಚಯ್ಯನೆಂಬವನು ನಡೆಯಿಸಿದನು ಈ ರೀತಿಯಾಗಿ ಈ ಮುದಿಹುಚ್ಚನು ನಡೆಯಿಸಿದ್ದನ್ನು ನೋಡಿ ಇವನಿಗೆ ಅನೇಕರು ಛೀಮಾರಿಹಾಕಿದರು ಆದರೂ ಇವನು ತನ್ನ ಹಠವನ್ನೇ ಸಾಧಿಸಿದನು ಇಂತಹ ನಾಸ್ತಿಕರಿಗೆ ದೇವರು ಯಾವ ಶಿಕ್ಷೆಯನ್ನು ವಿಧಿಸುವನೋ ತಿಳಿಯದಾಗಿದೆ ಕಾಲಾಯ ತಸ್ಮೈನಮಃ!

ಓರ್ವ ಪ್ರತ್ಯಕ್ಷದರ್ಶಿ

ಸ್ವೀಕಾರ

ವಿಜಾಪುರ ಡಿ॥ ಬದಾಮಿಯಲ್ಲಿರುವ ಮ॥ ರಾ॥ ಪಟ್ಟಣದ ಚನ್ನಪ್ಪನವರು ಮತ್ತು ವೀರಭದ್ರಪ್ಪನವರು ಇವರ ಗೃಹದಲ್ಲಿ ನೆರವೇರಿದ ದೀಕ್ಷಾಮಹೋತ್ಸವದಲ್ಲಿ ಪ್ರಭಾಪೋಷಣಕ್ಕಾಗಿ ಶ್ರೀ ವಿಜಾಪುರದ ಆರಳೆಲೆಮಠದ ಶಾಂತವೀರಸ್ವಾಮಿಗಳವರ ಅಪ್ಪಣೆಯಪ್ರಕಾರ ತೆಗೆಯಿಸಿದ 3 ರೂ ಗಳು ಮತ್ತು ಮ॥ ರಾ॥ ಶಾಂತಪ್ಪ ಕುಬಸದ ಹುಬ್ಬಳ್ಳಿ ಇವರ ವಿವಾಹಸಮಯದಲ್ಲಿ ಸಮರ್ಪಿಸಿದ 2 ರೂ ಗಳು ಒಟ್ಟು 5 ರೂ ಗಳು ಬದಾಮಿ ಹಿರೇಮಠದ ವೇ॥ ವೀರಬಸಯ್ಯನವರದ್ವಾರಾ ತಲ್ಪಿರುತ್ತವೆ

ತರೀಕೆರೆ ತಾ॥ ಹುಣಸಘಟ್ಟದ ಮಠದ ವೇ॥ ಶಂಕರಯ್ಯನವರ ಮಕ್ಕಳು ರುದ್ರಯ್ಯನವರು ತಾ॥ 20-5-36 ನೇ ಬುಧವಾರ ದಿವಸ ವಿವಾಹಿತರಾದಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 3 ರೂ ಗಳು ವೇ॥ ಬೀರೂರು ಎಂ. ಬಿ. ಮರುಳಸಿದ್ಧಯ್ಯನವರ ದ್ವಾರಾ ತಲ್ಪಿರುತ್ತವೆ

ಶಿಕಾರಿಪುರ ತಾ॥ ಕಡೇನಂದಿಹಳ್ಳಿಯಲ್ಲಿರುವ ಹೋಳನಹಂಪೆಶ್ವರಮಠದ ಪ್ರತ್ಯಕ್ಷರಾದ ಗುರುಮೂರ್ತಿ ಸ್ವಾಮಿಗಳವರು ತಮ್ಮ ಮನಸ್ಸಂಕಲ್ಪವು ಶ್ರೀಜಗದಾಚಾರ್ಯರ ಅನುಗ್ರಹಬಲದಿಂದ ನೆರವೇರಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 2 ರೂ ಗಳನ್ನು ಕಳುಹಿರುತ್ತಾರೆ

ಬಳ್ಳಾರಿ ಡಿ॥ ಹಂದಿಹಾಳ್ ಗ್ರಾಮದಲ್ಲಿರುವ ವೇ॥ ಕಪ್ಪಗಲ್ಲುಮಠದ ಕೆಂಗೋಟಯ್ಯನವರ ಗೃಹದಲ್ಲಿ ನೆರವೇರಿದ ದೀಕ್ಷಾ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ಪೆಟ್ರಿಸ್ಕೂಲ್ ಹೆಡ್‌ಮಾಸ್ಟರ್ ವೇ॥ ಮಹಾದೇವಯ್ಯನವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ॥ ಹೊಸನಗರದಲ್ಲಿರುವ ಮ॥ ರಾ॥ ಯಾದಗಿರಿ ಬಸಪ್ಪನವರ ಪುತ್ರ ಚಿ॥ ಸಿದ್ಧಲಿಂಗಪ್ಪನಿಗೆ ಮ॥ ಸವಲಗುಂದ ಸಿದ್ಧರಾಮಶೆಟ್ಟರ ಚನ್ನಬಸಪ್ಪನವರ ಪುತ್ರಿ ಚಿ॥ ಸೌ॥ ಪಾರ್ವತಮ್ಮನನ್ನು ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 1 ರೂ ಯು ಶ್ರೀ ದಿಗ್ಗಾವಿ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಶಿಕಾರಿಪುರದ ತಾ॥ ಕಡೇನಂದಿಹಳ್ಳಿಯಲ್ಲಿರುವ ಮ॥ ರಾ॥ ಮಾಸ್ತರ್ ವೀರಪ್ಪನವರ ಅಳಿಯ ಚಿ॥ ಚನ್ನಬಸಪ್ಪನೆಂಬ ವರನಿಗೆ ಸಾಗರ ತಾ॥ ನಗರದ ಶಾಂತವೀರಪ್ಪನವರ ಪುತ್ರಿ ಚಿ॥ ಸೌ॥ ನಾಗಮ್ಮನನ್ನು ತಂದು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಿದ 1 ರೂಪಾಯಿಯು ಮಾಸೂರು ಹಿರೇಮಠದ ವೇ॥ ಚನ್ನವೀರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ

ಮುಕ್ತಲ್ ತಾ॥ ಸೀರಡಗುಂಬದಲ್ಲಿರುವ ಮರಪತ್ತಿ ಅಯ್ಯಪ್ಪನವರು ತಮ್ಮ ಪುತ್ರಿಯರ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿ ವೇ॥ ವಿರೂಪಾಕ್ಷಯ್ಯನವರದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಮದ್ರಾಸಿನ ಹಿಂದೂಪತ್ರಿಕೆಯ ಎಡಿಟರಾಗಿ ನಿವೃತ್ತರಾಗಿದ್ದ ಶ್ರೀಯುತ ಭಾಷ್ಯಂಅಯ್ಯಂಗಾರ್ಯರು 29 ನೆಯ ತಾರೀಖಿನ ದಿವಸ ಮಧ್ಯಾಹ್ನ 1-30 ಸಮಯದಲ್ಲಿ ಹೃದಯದೌರ್ಬಲ್ಯದಿಂದ ಮೃತಿಹೊಂದಿದರೆಂಬ ವಿಷಯವನ್ನು ತಿಳುಹಿಸಲು ವ್ಯಸನವೆನಿಸುತ್ತದೆ

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಮಹನೀಯರ ಹಿತೋಕ್ತಿಗಳು

(ಹಿಂದಿನಿಂದ ಮುಂದುವರಿದದ್ದು)

4 ಸತ್ಯದ ನಿಗ್ರಹ ಸ್ಥಾನವಾದ ನಾಲಿಗೆಯು ಶರೀರದಲ್ಲಿ ಬಹು ಮಹತ್ವದ ಅಂಗವಾಗಿರುವದು. ಕುಲವನ್ನು ನಾಲಗೆಯು ಹೇಳುತ್ತದೆ ಎಂದು ನಾಣ್ಣುಡಿಯಿರುವದು. ಇದರಿಂದ ನಾಲಗೆಯು ಮನುಜನ ಗುಣವನ್ನು ಪ್ರಕಟಪಡಿಸತಕ್ಕ ಅವಯವವೆಂದು ವ್ಯಕ್ತವಾಗುವದು. ವೈದ್ಯರೂ ಸಹ ರೋಗಿಯ ನಾಲಗೆಯನ್ನು ನೋಡಿ ದೇಹಸ್ಥಿತಿಯನ್ನು ನಿರ್ಣಯಿಸುತ್ತಾರೆ. ಸತ್ಯವೇ ಉತ್ತಮ ನಾಲಗೆಯ ಲಕ್ಷಣವು. ಸತ್ಯಕಾಮಜಾಬಾಲನು ಉಪನಯನಾರ್ಥವಾಗಿ ಒಬ್ಬ ಋಷಿಯ ಬಳಿಗೆ ಹೋದಾಗ, ತನ್ನ ತಾಯಿಗೆ ಗೋತ್ರವು ಗೊತ್ತಿಲ್ಲವೆಂದು ನಿಜವನ್ನು ಹೇಳುತ್ತಲೇ ಅವನು ಬ್ರಾಹ್ಮಣನಾಗಿರಬೇಕೆಂದು ನಿಶ್ಚಯಿಸಿ ಅವನಿಗೆ ಸಂಸ್ಕಾರವನ್ನು ಮಾಡಿ ಉಪದೇಶಿಸಿದರೆಂದು ಉಪನಿಷತ್ತಿನಲ್ಲಿ ಹೇಳಿರುವದು. ಮತ್ತು ಸತ್ಯಕ್ಕೆ ಸರ್ವೋತ್ಕೃಷ್ಟವಾದ ಪ್ರಾಶಸ್ತ್ಯವನ್ನು ಕೊಡುವ ಆತ್ಮಶಕ್ತಿಯುಳ್ಳವರು ಮೊದಲು ತಮ್ಮ ಮನಸ್ಸಿನಲ್ಲಿ ಮೂಡಿರುವ ಕಲ್ಪನೆಗಳು ದಾರಿತಪ್ಪಿ ಹೋಗುತ್ತಿದ್ದರೂ ಅವುಗಳನ್ನು ಬಿಡಿಸಿಕೊಳ್ಳುವುದಕ್ಕೆ ಎಷ್ಟುಮಾತ್ರವೂ ಯತ್ನಿಸುವದಿಲ್ಲವು. ಏಕೆಂದರೆ ಅವರಿಗೆ ಬೇಕಾಗಿರುವದು ಸತ್ಯ. ಆದರೆ ಕೆಲ ದುರಾಚಾರಿಗಳು ಸಿಕ್ಕಿದ ರೀತಿಯಿಂದ ಹಣದ ಪ್ರಾಪ್ತಿಗಾಗಿ ಸುಳ್ಳು ಮಾರ್ಗವನ್ನಾಶ್ರಯಿಸುವರು. ಅವರಿಗೆ ಬೇಕಾಗಿರುವದು ಹಣ. ಹಣವೆಂದರೆ ಅಣ್ಣತಮ್ಮಂದಿರನ್ನೂ, ಬಂಧು ಬಾಂಧವರನ್ನೂ ತೊರೆಯವರಲ್ಲದೆ ನೀತಿಯನ್ನು ಬಿಡಿಬಿಡಿಯಾಗಿ ಕಡಿಯುವಂತಹ ಹೀನವೂ, ಕ್ರೂರವೂ ಆದ ಕೃತ್ಯಗಳನ್ನು ಮಾಡುವುದಕ್ಕೆ ಹೇಸುವದಿಲ್ಲವು. ಸಿಪಾಯಿ ಕೈಯಲ್ಲಿರುವದು ಗಾಜಿನ ಚೂರೆಂದು ಹೇಳಿ ನಿಜವಾದ ರತ್ನವನ್ನು ತಂದು ಎದುರಿಗಿಟ್ಟು ಒಬ್ಬನು ಕಣ್ಣಿಗೆ ಕಟ್ಟಿದಹಾಗೆ ತೋರಿಸಿದರೂ — ಜಿನಚೂರನ್ನು ಬಿಸಾಡುವುದಕ್ಕೆ ಹಿಂತೆಗೆಯುವದು ಹೆಚ್ಚಿನ ದಡ್ಡತನವಲ್ಲವೆ! ಮತ್ತು ಅದನ್ನು ಒರೆಗೆ ಹಚ್ಚಿ ಅದರ ತುಚ್ಛತ್ವವನ್ನು ತೋರಿಸಿದರೂ ಕೂಡ ಅದನ್ನು ತೆಗೆದೊಗೆಯದೆ ಮತ್ತೆಮತ್ತೆ ಅದನ್ನು ಪೆಟ್ಟಿಗೆಯಲ್ಲಿ ಬಚ್ಚಿಡುವದು ಬರೀ ಆಸಬುರುಕತನವನ್ನೂ ದುರಭಿಮಾನವನ್ನೂ ತೋರಿಸುವದಲ್ಲದೆ ಮತ್ತೇನು? ಪರಂತು ತುಚ್ಛವೆಂದು ತಿಳಿದೊಡನೆ ಬಿಸಾಡುವುದಕ್ಕಾದರೂ ಒಂದುಬಗೆಯ ಮನಸ್ಸಿನ ಸ್ಥೈರ್ಯವು ಬೇಕು ವಾಚಕರೇ, ಉದಾಹರಣೆಗಾಗಿ ನೋಡಿರಿ. ಒಂದು ಪ್ರಸಂಗದಲ್ಲಿ ಲಕ್ಷ್ಮಣನು ರಾಮನ ಆಜ್ಞೋಲ್ಲಂಘನೆಮಾಡಿದುದಕ್ಕಾಗಿ ರಾಮನು ಸುಖದುಃಖಗಳಲ್ಲಿ ಏಕರೀತಿಯಾಗಿ ದೇಹವೆರಡಾದರೂ ಜೀವ ಒಂದೇ ಎಂಬಂತಿದ್ದ ತಮ್ಮನನ್ನು ಕಾಡಿಗೆ ಕಳಿಸಲಿಲ್ಲವೇ? ಮತ್ತು ವಿಭೀಷಣನು ತನ್ನ ಅಣ್ಣನಾದ ರಾವಣಾಸುರನ ದುರ್ನಡತೆಯನ್ನು ನೋಡಿನೋಡಿ ಸಹಿಸಲಾರದೆ ಕಳವಳಗೊಂಡು ಅಣ್ಣನೆಂಬ ಅಭಿಮಾನದಿಂದ "ಅಣ್ಣನು ಕೆಟ್ಟುಹೋದಾನಲ್ಲಾ" ಎಂಬ ಕನಿಕರದಿಂದ ಪರಿಪರಿಯಾಗಿ ನೀತಿಯನ್ನು ಹೇಳಿದನು! ಹೇಳಿದರೇನು ಫಲ? "ಕೋಣನ ಮುಂದೆ ಕಿನ್ನರಿಯನ್ನು ಬಾರಿಸಿದರೆ ಕೇಳುವನ್ನೆ ಕೋಣ" ಎಂಬ ಸಾಮ್ಯದಂತೆ ಸ್ವಾರ್ಥಿ, ದುರಾಶಿ, ದುರಹಂಕಾರ ಶಿರೋಮಣಿಯಾದ ಆ ರಾಕ್ಷಸನು ತಮ್ಮನ ನೀತಿಯನ್ನು ಎಡಗಾಲಿನ ಅಂಗುಷ್ಠದಿಂದ ಒರಸಿ ಭೂಮಿಯ ಮೇಲೆ ನಾನಿದ್ದೇನೆಯೋ, ನನ್ನ ಮೇಲೆ ಭೂಮಿ ಇದೆಯೋ ಎಂಬ ಪರಿವೆಯೇ ಇಲ್ಲದೆ "ಅರರೇ! ಎನ್ನಯ ಸಮಾನ ಧರಣಿಯೊಳಾರಿಹರು?" ಎಂದೆನ್ನುತ್ತ ತಾನೇ ತಾನಾಗಿ ತನ್ನ ದುರ್ನಡತೆಯನ್ನು ಮುಂದುವರಿಸಿದನು. ಕಟ್ಟಕಡೆಗೆ ವಿಭೀಷಣನು ಬಹು ಜುಗುಪ್ಸೆ ಪಟ್ಟುಕೊಂಡು ಭ್ರಾತೃವಾತ್ಸಲ್ಯವೆಂಬ ಸಂಕೋಲೆಯನ್ನು ಸಂಪೂರ್ಣವಾಗಿ ಕತ್ತರಿಸಿಹಾಕಿ ಶ್ರೀರಾಮನಲ್ಲಿಗೆ ಬಂದು ಶರಣಾಗತನಾಗಿ ಚಿರಜೀವಿಯಾಗಲಿಲ್ಲವೇ? ಇವೇ ಸತ್ಯವಂತರ ಲಕ್ಷಣಗಳು. ಇದರಂತೆಯೇ ಸತ್ಯವಾದ ವಿಚಾರಗಳು ಮುಂದೆ ಬಂದಾಗ ನಮ್ಮ ಮನಸ್ಸಿನ ಅಸತ್ಯವಾದ ಕಲ್ಪನೆಗಳನ್ನು ಹೊರಗೆ ತೂರಬಿಡುವುದಕ್ಕೂ ನಮಗೊಂದು ಬಗೆಯ ಆತ್ಮಶಕ್ತಿಯ ಬಲವು ಬೇಕೇಬೇಕು. ಆದರೆ ತನ್ನ ಮನಸ್ಸನ್ನು ಗೆಲ್ಲುವುದಕ್ಕೆ ಆಸುರೀ (ರಾಕ್ಷಸ) ಸ್ವಭಾವವು ಎಷ್ಟುಮಾತ್ರವೂ ನೆರವಾಗಲಾರದು. ಅದು ದೈವೀಪ್ರಕೃತಿಯೊಂದಕ್ಕೆಮಾತ್ರ ಸಂಪೂರ್ಣ ಶಕ್ಯವಾಗುವದು. ಸತ್ಯವನ್ನು ನುಡಿಯುವಾಗ್ಯೆ ಅಸ್ತಾಂಪ್ತರ ಪಕ್ಷಪಾತ (ದುರಭಿಮಾನ) ವನ್ನು ಹಿಡಿಯದಿರುವದು ಸದ್ಗೃಹಸ್ಥರ ಲೌಕಿಕ ಧಾರ್ಮಿಕ ಕರ್ತವ್ಯಕರ್ಮವಾಗಿರುವದು "ನ್ಯಾಯವ ಬಿಟ್ಟನ್ಯಾಯವ ಪೇಳುವ ನಾಯಿಗೆ ನರಕವು ತಪ್ಪುದೇ?"

5 ಧೈರ್ಯವೆಂಬ ಚಿನ್ನದ ಬೆಲೆಯನ್ನು ಕಟ್ಟುವುದಕ್ಕೆ ಅಪಜಯವೇ ಒರೆಗಲ್ಲು. ಗೆಲುವು ಸಿಕ್ಕುತ್ತ ಹೋದಹಾಗೆಲ್ಲ ಧೈರ್ಯವು ಉಕ್ಕುವದೇನೂ ದೊಡ್ಡ ಮಾತಲ್ಲ. ಆ ಧೈರ್ಯಕ್ಕೇನೂ ಬೆಲೆಯಿಲ್ಲ. ಸೋಲಿನ ಮೇಲೆ ಸೋಲಾದರೂ ಮನಸ್ಸಿನ ಉತ್ಸಾಹವು ತಗ್ಗದಿರುವದೇ ನಿಜವಾದ ಧೈರ್ಯವು. ಗೆಲುವನ್ನವಲಂಬಿಸಿ ಬೆಳೆಯುವ ಧೈರ್ಯವು ಎಂತಹ ಹೇಡಿಯಲ್ಲಾದರೂ ವ್ಯಕ್ತವಾಗುವದು. ಆದರೆ ಬದುಕುಳ್ಳದ ಧೈರ್ಯವು ಎಷ್ಟು ಸೋಲಾದರೂ ಕುಗ್ಗದಿರುವ ಧೈರ್ಯವು ನಿಜವಾದ ವೀರರಲ್ಲಿ ಮಾತ್ರ ಕಾಣಿಸಿಕೊಳ್ಳುವದು. ವಾಚಕ ಮಹಾಶಯರೇ, ಈ ಜಗತ್ತಿನಲ್ಲಿ ಕಲಜನ ಕೋಟಿ ಮಂಚಣ್ಣಗಳು ತಮ್ಮ ಒಳಗೆ ಕುಳಿತು ಮನೆಯ ಹೆಂಗಸರನ್ನು ಪರಪುರುಷರ ಸಂಗಡ ಜಗಳವಾಡಲಿಕ್ಕೆ ಬೀದಿಗೆ ಕಳಿಸುತ್ತಿರುವದು ಅಲ್ಲಲ್ಲ ಕಣ್ಣಿಗೆ ಬೀಳುತ್ತಿರುವದು. ಇಂಥ ಧೀರಶಿರೋಮಣಿಗಳನ್ನು ಯಾವ ಪಂಗಡಕ್ಕೆ ಸೇರಿಸಬೇಕೆಂಬುದನ್ನು ವಾಚಕರೇ ನಿರ್ಧರಿಸತಕ್ಕದ್ದಾಗಿರುವದು. ಅಂದಿಗೆ ಅದೇ ಸುಖ, ಇಂದಿಗೆ ಇದೇ ಸುಖವು.

6 ವಾಚಕಮಹಾಶಯರೇ! ದುಷ್ಟರಲ್ಲಿ ಮಾಡಿದ ಉಪಕಾರವು ಹೇಗಾಗುವದೆಂದರೆ ಹಾವಿಗೆ ಹಾಲನ್ನು ಕುಡಿಸಿ ಬೆಳೆಯಿಸಿದಂತೆಯೂ, ಅರಣ್ಯರೋದನಮಾಡಿದಂತೆಯೂ, ಹೆಣವನ್ನು ತಿಕ್ಕಿ ತಿಕ್ಕಿ ತೊಳೆದು ಶೃಂಗರಿಸಿದಂತೆಯೂ, ನಿಜ ಲಕ್ಷ್ಯದೇಶದಲ್ಲಿ ಕಮಲವನ್ನು ನೆಟ್ಟಂತೆಯೂ, ಮರುಭೂಮಿಯಲ್ಲಿ ವಿಶೇಷವಾಗಿ ಮಳೆ ಬಿದ್ದಂತೆಯೂ, ಕಿವುಡನ ಸಂಗಡ ಪಿಸಿಮಾತುಗಳನ್ನಾಡಿದಂತೆಯೂ, ಕುರುಡನ ಕೈಯಲ್ಲಿ ಕನ್ನಡಿಯನ್ನು ಕೊಟ್ಟಂತೆಯೂ, ಹೆಳವನು ಮರದ ತುದಿಯಲ್ಲಿರುವ ಹಣ್ಣನ್ನು ಒಯ್ಯಿಸಿದಂತೆಯೂ, ನೀರಿನ ಮೇಲೆ ಅಕ್ಷರಗಳನ್ನು ಬರೆದಂತೆಯೂ, ಅರುವತ್ತು ವರ್ಷದ ಮುದುಕನಿಗೆ ಹನ್ನೆರಡು ವರ್ಷದ ಬಾಲೆಯನ್ನು ಲಗ್ನಮಾಡಿದಂತೆಯೂ, ಹೇಡಿಯ ಕೈಯಲ್ಲಿ ಚಂದ್ರಾಯುಧವನ್ನು ಕೊಟ್ಟಂತೆಯೂ, ಗಾಳಿಯನ್ನು ಮೂಟೆಕಟ್ಟಿದಂತೆಯೂ, ಆಕಾಶದಲ್ಲಿ ಗೋಪುರವನ್ನು ಕಟ್ಟಿದಂತೆಯೂ, ಆಗುವದು. ಅದಾರ್ಥ್ ವ್ಯರ್ಥ ಶ್ರಮವೂ, ದುಃಖವೂ, ನಿಷ್ಫಲವೂ ಆಗುವದು. ಮತ್ತು ಅಂಥವರಲ್ಲಿ ಮಾಡಿದ ಸದ್ಬೋಧಶ್ರವಣವೂ ಸಹ ಸೇತುವೆಯ ಅಡಿಯಲ್ಲಿ ನೀರು ಒಂದುಕಡೆಯಿಂದ ಪ್ರವೇಶಿಸಿ ಮತ್ತೊಂದು ಪಾರ್ಶ್ವದಿಂದ ಹರಿದುಹೋಗುವ ತರನಾಗಿ, ಸದ್ವಾಕ್ಯಗಳು ದುರಾತ್ಮರ ಒಂದು ಕಿವಿಯಲ್ಲಿ ಪ್ರವೇಶಿಸಿ ಅವರ ಮನಸ್ಸಿಗೆ ತಾಗದೆ ಮತ್ತೊಂದು ಕಿವಿಯಿಂದ ಸರಾಗವಾಗಿ ಹೊರಬೀಳುವವು. ನೀರು ಕಲ್ಲನ್ನು ಹೇಗೆ ಪ್ರವೇಶಿಸಲಾರದೋ ಹಾಗೆಯೇ ಧರ್ಮೋಪದೇಶವು ಬದ್ಧಜೀವನನ್ನು ಭೇದಿಸಲಾರದು. ಕೊಟ್ಟು ಕೆಟ್ಟವರಿಲ್ಲ, ಕೆರಿದು ಬದುಕಿದವರಿಲ್ಲ.

7 ವಾಚಕಮಹಾಶಯರೇ! ಪ್ರತಿಯೊಂದು ಮಾನವಪ್ರಾಣಿಗೂ ಪ್ರಪಂಚದ ಎಲ್ಲಾ ಸುಖಗಳಿಗಿಂತಲೂ ಮಕ್ಕಳಿಂದುಂಟಾಗುವ ಸುಖವು ಅತಿ ಹೆಚ್ಚಿನದಾಗಿಯೂ, ಎಲ್ಲಾ ವ್ಯಸನಗಳಿಗಿಂತಲೂ 'ಪುತ್ರಶೋಕೋ ನಿರಂತರಂ' ಎಂಬ ವಾಕ್ಯದಂತೆ ಮಕ್ಕಳಿಂದುಂಟಾಗುವ ವ್ಯಸನವು ಬಹು ನಿಷ್ಠುರವಾದುದಾಗಿಯೂ ಇರುವದು. ಮಕ್ಕಳ ವಿಯೋಗದಿಂದ ಎಷ್ಟೋ ಜನರು ತಮ್ಮ ಪ್ರಾಣಗಳನ್ನೇ ತೊರೆದಿರುತ್ತಾರೆ. ಎಷ್ಟೋ ಜನರು ಹುಚ್ಚರಾಗಿರುತ್ತಾರೆ. ಎಷ್ಟೋ ಜನರು ಆಹಾರವ್ಯವಹಾರಗಳ ಪರಿವೆಯೇ ಇಲ್ಲದೆ ತಮ್ಮ ದಾವ ಭಾವವಿಲಾಸಗಳಿಗೆ ತಿಲಾಂಜಲಿ ಕೊಟ್ಟುಬಿಟ್ಟು ಕೊರಗಿ ಸೊರಗಿ ನಿಸ್ತೇಜಸ್ಕರಾಗಿರುತ್ತಾರೆ. ಪ್ರಿಯ ಸಹೋದರರೇ! ನಾನೂ ಸಹ ಮೇಲ್ಕಂಡ ಗುಂಪಿಗೆ ಸೇರಿದವನಾಗಿರುತ್ತೇನೆ. ಆದರೆ, ನನ್ನ ಮತ್ತು ನನ್ನಂತೆ ನಿರಂತರ ದುಃಖಕ್ಕೀಡಾಗಿರುವ ಬಂಧುಭಗಿನಿಯರ ಮನಶ್ಶಾಂತಿಗೂ ಮತ್ತು ಜ್ಞಾನೋದಯಕ್ಕೂ ಒಂದು ಚಿಕ್ಕ ಇತಿಹಾಸವಿರುವದು ನೋಡಿರಿ! ಅದೇನೆಂದರೆ—ಪೂರ್ವಕಾಲದಲ್ಲಿ ಚಿತ್ರಕೇತುವೆಂಬ ಒಬ್ಬ ಮಹಾರಾಜನಿದ್ದನು. ಆತನಿಗೆ ಮಕ್ಕಳಿರಲಿಲ್ಲ. ಕೆಲ ಕಾಲದನಂತರ ಅಂಗೀರಋಷಿಗಳ ಅನುಜ್ಞೆಯ ಪ್ರಕಾರ ಪುತ್ರಕಾಮೇಷ್ಟಿಯಾಗವನ್ನು ಮಾಡಿ ಹಿರಿಯ ಹೆಂಡತಿಯಲ್ಲಿ ಒಬ್ಬ ಪುತ್ರರತ್ನವನ್ನು ಪಡೆದನು. ಹೀಗೆ ತಾಯಿ ತಂದೆಗಳು ಸಂತೋಷದಿಂದಿರುವಾಗ 'ಸುಖಸ್ಯಾನಂತರಂ ದುಃಖಂ' ಎಂಬಂತೆ ಅವನ ಕಿರಿಯ ಹೆಂಡರು ಅಸೂಯೆಯಿಂದ ರಾಜಪುತ್ರನಿಗೆ ವಿಷಹಾಕಿ ಕೊಂದದ್ದರಿಂದ ಬಹುದುಃಖಕ್ಕೀಡಾದನು. ದುಃಖವೆಂದರೆ ವಿವರಿಸಲಸದಳವು. ಬಂಜೆಗೆ ಪ್ರಸವವೇದನೆಯು ಗೊತ್ತಾಗದಿರುವಂತೆ, ಅನುಭವಿಸುವವರಿಗೆಮಾತ್ರ ಗೊತ್ತಾಗುವದಲ್ಲದೆ ಇತರರಿಗೆ ಗೊತ್ತಾಗುವದಿಲ್ಲವು. ಆ ರಾಜನು ಹೆಣವನ್ನು ಮುಂದಿಟ್ಟುಕೊಂಡು ಬಹು ಪರಿಯಾಗಿ ದುಃಖಿಸುತ್ತಿರುವಾಗ ಅಂಗೀರಸ ಮುನಿವರ್ಯರೂ ನಾರದರೂ ಅಲ್ಲಿಗೆ ಬಂದು—ಅಯ್ಯಾ! ಹುಚ್ಚು ದೊರೆಯೇ, ನೀನು ಜ್ಞಾನಹೀನನಾಗಿ ಹೀಗೆ ದುಃಖಿಸಬಹುದೇ? ತಂದೆ ಎಂದರೇನು? ಮಗನೆಂದರೇನು? ಪಕ್ಷಿಗಳು ಸಾಯಂಕಾಲವಾಗುತ್ತಲೇ ಒಂದು ಮರವನ್ನು ಸೇರಿ ರಾತ್ರಿಯೆಲ್ಲ ಅಲ್ಲಿದ್ದು ಬೆಳಗಾಗುತ್ತಲೇ ತಮ್ಮ ಇಚ್ಛಾಪ್ರಕಾರ ಹೊರಟುಹೋಗುವಂತೆಯೂ, ಸಂತೆಗೆ ನಾನಾ ಗ್ರಾಮಗಳ ಜನರು ಕೂಡಿ ತಂತಮ್ಮ ಕೆಲಸ ಮುಗಿದೊಡನೆ ತಂತಮ್ಮ ಊರುಗಳಿಗೆ ತೆರಳುವಂತೆಯೂ, ರೈಲಿನಲ್ಲಿ ನಾನಾ ಊರುಗಳ ಜನರು ಕೂಡಿ ಪ್ರಯಾಣ ಮಾಡುತ್ತಿದ್ದು ತಮ್ಮ ನಿಯಮಿತ ಸ್ಥಳಗಳು ಬಂದೊಡನೆ ಹೇಳದೆಕೇಳದೆ ಹೊರಟುಹೋಗುವಂತೆಯೂ ನಾವೆಲ್ಲರೂ ನಮ್ಮ ಕರ್ಮಾನುಗುಣವಾಗಿ ಈ ಜಡಜಗತ್ತಿನಲ್ಲಿ ಜನ್ಮಗಳನ್ನು ಪಡೆಯುವೆವು. ಆ ಪಾಪಪುಣ್ಯಾಂಶಗಳು ಮುಗಿದೊಡನೆಯೇ ಈ ಜನ್ಮವು ಹೋಗುವದು. ಎರಡು ದಿವಸಗಳಮಟ್ಟಿಗೆ ಇಲ್ಲಿ ನಾವು ಒಂದು ಪರಸ್ಪರ ಕೂಡಿದ್ದಮಾತ್ರಕ್ಕೆ ನಾವೆಲ್ಲರೂ ಎಂದಿಗೂ ಇಲ್ಲಿಯೇ ಇರಬಲ್ಲೆವೇ? ಮಿತಿಮೀರಿದ ಪ್ರವಾಹದ ಕಾಲದಲ್ಲಿ, ನದಿಯ ಒಂದು ಭಾಗದಲ್ಲಿದ್ದ ಮರಳು ಮರುದಿವಸ ಅಲ್ಲಿಯೇ ಇದ್ದೀತೇ? ಇದನ್ನರಿಯದೆ ನೀನು ಇಷ್ಟು ಮೋಹವನ್ನು ಹತ್ತಿಸಿಕೊಂಡು ದುಃಖಪಡುತ್ತಾ ಸಿಟ್ಟುಸುಣ್ಣವಾಗುತ್ತೀಯೋ, ನಿನಗಿಷ್ಟವಿದ್ದರೆ ನಿನ್ನ ಮಗನನ್ನು ಈಗ ಬದುಕಿಸಿಕೊಡುವೆವು ಎಂದರು. ಕೂಡಲೇ ನಾರದರು ಕಮಂಡಲೋದಕವನ್ನು ಆ ಹೆಣದಮೇಲೆ ಪ್ರೋಕ್ಷಿಸಲಾಗಿ ಆ ಹುಡುಗನು ಎದ್ದು ಕುಳಿತುಕೊಂಡನು. ಆಗ ದೊರೆಯು ಬಾಚಿತಬ್ಬಿಕೊಂಡು ಮುದ್ದಾಡಿ ಸಂತೋಷದಿಂದ—ಅಪ್ಪಾ, ಮಗನೇ! ಇಲ್ಲಿಯವರೆಗೆ ನೀನು ಎಲ್ಲಿ ಹೋಗಿದ್ದೆ? ಎಂದು ಕೇಳಿದನು. ಆ ಹುಡುಗನು ಚಿತ್ರಕೇತುವನ್ನು ನೋಡಿ—ನೀನು ಯಾರು? ನನ್ನನ್ನು ಮಗನೇ ಎಂದು ಸಂಬೋಧಿಸಿ ಕರೆಯುವುದಕ್ಕೆ ಕಾರಣವೇನು? ಇದುವರೆಗೆ ನಾನು ಅನೇಕಜನ್ಮಗಳನ್ನು ಎತ್ತಿದೆ, ಅದರಲ್ಲಿ ಇದೂ ಒಂದು ಜನ್ಮ, ಛೀ! ಛೀ! ಬಿಡು, ಬಿಡು, ಎಂದು ಕೂಗಿ ಮಾತನಾಡಿತು. ಆ ಕ್ಷಣದಲ್ಲಿಯೇ ಪುನಃ ಆ ಹುಡುಗನ ಪ್ರಾಣವು ಹೋಯಿತು. ಬಹು ವಿಷಾದಕರವು. ಆಗ ರಾಜನಿಗೆ ಜ್ಞಾನೋದಯವಾಯಿತು. ವೃಥಾ ದುಃಖಪಡುವುದರಿಂದ ಆಯಾಸವೇ ಹೊರತು ಒಂದು ಕವಡೆಯಷ್ಟು ಪ್ರತಿಫಲವಾಗುವುದಿಲ್ಲವು. ಪ್ರಿಯ ಬಂಧುಭಗಿನಿಯರೇ ಇಂಥ ಹೃದಯದ್ರಾವಕದೃಶ್ಯವನ್ನು ನೋಡಿ, ಕೆಲ ಪಾಷಾಣಹೃದಯರು "ಏನು ಮಹಾ" ಎಂದು ಉದ್ಗಾರಗಳನ್ನು ತೆಗೆಯುತ್ತ ದಿನಕ್ಕೊಂದು ಹೊಸದ ಊಟಉಪಚಾರಗಳನ್ನು ಮಾಡುತ್ತಾ ಕೋಣಗಳಂತೆ ಮೈಯನ್ನು ಬೆಳೆಯಿಸಿಕೊಂಡು ಮೆರೆಯುತ್ತಾ ತಿರುಗುತ್ತಿರುವದು ಅಲ್ಲಲ್ಲಿ ಕಾಣಬಹುದು. ಇವರ ಉದರ

ದಿಂದ ಹುಟ್ಟುವ ಸಂತತಿಯಾದರೂ ಹಾಗೆಯೇ ಇರು ವದು ನಾಯಿಯ ಹೊಟ್ಟೆಯಲ್ಲಿ ಸಿಂಹದ ಅವತಾರ ವಾದೀತೇ? ಇಂಥ ರಾಕ್ಷಸರ ಜನ್ಮಕ್ಕೆ ಧಿಕ್ಕಾರ!"

(ಸಶೇಷ)

ಆರ್ ಮಲ್ಲಿಕಾರ್ಜುನಾರಾಧ್ಯ,
ಶಿಪಟೂರು

ಶ್ರೀ ಜಗದ್ಗುರು ರೇಣುಕಾಚಾರ್ಯರ ಪ್ರಸಾದಿತ

ಭವಿಷ್ಯ

ತಾ|| 21 5 36 ರಿಂದ 18 7 36 ರ ವರೆಗೆ

ಅಶ್ವಿನಿ, ಆಶ್ಲೇಷ, ಮಘಾ, ಜ್ಯೇಷ್ಠ, ಮೂಲ, ಪುಷ್ಯ, ಅನೂರಾಧ, ಉತ್ತರಾಭಾದ್ರ, ರೇವತಿ ನಕ್ಷತ್ರದವರಿಗೆ

ಬಂಧುಗಳಿಗೆ ಪೀಡೆ, ಹೆಂಡರಿಗೆ ಅರಿಷ್ಟ, ಶಿರೋವ್ಯಾಧಿ ಅಥವಾ ನೇತ್ರಬಾಧೆ, ಕೆಲವರಿಗೆ ಮನಸ್ಸಿಗೆ ಉಲ್ಲಾಸ ಸರ್ಕಾರದಲ್ಲಿ ತಾ|| 11 6 36 ಕ್ಕೆ ಕಾರ್ಯಯಶ, ಅನಂತರ ಸರ್ಕಾರಕ್ಕೆ ಹಣಕೊಟ್ಟು ಲುಕ್ಸಾನು ಮನಸ್ಸಿಗೆ ವ್ಯಥೆ, ತಾ|| 8 7 36 ರಿಂದ ಪೋಲೀಸ್ ನೌಕರರಿಗೆ ಡಾಕ್ಟರುಗಳಿಗೆ ತಾ|| 18 7 36 ರೊಳಗೆ ನಷ್ಟ, ರಾಜಕೀಯ ಅಥವಾ ಇತರ ಕಂಪನಿಗಳಿಂದ ಘಾಯದೆ ಹೊಂದುವವರಿಗೆ ತಾ|| 1 7 36 ರ ವರೆಗೆ ಅರಿಷ್ಟಕಾಲವಿದೆ ಹಾಗೂ ಮಂತಜ್ವರ, ಪಶುನಷ್ಟ ಇತ್ಯಾದಿ

ತಾ|| 21 5 36 ರಿಂದ 18 7 36 ರ ವರೆಗೆ

ಭರಣಿ, ಪೂರ್ವಾಷಾಢ, ನಕ್ಷತ್ರದವರಿಗೆ

ದ್ರವ್ಯಹಾನಿ, ದೇಹಕ್ಕೆ ಕಠಿನವಾಗಿ ಕಾಯಿಲೆಯು ರಾಜ ಮತ್ತು ಗುರು ಮನೆತನಗಳಲ್ಲಿ ಚೋರರ ಉಪದ್ರವ ಅಥವಾ ಅರಿಷ್ಟ, ಶಸ್ತ್ರಗಳಿಂದ ಪೆಟ್ಟು ವ್ರಣಬಾಧೆ ಜಗಳ, ಮಾನಹಾನಿ, ಮಿತ್ರರು ವೈರಿಗಳಾಗುವರು, ಶೂದ್ರರಿಂದ ನಷ್ಟ, ಮನಸ್ಸಿಗೆ ಕಳವಳ, ಕಾರ್ಯಗಳಿಗೆ ವಿಘ್ನ, ಶ್ರೀ ರುದ್ರಾಭಿಷೇಕವಾಡಿ ಊದುಗುಂಬಳ ಕಾಯಿಲ್ಲಿ ಭಂಗಾರವನ್ನಿಟ್ಟು ಪೂಜಿಸಿ ದಾನಕೊಟ್ಟರೆ ಶುಭಫಲ ಸಂಭವಿಸುತ್ತವೆ

ತಾ|| 21 5 36 ರಿಂದ 18 7 36 ರ ವರೆಗೆ

ಕೃತ್ತಿಕ, ಉತ್ತರ, ಉತ್ತರಾಷಾಢ, ನಕ್ಷತ್ರದವರಿಗೆ

ಸ್ತ್ರೀಯರಲ್ಲಿ ಗುಪ್ತಾಲೋಚನೆ, ಈ ವೃತ್ತಿಯಿಂದ ಕೆಲವರಿಗೆ ಪೆಟ್ಟು ಜಗಳ ಸರ್ಕಾರಿ ಅಧಿಕಾರಿಗಳಿಂದ ಪೀಡಿತರಾಗುತ್ತಾರೆ ರೈಲ್ವೆ ಅಥವಾ ಪೋಸ್ಟಾಫೀಸಿ ಯಲ್ಲಿ ಕೆಲಸಮಾಡುವರಿಗೆ ಅರಿಷ್ಟ ಹಾಗೂ ಚೋರತನ, ಕೆಲವರಿಗೆ ಭಂಗಾರದ ವ್ಯವಹಾರದಿಂದ ಲಾಭ, ತೋಟದ ಕೃಷಿಯಿಂದ ಹಾನಿ, ಬಂಧುಗಳಲ್ಲಿ ಪೀಡೆಯು, ದೇಹಕ್ಕೆ ಶೀತಕಾಯಿಲೆ ಇತ್ಯಾದಿ

ತಾ|| 21 5 36 ರಿಂದ 18 7 36 ರ ವರೆಗೆ

ರೋಹಿಣಿ, ಪುಬ್ಬ, ಹಸ್ತ, ಶ್ರವಣ, ನಕ್ಷತ್ರದವರಿಗೆ

ಪಂಡಿತಜನರಿಗೆ ಗುಪ್ತನೌಕರಿ ಜನರಿಗೆ ಯಶಸ್ಸು, ತೋಟಗವೃತ್ತಿಯಿಂದ ಲಾಭ ಕೆಲ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ನಷ್ಟವಾಗೋಣ ಮೃತರಾದವರ ಸಂಬಂಧಿ ಚಿಂತೆ, ನೀಚ ಸ್ತ್ರೀ ಭೋಗ, ಆನಂದ, ಪ್ರಕೃತಿ ಸಾಧಾರಣ ನೆಟ್ಟಗೆ

ತಾ|| 21 5 36 ರಿಂದ 18 7 36 ರ ವರೆಗೆ

ಮೃಗಶಿರ, ಚಿತ್ತ, ಧನಿಷ್ಟ, ನಕ್ಷತ್ರದವರಿಗೆ

ವಿದ್ಯೆಯಿಂದ ಲಾಭ, ಕೀರ್ತಿವೃದ್ಧಿ, ಬಟ್ಟೆಯ ವ್ಯಾಪಾರದಿಂದ ಲಾಭ, ಮಿತ್ರರ ಸಮಾಗಮ ಹಾಗೂ ಕೆಲವರಲ್ಲಿ ಅಸೂಯೆ ಮತ್ತು ಅಧಿಕಾರಪ್ರಾಪ್ತಿ, ಸತ್ಕರ್ಮಪ್ರಾಪ್ತಿ, ಕಾರ್ಯದಲ್ಲಿ ಯಶ, ಬಂಧುವರಲ್ಲಿ ಪ್ರೇಮ, ಶಸ್ತ್ರಗಳಿಂದ ಪೆಟ್ಟು, ಕ್ಷೇತ್ರವೃದ್ಧಿ, ಆಚಾರ ಹೀನತೆ, ಇತ್ಯಾದಿ

ತಾ|| 21 5 36 ರಿಂದ 18 7 36 ರ ವರೆಗೆ

ಆರಿದ್ರ, ಸ್ವಾತಿ, ಶತತಾರ, ನಕ್ಷತ್ರದವರಿಗೆ

ಪುಣ್ಯಕಾರ್ಯಗಳಿಂದ ಯಶ, ಮುಲ್ಕಿ ಖಾತೆಯಲ್ಲಿ ಅಧಿಕಾರಪ್ರಾಪ್ತಿ, ಪಂಡಿತವೃತ್ತಿಯವರಿಗೆ ಸತ್ಕೀರ್ತಿ, ಕೆಲವರಿಗೆ ನಿಂದಿತಭೋಜನ, ದೇಹಕ್ಕೆ ಘಾಯ, ಗುರು ಹಿರಿಯರ ನಿಂದೆಯು, ನಾಟಕ ಚಾಲಕವೃತ್ತಿಯಿಂದ ಮಧ್ಯಮಫಲ, ಖಜಾನೆಯ ಮಾಲಕರಿಗೆ ಲುಕ್ಸಾನು, ಚೋರರ ಉಪದ್ರವ

ತಾ|| 21 5 36 ರಿಂದ 18 7 36 ರ ವರೆಗೆ

ಪುನರ್ವಸು, ವಿಶಾಖ, ಪೂರ್ವಾಭಾದ್ರ, ನಕ್ಷತ್ರದವರಿಗೆ

ದೇಹಕ್ಕೆ ಮಹಾವ್ಯಾಧಿ, ಇಲ್ಲವೆ ಅಪಮೃತ್ಯು ಬಂಧುಗಳಲ್ಲಿ ಕಲಹ, ಶೋಕ, ಅಗ್ನಿಭಯ, ಶತ್ರು ಮತ್ತು ಪಶುಭಯ, ಕೆಲವರಿಗೆ ವ್ಯಾಪಾರದಿಂದ ಲಾಭ ಸಭೆಯಲ್ಲಿ ಮರ್ಯಾದೆ, ಹೊಸದಾಗಿ ಮಿತ್ರರನ್ನು ಗಳಿಸೋಣ, ಪಾಂಡಿತ್ಯದಿಂದ ಕೀರ್ತಿಹೊಂದುವ ವಿಷಯಕ್ಕೆ ಯೋಚಿಸೋಣ, ದ್ರವ್ಯಲಾಭ, ಸ್ತ್ರೀಯರಿಗೆ ವ್ಯಾಧಿಯು, ನೇತ್ರಬಾಧೆ ಇತ್ಯಾದಿ

ರಾಷ್ಟ್ರಫಲ

ತಾ|| 21 5 36 ರಿಂದ, 18 7 36 ರ ವರೆಗೆ

ತಾರೀಖು 17 6 36 ನೇ ಶುಕ್ರವಾರ ಸೂರ್ಯಗ್ರಹಣ ಸ್ಪರ್ಶ ಕಾಲ ಘಟಿ 9 48 ಮೋಕ್ಷಕಾಲ ಘಟಿ 11 40 ಮತ್ತು ತಾರೀಖು 4 7 36 ನೇ ಶನಿವಾರ ಚಂದ್ರಗ್ರಹಣ ಸ್ಪರ್ಶ ಕಾಲ ಘಟಿ 40 8 ಮೋಕ್ಷಕಾಲ ಘಟಿ 43 2 ಗ್ರಹಣಸಮಯದಲ್ಲಿ ಲಿಂಗೀ ದ್ವಿಜನರು ಮಾತ್ರ ಪುಣ್ಯವೃತ್ತಿಯಲ್ಲಿರುತ್ತಾರೆ ಇದು ಮಹಾಪರ್ವಕಾಲ ಆದ್ದರಿಂದ ಎಲ್ಲಾ ಮತದವರೂ ತಣ್ಣೀರಿನಲ್ಲಿ ಸ್ನಾನ ಮಾಡಿ ದೇವತಾರ್ಚನೆ ದಾನ ವಗೈರೆ ಮಾಡಿ ಗ್ರಹಣ ಪೂರ್ಣ ಬಿಡುಗಡೆಯಾದನಂತರವೂ ಸ್ನಾನಮಾಡುವುದುತ್ತಮ ಬತ್ತದವ್ಯಾಪಾರ ತೇಜಿ, ವ್ಯಭಿಚಾರ ವೃತ್ತಿಯವರಿಗೆ ವೈದ್ಯಜನರಿಗೆ ಕೇಡು, ಗುರು ಮತ್ತು ರಾಜಮನೆತನಗಳಲ್ಲಿ ಕೆಲವರಿಗೆ ಲುಕ್ಸಾನು, ಸರ್ಕಾರದಲ್ಲಿ ಕಾಯದೆ ಬದಲಾವಣೆಗಳು ನಡೆಯುತ್ತವೆ ತಾ|| 20 6 36 ರಿಂದ ಪಶುಗಳಿಗೂ, ಪ್ರಜೆಗಳಿಗೂ ರೋಗದ ಉಪದ್ರವ, ಚೋರಸಂಕಟ ಪಶ್ಚಿಮದೇಶದಲ್ಲಿ ಯುದ್ಧ ಜರುಗುತ್ತದೆ ಮಳೆಯು ಎಲ್ಲಾ ಪ್ರಾಂತಗಳಲ್ಲಿಯೂ ಚನ್ನಾಗಿ ಆಗದೇ ಇರುವುದರಿಂದ ಕೆಲವರು ಚಿಂತೆಯಲ್ಲಿ ಮಗ್ನರಾಗಿರುತ್ತಾರೆ ಎಲ್ಲಾ ಪ್ರಾಂತಗಳಲ್ಲಿ ಅರಿಷ್ಟನಿವಾರಣೆಗೆ ಪುಣ್ಯಕಾರ್ಯಗಳನ್ನು ಪ್ರಜೆಗಳು ಮಾಡುವುದು ಉತ್ತಮ

ಬಸವಂತಪ್ಪ ಬಸವಲಿಂಗಪ್ಪ ಬಣಕಾರ,
ಮುತ್ತಕೋಟಿ, ತಾ|| ಕೋಡ

ಓಂ ನಮಃ ಶ್ರೀಜಗದ್ಗುರುಪಂಚಕಾಯ

ಪಾತಿವ್ರತ್ಯಪ್ರಭಾವ

ಲೇಖಕರು—ಶ್ರೀಮತಿ ಶಿವಲಿಂಗಮ್ಮ, ಶಿವಮೊಗ್ಗ ಜನಕಗಿರಿ

ಈ ಪ್ರಪಂಚದಲ್ಲಿರುವ ಸ್ತ್ರೀಯರಿಗೆ ಸರ್ವಧರ್ಮಗಳಲ್ಲಿ ಪತಿವ್ರತಾಧರ್ಮವೇ ಶ್ರೇಷ್ಠವಾದುದು ಪಾತಿವ್ರತ್ಯವೆಂಬ ಧರ್ಮದಿಂದೊಡಗೂಡಿದ ಮಹಿಳೆಯರ ಜನ್ಮವು ಅಪಾರಸುಖದಿಂದ ವಿರಾಜಿಸುತ್ತಿರುವದು ಸತ್ಕರ್ಮಗಳನ್ನಾಚರಿಸುತ್ತ ದಯಾದ್ರ್ಯಾನಂದ ಪತಿಯನ್ನು ಸತ್ಕರಿಸಿ ಪತಿಯ ಅಭ್ಯುದಯವನ್ನೇ ಬೇಡುತ್ತ ಅಹಂಕಾರಮಮಕಾರಗಳನ್ನು ತ್ಯಜಿಸಿ ಈಶ್ವರನನ್ನು ಆರಾಧಿಸಿ ಭಕ್ತಿಯನ್ನು ವೃದ್ಧಿಗೊಳಿಸುತ್ತ ತನ್ನ ಪತಿವ್ರತಾಧರ್ಮವನ್ನು ಪಾಲಿಸಿಕೊಂಡು ಹೋಗುವ ಹಾದಿಯನ್ನು ತಿಳಿದಿರುವ ಸ್ತ್ರೀಯೇ ಜಗತ್ತಿನಲ್ಲಿ ಕೀರ್ತಿಯನ್ನು ಪಡೆದು ಯಶಸ್ವಿನಿಯಾಗಿ ಮೆರೆಯುವಳು ಯಾವ ಸ್ತ್ರೀಯು ಪತಿಯೇ ಪರದೈವವೆಂದೂ, ಪತಿಯೇ ಸರ್ವಸ್ವವೆಂದೂ, ಪತಿಸೇವೆಯೇ ದೇವತಾರಾಧನೆಯೆಂದೂ ತ್ರಿಕರಣಶುದ್ಧಿಯಿಂದ ತಿಳಿದಿರುತ್ತಾಳೆಯೋ ಅವಳೇ ಕುಲಸ್ತ್ರೀಯೆನಿಸುತ್ತಾಳೆ ಮಹಿಳೆಯರನ್ನು ಉನ್ನತಸ್ಥಿತಿಗೆ ತರುವ ಏಕಪತಿಧರ್ಮಪಾರಾಯಣತೆಯೆಂಬ ಧರ್ಮರತ್ನವು ಯಾವಳಲ್ಲಿ ಚ್ಯುತಿಹೊಂದುವದೋ ಅವಳಲ್ಲಿ ಇತರ ಧರ್ಮಗಳೆಷ್ಟಿದ್ದರೂ ಅವು ಪ್ರಕಾಶಕ್ಕೆ ಬರಲಾರವು ಸ್ತ್ರೀಯಾದವಳು ಸತ್ಪುರುಷರನ್ನು ಸೇವಿಸುತ್ತ ಮಹನೀಯರಿಂದ ಬೋಧಿಸಲ್ಪಡುವ ಅನೇಕವಚನಗಳನ್ನಾಲಿಸುತ್ತ ಇತರ ಮಹಿಳೆಯರಿಗೆ ಮಾರ್ಗದರ್ಶಕಳಾಗಿರಬೇಕು ತನ್ನ ದೇಹದ ಸೌಂದರ್ಯದ ಬೆಳವಣಿಗೆಗಾಗಿ ಹಗಲಿರುಳು ಆಭರಣಗಳಿಂದಲಂಕರಿಸಿಕೊಳ್ಳುವದರಲ್ಲಿಯೇ ವ್ಯರ್ಥವಾಗಿ ಕಾಲವನ್ನು ಕಳೆಯುತ್ತ ಕ್ಷಣಕ್ಷಣಕ್ಕೂ ತನ್ನ ರೂಪವನ್ನು ತಾನೇ ವರ್ಣಿಸಿಕೊಳ್ಳುತ್ತ ಅಹಂಕಾರಮತ್ತಳಾಗಿ ಪರಪುರುಷರಲ್ಲಿ ಸೇರಿ ವಿನೋದದಿಂದ ತನ್ನ ವೈಯಾರವನ್ನು ತೋರುತ್ತಿರುವ ಸ್ತ್ರೀಯು ಎಂಥ ಸೌಜನ್ಯಶಾಲಿನಿಯಾದರೂ ಯೋಗ್ಯಳೆನಿಸಿಕೊಳ್ಳಲಾರಳು ಪತಿಯು ಪತಿಯ ಗುಣಾವಗುಣಗಳನ್ನು ಎಣಿಸದೆ, ಪತಿಸೇವಾನಿರತಳಾಗಿ ಪಾತಿವ್ರತ್ಯವೆಂಬ ದಿವ್ಯರತ್ನವೊಂದನ್ನು ಕಾಯ್ದುಕೊಂಡುಬಂದರೆ ಅನಂತವರುಷಗಳು ತಪಸ್ಸಿನಿಂದ ತಪಸ್ಸಿದ್ಧಿಯನ್ನು ಪಡೆದ ಋಷಿಗಳಂತೆ ಶಾಪಾನುಗ್ರಹಸಾಮರ್ಥ್ಯವುಳ್ಳವಳಾಗುತ್ತಾಳೆ ಇಹಪರಸುಖಸಾಧನೀಭೂತವಾದ ಪಾತಿವ್ರತ್ಯವೆಂಬ ದ್ರವ್ಯವನ್ನು ಯಾವಳು ನಾಶಮಾಡಿಕೊಳ್ಳುತ್ತಾಳೋ ಅವಳು ಮಹಾರಾಕ್ಷಸಿಯಂತೆ ವಂಶನಾಶಕಳೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು ಆದ್ದರಿಂದಲೇ ನಮ್ಮ ಆರ್ಯರು—"ಸತಿಗೆ ಪಾತಿವ್ರತ್ಯವೇ ಭೂಷಣಂ" ಎಂದು ಬೋಧಿಸಿರುವರು ಕರ್ಮಭೂಮಿಯೆನಿಸಿದ ಭರತಖಂಡದಲ್ಲಿ ಅನೇಕ ಸ್ತ್ರೀಯರು ತಮ್ಮ ಪಾತಿವ್ರತ್ಯಪ್ರಭಾವದಿಂದಲೇ ಅಪರಿಮಿತ ಮಹಿಮೆಗಳನ್ನು ತೋರಿಸಿರುವರು ಸತೀ ಸಾವಿತ್ರಿಯು ಅದ್ಭುತ ಶಕ್ತಿಯುಳ್ಳ ಯಮನಕೂಡ ಹೋರಾಡಿ ತನ್ನ ಪತಿಯ ಪ್ರಾಣವನ್ನು ಉಳಿಸಿಕೊಂಡು ಕೀರ್ತಿಶಾಲಿನಿಯಾದುದು ಪತಿವ್ರತಾಧರ್ಮಶಕ್ತಿಯಲ್ಲವೇ? ಇವರಂತೆ ಅನಂತೋದಾಹರಣೆಗಳಿರುವವು ಅಸ್ತು! ಭೋ ಮಹಿಳೆಯರೇ! ಈ ಕಲಿಯುಗದಲ್ಲಿಯಾದರೂ ಪತಿವ್ರತಾಧರ್ಮಶಿರೋಮಣಿಗಳಿಲ್ಲೆನ್ನಬೇಡಿರಿ! ಈಗ್ಗೆ ಸುಮಾರು ೭೦ ವರ್ಷಗಳ ಕೆಳಗೆ ನಳನಾಮಸಂವತ್ಸರದಲ್ಲಿ ರಾಯಚೂರು ಜಿಲ್ಹೆಗೆ ಸೇರಿದ ಮಸಗಿಯೆಂಬ ಗ್ರಾಮದಲ್ಲಿ ವಿಶೇಷವೃಷ್ಟಿಯಾಗಿ ಆ ಊರಿಗೆ ಸಮೀಪದಲ್ಲಿರುವ ಹಳ್ಳಕ್ಕೆ ನೀರು ಭಯಂಕರವಾಗಿ ಬಂದಿತು ಆಗ್ಗೆ ಇದನ್ನು ನೋಡಿದವರಿಗೆ ಗಂಗೆಯೇ ಹೀಗೆ ಕೋಪಿಸಿ ಧಾವಿಸಿರುವಳೋ ಏನೋ ಎಂದು ಭಾಸವಾಗುತ್ತಿತ್ತು ಪ್ರತಿಯೊಬ್ಬರೂ ಗ್ರಾಮವು ಉಳಿಯುವದಿಲ್ಲೆಂದು ಹಹಾಕಾರಪಡುತ್ತಿದ್ದರು ಇಂಥ ಸಂಕಟಸಮಯದಲ್ಲಿ ವಯೋವೃದ್ಧರಾದ ಒಬ್ಬ ಮಾಹೇಶ್ವರರು ಪುರಜನರಿಗೆ ಯಾವ ಸ್ತ್ರೀಯಳಲ್ಲಿ ಪತಿವ್ರತಾಧರ್ಮವಿರುವುದೋ ಆ ಸ್ತ್ರೀಯಳು ಆರತಿಯನ್ನು ಬೆಳಗಿದರೆ ಗಂಗೆಯು ಶಾಂತಳಾಗಿ ನಿಮಗೆ ಸುಖಶಾಂತಿಗಳು ದೊರೆಯುವವೆಂದು ಅಪ್ಪಣೆಕೊಡಿಸಿದರು ಅನೇಕಜನ ಮಹಿಳೆಯರು ಆರತಿಬೆಳಗಿದರು ಆದರೂ ಜಲವು ಕಡಿಮೆಯಾಗದೆ ಹೆಚ್ಚಾಗುತ್ತ ನಡೆಯಿತು ಅಷ್ಟರಲ್ಲಿ ವೀರಯ್ಯಮಸ್ತ್ರದ ಎಂಬವರ ಧರ್ಮಪತ್ನಿ ಸಾಧ್ವಿಶಿರೋಮಣಿ ವೀರವ್ವನೆಂಬ ಮಹಾತಾಯಿಯು ಆರತಿಯನ್ನು ತೆಗೆದುಕೊಂಡು ಬಂದಳು ಆ ಮಹಾತಾಯಿಯು ಭಕ್ತಿಯಿಂದ ಗಂಗೆಯನ್ನು ಪೂಜಿಸಿ ಆರತಿಯನ್ನು ಒಂದೇ ಒಂದುಸಾರೆ ಬೆಳಗುವಷ್ಟರಲ್ಲಿಯೇ ಗಂಗಾದೇವಿಯು ಈ ತಾಯಿಯ ಪಾತಿವ್ರತ್ಯಪ್ರಭಾವಕ್ಕೆ ಪ್ರಸನ್ನಳಾಗಿ ತತ್ಕ್ಷಣವೇ ತನ್ನ ಭೀಕರಸ್ವರೂಪವನ್ನು ಬಿಟ್ಟು ಹಿಂದಕ್ಕೆ ಸರಿದಳು ಆಗ ಗ್ರಾಮದವರ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು ಇದು ಕಟ್ಟುಕಥೆಯಲ್ಲ, ಪ್ರತ್ಯಕ್ಷಪ್ರಮಾಣವು! ಆದುದರಿಂದ ಆರ್ಯಮಹಿಳೆಯರು ಹಿಂದಿನ ಪತಿಭಕ್ತಿಪರಾಯಣೆಯರ ಮೇಲ್ಪಂಕ್ತಿಯನ್ನನುಸರಿಸಿ ಪತಿಯ ವಿಷಯದಲ್ಲಿ ಪ್ರೀತಿಪೂರ್ವಕವಾಗಿ ವರ್ತಿಸುತ್ತ ಗುರುಹಿರಿಯರಲ್ಲಿ ಭಕ್ತಿಯನ್ನಿರಿಸಿ ನಡೆಯುವುದೇ ಮುಖ್ಯಧರ್ಮವಾಗಿದೆ ಸನಾತನ ಭಗಿನಿಯರೇ! ಏಳಿರಿ, ಎಚ್ಚರಾಗಿರಿ ನವನಾಗರಿಕಕಾಲದ ದುಷ್ಟಚಟಗಳಿಗೆ ಸಿಲುಕಿ ವಿಷಯಲೋಲರಾಗಿ ಮಾಡಬಾರದ ಪಾಪಕೃತ್ಯಗಳನ್ನುಮಾಡಿ ನರಕಗಾಮಿಗಳಾಗಬೇಡಿರಿ ನಿಮ್ಮ ಪತಿವ್ರತಾಧರ್ಮವನ್ನು ಕಾಯ್ದುಕೊಂಡು ಸತ್ಕೀರ್ತಿಯನ್ನು ಹೊಂದಿರಿ ನಿಮ್ಮ ನಿಮ್ಮ ಪತಿವ್ರತಾಧರ್ಮವೆಂಬ ಹಣವನ್ನು ಕಳೆದುಕೊಳ್ಳಬೇಡಿರಿ ನಮ್ಮ ಭರತಖಂಡವು ನಿಮ್ಮಿಂದಲೇ ಅಭಿವೃದ್ಧಿಸ್ಥಿತಿಗೆ ಬರಬೇಕಾಗಿದೆ, ಜಗನ್ಮಾತೆಯಾದ ಪಾರ್ವತಿಯೇ! ಆರ್ಯಮಹಿಳೆಯರಲ್ಲಿ ಪತಿವ್ರತಾಧರ್ಮವನ್ನು ಎಂದೆಂದಿಗೂ ಕದಲದಂತೆ ಅನುಗ್ರಹಿಸು

ಶ್ರೀಮನ್ಮಹಾರಾಜರವರ
೫೩ ನೆಯ ವರ್ಧಂತೀ ಮಹೋತ್ಸವ

ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್
ಮಹಾಪ್ರಭುಗಳವರು

ಪಂಚಾಚಾರ್ಯ ಪ್ರಭಾ.

೧೯೩೬ ನೆಯ ಜೂ ತಾ॥ ೧ ನೆಯ ಸೋಮವಾರ

ಶ್ರೀಮನ್ಮಹಾರಾಜರವರ ೫೩ ನೆಯ ವರ್ಧಂತೀಮಹೋತ್ಸವ

ಮೈಸೂರುರಾಜ್ಯವನ್ನು ರಾಮರಾಜ್ಯದಂತೆ ಆಳುತ್ತಿರುವ ಧರ್ಮಾವತಾರಿ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ ಸಿ ಎಸ್ ಐ ಜಿ ಬಿ ಇ ಮಹಾಪ್ರಭುಗಳವರ ೫೩ ನೆಯವರ್ಷದ ವರ್ಧಂತೀಮಹೋತ್ಸವವು ನಿನ್ನೆಯದಿವಸ ರಾಜಧಾನಿಯಲ್ಲಿ ಬಹುವೈಭವದಿಂದ ನೆರವೇರಿತು ಪ್ರಾತಃಕಾಲ ಮಂಗಲಸ್ನಾನಾನಂತರದಲ್ಲಿ ಮಹಾಪ್ರಭುಗಳವರ ಆಯುರ್ವರ್ಷಸೂಚಕಗಳಾದ ೫೩ ತೋಪುಗಳು ಹಾರಿಸಲ್ಪಟ್ಟವು ಶ್ರೀಮನ್ಮಹಾರಾಜರವರು ಗುರುದೇವತಾಪೂಜಾದರ್ಶನೋಚಿತವಾದ ಉಡುಪನ್ನು ಧರಿಸಿ ತಮ್ಮ ನಿತ್ಯಕರ್ಮಗಳನ್ನು ಮುಗಿಸಿಕೊಂಡು ೧೦॥ ಘಂಟೆಗೆ ಸರಿಯಾಗಿ ಕಲ್ಯಾಣ ಮಂಟಪಕ್ಕೆ ದಯಮಾಡಿಸಿ ಭದ್ರಪೀಠವನ್ನಲಂಕರಿಸಿದರು ಒಳಿತ ರಾಜಬಂಧುಗಳೂ ಸಚಿವೋತ್ತಮರೂ ಸರ್ಕಾರಿ ಉದ್ಯೋಗಿಗಳೂ ನಗರಪ್ರಮುಖರೂ ರಾಜಭಕ್ತಿದ್ಯೋತಕಗಳಾದ ಮುದ್ರಿಕೆಗಳೊಡಗೂಡಿ ಮಹಾಪ್ರಭುಗಳಿಗೆ ಕ್ರಮದಿಂದ ಮುಜರೆಯನ್ನು ಮಾಡಿ ಅವರವರ ನಿಯಮಿತ ಸ್ಥಳಗಳಲ್ಲಿ ಕುಳಿತರು ಪ್ರಾಚ್ಯಗಳಾದ ವಾದ್ಯಧ್ವನಿಗಳೂ, ಗಾನಾಲಾಪಗಳೂ, ಜಯಧ್ವನಿಗಳೂ ಭೂಮ್ಯಂತರಿಕ್ಷಗಳನ್ನು ವ್ಯಾಪಿಸಿದ್ದವು ಕ್ರಮದಿಂದ ಮಠಾಧಿಕಾರಿಗಳ ಮತ್ತು ವೈದಿಕೋತ್ತಮರ ಆಶೀರ್ವಾದಗಳು ನಡೆದಮೇಲೆ ಸಭಿಕರ ಮತ್ತು ಸೈನಿಕರ ನಜರೆಗಳು ನಡೆದವು ತರುವಾಯ ಸಭಿಕರಿಗೆ ಪುಷ್ಪಹಾರಾದಿಗಳ ವಿನಿಯೋಗವಾಗಿ ಸಭೆಯು ಉಪಸಂಹೃತವಾಯಿತು

ಸಾಯಂಕಾಲ ೬ ಘಂಟೆಗೆ ಸರಿಯಾಗಿ ಮಹಾಪ್ರಭುಗಳವರ ಜನ್ಮಮಹೋತ್ಸವವು ರಾಜಗೃಹದಿಂದ ದೊಡ್ಡ ಪೇಟೆಯಮಾರ್ಗವಾಗಿ ಹೊರಟಿತು ಮಹಾಪ್ರಭುಗಳವರು ರತ್ನಖಚಿತಸುವರ್ಣಾಭರಣಗಳಿಂದಲಂಕೃತರಾದ ವೈಶ್ವಾನರವನ್ನು ಆರೋಹಣಮಾಡಿದ್ದರು ಶ್ರೀಮದ್ಯುವರಾಜರವರು ಮತ್ತು ಶ್ರೀಜಯಚಾಮರಾಜ ಒಡೆಯರವರು ದಿವ್ಯಾಶ್ವಗಳನ್ನಾರೋಹಣಮಾಡಿ ಮಹಾಪ್ರಭುಗಳವರ ಪಾರ್ಶ್ವದಲ್ಲಿ ಶೋಭಿಸುತ್ತಿದ್ದರು ಚತುರಂಗ ಸೈನ್ಯವು ಬಹಳ ಶಿಸ್ತಿನಿಂದ ಮುಂದುವರಿಯಿತು ಮಹಾಪ್ರಭುಗಳವರ ಅಮೃತಮಯಕಟಾಕ್ಷಧಾರೆಯು ಪ್ರೇಕ್ಷಕರಾಗಿ ಉಭಯ ಪಾರ್ಶ್ವಗಳಲ್ಲಿಯೂ ಅಂಜಲಿಬದ್ಧರಾಗಿ ನಿಂತಿದ್ದ ಲಕ್ಷ್ಯಪ್ರಜೆಗಳ ಮೇಲೆ ಪ್ರವಹಿಸುತ್ತಲಿತ್ತು ಪ್ರೇಕ್ಷಕಮಹಾಶಯರು ರಾಜಭಕ್ತಿಪ್ರೇರಕದಿಂದ ಜಯಜಯಶಬ್ದಗಳನ್ನುಚ್ಚರಿಸುತ್ತ ಹಸ್ತತಾಡನಮಾಡುತ್ತಿದ್ದರು ಉತ್ಸವವು ದೊಡ್ಡಗಡಿಯಾರದ ಸಮೀಪಕ್ಕೆ ಬಂದೊಡನೆಯೇ ಯೂರೋಪಿಯನ್ನರು ಮಹಡಿಯಮೇಲಿಂದ ಪುಷ್ಪವೃಷ್ಟಿಗರೆದರು ದೊಡ್ಡಪೇಟೆಯಲ್ಲಿರುವ ಪ್ರಮುಖವರ್ತಕಮಹಾಶಯರು ದಾರಿಯುದ್ದಕ್ಕೂ ತಮ್ಮ ತಮ್ಮ ಮನೆಗಳ ಮುಂಭಾಗದಲ್ಲಿ ಹಾರ ತುರಾಯಿಗಳನ್ನೊಪ್ಪಿಸಿ ರಾಜಭಕ್ತಿಯನ್ನು ತೋರಿಸುತ್ತಿದ್ದರು ಉತ್ಸವವು ಗೌರ್ನಮೆಂಟ್ ಹೌಸನ್ನು ತಲ್ಪಿ ಸ್ವಸ್ಥಮರ್ಯಾದೆಯು ನಡೆದಬಳಿಕ ಉಭಯಮಹಾಪ್ರಭುಗಳು ಅಶ್ವಗಳಿಂದಿಳಿದು ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ತೆಗೆದುಕೊಂಡರು ಬಂದ ಅತಿಥಿಗಳೆಲ್ಲಾ ಲಘ್ವಾಹಾರಸೇವನೆಯಿಂದ ತೃಪ್ತಿಪಡೆದರು ರಾತ್ರಿ ೯॥ ಘಂಟೆಯ ಸಮಯಕ್ಕೆ ವಿದ್ಯುದ್ದೀಪಮಾಲೆಯಿಂದಲೂ ಮಲ್ಲಿಕಾಕುಟ್ಮಲಗಳಿಂದಲೂ ಭವ್ಯವಾಗಿ ಅಲಂಕರಿಸಲ್ಪಟ್ಟಿದ್ದ ಮೋಟಾರಿನಲ್ಲಿ ಶ್ರೀಮನ್ಮಹಾರಾಜರವರು, ಶ್ರೀಮದ್ಯುವರಾಜರವರು ಮತ್ತು ಜಯಚಾಮರಾಜ ಒಡೆಯರವರು ಕುಳಿತುಕೊಂಡರು ಈ ದೃಶ್ಯವು ಅತ್ಯಂತ ಪ್ರೇಕ್ಷಣೀಯವಾಗಿತ್ತು ಉತ್ಸವವು ಗೌರ್ನಮೆಂಟ್ ಹೌಸಿನ ಪಶ್ಚಿಮಭಾಗದಲ್ಲಿರುವ ಹೆಬ್ಬಾಗಿಲಿನಿಂದ ಹೊರಟು ನಕ್ಷತ್ರಮಾಲಿಕೆಗಳಂತೆ ಶೋಭಿಸುತ್ತಿರುವ ವಿದ್ಯುದ್ದೀಪಮಾಲಿಕೆಗಳಿಂದೊಡಗೂಡಿದ ದೊಡ್ಡಪೇಟೆಯಲ್ಲಿ ಹಾಯ್ದು ಹತ್ತುವರೆ ಘಂಟೆಯ ಸಮಯಕ್ಕೆ ಅರಮನೆಯನ್ನು ತಲ್ಪಿತು

ತ್ಯಾಗಃ ಸತ್ಪಾತ್ರೇ ಮತಿರ್ಗುಣಿನಿ ಪ್ರೀತಿಃ ಪರಿಜನೈಃ ಸಹ ।
ಭಾವಜ್ಞೋ ವಾ ರತೇರ್ಯೋ ವಾ ಪ್ರಭುಃ ಪಂಚಗುಣೋ ಭವೇತ್ ॥

ಸತ್ಪಾತ್ರದಲ್ಲಿ ತ್ಯಾಗವೂ, ಗುಣಾಢ್ಯರಲ್ಲಿ ಪ್ರೀತಿಯೂ, ಪರಿಜನಗಳೊಡನೆ ಸುಖಾನುಭವವೂ, ಪ್ರಜೆಗಳ ಇಂಗಿತವನ್ನರಿಯುವದೂ, ಪರಾಕ್ರಮವೂ, ಈ ಐದು ಗುಣಗಳು ರಾಜಗುಣಗಳೆಂಬ ರಾಜನೀತಿಯಂತೆ ನಮ್ಮ ಮಹಾಪ್ರಭುವರ್ಯರು ಈ ಗುಣಮಾಲಿಕೆಯನ್ನು ಸದಾ ಧರಿಸಿರುವರಲ್ಲದೆ, ಪರಮಾಸ್ತಿಕ್ಯವೆಂಬ ಶಿಖಾರತ್ನದಿಂದ ಭೂಷಿತರಾಗಿರುವುದರಿಂದ ಮೈಸೂರು ರಾಜ್ಯವು ದ್ವಿತೀಯ ರಾಮರಾಜ್ಯವೆಂದು ಖ್ಯಾತಿಪಡೆದಿರುತ್ತದೆ ಈ ಧರ್ಮಮೂರ್ತಿಗಳ ಆಳ್ವಿಕೆಯಲ್ಲಿ ಮೈಸೂರು ರಾಜ್ಯದ ಪ್ರಜೆಗಳು ಯಾವ ಈತಿಬಾಧೆಗಳ ಸ್ಪರ್ಶವೂ ಇಲ್ಲದೆ ಸದಾ ಸಂತುಷ್ಟಚಿತ್ತರಾಗಿರುವುದನ್ನು ಕಂಡ ಅನೇಕದೇಶೀಯ ವಿದೇಶೀಯನರಪತಿಗಳು ನಮ್ಮ ಮಹಾಪ್ರಭುಗಳವರ ಚಾತುರ್ಯವನ್ನೂ, ಆಧ್ಯಾತ್ಮಬಲವನ್ನೂ ನೋಡಿಕೊಂಡು ಹೋಗುತ್ತಿರುವುದೇ ನಿದರ್ಶನವಾಗಿರುತ್ತದೆ ಪ್ರಾಚೀನ ಕಾಲದಲ್ಲಿ ಶ್ರುತಿಸ್ಮೃತ್ಯವಲಂಬಿಯಾದ ನಮ್ಮ ಭಾರತಾಂಗನೆಯು ಪರಮಾಸ್ತಿಕರೂ ದೈವನಿಷ್ಠರೂ ಧರ್ಮಸಹಾಯರೂ ಮಹಾವೀರರೂ ಆದ ಮಹಾರಾಜರನ್ನಾಶ್ರಯಿಸಿದ್ದುದರಿಂದ ಇಂದ ಭಾರತಮಾತೆಯ ಗರ್ಭಜಾತರೆಲ್ಲರೂ ಆಸ್ತಿಕರೂ ದೇವಭಕ್ತರೂ ಧರ್ಮನಿಷ್ಠರೂ ಆಗಿದ್ದರು ಇಂಥ ಪವಿತ್ರವಾದ ಭಾರತವರ್ಷವು ಈಗಿನ ನವೀನನಾಗರಿಕತೆಗೆ ಸಿಕ್ಕು ಜರ್ಝರಿತವಾಗುತ್ತಿರುವಲ್ಲಿ ಧಾರ್ಮಿಕ ನೈತಿಕ ರಾಜಕೀಯ ವಿದ್ಯಾಶ್ರೈಷ್ಠ್ಯವನ್ನು ಪಡೆದ ಇಂಥ ಮಹಾಪ್ರಭುಸತ್ತ್ವರ ಆಳ್ವಿಕೆಗೆ ಸಂಬಂಧಪಟ್ಟ ಪ್ರಜೆಗಳ ಭಾಗ್ಯೋದಯವನ್ನು ಎಷ್ಟು ವರ್ಣಿಸಿದರೂ ತೀರದು ಸಕಲಸದ್ಗುಣಗಣಮಂಡಿತರಾದ ನಮ್ಮ ಮಹಾಪ್ರಭುಗಳವರಿಗೆ ಇಂತಹ ವರ್ಧಂತೀಮಹೋತ್ಸವಗಳು ಅನೇಕಾನೇಕವಾಗಿ ನೆರವೇರಿ ಮೈಸೂರುದೇಶದ ಪ್ರಜೆಗಳಿಗೆ ಮಹಾಪ್ರಭುಗಳಿಂದ ಇನ್ನೂ ಅನೇಕವಿಧವಾದ ಸುಖಗಳುಂಟಾಗುವಂತೆ ಮಾಡಲೆಂದು ಜಗನ್ನಿಯಾಮಕನಾದ ಆ ಪರಮೇಶ್ವರನನ್ನು ಅನನ್ಯಸಾಧಾರಣಭಕ್ತಿಭಾವದಿಂದ ಭಜಿಸುತ್ತೇವೆ

ಒಳದೇಶದ ವೃತ್ತಾಂತಗಳು.

ಕೃಷ್ಣರಾಜಸಾಗರದಲ್ಲಿರುವ ಬೃಂದಾವನವು ಈ ತಿಂಗಳು ೭ ನೆಯ ತಾರೀಖಿನವರೆಗೆ ವಿದ್ಯುದ್ದೀಪಗಳಿಂದ ಬೆಳಗುತ್ತಿರುವುದು

ಶ್ರೀ ಜಯಚಾಮರಾಜಒಡೆಯರವರು ಈ ಸಲ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದರೆಂಬ ವಿಷಯವನ್ನು ತಿಳುಹಿಸಲು ಅತ್ಯಾನಂದಪಡುತ್ತೇವೆ ಇವರು ಮುಂದೆ ಬಿ ಎ ತರಗತಿಯಲ್ಲಿಯೂ ಅಭ್ಯಾಸಮಾಡುವರೆಂದು ತಿಳಿದುಬರುತ್ತದೆ

ಕಳೆದ ೨೮ ನೆಯ ತಾರೀಖಿನ ದಿವಸ ದೊಡ್ಡಬಳ್ಳಾಪುರ ತಾ॥ ದೊಡ್ಡನಹಳ್ಳಿ ಕೆಲ್ಲೆ ಸೇತುವೆಯ ಹತ್ತಿರ 14 ಜನ ಹೆಂಗಸರು ಮತ್ತು ಮಕ್ಕಳು ಮಲಗಿ ನಿದ್ರಿಸುತ್ತಿರುವಾಗ ಪಕ್ಕದ ಹಳ್ಳದಲ್ಲಿ ವಿಪರೀತ ಪ್ರವಾಹವು ಬಂದು ಎಲ್ಲರನ್ನೂ ಕೊಚ್ಚಿಕೊಂಡುಹೋಯಿತೆಂದೂ, ಇಲ್ಲಿಯವರೆಗೆ ಇಬ್ಬರ ದೇಹಗಳು ಮಾತ್ರ ಸಿಕ್ಕಿರುವುವೆಂದೂ ಉಳಿದವರ ದೇಹಗಳನ್ನು ಹುಡುಕುತ್ತಿರುವರೆಂದೂ ತಿಳಿದುಬಂದಿದೆ

ಇಂಟರ್ ಯೂನಿವರ್ಸಿಟಿ ಬೋರ್ಡಿನ ಕಾರ್ಯದರ್ಶಿಗಳಾಗಿದ್ದ ಮ॥ ರಾ॥ ಜೆ. ಪಿ ವಿದ್ಯಾರ್ಥಿಯವರು ರಾಜಧಾನಿಯಲ್ಲಿ ಮೋಟಾರಿಗೆ ಸಿಕ್ಕಿ ಮರಣಹೊಂದಿದರಷ್ಟೆ! ಮೃತರ ಆತ್ಮಶಾಂತ್ಯರ್ಥವಾಗಿ ಅವರ ಧರ್ಮಪತ್ನಿಯವರು 30 ನೆಯ ತಾರೀಖಿನದಿವಸ ಮದ್ರಾಸಿನ ಪ್ರೀಮಿಯರ್ ಇನ್ಷೂರೆನ್ಸ್ ಅಂಡ್ ಬಿಲ್ಡಿಂಗ್ ಸೊಸೈಟಿಯವರು ರಾಜಧಾನಿಯಲ್ಲಿ ಸ್ಥಾಪಿಸಿರುವ ಅಶಕ್ತ ಪೋಷಣಾಲಯದವರಮೂಲಕ ಅಶಕ್ತರನ್ನು ಮೃಷ್ಟಾನ್ನದಿಂದ ತೃಪ್ತಿಪಡಿಸಿದರೆಂದು ಪೋಷಣಾಲಯದ ಸೆಕ್ರೆಟರಿಗಳು ತಿಳುಹಿಸುತ್ತಾರೆ

ಬೆಂಗಳೂರು ಟೌನ್‌ಹಾಲ್‌ಬಳಿ ಹೊಸದಾಗಿ ಮಾಡುತ್ತಿರುವ ಕುಂಬಾರಗುಂಡಿಯ ರಸ್ತೆಯ ಸಮೀಪದಲ್ಲಿ ಒಂದು ಗೋಣೀಚೀಲದ ಮೂಟೆಯು ಬಿದ್ದಿರುವುದನ್ನು ಅಲ್ಲಿ ಕೆಲಸಮಾಡುವ ಕೂಲಿಯವರು ಕಂಡು ಪೋಲೀಸರಿಗೆ ವರದಿಮಾಡಿದರು. ಚೀಲವನ್ನು ಬಿಚ್ಚಿ ನೋಡುವಲ್ಲಿ ಒಳಗೆ ಕೊಲೆಮಾಡಲ್ಪಟ್ಟ ಸುಮಾರು ೨೫ ವರ್ಷ ವಯಸ್ಸಿನ ಹೆಂಗಸಿನ ಶವದ ಭಯಂಕರ ದೃಶ್ಯವು ಕಂಡುಬಂದಿತು ಮೃತಳ ಹೆಸರು ಮುನಿಯಮ್ಮನೆಂದೂ, ಕೊಲೆಮಾಡಿದವನ ಹೆಸರು ಬಾಲಯ್ಯನೆಂದೂ ತಿಳಿದುಬಂದದ್ದರಿಂದ ಪೋಲೀಸರು ಬಾಲಯ್ಯನನ್ನು ಬಂಧಿಸಿದ್ದಾರೆ

ವರ್ತಮಾನಸಂಗ್ರಹ.

ಅಬ್ಸೀನಿಯದ ಹೊಸ ವೈಸ್ರಾಯರು

ಮಾರ್ಷಲ್ ಬಡೋಗ್ಲಿಯೋ ಅವರು ಸದ್ಯ ಅಬ್ಸೀನಿಯಾಕ್ಕೆ ಹಿಂತಿರುಗುವಂತಿಲ್ಲವಾದುದರಿಂದ ದಕ್ಷಿಣದಲ್ಲಿ ಸೈನ್ಯಾಧಿಕಾರಿಯಾಗಿದ್ದ ಮಾರ್ಷಲ್ ಗ್ರೆಜಿಯಾನಿಯು ವೈಸರಾಯ್ ಪದವಿಯನ್ನು ಹೊಂದುವನೆಂದೂ, ಜನರಲ್ ಸಾಂಕಿನಿಯು ಸೋಮಾಲಿಲ್ಯಾಂಡಿನ ಗವರ್ನರ್ ಪದವಿಯನ್ನು ವಹಿಸಿಕೊಳ್ಳುವನೆಂದೂ ವರ್ತಮಾನವಿದೆ

ಬಿಹಾರಿನಲ್ಲಿ ಪುನಃ ಭೂಕಂಪ!

ಕಳೆದ 27 ನೆಯ ತಾರೀಖಿನ ದಿವಸ 12 ಘಂಟೆ ಸಮಯದಲ್ಲಿ ಪಾಟ್ನಾನಗರದಲ್ಲಿ ಭೂಮಿಯು ನಡುಗಿತು ಮನೆಗಳ ಕಿಟಿಕಿ ಬಾಗಿಲುಗಳೂ ಬೆಂಚು, ಮೇಜು, ಕುರ್ಚಿಗಳೂ 3 ಸೆಕೆಂಡುಗಳ ವರೆಗೆ ಅಲ್ಲಾಡಿದವು ಜನರು ಭಯಪಟ್ಟು ಹೊರಗೋಡಿಬಂದರು ಆದರೆ ಅಪಾಯವೇನೂ ಆಗಲಿಲ್ಲ ಕಲ್ಕತ್ತಾ ವೆಹಲಿ ಮೊದಲಾದ ಕಡೆಯಲ್ಲಿಯೂ ಭೂಕಂಪವಾಗಿರುವುದಾಗಿ ಸುದ್ದಿ ಬಂದಿದೆ ಎಲ್ಲಿಯೂ ಅಪಾಯವು ಸಂಭವಿಸಿರುವುದಿಲ್ಲ

೫ ಮಿನಿಟುಗಳಲ್ಲಿ ೩೦ ಕೋಟಿ ರೂ ಸಾಲ!

ಇಂಡಿಯಾಸರ್ಕಾರದವರು ಹೊಸದಾಗಿ ನೇಕಡಾ ೩ ರೂ ಬಡ್ಡಿಯಮೇಲೆ ೧೨ ಕೋಟಿ ರೂ ಗಳ ಸಾಲವನ್ನು ಎತ್ತಲು ನಿರ್ಧರಿಸಿ ಪ್ರಕಟಿಸಿದ ೫ ನಿಮಿಷಗಳೊಳಗಾಗಿ ೩೦ ಕೋಟಿ ರೂ ಗಳ ಶೇಖರವಾದವು ಆದರೆ ಸರ್ಕಾರದವರು ತಮಗೆ ಬೇಕಾದಷ್ಟನ್ನುಮಾತ್ರ ತೆಗೆದುಕೊಂಡರು ಇಂಡಿಯಾದ ಇತಿಹಾಸದಲ್ಲಿ ಎಂದೂ ಇಷ್ಟು ಕಡಿಮೆ ಬಡ್ಡಿಗೆ ಸಾಲವೆತ್ತಿದ್ದಿಲ್ಲವೆಂದೂ, ಇಷ್ಟು ಬೇಗನಾಗಿ ಹಣವು ಒದಗಿದ್ದಿಲ್ಲವೆಂದೂ ತಿಳಿದುಬರುತ್ತದೆ

ಮಳೆಯಿಂದ ಅನಾಹುತ!

ಕೊಲಂಬೋ ಪಟ್ಟಣದಲ್ಲಿ ವಿಶೇಷ ಮಳೆಗಾಲಗಳಿಂದ ಅನೇಕ ಮನೆಗಳು ಬಿದ್ದು ಮೋಟಾರುವಾಹನಗಳು ಹಾರಿಹೋದವು ನದಿಯ ಪ್ರವಾಹದಿಂದ ಬಡಬಗ್ಗರ ಮನೆಗಳು ಮುಳುಗಿಹೋಗಿ ಸಾವಿರಾರು ಜನರು ವಾಸಕ್ಕೆ ಸ್ಥಳವಿಲ್ಲದೆ ಅಲೆಯುತ್ತಿದ್ದಾರೆ ಸರ್ಕಾರದವರೂ ಕೊಲಂಬೋ ಧರ್ಮಸಂಸ್ಥೆಗಳವರೂ ಕಷ್ಟದಲ್ಲಿರುವವರಿಗೆ ಕೈಲಾದ ಸಹಾಯಗಳನ್ನೆಲ್ಲಾ ಮಾಡುತ್ತಿದ್ದಾರೆ ಇನ್ನೂ ಪ್ರವಾಹವು ಹೆಚ್ಚುತ್ತಲೇ ಇರುವುದರಿಂದ ಜನರು ನದಿಯ ದಡದಲ್ಲಿ ಕಾವಲಿದ್ದಾರೆ.

ಸ್ತ್ರೀರಹಿತ ದ್ವೀಪ!

ಈಜಿಯನ್ ಸಮುದ್ರದಲ್ಲಿ ಪ್ರಜಾಪ್ರಭುತ್ವವನ್ನು ಹೊಂದಿರುವ ಅಥಾಸ್ ದ್ವೀಪದ ಜನಸಂಖ್ಯೆಯು ಏಳು ಸಾವಿರದವರೆಗಿದ್ದು ಇವರಲ್ಲಿ ಒಬ್ಬ ಸ್ತ್ರೀಯಾದರೂ ಇರುವುದಿಲ್ಲ. ಈ ದ್ವೀಪದಲ್ಲಿ ೨೦ ಚರ್ಚುಗಳಿದ್ದು ಅವುಗಳ ಅಧಿಕಾರವು ೨೦ ಜನ ಸದಸ್ಯರಿಂದಕೂಡಿದ ಒಂದು ಸಂಘದ ಕೈಯ್ಯಲ್ಲಿದೆ ಕ್ರೈಸ್ತನ ಉಪದೇಶವನ್ನು ಅಕ್ಷರಶಃ ಪಾಲಿಸಬೇಕೆಂಬುದಕ್ಕೋಸ್ಕರ ಈ ದ್ವೀಪನಿವಾಸಿಗಳು ಹೆಂಡರುಮಕ್ಕಳನ್ನೆಲ್ಲಾ ತೊರೆದು ಇಲ್ಲಿ ಬಂದು ಕಾಲವನ್ನು ಕಳೆಯುತ್ತಿರುವರಂತೆ!

ಇಲಿಹಿಡಿಯಲುಹೋಗಿ ಹಾವಿನಿಂದ ಕಚ್ಚಿಸಿಕೊಂಡನು!

ಖುಲ್ನಾ ಎಂಬಲ್ಲಿ ೧೦ ವರ್ಷ ವಯಸ್ಸಿನ ವಿದ್ಯಾರ್ಥಿಯೊಬ್ಬನು ತನ್ನ ಕೋಣೆಯಲ್ಲಿ ಹಾವಳಿ ಮಾಡುತ್ತಿದ್ದ ಇಲಿಗಳನ್ನು ಹಿಡಿಯಬೇಕೆಂದು ಬೋನನ್ನು ಇಟ್ಟು ತಾನೂ ಸಮೀಪದಲ್ಲಿಯೇ ಮಲಗಿದನು ಬೆಳಗಿನ ಜಾವದಲ್ಲಿ ಬೋನಿನ ಬಳಿ ಏನೋ ಸದ್ದಾಗಲು, ಇಲಿಯೇ ಬಿದ್ದಿರಬೇಕೆಂದು ಯೋಚಿಸಿ ಬೋನಿನಬಳಿ ಕೈಯಿಟ್ಟ ಕೂಡಲೆ ಏನೋ ಕೈಯನ್ನು ಬಲವಾಗಿ ಕಚ್ಚಿದಂತಾಯಿತು ದೀಪವನ್ನು ತಂದು ನೋಡಲು ನಾಗಸರ್ಪವೊಂದು ಬೋನಿನಲ್ಲಿ ಸುರುಳಿಸುತ್ತಿಕೊಂಡು ಮಲಗಿರುವುದು ಕಂಡಿತು ಕೆಲವು ಘಂಟೆಗಳಲ್ಲಿ ಆ ಬಾಲಕನು ಮೃತನಾದನು

ನರಬಲಿ!

ಕಟಕ್ ಬಳಿಯ ರೂರ್ಕೆ ಎಂಬಲ್ಲಿ ಒಬ್ಬನು ಆರೇಳು ವರ್ಷದ ಇಬ್ಬರು ಹುಡುಗರನ್ನು ಪಕ್ಷಿಗಳನ್ನು ಹಿಡಿಯಲು ಹೋಗೋಣವೆಂದು ಆಸೆಹುಟ್ಟಿಸಿ ಕಾಡಿಗೆ ಕರೆದುಕೊಂಡು ಹೋಗಿ, ಅಲ್ಲಿರುವ ಚಂಡೀದೇವತೆಗೆ ಆ ಹುಡುಗರನ್ನು ಬಲಿಕೊಟ್ಟನಂತೆ! ಎರಡು ಮೂರು ದಿವಸಗಳಾದರೂ ಹುಡುಗರು ಮನೆಗೆ ಬಾರದ್ದರಿಂದ ಮನೆಯವರು ಪೋಲೀಸರಿಗೆ ತಿಳುಹಿಸಿದರು ವಿಚಾರಮಾಡಿದ್ದರಲ್ಲಿ ಹುಡುಗರು ಇವನ ಸಂಗಡ ಹೋದರೆಂಬುದು ಪತ್ತೆಯಾಗಿ ಪೋಲೀಸರು ಅವನನ್ನು ಬಂಧಿಸಿದ್ದಾರೆ ಅಪರಾಧಿಯು ತಾನು ಹುಡುಗರನ್ನು ಕೊಂದನೆಂದು ಹೇಳಿಕೊಟ್ಟಿರುತ್ತಾನೆ ಮುಂದಿನ ವಿಚಾರಣೆಯು ನಡೆಯುತ್ತದೆ

ಹೆಣ್ಣುವೇಷದಲ್ಲಿ ಕಳ್ಳರನ್ನು ದಸ್ತಗಿರಿಮಾಡಿದರು

ಬಂದರವಾಡಿ ಎಂಬಲ್ಲಿ ರಹಸ್ಯವಾಗಿ ಅಫೀಮಿನ ವ್ಯಾಪಾರವು ನಡೆಯುವುದೆಂಬುದನ್ನು ತಿಳಿದು, ಅಲ್ಲಿಯ ಸಬ್‌ಇನ್‌ಸ್ಪೆಕ್ಟರ್ ಮತ್ತು ಒಬ್ಬ ಕಾನ್‌ಸ್ಟೇಬಲ್ ಇವರಿಬ್ಬರೂ ಹೆಂಗಸರಂತೆ ವೇಷವನ್ನು ಧರಿಸಿ, ಅಫೀಮು ಮಾರಾಟವಾಗುವ ಸ್ಥಳಕ್ಕೆ ಹೋದರು ಇವರು ಇಂಥವರೆಂದು ಅಲ್ಲಿಯವರಿಗೆ ತಿಳಿಯದೆಹೋದುದರಿಂದ ಅಫೀಮು ವ್ಯಾಪಾರವು ನಡೆಯುತ್ತಲೇ ಇತ್ತು ಗೋಷಾ ಹೆಂಗಸಿನಂತೆ ವೇಷಹಾಕಿಕೊಂಡಿದ್ದ ಸಬ್‌ಇನ್‌ಸ್ಪೆಕ್ಟರರು ತನ್ನ ಗಾಡಿಯಿಂದ ಕೆಳಕ್ಕೆ ಹಾರಿ ನೂರ್‌ಮಹಮದ್ ಎಂಬವನನ್ನು ಹಿಡಿದು ಕೋರ್ಟಿಗೆ ಹಾಜರ್ಮಾಡಿದರು ನೂರ್‌ಮಹಮದನಿಗೆ 25 ರೂ ಜುಲ್ಮಾನೆಯೂ, ತಪ್ಪಿದರೆ ಒಂದು ತಿಂಗಳು ಸಾದಾಶಿಕ್ಷೆಯೂ ವಿಧಿಸಲ್ಪಟ್ಟಿತು

ಮೋಸಮಾಡಿ ಕನ್ಯಾವಿಕ್ರಯಮಾಡಿದ್ದಕ್ಕೆ ಶಿಕ್ಷೆ!

ಹೈದರಾಬಾದ್ ಪ್ರಾಂತದ ನಿವೃತ್ತ ತಹಸೀಲ್‌ದಾರ್ ರಾಮಚಂದ್ರರಾಯನೆಂಬವನೂ, ಅವನ ಸಹಾಯಕಳಾದ ನೀಲಮ್ಮ ಎಂಬವಳೂ ಸೇರಿ ಮೈಸೂರು ಪ್ರಾಂತ್ಯದಿಂದ ವಯಸ್ಕರಾದ ಹುಡುಗಿಯರನ್ನು ಅಪಹರಿಸಿಕೊಂಡು ಹೋಗಿ ಆ ಪ್ರಾಂತ್ಯದಲ್ಲಿ ವೈಶ್ಯರಲ್ಲಿ ಕನ್ಯೆ ಸಿಕ್ಕುವುದು ಕಷ್ಟವಾದ್ದರಿಂದ ಅಪಹೃತಕನ್ಯೆಯರನ್ನು ಅಲ್ಲಿಯ ವರ್ತಕರಿಗೆ ತಮ್ಮ ಮಕ್ಕಳೆಂದು ಹೇಳಿ ಮಾರಿ ಹಣಸಂಪಾದಿಸುತ್ತಿದ್ದರೆಂಬ ಮ ಹೊರಬಿದ್ದು, ರಾಮಚಂದ್ರರಾಯನಿಗೆ ೩ ವರ್ಷ ಕಠಿನ ಶಿಕ್ಷೆ ಮತ್ತು 1500 ರೂ ಜುಲ್ಮಾನೆಯೂ, ನೀಲಮ್ಮನಿಗೆ ೬ ತಿಂಗಳು ಕಠಿನಶಿಕ್ಷೆಯೂ ವಿಧಿಸಲ್ಪಟ್ಟಿತು. ಅಪೀಲ್‌ಮಾಡಿದ್ದರಮೇಲೆ ರಾಮಚಂದ್ರರಾಯನ ವೃದ್ಧಾಪ್ಯವನ್ನು ನೋಡಿ ಕಠಿನಶಿಕ್ಷೆಯು ಸಾಧಾರಣಶಿಕ್ಷೆಯಾಗಿ ಮಾಡಲ್ಪಟ್ಟಿತು ಅಪರಾಧಿಗಳು ಈ ತೀರ್ಮಾನದ ಮೇಲೆ ಪುನಃ ಹೈಕೋರ್ಟಿಗೆ ಅಪೀಲ್ ಮಾಡಿಕೊಂಡಿದ್ದಾರೆ

ಅಬ್ಸೀನಿಯಾದಲ್ಲಿ ಯುದ್ಧದ ಪರಿಣಾಮ

ಈಗಿನ ಅಬ್ಸೀನಿಯಾದೇಶದ ಪರಿಸ್ಥಿತಿಯು ಬಹು ಭೀಕರವಾಗಿದೆ ಇಟಲಿಯ ಸೈನ್ಯವು ಅಡಿಸ್ ಅಬಾಬ ಪಟ್ಟಣವನ್ನು ಆಕ್ರಮಿಸಿದ ಮೇಲೆ ಹಿಂದಿನಿಂದ ನಡೆದುಬಂದ ರಾಜ್ಯಾಡಳಿತವು ನಾಶವಾಗಿ, ಅಲ್ಲಿಯವರಿಗೆ ಆಹಾರಪದಾರ್ಥಗಳು ಸಿಕ್ಕುವುದೇ ಕಷ್ಟವಾಗಿದೆ ಇದರಿಂದ ಹೊಟ್ಟೆಗಿಲ್ಲದೆ ಸಾವಿರಾರು ಮರಣಗಳಾಗುತ್ತಿವೆ. ಅನೇಕ ಫಲವತ್ತಾದ ಪ್ರದೇಶಗಳೂ ಅಲ್ಲಿಯ ಜನಗಳೂ ಇಟಲಿಯವರ ಬಾಂಬಿಗೆ ತುತ್ತಾದುದರಿಂದ ಎಲ್ಲವೂ ಹಾಳುಬಿದ್ದು ವ್ಯವಸಾಯಮಾಡುವವರೇ ಇಲ್ಲದಾಗಿದೆ. ಈ ಮಧ್ಯೆ ರಾಜ್ಯದ ಅರಾಜಕಸ್ಥಿತಿಯನ್ನು ನೋಡಿ ಅನೇಕ ಪುಂಡರು ಗುಂಪುಕಟ್ಟಿಕೊಂಡು ಸುತ್ತುಮುತ್ತು ಪ್ರದೇಶಗಳನ್ನೆಲ್ಲಾ ಲೂಟಿಮಾಡುತ್ತಿದ್ದಾರೆ ಇಂಥ ಪ್ರಸಂಗಗಳಿಂದ ಕೃಷಿಕಾರ್ಯವು ಸಂಪೂರ್ಣವಾಗಿ ನಿಂತು ಘೋರಕ್ಷಾಮವು ಪ್ರಾಪ್ತವಾಗಿ ಯುದ್ಧಕಾಲಕ್ಕಿಂತಲೂ ಹೆಚ್ಚು ಪ್ರಾಣಹಾನಿಗಳಾಗುವುವೆಂದು ಕಾಣುತ್ತದೆ

ಗಾಂಧಿಯವರ ಹಿರೇಮಗನು ಮುಸಲ್ಮಾನನಾದನು!

ಗಾಂಧಿಯವರ ಹಿರಿಯಮಕ್ಕಳಾದ ಹರಿಲಾಲಗಾಂಧಿಯವರು ಮುಸಲ್ಮಾನಮತಕ್ಕೆ ಸೇರಿದರು ಆ ಮತಸಂಸ್ಕಾರವು ನಾಗಪುರದಲ್ಲಿ ನಡೆಯಿತಂತೆ! ಈ ಮೇ ೨೯ನೆಯ ತಾರೀಖಿನದಿವಸ ಬೊಂಬಾಯಿಯಲ್ಲಿ ಹರಿಲಾಲರು ಪ್ರಾರ್ಥನಾಮಂದಿರವಾದ ಜುಮ್ಮಾಮಸೀದಿಯಲ್ಲಿ ಪ್ರಾರ್ಥನೆಯು ಮುಗಿದಮೇಲೆ ಅಲ್ಲಿ ನೆರೆದಿದ್ದ ಅಪಾರ ಜನಸ್ತೋಮದಲ್ಲಿ ತಾವು ಮುಸಲ್ಮಾನ ಮತಾವಲಂಬಿಗಳಾದುದಾಗಿ ಬಹಿರಂಗವಾಗಿ ತಿಳುಹಿಸಿದರು ಪ್ರಪಂಚದಲ್ಲಿ ಮುಸ್ಲಿಂಮತವೇ ಶ್ರೇಷ್ಠವಾದ್ದರಿಂದ ತಾವು ಹಾಗೆಮಾಡಿದುದಾಗಿಯೂ, ತಮ್ಮ ಹೆಸರು "ಅಬ್ದುಲ್ಲಾ" ಎಂದೂ ಹೇಳಿ ಅನ್ಯಮತ ತತ್ವಗಳನ್ನು ಖಂಡಿಸಿದರು ಅಲ್ಲಿ ನೆರೆದಿದ್ದ ಮುಸಲ್ಮಾನರು ಅಲ್ಲಾಹೋ ಅಕ್ಬರ್ ಎಂದು ಜಯಘೋಷಮಾಡಿದರು ತಂದೆಯಮೇಲಿನ ದ್ವೇಷದಿಂದ ಇವರು ಮುಸಲ್ಮಾನರಾದರೆಂದು ತಿಳಿದುಬರುತ್ತದೆ

ಪ್ಯಾಲಸ್ಟೈನಿನ ಪರಿಸ್ಥಿತಿ.

ಯೆಹೂದಿಗಳು ತಮ್ಮ ದೇಶದಲ್ಲಿ ಬಂದು ನೆಲೆಸಲು ಅವಕಾಶಕೊಡಕೂಡದೆಂದು ಅರಬ್ಬಿಯನರು ನಡೆಯಿಸುತ್ತಿರುವ ಚಳವಳಿಯು ವಿಕೋಪಕ್ಕೆ ಹೋಗಿ ಈಗ ಸ್ವಲ್ಪ ಹತೋಟಿಗೆ ಬಂದಿರುವುದಾಗಿ ತಿಳಿದುಬರುತ್ತದೆ ಕೆಲವು ಅರಬ್ಬಿಗಳು ಟೆಲಿವೇವಿನಲ್ಲಿರುವ ಯೆಹೂದ್ಯರ ಪೈರುಗಳಿಗೆ ಬೆಂಕಿಹಾಕಿ ಅರಿಸಲು ಬಂದವರ ಮೇಲೆ ಗುಂಡು ಹಾರಿಸಿದರು ಆ ಬಳಿ ಇದ್ದ ಅಮೇರಿಕದ ಪ್ರಸಿದ್ಧ ಯೆಹೂದ್ಯಸಾಹುಕಾರ ಫೆಲಿಕ್ಸ್‌ವಾರ್ಬರ್ಗನ ಕಿತ್ತಲೆ ತೋಟವು ಭಸ್ಮವಾಯಿತು ರೈಲನ್ನು ಉರುಳಿಸಬೇಕೆಂದು ಅರಬ್ಬಿಗಳು ಮಾಡಿದ ಪ್ರಯತ್ನವು ಫಲಕಾರಿಯಾಗಲಿಲ್ಲ ಜಾಫಾದಲ್ಲಿ ಕಳೆದ 27 ನೆಯ ತಾರೀಖಿನ ರಾತ್ರಿ ಅರಬ್ಬಿಗಳು ಪೋಲೀಸರ ಮೇಲೆ ಗುಂಡುಹಾರಿಸಿದರು ಬ್ರಿಟಿಷ್ ಸೈನಿಕರು ಪೋಲೀಸರ ಸಹಾಯದಿಂದ ಗಲಭೆಯನ್ನು ಅಡಗಿಸಿದರು ಜೆರೂಸಲೆಂ ನೇಬ್ಲಸ್ ರಸ್ತೆಯಲ್ಲಿ ಬೇಲಿಗಳ ಹಿಂದೆ ಅವಿತುಕೊಂಡು ಗುಂಡು ಹಾರಿಸಿ ಗಲಭೆಮಾಡುತ್ತಿದ್ದ ಅರಬ್ಬಿಗಳನ್ನು ಕೆಮರಾನ್ ಹೈಲ್ಯಾಂಡರ್ಸ್ ಸೈನಿಕರು ಎದುರಿಸಿದರು. ಬ್ರಿಟಿಷರ ಕಡೆ ಯಾರಿಗೂ ಅಪಾಯವಾಗಿರುವುದಿಲ್ಲ ಪ್ಯಾಲಸ್ಟೈನಿನ ಪ್ರಮುಖ ಅರಬ್ಬಿಪತ್ರಿಕೆಗಳೆಲ್ಲಾ ತಮ್ಮ ದೇಶವನ್ನು ಅನ್ಯಾಕ್ರಾಂತವಾಗದಂತೆ ಪ್ರಯತ್ನಿಸಬೇಕೆಂದು ಬ್ರಿಟಿಷರನ್ನು ಪ್ರಾರ್ಥಿಸಿಕೊಂಡಿವೆ ಹರತಾಳವನ್ನು ಆಚರಿಸುತ್ತಿದ್ದ ಅರಬ್ಬಿ ವರ್ತಕರು ತಮ್ಮ ಅಂಗಡಿಗಳ ಬಾಗಿಲನ್ನು ಸ್ವಲ್ಪವಾಗಿ ತೆಗೆದಿರುವುದರಿಂದಲೂ ಅರಬ್ಬಿಗಳ ಗುಂಪುಗಳು ಬೀದಿಗಳಲ್ಲಿ ಅಲ್ಲಲ್ಲೇ ತಿರುಗಾಡಲು ಉಪಕ್ರಮಿಸಿರುವುದರಿಂದಲೂ ಪರಿಸ್ಥಿತಿಯು ಸ್ವಲ್ಪ ಹತೋಟಿಗೆ ಬಂದಿರುವುದಾಗಿ ಯೋಚಿಸಲಾಗಿದೆ

ಶ್ರೀ ಜಗದ್ಗುರು ಪಂಚಾಚಾರ್ಯರ್ಗಾಃ ಪ್ರಸೀದ ತು

ದೀಕ್ಷಾಮಹೋತ್ಸವ ಬದಾಮಿ

ಜಗತ್ತಿನಲ್ಲಿ ಪ್ರತಿಯೊಂದು ಮತವು ಉನ್ನತಸ್ಥಿತಿಗೆ ಬರಬೇಕಾದರೆ ಆಯಾಯ ಮತಸ್ಥಾಪಕರೂ ತದನುಯಾಯಿಗಳೂ ಮುಖ್ಯಕಾರಣರು. ತದ್ವತ್ ನಮ್ಮ ವೀರಶೈವ ಮತಾಚಾರ್ಯರಾದ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರೂ, ಶಾಖಾಮಠಾಧಿಕಾರಿಗಳೂ ಅಹೋರಾತ್ರಿ ಪ್ರಯತ್ನಿಸಿ ಹಿಮ್ಮುಖವಾದ ವೀರಶೈವಮತವನ್ನು ಮುಮ್ಮುಖವಾಗಿ ಮಾಡಿದ್ದು ನಮ್ಮೆಲ್ಲರ ಸುದೈವವೇ ಸರಿ! ಈವರೆಗೆ ಈ ನಮ್ಮ ವೀರಶೈವಮತವು ಕಾರ್ಗತ್ತಲೆಯಲ್ಲಿದ್ದುದರಿಂದ ಜಾತಿಸಂಕರಕಾರಕರೆಂಬ ಗೂಗೆಗಳು ಘೂತ್ಕರಿಸಲು ಅನುವಾಗಿತ್ತು. ಆದು ಈಗ ಗುರುವರ್ಗವೆಂಬ ಸೂರ್ಯನ ಬೆಳಕಿಗೆ ಬೆದರಿ ಈ ಗೂಗೆಗಳು ಪಲಾಯನ ಮಾಡಿದ್ದು ಆ ಗುರುಸಾರ್ವಭೌಮರ ಮಹಿಮೆಯಲ್ಲದೆ ಬೇರೆಯಲ್ಲ ಇಸ್ತು!

ನಮ್ಮ ಗ್ರಾಮದಲ್ಲಿ ಚನ್ನಪ್ಪನವರು ಮತ್ತು ವೀರಭದ್ರಪ್ಪನವರು ಪಟ್ಟಣದ ಎಂಬವರು ಶ್ರೀಮಂತರೂ, ಆಚಾರಶೀಲರೂ, ಹರಗುರುಭಕ್ತಿಪರಾಯಣರೂ ಆಗಿರುವರು. ಈ ಮಹಾಶಯರು ಗೃಹಶಾಂತಿಮಾಡಿಸುವದರ ಸಲುವಾಗಿ ತಮ್ಮ ಗುರುಗಳಾದ ವಿಜಾಪುರ ಮತ್ತು ಚಿಮ್ಮಲಿಗಿ ಅರಳೆಲೆ ಕಟ್ಟಿಮನೆ ಬೃಹನ್ಮಠಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಶಾಂತವೀರಸ್ವಾಮಿಗಳವರನ್ನು ಪ್ರಾರ್ಥಿಸಿಕೊಂಡ ಮೇರೆಗೆ ಶ್ರೀಗಳವರು ಶಿಷ್ಯರ ಪ್ರಾರ್ಥನೆಯಂತೆ ತಾ॥ ೨೬-೪-೧೯೩೬ ನೆಯ ದಿವಸ ಆಗಮಿಸಿದರು. ಶ್ರೀಗಳವರು ತಾ॥ ೨೭-೪-೧೯೩೬ನೇ ಸೋಮವಾರ ದಿವಸ ಅನುಷ್ಠಾನವನ್ನು ಪ್ರಾರಂಭಿಸಿ ತಾ॥ ೨೯-೪-೧೯೩೬ ನೇ ಬುಧವಾರ ದಿವಸ ಶಿಷ್ಯರಿಂದ ಮಹಾಗಣಾರಾಧನೆಯನ್ನೂ ಮಾಡಿಸಿ ಸಂಪೂರ್ತಿಗೊಳಿಸಿದರು. ಅನಂತರ ಶ್ರೀಗಳವರು ಶಿಷ್ಯರ ಪ್ರಾರ್ಥನೆಯ ಮೇರೆಗೆ ಚನ್ನಪ್ಪನವರ ಮತ್ತು ವೀರಭದ್ರಪ್ಪನವರ ಮನೆಯ ಮಂಡಳಿಗೆಲ್ಲಾ ಶಾಸ್ತ್ರೋಕ್ತ ಪ್ರಕಾರವಾಗಿ ದೀಕ್ಷೆಯಿತ್ತು ಶಿಷ್ಯರ ಮನಸ್ಸಂತೋಷಗೊಳಿಸಿದರು. ಅನಂತರ ಚನ್ನಪ್ಪನವರು ಮತ್ತು ವೀರಭದ್ರಪ್ಪನವರು ಗಣಾರಾಧನೆಯನ್ನು ಮಾಡಿ ಗೋ ಹಿರಣ್ಯ ದಕ್ಷಿಣಾದಿಗಳಿಂದ ಮಾಹೇಶ್ವರರನ್ನು ತೃಪ್ತಿಗೊಳಿಸಿದರು. ಇದಲ್ಲವೇ ನಿಜವಾದ ಶಿವಭಕ್ತಿ ಲಕ್ಷಣವು? ಮೇಲ್ಕಂಡ ಶ್ರೀಗಳವರು ಕಳೆದ ವರ್ಷ ಇಲ್ಲಿಗೆ ಬಂದಾಗ್ಗೆ ಒಬ್ಬರು ಮಕ್ಕಳಿಲ್ಲವೆಂದು ಬಹು ವಿಧವಾಗಿ ಪ್ರಾರ್ಥಿಸಲು ಅದಕ್ಕೆ ಶ್ರೀಗಳು ಶ್ರೀ ಗುರುಸಾರ್ವಭೌಮನಾದ ಶ್ರೀ ರೇಣುಕನ ಚರಣವನ್ನು ಸ್ಮರಿಸಿರಿ, ಒಂದು ವರ್ಷದಲ್ಲಿ ನಿಶ್ಚಯವಾಗಿ ಗಂಡುಶಿಶುವು ಜನಿಸುವುದು, ನೀವು ಅದಕ್ಕೆ "ಅರಳೆಲೆ ಗುರುಪಾದ" ಎಂದು ಹೆಸರಿಡಬೇಕೆಂದೂ, ಮತ್ತು ಈ ರುದ್ರಾಕ್ಷಿಯನ್ನು ಪ್ರತಿದಿವಸ ಪೂಜಿಸುತ್ತಿದ್ದು ಶಿಶುವು ಜನಿಸಿದ ಕೂಡಲೆ ಅದರ ಕೊರಳಿಗೆ ಧರಿಸಬೇಕೆಂದೂ ಹೇಳಿ ರುದ್ರಾಕ್ಷಿಯನ್ನು ಆಶೀರ್ವದಿಸಿದರು. ಅದರಂತೆ ಆಶೀರ್ವಾದ ಪಡೆದವರಿಗೆ ಗಂಡುಶಿಶುವು ಜನಿಸಿದ್ದು ಆ ಶಿಶುವಿಗೆ ಶ್ರೀಗಳ ಅಪ್ಪಣೆಯ ಮೇರೆಗೆ ನಾಮಕರಣಮಾಡಿ ರುದ್ರಾಕ್ಷವನ್ನು ಧರಿಸಿರುವರು. ಇದಲ್ಲವೇ ಗುರುಮಹಿಮೆಯು? ಈ ಮಂಗಲಸಮಯದಲ್ಲಿ ಶ್ರೀಗಳವರ ಅಪ್ಪಣೆಯಪ್ರಕಾರ ಮ॥ ರಾ॥ ಚನ್ನಪ್ಪನವರು ಪ್ರಭಾಪೋಷಣಕ್ಕಾಗಿ ೩ ರೂ ಗಳನ್ನು ಸಮರ್ಪಿಸಿದರು. ಶ್ರೀ ಜಗದ್ಗುರು ಪಂಚಾಚಾರ್ಯರು ಈ ಕಾರ್ಯಕಾರಿಗಳಾದ ಸದ್ಭಕ್ತರಿಗೆ ಆಯುರಾರೋಗ್ಯ ಭಾಗ್ಯಾದಿಸಕಲಸಂಪತ್ ವೃದ್ಧಿಯನ್ನೀಯಲೆಂದು ಕೋರುವ,

ವೀರಬಸಪಯ್ಯ ಹಿರೇಮಠ,
ಬದಾಮಿ

ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ವೀರಮಾಹೇಶ್ವರದೀಕ್ಷಾ ಮತ್ತು ವಿವಾಹಮಹೋತ್ಸವ

ಬಳ್ಳಾರಿಜಿಲ್ಲಾ ಹಂದಿಹಾಳುಗ್ರಾಮದ ಕಂಬಾಳಿಮಠದ ಕೆಳಗೋಟ್ಟೆಯ್ಯನವರ ಮಠದಲ್ಲಿ ಇದೇ ಧಾತುನಾಮ ಸಂ॥ ವೈಶಾಖ ಶು॥ ೭ ಬುಧವಾರದ ದಿವಸ ಉದಯ ವೀರಮಾಹೇಶ್ವರದೀಕ್ಷೆಗಳು, ಇದೇ ಮಧ್ಯಾಹ್ನ ೨ ಘಂಟೆಯಿಂದ ವಿವಾಹಗಳು ಶಿಸ್ತ್ರೋಕ್ತವಾಗಿ ತೆಕ್ಕಲಕೋಟೆ ಶ್ರೀ ಪಟ್ಟದಸ್ವಾಮಿಗಳವರ ಅಧ್ಯಕ್ಷತೆಯ ಕೆಳಗೆ ವೇ॥ ಮೆಟ್ರಿ ಹಿರೇಮಠದ ಅಮರಯ್ಯನವರು ವೇ॥ ಹಿರೇಮಠದ ರುದ್ರಯ್ಯನವರು. ಇವರ ಪೌರೋಹಿತ್ಯದೊಡನೆ ಅತಿವಿಜೃಂಭಣೆಯಿಂದ ನೆರವೇರಿದವು. ಈ ಶುಭಕಾರ್ಯಗಳಲ್ಲಿ ಪ್ರಭಾಪೋಷಣಕ್ಕಾಗಿ ೩ ರೂ ಗಳು ತೆಗೆಯಿಸಲ್ಪಟ್ಟವು.

ಶಿಂದಿಗೇರಿಗ್ರಾಮದಲ್ಲಿರುವ ಹಂದಿಹಾಳು ಕಂಬಾಳಿಮಠದ ದೊಡ್ಡಬಸಯ್ಯನವರ ಪುತ್ರ ಚಿ॥ ಜಡೆಯಯ್ಯನಿಗೂ ಮೆಟ್ರಿಗ್ರಾಮದಲ್ಲಿರುವ ಹಂದಿಹಾಳು ಕಂಬಾಳಿಮಠದ ಮಹದೇವಯ್ಯನವರ ಪುತ್ರ ವಿಶ್ವಮುನಿಗೂ ಜಂಬಯ್ಯನವರ ಪುತ್ರರು ಕಂಬಾಳಯ್ಯ ಮತ್ತು ವಿಶ್ವಲಿಂಗ ಇವರಿಗೂ ಮಾಹೇಶ್ವರದೀಕ್ಷೆಯಾಯಿತು.

ಹಂದಿಹಾಳುಮಠದ ಕೆಳಗೋಟ್ಟೆಯ್ಯನವರಪುತ್ರ ಚಿ॥ ಶಿವಲಿಂಗಶರ್ಮನಿಗೂ ದಣಾಪುರದ ಸೊಂಡೂರು ಹಿರೇಮಠದ ಬಸವಯ್ಯನವರ ಪುತ್ರಿ ಚಿ॥ ಸೌ॥ ದೊಡ್ಡಬಸಮ್ಮನಿಗೂ, ಕೆಳಗೋಟ್ಟೆಯ್ಯನವರ ತಮ್ಮನಪುತ್ರ ಚಿ॥ ವಿರೂಪಾಕ್ಷಯ್ಯನಿಗೂ ದಣಾಪುರದಲ್ಲಿರುವ ಸೊಂಡೂರು ಹಿರೇಮಠದ ಈಶ್ವರಯ್ಯನವರ ಪುತ್ರಿ ಚಿ॥ ಸೌ॥ ಗಂಗಮ್ಮನಿಗೂ, ದಣಾಪುರದಲ್ಲಿರುವ ಹಿರೇಮಠದ ಬಸವಯ್ಯನವರಪುತ್ರ ಚಿ॥ ಸಿದ್ಧರಾಮಯ್ಯನಿಗೂ ಹಂದಿಹಾಳು ಕಂಬಾಳಿಮಠದ ದೊಡ್ಡಬಸಯ್ಯನವರ ಪುತ್ರಿ ಚಿ॥ ಸೌ॥ ಷಣ್ಮುಖಮ್ಮನಿಗೂ, ಕುರುಗೋಡು ಮೇಲುಮಠದ ದೊಡ್ಡಯ್ಯನವರ ಪುತ್ರ ಚಿ॥ ಬಸವರಾಜಸ್ವಾಮಿಗೂ ಕೆಳಗೋಟ್ಟೆಯ್ಯನವರ ಪುತ್ರಿ ಚಿ॥ ಸೌ॥ ಚನ್ನಬಸಮ್ಮನಿಗೂ, ವಿವಾಹಗಳು ವೈಭವದಿಂದ ನೆರವೇರಿದವು.

ಈ ಮಂಗಲಕಾರ್ಯಗಳಿಗಾಗಿ ಸುತ್ತಮುತ್ತಲಿನ ಗ್ರಾಮಗಳ ಅನೇಕಜನ ಪ್ರಮುಖರು ಆಗಮಿಸಿ ವಧೂವರರಿಗೆ ಮಂಗಲವನ್ನು ಕೋರಿದರು,

ಕುರುಗೋಡು ಉಪ್ಪರಿಗಿಮಠದ ಈಶ್ವರಯ್ಯ

ಶ್ರೀಮತಿ ಚಿಕ್ಕಬಸಮ್ಮಯ್ಯನವರ ಛತ್ರ ಚಾಮರಾಜರೋಡ್, ಮೈಸೂರು.

ಈ ಧರ್ಮಛತ್ರಕ್ಕೆ ಸೇರಿ 1936 1937ನೇ ಸಾಲಿನಲ್ಲಿ ವಿದ್ಯಾಭ್ಯಾಸಮಾಡಲು ಇಚ್ಛಿಸುವ ವೀರಶೈವ ಬಡ ವಿದ್ಯಾರ್ಥಿಗಳು ತಾವು ಬಡವರೆಂಬುವುದಕ್ಕೆ ತಾವು ವಾಸಿಸುವ ಗ್ರಾಮಸ್ಥರ ಸರ್ಟಿಫಿಕೇಟ್‌ನೊಡನೆ 5-6 36 ರೊಳಗೆ ಈ ಕೆಳಗೆ ರುಜುಮಾಡಿರುವವರಿಗೆ ಅಪ್ಲಿಕೇಷನ್ ಕೊಡಬೇಕು. ಕಾಲಾತೀತವಾಗಿ ಬರುವ ಅಪ್ಲಿಕೇಷನ್‌ಗಳಿಗೆ ನಿಗಾಕೊಡಲಾಗುವುದಿಲ್ಲ.

ಯಂ ಪಿ ಚನ್ನಪ್ಪ
(ಕಾರ್ಯದರ್ಶಿ)
ರಿಟೈರ್ಡ್ ಶಿರಸ್ತೇದಾರ್,
'ಶಂಕರನಾಥನಿಲಯ"
ಕಿಲ್ಲೆ ಮೊಹಲ್ಲಾ, ಮೈಸೂರು

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀಮದ್ವೀರಶೈವ ಫ್ರೀ ಬೋರ್ಡಿಂಗ್, ಗುಲಬರ್ಗಾ

ನಮ್ಮ ಫ್ರೀಬೋರ್ಡಿಂಗಿನಲ್ಲಿ ಪ್ರವೇಶಿಸಲಿಚ್ಛೆಯುಳ್ಳ ವಿದ್ಯಾರ್ಥಿಗಳು ಆಮುಂದಿನ ತಿಂಗಳಲ್ಲಿಯೇ ನಮ್ಮ ಬೋರ್ಡಿಂಗಿನ ಪ್ರವೇಶಪತ್ರಿಕೆಯ ಫಾರಮ್ಮನ್ನು ಪಡೆದು ಅರ್ಜಿಯನ್ನು ಬರೆದುಕೊಳ್ಳಬೇಕು. ಕಮಿಟಿಯಿಂದ ಒಪ್ಪಿಗೆಯಾಗಿ ಬಂದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುವದು. ಸದ್ಯಕ್ಕೆ ಬ ನೆಯ ಕ್ಲಾಸಿನಿಂದ ಮೊದಲ್ಗೊಂಡು ಅಭ್ಯಾಸಮಾಡುವವರಿಗೆ ಆಶ್ರಯವು ದೊರೆಯುತ್ತದೆ. ವಿದ್ಯಾರ್ಥಿಗಳು ನಿಜವಾಗಿ ಬಡವರಿದ್ದಲ್ಲಿ ಬರಬೇಕು. ದೇವರು ಅನುಕೂಲಿಸಿಕೊಟ್ಟಿರಲು ಕೃಪಣತನದಿಂದ ಬಡವರೆಂದು ಬಂದು ಸೇರಬಾರದು. ನಾವೀ ಬೋರ್ಡಿಂಗನ್ನು ಕೇವಲ ಬಡವರಿಗಾಗಿಯೇ ಸ್ಥಾಪಿಸಿದ್ದು, ಮಹಾಪ್ರಯಾಸದಿಂದ ಸಾಗಿಸುತ್ತೇವೆ. ಬೋರ್ಡಿಂಗಿಗೆ ತಕ್ಕ ಶಕ್ತಿಯು ಬರುವವರೆಗೂ ನಮ್ಮ ಯೋಗ್ಯತಾನುಸಾರವಾಗಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತೇವೆ. ವಿದ್ಯಾರ್ಥಿಗಳು ಸಭ್ಯವರ್ತನವುಳ್ಳವರಾಗಿರಬೇಕು.

ಕಾರ್ಯದರ್ಶಿಗಳು,
ಮಲಕೂಡ ಹಿರೇಮಠದ ಶ್ರೀಗಳು

ಅನುಕರಣೀಯವಿವಾಹ

ಮುಕ್ತಾರ್ ತಾಲ್ಲೂಕು ವೀರಡಗುಂಭದ ಮಠಪತ್ತಿ ಅಯ್ಯಪ್ಪನವರು ವೈಶಾಖ ಶು॥ ೮ ಗುರುವಾರ ಶುಭಮುಹೂರ್ತದಲ್ಲಿ ತಮ್ಮ ಸೋದರಳಿಯನಾದ ಚಿ॥ ವಿರೂಪಾಕ್ಷಯ್ಯನೆಂಬ ವರನಿಗೆ ಚಿ॥ ಸೌ॥ ಶಿವಮೂರ್ತಮ್ಮನೆಂಬ ತಮ್ಮ ಜ್ಯೇಷ್ಠಪುತ್ರಿಯನ್ನೂ, ಬೇಲೇರಿ ಸಿದ್ಧಯ್ಯನವರ ಪುತ್ರ ಚಿ॥ ಗಂಗಾಧರಯ್ಯನಿಗೆ ಕನಿಷ್ಠಪುತ್ರಿಯಾದ ಚಿ॥ ಸೌ॥ ಅಯ್ಯಮ್ಮನನ್ನೂ ಕೊಟ್ಟು ವಿಧ್ಯುಕ್ತವಾಗಿ ವಿವಾಹವನ್ನು ಜರುಗಿಸಿದರು. ಈಗಿನ ಕಾಲದ ಅಸುರವಿವಾಹಪದ್ಧತಿಯಂತೆ ಕನ್ಯಾಶುಲ್ಕ ಮುಂತಾದ ದುರಾಚಾರಕ್ಕೆ ಮನಗೊಡದೆ ತಮ್ಮ ಗೃಹದಲ್ಲಿಯೇ ಕನ್ಯಾದಾನಮಾಡಿ ಆ ದಾನದ ಅದ್ಭುತ ಫಲಕ್ಕೆ ಪಾತ್ರರಾದರು. ಇದೇ ಮಾರ್ಗವನ್ನೇ ಸರ್ವರೂ ಅನುಸರಿಸಿ ಭಗವತ್ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥಿಸುವ,

ಸಮಾಚಾರವಿಮಾನಿ

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ

ನಂ. 70, ಚಿಕ್ಕಪೇಟೆ, ಬೆಂಗಳೂರು ಸಿಟಿ

ಸ್ವೀಕಾರ.

1 ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘದ ಟ್ರೆಜರರ್ ಮ॥ ರಾ॥ ಶ್ರೀ॥ ಸರಾಫ್ ಬಿ ಬಸಪ್ಪನವರು ತಾ॥ 18-5-36 ರಲ್ಲಿ ಬೆಂಗಳೂರು ಸಿಟಿ ವಿಶ್ವೇಶ್ವರಪುರದಲ್ಲಿರುವ 'ಶಾಂತಿನಿವಾಸ' ಎಂಬ ತಮ್ಮ ಗೃಹದಲ್ಲಿ ತಮ್ಮ ಕುಮಾರ ಚಿ॥ ಎಸ್ ಬಿ ನಂಜುಂಡಯ್ಯನೆಂಬ ವರನಿಗೂ, ಮೈಸೂರು ಅಫೀಸಿಯಜಮಾನ್ ರುದ್ರಪ್ಪನವರ ಮಕ್ಕಳು ಮ॥ ರಾ॥ ಶ್ರೀ॥ ಯಜಮಾನ್ ಬಿ ಚಿಕ್ಕರಾಚಪ್ಪನವರ ಪುತ್ರಿ ಚಿ॥ ಸೌ॥ ಭ್ರಮರಾಂಬಮ್ಮನೆಂಬ ವಧುವಿಗೂ, ನಡೆಸಿದ ವಿವಾಹಮಹೋತ್ಸವದಲ್ಲಿ ವರನ ಪರವಾಗಿ ಮ॥ ರಾ॥ ಶ್ರೀ॥ ಸರಾಫ್ ಬಿ ಬಸಪ್ಪನವರಿಂದ ಮ॥ ರಾ॥ ಶ್ರೀ॥ ದೇಪದ ಶೆಟ್ರು ಬಿ ರುದ್ರಪ್ಪಶೆಟ್ಟರ ಮೂಲಕವಾಗಿ ಬಂದ ರೂಪಾಯಿಗಳು 10

2 ಬೆಂಗಳೂರು ಸಿಟಿ ಕೈ॥ ಪಾರದ ರಾಚಪ್ಪನವರ ಮಕ್ಕಳು ಮ॥ ರಾ॥ ಶ್ರೀ॥ ಬಸಪ್ಪನವರ ಮನೆಯಲ್ಲಿ ಬೈರಡ್ಡಿಹಳ್ಳಿ ಮ॥ ರಾ॥ ಶ್ರೀ॥ ವೀರಾದಿವೀರಭದ್ರಪ್ಪನವರ ಪುತ್ರ ಚಿ॥ ಚಂಗಳರಾಯಪ್ಪನೆಂಬ ವರನಿಗೂ, ಸೀಲವಾರದ ಮ॥ ರಾ॥ ಶ್ರೀ॥ ಕೋರಿಮುನಿಯಪ್ಪನವರ ಪುತ್ರಿ ಚಿ॥ ಸೌ॥ ಭದ್ರಮ್ಮನೆಂಬ ವಧುವಿಗೂ ತಾ॥ 25-5-36 ರಲ್ಲಿ ನಡೆದ ವಿವಾಹಮಹೋತ್ಸವಕಾಲದಲ್ಲಿ ವಧೂವರರ ಕಡೆಯಿಂದ ಬೆಂಗಳೂರು ಸಿಟಿ ಚಿಕ್ಕಪೇಟೆ ಮ॥ ರಾ॥ ಶ್ರೀ॥ ದಿಬ್ಬೂರು ಆರ್ ವೀರಪ್ಪನವರ ಮೂಲಕವಾಗಿ ಬಂದ ರೂಪಾಯಿಗಳು 2

ಈ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದೆ

ಬೆಂಗಳೂರುಸಿಟಿ, ವಿ ಚನ್ನಯ್ಯ, ಬಿ ಎ, ಬಿಎಲ್,
ತಾ॥ 23-5-36 ಸೆಕ್ರೆಟರಿ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ವರುಷಕ್ಕೊಮ್ಮೆ ಎರಡು ವರ್ಷಕ್ಕೊಮ್ಮೆ ಸಂಚಾರ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಿಸಿರುತ್ತೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ಸಂಶಯರಹಿತವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು ಇದಕ್ಕಾಗಿ ಎಂದೂ ಇದರಂಥ ಕಾಗದಗಳನ್ನು ಉಪಯೋಗಿಸಿರುವದಿಲ್ಲವೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೬—೦—೦
ರಸಸಿಂದೂರ	೧	೨—೮—೦
ಮಲ್ಲಸಿಂದೂರ	೧	೪—೦—೦
ತಾಳಸಿಂದೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ರಸವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾಶುಕ್ತಿಭಸ್ಮ	೧	೦—೬—೦
ಕಾಂಚನಭಸ್ಮ	೧	೦—೮—೦
[illegible]ಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
[illegible]ತಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
[illegible]ಂಗದ ಕೊಂಬಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೩೦—೦—೦
[illegible]ಜಿತ ಸೂರ್ಯಪುಟಿ	೧	೧—೦—೦
[illegible]ಜಿತ ಅಗ್ನಿಪುಟಿ	೧	೦—೮—೦

ನೋಟು—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ ಚೂರ್ಣ, ಗುಟಿಕಾ ತೈಲ ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ್,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಶಿವಪುರ, ಜಿಲ್ಲಾ ಗಢವಾಲ್ ಯುಪಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾ ವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜ್ ಪ್ರತ್ಯೇಕ

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಒಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತ-ಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲಗ್ರಂಥವು ಕೇವಲ ೯೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೯೨೪ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಸಂತೋಷಪೂರ್ವಕವಾಗಿ ಹೇಳಬಹುದಾಗಿದೆ ನಮ್ಮ ಸ್ವಾಮಿಗಳವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಂಡಿತರನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥವನ್ನು ನಿಯೋಜಿಸುವದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಪೂರ್ವ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೯೮೫ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುತ್ತಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ ಗೆ ದೊರೆಯುವದು ವಿ ಪಿ ಚಾರ್ಜ್ ೧ ರೂ ೫ ಆಣೆ ಪ್ರತ್ಯೇಕ

ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಜಯಂತ್ಯುತ್ಸವದ ಫೋಟೋ ಸೈಜು ... X ... [illegible]
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ... [illegible]
ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ... X ... ಬೆಲೆ —೧—೬
ಸದ್ಯ ... [illegible] ... ಫೋಟೋ ಸೈಜು ... X ... ಬೆಲೆ
ಶ್ರೀ ಜಗದ್ಗುರು ಪಂಚಾಚಾರ್ಯರ ... ಫೋಟೋ ಸೈಜು ... X ... ಬೆಲೆ —೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ... ಫೋಟೋ ಸೈಜು X ... ೦— —೯
ಶ್ರೀ ... ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ — —೯
ಶ್ರೀಮದುಜ್ಜಯಿನೀ ... ಶ್ರೀ ... ಸಿದ್ಧಲಿಂಗಶಿವಾಚಾರ್ಯ ... — —೯
ಶ್ರೀ ಜಗದ್ಗುರು ... ಶಿವಾಚಾರ್ಯರ ... ಭೂಪರಿಂದ ... ಫೋಟೋ —೦—೯
ಶ್ರೀ ರೇಣುಕಾಚಾರ್ಯರು ... ಶಿವಾಚಾರ್ಯರಿಗೆ ... ಫೋಟೋ — —೯
ಶ್ರೀ ರೇಣುಕಾಚಾರ್ಯರು ... ಪ್ರಾರ್ಥನಾನುಸಾರ ... ಲಿಂಗಧಾರಣವನ್ನು
ಧಾರಣಮಾಡುವ ... ಫೋಟೋ — —೯
ಶ್ರೀ ರೇಣುಕಾಚಾರ್ಯರು ... — —
ಶ್ರೀಮದುಜ್ಜಯಿನೀ ಜಗದ್ಗುರು ... ಫೋಟೋ — —೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳು ... — —೯
ಶ್ರೀ ಜಗದ್ಗುರು ಉಜ್ಜಯಿನೀ ... — —೯
ಶ್ರೀ ಜಗದ್ಗುರು ಉಜ್ಜಯಿನೀ ... ಫೋಟೋ — —೯
ಶ್ರೀ ಜಗದ್ಗುರು ಉಜ್ಜಯಿನೀ ... ಫೋಟೋ — —೯
ಶ್ರೀ ಜಗದ್ಗುರು ... ಅತ್ಯಂತ ... ಫೋಟೋ — —
ಶ್ರೀ ಜಗದ್ಗುರು ... — —೯
ಹಿಮವತ್ಪರ್ವತದ ... — —೯
ಕೊಲ್ಲಾಪುರದ ... ಜಗದ್ಗುರುಗಳವರ ... — —೯

ಸೂಚನೆ—ಒಂದು ರೂಪಾಯಿಗಿಂತ ಕಡಿಮೆ ... ರೂಪಾಯಿಗಳ
ಮೇಲೆ ... ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಮೈಸೂರು

ಡಾಕ್ಟರ್ ಜಿ ವಿ ಯವರ
ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸ, ಒಂಟಿತಲೆನೋವು, ತಲೆ ... ಕಣ್ಣುಗಳಲ್ಲಿ ... ಸರ್ವವ್ಯಾಧಿಗಳು ... ವ್ಯಾಧಿಗಳು ಪರಿಹಾರವಾಗುವವಲ್ಲದ ... ವ್ಯಾಧಿಗಳನ್ನು ... ಸಹ ಹಚ್ಚು ಮಾಡುತ್ತದೆ ಮೂರು ಬೆಚ್ಚಿನ ಸಾಧಾರಣ ನಶ್ಯದ ... ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿಯು ಬಹಿಷದವಾಗಿ ಉಪಯೋಗಿಸುತ್ತಾರೆ ... ಬುದ್ಧಿ ಒಂದೆ ಕ್ರಯ ರೂ ೦ ೪ ೦ ವಿ ಪಿ ೦ ೮ ೦ ಡಜನ್ ಒಂದಕ್ಕೆ ಕ್ರಯ ರೂ ೩ ೮ ೦ ವಿ ಪಿ ೬ ಆ
ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

(Registered Trade Mark)

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[೬] ಪೋ ಬಾ ೩೧೦ ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯ ... ನಾಮಾವಳಿ	— ಆಣೆ
ಮರುಳಸಿದ್ಧೇಶ್ವರ ಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೨ನೆಯ ಆವೃತ್ತಿ)	೧ ಆಣೆ
ಸನ್ಯಾಸಾಸ್ತ್ರಮವಿಮರ್ಶ (೩ನೆಯ ಆವೃತ್ತಿ ...)	೧ ಆಣೆ
ಪಂಚಪಿ ... ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ತ್ವದರ್ಶನ (೮ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿ ವಿಲಾಸ	೩ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಗುರುಸ್ವರೂಪಸ್ಥಾಪನದೀಪಿಕ	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೩ ಆಣೆ
ವೀರಶೈವಮತಮೀಮಾಂಸ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಸನ್ಯಾಸಾಸ್ತ್ರಮವಿಮರ್ಶ ... (... ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾದಿತ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचे भाषण (मराठी)	८ आणे
Speeches by Pandit Shri Kashinatha Shastri (English)	12 A
ವೀರಶೈವಮಂತ್ರ (... ನೆಯ ಆವೃತ್ತಿ)	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಮಂತ್ರಯುಕ್ತವಾದ ...)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ವಾಗೀಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾಸಹಿತ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೩ ಪುಟ)	೮ ...
लिंगधारणचंद्रिका (संस्कृत)	३ रु
महानारायणोपनिषत् (वीरशैवभाष्य-संस्कृत)	१ रु
वीरशैवेंदुशेखर (संस्कृत)	१ रु

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ... ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ ಗೆ ೬ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಪಂಡಿತ ಶಿರ್ಶಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266 || ಶ್ರೀ ಜಗದ್ಗುರು ಪಂಚಾಚಾರ್ಯರು ಪ್ರಸೀದಂತು || REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕ್ರಮಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಸಕಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ [illegible] ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು

ವರ್ಷಕ್ಕೆ ೧ ರೂ ೧೧ | ಬಿಡಿ ಪ್ರತಿ ೧ಕ್ಕೆ ೯ ಪೈ | [illegible] ಪ್ರತ್ಯೇಕ

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೮ನೇ ಜೂನ್ ೧೯೩೬ [ಸಂಚಿಕೆ ೭

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿ ಮಹೋತ್ಸವ,

ಹಾಸನ [illegible]

ಶ್ರೀ ಜಗದ್ಗುರು ಪೂಜ್ಯಪಾದರವರು ಭಕ್ತೋದ್ಧಾರಾರ್ಥವಾಗಿ [illegible] ಸಂಚರಿಸುತ್ತಿರುವರು [illegible] ಶ್ರೀಯವರು ಮೈಸೂರು [illegible] ಭಕ್ತರು ದರ್ಶನ [illegible] ಶ್ರೀಯವರನ್ನು [illegible] ಆಲೋಚನೆಯಲ್ಲಿ [illegible] ಶ್ರೀಯವರ [illegible] ಅಡ್ಡಪಲ್ಲಕ್ಕಿ ಉತ್ಸವವಾದ [illegible] ಶ್ರೀಯವರು ಭಕ್ತರ ಪ್ರಾರ್ಥನೆಯ [illegible] ತಾ|| 31-5-36 ನೇ ದಿವಸ [illegible] ವಿಜಯಮಾಡಿದರು. ಆ ದಿವಸ ಅಡ್ಡಪಲ್ಲಕ್ಕಿಯ ಉತ್ಸವ [illegible] ವಿಶೇಷ ವೈಭವದಿಂದ ನೆರವೇರಿತು [illegible] ಸುಮಾರು [illegible] ವರ್ಷಗಳಿಂದ ಇಲ್ಲಿ [illegible] ಉತ್ಸವವನ್ನು [illegible] ಭಕ್ತರು ಆನಂದಸಾಗರದಲ್ಲಿ ಮುಳುಗಿದರು.

ಉತ್ಸವವು [illegible] ಅಲಂಕರಿಸಲ್ಪಟ್ಟ [illegible] ಸಕಲಬಿರುದಾವಳಿಗಳಿಂದಲೂ, [illegible] ವೈಭವದಿಂದಲೂ, ಜಗದಾಚಾರ್ಯರ ಜಯಘೋಷ [illegible] ಶ್ರೀಯವರಿಂದ ಆಶೀರ್ವಾದವನ್ನು ಪಡೆಯು [illegible] ಈ ತಾಲೂಕಿನ [illegible] ಪೋಲೀಸ [illegible] ಉತ್ಸವವು [illegible] ಶ್ರೀ [illegible] ಜಗದಾಚಾರ್ಯರ ಜಯಘೋಷ [illegible] ಆಶೀರ್ವಾದವನ್ನು [illegible] ಶ್ರೀ [illegible] ಶಿವಾಚಾರ್ಯರು [illegible] ಉಪದೇಶ [illegible]

ಪೂರ್ವ ಉತ್ಸವಭಾಗ

ಮಹನೀಯರ ಹಿತೋಕ್ತಿಗಳು

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

೮ ಪ್ರಕೃತಿ [illegible] ಪರಮಾತ್ಮನ [illegible] ಯುಕ್ತಿಯುಕ್ತಂ ವಚೋ ಗ್ರಾಹ್ಯಂ ಬಾಲಾದಪಿ [illegible] ಎಂಬ ನೀತಿ [illegible] ಉದಾಹರಣೆ [illegible] ಸಮಸ್ತ ಪ್ರಾಣಿ [illegible] ಕಲಿಯಬಹುದು [illegible] ಸಮಸ್ತ [illegible] ಸಂಭವಿಸುವ [illegible] ನಮಗೆ ಸಂಘಟಿಸುವ ವಿಕಾರಗಳೆಲ್ಲವೂ [illegible] ಭೂಮಿಗೆ [illegible] ನೋಡಿದರೆ [illegible] ತನ್ನ [illegible] ಮಾತ್ರ [illegible] ನೋಡಿ [illegible] ಮುಕ್ತಿ [illegible] ನೋಡಿ [illegible] ಬಹುದು [illegible]

[illegible] ಮನುಷ್ಯರೂ [illegible] ನೋಡಿದರೆ [illegible] ಪರಮಾತ್ಮನು [illegible] ಬಹುದು [illegible]

[illegible] ಸಂಭವ [illegible] ಮನುಷ್ಯ [illegible] ಸ್ವಾರ್ಥ [illegible] ತಿಳಿದುಕೊಳ್ಳಬಹುದು ಮತ್ತು [illegible]

[illegible] ಅದು [illegible] ಯೋಗ್ಯತೆ [illegible] ಆಹಾರ [illegible] ಆತ್ಮ [illegible] ಸಾರಾಂಶ—ಸಾರಾಸಾರ ವಿಚಾರಮಾಡಿನೋಡಿದರೆ, ಮಾನವದೇಹ [illegible] ಮನುಷ್ಯಜಾತಿಗೆ [illegible] ಮತ್ತೆ ಮತ್ತೆ [illegible] ನಿಷಿದ್ಧಕರ್ಮಗಳು

೯ ಮನುಷ್ಯರೂ ಶರೀರಕ್ಕೆ ಜನನಮರಣಾದಿಗಳು ವಾಸ್ತವಿಕವಾಗಿಯೂ ಇಲ್ಲದ [illegible] ಯಥಾರ್ಥವಾದವುಗಳಲ್ಲವು [illegible] ಮುಕ್ತನಾದವ [illegible] ಜನನಮರಣ [illegible] ಪ್ರಕಾಶಮಾನ [illegible] ಮುಕ್ತ [illegible] ಆತ್ಮನು [illegible] ಸಂಚರಿಸು [illegible]

[೬ನೇ ಪುಟವನ್ನು ನೋಡಿ]

ಮೈಸೂರು ಪ್ರಜಾಪ್ರತಿನಿಧಿಸಭೆಯಲ್ಲಿ ದಿವಾನ್ ಸಾಹೇಬರವರು ಮಾಡಿದ ಭಾಷಣ.

ಪ್ರಜಾಪ್ರತಿನಿಧಿಸಭೆಯ ಸದಸ್ಯರೇ

ಕಳೆದ ಅಧಿವೇಶನದಲ್ಲಿ ನಾನು ಸಮರ್ಪಿಸಿದ ಭಾಷಣವಾದಿದ ಅನಂತರದಲ್ಲಿ ನಡೆದ [illegible] ಸಂತೋಷಕರವಾದ ಘಟನೆಗಳನ್ನು ನಾವೆಲ್ಲರೂ ಅನುಭವಿಸಿ ದೊಡ್ಡ [illegible] ಸಾಮ್ರಾಜ್ಯದ [illegible] ನಾಲ್ಕನೆಯ ಬಹಳ [illegible] ರಾಜ್ಯಪ್ರಭುಗಳವರು [illegible] ಚಕ್ರಾಧಿಪತ್ಯದ [illegible] ನಾವೆಲ್ಲರೂ ಅನುಭವಿಸಿದ್ದೇವೆ [illegible] ರಾಜ್ಯಪ್ರಭುಗಳ [illegible] ಜನತೆಯ ಸಂತೋಷವನ್ನು ಸೂಚಿಸಿ [illegible] ಅವರ ನಿರ್ಯೋಗದ [illegible] ಬಹುಕಾಲ [illegible]

[illegible]

ಸಾರ್ವತ್ರಿಕವಾಗಿ [illegible] ಆಶೀರ್ವಾದ [illegible] ಸಿಂಹಾಸನಾರೂಢರಾದ [illegible] ಮಹಾಪ್ರಭುಗಳ ಪಟ್ಟಾಭಿಷೇಕ ಮಹೋತ್ಸವದಲ್ಲಿ [illegible] ಮಹಾಸ್ವಾಮಿಯವರ [illegible] ಆಶೀರ್ವಾದ [illegible] ರಾಜಾಧಿರಾಜ [illegible] ಮಹಾರಾಜರವರ [illegible] ಪ್ರಜಾಪ್ರತಿನಿಧಿ [illegible]

ಸಾಮ್ರಾಜ್ಯದ [illegible] ಇಂಡಿಯಾ ಸ್ಟೇಟ್ಸ್ [illegible] ರಾಜಪ್ರತಿನಿಧಿ [illegible] ಪ್ರತಿಯಾಗಿ [illegible] ಸಾರ್ವಭೌಮರವರ ಪ್ರಜೆಗಳಾಗಿದ್ದೇವೆ [illegible] ಚಕ್ರವರ್ತಿ [illegible] ಸಾಧಕವಾದ ಸಮಸ್ತ ವಿಚಾರಗಳಲ್ಲಿಯೂ [illegible] ಪ್ರಜೆಗಳ [illegible] ಪ್ರತಿಯೊಂದು ವಿಚಾರವನ್ನೂ [illegible] ಅವರು ವ್ಯಕ್ತಪಡಿಸಿದ್ದಾರೆ ಭರತಖಂಡಕ್ಕೆ [illegible] ಆವಶ್ಯಕವಾದ ಸಮಸ್ತವಿಚಾರಗಳಲ್ಲಿಯೂ [illegible] ಗಳ [illegible] ಪ್ರಯೋಜನಗಳು [illegible] ಆವರು ಅವೇ [illegible] ತೀವ್ರಾಸಕ್ತಿಯಿಂದ ವರ್ತಿಸುವ ಕಾಲವೂ ತೀರ ಸಮೀಪದಲ್ಲಿದೆಯೆಂದೂ ನಾನು ನಿಶ್ಚಯವಾಗಿ ನಂಬಿರುವೆನು. ನಮಗ ಹೊಸಬರು ಚಕ್ರವರ್ತಿ ಸಾರ್ವಭೌಮ ರಾಮರವರ [illegible] ಅವರ ಪ್ರತಿನಿಧಿಗಳಾದ ವೈಸ್ರಾಯಿಯವರ [illegible] ಅಲಂಕರಿಸಿದ್ದಾರೆ ಹೊಸ ವೈಸ್ರಾಯಿಯವರಾದ ಲಾರ್ಡ್ ಲಿನ್‌ಲಿತ್‌ಗೋ ಅವರು ಭಾರತೀಯರಿಗೆ ಪೂರ್ವಪರಿಚಿತರೇ ಭರತಖಂಡದ ವ್ಯವಸಾಯ ಪುನರೋಭಿವೃದ್ಧಿಗೆ ಮೂಲಾಧಾರವಾಗಿರುವ ವಿಚಾರಗಳಲ್ಲಿ ತಮಗಿರುವ ಆಸಕ್ತಿಯನ್ನು ಕಾರ್ಯಕಾರಿಯಾದ ರೀತಿಯಲ್ಲಿ ಅವರು ಆಗಲೇ ಪ್ರದರ್ಶಿಸಿದ್ದಾರೆ [illegible] ಗಳು ಅವರಿಗೆ ಆದರದಿಂದ ಸ್ವಾಗತವನ್ನು ಬಯಸುವವರಾಗಿದ್ದೇವೆ

ಈ ಮೂರ್ನಾಡುಗಳಲ್ಲೂ ಅವುಗಳಿಂದ ಭರತಖಂಡದ ಇತರ ಪ್ರದೇಶಗಳೊಡನೆ ನಮ್ಮ ಸಂಸ್ಥಾನದ ಮುಂದಿನ ಏಳಿಗೆಯ ವಿಚಾರದಲ್ಲಿ ಉಂಟಾಗಬಹುದಾದ ಸತ್ಪರಿಣಾಮವನ್ನು ಗಮನಿಸುವುದರ ಜೊತೆಗೆ, ನಮ್ಮ ಮತ್ತೊಂದು ಸುಯೋಗವನ್ನು ನಾವು ಮನಸ್ಸಿಗೆ ತಂದುಕೊಳ್ಳಬೇಕಾಗಿದೆ ನಿವೇದಿಗಳೂ, ಉದಾರಸ್ವಭಾವರೂ, ಪ್ರಜಾವತ್ಸಲರೂ ಆದ ನಮ್ಮ ಶ್ರೀಮನ್ಮಹಾರಾಜರ ಪ್ರಭುತ್ವವು ನಡೆಯುತ್ತಿರುವುದೇ ಆ ಸುಯೋಗ ಈಗ ಒಂಭತ್ತು ವರ್ಷಗಳ ಹಿಂದೆ ಮಹಾಸ್ವಾಮಿಯವರ ಪ್ರಭುತ್ವದ ರಜತೋತ್ಸವವು ನಡೆಯಿತು. ಆಗ ಸಂಸ್ಥಾನದ ಪ್ರಜೆಗಳೆಲ್ಲರೂ ಅತ್ಯಂತವಾಗಿ ಆನಂದಪಟ್ಟರು ಇನ್ನೊಂದು ವರ್ಷವು ಕಳೆದ ಸ್ವಲ್ಪ ಕಾಲದ ಹೊತ್ತಿಗೆ, ಆ ಇಪ್ಪತ್ತೈದು ವರ್ಷಗಳ ಪ್ರಭುತ್ವದ ಅವಧಿಯ ಜೊತೆಗೆ, ಮತ್ತೆ ಹತ್ತು ವರ್ಷಗಳ ಪ್ರಭುತ್ವದ ಅವಧಿಯು ಪೂರೈಸುವ ಸಂತೋಷವೂ ನಮಗೆ ಲಭಿಸುವುದಾಗಿದೆ ಮಹಾಸ್ವಾಮಿಯವರ ದೇಹಾಲಸ್ಯವು ನಿವಾರಣೆಯಾಗಿ ಅವರಿಗೆ ಪೂರ್ಣಾರೋಗ್ಯವುಂಟಾಗಿರುವುದು ಸಂಸ್ಥಾನದ ಪ್ರಜೆಗಳೆಲ್ಲರಿಗೂ ಸಂತೋಷಪ್ರದವಾಗಿದೆ ಆದರ್ಶಪ್ರಭುಗಳಾಗಿರುವ ಮಹಾಸ್ವಾಮಿಯವರ ಕೃಪಾಮಯವಾದ ಆಳ್ವಿಕೆಯು ಚಿರಕಾಲ ಬೆಳಗುತ್ತಿರಬೇಕೆಂಬುದೇ ನಮ್ಮೆಲ್ಲರ ಮನಃಪೂರ್ವಕವಾದ ಪ್ರಾರ್ಥನೆಯಾಗಿದೆ

ಕಳೆದ ಹತ್ತು ವರ್ಷಗಳ ಕಾರ್ಯನೀತಿಯು

೧೯೨೬-೨೭ನೆಯ ಸಾಲಿನಲ್ಲಿ ನಮ್ಮ ಸಂಸ್ಥಾನದ ಒಟ್ಟು ಹುಟ್ಟುವಳಿಯು ೩ ಕೋಟಿ ೬೮ ಲಕ್ಷ ರೂಪಾಯಿಗಳಾಗಿದ್ದಿತು ಮುಂದಿನ (೧೯೩೬-೩೭ನೆಯ ಸಾಲಿನಲ್ಲಿ) ೩ ಕೋಟಿ ೬೮ ಲಕ್ಷ ಹುಟ್ಟುವಳಿಯು ಬರಬಹುದೆಂದು ನಾವು ಅಂದಾಜುಮಾಡಿದ್ದೇವೆ ೧೯೨೬-೨೭ನೆಯ ಸಾಲಿನಲ್ಲಿ ನಮ್ಮ ಸಂಸ್ಥಾನಕ್ಕೆ ಬಂದ ಒಟ್ಟು ಸಾಲವು ೨ ಕೋಟಿ ೭೮ ಲಕ್ಷ ರೂಪಾಯಿಗಳು ೧೯೩೬-೩೭ನೆಯ ಸಾಲಿನಲ್ಲಿ ಅದು ೭ ಕೋಟಿ ೧೨ ಲಕ್ಷದಷ್ಟು ಬೆಳೆದಿರುತ್ತದೆ ೧೯೨೬-೨೭ನೆಯ ಸಾಲಿನಲ್ಲಿ ಸಲ್ಲಿಸಿದ್ದ ಬಡ್ಡಿಯ ಒಟ್ಟು ಮೊತ್ತವು ೧೯ ಲಕ್ಷ ರೂಪಾಯಿಗಳು ೧೯೩೬-೩೭ನೆಯ ಸಾಲಿನಲ್ಲಿ ನಾವು ಕೊಡಬೇಕಾದ ಬಡ್ಡಿಯ ಒಟ್ಟು ಮೊತ್ತವು ೬೭ ಲಕ್ಷ ರೂಪಾಯಿಗಳು ಈ ಹತ್ತು ವರ್ಷಗಳ ಅವಧಿಯಲ್ಲಿ ನಮ್ಮ ಹುಟ್ಟುವಳಿಯೂ ಏನೇ ಬದಲಾವಣೆ ಹೊಂದಿಲ್ಲ! ಹೊಸ ತರಿಗೆಯ ಮೂಲಕ ವಿಧಿಸಿದ ಯಾವ ಹುಟ್ಟುವಳಿಯೂ ಸೇರಿಲ್ಲದಿದ್ದರೂ ಇಷ್ಟಕ್ಕೂ ಅತಿಮುಖ್ಯವಾದ ಹುಟ್ಟುವಳಿ ಬಾಬುಗಳಲ್ಲದರಿಂದ ಜವಾನು ಕಂದಾಯ ಮತ್ತು ಎಕ್ಸೈಜ್ ಬಾಬುಗಳ ಹುಟ್ಟುವಳಿಗಳು ಬಹಳ ಮಟ್ಟಿಗೆ ಕಡಿಮೆಯಾಗಿವೆ ಇತರ ಹಲವು ಬಾಬುಗಳ ವರಮಾನವೂ ಅಷ್ಟರೊಳಗೆ ಹೆಚ್ಚಿಲ್ಲ ಹೀಗಿದ್ದೂ ಹುಟ್ಟುವಳಿಯು ೪೦ ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಿದೆ ಸರ್ಕಾರವು ಕೇವಲ ಒಂದು ವಾಣಿಜ್ಯಸಂಸ್ಥೆಯಾಗಿದ್ದು ಈ ರೀತಿಯ ಪರಿಣಾಮಗಳು ಕಂಡುಬಂದ ಪಕ್ಷಕ್ಕೆ, ಅಗ್ಗಬಂದವಾದವನ್ನು ೪ ಕೋಟಿ ೩೩ ಲಕ್ಷ ರೂಪಾಯಿಗಳನ್ನು ಹೆಚ್ಚಿಸಿದಂತೆಯೂ, ೪೦ ಲಕ್ಷ ರೂಪಾಯಿಗಳ ಹೆಚ್ಚು ನಷ್ಟವನ್ನು ಒದಗಿಸಿದಂತೆಯೂ ನಾವು ಹೇಳಬಹುದು [illegible] ಸಂಸ್ಥಾನದ ಆಸ್ತಿಯ ಬೆಲೆ ಹೆಚ್ಚುವ ಮತ್ತು ದೇಶದ ವೃದ್ಧಿಯಿಂದ ಈ ಅಂಶಗಳನ್ನು ವಿಮರ್ಶೆಮಾಡಿ ನೋಡಿದರೆ ಇದೇ ಬಗೆಯ ಫಲಿತಾಂಶಗಳೇ ಕಂಡುಬರುತ್ತವೆ

ನಾನಾ ಜಲಾಶಯಗಳೇ ಮುಂತಾದ ನೀರಾವರಿ ಕೆಲಸಗಳ ನಿರ್ಮಾಣದಿಂದ ನಾವು ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ೧,೨೫,೦೦೦ ಎಕರೆಗಳ ಹೆಚ್ಚು ಜಮೀನುಗಳನ್ನು ನೀರಾವರಿ ಸಾಗುವಳಿಗೆ ತಂದಿದ್ದೇವೆ ಆ ಜಮೀನುಗಳಲ್ಲಿ ಬಹುಭಾಗವನ್ನು ಗಳು ಹೀಗೆ [illegible] ಹೊಸದಾಗಿ ಸಾಗುವಳಿಗೆ ಬಂದಿವೆ [illegible] ಜಮೀನುಗಳು ನಮ್ಮ ನೀರಾವರಿ ಕಾರ್ಯಗಳ ಸರಿಯಾದ [illegible] ಕಾಲದಲ್ಲಿಯೇ ಒಟ್ಟು ರಾಜ್ಯದ [illegible] ಹೊಸ ಜಮೀನುಗಳೂ ನೀರಾವರಿಗೆ ಬರುತ್ತವೆ

ಸಂಸ್ಥಾನದ ರೈಲ್ವೆ ಮಾರ್ಗಗಳ ವಿಚಾರ

ರೈಲ್ವೆಯ ಬಾಕಿ ಸಾಲವನ್ನು ತೀರಿಸಿದುದರ ಫಲಿತಾಂಶವಾಗಿ ಬೆಂಗಳೂರಿನಿಂದ ಹರಿಹರದವರೆಗಿರುವ ಮತ್ತು ಅತಿ ಮುಖ್ಯವಾದ ರೈಲ್ವೆ ಸಂಬಂಧವನ್ನು ಕಲ್ಪಿಸುವುದಾಗಿರುವ ರೈಲು ಮಾರ್ಗವು ಇಷ್ಟರಲ್ಲಿಯೇ ನಮ್ಮ ಆಡಳಿತಕ್ಕೆ ಬರುತ್ತದೆ

ವಿದ್ಯುಚ್ಛಕ್ತಿಯ ವಿಚಾರ

೩೦,೦೦೦/೪೮,೦೦೦ ಯೂನಿಟ್ಟುಗಳ ಅಥವಾ ೩೦,೭೦೦ ಅಶ್ವಶಕ್ತಿಗಳ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲು ಯಂತ್ರಗಳನ್ನು ಸ್ಥಾಪಿಸಿದ್ದೇವೆ ಇಷ್ಟು ಪ್ರಮಾಣದ ವಿದ್ಯುಚ್ಛಕ್ತಿಗೆ ಈಗ ಗಿರಾಕಿಯಿರುವುದಲ್ಲದೆ, ಒಟ್ಟು ಇದರ ಜೊತೆಗೆ ಮತ್ತಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯು ಉತ್ಪತ್ತಿಯಾದರೂ ಅದಕ್ಕೆ ಸಿದ್ಧವಾಗಿ ಗಿರಾಕಿಯು ದೊರೆಯುವುದಾಗಿದೆ

ಮತ್ತೊಂದು ಉದ್ಯಮವಾಗಿ ಸಕ್ಕರೆ ಕಾರ್ಖಾನೆಯನ್ನು ಸೂಚಿಸಬಹುದಾಗಿದೆ ಈ ಕಾರ್ಖಾನೆಯು ೨೦ ಲಕ್ಷ ರೂಪಾಯಿಗಳ ಮೂಲಧನದ ಸ್ವತ್ತಾಗಿದೆ ಈ ಕಾರ್ಖಾನೆಯ ಸಂಬಂಧದಲ್ಲಿ ಸರ್ಕಾರದವರು ತೆಗೆದುಕೊಂಡಿರುವ ಷೇರುಗಳನ್ನೂ ಇತರ ಷೇರುದಾರರು ಪಡೆದಿರುವ ಷೇರುಗಳನ್ನೂ ಅವೆಲ್ಲಕ್ಕೂ ಕೊಟ್ಟಿರುವ ಹಣದ ಎರಡರಷ್ಟರಷ್ಟು ಮೊತ್ತಕ್ಕೆ ಧಾರಾಳವಾಗಿ ಮಾರಬಹುದಾದಷ್ಟು ಮಟ್ಟಿಗೆ ಆ ಷೇರುಗಳ ಬೆಲೆಯು ಏರಿದೆ ಈ ಉದ್ಯಮಗಳೆಲ್ಲವೂ ವಿಷಯವಾಗಿಯೂ ಸ್ವಲ್ಪ ಮಟ್ಟಿಗೆ ವಿಶದವಾಗಿಯೇ ಪ್ರಸ್ತಾಪಿಸಬೇಕಾಗಿರುವುದರಿಂದ ಇನ್ನೂ ಹೆಚ್ಚಿನ ವಿವರಗಳನ್ನು ನಾನು ಇಲ್ಲಿ ಸೂಚಿಸುವುದಿಲ್ಲ

ನಿರುದ್ಯೋಗ ಸಂಬಂಧವಾಗಿ ಇದರ ಫಲಿತಾಂಶ

ಈ ಬಗೆಯ ನಮ್ಮ ಕಾರ್ಯಕ್ರಮದಿಂದ ನಿರುದ್ಯೋಗ ಸಂಬಂಧವಾಗಿ ಉಂಟಾಗಿರುವ ಪರಿಣಾಮಕರವಾದ ಫಲಿತಾಂಶಗಳನ್ನು ಕುರಿತು ಕೆಲವು ಸಂಗತಿಗಳನ್ನು ತಮ್ಮ ಗಮನಕ್ಕೆ ತರಬಿಚ್ಛಿಸುವೆನು ಕಟ್ಟಡಗಳನ್ನು ಕಟ್ಟುವ ಕೆಲಸದಲ್ಲಿ ಹಲವರಿಗೆ ಉದ್ಯೋಗ ದೊರೆಯುವಂತೆ ಆಗಿರುವುದಲ್ಲದೆ ಆ ಕಟ್ಟಡಗಳಿಗೆ ಬೇಕಾದ ಇಟ್ಟಿಗೆಗಳನ್ನು ಕೊಯ್ಯುವುದು, ಕಲ್ಲುಗಳೊಡೆಯುವುದು, ಮರದ ದಿಮ್ಮಿಗಳನ್ನು ಕೊಯ್ದು ಕಿಟಕಿಗಳು ಬಾಗಿಲುಗಳು ಮೊದಲಾದವುಗಳನ್ನು ಮಾಡುವುದು ಮುಂತಾದ ರೀತಿಗಳಲ್ಲಿ ಪರೋಕ್ಷವಾಗಿ ಕೂಡ, ಈ ಕಟ್ಟಡಗಳ ದೆಸೆಯಿಂದ ಜನರಿಗೆ ಕೆಲಸ ದೊರೆತಿದೆ ಇಷ್ಟೇ ಅಲ್ಲ ನಮ್ಮ ಉದ್ಯಮಗಳಿಗೆ ಬೇಕಾದ ಇತರ ನಾನಾ ವಸ್ತುಗಳಲ್ಲಿ ಹಲವು ವಸ್ತುಗಳನ್ನು ಪರದೇಶಗಳಿಂದ ತರಿಸದೆ ನಮ್ಮ ದೇಶದ ಕಾರ್ಖಾನೆಗಳಲ್ಲಿಯೇ ಅವುಗಳನ್ನು ತಯಾರು ಮಾಡಿಸಿ ಪಡೆಯುತ್ತಿದ್ದೇವೆ ಬೆಂಗಳೂರಿನಲ್ಲಿ ವಿದ್ಯುಚ್ಛಕ್ತಿ ಕಾರ್ಖಾನೆಯಲ್ಲಿ ತಯಾರಾಗುತ್ತಿರುವ ವಸ್ತುಗಳನ್ನೂ, ವಿದ್ಯುಚ್ಛಕ್ತಿ ಒದಗಿಸಲು ಬೇಕಾಗಿರುವ ಇನ್ಸುಲೇಟರುಗಳು ಮುಂತಾದವುಗಳಿಗೆ ಕಾರ್ಖಾನೆಯ ಸಾಮಾನುಗಳನ್ನೂ ಇದಕ್ಕೆ ನಿದರ್ಶನಗಳಾಗಿ ಸೂಚಿಸಬಹುದಾಗಿದೆ ಅವುಗಳ ಜೊತೆಗೆ ಸಿಮೆಂಟ್ ತಯಾರಿಸುವ ಕಾರ್ಖಾನೆಯೂ ಇಷ್ಟರಲ್ಲಿಯೇ ಸ್ಥಾಪಿತವಾಗುವುದು ಕಟ್ಟಡಗಳಿಗೆ ಬೇಕಾದ ಕಂಬಿಗಳನ್ನು (ಸ್ಟ್ರಕ್ಚರಲ್ ಸ್ಟೀಲ್) ತಯಾರಿಕೆಗಾಗಿ ಭದ್ರಾವತಿಯ ಕಾರ್ಖಾನೆಯಲ್ಲಿ ಸಾಗಿಸಲು ಕಳುಹಿಸುವ ಕೆಲಸವನ್ನೂ ನಾವು ಹಿಡಿದಿದ್ದೇವೆ ಈ ಬಗೆಯ ಉದ್ಯಮಗಳಲ್ಲಿ ಪ್ರತಿಯೊಂದು ಅದರ ಭಾಗದ ಮೇಲೂ ಅವರ ಸಂಬಂಧಪಟ್ಟ ವಸ್ತುಗಳನ್ನು ತಯಾರಿಸುವ ಜನರಿಗೆ ಮತ್ತಷ್ಟು ಉದ್ಯೋಗಗಳು ದೊರೆಯಲು ಸಹಾಯವಾಗಿದೆ ಅವರೊಡನೆ ಸಾಮಾನ್ಯ ವ್ಯಾಪಾರಿಗಳಿಗೂ ವೃದ್ಧಿಯಾಗಲೂ ಸಹಾಯವಾಗಿದೆ ಈ ಎರಡು ರೀತಿಗಳೂ ಸ್ಥಿರಗೊಂಡಬೇಕಾದುದು ಮುಂದಿನ ವರ್ಷಗಳಿಂದ ಅನುಭವಕ್ಕೆ ಬರಲಿ ಎಂದು [illegible] ಪ್ರಯೋಜನವುಂಟಾಗುತ್ತದೆ

ವಿದ್ಯಾವಂತರಾದ ಯುವಕರಲ್ಲಿ ನಿರುದ್ಯೋಗದ ಕಷ್ಟವು ಬಹಳ ಹೆಚ್ಚಾಗಿರುವುದನ್ನು ನಾನೇನೂ ಉಪೇಕ್ಷಿಸಿರುವುದಿಲ್ಲ, ಆದಾಗ್ಯೂ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ನಿರುದ್ಯೋಗದ ಕಷ್ಟವನ್ನು ಕಡಿಮೆಮಾಡಲು ಸಹಾಯಕವಾಗುವಂತೆ ಇಷ್ಟು ಮಟ್ಟಿಗೆ ನಾನಾ ಉದ್ಯಮಗಳನ್ನು ಕೈಕೊಂಡಿರುವುದಕ್ಕಾಗಿ ನಾವು [illegible] ಅಭಿನಂದನೆಗೆ ಪಾತ್ರರೆಂದು ಹೇಳಲು ಕಾರಣವಿಲ್ಲದೆ ಹೋಗಿಲ್ಲ ಈ ಹತ್ತು ವರ್ಷಗಳ ಅವಧಿಯಲ್ಲಿ ನಾವು ಅನುಸರಿಸಿದ ಕಾರ್ಯನೀತಿಯ ಫಲವಾಗಿ ಈ ಬಗೆಯ ಫಲಿತಾಂಶಗಳು ನಮಗೆ ಲಭಿಸುತ್ತವೆ ಈ ಕಾರ್ಯನೀತಿಯನ್ನು [illegible] ಕುರಿತು ಆಗಾಗ್ಗ ಟೀಕೆಗಳು ಉಂಟಾಗಿರುವುದರಿಂದ [illegible] ನಾನು ಅದನ್ನು ಕುರಿತು [illegible] ಇಲ್ಲಿ [illegible] ಅತ್ಯಂತ [illegible] ವರ್ಷಗಳಿಂದ [illegible] ಕೊಟ್ಟ ಸಹಾಯಕ್ಕಾಗಿ [illegible] ನನ್ನ ವಂದನೆಗಳನ್ನು ಸಮರ್ಪಿಸುವೆನು

ತಿದ್ದುಪಾಟಾದ ಅಂದಾಜು ಮತ್ತು ಬಜೆಟ್ ಅಂದಾಜು

ಇನ್ನು ನಮ್ಮ ಬಜೆಟ್ಟಿನ ವಿಚಾರವಾಗಿ ಕೆಲವು ವಿವರಗಳನ್ನು ಸಂಕ್ಷೇಪಿಸುವೆನು ಕಳೆದ ವರ್ಷದ ಅಧಿವೇಶನದಲ್ಲಿ ಬಜೆಟ್ಟನ್ನು ಕುರಿತು ಪ್ರಸ್ತಾಪಿಸುವಾಗ್ಗೆ ಹುಟ್ಟುವಳಿಯ ಬಾಬುಗಳ [illegible] ಗಳಾಗಿ ವಿವರಿಸಿದ್ದೆನು ಅದು ಯಾವ ರೀತಿ [illegible] ವ್ಯಾಪಾರಾಭಿವೃದ್ಧಿಯಿಂದ ಸ್ಥಾಪಿತವಾಗುತ್ತಿರುವ ಹುಟ್ಟುವಳಿಯ ಬಾಬುಗಳು [illegible] ನಾವು ಕೈಕೊಂಡಿರತಕ್ಕ ವಾಣಿಜ್ಯದ ಉದ್ಯಮಗಳ ಫಲಿತಾಂಶವಾಗಿ ಹುಟ್ಟುವಳಿ ಬರತಕ್ಕ ಬಾಬುಗಳು ಮೂರನೆಯದು ಪ್ರಜೆಗಳಿಂದ ಬರತಕ್ಕ ತೆರಿಗೆಗಳ ಮೊಬಲಗುಗಳು ಈ ಸಲವೂ ನಾನು ಇದೇ ವಿಂಗಡಣೆಗಳನ್ನಾಗಿ ವಿಂಗಡಿಸಿಕೊಂಡು ವಿಚಾರಮಾಡುವೆನು

ಗಣಿಗಳಿಂದ ಸರ್ಕಾರಕ್ಕೆ ಹೇರಳವಾಗಿ ಹುಟ್ಟುವಳಿಯು ಬಂದಿದೆ, ಅದು ಹಿಂದಿನದಕ್ಕಿಂತ ಬಹಳ ಹೆಚ್ಚಾಗಿ ತಗ್ಗಿಲ್ಲವೆನ್ನುವುದು ಚಿನ್ನದ ಮೇಲಿನ ರಾಜಧನವು ೧೯೩೬-೩೭ರ ೩೬ ಲಕ್ಷ ರೂಪಾಯಿಗಳು ಬರಬಹುದು

ಅದು ೧೯೩೪-೩೫ನೆಯ ಸಾಲಿನಲ್ಲಿ ೩೯ ಲಕ್ಷ ೪೪ ಸಾವಿರ ರೂಪಾಯಿಗಳಾಗಿದ್ದಿತು ಇದರ ಜೊತೆಗೆ ಗಣಿಗಳ ಸಂಬಂಧದಲ್ಲಿ ಬರತಕ್ಕ ತೆರಿಗೆಯ ಮೊಬಲಗು ಕಳೆದ ವರ್ಷ ೧೯ ಲಕ್ಷ ೧೬ ಸಾವಿರ ರೂಪಾಯಿಗಳಾಗಿದ್ದುದಕ್ಕೆ ಅದು ಚಾಲ್ತಿ ಸಾಲಿನಲ್ಲಿ ೧೪ ಲಕ್ಷ ೪೬ ಸಾವಿರ ರೂಪಾಯಿಗಳಿಗೆ ತಗ್ಗುವಂತೆ ಅಂದಾಜಾಗಿದೆ ಕ್ರೋಮ್ ಅದುರಿನ ಮಾರಾಟದಿಂದ ನಮಗೆ ೧೯೩೪-೩೫ರಲ್ಲಿ ೧ ಲಕ್ಷ ೧೦ ಸಾವಿರ ರೂಪಾಯಿಗಳ ಹುಟ್ಟುವಳಿಯು ಬಂದಿತ್ತು, ಈ ವರ್ಷ ಅದು ೬೦,೦೦೦ ರೂಪಾಯಿಗಳಾಗಬಹುದೆಂದು ಅಂದಾಜಾಗಿದೆ ಸಾಲಪತ್ರಗಳೇ ಮುಂತಾದವುಗಳ (ಸೆಕ್ಯೂರಿಟಿಗಳ) ಮಾರಾಟವು ಅತಿಶಯವಾಗಿ ನಡೆದುದರಿಂದ ೨೦ ಲಕ್ಷ ೪೩ ಸಾವಿರ ರೂಪಾಯಿಗಳಷ್ಟು ಮೊಬಲಗು ನಿಕ್ಷೇಪ ನಿಧಿಯಾಗಿ ದೊರೆತಿದೆ

ವ್ಯಾಪಾರಿಕೆಗಳು.

ಸ್ವಲ್ಪ ಬದಲಾಗಿ ಹೇಳಿದರೆ ವಾಣಿಜ್ಯದ ಉದ್ಯಮಗಳೆಂದು ಭಾವಿಸಬಹುದಾದ ಉದ್ಯಮಗಳ ವಿಷಯವನ್ನು ಈಗ ಪ್ರಸ್ತಾಪಿಸುವೆನು ಹಾಗೆ ಮಾಡುವಲ್ಲಿ ಹಿಂದಿನ ವರ್ಷದಂತೆಯೇ ಅವುಗಳ ಬಂದ ಲಾಭದ ಮೊತ್ತಗಳ ಅನುಕ್ರಮದಲ್ಲಿ ಅವುಗಳನ್ನು ಆರಿಸಿಕೊಂಡು ವಿವೇಚನೆಮಾಡುವೆನು ಆ ಅನುಕ್ರಮದಲ್ಲಿ ಅವುಗಳನ್ನು ಇಲ್ಲಿ ಕೊಟ್ಟಿದೆ

1. ಕೃಷ್ಣರಾಜಸಾಗರ ವಿದ್ಯುಚ್ಛಕ್ತಿಯ ಮತ್ತು ನೀರಾವರಿಯ ಕಾಮಗಾರಿಗಳು
2. ಮೈಸೂರು ರೈಲ್ವೆಗಳು
3. ಭದ್ರಾವತಿ ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ
4. ಮೈಸೂರು ಸಂಸ್ಥಾನದ ಸಕ್ಕರೆ ಕಾರ್ಖಾನೆ.

5 ಶ್ರೀ ಚಾಮರಾಜೇಂದ್ರ ಜಲಾಶಯದ ನೀರು ಸರಬರಾಯಿ ಕಾರ್ಖಾನೆಗಳು.
6 ಗಂಧದ ಎಣ್ಣೆಯ ಕಾರ್ಖಾನೆ
7. ಸಾಬೂನಿನ ಕಾರ್ಖಾನೆ
8 ರೇಷ್ಮೆ ಕೈಗಾರಿಕೆ
9 ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಶಾಪ
10 ಹೊಗೆಸೊಪ್ಪಿನ ಕೈಗಾರಿಕೆಗೆ
11 ಪಿಂಗಾಣಿ ಕಾರ್ಖಾನೆ
12 ಸರ್ಕಾರದ ವಿದ್ಯುಚ್ಛಕ್ತಿ ಕಾರ್ಖಾನೆ
13 "ಇಂಡಸ್ಟ್ರಿಯಲ್ ಮತ್ತು ಟೆಸ್ಟಿಂಗ್ ಲೆಬೊರೆಟರಿ" ಎಂಬ ವಸ್ತುಗಳ ತಯಾರಿಯು ಮತ್ತು ವಸ್ತು ಪರೀಕ್ಷೆಯ ಪ್ರಯೋಗಶಾಲೆ
14. ಮನೆಗಳಲ್ಲಿ ನಡೆಯತಕ್ಕಂಥ ಕೈಗಾರಿಕೆಗಳು

ಕೃಷ್ಣರಾಜಸಾಗರ ವಿದ್ಯುಚ್ಛಕ್ತಿಯ ಮತ್ತು ನೀರಾವರಿಯ ಕಾರ್ಖಾನೆಗಳು

ಕೃಷ್ಣರಾಜಸಾಗರದ ನಿರ್ಮಾಣಕ್ಕೆ ಇದುವರೆಗೆ 32347000 ರೂಪಾಯಿಗಳ ಬಂಡವಾಳವು ವೆಚ್ಚವಾಗಿದೆ. ಕಳೆದ ವರ್ಷ ಕೃಷ್ಣರಾಜಸಾಗರದ ನೀರಾವರಿ ನಿರ್ಮಾಣದಿಂದ ಅಷ್ಟು ಒಳ್ಳೆ ಪ್ರತಿಫಲವು ವೃದ್ಧಿಕರವಾಗಿರಲಿಲ್ಲವೆಂದು ತಿಳಿದು ಬಂದಿತು. ಇದರ ನೀರಾವರಿ ನಿರ್ಮಾಣದ ವಿಚಾರಣೆಯ ವಿಷಯದಲ್ಲಿ ವಾರ್ಷಿಕ ವರದಿಯನ್ನು ಸೂಚಿಸಿದ್ದಾರೆ. ಆ ವಾರ್ಷಿಕ ವರದಿಯಲ್ಲಿ ಈ ಒಪ್ಪಂದದಂತೆ 56,030 ಎಕರೆಗಳಿಗೆ ನೀರಾವರಿ ಸಾಗುವಳಿಗೆ ನೀರು ಕೊಡುವಂತೆ ನಿರ್ಮಿಸಲಾಗಿದೆ. ಈಗ 41300 ಎಕರೆಗಳು ನೀರಾವರಿ ಸಾಗುವಳಿಯಲ್ಲಿವೆ. ನೀರಾವರಿ ಜಮೀನುಗಳ ವಿಸ್ತೀರ್ಣವು 14,000 ಎಕರೆಗಳಿಗೆ ಬರುವಷ್ಟು ಹೆಚ್ಚಿನ ಹೊಸ ಜಮೀನುಗಳು ಕೆಲಸಕ್ಕೆ ನೀರಾವರಿ ಸಾಗುವಳಿಗೆ ಬರುವ ನಿರೀಕ್ಷೆಯಿದೆ. ಅಲ್ಲದೆ ಕಳೆದ ವರ್ಷ ಅಂದರೆ 1936 ನೇ ಇಸವಿಯಲ್ಲಿ 2,55,100 ರೂಪಾಯಿಗಳಷ್ಟು ಆದಾಯವು ಬಂದಿದೆ. ಮೈಸೂರು ಸರ್ಕಾರದ ವಿಶ್ವಪ್ರಸಿದ್ಧ ಅಧಿಕಾರಿಗಳು ಹೇಳಿದ್ದಾರೆ. ಇದಲ್ಲದೆ, ಈ ಕಾರ್ಖಾನೆಯ ನೀರಾವರಿ ಕಾಲುವೆಗೆ ಸಂಬಂಧಪಟ್ಟ ಜಮೀನುಗಳ ಪೈಕಿ ಅನೇಕ ಜಮೀನುಗಳನ್ನು ನೀರಾವರಿ ಸಾಗುವಳಿಗೆ ತರಲು ಅಲ್ಲಿನ ರೈತರು ಹಿಂಜರಿಯುತ್ತಿದ್ದಾರೆ. ಈಗ ನೀರು ಹರಿಯುವ ಸ್ಥಳದಲ್ಲಿ ಎತ್ತರ ಪ್ರದೇಶ ಅನಿವಾರ್ಯವಾದ ಕಾಲುವೆಗಳ ಬಳಿ 3,200 ಎಕರೆಗಳನ್ನು ನೀರಾವರಿಗೆ ತರುವುದು ಸಾಧ್ಯ. ಈ ವಿಸ್ತೀರ್ಣದಲ್ಲಿ ಈಗಾಗಲೇ 6,000 ಎಕರೆಗಳಿಗೆ ರೈತರು ಸಾಗುವಳಿಗೆ ತರಲು ಅರ್ಜಿಕೊಟ್ಟಿದ್ದಾರೆ. ಅದಕ್ಕಾಗಿ, ಕೃಷ್ಣರಾಜಸಾಗರದ ಸಂಬಂಧದಲ್ಲಿ ನೇಮಕವಾಗಿರುವ ಕಾರ್ಯನಿರ್ವಾಹಕ ಸಮಿತಿಯವರು ಕಾಲುವೆಗಳನ್ನು ವಿಸ್ತರಿಸಲು ಸೂಚಿಸಬೇಕೆಂದು ಸಲಹೆ ಮಾಡಿದ್ದಾರೆ. ಆ ವಿಚಾರದ ಆಲೋಚನೆಯಲ್ಲಿದೆ. ಈ ಸಾಲು ಪ್ರದೇಶದಲ್ಲಿ ಬಂದ ಹಣವು ಬಂಡವಾಳವನ್ನು ತಗ್ಗಿಸಿ ಅದನ್ನು ಉಪಯೋಗಿಸಲು ತಕ್ಕಂತೆ ಕಾಲುವೆಗಳನ್ನು ವಿಸ್ತರಿಸಿ ನೀರಾವರಿ ಸಾಗುವಳಿಯನ್ನು ಹೆಚ್ಚಿಸುವ ವಿಚಾರವೂ ಈಗ ಪರ್ಯಾಲೋಚನೆಯಲ್ಲಿದೆ.

ರೈಲ್ವೆಗಳು

ಮೈಸೂರು ಮತ್ತು ಸರ್ಕಾರ ಮಾರ್ಗ ರೈಲ್ವೆ ರಸ್ತೆಯ ಹೆಚ್ಚು ಸಾಲವನ್ನು ತೀರಿಸಿದ ಸಂಗತಿಯನ್ನು ನಾವು ಈಗಲೇ ತಿಳಿಸಿದ್ದೇವೆ. ಕೇವಲ ೮ ವರ್ಷ ಲಕ್ಷ ರೂಪಾಯಿ ೧೨ ಲಕ್ಷ ೫೦೦ ರೂಪಾಯಿಗಳ ಆ ರೈಲ್ವೆ ಸ್ಟರ್ಲಿಂಗ್ ಸಾಲವನ್ನು ತೀರಿಸಿದ ಮೇಲೆ ಸಾಲದಲ್ಲಿ ನಡೆದ ಆಯವ್ಯಯ ಸಂಬಂಧವಾಗಿ ಸುವ್ಯವಸ್ಥೆ ಮಾಡಿ ೧೯೩೬ನೆಯ ಇಸವಿ ಜನವರಿ ೧ನೆಯ ತಾರೀಖಿನ ರೈಲ್ವೆ ಮಾರ್ಗಗಳನ್ನು ಕಂಪೆನಿಯವರ ಆಡಳಿತದಿಂದ ಬಿಡಿಸಿಕೊಳ್ಳುವುದಕ್ಕೆ ಅವಶ್ಯಕವಾದ ವಿಚಾರಗಳು ಈಗ ನಡೆಯುತ್ತಿವೆ. ಈ ರೈಲ್ವೆ ಮಾರ್ಗಗಳು ನಮ್ಮ ಆಡಳಿತಕ್ಕೆ ಬಂದ ಮೇಲೆ ಮೈಸೂರು ಸಂಸ್ಥಾನದ ರೈಲ್ವೆ ಮಾರ್ಗಗಳು ಒಟ್ಟು ೭೫೦ ಮೈಲಿಗಳಾಗುತ್ತವೆ. ಅಲ್ಲದೆ ಮೊದಲನೆಯ ತರಗತಿಯ ರೈಲ್ವೇ ಪಟ್ಟಿಗಳನ್ನೇ ಹೋಲುವಷ್ಟರ ಮಟ್ಟಿಗೆ ಅಷ್ಟು ಭಾರಿಯಾಗಿ ನಮ್ಮ ರೈಲ್ವೆ ಆದಾಯವೂ ಅಗ್ರ ಏರುತ್ತದೆ. ಅಲ್ಲದೆ ಈಗ ಸಿಬ್ಬಂದಿಯೂ ವಿಶೇಷ ಹೆಚ್ಚಾಗಬೇಕಾಗುತ್ತದೆ. ಅನೇಕರಿಗೂ ಕೆಲಸ ದೊರೆಯುವುದು. ಹಾಗೆ ಭಾರಿ ಪ್ರಮಾಣದಲ್ಲಿ ಹೆಚ್ಚು ಜನರಿಂದ ಒಟ್ಟು ಆದಾಯ ನಮ್ಮ ಕೆಲಸಗಾರರಿಗೆ ಅನುಕೂಲಿಸುವಂತೆ ರೈಲ್ವೆ ಇಲಾಖೆಯು ಮೈಸೂರು ಕಛೇರಿಗಾಗಿ ಒಂದು ಭಾರಿ ಕಟ್ಟಡವನ್ನು ಕಟ್ಟಬೇಕಾಗುತ್ತದೆ. ಮೈಸೂರು ನಗರದಲ್ಲಿ ೫॥ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಇ ಥರದೊಂದು ದೊಡ್ಡ ಕಟ್ಟಡವನ್ನು ಕಟ್ಟುವ ಏರ್ಪಾಡನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಈ ಮಧ್ಯೆ ಬೆಂಗಳೂರಿನಿಂದ ಆನೇಕಲ್ಲಿನ ರೈಲ್ವೆಯನ್ನು ಸ್ಥಾಪಿಸುವುದೂ ನಿಶ್ಚಯದ ಕಾಮಗಾರಿಯು ನಡೆಯುತ್ತಿದೆ. ಇದಕ್ಕಾಗಿ ಈ ವರ್ಷ ೫ ಲಕ್ಷ ರೂಪಾಯಿಗಳನ್ನೂ ಮುಂದಿನ ವರ್ಷ ೬ ಲಕ್ಷ ರೂಪಾಯಿಗಳನ್ನೂ ಸರ್ಕಾರದವರು ಮಂಜೂರು ಮಾಡಿದ್ದಾರೆ. ಮೋಟಾರು ಬಸ್ಸುಗಳ ಪೈಪೋಟಿಯು ದೆಸೆಯಿಂದ ರೈಲ್ವೆ ಹುಟ್ಟುವಳಿಯು ಕಡಿಮೆಯಾಗುತ್ತಿರುವುದನ್ನು ತಪ್ಪಿಸುವುದಕ್ಕಾಗಿ ಬಸ್ಸುಗಳನ್ನು ಬಿಡುವ ಒಂದು ಏರ್ಪಾಡನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಈ ಸಂಬಂಧದಲ್ಲಿ ಆರಂಭಪ್ರಯೋಗವಾಗಿ ಕೆಲವು ಮೊಗ್ಗಲಿನ ಮಾರ್ಗಕ್ಕೆ ಬಸ್ಸುಗಳನ್ನು ಬಿಡುವ ಕೆಲಸವು ನಡೆಯುತ್ತಿದೆ. ಈ ಬಾಬಿಗೆ ೩೦,೦೦೦ ರೂಪಾಯಿಗಳ ಬಂಡವಾಳವು ವೆಚ್ಚವಾಗಿದೆ. ಇದುವರೆಗೆ ಈ ಕಾರ್ಯದಿಂದ ಆದಾಯದ ಹೆಚ್ಚಳವೂ ಸಮಾಧಾನಕರವಾಗಿದೆ.

ಭದ್ರಾವತಿ ಕಬ್ಬಿಣದ ಕಾರ್ಖಾನೆ

ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಕಬ್ಬಿಣದ ಕಾರ್ಖಾನೆಗಳು ಉತ್ತಮ ಪಡೆಯು ಮತ್ತೆ ಪ್ರಾರಂಭವಾಗಿದೆ. ಅದೇ ರೀತಿ ಭದ್ರಾವತಿ ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆಗೂ ಅನುಕೂಲ ಕಾಲವು ಆರಂಭವಾಗಿದೆಯೆನ್ನಬಹುದು. ಉಕ್ಕನ್ನು ತಯಾರಿಸುವ ಯಂತ್ರಗಳ ಹೊಸದು ಪ್ರಾರಂಭವಾದ ಮೇಲಂತೂ ಕಾರ್ಖಾನೆಗೆ ಗಿರಾಕಿ ಎಲ್ಲಾ ಕಡೆ ಹೆಚ್ಚು ಕಬ್ಬಿಣ ಮುಂತಾದ ವಸ್ತುಗಳನ್ನು ತಯಾರಿಸುತ್ತಿದ್ದುದೂ ಕೂಡ ಅವುಗಳ ಮಾರಾಟದಿಂದ ಅವರ ಮೆಚ್ಚುಗೆ ಕಳೆದು ಭದ್ರಾವತಿ ಕಾರ್ಖಾನೆಯಲ್ಲಿ ಲಾಭವು ದೊರೆಯಿತು. ಇದು ಅನಿರೀಕ್ಷಿತವಾಗಿ ಬಂದ ಸಂತೋಷಕರವಾದ ಸಂಗತಿ. ಭಾರತದಲ್ಲೂ ಗಿರಾಕಿಯು ಹೆಚ್ಚುತ್ತಿದೆ. ಭದ್ರಾವತಿ ಕಾರ್ಖಾನೆಯಲ್ಲಿ ವಸ್ತುಗಳ ತಯಾರಿ ವೆಚ್ಚವನ್ನು ಇನ್ನೂ ಸ್ವಲ್ಪ ಕಡಿಮೆಮಾಡುವ ಪ್ರಯತ್ನಗಳು ನಡೆದವು. ಒಳ್ಳೆ ಪದ್ಧತಿಯಿಂದ ಕೆಲಸ ನಡೆದಿರುವುದರಿಂದ ಆ ಪ್ರಯತ್ನಗಳು ಸಫಲವಾದುವು. ಅವುಗಳ ಜೊತೆಗೆ ಉಕ್ಕಿನ ತಯಾರಿ ಯಂತ್ರಗಳು ಕೆಲಸಮಾಡುತ್ತಿವೆ. ಇದಲ್ಲದೆ ಪರಿಣಾಮವಾಗಿ ಮುಂದಿನ ವರ್ಷ ಭದ್ರಾವತಿ ಕಾರ್ಖಾನೆಯಿಂದ ೪ ಲಕ್ಷ ರೂಪಾಯಿಗಳ ಲಾಭವು ಒಟ್ಟಾಗಿ ನಿರೀಕ್ಷಿಸಲಾಗಿದೆ. ಈ ದೊಡ್ಡ ಮೊತ್ತ ಇಲ್ಲಿನ ವಾಣಿಜ್ಯ ವಿಭಾಗದಿಂದ (ಫೆರೋಸಿಲಿಕಾನ್ ಮುಂತಾದ) ಸೇರಿಸಲಾಗಿದೆ. ಈ ರೀತಿ ಹಣವನ್ನು ದಾಟಲು ಇದುವರೆಗೂ ಸಾಧ್ಯವಾಗಿಲ್ಲ.

ಮೈಸೂರು ಸಂಸ್ಥಾನದ ಸಕ್ಕರೆ ಕಾರ್ಖಾನೆ

ಮಂಡ್ಯದಲ್ಲಿರುವ ಸಕ್ಕರೆ ಕಾರ್ಖಾನೆಯು ಕಾರ್ಯಕಲಾಪಗಳು ತೃಪ್ತಿಕರವಾಗಿ ನಡೆಯುತ್ತಿವೆ. ಕಂಪೆನಿಯ ಷೇರುಗಳ ಬೆಲೆ ಬಹಳ ಹೆಚ್ಚಾಗಿ ಏರಿದೆ. ಅನೇಕ ಕಡೆ ಕಾರ್ಖಾನೆಯ ಹೊಸ (೧೯೩೫-೩೬ ರಲ್ಲಿ) ಈ ಕಾರ್ಖಾನೆಯ ಕಾರ್ಯಕಲಾಪಗಳಿಂದ ಲಾಭವು ಬಂದಿದೆ. ಮುಂದಿನ ವರ್ಷಗಳಲ್ಲಿ ನೆಲಗಳಾಗಿ ಇನ್ನೂ ಹೆಚ್ಚಿನ ಲಾಭವು ಬರುವುದೆಂದು ನಿರೀಕ್ಷಿಸಲಾಗಿದೆ. ಅದರಿಂದ ಬರುವ ಲಾಭಕ್ಕೆ ಸರ್ಕಾರದವರು ತೆರಿಗೆ ಪ್ರತಿಫಲವು ಕಬ್ಬಿನ ಬೆಲೆಯು ದೊರೆಯುವ ರೈತರಿಗೆ ಸಹಾಯ ಮಾಡುತ್ತಿರುವ ಅಂಶವನ್ನೂ ಈ ಸಂಬಂಧದಲ್ಲಿ ನೆನಪಿಡಬೇಕಾಗಿದೆ. ಅಷ್ಟೇ ಅಲ್ಲದೆ ಈ ಕಾರ್ಖಾನೆಯು ಸಂಬಂಧದಲ್ಲಿ ಸರ್ಕಾರದವರಿಗೂ ಸಕ್ಕರೆ ಮೇಲಿನ ಸುಂಕದ (ಎಕ್ಸೈಜು ಡ್ಯೂಟಿ) ರೂಪದಲ್ಲಿ ಹುಟ್ಟುವಳಿಯು ಬರುತ್ತದೆ. ಈ ಬಾಬಿನಿಂದ ಸರ್ಕಾರಕ್ಕೆ ೧೯೩೫-೩೬ರಲ್ಲಿ ೫ ಲಕ್ಷ ರೂಪಾಯಿಗಳು ಬಂದಿವೆ. ಈ ವರ್ಷ (೧೯೩೬-೩೭ ರಲ್ಲಿ) ಅದು ೫ ಲಕ್ಷ ರೂಪಾಯಿ ವರೆಗೆ ಬರಬಹುದೆಂದು ನಿರೀಕ್ಷಿಸಲಾಗಿದೆ.

ಶ್ರೀ ಚಾಮರಾಜೇಂದ್ರ ಜಲಾಶಯ

ಸ್ವಲ್ಪವಾದ ಬಂಡವಾಳಕ್ಕೆ ತಕ್ಕಷ್ಟು ವರಮಾನವನ್ನು ತರುವ ಕಾರ್ಯಗಳಲ್ಲಿ ಮಾತ್ರ, ಶ್ರೀ ಚಾಮರಾಜೇಂದ್ರ ಜಲಾಶಯದ ನೀರು ಸರಬರಾಯಿ ಏರ್ಪಾಡು ಅನುಭವಗಳನ್ನು ಉಂಟುಮಾಡುತ್ತಾ ಬಂದಿದೆ. ಈ ಅಂಶವನ್ನು ನಾವು ಹಿಂದಿನ ವರ್ಷವೇ ಸೂಚಿಸಿದ್ದೇವೆ. ಆದಾಗ್ಯೂ ಈ ವಿಷಯದ ಪರಿಣಾಮವನ್ನು ಹೆಚ್ಚಿಸುವ ಪ್ರಯತ್ನಗಳೂ ನಡೆಯುತ್ತಿವೆ. ಬೆಂಗಳೂರಿನ ಮಿಲ್ಲು ಮುಂತಾದ ಭಾರಿ ಕಾರ್ಖಾನೆಗಳಿಗೆ ಹೆಚ್ಚಿನ ನೀರು ತರಿಸುವವರಿಗೆ ಭಾರಿ ಪ್ರಮಾಣದಲ್ಲಿ ನೀರನ್ನು ಕೊಡುವುದಕ್ಕಾಗಿ ಕ್ರಮ ಜರುಗಿಸುತ್ತಿದ್ದೇವೆ. ಮುಂದಿನ ವರ್ಷಗಳಲ್ಲಿ ಇದೇ ಬಗೆಯ ಇತರ ಏರ್ಪಾಡುಗಳೂ ನಡೆದಮೇಲೆ ಈ ಜಲಾಶಯದ ನೀರು ಸರಬರಾಯಿ ವ್ಯವಸ್ಥೆಯಿಂದ ಬಂಡವಾಳದ ಹಣಕ್ಕೆ ಕಾಲಕ್ರಮದಲ್ಲಿ ಇನ್ನೂ ಹೆಚ್ಚಿನ ಪ್ರತಿಫಲವು ಬರಬಹುದೆಂಬ ನಿರೀಕ್ಷೆಯಿದೆ.

ಗಂಧದ ಎಣ್ಣೆಯ ಕಾರ್ಖಾನೆ

ಗಂಧದ ಎಣ್ಣೆಯ ವ್ಯಾಪಾರವು ಹಿಂದಿನಂತೆಯೇ ಮುಗ್ಗಟ್ಟಿನ ಸ್ಥಿತಿಯಲ್ಲಿಯೇ ಇದ್ದಿತು. ಗಿರಾಕಿಯಾಗಲಿ ಧಾರಣೆಯಾಗಲಿ ಅಷ್ಟೇನೂ ಹೆಚ್ಚಾಗಲಿಲ್ಲ. ಸಂಸ್ಥಾನದ ಗಂಧದ ಮರದ ಚಕ್ಕೆಯಿಂದ ಕನೋಜಿನಲ್ಲಿ ಎಣ್ಣೆಯನ್ನು ತೆಗೆಯುವುದಕ್ಕಾಗಿ ಮಾಡಿದ್ದ ಏರ್ಪಾಡನ್ನು ಫೆಬ್ರವರಿ ೧ನೆಯ ತಾರೀಖಿನಿಂದ ರದ್ದಿಸಲಾಯಿತು. ಈಗ ಭರತಖಂಡದಲ್ಲಿ ಗಿರಾಕಿ ಇರುವ ಎಲ್ಲ ಪ್ರದೇಶಗಳಿಗೂ ನಮ್ಮ ಮೈಸೂರಿನಲ್ಲಿರುವ ಕಾರ್ಖಾನೆಯಿಂದಲೇ ಗಂಧದ ಎಣ್ಣೆಯು ಹೋಗುತ್ತಿದೆ.

ಸಾಬೂನಿನ ಕಾರ್ಖಾನೆ

ಸರ್ಕಾರದ ಸಾಬೂನು ಕಾರ್ಖಾನೆಯಲ್ಲಿ ತಯಾರಾಗುವ ಸಾಬೂನುಗಳ ಮತ್ತು ಇತರ ವಸ್ತುಗಳ ಪರಿಮಾಣವೂ ಸ್ವಲ್ಪ ಕೊಂಚಮಟ್ಟಿಗೆ ಹೆಚ್ಚಿದವು. ಈ ಕಾರ್ಖಾನೆಯವರು ಬಹು ಹೆಚ್ಚಿನ ಪೈಪೋಟಿಯನ್ನೆದುರಿಸಿ ಕೆಲಸ ನಡೆಯಿಸಬೇಕಾಗಿದೆ. ಆದಾಗ್ಯೂ ಅವರು ತಯಾರಿಸುವ ವಸ್ತುಗಳು ಎಂದಿನಂತೆಯೇ ಜನಾದರಣೆಗೆ ಪಾತ್ರವಾಗಿ ಮಾರಾಟವಾಗುತ್ತಿವೆ. ಅವರ ಇತರ ವಸ್ತುಗಳ ಬೆಲೆಯನ್ನು ತಗ್ಗಿಸಿದ ಕಾರಣ ಆ ಪೈಪೋಟಿಗನುಸಾರವಾಗಿ ಈ ಕಾರ್ಖಾನೆಯವರೂ ತಮ್ಮ ಸರಕುಗಳ ಬೆಲೆಗಳನ್ನು ತಗ್ಗಿಸಬೇಕಾಯಿತು. ಆದಕಾರಣ ಸರಕುಗಳ ಮಾರಾಟವು ಹೆಚ್ಚಿದರೂ ಹಿಂದಿನಂತೆ ಲಾಭವು ಬರದೆ ನಷ್ಟವು ಮಾತ್ರ ೮೦,೦೦೦ ರೂಪಾಯಿಗಳಿಗೆ ಇಳಿಯಿತು.

ರೇಷ್ಮೆ ಕೈಗಾರಿಕೆ

ಕಳೆದ ಕೆಲವು ತಿಂಗಳುಗಳ ಅವಧಿಯಲ್ಲಿ ರೇಷ್ಮೆಯ ವ್ಯಾಪಾರದ ಸ್ಥಿತಿಯಲ್ಲಿ ಉತ್ತಮ ಬದಲಾವಣೆಗಳು ಕಾಣಬಂದಿವೆ. ಆದಾಗ್ಯೂ ರೇಷ್ಮೆ ಕೈಗಾರಿಕೆಯು ೧೯೩೬ರಲ್ಲಿ ಸರ್ಕಾರದವರು ಅನೇಕ ಪ್ರಶಂಸಾರ್ಹ ಆತಂಕಗಳಿದ್ದರೂ ಇದರ ಕಾಪು ಬೆಳೆಸುವ ವ್ಯಾಪಾರವನ್ನು ಮತ್ತು ರೋಗರಹಿತವಾದ (ರೇಷ್ಮೆ ಹುಳುಗಳ) ಮೊಟ್ಟೆಗಳ ಸರಬರಾಯಿ ಇವನ್ನು ಹೆಚ್ಚಾಗಿ ಏರ್ಪಡಿಸುವುದಕ್ಕೆ ತಕ್ಕ ಏರ್ಪಾಡುಗಳು ನಡೆಯುತ್ತಿವೆ. ಈ ಭಾಗವನ್ನು ಸಕ್ರಿಯವಾಗಿ ಪ್ರಯತ್ನಗಳು ನಡೆಯುತ್ತಿವೆ. ಹೀಗೆ ಹೆಚ್ಚಿನ ಸಹಾಯವನ್ನು ಮಾಡಿದರೂ ಜಪಾನಿನಿಂದ ಬರುವ ರೇಷ್ಮೆಯ ಪೈಪೋಟಿಯನ್ನು ಎದುರಿಸಲಾಯಿತು. ಮುಂದಿನ ವರ್ಷದಲ್ಲಿ ಸರ್ಕಾರದ ಪ್ರೋತ್ಸಾಹವನ್ನು ಸರ್ಕಾರದಿಂದ ಸಹಾಯ ಪ್ರಸ್ತುತ ಬೆಲೆಯನ್ನು ಕೊಡುವುದಕ್ಕಿಂತ ಹೆಚ್ಚಾಗಿ ವಿಸ್ತರಿಸುವುದಕ್ಕಾಗಿ ಹಣವನ್ನು ಒದಗಿಸಲಾಗಿದೆ.

ರೇಷ್ಮೆಗೂಡುಗಳಿಂದ ನೂಲನ್ನು ತೆಗೆಯುವ ಕೆಲಸವು ಜೊತೆಗೆ ಒಂದೆ ಸಿದ್ಧವಾಗಿ ಗಿರಾಕಿಯು ದೊರೆತು, ರೇಷ್ಮೆ ಗೂಡುಗಳನ್ನು ಬೆಳೆಸುವವರಿಗೆ ಅವರ ಮಾರಾಟದಿಂದಲೂ ಹಣವು ಬರುತ್ತಿದೆ. ಆದರೆ, ಹಿಂದಿನ ವರ್ಷಗಳಲ್ಲಿ ಇದ್ದ ಧಾರಣೆಯು ಒಂದೇ ಸಮನಾಗಿ ಇರಲಿಲ್ಲವಾದ್ದರಿಂದ, ಈಗ ಗಿರಾಕಿಯೇ ಇಲ್ಲದ ಸ್ಥಿತಿಯೊದಗಿದೆ. ರೇಷ್ಮೆ ಕೈಗಾರಿಕೆಯನ್ನು ನಡೆಯಿಸುತ್ತಿರುವವರಿಗೆ ಇದರಿಂದ ಉಂಟಾಗಿರುವ ಕಷ್ಟವನ್ನು ತಪ್ಪಿಸುವುದಕ್ಕಾಗಿ ಜಪಾನಿನಂತೆ ನೂಲು ತೆಗೆಯುವ "ಫಿಲೇಚರ್ ಸ್ಟೀಮ್" ಕಾರ್ಖಾನೆಯೊಂದನ್ನು ಸ್ಥಾಪಿಸುವ ತಯಾರಿಕ್ರಮವನ್ನು ಸರ್ಕಾರದವರು ಮಂಜೂರುಮಾಡಿದ್ದಾರೆ. ಆ ಕಾರ್ಖಾನೆಯಲ್ಲಿ ಮೂರು ಸಾವಿರ ಕಾಲುಕೆಜಿಗಳಷ್ಟು ಯಂತ್ರಗಳಲ್ಲಿ ಕೆಲಸವಾಗಿ ಜಪಾನಿನ ನೂಲನ್ನು ಎದುರಿಸುವ ವ್ಯವಸ್ಥೆಯನ್ನು ಹಿಡಬೇಕೆಂಬ ಉದ್ದೇಶದಿಂದ ಸರ್ಕಾರದಿಂದ ಈ ಕಾರ್ಖಾನೆಯಲ್ಲಿ ಸುಮಾರು 80,000 ರೂಪಾಯಿ ಹೆಚ್ಚಿನ ಹಣ ತಯಾರಾಗುತ್ತದೆ. ಮೊದಲನೇದರಿಂದ ಒಳ್ಳೆ ರೇಷ್ಮೆ ಬೆಳೆಗೆ ಪ್ರಯೋಜನವು ದೊರಕುವುದು. ಅದಕ್ಕೆ ಬೇಕಾದ ಸರಂಜಾಮಿನ ಏರ್ಪಾಡು ಆಸ್ಪದದಿಂದ ಈ ಕಾರ್ಖಾನೆಯ ಕೆಲಸಗಳು ಆರಂಭವಾದ ಕೂಡಲೆ ನಡೆಯುವುದು. ಹಾಗೆಯೇ ಅನುಕೂಲವಾಗಿ ಇದ್ದರೆ ಜಾಯಿಂಟ್ ಸ್ಟಾಕ್ ಕಂಪೆನಿಯ ರೀತಿಯಲ್ಲಿ ಈ ಕಾರ್ಖಾನೆಯನ್ನು ನಡೆಯಿಸುವ ಸಂಬಂಧವಾದ ಪ್ರಕಟವಾದ ಬಂಡವಾಳವು ದೊರೆತಿಲ್ಲವೂ ಸಾಧ್ಯವಾದಷ್ಟು ಬೇಗ ಬಂದರೆ ಕೆಲಸ ಪ್ರಾರಂಭವಾಗಬೇಕೆಂದು ನಾವು ಆಶಿಸುತ್ತೇವೆ.

ರೇಷ್ಮೆಯ ನೇಯ್ಗೆಯ ಕಾರ್ಖಾನೆಯ ಸ್ಥಿತಿಯು ತೃಪ್ತಿಕರವಾಗಿಯೇ ಇದ್ದಿತು. ಆದಾಗ್ಯೂ ಪೈಪೋಟಿಯ ಮೂಲಕ ಬೆಲೆಗಳನ್ನು ತಗ್ಗಿಸಿ ಸರಕುಗಳನ್ನು ಮಾರಾಟಮಾಡಬೇಕಾಯಿತು. ಅಲ್ಲದೆ ಬಟ್ಟೆಗಳಿಗೆ ಬೇಕಾದ ಹೊಸ ಹೊಸ ನಮೂನೆಗಳನ್ನು ಕಂಡುಹಿಡಿದು ಹೊಸ ಹೊಸ "ಡಿಸೈನ್" ಪಟ್ಟೆಗಳು, ಜರತಾರಿಯಂತಹ ಸೀರೆಗಳು ಮುಂತಾದ ಸರಕುಗಳನ್ನು ನೇಯ್ದು ಎದುರಿಸಲು ಸಿದ್ಧತೆಯನ್ನು ಪ್ರಯತ್ನಮಾಡಬೇಕಾಯಿತು.

ವಿದ್ಯುಚ್ಛಕ್ತಿ ಇಲಾಖೆ

ವಿದ್ಯುಚ್ಛಕ್ತಿಯ ಯಂತ್ರಗಳು, ಬಲ್ಬುಗಳು ಮುಂತಾದವುಗಳ ಜೋಡಣೆಯಲ್ಲಿ ಅವರ ಕೆಲಸದ ಉತ್ತಮ ಸಾಮಾನುಗಳನ್ನು ಮತ್ತು ಈ ಸಂಬಂಧದ ಇತರ ವಸ್ತುಗಳನ್ನು ತಯಾರಿಸುವ ಕೆಲಸವು ಈಗ್ಗೆ ಎರಡು ವರ್ಷಗಳಿಂದಲೂ ಪರೀಕ್ಷಾರ್ಥವಾಗಿ ನಡೆಯುತ್ತಿದ್ದಿತು. ಇದಕ್ಕಾಗಿ ಒಂದು ಹೊಸ ಕಾರ್ಖಾನೆಯನ್ನೇ ಸ್ಥಾಪಿಸಿ ಸಿಬ್ಬಂದಿಯನ್ನು ಭರ್ತಿ ಮಾಡಿಸುವ ಕೆಲಸವು ನಡೆಯುತ್ತಿದೆ. ಹೊಸ ಕಟ್ಟಡದಲ್ಲಿ ಕೆಲಸ ನಡೆಸುವುದಕ್ಕಾಗಿ ಸರ್ಕಾರದವರು ಈಚೆಗೆ ೩೦,೦೦೦ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಬೆಂಗಳೂರಿನಲ್ಲಿ ಎಲೆಕ್ಟ್ರಿಕ್ ಆಕ್ಸೆಸರೀಸ್ ಎಂಬ ಯಂತ್ರಸಾಧನಗಳನ್ನು ತಯಾರು ಮಾಡುತ್ತಿದ್ದ ಒಂದು ಫರ್ಮಿನವರಿಗೂ ನಮ್ಮ ಅವರ ಕೆಲಸಕ್ಕಾಗಿ ಅವಶ್ಯವಾದ ಒಂದು ಭಾಗದಲ್ಲಿ ಸಾಕಷ್ಟುಗಳನ್ನು ಕಲ್ಪಿಸಿಕೊಟ್ಟಿದ್ದೇವೆ. ಅವರು ತಮ್ಮ ಫರ್ಮನ್ನು ಪುನರ್ವ್ಯವಸ್ಥೆಗೊಳಿಸಿ ಒಂದು ಜಾಯಿಂಟ್ ಸ್ಟಾಕ್ ಕಂಪೆನಿಯನ್ನು ಏರ್ಪಡಿಸಿಕೊಂಡು ಕೆಲಸ ನಡೆಯಿಸುತ್ತಿದ್ದಾರೆ.

ಸಿಮೆಂಟಿನ ತಯಾರಿ

ನಾವು ಪ್ರಾರಂಭಿಸಿದ ಸಿಮೆಂಟಿನ ಕುತೂಹಲದ ಮುಖ್ಯವಾದ ಉತ್ಪನ್ನವು ಸಿಮೆಂಟನ್ನು ತಯಾರಿಸುವ ಕೆಲಸ. ಈ ಉತ್ಪನ್ನದ ವಿಷಯವು ಈಗ್ಗೆ ಕೆಲವು ವರ್ಷಗಳಿಂದಲೂ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಕೈಗಾರಿಕೆಗಳ ಮತ್ತು ವಾಣಿಜ್ಯದ ಬೋರ್ಡಿನವರೂ ಸಹ ಈಚೆಗೆ ಇದರ ವಿಷಯವನ್ನು ಕುರಿತು ಪರ್ಯಾಲೋಚಿಸಿ, ದಿನಕ್ಕೆ 60 ಟನ್ನುಗಳ ತೂಕ ಹಸನಾದ ಪೋರ್ಟ್ಲೆಂಡ್ ಸಿಮೆಂಟನ್ನು ತಯಾರುಮಾಡುವ ಯಂತ್ರಗಳನ್ನು

[6ನೇ ಪುಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ.

೧೯೩೭ ನೇ ಜೂನ್ ತಾ॥ ೧ ನೇ ಸೋಮವಾರ

ಸೂತಕ ವಿಚಾರ.

ಯಾಗಕರ್ಮವು ಯಾಗಕರ್ತೃವಿನ ಸಜೀವಶಕ್ತಿಗಳ ಆತ್ಮನಲ್ಲಿ ಒಂದು ಸಂಸ್ಕಾರವನ್ನು ಹುಟ್ಟಿಸಿ ತಾನು ನಾಶವಾಗುವಂತೆ ದೀಕ್ಷಾಕರ್ಮವು ದೀಕ್ಷಿತನ ಲಿಂಗದಲ್ಲಿ ಒಂದು ಸಂಸ್ಕಾರವನ್ನು ಹುಟ್ಟಿಸಿ ತಾನು ನಾಶವಾದರೂ ಆ ದೀಕ್ಷಾಕರ್ಮಜನ್ಯವಾದ ಸಂಸ್ಕಾರವು ಯಾವ ಸೂತಕಗಳಿಂದಾಗಲೀ ನಾಶವಾಗುವುದಿಲ್ಲ. ಯಾಗಜನ್ಯ ಸಂಸ್ಕಾರವು ಆತ್ಮನ ದೇಹವಿರುವವರೆಗೂ ಸ್ಥಿರವಾಗಿರುವಂತೆ, ಯಾವಜ್ಜೀವ ಪರ್ಯಂತವಾದ ಶಿವಲಿಂಗಪೂಜನ ಕಾಲಕ್ಕೂ ಅದು ಸ್ಥಿರವಾಗಿರುವುದರಿಂದ ಲಿಂಗಧಾರಿಯಾದವನು ಸರ್ವದಾ ಪವಿತ್ರನಾಗಿರುವನು. ಈ ಸಂಸ್ಕಾರವು ಎಂದೂ ನಷ್ಟವಾಗಲಾರದು. ಈ ವಿಷಯದಲ್ಲಿ ಅನೇಕ ಆಗಮಗಳ ಪ್ರಮಾಣಗಳನ್ನು ನಾವು ಹಿಂದೆ ತೋರಿಸಿದ್ದೇವೆ. ಇದರ ಮೇಲೂ ಒಂದು ಶಂಕೆ. ಪ್ರಮಾಣಗಳಿಂದ ಜನನ ಮರಣಾದಿ ಸೂತಕಗಳಾಗಿರುವ ಕಾಲದಲ್ಲಿ ಸೂತಕಸಂಬಂಧದಿಂದ ಶರೀರವು ಅಪವಿತ್ರ, ಆಗುವುದು. ಅಪವಿತ್ರವಾದ ಶರೀರಸಂಬಂಧದಿಂದ ಆ ಶರೀರದಲ್ಲಿ ಧರಿಸಲ್ಪಟ್ಟಿರುವ ಶಿವಲಿಂಗವು ಸಹ ಅಪವಿತ್ರವೇಕೆ ಆಗುವುದಿಲ್ಲ? ಅಂದರೆ ಸಹಜ ಸ್ವಭಾವದಿಂದ ಶಿವಲಿಂಗದಲ್ಲಿ ನೆಲೆಗೊಂಡಿರುವ ಸಂಸ್ಕಾರವು ನಾಶವಾಗದೆ ಹೋದರೂ ಶಿವಲಿಂಗವು ಅಪವಿತ್ರವಾಗುವುದರಿಂದ ಶಿವಲಿಂಗವು ಅಪವಿತ್ರವಾಗುವುದೇ ಇಲ್ಲವೆಂದು ಹೇಳುವುದು ಸರಿಯಲ್ಲ. ಆ ಶಿವಲಿಂಗದಲ್ಲಿರುವ ಸಂಸ್ಕಾರವು ನಾಶವಾಗಬೇಕಾಗುವುದು. ಸೂತಕ ಜನ್ಯವಾದ ಅಪವಿತ್ರತೆಯು ವೈದ್ಯದಲ್ಲಿ ಯಾವ ವಿಧವಾದ ಅಪವಿತ್ರತೆಯು ಇಲ್ಲ. ವಸ್ತು ತಾನು ಶುಭವನ್ನು ಕೊಡುವವರಿಗೆ ನಷ್ಟವಾಗದೆ ದೇಹವಿರುವವರೆಗೂ ಆಚರಣೆ ಸ್ಥಿರವಾಗಿ ನಿಂತಿರುವುದು. ಯಜ್ಞಪ್ರಸಂಗದಲ್ಲೂ ಒಪ್ಪಿರುತ್ತಾರೆ. ಇದರ ಮೇಲೆ ಅದೃಷ್ಟವಾದದಿಂದ ಸಂಸ್ಕಾರವು ನಾಶವಾಗಲೇಬೇಕೆಂದರೆ ಯಜ್ಞಕರ್ತನ ಪತ್ನಿ, ಆತನ ಪಶು ಪುತ್ರರು ಮುಂತಾದ ಸಂಬಂಧಿಗಳ ಮರಣದಿಂದ ಯಾಗಜನ್ಯವಾದ ಸಂಸ್ಕಾರವು ಅಶೌಚದೋಷದಿಂದ ನಾಶವನ್ನು ಹೊಂದಬೇಕಾಗುವುದು. ಬಹು ದ್ರವ್ಯವ್ಯಯದಿಂದ ಬಹು ಆಯಾಸದಿಂದ ಯಾಗವನ್ನು ಮಾಡಿ ಅದರಿಂದ ಸ್ವರ್ಗಾದಿಫಲಸಾಧಕವಾದ ಒಂದು ಸಂಸ್ಕಾರವನ್ನು ಪಡೆದಿದ್ದರೂ ಈ ಬೌತಿಕಶರೀರವನ್ನು ತ್ಯಜಿಸಿದ ಮೇಲೆ ಸಂಭವಿಸಬೇಕಾದ ಅಂಥ ಸ್ವರ್ಗಾದಿಸಿದ್ಧಿರೂಪ ಫಲವನ್ನು ಕೊಡುವುದಕ್ಕೆ ಸಿದ್ಧವಾಗಿರುವ ಯಾಗಜನ್ಯ ಸಂಸ್ಕಾರವೇ ನಷ್ಟವಾಗಿ ಹೋದಮೇಲೆ ಯಾಗಕರ್ಮವೇ ನಿಷ್ಫಲವಾಯಿತು. ಸ್ವರ್ಗಾದಿಫಲವನ್ನು ಕುರಿತು ಯಾಗಜನ್ಯಸಂಸ್ಕಾರವೇ ನ ಕಾರಣವಷ್ಟೆ! ಇಂಥ ಸಾಕ್ಷಾತ್ಕಾರಣವಾದ ಸಂಸ್ಕಾರವೇ ನಾಶವಾದಮೇಲೆ ಕಾರ್ಯೋತ್ಪತ್ತಿಯಾಗುವುದೆಂತು? ಇದರಂತೆ ಒಬ್ಬನು ಅಶ್ವಮೇಧಯಾಗವನ್ನು ಮಾಡಿ ಗಂಗಾಸ್ನಾನವನ್ನು ಮಾಡುತ್ತಾನೆ. ಮತ್ತೊಬ್ಬನು ತೀರ್ಥಯಾತ್ರೆಗಳನ್ನು ಮಾಡುತ್ತಾನೆ. ಇನ್ನೊಬ್ಬನು ವಿಶೇಷ ಅನ್ನಶಾಂತಿಯನ್ನು ಮಾಡುತ್ತಾನೆ. ಮಗದೊಬ್ಬನು ದೇವಾಲಯಗಳನ್ನು ಕಟ್ಟಿಸುತ್ತಾನೆ. ವಾಪೀಕೂಪತಟಾಕಗಳನ್ನು ಮಾಡಿಸುತ್ತಾನೆ. ಇಂಥ ಪುಣ್ಯಕರ್ಮಗಳಿಂದ ಆಯಾಯ ಕರ್ಮಾನುಕೂಲವಾದ ಸಂಸ್ಕಾರಗಳು ಉತ್ಪನ್ನವಾಗುವವು. ಪುಣ್ಯಕರ್ಮಗಳನ್ನು ಮಾಡಿದಮೇಲೆ ಮಧ್ಯಕಾಲದಲ್ಲಿ ಅನೇಕವಿಧಗಳಾದ ಸೂತಕಗಳು ಒದಗದೆ ಇರುವುದಿಲ್ಲ. ಇಂಥ ಸೂತಕಗಳ ಸ್ಪರ್ಶದಿಂದ ಪುಣ್ಯಕರ್ಮಜನ್ಯವಾದ ಆ ಸಂಸ್ಕಾರಗಳೆಲ್ಲಾ ನಾಶಹೊಂದುವುದಾದರೆ ಆ ಕರ್ಮಗಳೆಲ್ಲಾ ಫಲವೇ ಇಲ್ಲದಂತಾಗುವುದಲ್ಲದೆ "ಸ್ವರ್ಗಕಾಮೋಯಜೇತ" ಇತ್ಯಾದಿ ಕರ್ಮಫಲಬೋಧಕಗಳಾದ ವೇದಾಗಮಪುರಾಣಾದಿಸಕಲಶಾಸ್ತ್ರಗಳೂ ಸಹ ವ್ಯರ್ಥವಾಗಿ,

> ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂಕುತಃ ।
> ತಸ್ಮಾತ್ಸರ್ವಪ್ರಯತ್ನೇನ ಚ ಋಣಂ ಕೃತ್ವಾ ಘೃತಂ ಪಿಬೇತ್

ಇತ್ಯಾದಿ ಪ್ರಮಾಣಾನುಸಾರವಾಗಿ ನಾಸ್ತಿಕಮತ ಪ್ರವೇಶವಾಗುವ ಸಂಭವವುಂಟಾಗುತ್ತದೆ. ಅದ್ದರಿಂದ

> ಶೈವಾ ಲಿಂಗಾರ್ಚನಾ ಯಸ್ಯ ಯಸ್ಯ ಚಾಪಿ ವಿಸ್ತಃ ।
> ನಾಸಕ್ತಸ್ಯ ಯತೀನಾಂ ಚ ಶರೀರೇ ನಾಸ್ತಿ ಸೂತಕಂ

ಯಾವನು ಶಿವಲಿಂಗಾರ್ಚನೆಯಲ್ಲಿ ಆಸಕ್ತನಾಗಿರುವನೋ, ಯಾವನು ಯಾಗವನ್ನು ಮಾಡುವುದರಲ್ಲಿ ಆಸಕ್ತನಾಗಿರುವನೋ, ಯಾರು ವಾನಪ್ರಸ್ಥ ಯತ್ಯಾಶ್ರಮಗಳನ್ನು ಹೊಂದಿರುತ್ತಾರೆಯೋ, ಅವರ ಶರೀರದಲ್ಲಿ ಸೂತಕ ದೋಷಗಳಿರುವುದಿಲ್ಲ ಎಂದು ಪರಾಶರಸ್ಮೃತಿಯು ಸ್ಪಷ್ಟವಾಗಿ ಹೇಳುವುದರಿಂದ ಯಜ್ಞಕರ್ತನ ಶರೀರದಲ್ಲಿ ಉದಯಿಸಿದ ಅಪೂರ್ವರೂಪಸಂಸ್ಕಾರವು ಸೂತಕದೂಷಿತವಾಗಿ ನಾಶವಾಗದಿರುವಂತೆ ಲಿಂಗಾಂಗಿಯ ಶರೀರವನ್ನು ಸೂತಕದೋಷಗಳಿಲ್ಲದಿರುವುದರಿಂದ, ಅಂದರೆ ದೀಕ್ಷಿತವಾದ ಶರೀರದಲ್ಲಿ ಧರಿಸಲ್ಪಟ್ಟಿರುವ ಶಿವಲಿಂಗದಲ್ಲಿರುವ ಸಂಸ್ಕಾರವು ಸಹ ನಾಶವಾಗದೆ ಸ್ಥಿರವಾಗಿರುವುದರಿಂದ, ಆಲೋಚಿಸುವ ಸಂಸ್ಕಾರವನ್ನು ನಾಶಗೊಳಿಸಲಾರದು. ಸಂಸ್ಕಾರವು ನಷ್ಟವಾಗದ ಶಿವಲಿಂಗವು ಎಂದೂ ಅಪವಿತ್ರವಾಗಲಾರದು. ದೇಹದಲ್ಲಿ ಧರಿಸಲ್ಪಟ್ಟಿರುವ ಇಷ್ಟಲಿಂಗವು ಅಶುಚಿ ಶರೀರಸಂಬಂಧದಿಂದ ತಾನು ಅಶುಚಿಯಾಗಲಾರದೆಂಬ ಹೇಳಿದ ನಿಯಮವನ್ನು ಪಾಷಾಣಮಯವಾಗಿ ಪ್ರತಿಷ್ಠಿತವಾದ ಸ್ಥಾವರಲಿಂಗಕ್ಕೂ ಅನ್ವಯಿಸಬಹುದಾದ್ದರಿಂದ ಸೂತಕಾದಿ ದೋಷಗಳುಳ್ಳ ಪುರುಷನ ಸ್ಪರ್ಶದಿಂದ ಭೂಮಿಯಲ್ಲಿ ಸ್ಥಾಪಿಸಿ ತವಾದ ಶಿವಲಿಂಗದಲ್ಲಿ ಪ್ರತಿಷ್ಠಾಕಾಲಗಳಲ್ಲಿ ಆಚಾರ್ಯನಿಂದ ಮಾಡಲ್ಪಟ್ಟಿರುವ ಸಂಸ್ಕಾರವು ಸಹ ನಾಶವಾಗದೆ ಸ್ಥಿರವಾಗಿರಬೇಕಲ್ಲವೆ? ಅದು ಏಕೆ ಸಂಪ್ರೋಕ್ಷಣಾದಿಗಳಿಗೆ ಅರ್ಹವಾಗುವುದು? ಎಂಬುದರಿಂದ ಸಂದೇಹವನ್ನು ಪರಿಹರಿಸಿಕೊಳ್ಳಬೇಕಾಗಿದೆ. ಅದು ದೇಹದಲ್ಲಿ ಧರಿಸಲ್ಪಟ್ಟ ಲಿಂಗಕ್ಕೂ ಭೂಮಿಯಲ್ಲಿ ಸ್ಥಾಪಿಸಿ ತವಾದ ಲಿಂಗಕ್ಕೂ ಅಂತರ ತಪ್ಪದುಂಟು. ದೇಹದಲ್ಲಿ ಧರಿಸಲ್ಪಟ್ಟ ಲಿಂಗವು ಇಷ್ಟಲಿಂಗವೆಂಬ ಹೆಸರನ್ನು ಪಡೆದಿದೆ. ಭೂಮಿಯಲ್ಲಿ ಪ್ರತಿಷ್ಠಿತವಾದ ಲಿಂಗವು ಸ್ಥಾವರಲಿಂಗವೆಂಬ ಹೆಸರನ್ನು ಪಡೆದಿದೆ. ಮತ್ತು ಈ ಸ್ಥಾವರಲಿಂಗವನ್ನು ಪ್ರತಿದಿನವೂ ಒಬ್ಬನೇ ಪೂಜಿಸಬೇಕೆಂಬ ನಿಯಮವೇನೂ ಇಲ್ಲ. ಒಬ್ಬನು ಸೂತಕದೋಷದಿಂದ ಅಶುಚಿಯಾದಾಗ ಶುಚಿಯಾದ ಮತ್ತೊಬ್ಬನು ಪೂಜಿಸಿ ಲಿಂಗಪೂಜಾ ಕಾರ್ಯವನ್ನು ನಿರ್ವಹಿಸಬಹುದು. ವಿಕಲ್ಪವಿರುತ್ತದೆ. ಇಷ್ಟಲಿಂಗವಾದರೋ ಆ ನಿಯಮವನ್ನು ಅನುಸರಿಸುವುದಿಲ್ಲ. ಯಾವ ಲಿಂಗವನ್ನು ಯಾವನು ದೀಕ್ಷಾಕಾಲದಲ್ಲಿ ಯಾವಜ್ಜೀವವೂ ಬಿಡದೆ ಪೂಜಿಸವೆನೆಂದು ಪ್ರತಿಜ್ಞೆ ಮಾಡಿ ಧರಿಸಿರುತ್ತಾನೆಯೋ ಅವನೇ ಆ ಲಿಂಗವನ್ನು ಪೂಜಿಸುತ್ತ ಧ್ಯಾನಿಸುತ್ತಲಿರಬೇಕೆಂದು ವೀರಶೈವ ಸಿದ್ಧಾಂತವು ಬೋಧಿಸುವುದರಿಂದ ಒಬ್ಬ ಪುರುಷನೇ ತನ್ನ ಜೀವವಿರುವವರೆಗೂ ಅಂಗದಿಂದ ಲಿಂಗವನ್ನು ಅಗಲಿರದೆ,

> ಧಾರೀ ಸದಾ ಮುದ್ರಾ ನಿಜಲಿಂಗ ಮಹೇಶ್ವರಃ
> ಲಿಂಗಂ ಸ್ವಾಂಗದಪುಷ್ಪಾಪ್ಯ ಕರಸಿಂಹಾಸನಾ

ಎಂಬ ಶಿವಾಗಮೋಕ್ತಿಯನ್ನನುಸರಿಸಿ ಯಾವಾಗಲೂ ಆ ಲಿಂಗವನ್ನು ಪೂಜಿಸುತ್ತಿರಬೇಕಾಗಿರುವುದರಿಂದ ಲಿಂಗಪೂಜೆಯು ಇವನಿಗೆ ಯಾವಜ್ಜೀವ ಕರ್ತವ್ಯವಾದ ಕಾರ್ಯವಾದ್ದರಿಂದ ಅಶುಚಿಕಾಲಗಳಲ್ಲಿಯೂ ಆ ಪ್ರಾಣಲಿಂಗವನ್ನು ಅಂಗದಲ್ಲಿ ಧರಿಸಿರುವುದರಿಂದಲೇ ಆಗಲಿ ಪೂಜಿಸುವುದರಿಂದಲೇ ಆಗಲಿ ಯಾವಜ್ಜೀವ ಸ್ಥಿರವಾಗಿ ಲಿಂಗದಲ್ಲಿ ನೆಲೆಗೊಳಿಸಿರುವ ಸಂಸ್ಕಾರವು ಎಂದೂ ನಾಶವಾಗಲಾರದೆಂದು ವೀರಶೈವಸಿದ್ಧಾಂತವು ಸ್ಪಷ್ಟಪಡಿಸಿರುವುದರಿಂದ ಇಷ್ಟಲಿಂಗದಂತೆ ಸ್ಥಾವರಲಿಂಗದಲ್ಲಿ ಆಚಾರ್ಯಾಕೃತ ಸಂಸ್ಕಾರವು ಸ್ಥಾಯಿಯಾಗದುದಲ್ಲದೆ ದೀಕ್ಷಾಕಾಲದಲ್ಲಿ ಆಚಾರ್ಯಾಕೃತ ಸಂಸ್ಕಾರವು ಇಷ್ಟಲಿಂಗದಲ್ಲಿ ಸ್ಥಾಯಿಯಾಗಿರುವುದರಿಂದ ಅಶೌಚಯುಕ್ತದೇಹಸಂಬಂಧದಿಂದ ಅದು ಎಂದೂ ನಾಶವಾಗಲಾರದು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಲಾಲ್‌ಬಾಗ್ ಬಳಿ ಕಟ್ಟುತ್ತಿರುವ ಪಾರ್ಲಿಮೆಂಟು ಭವನದ ಕೆಲಸವು ಮುಗಿಯುತ್ತ ಬಂದಿರುವುದರಿಂದ, ಈ ತಿಂಗಳು ಕೊನೆಯಲ್ಲಿ ಇದರ ಪ್ರವೇಶೋತ್ಸವವು ನಮ್ಮ ಶ್ರೀಮನ್ಮಹಾರಾಜರವರಿಂದ ನಡೆಯಿಸಲ್ಪಡುವುದೆಂದು ತಿಳಿದುಬರುತ್ತದೆ.

ಕಳೆದ ತಿಂಗಳು ರಾಜಾಧಿತಿಗಳಾಗಿ ಬೆಂಗಳೂರಿಗೆ ದಯಮಾಡಿಸಿದ್ದ ಹೈದರಾಬಾದಿನ ಮುಖ್ಯ ಮಂತ್ರಿಗಳಾದ ರಾಜಾ ಸರ್ ಕಿಶನ್‌ಪ್ರಸಾದ್ ಜಂಗ್ ಬಹದ್ದೂರ್‌ರವರು ಈ ತಿಂಗಳು 3 ನೆಯ ತಾರೀಖಿನ ದಿವಸ ರಾತ್ರಿ ಪರಿವಾರ ಸಮೇತ ಹೈದರಾಬಾದಿಗೆ ಪ್ರಯಾಣಮಾಡಿದರು.

ಈಗ್ಗೆ ಒಂದು ವರ್ಷದಿಂದ ರಾಜಧಾನಿಯಲ್ಲಿದ್ದು ಅನೇಕ ಚಲನಚಿತ್ರಗಳನ್ನು ತೆಗೆದುಕೊಂಡ ಲಂಡನ್ ಸಿಲ್ವ ಪ್ರೊಡಕ್ಷನ್ ಕಂಪೆನಿಯವರು ಈ ತಿಂಗಳು ೯ ನೆಯ ತಾರೀಖಿನ ದಿವಸ ಯೂರೋಪಿಗೆ ಪ್ರಯಾಣ ಮಾಡಿದರು. ಇವರ ಚಿತ್ರದಲ್ಲಿ 'ಎಲಿಫೆಂಟ್ ಬಾಯ್' ಎಂಬ ಮುಖ್ಯಪಾತ್ರವನ್ನು ವಹಿಸಿದ್ದ ಸಾಬು, ಆತನ ಅಣ್ಣ ಮತ್ತು ಈತನ ಗುರು ಇವರನ್ನು ಮತ್ತು ಮೈಸೂರು ಸರ್ಕಾರದವರು ಒದಗಿಸಿಕೊಟ್ಟಿದ್ದ 'ಐರಾವತ'ವೆಂಬ ಆನೆಯನ್ನೂ ಸಂಗಡ ಕರೆದುಕೊಂಡು ಹೋಗಿದ್ದಾರೆ.

ರಾಜರ ನಿಯಲ್ಲಿ ಸರ್ದಾರ್ ಎಂ. ಗೋಪಾಲರಾಜೇಅರಸಿನವರು ತಮ್ಮ ಪುತ್ರಿ ಚಿ॥ ಸೌ॥ ನಿರ್ಮಲಮ್ಮಣ್ಣಿಯವರನ್ನು ಮ॥ ರಾ॥ ತುರುವೇಕೆರೆ ಬಸವರಾಜ ಅರಸರವರ ಕುಮಾರ ಚಿ॥ ಸ॥ ಜಯಚಾಮರಾಜ ಅರಸರವರಿಗೆ ಕೊಟ್ಟು ಕಳೆದ 19ನೇ ಶುಕ್ರವಾರ ಮ॥ ರಾ॥ ಗೋಪಾಲರಾಜ ಅರಸಿನವರ ಅರಮನೆಯಲ್ಲಿ ಅತಿ ವೈಭವದಿಂದ ವಿವಾಹವನ್ನು ನೆರವೇರಿಸಿದರು. ವಧೂವರನ್ನು ಅರಮನೆಯ ಮುಖ್ಯಾದಿಗಳೊಡನೆ ಆನೆಯಮೇಲೆ ಅಂಬಾರಿಯಲ್ಲಿ ಕುಳ್ಳಿರಿಸಿ ಬಹು ಬಂದವರೊಡನೆ ಮೆರವಣಿಗೆಯು ಸೌಖ್ಯಸಂಪನ್ನವಾಗಿ ನಡೆಯಿತು.

ಹೊರಗಡೆಯವರಿಂದ ಮೈಸೂರಿಗೆ ಬಂದು ಸ್ವಲ್ಪಕಾಲ ಇದ್ದು ಹೊರಟುಹೋಗುವ ಮೋಟಾರುಗಳ ಮಾಲೀಕರು ತಮ್ಮ ಗಾಡಿಗಳಿಗೆ ೩ ತಿಂಗಳ ತೆರಿಗೆಯನ್ನು ಮುಂಗಡವಾಗಿ ಕೊಡಬೇಕೆಂದೂ ಅವರು 1 ತಿಂಗಳೊಳಗಾಗಿ ಹೊರಟುಹೋಗುವುದಾದರೆ ವಸೂಲಾಗಿರುವ ತೆರಿಗೆಯಲ್ಲಿ ಅರ್ಧವನ್ನು ಹಿಂತಿರುಗಿಕೊಡಬೇಕೆಂದೂ ಇದ್ದ ಕಾನೂನು ಈಗ ತಿದ್ದುಪಡಿ ಮಾಡಲ್ಪಟ್ಟಿದೆ. ಇದಕ್ಕೆ ಪ್ರತಿಯಾಗಿ ೧೦ ಹಂಡ್ರೆಡ್ ವೇಟ್ ತೂಕಕ್ಕೆ ಕಡಿಮೆ ಇರುವ ಮೋಟಾರುಗಳಿಗೆ ೬ ರೂಗಳನ್ನು ಅದಕ್ಕಿಂತ ಹೆಚ್ಚು ತೂಕವಿರುವ ಮೋಟಾರುಗಳಿಗೆ ೧೦ ರೂಗಳನ್ನೂ ವಸೂಲ್ಮಾಡಿ ರಶೀತಿಯನ್ನು ಕೊಡುವಂತೆ ಎಲ್ಲಾ ಸರಹದ್ದುಗಳ ಸುಂಕದಕಟ್ಟೆಗಳಿಗೂ ಸರ್ಕಾರಿ ಅಪ್ಪಣೆಯು ಕಳುಹಿಸಲ್ಪಟ್ಟಿದೆಯೆಂದು ತಿಳಿದುಬರುತ್ತದೆ.

ದಕ್ಷಿಣಕನ್ನಡ ಜಿಲ್ಲೆಯ ಕೃಷ್ಣಿ ಎಂಬ 11 ವರ್ಷ ವಯಸ್ಸಿನ ಯುವತಿಯು ಪುರುಷವೇಷವನ್ನು ಧರಿಸಿಕೊಂಡು ಬೆಂಗಳೂರಿನ ಒಂದು ಹೋಟೆಲಿನಲ್ಲಿ ಕೆಲಸಕ್ಕೆ ಸೇರಿಕೊಂಡು ಜೀವನವನ್ನು ನಡೆಯಿಸುತ್ತಿದ್ದಳು. ಇವಳು ಪುರುಷವೇಷದಲ್ಲಿದ್ದರೂ ಇವಳ ನಡೆ, ನುಡಿ, ಮಾಗು, ಕಿವಿ ಚುಚ್ಚಿರುವುದು ಮುಂತಾದವುಗಳಿಂದ ಕೆಲಸಗಾರರಿಗೆ ಅನುಮಾನಬಂದಿದ್ದರೂ, ಇವಳು ತಾನು ನಾಟಕ ಕಂಪನಿಯಲ್ಲಿ ಪಾತ್ರವಹಿಸುತ್ತಿದ್ದುದರಿಂದ ಆರೀತಿ ಕಿವಿ, ಮಾಗು ಚುಚ್ಚಿರುವುದಾಗಿ ಹೇಳಿ ಅನುಮಾನವನ್ನು ನಿವಾರಿಸುತ್ತಿದ್ದಳು. ಹೀಗೆ ಕೆಲವು ದಿನಗಳು ಕಳೆದನಂತರ ಇವಳು ತನ್ನ ಬಳಿಯಿದ್ದ ಕೆಲವು ಒಡವೆಗಳನ್ನು ಮಾರಲು ಯತ್ನಿಸಿದ್ದನ್ನು ಹೋಟಲಿನ ಮಾಲೀಕನು ಕಂಡು ಪೋಲೀಸಿನವರಿಗೆ ಸುದ್ದಿಕೊಟ್ಟನು. ಅವರು ಅಲ್ಲಿಗೆ ಬಂದು ಇವಳನ್ನು ವೈದ್ಯರಿಂದ ಪರೀಕ್ಷಿಸಿ ಇವಳು ಹೆಂಗಸೆಂಬುದನ್ನು ತಿಳಿದು ಸ್ವಸ್ಥಳದಲ್ಲಿದ್ದ ಆಕೆಯ ತಂದೆತಾಯಿಗಳನ್ನು ಕರೆಯಿಸಿ ಅವಳನ್ನು ಅವರ ವಶಕ್ಕೆ ಕೊಟ್ಟರೆಂದು ತಿಳಿದುಬಂದಿದೆ.

ನಂಜನಗೂಡು ತಾ|| ಕುಪ್ಪೇಗಾಲದ ಶ್ರೀಮಾನ್ ಎಸ್. ಮಾದಪ್ಪನವರು ರಾಜಧಾನಿಯಲ್ಲಿ ಒಂದು ಅನಾಥಾಲಯವನ್ನು ಸ್ಥಾಪಿಸಬೇಕೆಂದು ಸಂಕಲ್ಪಿಸಿ ನಿನ್ನೆ ದಿವಸ ಅಮೀನ್ ಉಲ್ ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್ ಬಿ. ಎ., ಸಿ. ಐ. ಇ., ಓ. ಬಿ. ಇ. ಯವರ ಅಮೃತಹಸ್ತದಿಂದ ಈ ವೀರಶೈವ ಅನಾಥಾಲಯದ ಪ್ರಾರಂಭಮಹೋತ್ಸವವನ್ನು ನೆರವೇರಿಸಿದರು ಸದರಿ ಸ|| ಮಾದಪ್ಪನವರು ತಮ್ಮ ಪಿತೃಗಳಾದ ಕೈ|| ಸಿದ್ದಪ್ಪನವರ ಅನುಜ್ಞೆಯಮೇರೆ ಶಾಶ್ವತ ಮಾಡಿದ ಈ ಧರ್ಮಕಾರ್ಯವು ಸಾಂಗೋಪಾಂಗವಾಗಿ ನಡೆಯುವದಕ್ಕಾಗಿ ೩೦ ಸಾವಿರ ರೂಪಾಯಿ ಬೆಲೆಬಾಳುವ ವಿದ್ಯಾರ್ಥಿಭವನ ವೊಂದನ್ನೂ ಭೋಜನಕ್ಕಾಗಿ ೨೦ ಸಾವಿರ ರೂಪಾಯಿಗಳ ಬೆಲೆಬಾಳುವ ಕಟ್ಟಡಗಳನ್ನು ಹೀಗೆ ೫೦ ಸಾವಿರ ರೂಪಾಯಿಗಳ ಆಸ್ತಿಯನ್ನು ಮುಕ್ತಹಸ್ತದಿಂದ ದಾನಮಾಡಿರುತ್ತಾರೆ ಈ ಸಂದರ್ಭದಲ್ಲಿ ದಿವಾನ್ ಸಾಹೇಬರವರು ಧರ್ಮಕರ್ತರ ಉದ್ದೇಶವನ್ನು ಬಹಳವಾಗಿ ಶ್ಲಾಘಿಸಿದರು ಈ ಪ್ರಾರಂಭೋತ್ಸವಕ್ಕೆ ಸ್ಥಳಪರಸ್ಥಳದ ಅನೇಕ ದೊಡ್ಡಮನುಷ್ಯರೂ ಸರ್ಕಾರಿ ಅಧಿಕಾರಿಗಳೂ ಆಗಮಿಸಿದ್ದರು ಮಹೋತ್ಸವಾನಂತರದಲ್ಲಿ ಶ್ರೀ|| ಮಾದಪ್ಪನವರು ಬಹು ವಿತರಣೆಯಿಂದ ಬಂದ ಮಹಾಜನಗಳನ್ನೆಲ್ಲಾ ಉಪಾಹಾರದಿಂದಲೂ ಗಂಧಮಾಲ್ಯಾದಿಗಳಿಂದಲೂ ವಿಶೇಷವಾಗಿ ಸತ್ಕರಿಸಿದರು ಸ|| ಮಾದಪ್ಪನವರು ಈ ಧರ್ಮಕಾರ್ಯವನ್ನು ನೆರವೇರಿಸಿ ಪಿತೃಗಳ ಆಜ್ಞಾಪರಿಪಾಲನೆಮಾಡಿ ಇಹಪರಗಳಲ್ಲಿ ಯಶೋಭಾಗಿಗಳಾಗಿರುತ್ತಾರೆ ದೇವರು ಇವರಿಗೆ ದೀರ್ಘಾಯುರ್ಭಾಗ್ಯಗಳನ್ನೀಯಲಿ

ವರ್ತಮಾನಸಂಗ್ರಹ.

ಸುಪ್ರಸಿದ್ಧ ವಾದ್ಯವಿದ್ವಾಂಸರ ಮರಣ !

ಮೃದಂಗ ಮತ್ತು ಖಂಜರಿವಾದನದಲ್ಲಿ ದಕ್ಷಿಣ ಹಿಂದೂಸ್ಥಾನದಲ್ಲೆಲ್ಲ ಸುಪ್ರಸಿದ್ಧರಾಗಿದ್ದ ಮ|| ರಾ| ದಕ್ಷಿಣಾಮೂರ್ತಿಪಿಳ್ಳೆಯವರು ಕಳೆದ ತಿಂಗಳು ೨೧ ನೆಯ ತಾರೀಖಿನ ದಿವಸ ಪುದುಕೋಟೆಯಲ್ಲಿ ದೈವಾಧೀನರಾದರೆಂಬ ವಿಷಯವನ್ನು ಕೇಳಿ ವಿಷಾದಿಸುತ್ತೇವೆ

ಪೋಲೀಸರಿಗೆ ಶಿಕ್ಷೆ !

ಕಲಕತ್ತಾ ಪೋಲೀಸ್ ಸ್ಟೇಷನ್ನಿನ ರಾಮಪ್ರಜಸರಾಯ್ ಮತ್ತು ಮಹಾವೀರಸಿಂಗ್ ಎಂಬ ಇಬ್ಬರು ಕಾನ್‌ಸ್ಟೇಬಲುಗಳು ಒಬ್ಬ ವ್ಯಕ್ತಿಯನ್ನು ಠಾಣೆಯಲ್ಲಿ ಸ್ವಲ್ಪಹೊತ್ತು ನಿರ್ಬಂಧಿಸಿದುದಕ್ಕಾಗಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಇಬ್ಬರಿಗೂ ೬ ವಾರಗಳ ಶಿಕ್ಷೆಯನ್ನೂ ಮತ್ತು ೧೫ ರೂ ಗಳ ಜುಲ್ಮಾನೆಯನ್ನೂ ವಿಧಿಸಿದರು.

ಪ್ಯಾಲಸ್ಟೈನಿನ ಪರಿಸ್ಥಿತಿ

ಪ್ಯಾಲಸ್ಟೈನಿನ ಪರಿಸ್ಥಿತಿಯು ಇನ್ನೂ ಭಯಂಕರವಾಗಿಯೇ ಇದೆ ೬ ಬ್ರಿಟಿಶ್ ಸೈನ್ಯಗಳು ಎಲ್ಲ ಕಡೆಯೂ ಕಾಯುತ್ತಿದ್ದರೂ, ವಿಶೇಷ ಕಾನೂನುಗಳು ಜಾರಿಯಲ್ಲಿದ್ದರೂ ಇನ್ನೂ ಹತೋಟಿಗೆ ಬಂದಿರುವುದಿಲ್ಲ ಹೆಬ್ರಾನ್ ರಸ್ತೆಯಲ್ಲಿದ್ದ ಎರಡು ಸೇತುವೆಗಳು ಸಿಡಿಮದ್ದಿನಿಂದ ನಾಶಮಾಡಲ್ಪಟ್ಟದ್ದರಿಂದ ವಾಹನಾದಿಗಳು ಈ ರಸ್ತೆಯಲ್ಲಿ ಹೋಗುವುದಕ್ಕೆ ಅಡ್ಡಿಯಾಗಿದೆ ಮತ್ತು ಅದೇ ರಸ್ತೆಯಲ್ಲಿದ್ದ ಟೆಲಿಫೋನ್ ಕಂಬಗಳೂ ತಂತಿಗಳೂ ನಿರ್ನಾಮವಾಗಿವೆ ಜರೂಸಲೆಂ ಹಳೇ ನಗರದ ಒಂದು ಇಕ್ಕಟ್ಟಾದ ರಸ್ತೆಯಲ್ಲಿ ಹೋಗುತ್ತಿದ್ದ ಬ್ರಿಟಿಷ್ ಪೋಲೀಸ್ ದಳದ ಮೇಲೆ ಗುಂಡುಗಳು ಹಾರಿಸಲ್ಪಟ್ಟವು ಅದೃಷ್ಟವಶದಿಂದ ಯಾರಿಗೂ ಅಪಾಯವಾಗಲಿಲ್ಲ ಅಂಗಡಿ ಮಾಲೀಕರು ಅಂಗಡಿಗಳನ್ನು ತೆಗೆದು ವ್ಯಾಪಾರಮಾಡದಿದ್ದರೆ ಅವರಿಗೆ ದಂಡವಿಧಿಸುವ ವಿಶೇಷಾಧಿಕಾರವು ಪ್ರಚಾರವಾಗಿದೆ

ಇಟಲಿಯಲ್ಲಿ ಪುನಃ ಯುದ್ಧಸಿದ್ಧತೆ !

ಇಟಲಿಯಿಂದ ಯುದ್ಧಸೂಚಕವಾದ ವರ್ತಮಾನವು ಬರುತ್ತಿರುವುದನ್ನು ನೋಡಿ ಜಿನೀವಾದಲ್ಲಿ ವಿಪರೀತವಾದ ಗಾಬರಿಯೂ, ಸಂದೇಹವೂ ಉಂಟಾಗಿದೆ ಇಟಲಿಯು ಯುದ್ಧಸಿದ್ಧತೆಗಾಗಿ ನಡೆಯಿಸುವ ಕಾರ್ಯಕ್ರಮ:— ೧ ಶಾಲೆಶಾಲೆಯ ಕಟ್ಟಡಗಳು ಮಿಲಿಟರಿಯವರ ಉಪಯೋಗಕ್ಕೆ ಲಭಿಸಲು ಸಾಧ್ಯವಾಗುವಂತೆ ಶಾಲೆಗಳಿಗೆ ಎಂದಿಗಿಂತ ೧ ತಿಂಗಳು ಮುಂಚೆಯೇ ರಜಾ ಕೊಡಲಾಗಿದೆ ೨ ರಿಜರ್ವ್‌ನಲ್ಲಿದ್ದ ಹಲವು ನೌಕಾದಳಗಳನ್ನು ಕೆಲಸದ ಮೇಲೆ ಬರಮಾಡಿಕೊಂಡಿರಲಾಗಿದೆ ೩ ರಿಜರ್ವ್‌ನಲ್ಲಿರುವ ಇನ್ನೆರಡು ವಿಧವಾದ ಸೈನಿಕರಿಗೆ ಸಿದ್ಧವಾಗಿರತಕ್ಕದ್ದೆಂದು ಆಜ್ಞಾಪಿಸಲಾಗಿದೆ ೪ ಸೈನ್ಯಕ್ಕೆ ಸೇರಲು ಸಿದ್ಧವಾಗಿರತಕ್ಕದ್ದೆಂದು ಜಿನೀವಾದಲ್ಲಿರುವ ಇಟಾಲಿಯನ್ನರಿಗೆ ಎಚ್ಚರಿಕೆ ಕೊಡಲಾಗಿದೆ ೫ ಫ್ರೆಂಚ್ ಮತ್ತು ಯುಗೋಸ್ಲೇವಿಯಾ ಸರಹದ್ದುಗಳಲ್ಲಿಯೂ ಮಿಲಿಟರಿ ಸಿದ್ಧತೆಗಳಾಗುತ್ತಲಿವೆ

ಲಂಡನ್ನಿನಲ್ಲಿ ನೆರವೇರಿದ ಶ್ರೀಮನ್ಮಹಾರಾಜರವರ ವರ್ಧಂತಿಮಹೋತ್ಸವ ಸಮಾರಂಭದಲ್ಲಿ ಸರ್ ಬಟ್ಲರವರು ಮಾಡಿದ ಅಮೂಲ್ಯ ಭಾಷಣ

ಲಂಡನ್ನಿನಲ್ಲಿ ನೆರವೇರಿದ ಶ್ರೀಮನ್ ಮೈಸೂರು ಮಹಾರಾಜರ ವರ್ಧಂತ್ಯುತ್ಸವದ ಸಮಾರಂಭದಲ್ಲಿ ಏರ್ಪಡಿಸಲ್ಪಟ್ಟಿದ್ದ ಔತಣದಲ್ಲಿ, ಸರ್ ಬಟ್ಲರು (ಬಟ್ಲರ್ ಸಮಿತಿಯ ಅಧ್ಯಕ್ಷರು) ಪ್ರಧಾನ ಅತಿಥಿಗಳಾಗಿದ್ದರು ಇವರು ತಮ್ಮ ಭಾಷಣದಲ್ಲಿ “ ಮೈಸೂರಿನ ಸಕಲ ಪ್ರಜೆಗಳು ಮಹಾಪ್ರಭುಗಳಲ್ಲಿ ದೃಢವಾದ ರಾಜಭಕ್ತಿ, ಗೌರವ, ವಿಶ್ವಾಸವನ್ನಿಟ್ಟುಕೊಂಡಿರುವರು. ಶ್ರೀಮನ್ಮಹಾರಾಜರು ಪ್ರಜಾವರ್ಗದವರ ಸುಖವನ್ನು ಅಭಿವೃದ್ಧಿಪಡಿಸಿರುವರು ಆ ಮಹಾಪ್ರಭುಗಳು ಮಹನೀಯರು ಮಹಾರಾಜರು ಸುಕೃತಶಾಲಿಗಳು ಆದುದರಿಂದಲೇ ಅವರಿಗೆ ಸರ್ ಮಿರ್ಜಾರವರಂತಹ ದಿವಾನರು ಲಭಿಸಿರುವರು ಸರ್ ಮಿರ್ಜಾರವರು ಸಾಮರ್ಥ್ಯಶಾಲಿಗಳು, ಜನರನ್ನು ತಮ್ಮ ಕಡೆಗೆ ಒಲಿಸಿಕೊಳ್ಳಬಲ್ಲ ಬುದ್ಧಿಶಾಲಿಗಳು ನೂತನ ರಾಜ್ಯಾಂಗ ರಚನೆಯಲ್ಲಿ ಭಾಗವಹಿಸಿರುವವರಲ್ಲಿ ಮುಖ್ಯರಾದವರಲ್ಲೊಬ್ಬರು ” ಎಂದು ನುಡಿದು ಮೈಸೂರು ರಾಜ್ಯವನ್ನು ಬಹುವಿಧವಾಗಿ ಹೊಗಳಿದರು

ಲಂಡನ್ನಿಗೆ ಅಬಿಸಿನಿಯಾ ಚಕ್ರವರ್ತಿಗಳ ಆಗಮನ

ಅಬಿಸೀನಿಯಾ ಚಕ್ರವರ್ತಿಗಳಾದ ಹೈಲೇ ಸೆಲಾಸಿಯವರು ತಮ್ಮ ಇಬ್ಬರು ರಾಜಕುಮಾರರು, ಇಬ್ಬರು ರಾಜಕುಮಾರಿಯರು ಮತ್ತು ರಾಸ್‌ಕಾಸಾರವರು ಇವರ ಸಮೇತ ಜೂನ್ ೩ ನೆಯ ತಾರೀಖಿನದಿವಸ ಲಂಡನ್ನಿಗೆ ಆಗಮಿಸಿದರು ವಾಟರ್‌ಲೂ ಸ್ಟೇಷನ್ನಿನಲ್ಲೂ ಅಕ್ಕಪಕ್ಕಗಳಲ್ಲೂ ಬ್ರಿಟಿಷರು ಅಸಂಖ್ಯಾತರಾಗಿ ಸೇರಿ, ಚಕ್ರವರ್ತಿಗಳು ದಯಮಾಡಿಸಿದ ಕೂಡಲೇ ಗಟ್ಟಿಯಾಗಿ ಜಯಧ್ವನಿಗಳನ್ನು ಮಾಡಿ ತಮ್ಮ ಸಹಾನುಭೂತಿಯನ್ನು ತೋರ್ಪಡಿಸಿದರು ಆ ಸಮಯದಲ್ಲಿ ಆಂಗ್ಲ ಮಹಿಳೆಯೊಬ್ಬಳು ಅಬಿಸೀನಿಯಾ ಧ್ವಜಗಳನ್ನು ಹಂಚಿದಳು ಅನೇಕರು ಅವುಗಳನ್ನು ಹಾರಾಡಿಸಿದರು ಮಿ|| ಏಡೆನ್‌ರ ಪ್ರೈವೇಟ್ ಸೆಕ್ರೆಟರಿಗಳು ಚಕ್ರವರ್ತಿಗಳನ್ನು ಬ್ರಿಟಿಷ್ ಸರ್ಕಾರದ ಪರವಾಗಿ ಸ್ವಾಗತಿಸಿದರು ಅಬಿಸೀನಿಯಾ ಚಕ್ರವರ್ತಿಗಳು ಯಥಾಪ್ರಕಾರವಾಗಿ ತಮ್ಮ ಉಡಿಗೆತೊಡಿಗೆಗಳನ್ನು ಧರಿಸಿದ್ದರು. ಇವರ ಇಬ್ಬರು ಗಂಡುಮಕ್ಕಳೂ ಬಹಳ ಚೆನ್ನಾಗಿ ಚಿನ್ನದ ರೇಕುಗಳಿಂದ ಕಸೂತಿಮಾಡಿದ್ದ ವಸ್ತ್ರಗಳನ್ನು ಧರಿಸಿದ್ದರು ರಾಜಕುಮಾರಿಯರಿಬ್ಬರೂ ಐರೋಪ್ಯವಸ್ತ್ರಗಳನ್ನು ಧರಿಸಿಗೊಂಡಿದ್ದರು ರಾಸ್‌ಕಾಸಾರವರು ಮಾತ್ರ ಇಥಿಯೋಪಿಯನ್ನರಂತೆ ಬಿಳಿ ವಸ್ತ್ರಗಳನ್ನು ಧರಿಸಿದ್ದರು ಅನೇಕರು ಮಾನಪತ್ರಗಳನ್ನು ಸಮರ್ಪಿಸಿದರು ಮಾನಪತ್ರಗಳು ಓದಲ್ಪಟ್ಟನಂತರ ಚಕ್ರವರ್ತಿಗಳೂ ಅವರ ಪರಿವಾರದವರೂ ಹೊರಗಡೆ ಸಿದ್ಧವಾಗಿ ನಿಂತಿದ್ದ ಮೋಟಾರ್‌ಗಾಡಿಗಳಲ್ಲಿ ಕುಳಿತರು ಬ್ರಿಟಿಷ್ ಪ್ರಜೆಗಳು ಎಡೆಬಿಡದೆ ಜಯಘೋಷಗಳನ್ನು ಮಾಡುತ್ತಿರಲಾಗಿ ಚಕ್ರವರ್ತಿಗಳು ಅವರನ್ನೆಲ್ಲಾ ವಂದಿಸುತ್ತ, ಪೋಲೀಸ್ ಮೋಟಾರೊಂದು ಮಾರ್ಗದರ್ಶಕವಾಗಿ ಮುಂದೆ ದಾರಿಬಿಡಿಸಿಕೊಂಡು ಹೋಗುತ್ತಿರಲಾಗಿ ಪ್ರಿನ್ಸಸ್‌ಗೇಟ್ ರಸ್ತೆಯಲ್ಲಿ ಅವರಿಗಾಗಿ ಸಿದ್ಧವಾಗಿದ್ದ ಗೃಹಕ್ಕೆ ತೆರಳಿದರು

ಸ್ವೀಕಾರ

ಬೆಳಗಾಂವ ಜಿಲ್ಲಾ ಅಥಣಿಯಲ್ಲಿರುವ ಹಿರೇಮಠದಲ್ಲಿ ವೈಶಾಖ ಬ|| ೨ ಶುಕ್ರವಾರ ದಿವಸ ಶ್ರೀಸಿದ್ಧರಾಮಸ್ವಾಮಿಗಳವರಿಗೆ ನೆರವೇರಿದ ಪಟ್ಟಾಭಿಷೇಕ ಮಹೋತ್ಸವಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 5 ರೂ. ಗಳು ಶ್ರೀ ವೀರಭದ್ರ ಹಿರೇಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ನಾಗಲ್ಲ ಸಂಸ್ಥಾನಕ್ಕೆ ಸೇರಿದ ತೇರದಾಳಗ್ರಾಮದಲ್ಲಿರುವ ರಾ|| ರಾ|| ಬಿಜ್ಜರಗಿ ರಾಮಪ್ಪನವರು ತಮ್ಮ ತಮ್ಮಂದಿರಾದ ಚಿ|| ಗುರಪ್ಪ ಮತ್ತು ಸಂಗಪ್ಪ ಇವರ ವಿವಾಹಮಹೋತ್ಸವದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂಗಳು ಮತ್ತು ಸದರಿ ಗ್ರಾಮದ ಮ|| ರಾ|| ನರಗುಂದ ಮುರಿಗೆಪ್ಪನವರ ಪುತ್ರರಾದ ಚಿ|| ರಾಚಪ್ಪ ಮತ್ತು ಮುರಿಗೆಪ್ಪ ಇವರ ವಿವಾಹಮಹೋತ್ಸವ ಸಮಯದಲ್ಲಿ ತೆಗೆಯಿಸಿದ 2 ರೂ ಗಳು ಮತ್ತು ಸದರಿ ಗ್ರಾಮದ ಮ|| ರಾ|| ಸಿದ್ದೋಜಿ ನಾಗಪ್ಪನವರ ಪುತ್ರ ಚಿ|| ವೀರಪ್ಪನ ವಿವಾಹಸಮಯದಲ್ಲಿ ತೆಗೆಯಿಸಿದ 1 ರೂ ಹೀಗೆ ಒಟ್ಟು 5 ರೂ ಗಳು ತೇರದಾಳ ಹಿರೇಮಠದ ಶ್ರೀ ಪಟ್ಟದಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ಜಿ|| ಶಿಕಾರಿಪುರದಲ್ಲಿರುವ ಮ|| ರಾ|| ನೇಮರಿ ಚಿಕ್ಕೆರೆ ಚನ್ನಪ್ಪ ಶೆಟ್ಟರ ಪುತ್ರಿ ಚಿ|| ಸೌ|| ಮುರಿಗಮ್ಮನನ್ನು ಮ|| ರಾ|| ಮುತ್ತಿ ಸೋಮಪ್ಪನವರ ಪುತ್ರ ಚಿ|| ವಂಕಪ್ಪನಿಗೆ ಕೊಟ್ಟು ನೆರವೇರಿದ ವಿವಾಹ ಸಮಯದಲ್ಲಿ ಕನ್ಯೆಯ ಕಡೆಯವರು ಸಮರ್ಪಿಸಿದ 1 ರೂಪಾಯಿಯು ಗಬ್ಬೂರು ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ

ತರೀಕೆರೆ ತಾ|| ಲಕ್ಕವಳ್ಳಿ ಗ್ರಾಮದ ಮಠದಲ್ಲಿ ಜ್ಯೇಷ್ಠ ಶು|| ೮ ದಿವಸ ನೆರವೇರಿದ ಪಟ್ಟಾಭಿಷೇಕಸಮಯದಲ್ಲಿ ತೆಗೆಯಿಸಿದ 1 ರೂ ಯು ತರೀಕೆರೆ ಹಿರೇಮಠದ ವೇ|| ಕಲ್ಲನಾಥಯ್ಯನವರ ದ್ವಾರಾ ತಲ್ಪಿರುತ್ತದೆ

ಬಳ್ಳಾರಿ ಜಿ|| ಹಿರೇಹಡಗಲಿಯಲ್ಲಿರುವ ಚಿಕ್ಕಮಠದ ಪ್ರಭುಸ್ವಾಮಿಗಳವರ ಪುತ್ರ ಚಿ|| ಕೊಟ್ರಪ್ಪನಿಗೆ ಮ|| ರಾ|| ಕೂಲಿ ಕೊಟ್ರಪ್ಪನವರ ಪುತ್ರಿ ಚಿ|| ಸೌ|| ಪಾರ್ವತಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಿದ 1 ರೂಪಾಯಿಯು ಮಾನಿಹಳ್ಳಿ ಪು|| ಮ|| ಶಿವರುದ್ರಗೌಡರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ದಾನಿಗಳಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ

ನೋಟೀಸು

ಹೋದ ಮೇ ತಾ|| ೨೯-೫-೩೬ ನೇ ನಮ್ಮ ಹಸ್ತಪತ್ರಿಕೆಯ ಪ್ರಕಾರ ಯಾತ್ರೆಗೆ ಹೊರಡುವದನ್ನು ಗೊತ್ತುಮಾಡಿ ಟಿಕೇಟು ತೆಗೆದುಕೊಂಡು ಯಾತ್ರೆಗೆ ಹೊರಡದೆ ಇದ್ದ ಜನರು ತಾ|| ೨೦-೬-೩೬ ರೊಳಗಾಗಿ ತಮ್ಮ ಟಿಕೇಟು (ಪಾವತಿ) ಮೊದಲಾದವುಗಳನ್ನು ಹೊಸದಾಗಿ ಮಾಡಿಸಿಕೊಂಡು, ತಾವುಗಳು ತಾರೀಖು ೨೨-೬-೧೯೩೬ ನೆಯ ದಿವಸ ಯಾತ್ರೆಗೆ ಹೊರಡುವದನ್ನು ಗೊತ್ತುಮಾಡಿ ಸಮ್ಮತಿ ಪತ್ರದಲ್ಲಿ ಎಲ್ಲಾ ತುಂಬಿ ತಮ್ಮ ಸಹಿಮಾಡಿಕೊಡಬೇಕು ಮೇಲೆ ತಿಳಿಸಿದ ಪ್ರಕಾರ ಎಲ್ಲ ಹೊಸಟಿಕೇಟ (ಪಾವತಿ) ಸಮ್ಮತಿ ಪತ್ರ ಎಲ್ಲ ಹೊಸದಾಗಿ ಮಾಡಿಸದಿದ್ದಲ್ಲಿ ತಮ್ಮಲ್ಲಿ ಇರುವ ಟಿಕೇಟ (ಪಾವತಿ) ಎಲ್ಲ ರದ್ದು ಆಗುತ್ತವೆ ಮುಂದೆ ತಪ್ಪಿನಿಂದ ಯಾವಕೆಲಸವೂ ನಡೆಯಲಾರದು ತಾ|| ೪-೬-೧೯೩೬

ಎಸ್. ವ್ಹಿ. ಘಾಂಗಿ.
ಮ್ಯಾನೇಜರ್—ಶ್ರೀ ಶಿವಾನಂದ ಕಂಪನಿ,
ಜನ್ನಕೈ

[3 ನೇ ಪುಟದಿಂದ ಮುಂದುವರಿದುದು]

ಸ್ವಾಮಿಗಳವರು ಸಲಹೆಮಾಡಿದರು. ಈ ಯಂತ್ರವನ್ನು ಛತ್ರಪತಿಯಲ್ಲಿ ಸ್ಥಾಪಿಸುವುದಕ್ಕೆ [illegible] ಸಿಮೆಂಟನ್ನು [illegible] ಸುಲಭ [illegible] ಛತ್ರಪತಿ [illegible] ಇಂಜನಿಯರುಗಳು [illegible] ಛತ್ರಪತಿಯಲ್ಲಿ [illegible]

[illegible]

ಕಾಮಗಾರಿ [illegible] ರೂಪಾಯಿಗಳಿಗೆ ಹೆಚ್ಚಿಸಿದ್ದೇನೆ. [illegible] ಮೈಸೂರು ವಿಶ್ವವಿದ್ಯಾನಿಲಯದ [illegible] ವಿದ್ಯಾರ್ಥಿಗಳಿಗೆ [illegible]

ಈಗ ಬೆಂಗಳೂರು ಮತ್ತು ಮೈಸೂರಿನಲ್ಲಿಯೂ ಜನರು [illegible] ಲಕ್ಷ [illegible]

[illegible]

[illegible]

ಪ್ರಸ್ತಾವಿಸಲ್ಪಟ್ಟ [illegible] ಲಕ್ಷ

[illegible] ಲಕ್ಷ

ಮೈಸೂರು [illegible] ಲಕ್ಷ

[illegible] ಲಕ್ಷ

ಜಾಲ [illegible] ಸಾವಿರ [illegible]

೧೯೩೬ [illegible] ರೂಪಾಯಿಗಳ [illegible] ೧೯೩೬-೩೭ ನೆಯ ಸಾಲಿನಲ್ಲಿ [illegible] ಲಕ್ಷ [illegible] ರೂಪಾಯಿಗಳ [illegible] ಮಾಡಿದ್ದೇನೆ. ಅಲ್ಲದೆ ೧೯೩೬-೩೭ ನೆಯ ಸಾಲಿನಲ್ಲಿ ನೆಟ್ಟವು [illegible] ರೂಪಾಯಿಗಳಾಗಬಹುದೆಂದು ಗೊತ್ತು ಮಾಡಿದ್ದೇನೆ. ಹಾಲಿ ಸಾಲಿನಲ್ಲಿ (೧೯೩೫-೩೬ ನೆಯ ಸಾಲಿನಲ್ಲಿ) ನೆಟ್ಟವು [illegible] ರೂಪಾಯಿಗಳಾಗಬಹುದೆಂದು ತೋರಿ ಬಂದಿದೆ. ೧೯೩೬-೩೭ನೆಯ ಸಾಲಿನಲ್ಲಿ ನೆಟ್ಟವು ಕಳೆದು [illegible] ಲಕ್ಷ ರೂಪಾಯಿಗಳು ಉಳಿಯಬಹುದೆಂದು ನಿರೀಕ್ಷಿಸಿದ್ದೇನೆ.

[illegible]

[illegible]

ಪಬ್ಲಿಕ್ ವರ್ಕ್ಸ್ ಇಲಾಖೆಯ ಕಾರ್ಯಕಲಾಪ

ಹೆಚ್ಚಿಗೆ [illegible] ಪಬ್ಲಿಕ್ ವರ್ಕ್ಸ್ ಇಲಾಖೆಯ ಕಾರ್ಯಕಲಾಪಗಳ [illegible] ಲಕ್ಷ ರೂಪಾಯಿಗಳು [illegible] ಕಟ್ಟಡಗಳ [illegible]

ಮೈಸೂರು ವಿಶ್ವವಿದ್ಯಾನಿಲಯದ [illegible] ಮುಂದಿನ ವರ್ಷ [illegible] ಲಕ್ಷ ರೂಪಾಯಿಗಳ [illegible] ಕಟ್ಟಡಗಳನ್ನು ಕಟ್ಟಿಸಬೇಕಾಗಿದೆ. [illegible] ವಿಶ್ವವಿದ್ಯಾನಿಲಯದ [illegible]

ಟವರ್‌ಗಳಲ್ಲಿ ನೀರು ಸರಬರಾಯಿ ಏರ್ಪಾಡನ್ನು ಉತ್ತಮಪಡಿಸುವುದಕ್ಕಾಗಿ ಕೊಡುವ ಮೊಬಲಗನ್ನು [illegible] ರೂ.

[1 ನೇ ಪುಟದಿಂದ ಮುಂದುವರಿದುದು]

ಭಾವನೆಯಲ್ಲಿ ಸಕಲ ಪರೋಪಕಾರಗಳಿಂದ ಶೂನ್ಯವಾದ ಪ ನಸ್ಸೇ ಸಕಲಭೂತಗಳಲ್ಲಿಯೂ [illegible] ಪ್ರತ್ಯ [illegible] ಮನವಿರೋಧದಿಂದ ಪರಮ ಪುರುಷಾರ್ಥವು ಪ್ರಾಪ್ತವಾಗುವದು. [illegible] ಇಂಥ [illegible] ಮನನಿರೋಧಮಾಡದೆ [illegible] ಕಲ್ಪಿಸಿ [illegible] ಜಡವಾದ ಹಣವೇ ಪರ ಬ್ರಹ್ಮವೆಂದು ತಿಳಿದು ಅದರ ಸಂಗ್ರಹದಲ್ಲಿಯೇ [illegible] ಮಾನವರ್ [illegible] ಗೋಮುಖ [illegible] ಗೋಣುಮುರಿದು ಅವರನ್ನು [illegible] ತಮ್ಮ [illegible] ತುಂಬಿಕೊಂಡು ತಾವೇ [illegible] ಶ್ರೀಮಂತರೆಂದು [illegible] ‘ಕಂಠದ [illegible]’ ಎಂಬ ನಾಣ್ಣುಡಿಯನ್ನು [illegible] ನುಡಿದ [illegible]

(ಸಶೇಷ)

ಆರ್. ಮಲ್ಲಿಕಾರ್ಜುನಾರಾಧ್ಯ,
ತಿಪಟೂರು

ಶ್ರೀಗುರುನಿವಾಸ ಸಂಸ್ಕೃತ ಹೈಸ್ಕೂಲ್, ಬಳ್ಳಾರಿ

ಶ್ರೀಗುರುನಿವಾಸ ಸಂಸ್ಕೃತ ಅಡ್ವಾನ್ಸ್ ಸ್ಕೂಲು ತಾ॥ 1 [illegible] ದಿವಸ ಪ್ರಾರಂಭವಾಗಿದೆ. ಇದೇ ಜೂನ 1 ನೆಯ ತಾರೀಖಿನೊಳಗಾಗಿ ಸಂಸ್ಕೃತ ಇಂಟ್ರನ್ಸ್ ಕ್ಲಾಸ್ಸಿಗೆ [illegible] ವಿದ್ಯಾರ್ಥಿಗಳು [illegible] ಸೆಕ್ರೆಟರಿ,
ಘೋಗಪ್ಪ ಕೊಂಡಕುಂದಿ

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್
ನಂಬರು ನಂ 70 ಚಿಕ್ಕಪೇಟೆ, ಬೆಂಗಳೂರುಸಿಟಿ

1 [illegible] ಪಟ್ಟಣದ ಶೆಟ್ಟರು ಮ॥ ರಾ॥ ಸಿದ್ದಲಿಂಗಶೆಟ್ಟರ ಪುತ್ರಿಯ ಲಗ್ನದಲ್ಲಿ ಫಂಡಿಗೋಸ್ಕರ ತೆಗೆದ [illegible] ರೂಪಾಯಿ [illegible] ಮರದ ಹುಚ್ಚಪ್ಪ ದೇವರ ಮೂಲಕವಾಗಿ ಬಂದಿರುತ್ತದೆ.

3 [illegible] ಮ॥ ರಾ॥ ನಿಡಸಾಲೆ ಗಿರಿಯಪ್ಪ [illegible] ಪುತ್ರಿಯ ಲಗ್ನದಲ್ಲಿ ಫಂಡಿಗೋಸ್ಕರ ತೆಗೆದ [illegible] ರೂಪಾಯಿಗಳು ಮರದ ಹುಚ್ಚಪ್ಪ ದೇವರ ಮೂಲಕವಾಗಿ ಬಂದಿರುತ್ತವೆ.

ಈ ಮೊಬಲಗುಗಳನ್ನು [illegible] ವಂದನಾಪೂರ್ವಕವಾಗಿ ಸ್ವೀಕರಿಸಿದೆ.

ಬೆಂಗಳೂರು, ವಿ ಚೆನ್ನಯ್ಯ, ಬಿ ಎ ಬಿ ಎಲ್,
ತಾ॥ [illegible] ಅಡ್ವೊಕೇಟ್ ಮತ್ತು ಸಕ್ರೆಟರಿ

ನೂತನಪುಸ್ತಕ ಉಚಿತ !

ಶ್ರೀಜಗದ್ಗುರು ಪಂಚಾಚಾರ್ಯರ ಲಿಂಗಾವತಾರ

ಎಂಬ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವನು ಅವಶ್ಯವಾಗಿ ಓದಿಯೇ ತೀರಬೇಕು. ಶ್ರೀಜಗದ್ಗುರು ಪಂಚಾಚಾರ್ಯರ ಲಿಂಗಾವತಾರಿಗಳಾಗಿ ಮತ ಸ್ಥಾಪನೆಯನ್ನು [illegible] ಮಾಡಿದರೆಂಬ ಅಮೋಘವಾದ ವಿಷಯವು ಈ ಗ್ರಂಥದಲ್ಲಿ ವಿವಂಗಮಾದಿ ಪ್ರಬಲಪ್ರಮಾಣಗಳೊಡನೆ ಐತಿಹ್ಯ ಸಿದ್ಧದೃಷ್ಟಿಯಿಂದ ಪರಿಶೋಧಿಸಿ ಬರೆಯಲ್ಪಟ್ಟಿದೆ. ಈ ಗ್ರಂಥವನ್ನು ಕೇವಲ ಪ್ರಚಾರಕ್ಕಾಗಿ ಪ್ರಕಟಿಸಿರುವುದರಿಂದ ೧ ಆಣೆ ಪೋಸ್ಟ ಟಿಕೇಟ (ಸ್ಟಾಂಪ) ನ್ನು ಕಳುಹಿಸಿದರೆ, [illegible] ಪುಸ್ತಕಗಳನ್ನು ಉಚಿತವಾಗಿ ಕಳುಹಿಸುತ್ತೇವೆ. ಅತಿ ಶೀಘ್ರ ಟಿಕೇಟ (ಸ್ಟಾಂಪ) ನ್ನು ಕಳುಹಿಸಿ ಪುಸ್ತಕವನ್ನು ಪಡೆಯಿರಿ.

ಪ ಚಂಕ್ಷರಶಾಸ್ತ್ರಿಗಳು ಹಿರೇಮಠ,
ಪೋ॥ ಶಿರೋಳ ನರಗುಂದ, ಡಿ॥ ಧಾರವಾಡ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ದೇಶದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸೇರಿದಂಥ ಶಿಷ್ಯರ ಮನೆಗಳೆಷ್ಟು, ಆ ಮಠಾಧಿಕಾರಿಗಳು ಐದು ವರ್ಷಕ್ಕೋ ಹತ್ತು ವರ್ಷಕ್ಕೋ ಒಂದು ಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯೋಗಕ್ಷೇಮ ವಿಷಯಗಳನ್ನು ಕೇಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠಗಳಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ಸರಿಪಡಿಸುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಿಸಿರುವೆವು. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ಕೊಂಡು ಅದರಲ್ಲಿರುವ ವಿವರವನ್ನೆಲ್ಲಾ ಬರೆದು ಶಾಶ್ವತವಾಗಿ ತಮ್ಮ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂಥಾ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮುಸ್ತಾ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ದಿವ್ಯೌಷಧಿಗಳು ಕೆಳಕಂಡ ಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲೆ	ಮೌಲ್ಯ
ಸುವರ್ಣಮಕರಧ್ವಜ	೭	೩೦—೦—೦
ಸ್ವರ್ಣಚಂದ್ರೋದಯ	೭	೭೦—೦—೦
೨ನೇ ನಂಬರ್	೧	೮—೦—೦
ರಸಸಿಂದೂರ	೧	೩—೦—೦
ಮಲ್ಲಸಿಂದೂರ	೧	೪—೦—೦
ತಾಲಸಿಂದೂರ	೧	೬—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೫—೦—೦
ತ್ರಿವಂಗ	೧	೧—೦—೦
ಭಸ್ಮಗಳು		
ಸುವರ್ಣಭಸ್ಮ	೧	೬೦—೦—೦
ರೌಪ್ಯಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹರತಾಳಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೭	೦—೭೩—೦
ಅಭ್ರಕಭಸ್ಮ	೧	೫—೦—೦
ಮುಕ್ತಾಭಸ್ಮ	೭	೬೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೭—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ ಚೂರ್ಣ ಗುಟಿಕಾ ತೈಲ ಘೃತ ಗಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಉಖಿಮಠ, ಜಿಲ್ಲಾ ಗಢವಾಲ್ .ಯು.ಪಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗೆ ಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುತ್ತವೆ ಎಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಇತರ ಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವರಿಗೂ ಉಪಯುಕ್ತವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತ ಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಪ್ರಖ್ಯಾತಿಹೊಂದಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶೀಕ್ಷೇತ್ರವಾಸಿಗಳಾದ ಸ್ವಪ್ರಭಾನಂದ ಶಿವಯೋಗಿಗಳೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ರಚನೆಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಆ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೯೩೫ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಸಂತೋಷದಿಂದ ಹೇಳಬಹುದಾಗಿದೆ. ನಮ್ಮ ಸ್ವಾಮಿಯವರಾದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಂಡಿತರಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ದಿವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೯೭೩ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಶ್ಶಕುನಕ್ಕೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ **ರೂ.** ಗೆ ದೊರೆಯುವದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಏಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀ ರೇಣುಕಾಚಾರ್ಯರು ಲೋಕಪ್ರಸಿದ್ಧರಾದ ಅಗಸ್ತ್ಯ, ದಧೀಚಿ, ವ್ಯಾಸ, ನಾರದ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಸಮ್ಯಕ್ ಶಿವಾಚಾರೋಪದೇಶಕ್ಕೆ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೬ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರ ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ರೇವಣಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರದ ಪಾರ್ಶ್ವಸ್ಥ ಘನಾಚಲದ ಸುಂದರ ಫೋಟೋ	೦—೨—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಲಾಪುರದಲ್ಲಿ ನಡೆದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೨—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೬ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್, ಮೈಸೂರು.

ಡಾಕ್ಟರ್ ಜಿ ಬಿ ಯವರ

ಸುಗಂಧ ನಸ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರುವ ಈ ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯ ಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೧೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ವೃದ್ಧಿ ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪ್ರಗತಿಸಿ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವಿ ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ ೨-೬-೦. ವಿ ಪಿ ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[16] ಪೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರ ಸ್ತೋತ್ರ ..	೧ ಆಣೆ
ಗೋತ್ರಸೂತ್ರಪಟ (೩ನೆಯ ಆವೃತ್ತಿ) . ..	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ) ..	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ) ..	೧ ಆಣೆ
ಬಸವಾದಿ ನಿಜತತ್ತ್ವವರ್ಣನ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ) ..	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿ ವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಗುರುಸ್ವರೂಪಸ್ವರೂಪದೀಪಿಕೆ	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ ...	೨ ಆಣೆ
ವೀರಶೈವಮತಮೀಮಾಂಸಾ ..	೩ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ) .	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಸನ್ಯಾಸಾಶ್ರಮವಿಮರ್ಶೆ ತತ್ತ್ವಸ್ಪಷ್ಟೀಕರಣ (೨ನೆಯ ಆವೃತ್ತಿ) ...	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಸಪಥಸ್ವಾಂತ ದಿನಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचे भाषण (मराठी)	८ आणे
Speeches by Pandit Shri Kashinatha Shastri (*English*)	**12 As**
ವೀರಶೈವರತ್ನ (೪ ನೆಯ ಆವೃತ್ತಿ)	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ) . ..	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಟಾಮಿನೀಟೀಕೆ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೯೩೩ ಕೃತ) ...	೮ ರೂ
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ॥ ಪಂಡಿತ ಶಿವ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಸ್ಥಾನಸಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ । ಪಂಚಕ್ಲೇಶನಿವಾರಕಾಃ ಪರತರಶ್ರೀಪಂಚಲಿಂಗೋದ್ಭವಾಃ ॥
ಪಂಚಾಚಾರನಿಯಾಮಕಾಃ ಸಕಲಸತ್ಪಂಚಾಕ್ಷರೀಬೋಧಕಾಃ । ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಸ್ತು ದೀನಾಂಜನಾನ್

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು

ಸ್ಥಳದವರಿಗೆ ೧ ರೂ ೧೧ | ಬಿಡಿ ಪ್ರತಿ ೧ಕ್ಕೆ ೧ ಅ | ಪರಸ್ಥಳದವರಿಗೆ ೩ ರೂ ೮ ಆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೦.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೫ನೇ ಜೂನ್ ೧೯೩೭ [ಸಂಚಿಕೆ ೮

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀ ರಂಭಾಪುರೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ

ಬಂಕಾಪುರ

ಮೊದಲು ಪ್ರಸಿದ್ಧಪಡಿಸಿದಪ್ರಕಾರ ಧಾರವಾಡ ಜಿ|| ಬಂಕಾಪುರದಲ್ಲಿ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರ ಅಡ್ಡಪಾಲಕಿಮಹೋತ್ಸವವು ತಾ|| ೧—೬—೧೯೩೭ ನೆಯ ದಿವಸ ಅತ್ಯಂತವೈಭವದಿಂದ ನೆರವೇರಿತೆಂಬವಿಷಯವನ್ನು ತಿಳಿಹಿಸಲು ಅತ್ಯಾನಂದವಾಗುತ್ತದೆ ಮಹಾಸನ್ನಿಧಿಯವರು ತಾರೀಖು ೧೬-೩-೩೭ ರ ಸೋಮವಾರ ಪ್ರಾತಃಕಾಲ ೯ ಘಂಟೆಗ ಹಾನಗಲ್ ಮೋಟಾರಿನಿಂದ ದಯಮಾಡಿಸುವುದರೊಳಗಾಗಿ ಬಂಕಾಪುರನಿವಾಸಿಗಳಾದ ಸರ್ವಮತೀಯರೂ ನಿಲ್ದಾಣದಲ್ಲಿ ಕಾದಿದ್ದರು ತಾಲೂಕು ಮ್ಯಾಜಿಸ್ಟ್ರೇಟ್ ಸಾಹೇಬರು, ಫೌಜದಾರಸಾಹೇಬರು ಪೋಲೀಸ್ ಸಿಬ್ಬಂದಿಯೊಡನೆ ಹಾಜರಿದ್ದರು ಪದ್ಧತಿಯಂತೆ ದೈವದವರ ಪರವಾಗಿ ಶ್ರೀಯುತ ಚನ್ನಬಸಪ್ಪ ಶೆಟ್ಟರು ನಜರಾಣೆಯನ್ನು ಒಪ್ಪಿಸಿದರು ಸ್ವಾಗತಸಂಘದ ಅಧ್ಯಕ್ಷರಾದ ಶ್ರೀ|| ಷ|| ಬ್ರ|| ಅರಳೆಲೆಮಠದ ಪಟ್ಟಾಧ್ಯಕ್ಷರು ಗ್ರಾಮದ ಸ್ವಮತಪರಮತೀಯ ಪ್ರಮುಖರ ಪರಿಚಯವನ್ನು ಮಾಡಿಕೊಟ್ಟನಂತರ ಸರ್ವರ ಪ್ರಾರ್ಥನೆಯಂತೆ ಶ್ರೀ ಮಹಾಸನ್ನಿಧಿಯವರು ಪಲ್ಲಕ್ಕಿಯನ್ನು ಆರೋಹಣಮಾಡಿದರ ಉತ್ಸವವು ಶಹರದ ಎಲ್ಲ ರಾಜಬೀದಿಗಳಲ್ಲಿ ಹೊರಟು ಅರಳೆಲೆಮಠದ ವಿಶಾಲ ಪಲ್ಲಿ ರಚಿಸಿದ ಮಂಟಪಕ್ಕೆ ತಲ್ಪಿತು. ಶ್ರೀ ಜಗದ್ಗುರುಗಳವರು ಸುವರ್ಣರಜತಸಿಂಹಾಸನವನ್ನಾರೋಹಣ ಮಾಡಿದರು ಬಳಿಕ ಬೆಂಗಳೂರು ಮಹಂತಿನಮಠದ ಶ್ರೀ|| ಷ|| ಬ್ರ|| ಗಂಗಾಧರಶಿವಾಚಾರ್ಯಸ್ವಾಮಿಗಳವರು ಗುರುಭಕ್ತಿಯ ವಿಷಯಕ್ಕೆ ಭಾಷಣಮಾಡಿದರು ಅನಂತರ ಶ್ರೀಸನ್ನಿಧಿಯವರು ಸಮಯೋಚಿತವಾಗಿ ಭಾಷಣಮಾಡಿದ ಬಳಿಕ ಸಭೆಯು ವಿಸರ್ಜಿಸಲ್ಪಟ್ಟಿತು ಉತ್ಸವಕ್ಕೆ ೬೦-೭೦ ಸಾವಿರ ಜನಗಳು ಸೇರಿದ್ದರು ಭೋಜನದ ವ್ಯವಸ್ಥೆಯು ಚನ್ನಾಗಿದ್ದಿತು ಉತ್ಸವದಲ್ಲಿ ಶಬನೂರು ಹಿರೇಹೊನ್ನಿಹಳ್ಳಿ, ಲಕ್ಷ್ಮೇಶ್ವರ, ಇಂಗಳಗಿ, ಮತ್ತಿಗಟ್ಟಿ ಮುಣ್ಣೂರು ಮೊದಲಾದ ಗ್ರಾಮಗಳಿಂದ ಪಂಚಾಚಾರ್ಯ ಭಜನಾಸಂಘದವರು ಬಂದಿದ್ದರಿಂದ ಉತ್ಸವಕ್ಕೆ ವಿಶೇಷವಾಗಿ ಶೋಭೆಯುಂಟಾಗಿದ್ದಿತು ಜನಸಂದಣಿಯು ವಿಶೇಷವಾಗಿದ್ದರೂ ತಾಲೂಕು ಮ್ಯಾಜಿಸ್ಟ್ರೇಟ್ ಸಾಹೇಬರ ಹಾಗೂ ಫೌಜದಾರಸಾಹೇಬರವರ ಸುವ್ಯವಸ್ಥೆಯಿಂದ ಉತ್ಸವವು ಶಾಂತವಾಗಿ ಜರುಗಿತು

ಶ್ರೀಜಗದ್ಗುರುಗಳ ಸನ್ನಿಧಾನದಲ್ಲಿ ಸಾಯಂಕಾಲ ೭ ಘಂಟೆಗೆ ಪುನಃ ಸಭೆಯು ಸೇರಿತು ಆದಿಯಲ್ಲಿ ಬಂಕಾಪುರ ತಾಲೂಕು ಮ್ಯಾಜಿಸ್ಟ್ರೇಟ್ ಸಾಹೇಬರವರು ಮಹಾಸನ್ನಿಧಿಯ ವಿಷಯದಲ್ಲಿ ರಚಿಸಿದ ಪದ್ಯಗಳನ್ನು ಬೆಂಗಳೂರು ಮಹಂತಿನಮಠದ ಶ್ರೀಗಳು ಆದರಸಹಿತವಾಗಿ ಓದಿಹೇಳಿ, ಅವರಲ್ಲಿರುವ ನೈಸರ್ಗಿಕವಾದ ಭಗವದ್ಭಕ್ತಿಯನ್ನೂ, ಪರಮತಸಹಿಷ್ಣುತೆಯನ್ನೂ, ಸನಾತನವೈದಿಕಮತಾಭಿಮಾನವನ್ನೂ ವರ್ಣಿಸಿದರು ಅನಂತರ ಜಗದ್ಗುರು ಸೇವಾನಿರತರಾದ ವೀರಶೈವಮಂಡಳಿಯವರು ಮಹಾಸನ್ನಿಧಿಗೆ ಬಿನ್ನವತ್ತಳೆಯನ್ನು ಒಪ್ಪಿಸಿದರು ಅದಕ್ಕೆ ಸನ್ನಿಧಾನದವರು ಸಪ್ರಮಾಣವಾಗಿಯೂ ಸಯುಕ್ತಿಕವಾಗಿಯೂ ಉತ್ತರಕೊಡಿಸಿ ಸಭಿಕರನ್ನು ಸಂತೋಷಪಡಿಸಿದರು ಇದೇ ಸಮಯದಲ್ಲಿ ಇಲ್ಲಿಯ ಮಹಮ್ಮದೀಯಮಂಡಳಿಯವರು ತಮ್ಮ ಸ್ತ್ರೀಶಿಕ್ಷಣಸಂಸ್ಥೆಗಳನ್ನು ಪೋಷಿಸುವದಕ್ಕಾಗಿ ಮಹಾಸನ್ನಿಧಿಗೆ ಮಾನಪತ್ರವನ್ನು ಒಪ್ಪಿಸಿದರು ಮಹಾಸನ್ನಿಧಿಯವರು ಉರ್ದುಭಾಷೆಯಲ್ಲಿ ಉತ್ತರವನ್ನು ಅಪ್ಪಣೆಕೊಡಿಸಿದರು ಪ್ರತಿದಿವಸವೂ ಧರ್ಮೋಪದೇಶವು ನಡೆಯುತ್ತಿರುವುದರಿಂದ ಬಂಕಾಪುರಶಹರವು ಇಂದಿಗೆ ಭೂಕೈಲಾಸದಂತೆ ಒಪ್ಪುತ್ತಿರುವದು ಧನ್ಯ, ಧನ್ಯ, ಬಂಕಾಪುರಶಹರ ನಿವಾಸಿಗಳಾದ ವೀರಶೈವರೇ ನೀವೇ ಧನ್ಯರು ! ನೀವೇ ಮುಕ್ತರು ! ತಾಯಿಯನ್ನು ಕಳೆದುಕೊಂಡ ಮಕ್ಕಳಂತೆ ಹಂಬಲಿಸುವ ಭಕ್ತಾದಿಗಳಿಗೆ ಮಹಾಸನ್ನಿಧಿಯನ್ನು ಬರಮಾಡಿಕೊಂಡು ದರ್ಶನ ಮಾಡಿಸಿ ತೃಪ್ತಿಪಡಿಸಿದ್ದಕ್ಕಾಗಿ ನಿಮ್ಮನ್ನು ಎಷ್ಟುಕೊಂಡಾಡಿದರೂ ಕಿರಿದಾಗಿದೆ ಬಂಕಾಪುರದಲ್ಲಿ ಪ್ರತಿ ದಿವಸದಲ್ಲಿಯೂ ಬೆಂಗಳೂರು ಮಹಂತಿನಮಠದ ಶ್ರೀ|| ಷ|| ಬ್ರ|| ಗಂಗಾಧರ ಶಿವಾಚಾರ್ಯಸ್ವಾಮಿಗಳವರ ಭಾಷಣವು ನಡೆಯುತ್ತಿರುವುದು ತಾ|| ೮-೬-೩೭ ರಲ್ಲಿ ಶ್ರೀ ಜಗದ್ಗುರುಗಳವರು ವೀರಶೈವ ಮತಪ್ರಾಚೀನತ್ವ ವಿಷಯದಲ್ಲಿ ೩ ಘಂಟೆಗಳ ಕಾಲ ಸಪ್ರಮಾಣವಾಗಿ ಭಾಷಣಮಾಡಿದರು ಸರ್ವಮತೀಯರೂ ಸೇರಿದ್ದರು ಮಹಾಸ್ವಾಮಿಯವರ ಸಹಜವಾದ ಪಾಂಡಿತ್ಯ ವಾಕ್ಚಾತುರ್ಯ ಶಾಂತವೃತ್ತಿ ಮೊದಲಾದವುಗಳನ್ನು ಕಂಡು ಸರ್ವರೂ ಕೊಂಡಾಡಿದರು ಸಿಗ್ಗಾವಿಭಕ್ತರೂ ಸಹ ತಮ್ಮಲ್ಲಿಗೆ ಮಹಾಪಾದವನ್ನು ದಯಮಾಡಿಸಿಕೊಳ್ಳುವದಕ್ಕೆ ಪ್ರಯತ್ನಿಸಿ ಪೂರ್ವ ತಯಾರಿಯನ್ನು ನಡೆಯಿಸಿರುವರು ಬಹು ದಿವಸಕ್ಕೆ ಮಹಾಪೀಠವು ದಯಮಾಡಿಸಿರುವುದರಿಂದ ಸರ್ವರೂ ತಮ್ಮಲ್ಲಿಗೆ ಮೊಕ್ಕಾಂಮಾಡಿಸಿ ಮಹಾಗುರುಸೇವೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರುವ,

ಪ್ರತ್ಯಕ್ಷದರ್ಶಿ

ಆತ್ಮಹತ್ಯೆಯ ಪ್ರಯತ್ನ

ಕಲ್ಕತ್ತೆಯಲ್ಲಿ ಒಬ್ಬ ಬಂಗಾಲಿ ಹುಡುಗಿಯು ದೇಹಾಲಸ್ಯ ಪ್ರಯುಕ್ತ ಪರೀಕ್ಷೆಗೆ ಕುಳಿತುಕೊಳ್ಳಲು ಆಗದೆ, ತನ್ನ ಸಂಗಡಿಗರೆಲ್ಲರೂ ಮೇಗಣ ಡಿಗ್ರೊಂದಿ ಮೇಲಿನ ತರಗತಿಗೆ ಹೋದುದರಿಂದ ಮನನೊಂದು ಅಫೀಮನ್ನು ನುಂಗಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದಳು ಈ ವಿಷಯವು ಕೂಡಲೆ ತಿಳಿದುದರಿಂದ ಆವಳನ್ನು ಆಸ್ಪತ್ರೆಗೆ ಸಾಗಿಸಲಾಯಿತು

ಒಳದೇಶದ ವೃತ್ತಾಂತಗಳು.

ಬೆಂಗಳೂರಿನಲ್ಲಿ ಇದೇ ತಿಂಗಳು ೨೭ ನೆಯ ತಾರೀಖಿನ ದಿವಸ ನಡೆಯಲಿರುವ ನ್ಯಾಯವಿಧಾಯಕಸಭೆಗೆ ಬರಲಿಚ್ಛಿಸುವ ಪ್ರೇಕ್ಷಕರು ಯಾರಾದರೊಬ್ಬ ಸದಸ್ಯರ ಮೂಲಕ ಎರಡು ದಿವಸಗಳ ಮುಂಚಿತವಾಗಿ ಎಲ್ ಸಿ ಸೆಕ್ರೆಟರಿಗಳಿಗೆ ಬರೆದುಕೊಂಡು ಟಿಕೆಟ್ ಪಡೆಯಬಹುದೆಂದು ಪ್ರಕಟವಾಗುತ್ತದೆ

ಮ|| ರಾ|| ಗೋಪಾಲರಾಯರನ್ನು ಕಿವಿದು ಕೊಲ್ಲಲೆತ್ನಿಸಿದ ಆರಮನೆಯ ಗಾಡಿನಡೆಸುವ ಮುನಿವೆಂಕಟಪ್ಪನ ಮೇಲಿನ ಮೊಕದ್ದಮೆಯ ವಿಚಾರಣೆಯು ಮುಗಿದು ಮೈಸೂರು ಸಷನ್ಸ್ ಜಡ್ಜ್ ಮಿ|| ಅಬ್ದುಲ್ ಗನಿಯವರು ಅಪರಾಧಿಗೆ 20 ವರ್ಷ ಕಠಿನಶಿಕ್ಷೆ ಮತ್ತು ಗಡೀಪಾರ್ ಶಿಕ್ಷೆಯನ್ನು ವಿಧಿಸಿದರು

ಕಳೆದ 7 ನೆಯ ತಾರೀಖು ಭಾನುವಾರ ಶಿವಮೊಗ್ಗೆಯ ಡೆಪ್ಯುಟಿಮ್ಯಾಜಿಸ್ಟ್ರೇಟರ ಕೋರ್ಟಿಗೆ ಬೆಂಕಿಬಿದ್ದು ಅನೇಕ ರೆಕಾರ್ಡುಗಳೂ ಕುರ್ಚಿ, ಬೆಂಚು, ಮೇಜು ಎಲ್ಲವೂ ಸುಟ್ಟುಹೋಗಿರುವವು ಬೆಂಕಿಯು ಬೆಳಗು ಮುಂಜಾನ ಬಿದ್ದಿರಬೇಕೆಂದು ಊಹಿಸಲಾಗಿದೆ ಇದಕ್ಕೆ ಕಾರಣವೇನೆಂಬುದು ಇನ್ನೂ ಪತ್ತೆಯಾಗಿರುವುದಿಲ್ಲ

ಶ್ರೀಮನ್ಮಹಾರಾಜರವರ ಇಂಗ್ಲೆಂಡ್ ಪ್ರಯಾಣ!

ಮೈಸೂರು ಶ್ರೀಮನ್ಮಹಾರಾಜರವರು ಇದೇ ತಿಂಗಳು ೨೭ ನೆಯ ತಾರೀಖಿನ ದಿವಸ ಇಂಗ್ಲೆಂಡಿಗೆ ಆರೋಗ್ಯರಕ್ಷಣೆಗಾಗಿ ಪ್ರಯಾಣಮಾಡುವರೆಂದು ತಿಳಿದುಬರುತ್ತದೆ ಮಹಾಪ್ರಭುಗಳವರ ಸಂಗಡ ದಿವಾನ್ ಸಾಹೇಬರು, ಪ್ರೈವೇಟ್ ಸೆಕ್ರೆಟರಿಗಳು, ಹುಜೂರ್ ಸೆಕ್ರೆಟರಿಗಳು, ಮ|| ರಾ|| ಎಂ ಸಿ ಸುಬ್ರಹ್ಮಣ್ಯರಾಜ ಅರಸರು, ಮ|| ರಾ|| ಸಿ ವಿ ಸುಬ್ರಹ್ಮಣ್ಯರಾಜ ಅರಸರು, ಪುರೋಹಿತರು, ಡಾಕ್ಟರರು ಮೊದಲಾದವರು ಪ್ರಯಾಣಮಾಡುವರೆಂದೂ, ಜಲಪಾನಕ್ಕಾಗಿ ಗಂಗಾಜಲವನ್ನು ಉಪಯೋಗಿಸುವರೆಂದು ತಿಳಿದುಬರುತ್ತದೆ

ದರ್ಬಾರ್‌ಭಕ್ಷಿಯವರ ನಿಧನ!

ಅರಮನೆಯಲ್ಲಿ ಬಹುದಿವಸಗಳಿಂದ ದರ್ಬಾರ್‌ಭಕ್ಷಿ ಕೆಲಸದಲ್ಲಿದ್ದ ಶ್ರೀಮಾನ್ ಹೆಚ್ ಲಿಂಗರಾಜಅರಸರವರು ನಿನ್ನೆ ದಿವಸ ಸಾಯಂಕಾಲ ೬ ಘಂಟೆಗೆ ಮೃತರಾದರು ಇವರು ನಿನ್ನೆ ದಿವಸ ಬೆಳಗ್ಗೆ ಚನ್ನಾಗಿದ್ದು, ಒಮ್ಮಿಂದೊಮ್ಮೆ ಮೃತಿಹೊಂದಿದುದಕ್ಕೆ ಹೃದಯಕ್ರಿಯೆಯು ನಿಂತುಹೋದುದೇ ಕಾರಣವೆಂದು ತಿಳಿದುಬರುತ್ತದೆ ಶ್ರೀಮಾನ್ ಭಕ್ಷಿಯವರು ಸದ್ಗುಣಶಾಲಿಗಳಾಗಿದ್ದರಲ್ಲದೆ ಬಹುಜನರಿಗೆ ಬೇಕಾಗಿದ್ದರು ಈ ೧-೨ ತಿಂಗಳುಗಳಲ್ಲಿ ರಾಜಸಂತತಿಯ ಮಹಾಮಹಾ ವ್ಯಕ್ತಿಗಳು ಗತಿಸಿಹೋದುದು ನಮ್ಮೆಲ್ಲರ ದೌರ್ಭಾಗ್ಯವೆಂದೇ ಹೇಳಬಹುದಾಗಿದೆ ಶ್ರೀಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಹಾರೈಸುತ್ತೇವೆ

ಪತ್ರವ್ಯವಹಾರ

ಒ[illegible] ರರು [illegible] ಪಡುವ ಲೇಖಿಗಳಿಗೆ ಪತ್ರಿ[illegible]ರು ಉತ್ತರವಾದಿಗಳಲ್ಲವೆಂಬ ವಿಷಯ [illegible] ಲಕ್ಷ್ಯದಲ್ಲಿಡತಕ್ಕದ್ದು

ವೀರಶೈವ ಸುಧಾರಣೆ

([illegible])

[illegible] ಸಾಹಿತ್ಯ [illegible]

[illegible]

"ಅತ್ಯಾಶ್ರಮಿಣಾಯಾ ಆಚಾರಾ ಸ್ತೈತೇಷಾಂ ಯ[illegible]ತೇ ಪ್ರುಸಃ" [illegible]

[illegible] "ಸರ್ವೋತ್ತಮನಾದ ವರ್ಣಾಶ್ರಮಗಳುಳ್ಳವರು" [illegible]

[illegible] "ಯೋಽತೀತ್ಯ ಸ್ವಾಶ್ರಮಾನ್ ವರ್ಣಾನ್" [illegible]

[illegible]

[illegible] "ಶ್ರೀ[illegible]ಚಿಂತಾಮಣಿ" [illegible]

[illegible]

(ಪ್ರ[illegible])

ಪೊಲಿಲಿವಡ [illegible]

(ಪ್ರ[illegible])

[illegible]

ಪಂಚಸೂತ್ರ [illegible]

([illegible])

[illegible]

ಪತ್ರ[illegible] ಮುಖ್ಯ [illegible] ದ್ರೋಹಿಸೆಂಬ [illegible]

(ಪ್ರ[illegible])

[illegible]

(ಪ್ರ[illegible])

[illegible]

(ಪ್ರ[illegible])

[illegible]

[illegible]

(ಸಶೇ)

ಮಹನೀಯರ ಹಿತೋಕ್ತಿಗಳು

(2 [illegible])

10 [illegible]

[illegible]

[6ನೇ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೩೬ ನೆಯ ಜೂನ್ ತಾ॥ ೧೧ ನೆಯ ಸೋಮವಾರ

ಲಿಂಗಧಾರಣವಿಚಾರ.

ಲಿಂಗಧಾರಣವನ್ನು ನಿಷೇಧಿಸುವ ಕೆಲವು ಕೆಲವು ವಾಕ್ಯಗಳನ್ನು ಪರಿಶೀಲಿಸಬೇಕಾಗಿದೆ

ವೈದಿಕಾ ಯದಿ ವಾ ವೃತ್ಯಾ ಲಿಂಗಂ ಪ್ರತಿಷ್ಠಿತಾ ।
... ಸ ... ಪಾಷಂಡ ... ಪುನರ್ಜನ್ಮ ... ।
... ಪತಿತಃ ಸ್ತ್ಯಾಂ ... ಲಿಂಗಧಾ ...
... ಸಂಕರ ಪ್ರಶ್ನಾ ... ಜಲ ... ।
... ನಿಸಾ ಪ್ರಶ್ನಾ ... ಸ್ತಾ ...
... ಸ ... ಸ್ತಾ ... ಜ
... ಸ ... ವಾ ... ಸ ।

ಶೈವರು, ಪಾಶುಪತರು ಲಿಂಗಧಾರಿಗಳು ಜಿಡ್ಡ ಲ ವ್ರತಿಗಳು, ಪಾಷಂಡಿಗಳು ಮುಂತಾದವರು ಶ್ರೌತ ಸ್ಮಾರ್ತ ಧರ್ಮಗಳಿಗೆ ಅಧಿಕಾರಿಗಳಲ್ಲವೆಂದೂ ಇತ್ಯಾದಿ ವಾಕ್ಯಗಳಲ್ಲಿ ಶಿವಲಿಂಗಧಾರಣವನ್ನೂ ಸಹ ನಿಷೇಧಿಸಲ್ಪಟ್ಟಿರುವುದರಿಂದ ಲಿಂಗಧಾರಣವು ವಿಹಿತವಲ್ಲವೆಂಬ ವಾದವು ಸರಿಯಾದುದಲ್ಲವೆಂದು ವಿಚಾರದ ... ಸರಿ! ಏಕೆಂದರೆ—

... ಸ ... ಸ ... ।
... ತ ... ।

ಎಂಬ ವಾಕ್ಯದಂತೆ ಶೈವ ... ಪಶುಪತ ... ಮುಂತಾದ ವಾಕ್ಯಗಳು ಲಿಂಗಧಾರಿಗಳನ್ನು ಪ್ರೋತ್ಸಾಹಿಸುವುದೇ, ಇತರ ಶೈವಮತಾದಿಗಳನ್ನು ಸಹ ನಿಂದಿಸುವುದರಿಂದ ವೈದಿಕ ... ವರಿಗೆ ಮಾತ್ರ ಅನ್ವಯವಾಗುತ್ತದೆ ... ಮತಗಳಿಗೂ ಅನ್ವಯವಾಗುತ್ತವೆ ... ವೇದ ರಿಂದ ಈ ವಾಕ್ಯಗಳು ವೇದವಿರೋಧಿಗಳಾದ ... ವೇದಿಗಳಿಂದ ಮಾಡಲ್ಪಟ್ಟ ದೂಷಣವಾಕ್ಯಗಳೇ ... ರತ್ತು ಪ್ರಮಾಣವಾಕ್ಯಗಳಲ್ಲವೆಂದು ... ಪ್ರಮಾಣವಾಗಿ ... ಈ ... ಫವು ಲಿಂಗಧಾರಿಗಳಿಗೆ ... ಶ್ಲೋಕದಲ್ಲಿ ಶೈವ ... ಲಿಂಗಿ, ಎಂದು ಪ್ರತ್ಯೇಕ ಪ್ರತ್ಯೇಕವಾಗಿ ... ಸಮುಚ್ಚಯದ್ಯೋತಕವಾದ ಚಕಾರವು ಇರುವುದರಿಂದ ಲಿಂಗಿಯದಕ್ಕೆ ಶೈವನೆಂದು ... ವನ್ನಾಗಿ ಮಾಡಲು ಸಾಧ್ಯವಿಲ್ಲ ... ಈ ಶ್ಲೋಕದಲ್ಲಿ ಪಾಷಂಡಪದವೂ ಸೇರಿಕೊಂಡಿರುತ್ತದೆ ಆ ಪಾಷಂಡಪದವಾದರೋ 'ಪಾಷಂಡಾಸ್ಸರ್ವಲಿಂಗಿನ.'' ಎಂಬ ಅಮರಕೋಶದ ಉಕ್ತಿಯಂತೆ ತ್ರಿಪುಂಡ್ರ ಊರ್ಧ್ವಪುಂಡ್ರಾದಿ ಸಕಲ ಚಿಹ್ನೆಗಳನ್ನು ಧರಿಸುವವರು ಸಕಲಲಿಂಗಿಗಳೆನ್ನುವುದರಿಂದ ... ಪಾಷಂಡಪದವು ... ಲಿಂಗ ... ದ್ವಿಜರಲ್ಲಿ ಮಾತ್ರ ಅಂಥ ಪಾಷಂಡಪದವು ... ಪದ ಸಕಲ ಲಿಂಗಿತ್ವವು ಇಲ್ಲವಾದುದರಿಂದಲೂ ಲಿಂಗಧಾರಿಗಳು ಯಾವಾಗಲೂ ಅನ್ಯ ದೇವತಾಸಂಬಂಧಗಳಾದ ನಾನಾವಿಧಚಿಹ್ನೆಗಳನ್ನು ಧರಿಸದೆ 'ಶಿವ ಏಕೋ ಧ್ಯೇಯ ಶಿವಂಕರಃ ಸರ್ವಮನ್ಯತ್ಪರಿತ್ಯಜ್ಯ' ಇತ್ಯಾದಿ ಶ್ರುತಿಗಳ ಪ್ರಮಾಣದಂತೆ ಯಾವಾಗಲೂ ಏಕದೇವತೋಪಾಸಕರಾದುದರಿಂದಲೂ ಪಾಷಂಡಪದದ ಅರ್ಥಕ್ಕೆ ಎಂದೂ ... ಭ್ಯರಾಗಲಾರರು

ಭಾರತಃ ಪಂಚಮೋವೇದಃ ಎಂಬ ಪ್ರಮಾಣವಾಕ್ಯದಂತೆ ನಮ್ಮ ಭಾರತೀಯರ ಇತಿಹಾಸಗಳಲ್ಲಿ ಅಗ್ರಸ್ಥಾನವನ್ನು ಹೊಂದಿದ ವ್ಯಾಸಕೃತ ಮಹಾಭಾರತವೆಂಬುದು ವೇದದಂತೆ ಪರಮಮಾನ್ಯವಾದ ಗ್ರಂಥವಾಗಿದೆಯಷ್ಟೆ! ಈ ಗ್ರಂಥದಲ್ಲಿ ಶಿವಲಿಂಗಧಾರಿಗಳ ಆಧಿಕ್ಯವನ್ನು ಎಷ್ಟರಮಟ್ಟಿಗೆ ವರ್ಣಿಸಿರುವರೆಂಬುದನ್ನು ಇಲ್ಲಿ ಸ್ವಲ್ಪ ವಿವರಿಸಬೇಕಾಗಿದೆ ಭಾರತದ ಅನುಶಾಸನಿಕಪರ್ವದಲ್ಲಿ ಧರ್ಮರಾಜನಿಗೂ ಭೀಷ್ಮನಿಗೂ ಪ್ರಶ್ನೋತ್ತರಗಳು ನಡೆಯುವ ಸಮಯದಲ್ಲಿ ಧರ್ಮರಾಜನು

... ವಿಪ್ರಃ ... ।
... ಪ್ರಶ್ನ ... ಗಿನಃ

ಎಲೈ ಭರತಕುಲದೀಪನೆ ಪಿತಾಮಹನೇ? ಲೋಕದಲ್ಲಿ ಲಿಂಗಿಬ್ರಾಹ್ಮಣರೆಂತಲೂ ಅಲಿಂಗಿಬ್ರಾಹ್ಮಣರೆಂತಲೂ ಎರಡು ವಿಧ ಬ್ರಾಹ್ಮಣರಿರುತ್ತಾರಷ್ಟೆ! ಅವರಲ್ಲಿ ದಾನಪಾತ್ರರಾದ ಬ್ರಾಹ್ಮಣರಾರೆಂದು ಪ್ರಶ್ನೆಮಾಡಲಾಗಿ ಭೀಷ್ಮನು—

ಸ ... ।
... ।

ಅಯ್ಯಾ ಧರ್ಮರಾಜನೆ ತಪಸ್ಸಿಗಳಾಗಿ ಅಧ್ಯಯನಸಂಪನ್ನರೂ ಸತ್ಕುಲೋತ್ಪನ್ನರೂ ಆಗಿದ್ದವರು ಲಿಂಗಿಬ್ರಾಹ್ಮಣರೇ ಆಗಿರಲಿ ಅಥವಾ ಅಲಿಂಗಿಬ್ರಾಹ್ಮಣರೇ ಆಗಿರಲಿ ಉಭಯರೂ ದಾನಪಾತ್ರರಾಗಿದ್ದಾರೆ ಎಂದು ಉತ್ತರವನ್ನು ಕೊಟ್ಟಿರುವುದನ್ನು ನೋಡಿದರೆ ಲಿಂಗಧಾರಣವು ಅತಿಪವಿತ್ರವಾದುದೆಂದು ... ವೃದು ... ಗಿರುವಲ್ಲ ... ಇತ್ಯಾದಿ ಶ್ಲೋಕಗಳಲ್ಲಿ ತೋರುವ ಲಿಂಗಧಾರಿನಿಂದ ಪರವಾಕ್ಯಗಳು ... ಪ್ರಮಾಣವಾಕ್ಯಗಳೆಂದು ಯಾರೂ ಪರಿಗಣಿಸಲಾರರು

ವರ್ತಮಾನಸಂಗ್ರಹ.

ತಿಪಟೂರಿ ... ಭರತ ... ದಿ ... ದ ... ಪಡೆದು ... ನಿ ... ಕ ... ದ್ವಿ ... ಗ ... ದಲು ... ದರ ... ಈ ಕೊಲ ... ಇನ್ನೂ ತಿಳಿದುಬಂದಿಲ್ಲ

ಟೀಪು ಸುಲ್ತಾನನ ಕಾಲದ ಖುದು—

... ದೇವನ್ನಾವರ ತಾ॥ ಮುಡೆ ... ಎಂಬಲ್ಲಿ ಟೀಪುಸುಲ್ತಾನನ ಕಾಲದ ... ಇರುವ ... ಈಚೆಗೆ ಕಣ್ಣು ಕಾಣುತ್ತಿದೆ ... ಹಳ್ಳಿಗಳು ಬರಲು ... ಇಂಗ್ಲಿಷರು ಟೀಪುವನ್ನು ... ಕೊಲ್ಲುವಾಗ ... ಸುಲ್ತಾನನ ಬಗ್ಗೆ ... ಹೇಳುತ್ತಾರೆ

ಸರ್ಪದಿಂದ ಸಾವು!

... ಜಿಲ್ಲೆ ... ನಾನ ... ಕ್ಲಿಂಡರ್ ... ಊಟಮಾಡಿ, ... ಮಲಗಿದ್ದನು ... ಜಿಸ್ನಿಗೆ ತಗುಲಿದಂತಾಗಲು ... ವನ್ನು ... ಮಲಗಿತ್ತು ... ಜನರು ಕೂಡಿ ಅದನ್ನು ಕೊಂದುಹಾಕಿದರು

ಪ್ರಪಂಚದಲ್ಲಿ ಅತಿದೊಡ್ಡವಾದ ಪುಸ್ತಕಾಲಯಗಳು

ಪ್ರಪಂಚದಲ್ಲೇ ಅತಿ ದೊಡ್ಡವಾದ ಎರಡು ಪುಸ್ತಕ ಭಂಡಾರಗಳು ರಷ್ಯಾದೇಶದಲ್ಲಿವೆ ... ಮಾಸ್ಕೋದಲ್ಲಿರುವ ಲೆನಿನ್ ... ಲೈಬ್ರರಿ ಇವರಲ್ಲಿ ೧೦ ಲಕ್ಷಗ್ರಂಥಗಳಿವೆ ಇನ್ನೊಂದು ಲೆನಿನ್‌ಗ್ರಾಡಿನಲ್ಲಿದೆ ಇಲ್ಲಿ ೮೦ ಲಕ್ಷ ಪುಸ್ತಕಗಳಿವೆ ಫ್ರಾನ್ಸ್ ಇಂಗ್ಲೆಂಡ್ ಮತ್ತು ಅಮೇರಿಕೆಗಳಲ್ಲಿ ಕೆಲವು ಭಂಡಾರ ಪುಸ್ತಕಾಲಯಗಳಿವೆ ಇವುಗಳಲ್ಲಿ ೪೦ ಲಕ್ಷಗ್ರಂಥಗಳು ಮಾತ್ರ ಶೇಕರಿಸಲ್ಪಟ್ಟಿವೆಯೆಂದು ತಿಳಿದುಬರುತ್ತದೆ

ಆಸ್ಟ್ರಿಯಾ ಜರ್ಮನಿಗಳ ಸ್ನೇಹವರ್ತನೆ

ಆಸ್ಟ್ರಿಯಾ ಸರ್ಕಾರದ ಮುಖ್ಯಮಂತ್ರಿಗಳಾದ ಶೂಸ್ನಿಗ್ಗ್‌ ವಿಯನ್ನಾದ ಟೌನ್‌ಹಾಲಿನ ಮುಂದೆ ನಡೆದ ಸಭೆಯಲ್ಲಿ ಭಾಷಣಮಾಡುತ್ತ "ನಮ್ಮ ನೆರೆಯನಾದ ಜರ್ಮನಿಯೊಡನೆ ಸ್ನೇಹದಿಂದ ನಡೆದುಕೊಳ್ಳುವುದೇ ನಮ್ಮ ಉದ್ದೇಶ! ಈ ಎರಡು ರಾಷ್ಟ್ರಗಳಿಗೂ ಬಹುದಿನದಿಂದ ನಡೆದುಬಂದಿರುವ ಬಾಂಧವ್ಯವು ಇನ್ನೂ ಹೆಚ್ಚಾಗಿ ... ಉಭಯಪಕ್ಷದ ಕ್ರಾಂತಿಕಾರರ ಚಳವಳಿಯನ್ನು ... ನಿರ್ಧರಿಸಿರುವುದೆಂದೂ ಹೇಳಿದರು

ಮನುಷ್ಯನ ಬೆಳವಣಿಗೆಗೆ ತಿಂಗಳುಗಳು ಕಾರಣವಂತೆ!

ನ್ಯೂಯಾರ್ಕಿನ ಡಾಕ್ಟರ್ ಒಬ್ಬರ್‌ವಿನ್ ಎಂಬವರು ಸಾವಿರದ ನೂರಕ್ಕಿಂತ ಹೆಚ್ಚು ಜನರನ್ನು ಪರೀಕ್ಷಿಸಿ ಜನರು ಎತ್ತರವಾಗಿಯೂ, ಕುಳ್ಳಾಗಿಯೂ ಬೆಳೆಯಲು ಅವರು ಹುಟ್ಟಿದ ಕಾಲವೇ ಕಾರಣವೆಂದು ಹೇಳುತ್ತಾರೆ ಮೇ ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಜನ್ಮಿಸಿದವರು ಬಹಳ ಎತ್ತರ ಬೆಳೆಯುವರೆಂದೂ, ಫೆಬ್ರವರಿ, ಮಾರ್ಚ ಏಪ್ರೆಲ್ ತಿಂಗಳುಗಳಲ್ಲಿ ಹುಟ್ಟಿದವರು ಕುಳ್ಳಗಾಗಿರುವರೆಂದೂ ಹೇಳುತ್ತಾರೆ

ಲಾಟರಿಯಲ್ಲಿಬಂದ ಹಣವನ್ನು ತೆಗೆದುಕೊಳ್ಳ ದೆಒಪ್ಪದ ಯುವಕ

ಇಟಲಿಯ ಅಲ್ಫೋನ್ಸ್ ಪ್ರದೇಶದ ಒಬ್ಬ ೩೦ ವಯಸ್ಸಿನ ಯುವಕನೊಬ್ಬನಿಗೆ ಲಾಟರಿಯೊಂದರಲ್ಲಿ ... ಒಮ್ಮೆ ... ೬೬ ಸಾವಿರ ಪೌಂಡು ಗಳು ಬಂದವು ಆದರೆ ಅವನಿಗೆ ತಾನೊಬ್ಬ ಪ್ರಸಿದ್ಧ ಪುರುಷನಾಗಲು ಇಷ್ಟವಿಲ್ಲವಾಗಿ ಗದ್ದೆ ಟಿಕೆಟ್ಟಿನ ನಂಬರು ತನ್ನದಲ್ಲವೆಂದು ಹೇಳಿದನು ಅದರೂ ... ಸಾವಿರ ಪೌಂಡುಗಳ ಚೆಕ್ಕನ್ನು ಬರೆದು ... ಅನುಭವಿಸ ... ಟಿಕೆಟ್ಟನ್ನು ಹೊಂದಿರುವವನೆಂಬುದನ್ನು ಪತ್ತೆಹಚ್ಚಿ ಅವನ್ನು ಕೂಟ್ಟ ಚೆಕ್ಕನ್ನು ತೆಗೆದುಕೊಳ್ಳದು ... ತನ್ನ ಟಿಕೆಟ್ಟು ಹಾಳಾಗಿ ಹೋಯಿತೆಂದೂ ಅದರ ನಂಬರು ಗದ್ದೆ ... ದೂ ... ನೆ!

ಸಾಕ್ಷಿ ನಾನ್ನ ವಿವಾಹದ ಒಂದು ವಿಚಿತ್ರದೃಶ್ಯ

... ವರ್ಷ ಇಂಗ್ಲಿಷ್ ಪತ್ನಿಯು ತನ್ನ ಗಂಡನು ತನ್ನ ವಿಷಯದಲ್ಲಿ ಬಹಳ ನಿಷ್ಠುರನಾಗಿರುವನೆಂದೂ ತನ್ನ ನೂರ್ಕ್ಷದೋಷಗಳನ್ನು ಎತ್ತಿ ... ತನ್ನಲ್ಲಿ ... ನುಕ್ಕನ್ನು ಪಡೆದಿರುವನೆಂದೂ ... ಎದೇ ... ಅನು ... ವಿದ ... ತನಗೆ ಪರಿಹಾರದ್ರವ್ಯವನ್ನು ಕೊಡಿಸಿ ದಾಂಪತ್ಯ ... ದನನಾಡಿಸಬೇಕೆಂದೂ ಕೋರ್ಟ ನ್ನ ... ಇವನಿಗೆ ... ಗಂಡನು ದಾಂಪತ್ಯ ... ತನ್ನ ಪತ್ನಿಯಲ್ಲಿ ... ನಂತ ... ನಂದೂ, ಇದು ದಮ್ಮಾದ್ಯ ... ಯಿಂದ ಪರಿಯೋದು ಇದರಿಂದ ... ನ್ಯಾಯ ... ಮುಂದೆ ... ರು ಹುಟ್ಟಿರುವ ... ದೀರಕಿ ... ತ್ರ ... ಈ ವಿಷಯ ... ತೀರ್ಪು ... ಬೇಕೆ ... ನ್ಯಾಯಾಧೀಶರಿಗೆ ತಿಳಿಯದಾಗಿದೆ

350 ವರ್ಷ ವಯಸ್ಸಿನ ಯೋಗಿ

ಹಿಮಾಲಯ ಪರ್ವತಪ್ರಾಂತದಲ್ಲಿ ಪ್ರವಾಸಮಾಡ ... ಸ್ವಾಮಿ ... ಎಂಬ ಒಬ್ಬ ಯುವಕನು ಶಿವ ... ದಲ್ಲಿ ... ಧಿಕ ರಿಯಾಗಿದ್ದ ಯೋಗಿಯೊಡನೆ ... ೩೫೦ ವರ್ಷ ವಯಸ್ಸಿನ ಯೋಗಿಯೊಬ್ಬನನ್ನು ಹಿಮಾಲಯಪ್ರಾಂತದಲ್ಲಿ ... ಸಿರ ... ಈ ಯುವಕನು ... ಹಿಮಾಲಯ ಪ್ರಾಂತ್ಯದಲ್ಲಿ ಸುಖವಾಗಿ ಪ್ರವಾಸಮಾಡಿ ಬಂದು ಎರಡನೆಯ ಸಾರಿ ಹೋಗುವಾಗ ಒದರಿಂದ ... ವೈಲಿ ... ಮಂಜಿನಲ್ಲಿ ಸಿಕ್ಕಿ ...

ನಿಂದ ಜಾರಿ ಬಿದ್ದನೆಂದೂ, ದೈವಕೃಪೆಯಿಂದ ಪ್ರಾಣ ಸಹಿತ ಉಳಿದ ಪಂಜನ ಹೊಡೆತಕ್ಕೆ ತಪ್ಪಿಸಿಕೊಳ್ಳಲು ಒಂದು ಬಂಡೆಯ ಮರೆಯಲ್ಲಿ ನಿಂತಿರುವಾಗ ದೂರದಲ್ಲಿ ಬೆಳಕನ್ನು ಕಂಡು ಅಲ್ಲಿಗೆ ಹೋದನಂತೆ! ಅಲ್ಲಿ ಯೋಗಸಮಾಧಿಸ್ಥನಾದ ಯೋಗಿಯನ್ನು ಕಂಡು ತನಗೂ ಯೋಗಾಭ್ಯಾಸವನ್ನು ಹೇಳಿಕೊಡಬೇಕೆಂದು ಪ್ರಾರ್ಥಿಸಲು, ಆ ಯೋಗಿಗಳು ಇದೇ ರೀತಿ ಆವನಿಗೆ ಅನುಗ್ರಹಿಸಿದರಂತೆ!

ಎತ್ತು ಮಾತನಾಡಿತು!

ಮಧುಎನಿ ಪ್ರಾಂತದ ಒಂದುಹಳ್ಳಿಯಲ್ಲಿ ಒಬ್ಬ ರೈತನು ಹೊಲವನ್ನು ಬಿತ್ತುತ್ತಿರುವಾಗ ಒಂದು ಕಡೆಯ ಎತ್ತು ಮುಂದಕ್ಕೆ ಹೋಗದೆ ನಿಂತುಬಿಟ್ಟಿತು. ರೈತನು ಎಷ್ಟೇ ಪ್ರಯತ್ನಪಟ್ಟರೂ ಅದು ಒಂದು ಹೆಜ್ಜೆಯನ್ನೂ ಸಹ ಮುಂವಿಡಲಿಲ್ಲ. ಇದಕ್ಕೇನು ಕಾರಣವೆಂದು ಅವನು ಯೋಚಿಸುತ್ತಿರುವಲ್ಲಿ, ಆ ಎತ್ತು ಮನುಷ್ಯರ ಧ್ವನಿಯಲ್ಲಿ "ಈಗ ಬಿತ್ತುವುದರಿಂದ ಏನು ಪ್ರಯೋಜನ? ಇನ್ನು ಸ್ವಲ್ಪಹೊತ್ತಿನಲ್ಲಿ ಪ್ರವಾಹವು ಬಂದು ಈ ಸ್ಥಳವೆಲ್ಲಾ ಮುಳುಗಿಹೋಗುವುದು' ಎಂದು ನುಡಿಯಿತಂತೆ! ಇದನ್ನು ಕೇಳಿದ ರೈತನು ಆಶ್ಚರ್ಯಗೊಂಡು ಈ ವಿಚಿತ್ರಸಂಗತಿಯನ್ನು ಜನರಿಗೆ ತಿಳುಹಿಸಲು ತತ್‌ಕ್ಷಣವೇ ಹಳ್ಳಿಗೆ ಹೋದನು. ಇದನ್ನು ಕೇಳಿ ಹಳ್ಳಿಯ ಜನರಗುಂಪು ಬಂದುಬಿಟ್ಟಿತು. ಅವರೆಲ್ಲರಿಗೂ ಆ ಎತ್ತು ಅವೇ ಮಾತುಗಳನ್ನೇ ಪುನಃ ಆಡಿ ಕೂಡಲೇ ಕೆಳಗೆಬಿದ್ದು ಪ್ರಾಣಬಿಟ್ಟಿತಂತೆ! ಈ ವಿಷಯವು ಸರ್ವರಿಗೂ ಆಶ್ಚರ್ಯವನ್ನುಂಟುಮಾಡಿದೆ. ಇಂತಹ ವಿಚಿತ್ರ ಪ್ರಕೃತಿಯ ಸಂದೇಶಬೇಕಾದರೆ ಇದು ಸ್ವರ್ಗಲೋಕದ ಸಂದೇಶ ತೋರುತ್ತಿದೆ.

ಬಂಗಾಳದಲ್ಲಿ ಭಯಂಕರವಾದ ಬಿರುಗಾಳಿ

ಬಂಗಾಳಪ್ರಾಂತದಲ್ಲಿ 1೭ ಘಂಟೆಗಳ ಕಾಲ ಬಯಂಕರ ಬಿರುಗಾಳಿ ಎದ್ದು ವಿಶೇಷ ಅನಾಹುತಗಳನ್ನು ಟುಮಾಡಿತು. ಹೊಳೆಗಳಲ್ಲಿ ಹರಿಯುತ್ತಿದ್ದ ಅನೇಕ ದೋಣಿಗಳು ಮುಳುಗಿಹೋದವು. ಗಿಡಗಳು ಉರುಳಿದವು. ದರೋಡೆಯ ಪತ್ತೆಗಾಗಿ ಹೋಗಿದ್ದ ಪೋಲೀಸ್ ಅಧಿಕಾರಿಗಳೊಬ್ಬರು ತಮ್ಮ ಅನುಯಾಯಿಗಳೊಡನೆ ದೋಣಿಯಲ್ಲಿ ಕುಳಿತು ಹೊಳೆಯನ್ನು ದಾಟುತ್ತಿದ್ದಾಗ ದೋಣಿಯು ಬಿರುಗಾಳಿಗೆ ಸಿಕ್ಕು 12 ಘಂಟೆಗಳ ಕಾಲ ಯಾರು ಎಷ್ಟು ಪ್ರಯತ್ನಪಟ್ಟರೂ ದಡವನ್ನು ಸೇರಲಿಲ್ಲ. ಕೊನೆಗೆ ಗಾಳಿಯ ಹೊಡೆತಕ್ಕೆ ಸಿಕ್ಕ ದೋಣಿಯು ದಡಕ್ಕೆ ನೂಕಲ್ಪಟ್ಟ ಕೂಡಲೆ ಒಳಗಿದ್ದವರೆಲ್ಲರೂ ಪ್ರಾಣಭಯದಿಂದ ಹೊರಕ್ಕೆ ಧುಮುಕಿಬಿಟ್ಟರು. ಆಗ್ಗೆ ಹೋಯಿತೆಂದು ಭಾವಿಸಿದ್ದರು ಅಂತು ಅವರೆಲ್ಲರೂ ಸುರಕ್ಷಿತವಾಗಿ ಪಾರಾದರು. ಅನೇಕ ದಿನಗಳವರೆಗೂ ತೇಲಿಹೋಗುತ್ತಿದ್ದುವಂತೆ! ಹಳ್ಳಿಗಳ ಮನೆಗಳ ಮೇಲೆ ಹೊದ್ದಿಸಿದ್ದ ತಗಡುಗಳೆಲ್ಲ ಆಕಾಶದಲ್ಲಿ ಹಾರಾಡುತ್ತಿದ್ದುವೆಂದೂ, ಪೋಲೀಸನವರು ಸಕಾಲದಲ್ಲಿ ಜನರಿಗೆ ಎಚ್ಚರಿಕೆಕೊಡದಿದ್ದರೆ ಇನ್ನೂ ಅನಾಹುತಗಳಾಗುತ್ತಿದ್ದವೆಂದೂ, ಪ್ರಾಣನಷ್ಟವೇನೂ ಆಗಿಲ್ಲವೆಂದೂ ತಿಳಿದು ಬರುತದೆ.

ಮಾತೃದ್ರೋಹಕ್ಕಾಗಿ ಪ್ರಾಣತ್ಯಾಗ

ಅಮೇರಿಕದ ನ್ಯೂಸ್ ಎಂಬಲ್ಲಿ ವಾಸವಾಗಿರುವ ಒ ಸರೆಬೋರೊ ಎಂಬವನು ಒಂದು ದಿನ ತನ್ನ ಎಪ್ಪತ್ತುವರ್ಷ ವಯಸ್ಸಿನ ತಾಯಿಯೊಂದಿಗೆ ಮಾತನಾಡುತ್ತಿದ್ದಾಗ ಅಕಸ್ಮಾತ್ ಮಾತಿಗೆ ಮಾತು ಬೆಳೆದು ಕೋಪದಿಂದ ಕೈಯ್ಯಲ್ಲಿದ್ದ ಕಸಬರಿಗೆಯಿಂದ ತಾಯಿಯ ತಲೆಯ ಮೇಲೆ ಹೊಡೆದನು. ಇದರಿಂದ ಆಕೆಗೆ ಸ್ವಲ್ಪ ಪೆಟ್ಟಾಯಿತು. ಉತ್ತರಕ್ಷಣದಲ್ಲಿಯೇ ಅವನು ತನು ತನ್ನ ತಾಯಿಯ ಬಗ್ಗೆ ಮಾಡಿದ ಅಪಚಾರವನ್ನು ಸ್ಮರಣೆಗೆ ತಂದುಕೊಂಡು, ತಾನು ಮಾಡಿದ ಮಾತೃದ್ರೋಹಕ್ಕೆ ತನ್ನ ಹಸ್ತಚ್ಛೇದನವೇ ಸರಿಯಾದ ಶಿಕ್ಷೆಯೆಂದು ನಿರ್ಧರಿಸಿ ಗರಗಸದಿಂದ ತನ್ನ ಎಡಗೈಯನ್ನು ಕೊಯ್ದುಕೊಂಡನು. ಕೂಡಲೆ ಅವನನ್ನು ನೆರೆಯವರು ಆಸ್ಪತ್ರೆಗೆ ಸಾಗಿಸಿದರೂ ಪ್ರಯೋಜನವಾಗದೆ ಮೃತನಾದನು. ಪಾಪರೂಪಿಯಾದ ಕಲಿಯುಗದಲ್ಲಿಯೂ ಮಾತೃ, ಪಿತೃ, ಗುರುದ್ರೋಹಾದಿಗಳಿಗೆ ಸ್ವತಃ ಶಿಕ್ಷೆಯನ್ನು ವಿಧಿಸಿಕೊಳ್ಳಬಲ್ಲ ಸತ್ಪುರುಷರು ಇನ್ನೂ ಪ್ರಪಂಚದಲ್ಲಿರುವರೆಂಬುದಕ್ಕೆ ಈತನೇ ನಿದರ್ಶನ ಪುರುಷನಲ್ಲವೇ?

ಭಾರತೀಯ ವೈಮಾನಿಕರ ಅದ್ಭುತ ಸಾಹಸ!

ಮ|| ರಾ|| ಪುರುಷೋತ್ತಮ ಒಜಾ ಮತ್ತು ದಲಾಲ್ ಎಂಬುವರು ಎಂಬ ವೈಮಾನಿಕರು ಆಫ್ರಿಕಾದಿಂದ ತಮ್ಮ ವಿಮಾನ ಸಂಚಾರವನ್ನು ಮುಗಿಸಿಕೊಂಡು ಬೊಂಬಾಯಿಗೆ ಬಂದಿರುವರು. ಇವರು ರೋಟರಿಕ್ಲಬ್ಬಿನಲ್ಲಿ ತಮಗೆ ಪ್ರಾಪ್ತವಾದ ತೊಂದರೆಗಳನ್ನು ವಿವರಿಸಿದರು. "ನಾವು ಇಲ್ಲಿಂದ ಹೊರಟ ಉದ್ದೇಶವು ಭಾರತೀಯರು ಸಾಹಸಿಗಳೆಂಬುದನ್ನು ಪ್ರಪಂಚಕ್ಕೆ ತೋರಿಸುವುದಾಗಿತ್ತು. ಆದರೆ ದುರದೃಷ್ಟವಶಾತ್ ನಾವು ಹೊರಟಾಗ ಹವೆಯು ಚೆನ್ನಾಗಿಲ್ಲದೆ ಬಹಳ ತೊಂದರೆಯಾಯಿತು. ಬೆಟ್ಟಗುಡ್ಡಗಳನ್ನೂ, ಮರುಭೂಮಿಗಳನ್ನೂ, ಜೌಗುಪ್ರದೇಶಗಳನ್ನೂ ದಾಟಿ ಹೋಗಬೇಕಾಯಿತು. 'ಆಫ್ರಿಕದ ಅರಣ್ಯಗಳಲ್ಲಿ ನಾವು ಪಟ್ಟ ಅವಸ್ಥೆಯು ಹೇಳತೀರದು. ಒಂದು ನದಿಯ ತೀರದ ಬಳಿ ನಾವು ಇಳಿಯಲು ಹವಣಿಸುತ್ತಿದ್ದಾಗ ದಿಢೀರನೆ ಆನೆಗಳ ಗುಂಪೊಂದು ಕೋಳಕ್ಕೆ ಘೀಂಕರಿಸುತ್ತಾ ಒಂದುಬಿಟ್ಟಿತು. ದೈವವಶಾತ್ ಅದು ಇಳಿದಿದ್ದವರು ಹಾಗೆಯೇ ಮೇಲಕ್ಕೇರಿದೆವು.

'ಆ ರಾತ್ರಿ ಅರಣ್ಯದಲ್ಲಿ ಕಾಲ ಕಳೆದು ಮಾರನೆಯ ಬೆಳಗ್ಗೆ ವಿಮಾನವನ್ನು ಹುಡುಕಿಕೊಂಡು ಹೋದಾಗ ಕಾಡಿನಲ್ಲಿ ದಾರಿತಪ್ಪಿಹೋಯಿತು. ಹಾಗೆಯೇ ಹೋಗುತ್ತಿರುವಾಗ ಅಕಸ್ಮಾತ್ ನಮ್ಮೆದುರಿಗೆ ಎರಡು ಸಿಂಹದ ಮರಿಗಳೂ ಎರಡು ಕಾಡೆಮ್ಮೆಗಳೂ ಎರಡು ಆನೆಗಳೂ ಗುಂಪಾಗಿ ನುಗ್ಗಿಬಿಟ್ಟವು. ಅವುಗಳಿಂದ ತಪ್ಪಿಸಿಕೊಳ್ಳಲು ಮೊಸಳೆಗಳಿಂದ ತುಂಬಿದ್ದ ನದಿಯನ್ನು ಈಜಿ ದಾಟಬೇಕಾಯಿತು. ಅನಂತರ ಒಂದು ಕಾಡುಜನರ ಹಳ್ಳಿಗೆ ಹೋಗಿ ಅಲ್ಲಿಯ ಪರಿಸ್ಥಿತಿಯಿಂದ ಸಹಾಯಪಡೆದು ಬರಬೇಕಾಯಿತು. ದಾರಿಯಲ್ಲಿ ಎಷ್ಟೋ ಕಾಡುಜನರು ನಮ್ಮನ್ನು ಹೆದರಿಸಿದರು. ನಮ್ಮ ಗಡ್ಡ ಮೀಸೆಗಳನ್ನು ನೋಡಿದ ಇನ್ನೂ ಕೆಲವರು ನಾವು ಮನುಷ್ಯರನ್ನು ತಿನ್ನುವವರೆಂದು ಓಡಿಹೋದರು. ಹೀಗೆ ಬಹಳ ಕಷ್ಟಪಟ್ಟು ಜೀವಸಹಿತವಾಗಿ ಹಿಂದಿರುಗಿದೆವು.

ಹೆಂಡತಿಯನ್ನು ಕೊಂದುದಕ್ಕಾಗಿ ಗಂಡನಿಗೆ ಮರಣದಂಡನೆ ಮದ್ರಾಸ್ ಹೈಕೋರ್ಟಿನ ತೀರ್ಪು

ಚಿಕ್ಕವಯಸ್ಸಿನ ಹೆಂಡತಿಯನ್ನು ಕೊಲೆಮಾಡಿದ್ದಕ್ಕಾಗಿ ಚಿನ್ನಸ್ವಾಮಿ ಪಿಳ್ಳೆ ಎಂಬವನಿಗೆ ತಿರುಚನಾಪಳ್ಳಿಯ ಸಷನ್ ಜಡ್ಜರು ವಿಧಿಸಿದ್ದ ಮರಣದಂಡನೆಯನ್ನು ಮದ್ರಾಸ್ ಹೈಕೋರ್ಟ್ ಜಡ್ಜರಾಗಿರುವ ಮಿ|| ಜಸ್ಟಿಸ್ ಬರ್ನ್ ಮತ್ತು ಮಿ|| ಜಸ್ಟಿಸ್ ಮಾಕೆಟ್ ಎಂಬವರು ಪುಷ್ಟೀಕರಿಸಿರುತ್ತಾರೆ. ಚಿನ್ನಸ್ವಾಮಿಯು ರಕ್ತಮ್ಮಾಳ್ ಎಂಬ ಹುಡುಗಿಯನ್ನು ಲಗ್ನವಾಗಿ ಎರಡು ವರುಷವಾದ ಮೇಲೆ ಯಿತು. ಆಗನಿ ವಿಳ್ಳಾಗ ದಂಪತಿಗಳಿಗೆ ಸಣ್ಣ ಸಣ್ಣ ವ್ಯಾಜ್ಯಗಳಾಗುತ್ತಲೇ ಇದ್ದುವು. ಕಳೆದ ಜನವರಿ ೨೧ನೆಯ ತಾರೀಖಿನಲ್ಲಿ ಹೆಂಡತಿಯು ಅಭ್ಯಂಜನಸ್ನಾನಕ್ಕೆ ಏರ್ಪಡಿಸಲಿಲ್ಲವೆಂದು ಚಿನ್ನಸ್ವಾಮಿಯು ಅವಳನ್ನು ಹೊಡೆದನು. ಅನಂತರ ಅದೇ ತಿಂಗಳು ೨೫ಕ್ಕೆ ಚಿನ್ನಸ್ವಾಮಿಯು ಸಮೀಪದ ಗ್ರಾಮಕ್ಕೆ ಹೋದನು. ಅವನು ತಿರುಗಿ ಬಂದಾಗ ಹೆಂಡತಿಯು ಮನೆಯಲ್ಲಿರಲಿಲ್ಲ. ಆಕೆಯು ಹೊತ್ತಾಗಿ ಮನೆಗೆ ಬಂದಾಗ್ಗೂ ಗಂಡನಿಗೆ ಊಟಕ್ಕೆ ಬಡಿಸಲಿಲ್ಲ. ಇದರಿಂದ ಚಿನ್ನಸ್ವಾಮಿಗೆ ವಿಪರೀತವಾಗಿ ಕೋಪಬಂದು ಹತ್ತಿರವಿದ್ದ ಒಂದು ಆಯುಧದಿಂದ ಹೆಂಡತಿಯನ್ನು ಕೊಂದುಬಿಟ್ಟನು. ಒಬ್ಬನೇ ಹೋಗಿ ವಿಲೇಜ್ ಮುನ್ಸೀಫರಿಗೆ ಈ ವಿಷಯವನ್ನು ತಿಳುಹಿಸಿದನು. ವಿಲೇಜ್ ಮುನ್ಸೀಫರು ಪೋಲೀಸಿನವರಿಗೂ ಮ್ಯಾಜಿಸ್ಟ್ರೇಟರಿಗೂ ವರ್ತಮಾನ ಕೊಟ್ಟರು. ತನಿಖೆನಡೆಯಿಸಿ ಪೋಲೀಸಿನವರು ಚಿನ್ನಸ್ವಾಮಿಯನ್ನು ದಸ್ತಗಿರಿಮಾಡಿದರು. ತಿರುಚನಾಪಳ್ಳಿಯ ಸಷನ್ ಜಡ್ಜರು ಚಿನ್ನಸ್ವಾಮಿಯು ಅಪರಾಧಿಯೆಂದು ತೀರ್ಮಾನಿಸಿ ಇವನು ಕೊಲೆಯನ್ನು ಕೋಪದಲ್ಲಿ ಮಾಡಿರುತ್ತಾನೆಂದೂ, ದುರದೃಷ್ಟವಶಾತ್ ಕೊಲೆಗೆ ಉಪಯೋಗಿಸಲ್ಪಟ್ಟ ಆಯುಧವು ಕೈಗೆ ಸಿಕ್ಕುವಂತಿತ್ತೆಂದೂ ಹೆಂಡತಿಯ ಅವಿಧೇಯತೆಯು ಈ ರೀತಿ ಮಾಡಿಸಿತೆಂದೂ ತಿಳಿಸಿ, ಚಿನ್ನಸ್ವಾಮಿಯ ಅಪರಾಧವು ಮಹತ್ತರವಾದುದೆಂದು ಅವನಿಗೆ ಮರಣದಂಡನೆ ವಿಧಿಸಿದರು. ಅಪೀಲು ಹೈಕೋರ್ಟಿನಲ್ಲಿ ನ್ಯಾಯಾಧೀಶರು ಅಪೀಲಿನಬಗ್ಗೆ ತೀರ್ಪುಕೊಡುತ್ತ ಚಿನ್ನಸ್ವಾಮಿಯು ಹಠಾತ್ತಾಗಿ ಬಂದ ಕೋಪದಲ್ಲಿ ಈ ಕೆಲಸವನ್ನು ಮಾಡಿದನೆನ್ನಲಾಗುವುದಿಲ್ಲ. ಇವನ ಕೃತ್ಯವು ಅತಿಭಯಂಕರವಾದುದು. ತಿಳಿಯದ ಹುಡುಗಿಯನ್ನು ಹೀಗೆ ಕೊಲೆಮಾಡಿರುವ ಅಪರಾಧಕ್ಕೆ ಮರಣದಂಡನೆಯೇ ಸರಿಯಾದ ಶಿಕ್ಷೆಯೆಂದು ತೀರ್ಮಾನಿಸಿದರು.

ಅಬಿಸೀನಿಯಾ ಚಕ್ರವರ್ತಿಗಳು ಲಂಡನ್‌ನಗರದಲ್ಲಿ ಮಾಡಿದ ಭಾಷಣ

ಅಬ್ಸೀನಿಯಾ ಚಕ್ರವರ್ತಿಗಳ ಗೌರವಾರ್ಥವಾಗಿ ಲೀಗ್ ಆಫ್ ನೇಷನ್ಸ್ ಸಂಘದವರು ಒಂದು ಔತಣವನ್ನೇರ್ಪಡಿಸಿದ್ದರು. ಚಕ್ರವರ್ತಿಗಳೊಡನೆ ಅಬಿಸೀನಿಯದ ಯುವರಾಜರೂ ರಾಜಕುಮಾರಿ ಒಬ್ಬರೂ ದಯಮಾಡಿಸಿದ್ದರು.

ಅಬೀಸೀನಿಯಾದಲ್ಲಿ ಇಟಲಿಯವರು ವಶಪಡಿಸಿಕೊಂಡಿರುವ ಅನೇಕ ಪ್ರಾಂತಗಳಲ್ಲಿ ಪ್ರಜೆಗಳು ದಂಗೆ ಏಳುತ್ತಿರುವರೆಂದೂ ಅಬಿಸೀನಿಯದ ಪರಿಸ್ಥಿತಿಯು ಇನ್ನೂ ಸಂಪೂರ್ಣವಾಗಿ ಹದಗೆಟ್ಟಿಲ್ಲವೆಂದೂ ಅಬಿಸೀನಿಯಾ ಚಕ್ರವರ್ತಿಗಳು ೧೯ನೆಯ ತಾರೀಖಿನ ದಿವಸ ಲೀಗ್ ಆಫ್ ನೇಷನ್ಸ್ ಯೂನಿಯನ್ನಿನಲ್ಲಿ ಮಾಡಿದ ಭಾಷಣದಲ್ಲಿ ಹೇಳಿದರು.

ಚಕ್ರವರ್ತಿಗಳು ತಮ್ಮ ದೇಶದ ಭಾಷೆಯಲ್ಲೇ ಮಾತನಾಡಿದರು. ಲೀಗಿನಲ್ಲಿ ಇನ್ನೂ ಭರವಸೆಯನ್ನಿಟ್ಟುಕೊಂಡಿರುವೆವೆಂದು ತಮ್ಮ ಮನೋಭಿಪ್ರಾಯವನ್ನು ತಿಳಿಸಿದರು.

ಮುಸ್ಸೋಲಿನಿಯು ಎಷ್ಟೇ ಕೂಗಿಕೊಂಡರೂ, ಅವನಿಷ್ಟೇ ಬುದ್ಧಿವಂತನಿಯಲ್ಲಿ ತನ್ನ ವಿಜಯೋನ್ಮತ್ತತೆಯನ್ನು ಹೇಳಿಕೊಂಡರೂ ಶೋಭಿಸುವುದಿಲ್ಲವೆಂದೂ, ಸರ್ವಜಗತ್ತೇ ಅವನ ಉನ್ಮತ್ತನದವನ್ನು ಅಪಮಾನಕರವಾದ ತ್ತಿದೆಯೆಂದೂ ಆತನ ಕ್ರೌರ್ಯ ಮತ್ತು ಅನ್ಯಾಯದ ಬಗ್ಗೆ ತನ್ನ ದ್ವೇಷವನ್ನು ವ್ಯಕ್ತಪಡಿಸಿದೆಯೆಂದೂ, ಬಂದು ಅಧ್ಯಕ್ಷತೆಯನ್ನು ವಹಿಸಿದ್ದ ಪ್ರೊ|| ಗಿಲ್ಬರ್ಟ್ ಮರ‍್ರೆಯವರು ಹೇಳಿದರು.

ಅಬ್ಸೀನಿಯಾ ಚಕ್ರವರ್ತಿಗಳ ಭೇಟಿಗೆ ಸಾರ್ವಭೌಮರ ಸಹೋದರರು ದಯಮಾಡಿಸಿದ್ದರು

ಸಾರ್ವಭೌಮ ಎಂಟನೆಯ ಎಡ್ವರ್ಡ್ ಪ್ರಭುಗಳ ಸಹೋದರರಾದ ಗ್ಲಾಸ್ಟರಿನ ಡ್ಯೂಕರು ೧೦ನೇ ತಾ|| ದಿವಸ ರಾತ್ರಿ ಅಬಿಸೀನಿಯಾ ಚಕ್ರವರ್ತಿಗಳ ಮನೆಗೆ ದಯಮಾಡಿಸಿ, ತಮ್ಮ ಪ್ರಥಮ ಪರಿಚಯವನ್ನು ಪ್ರಥಮ ಮಾಡಿಕೊಂಡರು. ಇತ್ತೀಚೆಗೆ ಕೆಲವುವರ್ಷಗಳ ಹಿಂದೆ ಅಡಿಸ್ ಅಬಬಾದಲ್ಲಿ ಚಕ್ರವರ್ತಿಗಳ ಕಿರೀಟಧಾರಣ ಮಹೋತ್ಸವವು ನಡೆದ ಸಂದರ್ಭದಲ್ಲಿ ಗ್ಲಾಸ್ಟರಿನ ಡ್ಯೂಕರು ಅಬಿಸೀನಿಯಾಕ್ಕೆ ಸಾರ್ವಭೌಮ ಜಾರ್ಜರವರ ಪ್ರತಿನಿಧಿಗಳಾಗಿ ದಯಮಾಡಿಸಿದ್ದರು.

ಕಾಮನ್ಸ್ ಸಭೆಗೆ ಅಬಿಸೀನಿಯಾ ರಾಜಕುಮಾರಿ

ಅಬಿಸೀನಿಯಾ ಚಕ್ರವರ್ತಿಗಳ ಜೊತೆಯಲ್ಲಿ ಲಂಡನ್ನಿಗೆ ದಯಮಾಡಿಸಿದ ಅವರ ಪುತ್ರಿ ರಾಜಕುಮಾರಿಯವರು ಈ ದಿನ ಕಾಮನ್ಸ್ ಸಭೆಗೆ ದಯಮಾಡಿಸಿದ್ದರು. ಸಭೆಯ ಮುಖ್ಯ ಸದಸ್ಯರೊಬ್ಬರು ಅವರಿಗೆ ಪಾರ್ಲಿಮೆಂಟ್ ಭವನದ ಎಲ್ಲಾ ಭಾಗಗಳನ್ನೂ ತೋರಿಸಿದರು. ಪ್ರಶ್ನೋತ್ತರಗಳ ಸಮಯದಲ್ಲಿ ರಾಜಕುಮಾರಿಯು ಮಹಿಳೆಯರ ಗ್ಯಾಲರಿಯಲ್ಲಿ ಕುಳಿತಿದ್ದರು.

[3ನೇ ಪುಟದಿಂದ ಮುಂದುವರಿದುದು]

[illegible]

ಕೋರ್ಟಿಗೆ ಹೋಗುವುದು ಅಥವಾ [illegible]

[illegible]

(ಸಶೇಷ)

ಶ್ರೀ ಮಲ್ಲಿಕಾರ್ಜುನ [illegible]

ಎಂಥವರಿಂದ ಮತೋದ್ಧಾರವಾಗುವದು ?

(ಬಸವನ—[illegible])

[illegible]

ಕಾರ್ಯಮಾಡುವ ಆಧಾರ್ತರನ್ನು [illegible]

[illegible]

...ಧಿಸುವವರೂ ಅವಶ್ಯ, ಇಂಥವರ ಒಳಗಣ್ಣು ತೆರೆಯುವಂತೆ [illegible] ...ಕಲ್ಪಡುವವು. ಮಠೋದ್ಧಾರದ ಈ ಮಹತ್ಕಾರ್ಯದ [illegible] ...ನ್ನು ಹೊಂದಬೇಕಾದವರು ಆ ಮತತತ್ತ್ವಗಳನ್ನು ಅತ್ಯ... [illegible] ಪಾಲಿಸಬೇಕಾಗುತ್ತದೆ. ಮತತತ್ತ್ವದ ವಿರುದ್ಧವಾಗಿ ...ಒಪ್ಪರಾದ ಸ್ವಪ್ರತಿಷ್ಠೆಗೆ ಇಂಥವರು ಮಠಾಧಿಕಾರಿಗಳಾಗಿ ...ಮಿಸತಕ್ಕ ಇಂಥವರ ಪ್ರಸ್ತಾಪದ ದೇಹತ್ಯಾಗ... ...ನ್ನು ಹೊಂದಿರಲು ಸಾಕ್ಷಾತ್ ಶಿವಾನುಗ್ರಹದ ... ...ಬೇಕು. ಶಿವನ [illegible] ...ವೀರಶೈವಮತದ ವಿಷಯ... ...ಪತಿನವ [illegible] ಈ ...ತತ್ತ್ವ [illegible] ...ಪ್ರಸ್ತುತಕಾಲದಲ್ಲಿ ಪ್ರಸ್ತಾಪದ ಈ ಮತದ [illegible] ...ಪೂರೈಸಲು [illegible] ...ಪ್ರವರ್ತಿಸುವವರು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ

ನಂ. 70 ಚಿಕ್ಕಪೇಟೆ, ಬೆಂಗಳೂರು ಸಿಟಿ

ಸ್ವೀಕಾರ

ಕುಣಿಗಲ್ ತಾಲ್ಲೂಕ್ [illegible] ಮ॥ ರಾ॥ ನಿರಂಜನಪ್ಪನವರ ಪುತ್ರಿ ಚಿ॥ ಸೌ॥ [illegible] ಎಂಬ ಕನ್ಯೆಯನ್ನು ಮ॥ ರಾ॥ [illegible]ಪ್ಪನವರ ಪುತ್ರ ಚಿ॥ ತೋಂಟದಾರ್ಯರೆಂಬ ವರನಿಗೆ ಕೊಟ್ಟು ತಾ॥ ೧೭-೫-೩೬ ರಲ್ಲಿ ನಡೆಸಿದ ವಿವಾಹ ಮಹೋತ್ಸವಕಾಲದಲ್ಲಿ ವಧುವಿನ ಕಡೆಯಿಂದ ಒಂದು ರೂಪಾಯಿ ವರನ ಕಡೆಯಿಂದ ಎರಡು ರೂಪಾಯಿ ಒಟ್ಟು ಮೂರು ರೂಪಾಯಿಗಳು ಕುಣಿಗಲ್ ದೇಶದ ಶೆಟ್ಟರು ಮ॥ ರಾ॥ [illegible]ಪ್ಪನವರ ಯಜಮಾನಿಕೆ ಮತ್ತು ಮ॥ ರಾ॥ [illegible] ರುದ್ರಪ್ಪನವರು [illegible] ಸಿದ್ಧಲಿಂಗಪ್ಪನವರು ಇವರ ಮೂಲಕವಾಗಿ ಬಂದಿವೆ ರೂ 3 0 0

ಈ ಹಣಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದೆ

ಬೆಂಗಳೂರು ಸಿಟಿ, ವಿ. ಚನ್ನಯ್ಯ, ಬಿ.ಎ., ಬಿ.ಎಲ್.,
ತಾ॥ ೨೩-೫-೩೬ ಸೆಕ್ರೆಟರಿ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

[illegible] ಪ್ರತಿವರ್ಷ [illegible] ಶಿಷ್ಯರ ಮನೆಗಳಿರುತ್ತಿದ್ದು [illegible] ...ಪರ್ಯಟನೆಯ ಮತ್ತು ಪರ್ಯಾಯ [illegible] ಶಿಷ್ಯರ [illegible] ...ಡುತ್ತಿರುವರು. ಅವರು ತಮ್ಮ ಶಿಷ್ಯರ ಊರುಗಳ [illegible] ಪುಸ್ತಕದಲ್ಲಿ [illegible] ...ಪುತ್ರ [illegible] ಈ ಆವಶ್ಯಕತೆಯನ್ನು [illegible] ...ಗೊತ್ತಿಲ್ಲದೆ ಬೇರೆಬೇರೆ ಇದನ್ನು [illegible] ಪುಸ್ತಕವನ್ನು [illegible] ...ಪ್ರಜ್ಞಾಪಿಸುತ್ತೇವೆ. ಇದರಲ್ಲಿ ಬರುವ [illegible] ...ಗಳನ್ನು ತೋರಿಸಲ್ಪಟ್ಟಿವೆ. ಆದುದರಿಂದ ಈ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ [illegible] ...ತಿಳಿಸಿದಂತೆ ವಿವರವನ್ನೆಲ್ಲಾ ಬಹು ಸಾವಧಾನವಾಗಿ ...ಕೊಳ್ಳಬೇಕು. ಇದಕ್ಕಾಗಿ [illegible] ...ವಾದ ಕಾಗದ ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧ ಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರವಾಗಿಸಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಹೊಳೆಯುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಕಾಶಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೬೨ ಪುಟಗಳಾಗಿವೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಸಂತೋಷಪೂರ್ವಕವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಂಡಿತರನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ಮುದ್ರಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೬೭ ಪುಟಗಳುಳ್ಳದ್ದಾಗಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಸುಜ್ಞಾನಕತೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೩ ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೨ ರೂ.** ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಐಂಫೆಸ್ತು ಅವತರಣಿಕೆಗಳಿಂದ ಕೂಡಿದ ಫೋಟೋ ಸೈಜು ೨೦ × ೨೪ ಬೆಲೆ ಒಂದಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಕಲ್ಯಾಣಕ್ಕಾಗಿ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಸದ್ಯಃ ಶಿವಾರಾಧನಾಪರರಾದ [illegible] ಉಪಾಧ್ಯರು [illegible] ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ಒಂದಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೭ ಬೆಲೆ ಒಂದಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನ ಮೇರೆಗೆ ಏಕಕಾಲದಲ್ಲಿಯೇ ಮೂರು ಕೋಟಿ ಸುವರ್ಣದವನ್ನು ಧಾರಣಮಾಡಿ ಮೂರು ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಒಂದು	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನಿ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು [illegible] ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ಒಂದಕ್ಕೆ	೦—೨—೯
ಶ್ರೀ ಜಗದ್ಗುರು [illegible] ರವರ ಪಾದ್ಯಪೂಜೆ [illegible] ಅತ್ಯಂತ ಸುಂದರವಾದ ಫೋಟೋ ಒಂದಕ್ಕೆ	೦—೦—೯
ಶ್ರೀ ಜಗದ್ಗುರು [illegible] ಪೀಠದ ಪಾದ್ಯಪೂಜೆ ಅತ್ಯಂತ ಸುಂದರವಾದ ಫೋಟೋ ಒಂದಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಂದಕ್ಕೆ	೦—೦—೯
ಶ್ರೀ ಜಗದ್ಗುರು ಕಾಶೀ ಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು [illegible] ಧರ್ಮಸಭೆಯ ಸುಂದರ ಫೋಟೋ	೦—೦—೯
ಹಿಮವತ್ಕೇದಾರದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—[illegible] ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸಲಾಗುವುದಿಲ್ಲ. [illegible] ಮೇಲೆ ದೊರೆಕೆ [illegible] ಆಣೆ [illegible] ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಮೈಸೂರು

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಸೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು. ಜಲರೋಗ ಮುಂತಾದ ವ್ಯಾಧಿಗಳು ಕಡಿಮಾದರಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ [illegible] ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾನಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಯೋಗ್ಯವಾಗಿ ಉಪಯೋಗಿಸುತ್ತಾರೆ. ಮಾದರಿ [illegible] ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ ೦ ೮ ೦ ವಿ ಪಿ ೦ ೮ ೨ ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ ಪಿ ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[1.] ಪೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರ ಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮನಿವರ್ತ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ [illegible] (೨ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ವಿವಾಹ ವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯರಗಳೆ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವತತ್ತ್ವವಿಲಾಸ	೨ ಆಣೆ
ಶ್ರೀಗುರು ತತ್ತ್ವಪ್ರಸಂಗ	೨ ಆಣೆ
ಗುರುಸ್ವರೂಪತತ್ತ್ವನಿರೀಕ್ಷೆ	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯ ಶತಕ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ವೀರಶೈವಾಚಾರನಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಸನ್ಯಾಸಾಶ್ರಮನಿವರ್ತನ ತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೪ ಆಣೆ
ವೈದಿಕಮಹಿಮಾರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे
Speeches by Pandit Shri Kashinatha Shastri (*English*)	12 As
ವೀರವ್ರತರತ್ನ (೪ನೆಯ ಆವೃತ್ತಿ)	೧೨ ಆಣೆ
ವೈದಿಕಶಿವಪೂಜಾವಿಧಿ ([illegible])	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರ [illegible]	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯ ಕೃತ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಶಿವಾಂಥರ್ವೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಟೀಕಾಸಹಿತ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತದ ಗಜರಿ ([illegible])	೮ ರೂ
लिंगधारणचंद्रिका (संस्कृत)	३ रु
महानारायणोपनिषत् (वीरशैवभाष्य-संस्कृत)	१ रु
वीरशैवेंदुशेखर (संस्कृत)	१ रु

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ನಯ್ಯಾಜರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಪಂಡಿತ ಶಿ॥ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಸೀರಾದಿಶಾನ್ । ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ॥
ಪಂಚಾಚಾರನಿಯಾಮಕಾನ್ ಪ್ರವಿಲಸತ್ಪಂಚಾಕ್ಷರೀಬೋಧಕಾನ್ । ಪಂಚಾಚಾರ್ಯಜಗದ್ಗುರೂನ್ ಗುರುವರಾನ್ ಪಾಲಿಷ್ಟ್ರುವೀಕ್ಷೇ ಕೇವಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ ೧೧ ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೩ ರೂ ೮ ಆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ನೇ ಜೂನ್ ೧೯೩೬ [ಸಂಚಿಕೆ ೯

ನೂತನಪುಸ್ತಕ! ಉಚಿತ!

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರ

ಎಂಬ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವನು ಅವಶ್ಯವಾಗಿ ಓದಿಯೇ ತೀರಬೇಕು ಶ್ರೀಜಗದ್ಗುರು ಪಂಚಾಚಾರ್ಯರು ಲಿಂಗಾವತಾರಿಗಳಾಗಿ ಮತಸ್ಥಾಪನೆಯನ್ನು ಹೇಗೆ ಮಾಡಿರುವರೆಂಬ ಅಮೋಘವಾದ ವಿಷಯವು ಈ ಗ್ರಂಥದಲ್ಲಿ ಶಿವಾಗಮಾದಿ ಪ್ರಬಲಪ್ರಮಾಣಗಳೊಡನೆ ಐತಿಹಾಸಿಕದೃಷ್ಟಿಯಿಂದ ಪರಿಶೋಧಿಸಿ ಬರೆಯಲ್ಪಟ್ಟಿದೆ. ಈ ಗ್ರಂಥವನ್ನು ಕೇವಲ ಪ್ರಚಾರಕ್ಕಾಗಿ ಪ್ರಕಟಿಸಿರುವುದರಿಂದ ೧ ಆಣೆ ಪೋಸ್ಟ್ ಟಿಕೇಟ (ಸ್ಟಾಂಪ) ನ್ನು ಕಳುಹಿಸಿದರೆ, ೪ ಪುಸ್ತಕಗಳನ್ನು ಉಚಿತವಾಗಿ ಕಳುಹಿಸುತ್ತೇವೆ. ಅತಿಶೀಘ್ರ ಟಿಕೇಟು (ಸ್ಟಾಂಪ)ನ್ನು ಕಳುಹಿಸಿ ಪುಸ್ತಕಗಳನ್ನು ಪಡೆಯಿರಿ

ಪಂಚಾಕ್ಷರಶಾಸ್ತ್ರಿಗಳು ಹಿರೇಮಠ,

ಪೋ॥ ಶಿರೋಳ ನರಗುಂದ, ಡಿ॥ ಧಾರವಾಡ

ಒಳದೇಶದ ವೃತ್ತಾಂತಗಳು.

ಬೆಂಗಳೂರಿನ ಭಾರೀ ಮರದ ವ್ಯಾಪಾರಿಗಳಾಗಿದ್ದ ಗೋವಿಂದರಾವ್ ಸಿಂಧ್ಯೆ ಎಂಬುವರು ಕಳೆದ 13 ನೆಯ ತಾರೀಖು ಶನಿವಾರ ರಾತ್ರಿ ಆತ್ಮಹತ್ಯೆಮಾಡಿಕೊಂಡರೆಂದೂ, ಹಣದ ಮುಗ್ಗಟ್ಟೇ ಇದಕ್ಕೆ ಕಾರಣವಾಗಿರಬೇಕೆಂದೂ ಊಹಿಸಲಾಗಿದೆ

ಯಡತೊರೆ ತಾಲ್ಲೋಕು ಗಳಿಗೆಕೆರೆ ಎಂಬಲ್ಲಿ ವಿಲೇಜ್ ಪಂಚಾಯಿತಿಯವರು ಸಾರ್ವಜನಿಕ ಉಪಯೋಗಕ್ಕೆಂದು ಒಂದು ಭಾವಿಯನ್ನು ತೋಡಿಸುತ್ತಿರುವಾಗ ಚಿನ್ನದ ಮರುಗಳಿರುವ ಒಂದು ವಿಧವಾದ ಕಲ್ಲು ಸಿಕ್ಕಿರುವುದನ್ನು ಪರೀಕ್ಷಿಸಿದ ಭೂಶಾಸ್ತ್ರಜ್ಞರು ಅಲ್ಲಿ ಚಿನ್ನವಿರುವುದೆಂದು ಅಭಿಪ್ರಾಯಪಟ್ಟಿರುತ್ತಾರೆ

ಕಳೆದ ಸೋಮವಾರ ಮೈಸೂರು ಇರ್ವಿನ್ ರಸ್ತೆಯಲ್ಲಿ ವಾಣಿವಿಲಾಸ ಆಸ್ಪತ್ರೆಯ ವಾಯವ್ಯದಿಕ್ಕಿಗೆ ...000 ರೂ ಗಳ ಖರ್ಚಿನಿಂದ ಕಟ್ಟಲ್ಪಡುವ ಡಿಸ್ಟ್ರಿಕ್ಟ್ ಬೋರ್ಡ್ ಕಟ್ಟಡದ ಶಂಕುಸ್ಥಾಪನೆಯನ್ನು ಶ್ರೀಮನ್ಮಹಾರಾಜರ ಪರವಾಗಿ ಅವರ ಮಕ್ಕಳಾದ ಶ್ರೀಜಯಚಾಮರಾಜ ಒಡೆಯರವರು ನೆರವೇರಿಸಿದರು

ಅರಮನೆಯ ದರ್ಬಾರ್‌ಬಕ್ಷಿಯವರ ಸ್ಥಾನವು ಶ್ರೀ ಕಾನ್ ಬಿಚ್ ಲಿಂಗರಾಜ ಅರಸಿನವರ ನಿಧನದಿಂದ ಖಾಲಿಯಾಗಿರುವುದು ಸರಿಯಷ್ಟೆ ಆ ಸ್ಥಾನಕ್ಕೆ ಈ ವ್ಯಕ್ತಿ ಯಾರನ್ನೂ ನೇಮಿಸುವುದಿಲ್ಲವೆಂದೂ, ಶ್ರೀಮನ್ಮಹಾರಾಜರವರ ಅಸಿಸ್ಟೆಂಟ್ ಸೆಕ್ರೆಟರಿಯವರಾದ ರಾಯುತ ಎಂ ರಾಮರಾಯರೇ ಒಕ್ಷಿಯವರ ಕೆಲಸವನ್ನು ನೋಡಿಕೊಳ್ಳುವರೆಂದೂ ತಿಳಿಬಂದಿದೆ.

ಮುನಿಸಾಮಿ ಅಲಿಯಾಸ್ ಕೆಂಪನೆಂಬುವನು ಯಶವಂತಪುರದಬಳಿ, ಜಾಲಹಳ್ಳಿ ಪೀಣ್ಯಾ ಮುಂತಾದ ಹಳ್ಳಿಗಳಿಗೆ ಹೋಗಿ ಅಲ್ಲಿ ರೈತರಿಗೆ ತಾನು ಪೋಲೀಸ್ ಆಫೀಸರ್ ಎಂಬುದಾಗಿ ಹೇಳಿ ಅವರಿಂದ ಒಂದಿಷ್ಟು ಹುಲ್ಲು ದವಸ ಇವೇ ಮೊದಲಾದುವನ್ನು ಪಡೆದು ಮೋಸಮಾಡಿದನೆಂದು ತಿಳಿದು ಮಲ್ಲೇಶ್ವರದ ಪೋಲೀಸಿನವರು ಆಸಾಮಿಯನ್ನು ಯಶವಂತಪುರದ ಬಳಿ ದಸ್ತಗಿರಿ ಮಾಡಿ ಅವನ ಮೇಲೆ ಮೊಕದ್ದಮೆ ಹೂಡಿರುತ್ತಾರೆ

ಸಕಲೇಶಪುರದ ದೇವಸ್ಥಾನದ ಶಿಲಾಸ್ತಂಭವೊಂದರಲ್ಲಿ ವಿಶ್ವೇಶ್ವರನ ವಿಗ್ರಹವು ಉದ್ಭವಿಸಿ ಬೆಳೆಯುತ್ತಿದೆಯಂತೆ ಈಗ ಸುಮಾರು 80 90 ವರ್ಷಗಳ ಹಿಂದೆ ಶೃಂಗೇರಿ ಸ್ವಾಮಿಗಳು ಅಲ್ಲಿಗೆ ಆಗಮಿಸಿದ್ದಾಗ ಆ ಕಂಭದಮೇಲೆ ಗಣಪತಿಯಾಕಾರದ ಕೆಲವು ಗೆರೆಗಳನ್ನು ಒರೆದರೆಂದೂ, ಅಂದಿನಿಂದಲೂ ಆ ಗೆರೆಗಳನುಸರಿಸಿ ವಿಗ್ರಹವು ಬೆಳೆದು ಕಾಣುತ್ತಿರುವುದಾಗಿಯೂ, ಅಲ್ಲಿ 30 ವರ್ಷಗಳಿಂದ ಪೂಜೆಮಾಡುತ್ತಿರುವ ಭಟ್ಟರ ಹೇಳಿಕೆಯಂತೆ 30 ವರ್ಷಗಳ ಹಿಂದೆ ಗಣಪತಿಯ ಹೊಟ್ಟೆಯೊಂದು ಮಾತ್ರ ಕಾಣುತ್ತಿತ್ತೆಂದೂ, ಈಗ ಆಕಾರವೆಲ್ಲವೂ ಪೂರ್ತಿ ಕಾಣುತ್ತದೆಯೆಂದೂ ಹೇಳುತ್ತಾರೆ ಇದನ್ನು ನೋಡಲು ಭಕ್ತಾದಿಗಳು ಅಲ್ಲಿಗೆ ಹೋಗುತ್ತಿರುವರು

ರಾಜಧಾನಿಯ ಶ್ರೀವೈಷ್ಣವಬ್ರಾಹ್ಮಣರೊಬ್ಬರ ಮಗಳು ಅಮೃತಮ್ಮನೆಂಬಾಕೆಯು ಕಳೆದರಡು ವಾರಗಳಿಂದ ಮನೆಬಿಟ್ಟು ಪರಾರಿಯಾಗಿದ್ದವಳು ಅದೇ ಮನೆಯ ಮುಂಭಾಗದಲ್ಲಿ ಕಳೆದ 10 ವರ್ಷಗಳಿಂದ ಬೀಡಿಅಂಗಡಿ ಇಟ್ಟುಕೊಂಡಿರುವ ಸಮ್ಮತ್ ಸಾಬ್ ಎಂಬವನ ಮನೆಯಲ್ಲಿ ಗಂಡುಶಿಶುವನ್ನು ಪ್ರಸವಿಸಿ ಸುಖವಾಗಿರುವಳೆಂದು ತಿಳಿದುಬಂದಿದೆ ಈ ವಿಷಯದಲ್ಲಿ ಮಾತುಕತೆ ನಡೆಯಲು ಪ್ರಾರಂಭವಾಗಲು ಅಮೃತಮ್ಮನಿಗೆ ಕೋಪಬಂದು ತನ್ನ 9 ದಿನದ ಮಗುಸಮೇತ ಕೋರ್ಟಿಗೆ ಬಂದು ತನಗೂ ಸಮ್ಮತುಸಾಬಿಗೂ ಕಳೆದೊಂಬತ್ತು ವರ್ಷಗಳಿಂದ ಸ್ನೇಹವಿದ್ದು ಕೊನೆಗೆ ಪ್ರೇಮದಲ್ಲಿ ಪರಿಣಮಿಸಿತೆಂದೂ, ತಾನು ಅವನಿಂದ ಮಗುವನ್ನು ಪಡೆದುದಾಗಿಯೂ ಹೇಳಿ ತನ್ನ ಮತ್ತು ಅವನ ಪ್ರಾಣಮಾನಗಳನ್ನು ರಕ್ಷಿಸಬೇಕೆಂದು ಪ್ರಾರ್ಥಿಸಿ ಅರ್ಜಿಕೊಟ್ಟಿರುವಳು ಕೋರ್ಟಿಗೆ ಬಂದಾಗ ಆ ಯುವತಿಯು ಮುಸಲ್ಮಾನಉಡುಪನ್ನು ಧರಿಸಿದ್ದಳಂತೆ

ಸ್ವೀಕಾರ

ಶಿವಮೊಗ್ಗಾ ಡಿ॥ ಹಾರನಹಳ್ಳಿಯಲ್ಲಿರುವ ಮ॥ ರಾ॥ ಸಾ॥ ಜೆನವಳ್ಳಿ ಲಿಂಗಪ್ಪನವರು ಚನ್ನಗಿರಿ ತಾಲೂಕು ಹೆಬ್ಬಳಗೆರೆ ಮ॥ ರಾ॥ ಶೆಟ್ಟರ ಮಹಾದೇವಪ್ಪನವರ ರುದ್ರಪ್ಪನವರ ಪುತ್ರ ಚಿ॥ ಸ॥ ಬಸವಪ್ಪನನ್ನು ದತ್ತಪುತ್ರನನ್ನಾಗಿ ಸ್ವೀಕರಿಸಿದ ಸಮಾರಂಭಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ವೇ॥ ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ

ಹೆಂಗಸರು ಗಂಡಸರಾಗುತ್ತಿರುವರು

ಆಪರೇಷನ್ನಿನ ಮೂಲಕ ಹೆಂಗಸರು ಗಂಡಸರಾಗುತ್ತಿರುವ ನಿದರ್ಶನಗಳು ದಿನೇ ದಿನೇ ಹೆಚ್ಚುತ್ತಿವೆ. ಸ್ಮಿಮತ್ ಎಂಬಲ್ಲಿ ಮಾರ್ಕ್ ವೆಸ್ಟನ್ ಎಂಬುವನು ಈ ರೀತಿಯಾಗಿ ಹೊಸದಾಗಿ ಗಂಡಸಾದನು ಈತನಿಗೆ ೨ ಸಾರಿ ಆಪರೇಷನ್ ಆಯಿತು ಮಿಸ್ ಜೋರ್ಲತ್ರೂ ಎಂಬ ಮತ್ತೊಬ್ಬ ವ್ಯಕ್ತಿಗೆ ಒಂದೇ ಆಪರೇಷನ್ನಿನಲ್ಲಿ ಗಂಡಸಾಗಲು ಅವಕಾಶವಾಯಿತೆಂದು ತಿಳಿದುಬರುತ್ತದೆ

ಹುಡುಗಿಯ ಹಿಮ್ಮೆಟ್ಟದ ಸಾಹಸ

ಸಂದೀಪುರ ಎಂಬ ಗ್ರಾಮದಿಂದ ಮೂರು ಭೀಷಣ ಕೊಲೆಗಳ ವಿವರಗಳು ಬಂದಿವೆ ದಸ್ತಾ ಎಂಬಲ್ಲಿಂದ ಹೊಸದಾಗಿ ಲಗ್ನವಾದ ವಧೂವರರಿಬ್ಬರು ಇಲ್ಲಿಗೆ ಬರುತ್ತಿದ್ದರು ದಾರಿಯಲ್ಲಿ ಆಯಾಸವಾದುದರಿಂದ ಒಂದು ಮರದ ಕೆಳಗೆ ಕುಳಿತು ವಿಶ್ರಮಿಸಿಕೊಳ್ಳಲಾರಂಭಿಸಿದರು ಸ್ವಲ್ಪ ನೀರನ್ನು ತರುವುದಾಗಿ ಹೇಳಿ ಗಂಡನು ಬಳಿಯಲ್ಲೇ ಕಾಣುತ್ತಿದ್ದ ಒಂದು ಭಾವಿಗೆ ಹೋದನು ಭಾವಿಯ ಬಳಿಯಲ್ಲಿದ್ದ ಕೆಲಸದು ಪಕ್ಕದಲ್ಲಿದ್ದ ಒಂದು ಮನೆಯನ್ನು ತೋರಿಸಿ “ ಅಲ್ಲಿಂದ ಒಂದು ಮಡಕೆಯನ್ನು ತೆಗೆದುಕೊಂಡು ಒಂದು ನೀರು ಸೇದಿಕೋ ” ಎಂದು ಹೇಳಿದರು ಆತನು ಅದೇ ಪ್ರಕಾರ ಆ ಮನೆಗೆ ಹೋದನು ತಕ್ಷಣವೇ ಮನೆಯಲ್ಲಿದ್ದವನೊಬ್ಬನು ಹಾರಿಬಂದು ಕೃಪಾಣಿನಿಂದ ಇವನ ತಲೆಯನ್ನು ಹಾರಿಸಿಬಿಟ್ಟನು ತರುಣಪತ್ನಿಯು ಗಂಡನಿಗಾಗಿ ಬಹಳ ಹೊತ್ತು ಕಾದು ಅವನು ಬರದಿರಲು ತಾನೇ ಅವನನ್ನು ಹುಡುಕಿಕೊಂಡು ಹೊರಟಳು ಅವಳ ಗಂಡನು ಆ ಮನೆಯಲ್ಲಿ ಹೋದುದಾಗಿ ಕೆಲಸದು ಹೇಳಿದರು ಆಕೆಯು ಅದೇ ಪ್ರಕಾರ ಮನೆಯೊಳಗೆ ಹೋಗಿ ರಕ್ತದ ಮಡುವಿನಲ್ಲಿ ಗಂಡನು ತಲೆಕತ್ತರಿಸಲ್ಪಟ್ಟು ಬಿದ್ದಿರುವುದನ್ನು ನೋಡಿದಳು ಕೂಡಲೇ ಆಕೆಯು ಮನೆಯ ಬಾಗಿಲನ್ನು ಹಾಕಿಕೊಂಡುಬಿಟ್ಟಳು ಭಾವಿಯ ಬಳಿಯಲ್ಲಿದ್ದವರು ಬಂದು ‘ ಬಾಗಿಲನ್ನು ತೆಗೆ ’ ಎಂದರು ಆದರೆ ಆಕೆಯು ಮಾತಾಡಲಿಲ್ಲ ಅವರ ಮೇಲೆ ಮನೆಯವನೊಬ್ಬನು ಪಕ್ಕದ ಗೋಡೆಯಲ್ಲಿ ತೂತುಮಾಡಿ ಒಳಗೆ ತಲೆಹಾಕಿದನು ಕೂಡಲೇ ಆ ಹುಡುಗಿಯು ಧೈರ್ಯತಂದುಕೊಂಡು ಒಳಯಲ್ಲಿದ್ದ ಮಚ್ಚಿನಿಂದ ಅವನ ತಲೆಯನ್ನು ಕತ್ತರಿಸಿ ಅವನ ಮುಂಡವನ್ನು ಒಳಗೆಳೆದುಕೊಂಡಳು ಅನಂತರ ಒಳಗೆ ತಲೆಹಾಕಿದ ಇನ್ನೊಬ್ಬನಿಗೂ ಅದೇ ಗತಿಯಾಯಿತು ಗಲಾಟೆಯಾಗಿ ಜನ ಅಸಾಧ್ಯವಾಗಿ ನೆರೆದುಬಿಟ್ಟರು ಮೂರು ಮೃತದೇಹಗಳನ್ನೂ ಪರೀಕ್ಷೆಗೆ ಸಾಗಿಸಲಾಯಿತು ಆ ಹುಡುಗಿಯ ಗಂಡನು ಹಾಕಿಕೊಂಡಿದ್ದ ಅಮೂಲ್ಯ ಸ್ವರ್ಣಾಭರಣಗಳೇ ಈ ಕೃತ್ಯಕ್ಕೆ ಕಾರಣವೆಂದು ಹೇಳಲಾಗಿದೆ ಪೋಲೀಸಿನವರು ಈ ಬಗ್ಗೆ ತನಿಖೆ ನಡೆಸುತ್ತಿದ್ದಾರೆ

ಪತ್ರವ್ಯವಹಾರ

ಬರೆಯುವವರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

ಮಹನೀಯರ ಹಿತೋಕ್ತಿಗಳು

(ಹಿಂದಿನಿಂದ ಮುಂದುವರಿದುದು)

12 ಜನರಿಗೆ ರಕ್ತಸಂಬಂಧಿಗಳಿಗಿಂತಲೂ (ತಂದೆ ತಾಯಿ ಅಕ್ಕತಂಗಿಯರು) ಶರೀರಸಂಬಂಧಿಗಳ (ಹೆಂಡತಿ ಅತ್ತೆಮಾವ ಮೈದುನ ವರ್ಗದವರು) ಮೇಲೆ ಪ್ರೇಮವೂ ಅಭಿಮಾನವೂ ವಿಶೇಷವಿರುವುದು ಲೋಕಸ್ವಭಾವವಾಗಿರುವುದು ಆದರೆ, ಎಲ್ಲರೂ ಹೀಗೆಯೇ ಇರುತ್ತಾರೆಂದು ಹೇಳಲಾಗುವದಿಲ್ಲ! ಕೆಲಜನರು ಹೆಂಡತಿಯು ಮನೆಗೆ ಬಂದ ಸ್ವಲ್ಪಕಾಲದಲ್ಲಿ ಅವಳ ಹಾವಭಾವವಿಲಾಸ ಮೋಹಪಾಶಬದ್ಧರಾಗಿ, ಮಾತಾಪಿತೃಗಳನ್ನೂ ಸಹೋದರಸೋದರಿಯರನ್ನೂ ಕಂಡರೆ ಬಹು ಜುಗುಪ್ಸೆಗೊಳ್ಳುತ್ತಾರೆ ಸ್ತ್ರೀಯಾಜ್ಞಾಪ್ರವರ್ತಕರಾಗಿರಬೇಕೆಂಬುವ ಇವರ ಹವಣಿಕೆ ಇವರು ಪಾಪಭೀತಿಯಿಲ್ಲದ ಮನಸ್ಸಿನ ಮಾತಾಪಿತೃಗಳನ್ನು ಚಿತ್ರವಿಚಿತ್ರವಾಗಿ ಹಿಂಸಿಸಿ ಅನ್ನ ಅನ್ನ ನೀರು ನೀರು ಎನಿಸಿದವರನ್ನೂ ಕಾಲಿನಿಂದ ಒದ್ದವರನ್ನೂ ಕಟುಗರಂತೆ ಪ್ರಾಣಗಳನ್ನು ತೆಗೆದವರನ್ನೂ ಪ್ರತ್ಯಕ್ಷ ಕಾಣಬಹುದು ಪ್ರಿಯಸೋದರನೇ ನಿನ್ನ ದೇಹಧಾರಣೆಗೆ ಕಾರಣೀಭೂತರಾರು? ನಿನಗೆ ರೋಗರುಜಿನಗಳು ಒಂದರೆ, ತಮ್ಮ ಪ್ರಾಣಗಳೇ ಹಾರಿ ಹೋಗುವದೋ ಎಂಬಂತೆ ಕಾತುರರಾಗಿ ಅನ್ನಾಹಾರ ನಿದ್ರಾದಿಗಳ ಪರಿವೆಯೇಯಿಲ್ಲದೆ, ನಿನ್ನನ್ನು ಕಾಪಾಡಿದವರಾರು? ಮತ್ತು ಅನುಕೂಲವಿರಲಿ, ಇಲ್ಲದಿರಲಿ ಸಾಲವನ್ನಾದರೂ ಮಾಡಿ ನಿನಗೆ ಲಗ್ನವನ್ನು ಮಾಡಿದವರಾರು? ನಿನ್ನ ಸುಖಕ್ಕಾಗಿ ಹೊಲ, ಮನೆ, ತೋಟಗದ್ದೆಗಳನ್ನು ಸಂಪಾದಿಸಿದವರಾರು? ನಿನಗೂ ನಿನ್ನ ರಕ್ತಸಂಬಂಧಿಗಳಿಗೂ ಎಷ್ಟು ದಿವಸದಿಂದ ಸಂಬಂಧವಿರುವದು? ನಿನಗೂ ನಿನ್ನ ಶರೀರಸಂಬಂಧಿಗಳಿಗೂ ಸಂಬಂಧವಾಗಿ ಎಷ್ಟು ದಿವಸವಾಗಿರುವುದು? ನಿನ್ನ ತಂದೆತಾಯಿಗಳು ಸಂಪಾದಿಸಿದ್ದರಲ್ಲಿ ಹಿಸ್ಸೆ ದೊರೆಯುವದೋ, ಇಲ್ಲವೇ ಅತ್ತೆಮಾವಂದಿರ ಆಸ್ತಿಯಲ್ಲಿ ಹಿಸ್ಸೆ ಬರುವದೋ ಮತ್ತು ನಿನ್ನನ್ನ ಹೆತ್ತು ಅನೇಕ ಕಷ್ಟನಿಷ್ಠುರಗಳನ್ನು ಸಹಿಸಿ ಸಾಕಿ ಸಲಹಿ ದೊಡ್ಡವನನ್ನಾಗಿ ಮಾಡಿ ಲಗ್ನಮಾಡಿದುದರ ಉದ್ದೇಶವಾದರೂ ಏನು? ಮುಪ್ಪಿನಕಾಲದಲ್ಲಿ ತಮ್ಮನ್ನೂ ಇನ್ನೂ ಶೈಶವಾವಸ್ಥೆಯಲ್ಲಿರುವ ಸೋದರ ಸೋದರಿಯರನ್ನೂ ಕಾಪಾಡಲೆಂದೂ, ತಮ್ಮ ವಂಶದ ಕೀರ್ತಿಲತೆಯನ್ನು ಬೆಳೆಯಿಸಲೆಂದೂ ಇರಬಹುದಲ್ಲವೆ? ನಿಶ್ಚಯ! ನೀನು ಈಗ ನಿನ್ನ ತಂದೆತಾಯಿಗಳನ್ನು ಅನಾದರಣೆಮಾಡಿದರೆ ಮುಂದೆ ನಿನ್ನ ಮಕ್ಕಳು ನಿನಗೂ ಅದೇ ರೂಲನ್ನು ಜಾರೀಮಾಡಬಹುದಲ್ಲವೇ? ವಾಚಕಮಹಾಶಯ! ಆ ಮೋಹಾಂಧಪರೆಯನ್ನು ಸ್ವಲ್ಪ ಸರಿಮಾಡಿ, ಸಾವಧಾನದಿಂದ ಕೂಲಂಕಷವಾಗಿ ನೀನೇ ವಿಚಾರಮಾಡು? ಆಗ ನಿಜಾಂಶವು ನಿನಗೇ ತಿಳಿಯುವದು! ಮೇಲ್ಕಂಡ ವಿಷಯವನ್ನೂ, "ಪಿತನ ನಿಜಗುಣದೆ ತೋರ್ಪನು ಸುತನೇ ಸತತಂ" ಎಂಬ ನೀತಿವಾಕ್ಯವನ್ನೂ ಲಕ್ಷ್ಯಕ್ಕೆ ತಾರದೆ ನಮಗೆ ನಾವೇ ಎಂದು "ಗಂಡಹೆಂಡರು ಜೋಡಾಗಿ" ಬೇರೆ ಒಲೆಗುಂಡು ಹೂಡುವದು ನ್ಯಾಯವೇ? ನೀನೇ ಹೇಳು ನೋಡೋಣ! "ಹಿರಿಯಕ್ಕನ ಚಾಳಿ ಮನೆಯಮಂದಿಗೆಲ್ಲ" ಎಂಬಂತೆ ಈ ದಿವಸ ನೀನು ಹೋದರೆ ನಾಳೆ ನಿನ್ನ ತಮ್ಮ, ಅನಂತರ ಇನ್ನೊಬ್ಬ ಹೀಗೆ ಎಲ್ಲರೂ ಹೊರಬಿದ್ದರೆ ನಿಮ್ಮ ತಂದೆ ತಾಯಿಗಳ ಗತಿಯೇನು? ಅಧೋಗತಿಯೇ ಅಲ್ಲವೆ! ಗಂಡನ ಮನೆಗೆ ಆದೇ ಬಂದ ಹೊಸಬಿಸಿಯಲ್ಲಿ ಗಂಡ, ಅತ್ತೆ, ಮಾವ, ಭಾವ ಇವರ ಮುಂದೆ ನಿಲ್ಲಲಾರದೆ, ಕೇವಲ ಲಜ್ಜಾಭಯಗಳ ಮುದ್ದೆಯಂತೆಯೂ, ವಿನಯದ ಪುತ್ಥಳಿಯಂತೆಯೂ. ಮಾತಾಡಲಿಕ್ಕೂ ಸಹ ಬಾರದ ಮೌನದ ಗೊಂಬೆಯೋ ಏನೋ ಎಂಬಂತೆ ಮೌನವನ್ನು ತಾಳಿ ಮನೋಹರವಾಗಿ ತೋರುತ್ತಿದ್ದ ಕೆಲ ಹೆಂಗಸರು ಬರಬರುತ್ತ ತಲೆಮಾಸಿ ಕುಳಿತು ಬಡಾರಿಗಳಾಗಿ ಹುಟ್ಟಿದ ಮನೆಯ, ಹೊಕ್ಕಮನೆಯ ಗೌರವವನ್ನೂ ಲೆಕ್ಕಿಸದೆ ಮನಬಂದಂತೆ ಬಾಯಿಹರಿಬಿಟ್ಟು ಮಾತಾಡುತ್ತಿರುವದನ್ನು ನೋಡಿದರೆ ಆಶ್ಚರ್ಯವಾಗುವದಿಲ್ಲವೆ? 'ಬೇಲಿ ಎದ್ದು ಹೊಲ ಮೇದಂತೆ' ನೀನೇ ನಿನ್ನ ರಕ್ತಸಂಬಂಧಿಗಳಮೇಲೆ ತಿರುಗಿಬಿದ್ದರೆ ಅಜ್ಞಾನಿಗಳಾದ ಹೆಂಗಸರನ್ನು ಕೇಳಬೇಕೆ? ಎಷ್ಟಾಗಲಿ ಹೆಂಗಸರ ಬುದ್ಧಿ ಮೊಳಕಾಲ ಕೆಳಗೆ! ಆಯ್ಯೋ, ಹುಚ್ಚಪ್ಪಗಳಿರಾ! ನಿಮ್ಮ ಮುಸಲಾಗ್ರಬುದ್ಧಿಗೆ ಬೆಲೆ ಎಷ್ಟೆಂದು ಕಟ್ಟೋಣ! ದುರಾಚಾರಿಣಿಯರಾದ ಹೆಂಗಸರಿಗೆ ಸ್ವಲ್ಪ ಅವಕಾಶ ಸಿಕ್ಕರೆ ಸಾಕು! ದಿನಕ ಮೋಣ ಬಯಾನಸ ದವ್ಯಪಾರಕ್ಕೆ ಕೈಹಾಕುವರಲ್ಲದ, ಪ್ರಸಂಗ ಬಂದಾಗ್ಗೆ ಆಹಾ! ಕಾಪುರುಷನೆ! ಭೀರುವೆ! ನಿನ್ನ ವೀರತ್ವವು ಇದೀಗ ತಿಳಿಯಿತು ಎಂದು ಹುಂಕಾರ ಮಾಡುತ್ತ ನಿನ್ನ ಮಾನಪ್ರಾಣಗಳಿಗೂ ಸಂಚಕಾರ ತರುವುದಕ್ಕೆ ಹೇಸುವದಿಲ್ಲ ಅಂತಃ ಪಾಪಿಯಸೀಯರಿಗೆ ಯದ್ವಾತದ್ವಾ ಸಮಯದಲ್ಲಿ ಸಮುಚಿತವಾದ ಪ್ರತೀಕಾರವನ್ನೆಸಗುವದು ಉಚಿತವಾಗಿರುವದು ಸಾಕ್ಷಾತ್ ನಿನ್ನ ತಂದೆತಾಯಿಗಳನ್ನು ನಿರಾಕರಿಸತಕ್ಕವಳು ನಿನ್ನನ್ನು ಬಿಟ್ಟಾಳೆ? ವಾಚಕಮಹಾಶಯರೆ! ಬೇಕಾದರೆ, ಒಂದಲ್ಲ ಹತ್ತುಜನ ಹೆಂಡರನ್ನು ಯಾವ ದೇಶದಲ್ಲಿಯಾದರೂ, ಎಂತಹ ರೂಪವಂತರನ್ನಾದರೂ, ಎಷ್ಟು ಬೇಕಾದರೂ ಖರ್ಚು ಮಾಡಿ ಸಂಪಾದಿಸಬಹುದು! ಆದರೆ ತಂದೆತಾಯಿ ಮೊದಲಾದ ರಕ್ತಸಂಬಂಧಿಗಳು ಯಾವ ದೇಶದಲ್ಲಿಯಾಗಲಿ, ಎಷ್ಟು ಖರ್ಚುಮಾಡಿದರಾಗಲಿ ಸಿಗಲಾರರೆಂಬುದನ್ನು ಖಂಡಿತವಾಗಿ ತಿಳಿಯಿರಿ ಹಾಗೆ ಸಿಗುವರೆಂದು ಹೇಳುವದಾದರೆ ಗಗನಕುಸುಮಪ್ರಾಯವಾಗುವದು ಯಾವನು ತಂದೆತಾಯಿಗಳೊಡನೆ ದುರ್ವ್ಯವಹಾರಮಾಡುವನೋ ಅವನು ಇಹಜಗತ್ತಿನಲ್ಲಿ ಬಹುಕಷ್ಟಕ್ಕೆ ಗುರಿಯಾಗುವನಲ್ಲದೆ, ಮರಣಾನಂತರ ನಿರಯ ನರಕಯಾತನೆಯನ್ನನುಭವಿಸುವನು ಆದರೆ ಯಾವನು ಮಾತಾಪಿತೃಗಳ ಸೇವೆಯನ್ನು ಶ್ರದ್ಧೆಯಿಂದ ಮಾಡುವನೋ ಅವನಿಗೆ ಇಹಪರಗಳು ಕರತಲಾಮಲಕವಾಗುವುದರಲ್ಲಿ ಸಂದೇಹವೂ ಇಲ್ಲವು! ಪ್ರಿಯ ಬಂಧುಭಗಿನಿಯರೇ! ಯಾರಾದರೂ ನಿಮ್ಮ ತಂದೆತಾಯಿ, ಅತ್ತೆಮಾವ ಇವರಲ್ಲಿ ದುರ್ವರ್ತನೆಯುಳ್ಳವರಾಗಿದ್ದರೆ ನಿಮ್ಮ ನಿಮ್ಮ ದುರ್ನಡತೆಗೆ ಪಶ್ಚಾತ್ತಾಪಪಟ್ಟುಕೊಂಡು ಅವರ ಕ್ಷಮಾಭಿಕ್ಷೆಯನ್ನು ಹೊಂದಿ ಎಲ್ಲರಲ್ಲಿಯೂ ಅನುರಾಗದಿಂದಿದ್ದು ಅವರನ್ನು ಸಂತೋಷಗೊಳಿಸಿ, ಅವರಿಂದ ಶುಭಾಶೀರ್ವಾದ ಪಡೆದು ನೀವು ಬಹುಕಾಲ ಸುಖರೂಪದಿಂದ ಬಾಳಿ ಬದುಕಿರಿ! ನಿಮ್ಮ ಸತ್ಸಂತತಿಯನ್ನು ವೃದ್ಧಿಮಾಡಿಕೊಂಡು ಮನುಷ್ಯರಾಗಿ ಹುಟ್ಟಿದ್ದಕ್ಕೆ ಜನ್ಮ ಸಾರ್ಥಕಮಾಡಿಕೊಳ್ಳಿರಿ! ನೀವು ಸುಖವಾಗಿದ್ದರೆ ಅವರಿಗೂ ಸಂತೋಷ!! ನಮಗೂ ಸಂತೋಷ!!

ಈ ಪ್ರಪಂಚದಲ್ಲಿ ಜನರು ಒಬ್ಬರದನ್ನು ಆಸೆಮಾಡದೆ, ಒಬ್ಬರಿಗೆ ದೈನ್ಯತೆ ತೋರಿಸದೆ, ಒಬ್ಬರ ಆಸ್ತಿ ನೋಡಿ ಅಸೂಯೆ ಪಡದೆ, ತಾವು ಕಷ್ಟಪಟ್ಟು ದುಡಿದು ಗಳಿಸಿದ್ದರಲ್ಲಿ ಸಂತುಷ್ಟರಾಗಿದ್ದು, ತನ್ನ ಬಂಧುಬಳಗದವರಿಗೂ ಲೋಕಕ್ಕೂ ಕೈಲಾದಮಟ್ಟಿಗೆ ಪ್ರೀತಿಪೂರ್ವಕವಾಗಿ ಸಹಾಯಮಾಡಬೇಕು ಮತ್ತು ಮನೆಯಲ್ಲಿ ಅಣ್ಣತಮ್ಮಂದಿರನ್ನು ವಂಚಿಸುವದು ಪಾತಕರವೆಂತಲೂ, ಇಹಪರಗಳಲ್ಲಿ ದುಃಖಕ್ಕೆ ಕಾರಣವೆಂತಲೂ ತಿಳಿದು, ಯಾವುದನ್ನೂ ಗುಪ್ತವಾಗಿಡದೆ, ಯಾರ ಹಕ್ಕನ್ನೂ ಮುಣುಗಿಸದೆ, ಯಾರ ಅವಮಾನವನ್ನೂ ಮಾಡದೆ, ಬಂಧುಪ್ರೇಮದಿಂದ ನಡೆದುಕೊಳ್ಳಬೇಕು ಆದರೆ ಎಷ್ಟೋ ದುರಭಿಮಾನಿಗಳು ತಾವು ಯಜಮಾನರು, ಕೊಡತಕ್ಕವರು ಎಂಬ ಹೆಮ್ಮೆಯಿಂದ ತಾವು ಹೇಳಿದಂತೆ ತಮ್ಮ ಬಂಧುಗಳೂ (ಅಣ್ಣತಮ್ಮಂದಿರು) ಅವರ ಪರಿವಾರವೂ ಕೇಳಬೇಕೆಂತಲೂ. ತಾವು ಕೊಟ್ಟಷ್ಟರಲ್ಲಿ ಸಂತುಷ್ಟರಾಗಿರಬೇಕೆಂತಲೂ, ಇಲ್ಲದ ಹಾಳುಗಾಂಭೀರ್ಯದಿಂದ ಕುಟುಂಬದ ಯಾವಗುಟ್ಟನ್ನೂ ಬಂಧುಗಳಿಗೆ ತಿಳಿಸದೆ, ತಾವು ನುಡಿದದ್ದೇ ಪೂರ್ವಾದಿಕ್ಕೆನ್ನುವಂತೆ ನಡೆಯುವರು ಇವರು ಮನೆತನದ ಆದಾಯವೆಚ್ಚಗಳ ಲೆಕ್ಕವನ್ನಿಡದೆ, ಅದಕ್ಕೆ ಅಷ್ಟು ಖರ್ಚಾಯಿತು, ಇದಕ್ಕೆ ಇಷ್ಟು ಖರ್ಚಾಯಿತು, ಅಲ್ಲಿ ಅಷ್ಟು ಮುಣುಗಿತು, ಇಲ್ಲಿ ಇಷ್ಟು ಮುಣುಗಿತು ಎಂಬ ಅಸಮಾಧಾನಕಾರಕಸ್ಥಿತಿಯನ್ನಷ್ಟುಮಾತ್ರ ಹೇಳುತ್ತ ಪಾಪಭೀತಿಯೂ, ಯಾರ ಲಕ್ಷ್ಯವೂ ಇಲ್ಲದೆ ನಡೆಯುವರು ಇಂಥ ಸ್ಥಿತಿಯಿಂದ ಅವಿಭಕ್ತಕುಟುಂಬಗಳ ಆಯುಃ ಕ್ಷೀಣವಾಗುವದೆಂಬುದನ್ನು ವಾಚಕರು ಮರೆಯಲಾಗದು ಕೂಡಿದ್ದ ಸಹೋದರರಲ್ಲಿ ಒಬ್ಬನ ಮನಸ್ಸಿನಲ್ಲಾದರೂ ಬೇರೆಯಾಗುವ ಇಷ್ಟಬಂದರೆ, ಕಾಲವಿಳಂಬಮಾಡದೆ ಯಜಮಾನನಾದವನು ನ್ಯಾಯರೀತಿಯಿಂದ ಅವರವನ್ನು ಅವರಿಗೆ ಸಂತೋಷದಿಂದ ಕೊಟ್ಟು ಬೇರೆಮಾಡುವದುತ್ತಮವು ಹೀಗೆಮಾಡುವುದರಿಂದ ಪರಸ್ಪರರಲ್ಲಿ ಅಂತಃಕರಣವು ಉಳಿದು, ದುರ್ಲೌಕಿಕವೂ ಹಾನಿಯೂ ತಪ್ಪುವವು ಆದರೆ ಕೆಲ ಗಂಟುಗಳ್ಳರು ಈ ರೀತಿಮಾಡದೆ ಅಣ್ಣತಮ್ಮಂದಿರ ಪಾಲಿಗಾಗಿ ಕೋರ್ಟುಗಳಿಗೆ ಹೋಗಿ ಮನೆತನ ಹಾಳಮಾಡುತ್ತಿರುವುದನ್ನು ಅಲ್ಲಲ್ಲಿ ಕಾಣಬಹುದು ಅವರದನ್ನು ಅವರಿಗೆ ತಟ್ಟನೆ ಕೊಡಲಾರದ ಈ ಮನೆಮುರುಕರು ತಮ್ಮದನ್ನುವದನ್ನು ಏನನ್ನು ತಿಂದು ಕೊಟ್ಟಾರು? ಪಾಲು ಕೊಟ್ಟರೆ ತನ್ನ ಆದಾಯವೂ, ಪ್ರತಿಷ್ಠೆಯೂ ಕಡಿಮೆಯಾಗುವದೆಂದು ಈ ನೀಚರು ಪಾಲುಕೊಡುವದಿಲ್ಲ ಇದು ಸರಿಯಲ್ಲ ಕುಟುಂಬದವರಲ್ಲಿ ಕಲಹಗಳೂ, ಮನಸ್ತಾಪಗಳೂ ಹುಟ್ಟಿದಕೂಡಲೆ ಅಣ್ಣತಮ್ಮಂದಿರು ಒಟ್ಟಿಗಸೇರಿ ಇನ್ನೊಬ್ಬರ ಕಿವಿಗ ಮುಟ್ಟದಂತೆ ನಗನಗುತ್ತ ತಮ್ಮತಮ್ಮೊಳಗೆ ಪಾಲುಮಾಡಿಕೊಳ್ಳುವದುತ್ತಮಪಕ್ಷವು ಈ ಮಾತು ಸಾಧಿಸದಿದ್ದರೆ, ಊರೊಳಗಿನ ನಾಲ್ಕು ಜನ ಸಂಭಾವಿತರ (ರಕ್ತಸಂಭಾವಿತರಲ್ಲ) ಮುಖಾಂತರವಾಗಿಯಾಗಲೀ ಇದಕ್ಕೂ ಬಗೆಹರಿಯದಿದ್ದರೆ ಕೋರ್ಟುಗಳಿಗೆ ಹೋಗಿಯಾದರೂ ಬಗೆಹರಿಸಿಕೊಳ್ಳಬೇಕ ಅಣ್ಣತಮ್ಮಂದಿರ ಪಾಲು ಮಹತ್ವದ್ದೆಂಬುವದನ್ನು ತಿಳಿದುಕೊಳ್ಳುವ ಇಚ್ಛೆಯಿದ್ದವರು. ಭಾರತದಲ್ಲಿಯ ಕೌರವ ಪಾಂಡವರ ಚರಿತ್ರೆ ತಿಳಿದುಕೊಳ್ಳಬೇಕ ಪಾಲುಸಿಗದ್ದರಿಂದ ಅಣ್ಣತಮ್ಮಂದಿರಿಗಾಗುವ ತಾಪವನ್ನೂ ದುಃಖವನ್ನೂ ಅನುಭವಿಸುವವರೊಬ್ಬರು. ಬಲ್ಲರು ನೂರವರು ಒಬ್ಬನು ಬಲ್ಲನು ಪಾಲುಕೊಡದೆ ಪಾಂಡವರನ್ನು ಬಹುತಾಪಕ್ಕೆ ಗುರಿಮಾಡಿದ ಕೌರವರ ವಂಶವು ಹುರಿದುಹೋದದ್ದರ ಉದಾಹರಣೆಯನ್ನು ಅಣ್ಣತಮ್ಮಂದಿರಾಗಿರುವವರು ಮರೆಯಬಾರದು ಪಾಲು ಆಗಿ ಹೆಚ್ಚಿನ ಅನುಕೂಲ ದೊರೆಯದೆ ಬಿಕ್ಕೆಬೇಡಿದರೂ ಚಿಂತೆಯಿಲ್ಲ ಪಾಲು ಸಿಗಲಿಲ್ಲವೆಂದು ತಾಪದಿಂದ ಬೇಯುವದತಿಕಠಿಣವು ಅವರೆ ಒಂದೇ ಗರ್ಭದಲ್ಲಿ ಹುಟ್ಟಿ, ಒಬ್ಬ ತಂದೆಯ ಹೆಸರುಹೇಳಿ, ಒಂದೇ ವಂಶದವರೆಂದು ಭಾವಿಸಿರುವ ಸಹೋದರರು, ವೈರಿಗಳಿಗಿಂತಲೂ ವೈರಿಗಳಾಗಿ, ಹರ್ಷಿಸುವದು, ಮೂರುದಿನಬಾಳಿ ಮಣ್ಣುಗೂಡಿ ಹೋಗುವವರಿಗೆ ಇಹಪರಗಳೆರಡರಲ್ಲಿ ಎಷ್ಟುಮಾತ್ರವೂ ಸುಖವಾಗಲಾರದು ಈಗಿನಕಾಲದಲ್ಲಿ ಅವಿಭಕ್ತಕುಟುಂಬಗಳು ಕಡಿಮೆಯಾಗಹತ್ತಿರುವುದು, ಯಾಕೆಂದರೆ—ಜನರಲ್ಲಿ ಸ್ವಾರ್ಥಪರಾಯಣತೆಯೂ, ಸ್ವಪ್ರತಿಷ್ಠಾಭಿಲಾಷೆಯೂ ಮಹತ್ವಾಕಾಂಕ್ಷೆಯೂ ಹೆಚ್ಚಿ ಮನಸ್ಸುಗಳು ಅತಿಕ್ಷುದ್ರತರಗಳಾಗಿರುವವು ಕುಟುಂಬದಲ್ಲಿ ಭಿನ್ನಾಭಿಪ್ರಾಯಗಳು ಹೆಚ್ಚಿದೊಡನೆ ಅವನಕೈಗೆ ಸಿಕ್ಕಿದ್ದನ್ನು ಅವನೂ ಇವನ ಕೈಗೆ ಸಿಕ್ಕಿದನ್ನು ಇವನೂ ಬಗಲಗಿರಿಮಾಡುತ್ತಾರೆ ಯಜಮಾನನಾದರೂ ಇಟ್ಟದ್ದು ಇಟ್ಟಲ್ಲಿಯೇ ಕೊಟ್ಟದ್ದು ಕೊಟ್ಟಲ್ಲಿಯೇ ಗಡಪ್ ಮಾಡುವನು ಮತ್ತು ತನ್ನ ಸಹೋದರರಿಗೆ ವಂಚಿಸುವ ಉದ್ದೇಶದಿಂದ ಮನೆಯ ಒಡವೆವಸ್ತು, ಹಣಕಾಸುಗಳನ್ನು ಒಳಗಿಂದೊಳಗೆ ತನ್ನ ಆಪ್ತೇಷ್ಟರುಗಳಲ್ಲಿ ಯಿಡುವನಲ್ಲದೆ, ಸುಮ್ಮನೆ ಅಲ್ಲಿ ಇಲ್ಲಿ ಸಾಲವಿದೆ ಎಂದು ಹೊಲ ಮನೆ ಪರರಿಗೆ ದೀಡು ಮಾಡುತ್ತಾನೆ 'ಇಬ್ಬರಜಗಳ ಮೂರನೆಯವರ ಆದಾಯ' ಎಂಬಂತೆ ಇಟದ್ದು ಇಟ್ಟಲ್ಲಿಯೇ ಮಾಯವಾಗುವುದಲ್ಲದೆ, ನೆಪಮಾತ್ರಕ್ಕೆ ಬರಕೊಟ್ಟ ಪತ್ರಗಳೂ ನಿಜವಾಗಿ ಹೊಲಮನೆಗಳೂ ಮಾಯವಾಗುವುವು ವಾಚಕರೇ ಮೋಸದಫಲವನ್ನು ನೋಡಿದಿರಾ! ಇಂಥ ಕೃತ್ಯಗಳು ಹಿಂದೆ ಎಷ್ಟೋ ನಡೆದಿರುವುವು ಈಗಲೂ ಪ್ರತ್ಯಕ್ಷ ನಡೆಯುತ್ತಲಿರುವುವು. ಹೀಗೆಮಾಡುವುದು ಸರ್ವತ್ರನಿಷಿದ್ಧವು. ವಾಚಕರೇ! ವ್ಯಾಪಾರದ ಪಾಲುಗಾರಿಕೆಯ ವಿಷಯವಾದರೂ ಇಷ್ಟೇ ಇರುವುದು "ಅಧಮಂ ಭ್ರಾತೃವಿತ್ತಂಚ" ಎಂಬಂತೆ ಅಣ್ಣತಮ್ಮಂದಿರ ಹಣವನ್ನು ವಂಚಿಸುವುದು ಅಧಮಪಕ್ಷವಾದರೆ, ಪಾಲುಗಾರರ (ಪರರ) ಹಣವನ್ನಪಹರಿ

ಸುವುದರಿಂದ ವಂಶಕ್ಷಯವಾಗುವುದೆಂದು ನೀತಿಜ್ಞರು ಹೇಳುತ್ತಾರೆ ಆದರೆ ಪಾಲುಗಾರರಿಗೆ ವಂಚಿಸಿ ಅವರ ಹಣ ತಕ್ಕೊಂಡರೆ ಕೋಳ್ಳಿಯನ್ನು ತಕ್ಕೊಂಡು ತಲೆಯನ್ನು ತುರಿಸಿಕೊಂಡಂತೆಯೇ ಸರಿ ' ಕದ್ದೊಡ ಲನು ತಾ ಹೋದವನಿಗೆ ಮನೆಯೊಳಗೆ ಇದ್ದುದ ಹೋಗದೆಬಿಟ್ಟೀತೆ' ಎಂಬ ವಾಕ್ಯವನ್ನು ಯಾರೂ ಮರೆಯತಕ್ಕದ್ದಾಗಿಲ್ಲವು ಹಣ ತನ್ನಿಂದಿರಲ್ಲಿಯೂ ಪಾಲುಗಾರರಲ್ಲಿಯೂ, ಒಬ್ಬ ವಿಷಮಣಿಗಳಾದವರು 'ಹೋಗು ಎನ್ನಲಾರದೆ ಹೋಗೆಯಿಟ್ಟರು' ಎಂಬಂತೆ ಖಂಡಿತವಾಗಿ ಬಾಯಿ ಬಿಟ್ಟು ಮಾತನ್ನಾಡದೆ, ಇಲ್ಲದ ಸಲ್ಲದ ಅಸಭ್ಯ, ಕುಹಕ ಕುತಂತ್ರಗಳನ್ನು ಮಾಡ ಲಿಕ್ಕೆ ಹತ್ತುತ್ತಾರೆ ಇವರ ಮರ್ವತನದಿಂದ ಸಭ್ಯರ ಚಿತ್ತವು ಕ್ಷೋಭಿಸುವದು

ಈ ವಿಷಯದಲ್ಲಿ ತಿಳಿಯತಕ್ಕ ಇನ್ನೊಂದು ಮುಖ್ಯಾಂಶವೇನೆಂದರೆ—ಸಹೋದರರಾಗಲಿ, ವ್ಯಾಪಾ ರದ ಪಾಲುಗಾರರಾಗಲಿ ಮನಸ್ಸು ಒಡೆದ ಕೂಡಲೇ ತಕ್ಷಣ ವಿಲೇವರಿಮಾಡಿಕೊಳ್ಳುವುದರಲ್ಲಿ ಸ್ವಹಿತಪರ ಹಿತಗಳೆರಡೂ ಸಾಧಿಸುವ ಲಕ್ಷಣವಿರುವದು ಅದು ಹೇಗೆಂದರೆ—ಒಬ್ಬನು ಬರುವ ಆದಾಯದಲ್ಲಿ ಅವ ನಿಗೂ ಕೊಡಬೇಕಲ್ಲ ಎಂದು ಅದರಲ್ಲಿ ಸ್ವಲ್ಪ, ಇದರಲ್ಲಿ ಸ್ವಲ್ಪ ಗಂಟುಕತ್ತರಿಸಲಿಕ್ಕೆ ಪ್ರಾರಂಭಿಸುತ್ತಾನೆ ಇದು ಮಹಾಪಾಪಕರವು ಇದರಲ್ಲಿ ಜಾಣನೂ ಪಾಪ ಭೀರುವೂ ಆದವನು ತಾನು ಏನುಮಾಡಬೇಕೆಂದರೆ— ನಾನು ಜೊತೆಗೆ ಇರುವುದರಿಂದಲ್ಲವೇ ನಮ್ಮ ಬಂಧುವು ಈ ದುರ್ವ್ಯಾಪಾರಕ್ಕೆ ಮುಖವಿಟ್ಟಿರುವದು! ನಾನು ಅರ ಗಾದರೆ, ಇವನು ಪಾಪಕಾರ್ಯದಿಂದ ವಿಮುಖನಾಗು ತ್ತಾನೆ, ಅಲ್ಲದೆ ಒಂದುವೇಳೆ, 'ಎಮ್ಮೆಯ ಜೊತೆಗೆ ಆಡಿ ಆಕಳು ತಿನ್ನುವದನ್ನು ಕಲಿಯಿತು' ಎಂಬಂತೆ ಅವನ ಜೊತೆಗೆ ಆಡಿ—'ಅವನು ಮಾಡು ತ್ತಾನಲ್ಲ! ನಾನೇಕೆ ಮಾಡಬಾರದು?' ಎಂದು ದುರಾ ಸೆಗೋಸ್ಕರ ಗಂಟುಕತ್ತರಿಸುವ ದುರ್ವಿದ್ಯಕ್ಕೆ ಮುಖ ವಿಡುವ ಪ್ರಸಂಗಬಂದರೂ ಬಂದೀತು! ಎಂದು ವಿವೇ ಕದಿಂದ, ಅಲ್ಪಸ್ವಲ್ಪ ಲುಕ್ಸಾನಾದರೂ ಚಿಂತೆಯಿಲ್ಲ, ಒಂದುವೇಳೆ ಕೆಲಸವಿಲ್ಲದಿದ್ದರೂ ಚಿಂತೆಯಿಲ್ಲ ಎಂದು ಉದಾರಮನಸ್ಸಿನಿಂದ ತನಗೆತಾನೇ ತೀರ್ದುಕೊಂಡು ತತ್‌ಕ್ಷಣ ಅಗಲುವ ಸಂದರ್ಭದಲ್ಲಿ ಸ್ವಹಿತಪರಹಿತ ಗಳೆರಡನ್ನೂ ಸಾಧಿಸಿದಂತಾಗುವದಿಲ್ಲವೇ? 'ಕಳ್ಳನ ಹೆಂಡತಿ ಎಂದಿದ್ದರೂ ಮುಂಡೇ ಮುಂಡೆ'

[ಸಶೇಷ]

ಆರ್. ಎಂ ಮಲ್ಲಿಕಾರ್ಜುನಾರಾಧ್ಯ,
ತಿಪಟೂರು

ವೀರಶೈವ ಸುಧಾರಣೆ

(ಲೇಖಾಂಕ ೧೮)

ಲೇಖಕ—ಕಾವ್ಯತೀರ್ಥ, ಸಾಹಿತ್ಯಾಚಾರ್ಯ, ವೇದಾಂತಶಾಸ್ತ್ರೀ, ಶ್ರೀ ವಾಗೀಶಶಿವಾಚಾರ್ಯ, ಬೃಹನ್ಮಠ, ಮುನೇನೂರು

ಇದರಿಂದ ಹಿಂದಿನವರಿಗೆ ತಮ್ಮ ತಮ್ಮ ಜಾತಿವಿಷ ಯದಲ್ಲಿ ಎಷ್ಟು ಶ್ರದ್ಧಾಭಿವೃದ್ಧಿ ಇಂಬುದು ತಾನಾಗಿಯೇ ತಿಳಿದುಬರುತ್ತಿದೆ ಇವರ ವಂಶಜರಾದ ಈಗಿನವರು ತಮ್ಮ ಹಿರಿಯರ ವಂಶವನ್ನು ಹೇಳಕೊಳ್ಳುವುದಕ್ಕೆ ಹಿಂಜರಿಯುತ್ತಿರುವುದು ಕೇವಲ ಅಜ್ಞಾನವಲ್ಲದೆ ಬೇರೆ ಯಲ್ಲ, ವೀರಶೈವಧರ್ಮಶಾಸ್ತ್ರಗಳಲ್ಲಿ ಈ ವರ್ಣಾಶ್ರಮ ವಿಷಯಗಳು ವಿಶದವಾಗಿ ಪ್ರತಿಪಾದಿತಗಳಾಗಿರುವುದ ರಿಂದಲೇ ಪ್ರಾಚೀನಪಂಡಿತರು ಆ ಚತುರ್ವರ್ಣಗಳ ವೀರಶೈವರನ್ನೂ, ಅವರಿಗಿತರರಾದ ಶಿವಲಿಂಗಧಾರಿಗ ಳನ್ನೂ ಸಾಮಾನ್ಯವಾಗಿ ವ್ಯವಹಾರಸೌಲಭ್ಯಕ್ಕಾಗಿ 'ಸಾಮಾನ್ಯ, ವಿಶೇಷ, ನಿರಾಭಾರಿ' ಗಳೆಂತಲೂ, 'ಭಕ್ತಮಾಹೇಶ್ವರ' ರೆಂತಲೂ ಒಂದು ಸಾಮೂಹಿಕ ನಾಮದಿಂದ ಗ್ರಂಥಮೂಲಕವಾಗಿ ಕರೆಯುತ್ತಲೂ ಬಂದಿದ್ದಾರೆ. ಈಗಿನ ಅಜ್ಞರು ಇದನ್ನೂ ಕೂಡ ದೂರೀಕರಿಸಿ ನಡೆಯುವುದಕ್ಕೆ ತಕ್ಕರಾಗಿದ್ದಾರೆ ಇಂಥವರ ದುರ್ಲೇಖಗಳನ್ನು ಬಲ್ಲವರು ಖಂಡಿಸುವುದು ಸಹಜವಾಗಿದೆ, ಖಂಡಿಸಿದಾಕ್ಷಣವೇ ಈ ಮೂಢರು ಸಹನಮಾಡುವುದಾದರೂ ಹೇಗೆ? ಮನಸ್ಸಿಗೆಬಂದಂತೆ ಯದ್ವಾತದ್ವಾ ಬರೆಯುವುದಕ್ಕೆ ಆರಂಭಿಸಿದ್ದಾರೆ ಅಲ್ಲಲ್ಲಿಯೇ ತಿರುಗುತ್ತಾ ಕ್ಷುಲ್ಲಕಸಭೆಗಳನ್ನು ಕೂಡಿಸಿ ಏನೂ ಅರಿಯದ ಮಂದಿಗೆ ಬೂಟಾಟಿಕೆಯ ಮಂಕು ಬೂದಿಯನ್ನೂದಿ, ವರ್ಣಾಶ್ರಮಗಳನ್ನು ಜಂಗಮರು ಕಲ್ಪಿಸಿದ್ದಾರೆ, ಯಾವಶಾಸ್ತ್ರಗಳಲ್ಲಿಯೂ ಇವುಗಳ ಹೆಸರೆಂಬುದಿಲ್ಲ, ಮುಂತಾಗಿ ಹೇಳಿಕೊಂಡು ದಾರಿ ಡುತ್ತ ಕೆಟ್ಟಕೆಟ್ಟ ಠರಾವುಗಳನ್ನು ಪಾಸುಮಾಡಿಕೊಳ್ಳು ತ್ತಲಿದ್ದಾರೆ ಈ ಅಜ್ಞರ ಎಷ್ಟೋಜನರು ಹಾರಾ ಡಿದ್ದಾರೆ, ಅವೆಲ್ಲಾ ಹಾಳೆಯಮೇಲೆ ಮಸಿಯಗೋಸ್ಕರ ತೆಯೇ ಸರಿ! ಈ ಠರಾವುಗಳೇನು ಬ್ರಿಟಿಷ್‌ಪಾರ್ಲಿಮೆಂ ಟಿನವಲ್ಲ, ಅಥವಾ ಗುರುಗಳ ಅಭಿಪ್ರಾಯದಿಂದ ಹೊರ ಬಿದ್ದವುಗಳಲ್ಲ, ಆದ್ದರಿಂದ ಸಂಪ್ರದಾಯಶುದ್ಧರಾದ ವೀರಶೈವರು ಇವುಗಳನ್ನು ಒಂದು ಹುಲ್ಲುಕಡ್ಡಿಗಿಂ ತಲೂ ಕಡೆಯಾಗಿ ತಿಳಿದು ಸದ್ಧರ್ಮವೆಂಬ ಗಾಳಿ ಯಿಂದ ಕಣ್ಣಿಗೆ ಕಾಣಿಸದಂತೆ ತೂರಿಬಿಡುವರು.

ವಾಚಕಮಹೋದಯರೇ! ವರ್ಣಸಾಂಕರ್ಯವು ಮಹಾಪಾಪಕರವಾದ ಕಾರ್ಯವು, ಆದುದರಿಂದ ವರ್ಣ ಸಂಕರಕಾರರ ಯಾವ ವಚನಗಳನ್ನೂ ನೀವು ಲೆಕ್ಕಿಸದೆ ಅವರ ದುರ್ವಾದಗಳನ್ನೂ, ದುಷ್ಟಪ್ರಚಾರಗಳನ್ನೂ ನಿಮ್ಮಿಂದ ಸಾಧ್ಯವಾದಮಟ್ಟಿಗೂ ಹತ್ತಿಕ್ಕುವುದಕ್ಕೆ ಇಂದಿನಿಂದಲೇ ಸನ್ನಿಹಿತವಾದ ದಮನಕ್ರಮ ಧಾರಕರಾಗಿ ಸಂಚಾರಮಾಡಿರಿ! ನಮ್ಮ ಧರ್ಮಸಾಮ್ರಾಜ್ಯಕ್ಕೆ ಶಿವನೇ ಸಾರ್ವಭೌಮನಾಗಿದ್ದಾನೆ ಆದುದರಿಂದ ನಮಗೆ ಎಂದಿಗೂ ಜಯವೇ ಉಂಟಾಗುವಲ್ಲಿ ಸಂದೇಹ ವಿಲ್ಲವು ಏಳಿರಿ! ಮೂಲೆಯಲ್ಲಿ ಸುಮ್ಮನೆ ಕುಳಿತುಕೊ ಳ್ಳಬೇಡಿರಿ! ಕಲಿಮಹಾರಾಜನು ಎಂದಾದರೂ ನಮ್ಮ ಸಾಮ್ರಾಟ್ ಪರಶಿವನಿಗೆ ಮಾಂಡಲಿಕ ಅರಸನೇ ಆಗಿದ್ದಾನೆ ಈಗೀಗ ಹೊನ್ನು ಹೆಣ್ಣುಗಳ ಆಶೆ ತೋರಿಸಿ ಕೈಲಾಗದ ಕೆಲವು ಸೈನಿಕರನ್ನು ತನ್ನ ಕಡೆಗೆ ಸೇರಿ ಸಿಕೊಂಡು ಆರ್ಭಟಿಸಿಯುತ್ತಿದ್ದಾನೆ ಆದರೂ ನಾವು ಅಂಜುವ ಕಾರಣವಿಲ್ಲ ಅಧರ್ಮದಿಂದ ರಾಜ್ಯವಾಳುವ ಈ ಕಲಿಮಹಾರಾಜನನ್ನು ಸೆರೆಹಿಡಿದು ಚಕ್ರವರ್ತಿ ಯಾದ ಶಿವಮಹಾರಾಜನಿಗೆ ಸಲ್ಲಿಸುವುದಕ್ಕಾಗಿ ದೇವ್ಯ, ಪೀಡೆ, ಪಿಶಾಚಗಳೂ ಸಹ ಹಾತೊರೆಯುತ್ತಲಿವೆ, ಆದುದರಿಂದ "ಯತೋಧರ್ಮಸ್ತತೋಜಯಃ" ಎಂಬ ಜಯಘೋಷದೊಡನೆ ಧರ್ಮಯುದ್ಧವನ್ನು ಆರಂಭಿಸಿಯೇ ಬಿಡೋಣ!

ವಾಚಕಮಹಾಶಯರೇ! ಈ ಜಗತ್ತಿನಲ್ಲಿರುವ ಯಾರೂ ತಮ್ಮ ತಮ್ಮ ಕರ್ಮಗಳನ್ನು ಬಿಡಬಾರದು. ಎಂಬುದಾಗಿ ನಮ್ಮ ವೀರಶೈವರೈತರ ಸಲುವಾಗಿ ಈ ಕೃಷಿಕರ್ಮವಿಷಯವನ್ನು ಮೊದಲು ಎತ್ತಿಕೊಂಡುದಾಗಿ ದ್ದಿತು ಇದೀಗ ರೈತರನ್ನು ಬಹುದೂರದಲ್ಲಿ ಬಿಟ್ಟು ಬಂದಂತಾಗಿದೆ, ಆದುದರಿಂದ ನಡೆಯಿರಿ! ನಮ್ಮ ರೈತರ ಕಡೆಗೆ ಹೋಗೋಣ!! ಎಲೈ ವೀರಶೈವರೈತರೇ! ನಿಮ್ಮನ್ನು ನಾವು ಎಂದೂ ಮರೆಯುವಂತಿಲ್ಲ ಇದು ವರೆಗೆ ಇಷ್ಟೊಂದು ವಿಷಯಗಳನ್ನು ಹೇಳಿದುದು ನಿಮ್ಮ ಹಿತಕ್ಕಾಗಿಯೇ ನಾವು ಹೇಳಿದ ಚಲುನುಡಿಯು ನಿಮ್ಮಲ್ಲಿ ಯಾವಾಗಲೂ ನೆಲೆಗೊಂಡಿರಲಿ ನೀವು ಬೇಸಾಯಮಾಡುವುದರಿಂದ ನಿಮ್ಮಲ್ಲಿರುವ ಜಾತಿಯು ಹೋಗುವುದೂ ಇಲ್ಲ, ನಿಮ್ಮಲ್ಲಿಲ್ಲದ ಜಾತಿಯು ಬರು ವುದೂ ಇಲ್ಲ ಆದುದರಿಂದ ಎಚ್ಚರಗೊಳ್ಳಿರಿ! ನಿಮ್ಮ ಕಾರ್ಯವನ್ನು ನೀವು ಕೈಕೊಳ್ಳಿರಿ!! ಬಡಬಗ್ಗರಿಗೆ, ಜೋಗಿಜಂಗಮರಿಗೆ ಅನ್ನದಾನವನ್ನು ಮಾಡಲು ನೀವೇ ಸಮರ್ಥರು!

ಸರ್ವಜಗತ್ತಿಗೂ ಹಿತಕಾರಿಗಳಾದ ನಮ್ಮ ರೈತರು ಪವಿತ್ರವಾದ ತಮ್ಮ ಒಕ್ಕಲತನವು ಸುಖವಾಗಿ ಸಾಗ ಬೇಕೆಂಬ ಅಭಿಲಾಷೆಯುಳ್ಳವರಾಗಿದ್ದರೆ, ಗೋಜಾತಿ ಯನ್ನು ಅಮೂಲ್ಯವಾದ ಒಂದು ದ್ರವ್ಯರಾಶಿಯನ್ನಾಗಿ ಯೇ ತಿಳಿದುಕೊಂಡು ಜೋಪಾನಮಾಡಬೇಕು ನಿಜ ವಾಗಿ ವಿಚಾರಮಾಡಿ ನೋಡಿದರೆ ಗೋವು ಎಂತಹ ಪವಿತ್ರವಾದ ಪ್ರಾಣಿ! ಆಹಾ ಅದರ ಉಪಕಾರವನ್ನು ಎಷ್ಟು ವರ್ಣಿಸಿದರೂ ತೀರದು!! ಹಸುವಿನ ಹಾಲು ಅವ್ವ ಅವ್ವಾ ಎಂದಳುವ ಹಸುಗೂಸುಗಳಿಗೆ ಬೇಕು, ಶಾರುಣ್ಯದ ಭರದಲ್ಲಿ ಹೋರಾಡುವವರಿಗೆ ಬೇಕು, ಇಳಿ ವಯಸ್ಸಿನವರಿಗಂತೂ ಅತ್ಯಾವಶ್ಯಕವಾಗಿ ಬೇಕು ಈ ಹಾಲು ಎಲ್ಲರಿಗೂ ಹಿತಕರವಾದುದು, ಅದರಲ್ಲಿಯೂ ಅಶಕ್ತರಿಗೂ, ರೋಗಿಗಳಿಗೂ ಹೇಳುವುದೇ ಬೇಕಾಗಿಲ್ಲ.

ಗೋಕ್ಷೀರದಲ್ಲಿ ಮನುಷ್ಯನ ಪ್ರಾಣರಕ್ಷಣೆಗೆ ಯೋಗ್ಯಗಳಾದ ಸಕ್ಕರೆ, ಉಪ್ಪು, ನೀರು ಮೊದಲಾದ ಪದಾರ್ಥಗಳೆಲ್ಲವೂ ತುಂಬಿಕೊಂಡಿವೆ ಅಕ್ಕಿ, ಬೇಳೆ, ಹಿಟ್ಟು, ಕಾಯಿ, ಸೊಪ್ಪು ಮೊದಲಾದವುಗಳಲ್ಲಿ ಯಾವು ದಾದರೊಂದನ್ನು ತಿಂದು ಮನುಷ್ಯನು ಪುಷ್ಟನಾಗಿರು ವುದು ಸಾಧ್ಯವೇ ಇಲ್ಲ, ಆದರೆ ಹಾಲೊಂದನ್ನೇ ಕುಡಿದು ಮನುಷ್ಯನು ಪುಷ್ಟನಾಗಿಯೂ, ಸುದೃಢಕಾಯ ನಾಗಿಯೂ ಇರಬಲ್ಲನು. ಆದುದರಿಂದ ಅನುಭವಿಗಳು 'ಗವ್ಯಹೀನಂ ಕುಭೋಜನಂ" ಎಂದು ಸಾರಿರುವರು ತಾರ್ಕಿಕಶ್ರೇಷ್ಠನಾದ ಚಾರ್ವಾಕನೂ ಕೂಡ—

ಯಾವಜ್ಜೀವೇತ್ ಸುಖಂ ಜೀವೇತ್ ।
ಋಣಂ ಕೃತ್ವಾ ಘೃತಂ ಪಿಬೇತ್ ॥

ಎಂದು ಹೇಳಿರುವನು ಮತ್ತೆ ಕೆಲವು ಕವಿಗಳು "ಆಯುರ್ಮೂಲಂ ಘೃತಂ" (ಆಯುಷ್ಯವು ವೃದ್ಧಿಯಾ ಗುವುದಕ್ಕೆ ತುಪ್ಪವೇ ಕಾರಣವು) "ಘೃತೇನ ವರ್ಧತೇ ಬುದ್ಧಿಃ ಕ್ಷೀರೇಣಾಯುಷ್ಯವರ್ಧನಂ" (ತುಪ್ಪದಿಂದ ಬುದ್ಧಿಯೂ, ಹಾಲಿನಿಂದ ಆಯುಷ್ಯವೂ ವೃದ್ಧಿಹೊಂ ದುವುವು) "ಸರ್ವರೋಗಹರಂ ತಕ್ರಂ" (ಮಜ್ಜಿ ಗೆಯು ಸಕಲರೋಗಗಳನ್ನೂ ನಾಶಮಾಡಲು ಸಮರ್ಥ ವಾಗಿದೆ) ಮುಂತಾಗಿ ಆಕಳಿನಿಂದ ದೊರೆಯಬಹುದಾದ ಒಂದೊಂದು ಪದಾರ್ಥವನ್ನು ಬಹಳವಾಗಿ ಕೊಂಡಾಡಿ ದ್ದಾರೆ ವೇದಕಾಲದಿಂದಲೂ ನಡೆದುಬಂದಿರುವ ಶಿವಾ ರ್ಚನೆ ಶಿವಯಜ್ಞಗಳಿಗೆ ಪಂಚಾಮೃತಗಳಿರದಿದ್ದರೆ ನಡೆಯುವುದೇ ಇಲ್ಲ ದೀಕ್ಷೋಪನಯನ ಕಾಲದಲ್ಲಿ ತನುಶುದ್ಧಿಗಾಗಿ ಪಂಚಗವ್ಯಪ್ರಾಶನವು ಪರಮಾವಶ್ಯಕ ವಾಗಿದೆ ಮನೆಮನೆಯ ಅಂಗಳಗಳ ದುರ್ಗಂಧ ವನ್ನು ಕಳೆಯುವುದಕ್ಕಾಗಿ ಗೋಮಯದ ಹೊರತಾಗಿ ಶ್ರೇಷ್ಠವಾದ ವಸ್ತುವು ಈ ಜಗತ್ತಿನಲ್ಲಿ ಮತ್ತೊಂದಿಲ್ಲವೇ ಇಲ್ಲ ಪಿನಾಯಿಲ್ ಮುಂತಾದ ಪದಾರ್ಥಗಳಿರುವ ವಾದರೂ ಹೆಚ್ಚುದುಡ್ಡು ಬೇಕಾಗುವುದು, ಅಲ್ಲದೆ ಅವುಗಳ ಲಾಭಕ್ಕಾಗಿ ತಾಲೂಕು ಪಟ್ಟಣಕ್ಕೆ ಓಡ ಬೇಕಾಗುವುದು, ಇಷ್ಟಾದರೂ ಅವೆಲ್ಲಾ ಕೃತ್ರಿಮ ವಸ್ತುಗಳೇ ಸರಿ ಗೋಮಯವು ಅಕೃತ್ರಿಮವಾಗಿರು ವುದಲ್ಲದೆ ಅದು ಎಲ್ಲಿಬೇಕಾದರೂ ದೊರೆಯಬಲ್ಲದು

ಒಕ್ಕಲತನವೇ ಪ್ರಧಾನವಾಗುಳ್ಳ ಈ ಭಾರತದೇಶ ದಲ್ಲಿ ರೈತರಿಗಷ್ಟೇ ಏಕೆ? ಮನುಷ್ಯಮಾತ್ರಕ್ಕೇನೇ ಆಕಳು ಜೀವನಸ್ವರೂಪವಾಗಿದೆ ಈ ಭಾರತದಲ್ಲಿ ೧೦೦ ರಲ್ಲಿ ೯೯ ಜನರು ಕೃಷಿಮೂಲಕವಾಗಿಯೇ ಜೀವಿಸುತ್ತಿದ್ದಾರೆ ಈ ಕೃಷಿಕಾರ್ಯಕ್ಕೆ ಪ್ರಧಾನವಾದ ವಸ್ತುವು ಇದೊಂದೇ ಒಂದು ಗೋಜಾತಿಯಾಗಿದೆ ಮನುಷ್ಯನು ಯಂತ್ರಗಳ ಸಹಾಯದಿಂದ ದೊಡ್ಡ ದೊಡ್ಡ ಗುಡ್ಡಗಳನ್ನೊಡೆದು ಅತ್ಯಂತ ಕಷ್ಟದಿಂದ ಅದೂ ಅತ್ಯಲ್ಪವಾಗಿ ಬೆಳ್ಳಿಯನ್ನೋ ಬಂಗಾರವನ್ನೋ ತೆಗೆಯಬಲ್ಲನು ಆದರೆ ಬಸವಣ್ಣನಿಗೆ ಮನುಷ್ಯನಂತೆ ಮಾತನಾಡುವುದಕ್ಕೆ ಬರದಿದ್ದರೂ ತನ್ನ ನೇಗಿಲೆಂಬ ಒಂದೇ ಒಂದು ಸುಖಸಾಧ್ಯವಾದ ಯಂತ್ರದಿಂದ ಎರೆಯಬೀಡು, ಕಲ್ಲಮರಡಿ, ಬೆಟ್ಟದತುದಿ, ರೊಜ್ಜು ರಾಡಿಗಳಲ್ಲಿಯೂ ಕೂಡ ಬೆಳ್ಳಿ ಬಂಗಾರಗಳ ಗಟ್ಟಿ ಯನ್ನು ತೆಗೆದುಕೊಡುತ್ತಿರುವುದು ಯಾರಿಗೆತಾನೆ ಗೊತ್ತಿಲ್ಲ! ವಿಚಾರಮಾಡಿನೋಡಿದರೆ, ಗೋವಿನಂತಹ ಸಭ್ಯಪ್ರಾಣಿಯು ಜಗತ್ತಿನಲ್ಲಿ ಮತ್ತೊಂದಿಲ್ಲವೇ ಇಲ್ಲ ಸಾಧುವಾದ ಈ ಪ್ರಾಣಿಯು ಮಳೆಯಲ್ಲಿ ದುಡಿಸಿ ಕೊಂಡರೂ ದುಡಿಯುತ್ತದೆ ಚಳಿಯಲ್ಲಂತೂ ಸರಿಯೆ ಅದೂ ಹಾಗಿರಲಿ, ಉಗ್ರವಾದ ಬಿಸಿಲಿನಲ್ಲೂ ದುಡಿಸಿ ಕೊಳ್ಳಿರಿ, ಸ್ವಲ್ಪವೂ ಹಿಂಜರಿಯದೆ ಸಿದ್ಧವಾಗಿ ನಿಲ್ಲು ವುದು ಇಂತಹ ಸರಳಸ್ವಭಾವದ ಪ್ರಾಣಿಯನ್ನು ಮೂಢರನೇಕರು ಚಿತ್ರವಿಚಿತ್ರವಾಗಿ ಹಿಂಸಿಸುತ್ತಿರು ವುದು ಎಂತಹ ಅನ್ಯಾಯ! ಎಷ್ಟು ಪಾಪ!!

ನಮ್ಮ ದೇಶದ ನೆಲವನ್ನು ಸಸ್ಯಸಮೃದ್ಧವಾಗಿಡು ವುದಕ್ಕೆ ಗೊಬ್ಬರವು ಎಷ್ಟು ಉಪಯುಕ್ತವಾಗಿದೆ ಆಕಳು ಬಸವಣ್ಣಗಳು ಹೊಲಗಳಲ್ಲಿ ತಿರುಗಾಡಿ ಮಲ ಮೂತ್ರಗಳನ್ನು ಬಿಡುವುದರಿಂದ ನೆಲವು ಶಕ್ತಿಯುಳ್ಳ ದಾಗುವುದು. ಗೋಮಯವು ಕುರುಳಾಗಿ ಅಡಿಗೆಯನ್ನು ಪೂರೈಸುವುದಿಷ್ಟೇ ಅಲ್ಲ, ಸಕಲಪಾಪಗಳನ್ನು ನಾಶ ಮಾಡಲು ಸಮರ್ಥವಾದ ವಿಭೂತಿಯಾಗಿ ವೇದಾಗಮ

[೬ ನೇ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೩೬ ನೆಯ ಜೂನ್ ತಾ|| ೨೨ ನೆಯ ಸೋಮವಾರ

ಲಿಂಗಧಾರಣವಿಚಾರ.

ವೈಷ್ಣವಾಶ್ಚ ಪಚಾಂಶ್ಚೈವ ಚಕ್ರೀಣಂ ಲಿಂಗಧಾರಿಣಂ ।
ನಾಧಿಕಾರೀ ಸವಿಜ್ಞೇಯಃ ಶ್ರೌತಸ್ಮಾರ್ತಾದಿಕರ್ಮಸು ॥

ಇತ್ಯಾದಿ ವಾಕ್ಯಗಳು ಸಾಮಾನ್ಯವಾಗಿ ವೈದಿಕಮತ ದ್ವೇಷಿಗಳಿಂದ ಒದಗಿಸಲ್ಪಟ್ಟವುಗಳೇ ಹೊರತು ಪ್ರಮಾಣವಾಕ್ಯಗಳಲ್ಲವೆಂದು ಹಿಂದೆ ನಾವು ಹೇಳಿದೆವು. ಒಂದು ವೇಳೆ ಅಂಥ ವಾಕ್ಯಗಳು ಪ್ರಾಮಾಣಿಕವಾಕ್ಯಗಳೇ ಹೌದೆಂದು ಹೇಳುವುದಾದರೆ ಎಲ್ಲ ವೈದಿಕಮತೀಯರೂ ಶ್ರೌತಸ್ಮಾರ್ತಾದಿಕರ್ಮಗಳಿಗೆ ಅನಧಿಕಾರಿಗಳೆಂದು ಹೇಳಬೇಕಾಗುತ್ತದೆ. ಬ್ರಹ್ಮಸೂತ್ರ ... ವೈಷ್ಣವರಾಗಲಿ ತ್ರಿಪುಂಡ್ರಧಾರಿಗಳಾದ ಪಾಶುಪತರು ... ಗಳಾಗಲಿ ... ಚಕ್ರಧಾರಿಗಳಾದ ವೈಷ್ಣವರಾಗಲಿ ಊರ್ಧ್ವಪುಂಡ್ರಧಾರಿಗಳಾದ ... ತ್ರೀವೈಷ್ಣವರಾಗಲಿ ಲಿಂಗಸಹಿತರಾದ ರುದ್ರಾಕ್ಷಧಾರಿಗಳಾದ ವೀರಶೈವರಾಗಲಿ ಎಲ್ಲರೂ ಯಾವಾಗಲೂ ಶ್ರೌತಕರ್ಮಗಳಿಗೆ ಅನಧಿಕಾರಿಗಳಲ್ಲವೆ? ಪ್ರತಿವಿರುದ್ಧ ಕರ್ಮಗಳಿಂದ ಬಿಡುಗಡೆಯಿಲ್ಲ ಮತ್ತು ಇಂಥ ವೈಷ್ಣವ ವಾದಿ ಮತಗಳನ್ನು ಸ್ಥಾಪಿಸಿದ ಶಂಕರಾಚಾರ್ಯ, ಶ್ರೀಕಂಠಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯ, ಪಂಚಾಚಾರ್ಯರುಗಳೆಲ್ಲ ... ಸ್ವಪ್ರವರ್ತಕರಾದ ... ಅವರವರ ... ತಮ್ಮ ತಮ್ಮ ಉಪಾಸ್ಯದೇವತಾಸಂಬಂಧವಾದ ಮತಗಳನ್ನು ಸ್ಥಾಪಿಸಿರುತ್ತಾರೆ. ... ಸ್ಪಷ್ಟವಾಗಿ ಯಾರೂ ... ಸಿರುವುದಿಲ್ಲ ಜಗತ್ಪ್ರಸಿದ್ಧಗಳಾದ ಇಂಥ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತಮತಗಳ ಹೊರತು ಇನ್ನಾವ ಮತಗಳೂ ... ವಿವೇಚನಾ ತಕ್ಕವ ಮತಗಳೆಂದು ಹೇಳಬೇಕಾದದ್ದಿಲ್ಲ ಮತ್ತು ಇವರು ನಡೆಯಿಸುವ ನಿತ್ಯನೈಮಿತ್ತಿಕಾದಿ ಕರ್ಮಗಳೂ ಇವರು ಉಪಾಸಿಸುವ ಶಿವವಿಷ್ಣ್ವಾದಿ ಅನೇಕ ನಾಮದಿಂದ ವ್ಯವಹರಿಸಲ್ಪಡುವ ದೇವತೆಯೂ ಶ್ರುತ್ಯುಕ್ತಗಳೇ ಆಗಿವೆ. ಇಂಥ ಶ್ರುತಿಸ್ಮೃತ್ಯಾದಿಗಳನ್ನು ಬಿಟ್ಟರೆ ಈ ಮತಗಳೆಲ್ಲವೂ ನಿರಾಧಾರಗಳಾಗಿ ಕೇವಲ ಯುಕ್ತಿಪ್ರಧಾನವಾದ ಚಾರ್ವಾಕ ಲೋಕಾಯತಿಕಮತಗಳಂತೆ ನಾಸ್ತಿಕಮತಗಳಾಗಿ ಪರಿಣಮಿಸಬೇಕಾಗುವದು. ಹೀಗಿದ್ದರೂ ಸಾಕ್ಷಾತ್ತಾಗಿ ಶ್ರುತಿಸ್ಮೃತಿಬಾಹ್ಯಗಳಾದ ಪಾಷಂಡಿ ಪತಿತವ್ರಾತ್ಯ (ಸಂಸ್ಕಾರಹೀನ) ರ ಪಟ್ಟಿಯಲ್ಲಿ ವೇದೋಕ್ತವಾದ ಶೈವ ವೈಷ್ಣವ ವೀರಶೈವಮತಗಳೆಂಬ ಪವಿತ್ರರತ್ನಗಳನ್ನು ಸೇರಿಸಿ ಒಟ್ಟಿಗೆ ವೇದಬಾಹ್ಯತ್ವವನ್ನು ಹೇಳುವ 'ವೈಷ್ಣವಾಶ್ಚ ನಾಧಿಕಾರೀಸವಿಜ್ಞೇಯಃ ಶ್ರೌತಸ್ಮಾರ್ತಾದಿಕರ್ಮಸು' ಎಂದು ಹೇಳಿರುವ ಅನಾಮಧೇಯರಾದ ಈ ವಾಕ್ಯಕರ್ತರ ಮಾತ್ಸರ್ಯಬುದ್ಧಿಯ ಪರಾಕಾಷ್ಠತೆಯನ್ನು ವರ್ಣಿಸುವದು ಯಾರಿಂದಲೂ ಸಾಧ್ಯವಿಲ್ಲ.

ಒಂದುವೇಳೆ "ದುರ್ಜನತುಷ್ಯತು" ಎಂಬ ನ್ಯಾಯಾನುಸಾರವಾಗಿ ಈ ಶ್ಲೋಕಾರ್ಧವನ್ನು ಒಪ್ಪಿಕೊಳ್ಳುವದಾದರೆ ಆಗ ಇದರ ಅರ್ಥವೇ ಬೇರೆಯಾಗಿ ಮಾರ್ಪಡುವದು ಎಂದು ಹೇಗೆಂದರೆ– ಚಕ್ರೀಣಂ ಲಿಂಗಧಾರಿಣಂ" ಎಂಬ ಪದಗಳಿಗೆ ಮೊದಲು ಯಾರು ಚಕ್ರಾಂಕವುಳ್ಳವನಾಗಿದ್ದು ದುಷ್ಕರ್ಮ ದುಸ್ಸಂಗಾದಿಗಳಿಂದ ಮುಕ್ತಿಪ್ರದವೂ ಪಾಪನಾಶಕವೂ ಶ್ರುತಿಸಿದ್ಧವೂ ಆದ ಆ ಚಕ್ರಾಂಕನವನ್ನು (ವೈಷ್ಣವಮತವನ್ನು) ತ್ಯಜಿಸಿ ಶಿವಲಿಂಗವನ್ನು ಧರಿಸಿಕೊಳ್ಳುತ್ತಾರೆಯೋ ಅಂದರೆ ವೀರಶೈವಮತವನ್ನು ಪ್ರವೇಶಿಸುತ್ತಾರೆಯೋ ಮತ್ತು ಯಾರು ಜನ್ಮತಃ ತಾವು ಲಿಂಗಧಾರಿಗಳಾಗಿದ್ದು ದುಷ್ಕೃತ್ಯದಿಂದ ಅಂಥ ವೇದೋಕ್ತ ಶಿವಲಿಂಗವನ್ನು ತ್ಯಜಿಸಿ ಚಕ್ರಾಂಕನವನ್ನು ಮಾಡಿಕೊಳ್ಳುತ್ತಾರೆಯೋ ಅಂಥ ಚಂಚಲಸ್ವಭಾವದವರು ಪಾಷಂಡಿಗಳಾಗಿಯೂ ವ್ರಾತ್ಯರಾಗಿಯೂ ಪತಿತರಾಗಿಯೂ ಶ್ರುತಿಸ್ಮೃತ್ಯಾದಿ ಕರ್ಮಗಳಿಗೆ ಅತ್ಯಂತ ಅನರ್ಹರಾಗಿಯೂ ಆಗುತ್ತಾರೆಂದು ಅರ್ಥವನ್ನು ಅಂಗೀಕಾರಮಾಡುವುದುಚಿತವಾಗಿದೆ. ಹೀಗೆ ಒಂದುಮತವನ್ನು ಬಿಟ್ಟು ಮತ್ತೊಂದು ಮತವನ್ನು ಪ್ರವೇಶಿಸುವುದು ಪಾಪಕಾರ್ಯವೆಂಬ ವಿಷಯವನ್ನು

ಯೋ ವೈ ಸ್ವಾಂ ದೇವತಾಮತಿಯಜತೇ
ಪ್ರಸ್ವಾಯೈ ದೇವತಾಯೈ ಚ್ಯವತೇ ನ ಪರಾಂ
ಪ್ರಾಪ್ನೋತಿ ಪಾಪೀಯಾನ್ ಭವತಿ ॥

ಎಂಬ ಶ್ರುತಿಯು ಸ್ಪಷ್ಟಪಡಿಸುತ್ತದೆ. ಎಂದರೆ ಯಃ ಯಾವ ಅಧಿಕಾರಿಯಾದ ಪುರುಷನು ಸ್ವಾಂ ದೇವತಾಂ ತನ್ನ ಮತಾಚಾರ್ಯರಿಂದ ಉಪದಿಷ್ಟವಾದ ದೇವರನ್ನು ಅತಿಯಜತೇ—ಅತಿಕ್ರಮಿಸುವನೋ, ಪ್ರಸ್ವಾಯೈ ದೇವತಾಯೈ ತಾನು ಪೂಜಿಸುವ ದೇವತೆಯಿಂದ ಚ್ಯವತೇ—ಭ್ರಷ್ಟನಾಗುತ್ತಾನೆಯೋ, ಅವನು ಪರಾಂ—ಉತ್ಕೃಷ್ಟವಾದ ಪದವಿಯನ್ನು, ನಪ್ರಾಪ್ನೋತಿ ಹೊಂದುವುದಿಲ್ಲ, ಮತ್ತು ಪಾಪೀಯಾನ್ ಭವತಿ ಪಾಪಿಷ್ಟನಾಗುತ್ತಾನೆ. ಇದರಿಂದ ತನ್ನ ಮತಾಚಾರ್ಯರಿಂದ ಯಾವ ದೇವತಾ ಸಂಬಂಧವಾದ ದೀಕ್ಷೆಯನ್ನು ತೆಗೆದುಕೊಂಡಿರುತ್ತಾನೆಯೋ ಆ ದೇವತಾಸಂಬಂಧವಾದ ಆರಾಧನೆಯನ್ನು ಆ ದೇವತಾ ಸಂಬಂಧವಾದ ಲಾಂಛನವನ್ನೂ ತನ್ನ ದೇಹವಿರುವವರೆಗೆ ಬಿಡಬಾರದೆಂದು ಸ್ಪಷ್ಟವಾಯಿತು. ಮತ್ತು

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
... ಪರಧರ್ಮೋ ಭಯಾವಹಃ ।
... ಸ್ವರ್ಗಾತ್ ...
... ॥

ಪರಧರ್ಮವನ್ನು ಆಚರಿಸುವುದಕ್ಕಿಂತಲೂ ತನ್ನ ಮತಾಚಾರ್ಯರಿಂದ ಉಪದಿಷ್ಟವಾದ ಧರ್ಮಾಚರಣೆಯು ಗುಣರಹಿತವಾದರೂ ಶ್ರೇಷ್ಠವಾದುದು. ಯಾವನು ತನ್ನ ಧರ್ಮವನ್ನು ತ್ಯಜಿಸಿ ಅನ್ಯಧರ್ಮದಲ್ಲಿ ... ಪೇಕ್ಷಿಸುವನೋ ಅಂಥ ದುರಾತ್ಮನ ಮುಖವನ್ನು ಎಂದೂ ನೋಡಬಾರದು. ಒಂದು ವೇಳೆ ಪ್ರಮಾದದಿಂದ ನೋಡಿದರೆ ಅವನು ಆ ಪಾಪನಿವಾರಣೆಗಾಗಿ ತತ್‌ಕ್ಷಣವೇ ಸೂರ್ಯಾವಲೋಕನವನ್ನು ಮಾಡಬೇಕು. ಯಾವನು ತನ್ನ ಜಾತ್ಯಾಶ್ರಮಗಳನ್ನು ತ್ಯಜಿಸಿ ಅನ್ಯಧರ್ಮಗಳನ್ನು ಆಶ್ರಯಿಸುವನೋ ಅಂಥ ವೇದಮರ್ಯಾದೆಯನ್ನತಿಕ್ರಮಿಸಿದ ಪಾಪಿಯೇ ಪಾಷಂಡನೆಂದು ಕರೆಯಲ್ಪಡುವನೆಂದು ಭಗವದ್ಗೀತೆಯು ಮತಾಂತರಪ್ರವೇಶವು ಬಹು ಹಾನಿಕರವೆಂದು ಸ್ಪಷ್ಟಪಡಿಸುತ್ತದೆ. ಮತ್ತು

ಪರಂ ಸ್ವಧರ್ಮೋ ವಿಗುಣೋಽಪಿ ... ।
ಪರಧರ್ಮೇಣ ಜೀವನ್ ಹಿ ಸದ್ಯಃ ಪತತಿ ಜಾತಿತಃ ॥

ತನ್ನ ಮತಾಚಾರ್ಯರಿಂದ ಬೋಧಿಸಲ್ಪಟ್ಟ ಧರ್ಮವು ಒಂದುವೇಳೆ ಅಸ್ಪಷ್ಟವಾಗಿದ್ದರೂ ತನಗೆ ಉತ್ತಮವಾದುದು. ಮತ್ತೊಂದು ಧರ್ಮವು ಸ್ಪಷ್ಟವಾಗಿದ್ದರೂ ಅದು ಆತನಿಗೆ ಅನುಷ್ಠೇಯವಲ್ಲವು. ಯಾವನು ಸ್ವಧರ್ಮತ್ಯಾಗ ಮಾಡಿ ಪರಧರ್ಮದಿಂದ ಜೀವಿಸುವನೋ ಅವನು ಜಾತಿಭ್ರಷ್ಟನೆನಿಸುತ್ತಾನೆ ಎಂದು ಮನುಸ್ಮೃತಿಯು ಸಹ ಅದೇ ಅರ್ಥವನ್ನು ಬಲಪಡಿಸಿರುತ್ತದೆ. ಇದಲ್ಲದೆ

ಶ್ಲೋ|| ಅತಿಯಜೇತ ... ದೇವತಾಂ ।
ಉಭಯೋರ್ಭ್ರಷ್ಟತಾಂ ... ॥

ತಾನು ಆರಾಧಿಸುವ ದೇವರನ್ನು ಬಿಟ್ಟು ಮತ್ತೊಂದು ದೇವರನ್ನು ಆರಾಧಿಸುವವನು ಯಾವ ದೇವತಾಪ್ರಸಾದವನ್ನೂ ಹೊಂದದೆ ಉಭಯಕುಲಭ್ರಷ್ಟನಾಗುವುದಲ್ಲದೆ ಪಾಪಾತ್ಮನೆಂದು ಹಿಂದಿನ ಆ ಶ್ರುತ್ಯರ್ಥವನ್ನೇ ಒಬ್ಬ ಮಹಾತ್ಮನು ಅನುವಾದಮಾಡಿರುತ್ತಾನೆ. ಹೀಗೆ ಅನೇಕ ಪ್ರಮಾಣಗಳ ಆಧಾರದಿಂದ ಯಾವನೇ ಆಗಲಿ ತನ್ನ ಜೀವಮಾನದವರೆಗೂ ಒಂದೇ ಧರ್ಮವನ್ನು ಒಂದೇ ದೇವರನ್ನು ಆಶ್ರಯಿಸಿರಬೇಕಲ್ಲದೆ ಸ್ವಲ್ಪಕಾಲ ಲಿಂಗಧಾರಿಗಳಾಗಿ ಶಿವನನ್ನಾರಾಧಿಸುತ್ತ ಸ್ವಲ್ಪಕಾಲ ಚಕ್ರಧಾರಿಗಳಾಗಿ ವಿಷ್ಣುವನ್ನಾರಾಧಿಸುತ್ತ ಹೀಗೆ ಏಕದೇವನಿಷ್ಠೆಯನ್ನು ಬಿಟ್ಟು ಅನೇಕದೇವರನ್ನು ಹಂಬಲಿಸುವವನು ಪಾಷಂಡಿ ಪತಿತ ವ್ರಾತ್ಯನೆನಿಸುವನೆಂಬುದೇ 'ವೈಷ್ಣವಾಶ್ಚ ನಾಧಿಕಾರೀಸವಿಜ್ಞೇಯಃ ಶ್ರೌತಸ್ಮಾರ್ತಾದಿಕರ್ಮಸು' ಎಂಬ ಶ್ಲೋಕದ ಅರ್ಥವೆಂದು ಹೇಳುವಲ್ಲಿ ಬಾಧಕವೇನೂ ಇರಲಾರದು.

ವರ್ತಮಾನಸಂಗ್ರಹ.

ಸೂಯೆಜ್ ಕಾಲುವೆಯ ಬಂದರಿನ ಅಧಿಕಾರಿಗಳು ಅಮೂಲ್ಯರತ್ನಗಳಿಂದ ಕೂಡಿದ ಒಂದು ಕಿರೀಟವನ್ನು ಅಬ್ಸೀನಿಯದಿಂದ ಅಪಹರಿಸಿಕೊಂಡುಹೋಗುತ್ತಿದ್ದ ಒಬ್ಬ ಇಟಲಿಯವನನ್ನು ಪತ್ತೆಮಾಡಿ ಅವನಿಂದ ಆ ಕಿರೀಟವನ್ನು ಕಿತ್ತುಕೊಂಡಿರುವುದಾಗಿ ತಿಳಿದುಬರುತ್ತದೆ.

... ನಗರದ ಸಮೀಪದಲ್ಲಿರುವ ಒಂದು ಮಾವಿನ ಮರದಿಂದ ವಿಚಿತ್ರವಾದ ಮನುಷ್ಯ ರೋದನಧ್ವನಿಯು ... ಮರದ ... ಸೇರಿದರು. ಮರದ ಒಂದು ಕೊಂಬೆಯನ್ನು ಯಾರೋ ಕತ್ತರಿಸಲು ಧ್ವನಿಯು ... ನಿಂತುಹೋಯಿತು. ಇದೇನೆಂದು ಇನ್ನೂ ... ಗೊತ್ತಾಗಿಲ್ಲ. ಜನರಂತೂ ಗುಂಪುಗುಂಪಾಗಿ ಮರದ ಬಳಿಗೆ ಬರುತ್ತಿದ್ದಾರೆ.

... ಆರೋಹಣಕ್ಕೆ ಪ್ರಯತ್ನಿಸುತ್ತಿರುವ ಮಿ|| ... ರವರು ... ತಂತಿವರ್ತಮಾನಕೊಟ್ಟ ... ಮಂದುವರಿಯಲು ತಮಗೂ ತಮ್ಮ ಸಹಾಯಕರಿಗೂ ಅಸಾಧ್ಯವಾಗಿದೆ ... ಇವರೆಲ್ಲರೂ ಹಿಂತಿರುಗುವ ... ಕ್ಕೆ ...

... ಕಾಲ ನಡಗೆಯಿಂದಲೇ ಸುತ್ತಿ ಆಯಾ ... ಪರಿಶೀಲಿಸಿ ತಿಳಿದು ... ಕೆ ಎಲ್ ರಾವ್ ಎಂಬ ... ಬಂಟು, ಕಠಿಣಾ ... ಕೂಡನು, ಬೊಂಬಾಯಿ, ಗುಜರಾತ ಕಚ್ ಕಥೇವಾಡ, ಸಿಂದು ಮತ್ತು ಪಂಜಾಬು ದೇಶಗಳಲ್ಲಿ ಸಂಚರಿಸಿ ... ಪ್ರಾಂತಕ್ಕೆ ... ಸುಮಾರು ೨300 ಮೈಲಿಗಳ ನಡೆದಿರುವರು. ಪ್ರವಾಸಕಾಲದಲ್ಲಿ ಇವರು ಅನುಭವಿಸಿದ ಕಷ್ಟಗಳೂ, ... ಹೇಳಲಸಾಧ್ಯವಾಗಿದೆ.

ಮಧ್ಯಪ್ರಾಂತ್ಯದಲ್ಲಿರುವ ಬೆಟೂಲ್ ಎಂಬ ಡಿಸ್ಟ್ರಿಕ್ಟಿನಲ್ಲಿ ಕ್ಷಾಮವು ಪ್ರಾಪ್ತವಾಗಿರುವುದರಿಂದ ಜನರು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ. ಕೆಲವರು ತಮ್ಮ ಮಕ್ಕಳನ್ನು ಕೂಡ ಮಾರಿ ಬಂದ ಹಣದಿಂದ ಹೊಟ್ಟೆಹೊರೆದುಕೊಳ್ಳುತ್ತಿದ್ದಾರೆ. ... ಎಂಬ ... ಎಂಬವನು 8 ದಿನಗಳಿಂದ ತಿನ್ನುವುದಕ್ಕೆ ಏನೂ ಇಲ್ಲದೆ ಇರುವಾಗ ೧ ನೆಯ ದಿನ ಒಬ್ಬ ಪುಣ್ಯಾತ್ಮನು ಇವನಿಗೆ ಒಂದು ಬುಟ್ಟಿ ಧಾನ್ಯವನ್ನು ಕೊಟ್ಟನು. ಅದನ್ನು ನೋಡಿದಕೂಡಲೇ ಅತಿಸಂತೋಷದಿಂದ ಕ್ಷುಧೆಯಿಂದ ... ಪ್ರಾಣವೇ ಹೊರಟುಹೋಯಿತು.

ಆಸ್ಟ್ರಿಯಾದೇಶದ ಮುಖ್ಯಮಂತ್ರಿ ಶೂಕ್ಸ್‌ನಿಗ್‌ರವರು ಇಟಲಿಗೆ ಹೋಗಿದ್ದ ವಿಚಾರವಾಗಿ ಅನೇಕ ಊಹಾಪೋಹಗಳು ನಡೆದಿವೆ. ಈಗಿನ ಆಸ್ಟ್ರಿಯದ ಮಂತ್ರಿಮಂಡಲವು ಬಲಹೀನವಾಗಿರುವುದರಿಂದ ಅದು ಪ್ರಜಾ ಪ್ರಭುತ್ವವಾದಿಗಳ ಸಂಗಡಕ್ಕೆ ಸೇರಬೇಕು ಇಲ್ಲದಿದ್ದರೆ ... ಸಿಂಹಾಸನಾರೋಹಣಕ್ಕೆ ಒಪ್ಪಬೇಕು. ಈ ಎರಡರಲ್ಲಿ ಯಾವಮಾರ್ಗವನ್ನವಲಂಬಿಸಬೇಕೆಂಬ ಸಮಸ್ಯೆಯು ಪ್ರಾಪ್ತವಾಗಿದೆ. ಅಂದರೆ ... ನಲ್ಲಿರುವ ... ಆಸ್ಟ್ರಿಯಾರಾಜ ಮನೆತನದ ಡ್ಯೂಕ್ ಮತ್ತು ಆರ್ಚ್‌ಡಚೆಸ್ ಆಫ್ ... ರವರನ್ನು ಆಹ್ವಾನಿಸಿ ನಡೆಸಿದರೆಂಬುದನ್ನು ಯೋಚಿಸಿದರೆ, ಆಸ್ಟ್ರಿಯದಲ್ಲಿ ತಿರುಗಿ ರಾಜಪ್ರಭುತ್ವವು ಸ್ಥಾಪಿಸಲ್ಪಡಬಹುದೆಂದು ತೋರುತ್ತದೆ.

ಹೈದರಾಬಾದಿನ ಮೋತಿಲಾಲ್ ಸಿನಿಮಾಮಂದಿರಕ್ಕೆ ಕಳೆದ 11 ನೆಯ ತಾರೀಖು ಬೆಂಕಿಬಿದ್ದು ಕಟ್ಟಡವೆಲ್ಲಾ ಸಂಪೂರ್ಣವಾಗಿ ಭಸ್ಮವಾಯಿತು. ಬೆಂಕಿಬಿದ್ದ ... ಒಳಗೆ ಆಟವನ್ನು ನೋಡುತ್ತ ಕುಳಿತಿದ್ದ ಜನರೆಲ್ಲರೂ ಭೀತರಾಗಿ ಒಬ್ಬರಮೇಲೊಬ್ಬರು ಬೀಳುತ್ತಾ ಹೊರಗೋಡಿಬಂದರು. ಈ ಗಲಭೆಯಲ್ಲಿ ಅನೇಕರಿಗೆ ಗಾಯಗಳಾದವು. ಮಹಡಿಯಮೇಲೆ ಕುಳಿತಿದ್ದ ಕೆಲವರು ... ಹೊರಗೆಬರಲವಕಾಶವಾಗದೆ ಮೇಲಿನಿಂದ ಕೆಳಕ್ಕೆ ಧುಮುಕಿ ಕೈಕಾಲುಮುರಿದುದಲ್ಲದೆ ಜನಸಂದಣಿಯಲ್ಲಿ ಸಿಕ್ಕಿ ... ಒಳಗಿನಿಂದ ಹೊರಗೆ ಬರಲು

ಸಾಧ್ಯವಾಗದೇ ಬೆಂಕಿಗೆ ಸಿಕ್ಕಿ ಸುಮಾರು 14 ಮಂದಿ ಹೆಂಗಸರು ಸುಟ್ಟುಹೋದರಲ್ಲದೆ ಅನೇಕರಿಗೆ ಪೆಟ್ಟುಕೂಡ ಬಿದ್ದಿದೆ. ಬೆಂಕಿ ಆರಿಸುವ ಯಂತ್ರದವರು ಬಂದು ಎಷ್ಟು ಪ್ರಯತ್ನಿಸಿದರೂ 3 ಘಂಟೆಗಳಕಾಲ ಅಗ್ನಿಯನ್ನು ಶಾಂತಪಡಿಸಲಾಗಲಿಲ್ಲ. ಈ ಅನಾಹುತದ ವಿಷಯವು ನಿಜಾಮರಿಗೆ ತಿಳಿದು ಅವರು ಮೃತರ ಬಂಧುಗಳ ವ್ಯಸನದಲ್ಲಿ ತಮ್ಮ ಸಹಾನುಭೂತಿಯನ್ನು ತಿಳಿಸಿದ್ದಲ್ಲದೆ, ಇನ್ನುಮುಂದೆ ಇಂಥಾ ಅಪಾಯಗಳು ಸಂಭವಿಸದಂತೆ ನೋಡಿಕೊಳ್ಳಲು ಸ್ಪೆಷಲ್ ಇನ್ಸ್‌ಪೆಕ್ಟರುಗಳನ್ನು ನಿಯಮಿಸುವುದಾಗಿ ತಿಳಿಯಪಡಿಸಿರುತ್ತಾರೆ.

ಬೆಲ್ಜಿಯಂ ರಾಜ್ಯದಲ್ಲಿ ಈಚೆಗೆ ಪ್ರತಿನಿಧಿಗಳ ಚುನಾವಣೆ ಹೊಸದಾಗಿ ನಡೆದಂದಿನಿಂದಲೂ ಹೊಸಸರಕಾರವನ್ನು ಸ್ಥಾಪಿಸುವ ವಿಷಯದಲ್ಲಿ ಹಲವು ತೊಂದರೆಗಳು ಪ್ರಾಪ್ತವಾಗಿವೆ. ಹಿಂದೆ ಮುಖ್ಯ ಮಂತ್ರಿತ್ವವನ್ನು ವಹಿಸಿದ್ದ ಎಂ. ವಾನ್ ಜೀಲೆಂಡ್‌ರವರು ರಾಜೀನಾಮೆ ಕೊಟ್ಟಿರುತ್ತಾರೆ. ಮತ್ತೊಬ್ಬ ರಾಜಕೀಯ ಮುಖಂಡನ ನೇತೃತ್ವದಲ್ಲಿ ಹೊಸದೊಂದು ಸರ್ಕಾರವನ್ನು ಸ್ಥಾಪಿಸಲು ಪ್ರಯತ್ನಪಟ್ಟಿದ್ದು ಸಾರ್ಥಕವಾಗಲಿಲ್ಲ. ಎಂ. ವಾನ್ ಜೀಲೆಂಡರೇ ಮತ್ತೆ ಪ್ರಯತ್ನಪಟ್ಟರೂ ಸಫಲವಾಗಲಿಲ್ಲ. ಈಚೆಗೆ ಬೆಲ್ಜಿಯಮಿನ ದೊರೆಯು ರಾಜಕೀಯ ಮುಖಂಡರುಗಳೆಲ್ಲರನ್ನೂ ಕರೆಸಿದೊಂದು ಎಲ್ಲರೂ ಎಂ. ವಾನ್ ಜೀಲೆಂಡ್‌ರವರಿಗೇ ಬೆಂಬಲಕೊಟ್ಟು ಸರ್ಕಾರವನ್ನು ಸ್ಥಾಪಿಸಲು ಸಹಾಯಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

ಅಬ್ಸೀನಿಯದ ರಾಜ್ಯಭ್ರಷ್ಟರಾದ ನೆಗಸ್ಸರಿಗೆ ಇಟಲಿ ಸರ್ಕಾರವು ವರ್ಷಕ್ಕೆ ೫೦ ಸಾವಿರ ಪೌಂಡುಗಳ ರಾಜವೇತನವನ್ನು ಕೊಡಲು ಸಿದ್ಧವಾಗಿರುವುದಾಗಿ ಖಾತರಿ ಮೂಲೆಗಳಿಂದ ಸುದ್ದಿಯು ತಿಳಿದುಬಂದಿದೆ. ಅಬ್ಸೀನಿಯದಲ್ಲಿ ಇಟಲಿಯ ಆಧಿಪತ್ಯವನ್ನು ಲೀಗ್ ಸಭೆಯು ಒಪ್ಪಿಕೊಳ್ಳುವಂತೆ ಮಾಡುವ ಉದ್ದೇಶದಿಂದ ಸಿನಾರ್ ಮುಸಲೋನಿಯು ಈ ತಂತ್ರವನ್ನು ಹೂಡಿರುವುದಾಗಿ ಕಾಣುತ್ತದೆ. ಅಬ್ಸೀನಿಯಾ ಅರಸರ ರತ್ನವನ್ನು ವಹಿಸಿರುವ ಲೀಗ್ ಸದಸ್ಯ ರಾಷ್ಟ್ರಗಳು ಈ ರಾಜವೇತನದ ದಾನದಿಂದ ಪ್ರತಿಭಟಿಸುವ ಆಸೆಯನ್ನು ನಿಲ್ಲಿಸುವರೆಂದು ಇಟಲಿಯ ರಾಜನೀತಿಜ್ಞರು ಭಾವಿಸಿದಂತಿದೆ. ಈ ಸೂಚನೆಯು ಲೀಗ್ ಕೌನ್ಸಿಲಿನ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳ ಪರ್ಯಾಲೋಚನೆಗೆ ರಹಸ್ಯವಾಗಿ ಕಳುಹಿಸಲ್ಪಟ್ಟಿರುವುದಾಗಿ ಹೇಳಲ್ಪಟ್ಟಿದೆ.

ಗಂಡನನ್ನು ಕೊಂದ ವಿಚಿತ್ರಸತಿ

ಆಗ್ರಾದ ಬಳಿ ಫೀರೋಜಾಬಾದ್ ತಹಸೀಲ್ ಎಂಬಲ್ಲಿಯಲ್ಲಿ ಸಮತ್ ಧನವಂತಿ ಎಂಬವಳು ಅವಳ ಗಂಡನಾದ ಮತಿಮುಲ್ಲಾ ಎಂಬವನು ಅವಳ ಇಷ್ಟಕ್ಕೆ ವಿರೋಧವಾಗಿ ಆಕೆಯನ್ನು ಸ್ಪರ್ಶಿಸಿದನೆಂದೂ ಅದಕ್ಕಾಗಿ ಕೋಪಗೊಂಡು ಆಕೆಯು ಬಳಿಯಲ್ಲಿದ್ದ ಬಂದೂಕದಿಂದ ಗಂಡನನ್ನು ಹೊಡೆದು ಕೊಂದಳೆಂದೂ ತಿಳಿದುಬರುತ್ತದೆ.

ಬಂಗಾಳದಲ್ಲಿ ಭೂಕಂಪ

ಕಳೆದ 9 ನೆಯ ತಾ|| ಪ್ರಾತಃಕಾಲ 5 ಘಂಟೆಯಲ್ಲಿ ಬಂಗಾಳ ಸಿಲಿಗಿರಿ ಪ್ರಾಂತದಲ್ಲಿ 30 ಸೆಕೆಂಡುಗಳವರೆಗೆ ಭೂಮಿಯು ಅದುರಿತು. ಅನೇಕ ಮನೆಗಳು ಅಪಾಯಕ್ಕೀಡಾದವು. ಮಳೆಯೂ ಒಂದೇಸಮನೆ ಸುರಿಯುತ್ತಿದೆ. ಜಲಪಾಯಿಗುರಿಯಲ್ಲಿಯೂ ಭೂಮಿಯು ನಡುಗಿತು. ಜನಗಳೆಲ್ಲರೂ ಹೆದರಿ ಮನೆಗಳಿಂದ ಹೊರಗೋಡಿಬಂದರು. ಪ್ರಾಣಾಪಾಯವೇನೂ ಆಗಿರುವುದಿಲ್ಲವೆಂದು ತಿಳಿದುಬಂದಿದೆ.

ರೈಲಿನಲ್ಲಿ ಕಳ್ಳತನ

ಪಂಜಾಬ್ ಕಲ್ಕತ್ತ ಮೇಲ್ ಗಾಡಿಯ ಇಂಟರ್ ಕ್ಲಾಸಿನಲ್ಲಿ ತನ್ನ ಸೇವಕಿಯ ಸಂಗಡ ಪ್ರಯಾಣಮಾಡುತ್ತಿದ್ದ ರಜಪೂತ ಸ್ತ್ರೀಯೊಬ್ಬಳನ್ನು ಒಂದು ಸ್ಟೇಷನ್ನಿನಲ್ಲಿ ರೈಲು ನಿಧಾನವಾಗಿ ಹೋಗುತ್ತಿದ್ದಾಗ ಡಕಾಯಿತನೊಬ್ಬನು ಒಳನುಗ್ಗಿ ಗಲಭೆಮಾಡಿದರೆ ಕೊಲ್ಲುವುದಾಗಿ ಹೆದರಿಸಿ ಆಕೆಯ ಬಳಿ ಇದ್ದ ಸುಮಾರು 16 ಸಾವಿರ ರೂ. ಬೆಲೆಬಾಳುವ ಒಡವೆವಸ್ತ್ರಗಳನ್ನು ಕಿತ್ತುಕೊಂಡು ಅಪಾಯದ ಸರಪಣಿಯನ್ನು ಎಳೆದು ಪರಾರಿಯಾದನು. ಪೋಲೀಸರು ಪತ್ತೆತರಮೂದು ನಡೆಸುತ್ತಿರುವರು.

ಆಸ್ಟ್ರೇಲಿಯದಿಂದ ಜರ್ಮನಿಗೆ ಬೂದಿಯ ರಫ್ತು

ಆಸ್ಟ್ರೇಲಿಯದ ವಿಕ್ಟೋರಿಯಾಪ್ರಾಂತದ ಬಾರ್ಚಸ್ ಮತ್ತು ಮಾರ್ಷ್ ಎಂಬ ಊರಿನಲ್ಲಿ ಮರದಿಂದ ಉದುರಿದ ಒಣಗಿದ ಎಲೆಗಳನ್ನೆಲ್ಲಾ ಒಟ್ಟುಗೂಡಿಸಿ ಸುಟ್ಟು ಆ ಬೂದಿಯನ್ನು ಮೂಟೆಗಳಲ್ಲಿ ತುಂಬಿ ಜರ್ಮನಿಗೆ ಕಳುಹಿಸುತ್ತಿರುವರಂತೆ. ಈ ಬೂದಿಯಲ್ಲಿ "ಎಲ್ಮ್" ಮತ್ತು "ಸ್ಪ್ರಿಕಾಟ್" ಜಾತಿಯ ಎಲೆಗಳ ಬೂದಿಯೇ ವಿಶೇಷವಾಗಿರುವುದೆಂದೂ, ಇದನ್ನು ಜರ್ಮನರು ಗೊಬ್ಬರಕ್ಕೆ ಉಪಯೋಗಿಸುತ್ತಿರುವರೆಂದೂ ತಿಳಿದುಬರುತ್ತದೆ.

ವಿಚಿತ್ರವಿವಾಹ !

ಉಕ್ರೇನಿಯಾ ಕ್ರಾಂತಿಕಾರರ ಮುಖ್ಯಸ್ಥನೆಂದೂ ಪೋಲೆಂಡ್ ಮಂತ್ರಿಯ ಕೊಲೆಗೆ ಕಾರಣನೆಂದೂ ಮರಣದಂಡನೆಗೆ ಗುರಿಯಾಗಿರುವ ಆಂಟೋ ಲಿಬಿಡ್ ಎಂಬವನಿಗೂ, ಇವನೊಡನೆಯೇ ಉಕ್ರೇನಿಯ ಕ್ರಾಂತಿಕಾರ ಚಳುವಳಿಯಲ್ಲಿ ಸೇರಿದ್ದು 10 ವರ್ಷಗಳ ಕಾರಾಗೃಹಶಿಕ್ಷೆ ವಿಧಿಸಲ್ಪಟ್ಟಿರುವ ಡೇರಿಯಾ ಎಂಬ ಸುಂದರಯುವತಿಗೂ ಕಾರಾಗೃಹದಲ್ಲಿ ಗುಟ್ಟಾಗಿ ವಿವಾಹವು ನೆರವೇರಿತು. ವಿವಾಹ ಸಮಯದಲ್ಲಿ ಆಂಟೋ ಲಿಬಿಡ್ಡನ ಕೈ ಬೇಡಿಗಳು ತೆಗೆಯಲ್ಪಟ್ಟಿದ್ದವಂತೆ.

ಸ್ತ್ರೀಯ ವಿಲಕ್ಷಣ ಕ್ರೂರಕೃತ್ಯ

ಹಿಂದಿನ ವಾರ ದಿನ ಬಳಿ ಒಂದು ಗ್ರಾಮದಲ್ಲಿ ಒಬ್ಬ ಸ್ತ್ರೀಯು ಖಡ್ಗದಿಂದ ತನ್ನ ಗಂಡನ ಶಿರಚ್ಛೇದನಮಾಡಿ ತಲೆಯನ್ನು ಬೀದಿಗಳಲ್ಲಿ ರಕ್ತದರ್ಶನದಿಂದ ಉನ್ಮತ್ತಳಾಗಿ ಕತ್ತಿಯನ್ನು ಹಿಡಿದು ಬೀದಿಯಲ್ಲೆಲ್ಲಾ 3 ದಿವಸ ಗಳವರೆಗೂ ಒಂದೇಸಮನೆ ಅಲೆದಳು. ದಾರಿಯಲ್ಲಿ ಇವಳನ್ನು ಕಂಡವರೆಲ್ಲಾ ಹೆದರಿ ದೂರದಿಂದಲೇ ಕಣ್ಮರೆಯಾಗುತ್ತಿದ್ದರು. ಕೊನೆಗೆ ಪೋಲೀಸರು ಸಾಹಸಮಾಡಿ ಆಕೆಯನ್ನು ಹಿಡಿದು ಕೋರ್ಟಿಗೆ ಹಾಜರ್ಮಾಡಿದರು. ಜಡ್ಜರ ಮುಂದೆ ಆಕೆಯು ತಾನು ಮಾಡಿದ ಕೃತ್ಯವನ್ನೊಪ್ಪಿಕೊಂಡಳು. ಮುಂದಿನ ವಿಚಾರಣೆ ನಡೆಯುತ್ತಿದೆ.

ವಿಚಿತ್ರ ವ್ಯಕ್ತಿ !

ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಡ ಸ್ಲಿಮಾಂಟ್ ಎಂಬ ಒಬ್ಬ ವ್ಯಾಪಾರಿಯು ಇರುವನು. ಇವನು ಯಾವ ಪದಾರ್ಥವನ್ನು ಮುಟ್ಟಿದರೂ ಬೆರಳಿನ ಗುರುತುಗಳು ಬೀಳುವುದಿಲ್ಲ. ಯಾತಕ್ಕೆಂದರೆ ಇತರರ ಕೈಬೆರಳುಗಳಲ್ಲಿರುವಂತೆ ಇವನ ಬೆರಳುಗಳಲ್ಲಿ ಗೆರೆಗಳಾಗಲಿ ಹಳ್ಳತಿಟ್ಟುಗಳಾಗಲಿ ಇಲ್ಲದೆ ನಯವಾಗಿರುವುವಂತೆ. ಈ ವಿಚಿತ್ರವಾದ ಬೆರಳುಗಳು ಇವನಿಗೆ ಜನ್ಮಸಿದ್ಧವೆಂದು, ಇವನ ತಾಯಿಗೂ ಮತ್ತು ಅಜ್ಜಿಗೂ ಇದೇರೀತಿಯಾದ ಬೆರಳುಗಳಿದ್ದುವೆಂದು ಹೇಳುತ್ತಾನೆ. ಈತನ ಬೆರಳುಗಳಿಗೆ ನೀರಿನ ಸ್ಪರ್ಶವೂ ಅನುಭವವಾಗುವುದಿಲ್ಲವಂತೆ !

ಬ್ರಾಹ್ಮಣಯುವತಿಯ ಕೊಲೆ

ಕುಂಭಕೋಣದ ಸೋಲೆಯಪ್ಪರ್‌ಬೀದಿಯ ಒಂದು ಮನೆಯಿಂದ ದುರ್ವಾಸನೆ ಬರುತ್ತಿದ್ದುದರಿಂದ ಪೋಲೀಸರು ಮನೆಯಬಾಗಿಲಿಗೆ ಹಾಕಿದ್ದ ಬೀಗವನ್ನು ಒಡೆದು ಒಳಗೆ ನುಗ್ಗಿ ಅಲ್ಲಿ ಬಿದ್ದಿದ್ದ ಅರ್ಧಕೆಟ್ಟಿದ್ದ ಯುವತಿಯ ದೇಹವನ್ನು ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಿದರು. ಮೃತಳ ತಲೆಯಲ್ಲಿದ್ದ ಗಾಯವನ್ನು ನೋಡಿದರೆ ತಲೆಯ ಮೂಳೆಯೇ ಆ ಏಟಿಗೆ ಒಡೆಯಬೇಕಾಗಿತ್ತೆಂದು ಹೇಳುತ್ತಾರೆ. ಆಕೆಯು ಪಂಚುದೀಕ್ಷಿತರೆಂಬ ಆಚಾರವಿಲ್ಲದ ಸ್ಮಾರ್ತಬ್ರಾಹ್ಮಣರ ಮಗನ ಎರಡನೆಯ ಹೆಂಡತಿ ಎಂದು ಹೇಳಲಾಗಿದೆ. ಪೋಲೀಸರು ತನಿಖೆಯನ್ನು ನಡೆಸುತ್ತಿದ್ದಾರೆ.

ವಿದರ್ಭರವರ ನೀತಿಯಲ್ಲಿ ಬದಲಾವಣೆ

ಇಟಲಿಯ ಮೇಲಿನ ಸ್ಯಾಂಕ್ಷನ್ನುಗಳನ್ನು ತೆಗೆಯಲು ವಿದೇಶಾಂಗಸಚಿವರಾದ ಮಿ|| ಆಂಟೋನಿ ಏಡನ್‌ರವರೂ ಒಪ್ಪಿದಂತಿದೆ. ಸ್ಯಾಂಕ್ಷನ್ನುಗಳನ್ನು ತೆಗೆದುಹಾಕಬೇಕೆಂದು ಜಿನೀವಾ ಸಭೆಯವರು ನಿರ್ಧರಿಸಿದರೆ "ಬೇಗ ಆಗಬಹುದೆಂದು" ಹೇಳಲು ಬ್ರಿಟಿಷ್ ಸರ್ಕಾರವು ನಿರ್ಧರಿಸಿತ್ತು. ಆದರೆ ಈ ಸಂದರ್ಭದಲ್ಲಿ ಸ್ಯಾಂಕ್ಷನ್ನುಗಳನ್ನು ತೆಗೆಯಕೂಡದೆಂದು ಹೇಳುತ್ತಿದ್ದ ಮಿ|| ಏಡನ್‌ರವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡುವರೆಂದು ಯೋಚಿಸಲಾಗಿತ್ತು. ಅದರ ಬದಲು ಅವರು ಸರ್ಕಾರದ ನೀತಿಯನ್ನು ವಿವರಿಸುವ ಸರ್ಕಾರಕ್ಕೆ ಬೆಂಬಲಕೊಡುವ ಭಾಷಣವನ್ನು ಮಾಡುವರೆಂದು ತಿಳಿದುಬರುತ್ತದೆ.

ಸ್ತ್ರೀ ಅಪಹಾರಕ್ಕಾಗಿ ನವಾಬನಿಗೆ ಕಾರಾಗೃಹಪ್ರಾಪ್ತಿ

ಸಿಂಧೂದೇಶದ ಟಾಚ್‌ಪುರದ ನವಾಬನು ಅವನ ಜಮೀನ್ ಕೆಲಸಮಾಡುವ ರೈತನ ಪತ್ನಿಯನ್ನು ಪುಸಲಾಯಿಸಿ ಕರಾಚಿಪಟ್ಟಣದ ಬಳಿಯಲ್ಲಿರುವ ಒಂದೂರಿಗೆ ಕರೆದುಕೊಂಡು ಹೋಗುತ್ತಿರುವಾಗ್ಗೆ ಆ ಯುವತಿಯ ಪತಿಯು ಅಡ್ಡಬಂದು ತನ್ನ ಪತ್ನಿಯನ್ನು ಹಿಂದಕ್ಕೆ ಕಳುಹಿಸಬೇಕೆಂದು ಕೇಳಲು ನವಾಬನು ಅದಕ್ಕೊಪ್ಪದೆ ಅವನ ಮೇಲೆ ಗುಂಡುಹಾರಿಸಿ ಗಾಯಪಡಿಸಿದನೆಂದು ಕರಾಚಿ ಕೋರ್ಟಿನಲ್ಲಿ ಮೊಕದ್ದಮೆಯಾಗಿ ನವಾಬನಿಗೆ 300 ರೂಗಳ ಜುಲ್ಮಾನೆಯೂ, 3 ವರ್ಷ ಕಾರಾಗೃಹಶಿಕ್ಷೆಯೂ ವಿಧಿಸಲ್ಪಟ್ಟಿತು. ನವಾಬನು ಮೇಲಿನ ಕೋರ್ಟಿಗೆ ಮಾಡಿದ್ದ ಅಪೀಲು ತಿರಸ್ಕೃತವಾಯಿತು.

ಆತ್ಮಶಕ್ತಿಯ ಪ್ರಭಾವ

ಬೊಂಬಾಯಿನ ಯೋಗೇಶ್ವರೀ ಗವಿಯ ಹಿಂದೂ ಸನ್ಯಾಸಿಯೊಬ್ಬರು ತಮ್ಮ ಜೊತೆಯಲ್ಲಿ ನಾಲ್ಕು ವರ್ಷಗಳಿಂದಲೂ ಸಾಕಿದ ಒಂದು ಸಿಂಹದೊಡನೆ ವೈಸ್‌ರಾಯರನ್ನು ಭೇಟಿಮಾಡಿದರು. ವೈಸ್‌ರಾಯರು ಶ್ರೀ|| ಸ್ವಾಮಿಗಳಿಗೆ ಉತ್ಸಾಹಪೂರ್ವಕವಾದ ಸ್ವಾಗತವನ್ನಿತ್ತರು. ಲಕ್ಷಾಂತರ ಜನರು ಸ್ವಾಮಿಗಳ ಮತ್ತು ಸಿಂಹದ ದರ್ಶನಕ್ಕೋಸ್ಕರ ಹೋಗುತ್ತಿದ್ದಾರೆ. "ಅತಿಕ್ರೂರವೇ ಬಲವು. ಹಿಂದೂತತ್ವಜ್ಞಾನವು ಬೋಧಿಸುವ ಈ ಆಧ್ಯಾತ್ಮಿಕ ಪ್ರಭಾವದಿಂದ ದುಷ್ಟಪ್ರಾಣಿಗಳನ್ನೂ ಸಾಧುಮಾಡಬಹುದು. ಈ ಹೆಣ್ಣುಸಿಂಹವು ಪ್ರತಿ ಪ್ರಾತಃಕಾಲವೂ 'ರಾಮ' ಎಂಬ ದೇವರ ಹೆಸರನ್ನು ಉಚ್ಚರಿಸುತ್ತದೆ" ಎಂದು ಸ್ವಾಮಿಯವರು ಹೇಳಿರುವರು. ಹಿಂದೂತತ್ವಶಾಸ್ತ್ರಗ್ರಂಥಗಳು ಬರೀ ಕಟ್ಟುಕಥೆಯಲ್ಲ ಎಂಬುದನ್ನು ಇವರು ಇಂಡಿಯಾದಲ್ಲೆಲ್ಲಾ ಸಿದ್ಧಾಂತಮಾಡಬೇಕೆಂದಿರುವರು.

ಮುಸ್ಲಿಮರ ಕ್ರೂರಕೃತ್ಯ

ಷರೀಫ್‌ಪುರದ ಬಳಿ ಬಿಹಾರ್‌ಷರೀಫ್ ಹಳ್ಳಿಯ ಸಾಹುಕಾರ್ ಬಾಬುಶಂಕರ್ ಚಂದ್ರಪ್ರಸಾದ್ ಎಂಬವರು ಕೆಲವು ಜಮೀನನ್ನು ಹರಾಜಿನಲ್ಲಿ ಪಡೆದರು. ಹೀಗೆ ಇವರು ಕೊಂಡ ಜಮೀನಿನಲ್ಲಿ ಒಬ್ಬ ಮುಸ್ಲಿಮನ ಮನೆಯು ಸೇರಿತ್ತು. ಇವರು ಅವನನ್ನು ಓಡಿಸುವ ಬದಲು ಅವನು ಅಲ್ಲಿಯೇ ಇದ್ದುಕೊಂಡು ಅನ್ಯರಿಗೆ ಕೊಡಬೇಕಾದ ಹಣವನ್ನು ಕೊಟ್ಟು ಇರಿಸುವಂತೆ ಹೇಳಿದ್ದರು. ಎಷ್ಟುಕಾಲವಾದರೂ ಅವನಿಂದ ಹಣವಸೂಲಾಗದ್ದರಿಂದ ಬಾಬುಗಳು ತಮ್ಮ ಮಗನನ್ನು ಕೇಳಲು ಕಳುಹಿಸಿದರು. ಆದರೆ ಹಣ ವಸೂಲಾಗುವ ಬದಲು ಬರೀ ಜಗಳದಲ್ಲಿ ಕೊನೆಗೊಂಡಿದ್ದರಿಂದ ಬಾಬುಗಳ ಮಗನು ಬರಿಗೈಯಲ್ಲೇ ಹಿಂತಿರುಗಬೇಕಾಯಿತು. ಅನಂತರ ಮುಸ್ಲಿಮನು ಹಣ ಕೇಳಲು ಬರುವ ಬಾಬುಗಳಿಗೆ ಏನಾದರೂ ಶಿಕ್ಷೆಮಾಡಬೇಕೆಂದು ಮತ್ತೆ ಕೆಲವು ಮುಸ್ಲಿಮರೊಡನೆ ಸಲಹೆ ನಡೆಸಿ ಸಮಯನಿರೀಕ್ಷಣೆಯಲ್ಲಿದ್ದನು. ಒಂದು ದಿನ ಬಾಬುವಿನ ಮಗನು ಸ್ನಾನಕ್ಕೆ ಪಕ್ಕದ ಹೊಳೆಗೆ ಹೋಗಿರುವುದನ್ನು ತಿಳಿದು ಮುಸ್ಲಿಮರೆಲ್ಲ ಕೂಡಿ ಅವನ ಮೇಲೆ ಬಿದ್ದು ಒಡವೆಗಳನ್ನೆಲ್ಲಾ ಕಸಿದುಕೊಂಡು ಅವನನ್ನೂ ಎಳೆದುಕೊಂಡು ಹೋಗಲು ಪ್ರಯತ್ನಿಸಿದರು. ಇಷ್ಟರಲ್ಲಿ ಅವನ ಆರ್ತಧ್ವನಿಯನ್ನು ಕೇಳಿ ಮನೆಯವರೂ ನೆರೆಹೊರೆಯವರೂ ಅವನ ಸಹಾಯಕ್ಕೆ ಓಡಿದರು. ಅವನನ್ನು ನೆಲದಮೇಲೆ ದರದರನೆ ಎಳೆದೊಯ್ಯುತ್ತಿದ್ದ ಮುಸ್ಲಿಮರು ಇವರನ್ನು ಕಂಡು ಅವನನ್ನು ಬಿಟ್ಟೋಡಿದರು. ನೆಲದಮೇಲೆ ಎಳೆದದ್ದರಿಂದ ಆತನ ಮೈಕೈಗಳೆಲ್ಲಾ ಗಾಯವಾಗಿರುತ್ತವೆ. ಪೋಲೀಸರು ಹಳ್ಳಿಗೆ ಹೋಗಿ ಮುಂದೆ ಗಲಭೆಯಾಗದಂತೆ ನೋಡಿಕೊಳ್ಳುತ್ತಿರುವರು.

[೩ನೇ ಪುಟದಿಂದ ಮುಂದುವರಿದುದು]

ಗಳಿಂದ ಸ್ತುತಿಸಲ್ಪಟ್ಟು ವೈದಿಕರ ಪವಿತ್ರವಾದ ಮಸ್ತಕಗಳಲ್ಲಿ ಮೆರೆಯುವುದು, ಇಷ್ಟೇ ಏಕೆ? ಸಕಲಲೋಕಗಳ ತಾಯಿಯಾದ ಪಾರ್ವತೀದೇವಿಯು ಹಸುವಿನಲ್ಲಿ ಮೂರುಗೆರೆಯಾಗಿ ಹೊಳೆಯುತ್ತಿದೆ. ಪಾರ್ವತೀಪತಿಯಾದ ಶಿವನಿಗಾದರೋ ಸ್ವಲ್ಪ ಭಸ್ಮದಿಂದ ತೃಪ್ತಿಯೇ ಇಲ್ಲ, ಅದಕ್ಕಾಗಿ ಪರಶಿವನು ತನ್ನ ಸರ್ವಾಂಗಗಳಲ್ಲಿಯೂ ಭಸ್ಮವನ್ನು ಯಥೇಚ್ಛವಾಗಿ ಲೇಪಿಸಿಕೊಂಡು ಆನಂದದಿಂದ ಸರ್ವರನ್ನೂ ಕಾಪಾಡುತ್ತಿದ್ದಾನೆ ಎಂದ ಮೇಲೆ ಗೋಜಾತಿಯು ಎಷ್ಟು ಪೂಜ್ಯವಾದುದೆಂಬುದು ಯಾರಿಗೆ ತಾನೆ ಗೊತ್ತಾಗುವುದಿಲ್ಲ!

ಪ್ರಾಚೀನಕಾಲದಲ್ಲಿ ಈ ಗೋವುಗಳ ಮೇಲೆ ಅಪಾರವಾದ ಶ್ರದ್ಧೆಯಿದ್ದಿತು ಎಂತೆಂದರೆ 'ಋಗ್ವೇದ' ದಲ್ಲಿ—

ಗೌರ್ಮೇ ಮಾತಾ ಋಷಭಃ ಪಿತಾ |
ಮೇ ದಿವಂ ಶರ್ಮ ಜಗತೀ ಮೇ ಪ್ರತಿಷ್ಠಾ ||

(ಆಕಳು ನನ್ನ ತಾಯಿ, ಎತ್ತು ನನ್ನ ತಂದೆ, ಇವೆರಡೂ ನನಗೆ ಇಹಪರಸುಖವನ್ನುಂಟುಮಾಡಲಿ ನನಗೆ ಪ್ರತಿಷ್ಠೆಯುಂಟಾಗಲಿ) ಎಂತ ಗೋವಿನ ಪ್ರಶಂಸೆಯು ಕಂಡುಬರುವುದು. ವ್ಯಾಸಮಹರ್ಷಿಗಳು 'ಅಗ್ನಿಪುರಾಣ' ದಲ್ಲಿ—

"ಗಾವಃ ಸ್ವರ್ಗಸ್ಯ ಸೋಪಾನಂ ಗಾವೋ ಮಾಂಗಲ್ಯಮುತ್ತಮಂ | ಗಾವಃ ಪವಿತ್ರಂ ಪರಮಂ ಗಾವೋ ಧನ್ಯಾಃ ಸನಾತನಾಃ || ನಮೋ ಗೋಭ್ಯಃ ಶ್ರೀಮತೀಭ್ಯಃ ಸೌರಭೇಯೀಭ್ಯ ಏವಚ | ನಮೋ ಬ್ರಹ್ಮಸುತಾಭ್ಯಶ್ಚ ಪವಿತ್ರಾಭ್ಯೋ ನಮೋ ನಮಃ ||"

ಗೋವುಗಳನ್ನು ಸ್ವರ್ಗದ ಮೆಟ್ಟಲನ್ನಾಗಿಯೂ, ಬ್ರಹ್ಮನ ಪುತ್ರಿಯರನ್ನಾಗಿಯೂ ಸ್ತುತಿಸಿರುವರು. ಋಗ್ವೇದದ ವ್ಯಾಖ್ಯಾನಕಾರರಾದ ಸಾಯಣಾಚಾರ್ಯರು "ಗೋಜಾತಿಯಿಂದಲೇ ನಾವು ಮಾತನಾಡುವುದನ್ನು ಕಲಿತಿದ್ದೇವೆ. ಆಕಳಕರುವು ತನ್ನ ತಾಯಿಯನ್ನು ಅಂಬಾ ಎಂದು ಕರೆದರೆ ನಮ್ಮ ಶಿಶುವು ತನ್ನ ತಾಯಿಯನ್ನು ಅವ್ವಾ ಅವ್ವಾ ಎಂದು ಕರೆಯುವುದು. ಅವ್ವಾ ಎಂಬುದು ಅಂಬಾ ಶಬ್ದದಿಂದಲೇ ಉಂಟಾಗಿರುವುದರಿಂದ ಶಿಶುಗಳ ತಾಯಿಯೂ ಸಮಾನಯೋಗ್ಯತೆಯುಳ್ಳ ತಾಯಿಯರಲ್ಲದೆ ಬೇರೆಯಲ್ಲ" ಎಂತಾಗಿ ಹೇಳಿರುವುದರಿಂದ ಗೋವು ಮಾತೃಸ್ವರೂಪವೇ ಸರಿ.

(ಸಶೇಷ)

ಒಳಪಂಗಡಗಳನ್ನು ಮುರಿದರೆ ವೀರಶೈವರ ಏಕೀಕರಣವಾಗುವದೇ?

"ಪಂಗಡಗಳೆಂದರೆ ಪರಸ್ಪರ ವಿರೋಧವನ್ನು ಬೆಳೆಸುವ ಪಾರ್ಟಿಗಳಲ್ಲ, ಜಾತಿ. ವಿಭಾಗಗಳಾಗಿವೆ"

(ಬರೆದವ—ದ್ಯಾವಪ್ಪ ವಿನೋದ)

ತಲೆಯೊಳಗಿನ ಹುಚ್ಚು ಬಿಡುಗಡೆಯಾದರೆ ಒನಿಕೆಯನ್ನು ತಲೆಗೆ ಸುತ್ತಿಕೊಂಡು ಹೋಗಿ ಸಂತೆಮಾಡಿಕೊಂಡು ಬರುವೆನೆಂದು ಹೇಳಿದ ಮಹಾಮೂರ್ಖಶಿರೋಮಣಿಯಂತೆ ಇದೀಗ ಕೆಲಜನ ಅರಣ್ಯಪಂಡಿತರು ವೀರಶೈವಮತದಲ್ಲಿ ಪರಿಶೋಭಿಸುತ್ತಲಿದ್ದ ಜಾತಿ ತಾರತಮ್ಯಗಳಿಗೆ 'ಒಳಪಂಗಡಗಳು' ಎಂಬ ನೂತನವಾದ ಅಭಿದಾನವನ್ನಿಟ್ಟು ಇವುಗಳನ್ನು ಪರಿಮಾರಿಸಲು ಹಾತೊರೆಯುತ್ತಿದ್ದರೆ ಹೀಗೆ ಹಾತೊರೆಯುವ ಬಂಟರು ಮೊದಲು ತಾವು ಜನ್ಮವೆತ್ತಿದ ಜಾತಿಗೆ ತಿಲಾಂಜಲಿಯನ್ನೀಯಬೇಕಲ್ಲವೇ? ತಾನು ಕುಲಗೇಡಿಯಾಗದೆ ಮತ್ತೊಬ್ಬರನ್ನು ಜಾತಿಹೀನರನ್ನಾಗಿ ಮಾಡುವದು ಸಾಧ್ಯವೇ?

ವಜ್ರಲೇಪದಂತಿದ್ದ ಜಾತಿಗಳು ಬಾಯಿಪುರಾಣದ ಸಿಡಿಲಿಗೆ ನಾಶವಾಗಲಾರವು. ಜಾತಿವೈಶಿಷ್ಟ್ಯದ ನಿಜತತ್ವವನ್ನರಿಯದೆ ಜನ್ಮಸಿದ್ಧವಾಗಿ ಬಂದ ಜಾತಿಗಳನ್ನು ಜರೆಯುತ್ತ ಪಕ್ಷಾಂಧರ ಸಭೆಯಲ್ಲಿ ಧರ್ಮಾಭಿರುಚಿಯನ್ನರಿಯದ ಮೂಕರು ಮನೆಬಿದ್ದಂತೆ ಚೀರಾಡಿ ಠರಾವು ಪಾಸುಮಾಡಿಕೊಂಡ ಮಾತ್ರದಿಂದ ಅದರ ಪರಿಣಾಮವು ಸಮಾಜದ ಮೇಲೆ ಖಂಡಿತವಾಗಿಯೂ ಆಗಲಾರದು. ಈ ಹಂಡಬಂಡ ಠರಾವುಗಳನ್ನು ಕೇಳುವವರಾರು?

ವೀರಶೈವಮತದಲ್ಲಿ ಒಂದಲ್ಲ, ಎರಡಲ್ಲ, ನೂರಿನ್ನೂರು ಮುಖ್ಯಜಾತಿಗಳಿರುವವಲ್ಲದೆ ಇವುಗಳ ಉಪಜಾತಿಗಳೂ ಸಹ ಅನೇಕವಿರುತ್ತವೆ. ಖಗೋಳದಲ್ಲಿದ್ದ ತಾರಾಗೋಲಗಳನ್ನೆಲ್ಲ ಒತ್ತಟ್ಟಿಗೆ ಕೂಡಿಸುವದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ವಿಶಾಲವಾದ ಪ್ರಪಂಚದಲ್ಲಿದ್ದ ನಾನಾವಿಧ ಜಾತಿಗಳನ್ನೆಲ್ಲ ಒಂದನ್ನಾಗಿ ಮಾಡುವದು ಎಂದಿಗೂ ಸಾಧ್ಯವಿಲ್ಲ.

'ಒಳಪಂಗಡಗಳ ಏಕೀಕರಣ' ವೆಂಬ ಮಹಾಮಂತ್ರಾನುಷ್ಠಾನಶೀಲರು ಇದರ ವ್ಯಾಖ್ಯಾನವನ್ನು ವಿಸ್ತರಿಸುವಾಗ ಲಿಂಗವನ್ನು ಧರಿಸಿದವರೆಲ್ಲರಲ್ಲಿಯೂ ಉಣ್ಣಬೇಕು, ಗಂಡುಹೆಣ್ಣುಗಳನ್ನು ಕೂಡಿಸಿ ಶರೀರಸಂಬಂಧವನ್ನು ಮಾಡಬೇಕೆಂದು ಹೇಳುತ್ತಿರುವರು. ಇದಕ್ಕೆ ಕಲ್ಯಾಣದ ಒಸಬಣ್ಣನವರೊಬ್ಬರು ಮಾರ್ಗದರ್ಶಕರಂತೆ! ಇವರು ಡೋಹರಕಕ್ಕಯ್ಯ, ಮಾದಿಗರ ಹರಳಯ್ಯ ಮೊದಲಾದವರಲ್ಲಿ ಉಂಡಿರುವರಲ್ಲದೆ ಜೈನರ ಮಗಳಾದ ನೀಲಮ್ಮನನ್ನೂ ಆರಾಧ್ಯಬ್ರಾಹ್ಮಣರ ಮಗಳಾದ ಗಂಗಮ್ಮನನ್ನೂ (ಹೆಣ್ಣಿಗೆಮಾತ್ರ ಲಿಂಗಕಟ್ಟಿ) ಲಗ್ನಮಾಡಿಕೊಂಡರಂತೆ! ತವರುಮನೆಯವರು ಜೈನರು, ಗಂಡನ ಮನೆಯವರು ಲಿಂಗಧಾರಿಗಳು! ಭಲೆ! ಸಂಕರ ಮತೋದ್ಧಾರಕಪ್ರಭುವೇ! ನಿನ್ನ ಜನ್ಮವೇ ಸಾರ್ಥಕ! ವೀರಶೈವ ಕಲಂಕಪ್ರಾಯವಾದ ೧೨ ನೇ ಶತಮಾನದಲ್ಲಿ ೩|| ವರುಷಮಾತ್ರ ಪ್ರದೀಪ್ತವಾದ ಸಾಂಕರ್ಯಾಗ್ನಿಯನ್ನು ಕೃಷ್ಣಾನದಿಯಲ್ಲಿ ಮುಳುಗಿಸಿದ ಸನಾತನ ಧರ್ಮಜ್ಯೋತಿಯ ಶಕ್ತಿಯು ಸಾಮಾನ್ಯವಾದುದಲ್ಲ!

ಕಲಿಕಾಲವೈಚಿತ್ರ್ಯದಿಂದ ಸನಾತನಧರ್ಮವೇ ಕ್ಷೀಣೋನ್ಮುಖವಾಗಿ ನರಳುತ್ತಿರುವಾಗ ವೀರಶೈವಧರ್ಮವಾದರೂ ದೃಢ ತಾವಸ್ಥೆಗೆ ಗುರಿಯಾಗತೊಡಗಿದೆ. 'ಚಹಾ' ಹೋಟೆಲುಗಳ ಚಲ್ಲಾಟದಲ್ಲಿ ವೈದಿಕಧರ್ಮವು ನೀರಿಗೆ ಸ್ವಾಹಾರೋಹಣ ಮಾಡತೊಡಗಿದ. ವಿಶ್ವಧರ್ಮವು ಬೆದರಿಬೆಂಡಾಗಿರುವಾಗ ಜಾತಿವಿಶಿಷ್ಟಾಚರಣೆಗಳು ಶಕ್ತಿಯುಕ್ತವಾಗಿ ನಿಲ್ಲಲಿಕ್ಕೆ ಆಧಾರವಿಲ್ಲದಾಗಿದೆ. ಭಾರತೀಯರಿಗೆ ಪ್ರಾಚೀನಕಾಲದ ಶಿಕ್ಷಣದಲ್ಲಿ ಧಾರ್ಮಿಕ ಶಿಕ್ಷಣೋಪದೇಶವಿದ್ದುದರಿಂದ ಅವರು ಆದರ್ಶಕಡೆಗೆ ಹಣಿಕಿಹಾಕುತ್ತಿದ್ದರು. ಇದೀಗ ಪ್ರಚಾರದಲ್ಲಿದ್ದ ಶಿಕ್ಷಣದಲ್ಲಿ ಧಾರ್ಮಿಕ ಶಿಕ್ಷಣದ ಗಂಧದಗಾಳಿಯುಸಹ ಬಡಿಯದಂತಾಗಿದ್ದು, ನಾಸ್ತಿಕ ವಿಚಾರಸಾಗರದಲ್ಲಿ ಈಜಾಡುತ್ತಿರುವ ಮಹಾನುಭಾವರಿಗೆ ಆತ್ಮಕಥವು ಜ್ಞಾನವು ಹೇಗೆ ಉಂಟಾಗಬೇಕು. ಧರ್ಮವೆಲ್ಲಿ? ದೇವರೆಲ್ಲಿ? ಪುಣ್ಯವೆಲ್ಲಿ? ಸ್ವರ್ಗವೆಲ್ಲಿ? ಎಲ್ಲವೂ ಉಡುಪಿಯವರ ಹೋಟೆಲಿನಲ್ಲಿ ಸದಾ ವಾಸವಾಗಿರುವವಷ್ಟೆ?

ನಾಗಲಿ, ಧರ್ಮಗ್ಲಾನಿಯು ಬೋಗಿಸಲಿ, ಧರ್ಮಹತ್ಯಾಫಲವನ್ನು ಇದರಿಂದುಂಟಾಗುವ ಘನತರವಾದ ಕಷ್ಟದಲ್ಲಿಬಿದ್ದ ಮಾನವಪ್ರಪಂಚವನ್ನುಎತ್ತಿಹಿಡಿಯಲು ಪರಮಾತ್ಮನು ದರ್ಮರಕ್ಷಣೆಗಾಗಿ ಅವತರಿಸದಿರನು. ಈಗಿನ ನಾಸ್ತಿಕಪ್ರಪಂಚಕ್ಕೆ ಸನಾತನಧರ್ಮಬೋಧೆಯು ಬಹಳ ಬೇಸರವನ್ನುಂಟುಮಾಡುವದು. ಆದರೂ ಮಹಾತ್ಮರು ಲೋಕೋದ್ಧಾರಕ್ಕಾಗಿ ಗಗನವಾಣಿಯಂತೆ ಧರ್ಮಬೋಧಾಮೃತವೃಷ್ಟಿಯನ್ನು ಕರೆಯುತ್ತಿರುವರು. ನಮ್ಮ ವೀರಶೈವಮತಸಾಮ್ರಾಜ್ಯದಲ್ಲಿ ಯಾವಾಗಲೂ ಧರ್ಮಾತ್ಮರಾದ ನಿಜಮಹಾಂತರಿಗೆ ಕೊರತೆಯಿಲ್ಲ. ಒಬ್ಬರ ಆದರ್ಶಗಳ ದಾವಳಿಯು ಕಲಿಯುಗದ ದೂಷಿತವಾತಾವರಣದಲ್ಲಿ ಹೆಚ್ಚಾಗತೊಡಗಿದ್ದರಿಂದ ವೀರಶೈವಧರ್ಮದ ನಿಜಮಾರ್ಗವು ಕಾಣದಂತಾಗಿದೆ. ವೀರಶೈವಮತೋದ್ಧಾರಕ್ಕಾಗಿ ಒಪ್ಪಕಂಕಣರಾದ ಗುರುವರ್ಗದ ವಿಭೂತಿಗಳು ಮಾರ್ಗದರ್ಶಕರಾಗಿದ್ದಾರೆ. ಸಾಂಕರ್ಯದ ಕಾರ್ಗತ್ತಲೆಯಲ್ಲಿ ಬಿಲ್ಕಿದ ಕಸಿಗಳಿನ ಕಣ್ದೆರೆದು ನೋಡಿ, ಧರ್ಮಮಾರ್ಗವನ್ನು ಹಿಡಿದುಸಾಗಲು ಒರದಂತಾಗಿದೆ.

ವೀರಶೈವ ಏಕೀಕರಣದ ಸೊಬಗನ್ನು ಕಣ್ಣುತುಂಬ ನೋಡಬೇಕಾದರೆ ಒಳಪಂಗಡಗಳ ಏಕೀಕರಣವೆಂಬ ಕಪ್ಪು ಕನ್ನಡಿಯನ್ನು ಕಣ್ಣಿಗೆ ಹಾಕಿಕೊಂಡರೆ ಖಂಡಿತವಾಗಿಯೂ ಏಕೀಕರಣವಾಗಲಾರದು. ಆಯಾಯ ಪಂಗಡ (ಜಾತಿ) ಗಳ ವೈಶಿಷ್ಟ್ಯವನ್ನೂ ವಿಶ್ವಧರ್ಮದಂತಿದ್ದ ವೀರಶೈವಮತಸಿದ್ಧಾಂತನಿಜಜ್ಞಾನವನ್ನೂ ಪ್ರಚಾರಮಾಡಿದರೆ ಅತ್ಯಂತ ಸುಲಭವಾಗಿ ವೀರಶೈವಮತವು ಸಮಾನಶೀಲದಿಂದ ಐಕ್ಯದ ಸಾಮ್ರಾಜ್ಯದಲ್ಲಿ ಓಲಾಡುವಂತಾಗುವದು. "ಅವರು ಹೆಚ್ಚಲ್ಲ, ನಾವು ಕಡಿಮೆಯವರಲ್ಲ" ಎಂದು ಹೆಚ್ಚುಗಾರಿಕೆ ಕಚ್ಚಾಡುವದು ನಿಷಿತವಲ್ಲ. ಜಾತಿವಿಭಾಗಗಳು ಹೆಚ್ಚುಕಡಿಮೆಗಾಗಿ ಒಡೆದಾಡಲಿಕ್ಕಿರುವದಿಲ್ಲ. ವಿಶಿಷ್ಟಧರ್ಮದಿಂದ ನಡೆದು ವಿಶ್ವಧರ್ಮದಲ್ಲಿ ಬೆರೆತು ಮೋಕ್ಷವನ್ನು ಪಡೆಯುವದಕ್ಕಾಗಿರುತ್ತವೆ. ಇಂಥ ಅಮೋಘವಾದ ವಿಚಾರವನ್ನು ವಿಧ್ವಂಸಮಾಡಿ ವೀರಶೈವಮತದಲ್ಲಿ 'ಏಕೀಕರಣ' ವೆಂಬ ಪ್ರತಿಷ್ಠಾಪನೆಯನ್ನು ಹೇಗೆ ಮಾಡುವರೋ ನೋಡೋಣ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ದತ್ತಪುತ್ರಸ್ವೀಕಾರ ಸಮಾರಂಭ

ಶಿವಮೊಗ್ಗ ಡಿ|| ದಾರನಹಳ್ಳಿಯಲ್ಲಿರುವ ಗುರುಚರಣಸೇವಾಧುರೀಣರೂ, ಸತ್ಯಾನ್ವೇಷಕರೂ, ಪರೋಪಕಾರತತ್ಪರರೂ ಆದ ಮ|| ರಾ|| ಸಾ|| ಬೆನವಳ್ಳಿ ಲಿಂಗಪ್ಪನವರು ತಮ್ಮ ವೃದ್ಧಾಪ್ಯದ ದೆಸೆಯಿಂದುಂಟಾಗಿರುವ ದೇಹಾಲಸ್ಯದ ವಿಷಮಪರಿಸ್ಥಿತಿಯನ್ನು ಯೋಚಿಸಿ ತಮಗೆ ಸಂತಾನವಿಲ್ಲದಿರುವ ಪ್ರಯುಕ್ತ ತಮ್ಮ ವಂಶಾಭಿವೃದ್ಧಿಗಾಗಿ ತಮ್ಮ ಸವಿವಾಹಬಂಧುಗಳಾದ ಚನ್ನಗಿರಿ ತಾಲ್ಲೂಕು ಹೆಬ್ಬಳಗೆರೆ ಮ|| ರಾ|| ಶೆಟ್ಟರ ಮಹಾದೇವಪ್ಪನವರ ರುದ್ರಪ್ಪನವರ ಪುತ್ರ ಸುಮಾರು ಆರುವರ್ಷ ವಯಸ್ಸುಳ್ಳ ಚಿ|| ಸ|| ಬಸಪ್ಪನೆಂಬ ಬಾಲಕನನ್ನು (ತಾ|| ೧೭-೬-೩೬) ಸೋಮವಾರ ತಮ್ಮ ಗೃಹದಲ್ಲಿ ಗುರುಹಿರಿಯರ, ಬಂಧುಮಿತ್ರರ, ಸಮಾಜಬಾಂಧವರ ಸಮಕ್ಷಮ ವಿಧ್ಯುಕ್ತವಾಗಿ ದತ್ತಪುತ್ರನನ್ನಾಗಿ ಸ್ವೀಕರಿಸಿ ತಮ್ಮ ಮನಸ್ಸಂಕಲ್ಪವು ತಮ್ಮ ಜೀವಿತಕಾಲದಲ್ಲಿಯೇ ನೆರವೇರಿದುದಕ್ಕಾಗಿ ಸಂತೋಷಪಟ್ಟು ಯಾವ ಮಹಾಗುರುಗಳ ಕೃಪಾಶೀರ್ವಾದಬಲದಿಂದ ತಾವು ಕೃತಾರ್ಥರಾಗಿರುವರೋ ಆ ಮಹಾಪೂಜ್ಯರಾದ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ಸನ್ನಿಧಿಗೆ ಕಾಣಿಕೆರೂಪವಾಗಿ ಐದು ರೂಪಾಯಿಗಳನ್ನು ಬಿನ್ನಹಪತ್ರದೊಂದಿಗೆ ಸಮರ್ಪಿಸಿದುದಲ್ಲದೆ ವೀರಶೈವಧರ್ಮತತ್ವಗಳನ್ನು ಪ್ರತಿಪಾದಿಸುತ್ತ ಮಹೋಪಕಾರವನ್ನು ಮಾಡುತ್ತಿರುವ ಪಂಚಾಚಾರ್ಯಪ್ರಭಾ ಪ್ರೋತ್ಸಾಹಾರ್ಥವಾಗಿ ಎರಡು ರೂಪಾಯಿಗಳನ್ನೂ ಕಳುಹಿಸಿದೆ. ಗುಬ್ಬಿ ಶಿವರುದ್ರಶಾಸ್ತ್ರಿಗಳ ವಶಕ್ಕೆ ಕೊಟ್ಟು ತಮ್ಮ ನಿರ್ಮಲ ಭಕ್ತಿಭಾವವನ್ನು ಪ್ರಕಾಶಗೊಳಿಸಿದರು. ಈ ಕಾರ್ಯಕ್ಕೆ ಚನ್ನಗಿರಿ ತಾಲ್ಲೂಕು ಹೊದಿಗೆರೆ ಮ|| ರಾ|| ಸಾ|| ಪಟ್ಟರ ಚಂದಪ್ಪನವರ ಮಲ್ಲಪ್ಪನವರು, ಚನ್ನಗಿರಿ ಹೊಲೀಕೆರೆ ಮ|| ರಾ|| ಸಾ|| ಶಿವಲಿಂಗಪ್ಪನವರ ಮಾದಪ್ಪನವರು ಇದೇ ಗ್ರಾಮದ ಪಂಚಾಯಿತಿ ಮೆಂಬರರಾದ ಮ|| ರಾ|| ಸಾ|| ಚನ್ನಬಸಪ್ಪನವರು ಮ|| ರಾ|| ಸಾ|| ಯಜಮಾನ ಜವಳೀ ಗುರುಬಸಪ್ಪನವರ ಮಕ್ಕಳು ಮುರುಗಿ ರುದ್ರಪ್ಪನವರು ಮ|| ರಾ|| ಸಾ|| ಪಟ್ಟಪ್ಪರ ರುದ್ರಪ್ಪನವರು ಮ|| ರಾ|| ಸ|| ಪುಟ್ಟಣ್ಣನವರು ಇನ್ನೂ ಮುಂತಾದ ಅನೇಕ ದೈವದವರು ಆಗಮಿಸಿದ್ದರು. ಈ ಸಮಾರಂಭದ ಸಮಯದಲ್ಲಿ ಕೀರ್ತನಕೇಸರಿ ಕವಿಭೂಷಣೇತ್ಯಾದಿ ಬಿರುದಾಂಕಿತರಾದ ಗುಬ್ಬಿ ಶಿವರುದ್ರಶಾಸ್ತ್ರಿಗಳವರು ಧ್ರುವಾಖ್ಯಾನ ಎಂಬ ಸಂಕೀರ್ತನೆಯನ್ನು ಬಹು ಸರಸವಾಗಿ ಅನುವಾದ ಮಾಡಿದಬಳಿಕ ಸಭಾಧ್ಯಕ್ಷರಾದ ಮ|| ರಾ|| ಸಾ|| ಜಿ. ಎ. ಚನ್ನಬಸಪ್ಪನವರು ದತ್ತಪುತ್ರಸ್ವೀಕಾರಪತ್ರವನ್ನು ಸರ್ವರಿಗೂ ತಿಳಿಯುವಂತೆ ಓದಿಹೇಳಿದ ತರುವಾಯ ಸಭಿಕರಿಗೆಲ್ಲಾ ಗಂಧಪುಷ್ಪಫಲತಾಂಬೂಲಗಳನ್ನಿತ್ತು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಒಬ್ಬ ಪ್ರತ್ಯಕ್ಷದರ್ಶಿ

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವುವು

ಔಷಧಿ ಹೆಸರು	ತೊಲ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂದೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂದೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುತ್ತಾಭಸ್ಮ	೧	೦—೮—೦
ಅಂಜೀರಭಸ್ಮ	೧	೦—೮—೦
ಸ್ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮೌಕ್ತಿಕಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೊಂಬಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ರಾಜಿತ ಸೂರ್ಯಪುಟ	೧	೧—೦—೦
ರಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಒಖಿಮಠ, ಜಿಲ್ಲಾ ಗಢವಾಲ್ .ಯು.ಪಿ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮುದ್ರೆಯಿರುವ ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಮೂರುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುವರು ಈ ಅವಸ್ಥೆಯಿಂದ ಅನೇಕ ಗುರುವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿವೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲ ಬರೆದು ಪರಂಪರೆಯಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು ಇದಕ್ಕಾಗಿ ಒಳ್ಳೆ ಕಿರಿದಾದ ಕಾಗದಗಳನ್ನು ಉಪಯೋಗಿಸಿರುವುದಲ್ಲದೆ ಸುಂದರವಾದ ಮತ್ತು ಬದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ **ಈ** ಮೇಲ್ಕಂಡ ಗ್ರಂಥವು ವೇ|| ಪಂ|| **ಶ್ರೀಕಾಶೀನಾಥಶಾಸ್ತ್ರಿಗ**ಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರ**ಣಾಲಯ**ದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು **ಅಶುದ್ಧ**ವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ **ವ್ಯಸನಕರವಾದ** ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ **ಸ್ವರಶೂನ್ಯವಾಗಿ** ಉಚ್ಚರಿಸಬಾರದು ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದ**ಮಂತ್ರಗಳಿ**ಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ **ಮತ್ತು** ಪದವಿಭಾಗವೂ ಮಾಡಲ್ಪಟ್ಟಿಲ್ಲ **ಈ** ಶಿವಪೂಜಾವಿಧಿಯಲ್ಲಿ **ಈ** ಕೊರತೆಯು ದೂರಮಾಡಲ್ಪಟ್ಟಿದೆ **ಇದಕ್ಕಾಗಿ** ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ **ಪರಿಶೀಲಿಸಿ** ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ **ಈ** ಪೂಜಾವಿಧಿಯಲ್ಲಿರುವ ವೈದಿಕ**ಮಂತ್ರಗಳು** ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ **ಪ್ರತ್ಯಕ್ಷವಾಗಿ** ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, **ವೀರಭದ್ರ**ನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ ಶ್ರೀ ಪಂಚಾಚಾರ್ಯರ **ನಾಮಾವಳಿ**ಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು **ಮುದ್ರಿಸ**ಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ **ಸ್ತುತ್ಯವಾಗಿದೆ.** ಆದುದರಿಂದ ಪ್ರತಿಯೊಬ್ಬ ವೀರಶೈವರೂ **ಈ** ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರು**ವಂತೆ** ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜ **ಪ್ರತ್ಯೇಕ.**

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿವಾರತ್ನದಂತೆಯಿರುತ್ತಿರುವುದು ಎಲ್ಲರಿಗೂ **ತಿಳಿದ** ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ರಚನೆಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು **ಪಂಡಿತಜನ**ಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬ**ರಿಗೂ** ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು **ವಿಶಾಲವಾಗಿ** ಕನ್ನಡ ಟೀಕೆಯನ್ನು ಬರೆದಿದ್ದಾರೆ ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ **ಇದಕ್ಕೆ** ಕನ್ನಡ ಟೀಕೆಯು ೧೬೨ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು **ವಿಶೇಷ** ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ **ಎಲ್ಲಿಯೂ** ಮುದ್ರಿತವಾಗಿಲ್ಲವೆಂದು ಸಂತೋಷಪೂರ್ವಕವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನು ಕಂಡು ಪಡಿಕೇಪನ್ನಿಗೆ ಅಪ್ಪಣೆಯನ್ನಿತ್ತಿರುವದಲ್ಲದೆ ಈ ಗ್ರಂಥದಲ್ಲಿ ಸಂಯೋಜಿಸುವುದಕ್ಕೋಸ್ಕರ ತಮ್ಮ ದಿವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂದ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು **ಧನ್ಯರಾಗ**ಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೯೫೫ ಪುಟಗಳಿಂದ ಕೂಡಿದ್ದು ಬಿಳಿ ಬೆಲೆಯುಳ್ಳ **ಕಾಗದ**ದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮುಕ್ತಿಸಾಧನೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು **ತರಿಸಿ**ಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ **೬ ರೂಪಾಯಿ** ಒಂದು ರೂಪಾಯಿಗೆ ಸಾಲ್ಕಾಣೆ**ಯಂತೆ** ಕಮಿಷನ್ ಪಡೆದ ಹೋಗಳಾಗಿ **೩ ರೂ.** ಗೆ ದೊರೆಯುವದು. ವಿ ಪಿ ಚಾರ್ಜ ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦ X ೧೪ ಬೆಲೆ ಒಕ್ಕೆ	೦—೨—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಿಭೀಷಣ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ X ೧೪ ಬೆಲೆ	೦—೧—೬
ಸಪ್ತ ಶಿವಾಚಾರ್ಯಮಹಾಶಿವತತ್ವ ಇವರು ಒಟ್ಟಾಗಿ ಒಂದೆಡೆಯಲ್ಲಿರುವ ಫೋಟೋ ಸೈಜು ೧೨ X ೧೦ ಬೆಲೆ	೦—೧—'
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ X ೧೦ ಬೆಲೆ ಒಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ X ೭ ಬೆಲೆ ಒಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನ ಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿ ಮೂರು ಕೋಟಿ ಲಿಂಗಗಳನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಒಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರ ಭಗವತ್ಪಾದರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನಿ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ಒಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರದ ಹಿಮಾಲಯದ ಪರ್ವತಶಿಖರದ ಸುಂದರ ಫೋಟೋ	೦—೨—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೨—೯
ಕೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್, ಮೈಸೂರು

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ

ಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಸೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳ, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪-೦ ವಿ ಪಿ ೦ ೪ ೦ ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ ಪಿ ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

|15| ಪೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರ ಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ತ್ವಪ್ರದರ್ಶನ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಭಕ್ತವಿಲಾಸ	೨ ಆಣೆ
ಶ್ರೀಗುರುತತ್ತ್ವಪ್ರದೀಪ	೨ ಆಣೆ
ಗುರುಸ್ವರೂಪದ ಪ್ರದೀಪಿಕೆ	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ವೀರಶೈವಾಚಾರನಿಧಿ (೩ ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಸನ್ಯಾಸಾಶ್ರಮವಿಮರ್ಶೆ ತತ್ತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	**೮ ಆಣೆ**
पंडित श्रीकाशीनाथशास्त्री यांचे भाषण (मराठी)	**८ आणे**
Speeches by Pandit Shri Kashinatha Shastri (*English*)	**12 As**
ವೀರಶೈವರತ್ನ (೨ನೆಯ ಆವೃತ್ತಿ)	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ತೋತ್ರಗಳಿಂದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡ ವ್ಯಾಖ್ಯಾನ ೧೩೨ ಪುಟ)	೬ ರೂ
लिंगधारणचंद्रिका (संस्कृत)	**३ रु.**
महानारायणोपनिषत् (वीरशैवभाष्य-संस्कृत)	**१ रु.**
वीरशैवदुशेखर (संस्कृत)	**१ रु.**

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಧ್ಯಾಪಕರಾದ ವೇ|| ಪಂಡಿತ ಶಿರ್ಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಜಾತಜನಿತಾನ್ ಪಂಚಾಸ್ಯಾದಿವಿಶಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ||
ಪಂಚಾಚಾರನಿಯಾಮಕಾನ್ ಸಕಲಸತ್ಪಂಥಾನ್ ಸ್ಮರೇಮೋದರಾನ್ | ಪಂಚಾಚಾರ್ಯ ಜಗದ್ಗುರೂನ್ ಶುಭಕರಾನ್ ಪಾಲಿಸ್ತು ದೀಪೋತ್ಸವಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ತಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ ೧೧| ಬಿಡಿ ಪ್ರತಿ ೧ಕ್ಕೆ – ೫| ಪರಸ್ಥಳದವರಿಗೆ – ರೂ ೨ ಆ. ವಿ. ಪಿ. ಖರ್ಚು ಪ್ರತ್ಯೇಕ

ಸಂಪುಟ ೧೮.] ಪಂಚಾಚಾರ್ಯಪ್ರಭಾ,–ಸೋಮವಾರ ತಾ|| ೨೯ನೇ ಜೂನ್ ೧೯೩೬ [ಸಂಚಿಕೆ ೧೦

ಜಾತಿಗೆತಕ್ಕ ಉದ್ಯೋಗಗಳಿಲ್ಲವೇ?

(ಒಬ್ಬ ವ—ವೈಶ್ಯ ನಿವಾಸಿ)

ಪ್ರಪಂಚದಲ್ಲೆಲ್ಲ ನಾನಾ ಮತಧರ್ಮಗಳಿರುವಂತೆ ಆಯಾಯ ಮತಧರ್ಮಗಳಲ್ಲಿಯೂ ಅನೇಕ ಜಾತಿ ವಿಭಾಗಗಳಿರುತ್ತವೆ. ಪಾಶ್ಚಾತ್ಯದೇಶಗಳಲ್ಲಿರುವ ಮತಧರ್ಮಗಳಲ್ಲಿಯೂ ಜಾತಿ ಭೇದವನ್ನು ಕಾಣಬಹುದು. ನಮ್ಮ ಭಾರತಭೂಮಿಯಲ್ಲಿ ಪ್ರಜ್ವಲಿತವಾಗಿರುವ ಪ್ರತಿಯೊಂದು ಮತದಲ್ಲಿಯೂ ಜಾತಿವಿಭಾಗವಿರುವದು ಸುಪ್ರಸಿದ್ಧವಿದೆ. ನಮ್ಮ ವೀರಶೈವಮತದಲ್ಲಿರುವ ಜಾತಿಗಳನ್ನೂ ಅವುಗಳು ಕೈಕೊಂಡಿರುವ ಉದ್ಯೋಗದ ರೀತಿಗಳನ್ನೂ ಅವಲೋಕಿಸುವಾ! ನಮ್ಮ ಸಮಾಜದ ದುಡ್ಡು ಪಂಚಸಮಾಜಕ್ಕೆ ಹರಿದುಹೋಗದಂತೆ ವೀರಶೈವಮತಸಾಮ್ರಾಜ್ಯದ ರಚನೆಯಾಗಿರುವದು. ವೀರಶೈವನ ಜೀವನವೆಲ್ಲವೂ ವೀರಶೈವರಿಂದಲೇ ಸಾಗಬೇಕಾಗಿದೆ. ಅನ್ನ ವಸ್ತ್ರಗಳ ಸಂಗ್ರಹವೂ ಇನ್ನುಳಿದ ಲೌಕಿಕ ಅನುಕೂಲಗಳೂ ವೀರಶೈವನಿಂದಲೇ ಆಗಬೇಕಾಗಿರುವದು. ವೀರಶೈವನು ಧರಿಸುವ ವಸ್ತ್ರಗಳೂ, ಭೂಷಿಸುವ ಆಭರಣಗಳೂ, ತೋಷಿಸುವ ಗಾನ ವಾದನ ನೃತ್ಯಗಳೂ, ಇಷ್ಟೇ ಅಲ್ಲ ಸಮಸ್ತ ವ್ಯವಹಾರಗಳೂ ವೀರಶೈವನ ವಶವಾಗಿರಬೇಕೆಂದು ಆರ್ಯರು ಅಮೋಘವಾದ ಸಾಮಾಜಿಕಸಂಘಟನೆಯನ್ನುಂಟುಮಾಡಿರುವರು. ಜಾತಿಯ ಯೋಗ್ಯತೆಯಂತೆ ಆಯಾಯ ಉದ್ಯೋಗಗಳು ನಿಯಾಮಕವಾಗಿರುತ್ತವೆ. ಶೂದ್ರಸಂಗಡದಲ್ಲಿ ಸೇರಿದ ಜಾತಿಯವರೆಲ್ಲರಿಗೆ ಸೇವಾರೂಪವಾದ ಕಾಯಕಗಳಿರುತ್ತವೆ. ರಕ್ಷಣ ಕಾಯಕಗಳೂ ವ್ಯವಹಾರಶೀಲಗಳೂ ಜ್ಞಾನೋಪದೇಶಾದಿಗಳೂ ಆಯಾಯ ವರ್ಣಕ್ಕೆ ತಕ್ಕಂತೆ ರಚಿಸಲ್ಪಟ್ಟಿದ್ದು ಸಂಪ್ರದಾಯವು ಇದಕ್ಕೆ ಪ್ರಬಲಸಹಾಯಕಾರಿಯಾಗಿರುವದು. ವೀರಶೈವಸಾಮಾಜಿಕರಚನೆಯಲ್ಲಿ ಶೋಭಿಸುತ್ತಲಿರುವ ಜಾತಿಗೆತಕ್ಕ ಉದ್ಯೋಗಗಳನ್ನು ಪ್ರತಿಬಂಧಿಸಿ ಬರೆದರೂ ತೀರದು. ಕಾಲವ್ಯತ್ಯಾಸದಿಂದ ಉದ್ಯೋಗಗಳು ತಾವು ಆಶ್ರಯಿಸಿದ ಜಾತಿಯಿಂದ ಬಿಡುಗಡೆ ಹೊಂದಿರಬಹುದು, ಆದರೆ ಜಾತಿಸಾಂಕರ್ಯವು ಮಾತ್ರ ತಡೆಯಲ್ಪಟ್ಟಿದೆ. ಬಾಹ್ಯಬಹಿಷ್ಕಾರದಿಂದ ಜಾತಿಸಾಂಕರ್ಯದ ಗದ್ದಲವೆದ್ದರೂ ವರ್ಣಾಶ್ರಮ ಸಾಮ್ರಾಜ್ಯಸ್ಥಾಪಕರುಪಸಿಂಹಾಸನದಿಂದ ಈ ಸಾಂಕರ್ಯವಿಗಳು ಗುದ್ದನ್ನು ಸೇರುವವು. ವೀರಶೈವರು ಧರಿಸುವ ವಸ್ತ್ರವು ವೀರಶೈವಮಯವಾಗಿರುವದನ್ನಷ್ಟು ನೋಡೋಣ. ಆ ವಸ್ತ್ರಕ್ಕೆ ಮೂಲವಾದ ತಂತುವು, ತಂತುವಿಗೆ ಅನ್ನನಿತ್ತ ಅರಳೆಯೂ, ಅರಳೆಗೆ ಮೂಲವಾದ ಹತ್ತಿಯನ್ನು ಬೆಳೆಯಿಸಿಕೊಟ್ಟ ಒಕ್ಕಲಿಗನೂ, ವೀರಶೈವನಾಗಿ ಮುಂದೆ ನೇಯುವ ನೇಕಾರನೂ, ಮಾರುವ ವ್ಯಾಪಾರಿಯೂ, ಅದನ್ನು ಹೊಲಿದುಕೊಡುವ ಶಿಂಪಿಗನೂ, ಇವರೆಲ್ಲರೂ ವೀರಶೈವರೇ! ಈರೀತಿಯಾಗಿ ವೀರಶೈವರಿಂದಲೇ ಸಿದ್ಧವಾದ ವಸ್ತ್ರವನ್ನು ಧರಿಸುವನೂ ವೀರಶೈವನೇ! ಮುಂದೆ ಆ ವಸ್ತ್ರವು ಮಲಿನವಾದರೆ ತೊಳೆಯಿಸಬೇಕಾದರೂ ವೀರಶೈವಮಡಿವಾಳನೇ ಬೇಕು. ಆಯಾಯ ಜಾತಿಯವರು ತಮಗೆ ವಿಧಿಸಲಾಗಿಟ್ಟ ಉದ್ಯೋಗಗಳನ್ನು ಮಾಡುತ್ತಿದ್ದರೆ ನಮ್ಮ ಸಮಾಜದ ಸೌಭಾಗ್ಯಕ್ಕೆ ಕೊರತೆಯಿಲ್ಲದಾಗುತ್ತದೆ. ಈಗಿನ ಧರ್ಮಗ್ಲಾನಿಕಾಲದಲ್ಲಿ ಮತಾಭಿಮಾನ ಜಾತ್ಯಭಿಮಾನಗಳು ಸ್ವರ್ಗವನ್ನು ಸೇರತೊಡಗಿದರೂ—

ಯದಾಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ |
ತದಾ ತದಾವತಾರೋಽಯಂ ಗಿರೀಶಾನಾಂ ನಾಸ್ತಿ ಜೇ ||

ಎಂಬ ಆ ಪರಶಿವನ ವಾಣಿಯಂತೆ ಧರ್ಮರಕ್ಷಣೆಯೊಡನೆ ಮತರಕ್ಷಣೆಗಳು ಮತಪರಿಪಾಲನೊಡನೆ ಜಾತಿ ಕರ್ಮಾನ್ವಿತಿಗಳು ಇವುಗಳ ಜೊತೆಯಲ್ಲಿಯೇ ಅವುಗಳ ಉದ್ಯೋಗರಕ್ಷಣೆಗಳೂ ಆಗುವುವದಲ್ಲಿ ಸಂದೇಹವಿಲ್ಲ.

ನಮ್ಮ ವೀರಶೈವಸಮಾಜದಲ್ಲಿ ಉದ್ಯೋಗಗಳು ಬಿಡಿಬಿಡಾದರೂ ಜಾತಿಗಳು ಜಿಗಿದಾಡಲಾರವು. ಕೇವಲ ಬಟ್ಟೆಗಳನ್ನೊಗೆದು ಜೀವಿಸುವ ಮಡಿವಾಳನು ಧನಿಕನಾಗಿ ಬಟ್ಟೆಗಳನ್ನು ಹೊಲಿಯುವ ಶಿಂಪಿಗತನದ ಉದ್ಯೋಗವನ್ನು ಮಾಡಬಹುದು. ಆದರೆ ತನ್ನ ಜಾತ್ಯಭಿಮಾನವೊಂದನ್ನು ನೀಗಲಾರನು. ಕದಾಚಿತ್ ಮಡಿವಾಳನು ಶಿಂಪಿಗನಾದರೂ ಪೂರ್ವಸಾಂಪ್ರದಾಯದಿಂದ ಬಂದ ಶಿಂಪಿಗನು ಅವನಿಗೆ (ಮಡಿವಾಳನಿಗೆ) ಮಗಳನ್ನು ಕೊಡಲಾರನು. ಅಂತೇ ಜಾತಿಗೆ ತಕ್ಕ ಕಸಬುಗಳಿರುತ್ತವೆ. ಆ ಜಾತಿಯನ್ನು ಬಯಲಿಗೆಳೆಯುವುದಕ್ಕಾಗಿ ಹುಬ್ಬಳ್ಳಿಯಲ್ಲಿ ಕೆಲಜನ ಮಡಿವಾಳರನ್ನು ಪಾವಟೆ ಮೊದಲಾದವರು ಹುರಿದುಂಬಿಸಿರುವರು. ಕಾಲಪರಿಸ್ಥಿತಿಗನುಸರಿಸಿ ಉದ್ಯೋಗಾಭಿವೃದ್ಧಿಯನ್ನು ಬೇರೆಬೇರೆವಿಧವಾಗಿ ಕಲ್ಪಿಸಿಕೊಂಡು ತಮ್ಮ ದೇವದತ್ತವಾದ ಜಾತ್ಯಭಿಮಾನಶಾಲಿಗಳಾಗಿ ಜೀವಿಸುತ್ತಿರುವಾಗ, ಪಾವಟೆ ಮೊದಲಾದವರು ಮಡಿವಾಳರಿಗೆ ವೀರಶೈವರ ಬಟ್ಟೆಯನ್ನಷ್ಟೇ ತೊಳೆಯಿರೆಂದು ಆಜ್ಞಾಪಿಸಿರುವುದು ಸಂತೋಷದ ಸಂಗತಿಯು. ಅದರಂತೆ ತಮ್ಮ ಶಿಂಪಿಗಸಮಾಜಬಾಂಧವರಿಗೆ ವೀರಶೈವರ ಬಟ್ಟೆಗಳನ್ನೇ ಹೊಲಿಯಿರಿ, ಪರಮತೀಯರ ಬಟ್ಟೆಯನ್ನು ಹೊಲಿಯಬಾರದೆಂದು ಪ್ರಸಿದ್ಧಿಪಡಿಸಬೇಕಾಗಿತ್ತು. ಈಗ ಶಿಂಪಿಗರಲ್ಲಿ ೧೦೦ಕ್ಕೆ ೭೫ ಜನರು ಶಿಂಪಿಗತನದ ಉದ್ಯೋಗವನ್ನೇ ಮಾಡುತ್ತಿರುವರಲ್ಲವೆ! ಇವರೆಲ್ಲರೂ ವೀರಶೈವರ ಬಟ್ಟೆಗಳನ್ನಷ್ಟೇ ಹೊಲಿಯುತ್ತಿದ್ದರೆ, ಇವರಮನೆಗೆ ಹೋಗಬೇಕು. ಇಲ್ಲವಾದರೆ ಇವರ ಗತಿಯೇನು? ಇಂದೆಂತಹ ಹುಚ್ಚುಕಲ್ಪನೆಯು. ಜಾತಿಗೆ ತಕ್ಕ ಉದ್ಯೋಗಗಳು ಸ್ವಯಂಸಿದ್ಧವಾಗಿ ಪ್ರಕಾಶಿಸುತ್ತಿರುವಾಗ ಈಗಿನ ಜಾತಿಸಂಕರಕಾರಕರ ಪ್ರತಾಪವು ಅವರವಂದೆ ಸಾಗಲಾರದು. ತಮ್ಮಜಾತಿಯ ಉದ್ಯೋಗಗಳನ್ನು ಜಾಗ್ರತಿಗೊಳಿಸಿ ಅನ್ಯಜಾತಿಯವರ ಉದ್ಯೋಗಾಭಿವೃದ್ಧಿಯನ್ನುಂಟುಮಾಡಲು ಹೆಣಗಬೇಕು. ಜಾತಿಸಾಂಕರ್ಯದ ಬೀಗೆಯನ್ನು ಹೃದಯದಲ್ಲಿಟ್ಟುಕೊಂಡು ನಟಿಸುವವರ ನಟನೆಯು ಹೇಗೆ ಹೇಗೆ ಸಾಗುತ್ತಿರುವುದನ್ನು ವಿನೋದನು ಪ್ರಬಾಸಾರಕರಿಗೆ ಆಗಿಂದಾಗ್ಗೆ ತಿಳುಹಿಸುವನು.

ಶ್ರೀಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು

ಚರಪಟ್ಟಾಧಿಕಾರಮಹೋತ್ಸವ

ಹಿರೇನಂದೂರ

ಶ್ರೀಮದ್ರಂಭಾಪುರೀ ಪೀಠಕ್ಕೆ ಸೇರಿರುವ ಹಿರೇನಂದೂರು ಮತ್ತು ಚಿಕ್ಕನಂದೂರು ಶ್ರೀ ಮಲಯಶಾಂತೇಶ್ವರ ಹಿರೇಮಠದ ಚರಸ್ಥಿರಪಟ್ಟಾಧಿಕಾರಿಗಳಾದ ರಾಜೋಟಿಸ್ವಾಮಿಗಳ ವಂಶಪರಂಪರಾಗತ ಶ್ರೀ ಸದಾಶಿವಸ್ವಾಮಿಗಳ ಕರಕಮಲೋದ್ಭವರಾದ ಶ್ರೀ ಸದಾಶಿವಸ್ವಾಮಿಗಳಿಗೆ ಇದೇ ಧಾತೃನಾಮಸಂವತ್ಸರದ ಜ್ಯೇಷ್ಠ ಶುದ್ಧ ೩ ಶುಕ್ರವಾರ ಶುಭಮುಹೂರ್ತದಲ್ಲಿ ಕಲ್ಯಾಣಪಟ್ಟವನ್ನಿ ಬೇಲೂರು ಹಿರೇಮಠದ ಶ್ರೀ|| ಷ|| ಬ್ರ|| ಗುರುಲಿಂಗಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಸದರಿ ಮಠದ ಸಂಪ್ರದಾಯಕ್ಕನುಸರಿಸಿ, ಚರಪಟ್ಟಾಧಿಕಾರವನ್ನು ಕೊಟ್ಟು ಶ್ರೀ ಸದಾಶಿವಾಚಾರ್ಯರೆಂಬ ಅಭಿಧಾನವು ಮಾಡಲ್ಪಟ್ಟಿತು. ಹಾಗೂ ಸ್ವಪ್ನಂಶೋತ್ಪನ್ನರಾದ ರಾಜೋಟಪ್ಪನವರ ಪುತ್ರ ರೇವಣಸಿದ್ಧೇಶ್ವರನಿಗೆ ಮಾಹೇಶ್ವರದೀಕ್ಷೆಯ ವೇ|| ಯಾದಗಿರಿ ಗವಿಮಠದ ಶ್ರೀಲೋಚನಶಾಸ್ತ್ರಿಗಳ ನೈದಿಕತ್ವದಲ್ಲಿ ನೆರವೇರಿಸಲ್ಪಟ್ಟಿತು. ಈ ಮಹಾಕಾರ್ಯಕ್ಕೆ ಕಲಬುರ್ಗಿ, ಬಾಗರಗಿ, ನಾಗೂರು, ಮಹಾಗಾವ, ಸಾವಳಗಿ, ಕಮಲಾಪುರ, ಮುಧೋಳ, ಯಾದಗಿರಿ, ಹಾಸಿನಹಾಳ ಎರಗೋಳ ಗ್ರಾಮಗಳ ಸ್ಥಿರಚರಪಟ್ಟಾಧಿಕಾರಿಗಳೂ ಮುಗಳನಾಗಾವಿ, ಗೋಳ, ಕೇರೂರು, ಕಣಮನ ವಗದರಗಿ, ಕಣ್ಣೂರ, ಕುರಕೋಟೆ, ಕಂದುಗುಳ ಮುಂತಾದ ಗ್ರಾಮಗಳಿಂದ ಪ್ರಮುಖಭಕ್ತಮಾಹೇಶ್ವರರು, ಆಗಮಿಸಿ, ಅತ್ಯಂತ ಶೋಭೆಯನ್ನುಂಟುಮಾಡಿದ್ದರು. ಮರುದಿವಸ ಮುಂಜಾನೆ ನೂತನಪಟ್ಟಾಧಿಕಾರಿಗಳ ಉತ್ಸವವು ಶೃಂಗರಿಸಿದ ಪಲ್ಲಕ್ಕಿಯಲ್ಲಿ ಅತಿವೈಭವದಿಂದ ನೆರವೇರಿತು. ಉತ್ಸವವು ಉಭಯ ನಂದೂರುಗಳಲ್ಲಿ ನಡೆಯಿತು. ಈ ಮಹೋತ್ಸವಕ್ಕೆ ಅಮೀನಸಾಹೇಬರು ಕಾರಕೂನರು ಸೌಕಾರರ ಪೋಲೀಸಜನರು ಸಹ ಆಗಮಿಸಿದ್ದರು. ಈ ಕಾರ್ಯವನ್ನು ಹಿರೇನಂದೂರ ಚಿಕ್ಕನಂದೂರ ಗ್ರಾಮಗಳ ಗೌಡ ಶಾನಭೋಗ ನಾಡಗೌಡ ಶೆಟ್ಟಿ ಸಾಹುಕಾರರ ಸಮಸ್ತದೈವದವರು ಭಕ್ತಮಾಹೇಶ್ವರರು ಹಗಲುರಾತ್ರಿಯನ್ನದೆ ಕೆಲಸಮಾಡಿ ಕೀರ್ತಿಗೆಪಾತ್ರರಾದರು. ಈ ಎಲ್ಲ ಭಕ್ತಮಾಹೇಶ್ವರರಿಗೆ ಜಗದ್ಗುರುಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಓರ್ವ ಪ್ರತ್ಯಕ್ಷದರ್ಶಿ

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

ವೀರಶೈವ ಸುಧಾರಣೆ.

(ಲೇಖನಾಂಕ ೧೬)

ಲೇಖಕ—ಶಾಸ್ತ್ರತೀರ್ಥ ಶಿವಕುಮಾರಸ್ವಾಮಿ, ವೇದಾಂತರತ್ನ ಶ್ರೀ ವಾಗೀಶಲಿಂಗ ಚಾರ್ಯ, ಬೃಹನ್ಮಠ ನವಲಗುಂದ

ಪೂರ್ವಕಾಲದಲ್ಲಿ ಮಹಾರಾಜರುಗಳು ಗೋರಕ್ಷಣೆಯ ಕಡೆಗೆ ಹೆಚ್ಚು ಲಕ್ಷ್ಯವನ್ನಿಡುತ್ತಿದ್ದರು ರಾಮಾಯಣ ಅಯೋಧ್ಯಾಕಾಂಡ ಅಧ್ಯಾಯ ೧೦೦ ರಲ್ಲಿ — ಭರತನು ಚಿತ್ರಕೂಟ ಪರ್ವತವಾಸಿಯಾಗಿದ್ದ ರಾಮಚಂದ್ರನನ್ನು ಕಾಣಲು ಬಂದಾಗ ಆತನನ್ನು ಕುರಿತು ರಾಮಚಂದ್ರನು

ಕಚ್ಚಿತ್ತೇ ದಯಿತಾಃ ಸರ್ವೇ ಕೃಷಿಗೋರಕ್ಷಜೀವಿನಃ । ವಾರ್ತಾಯಾಂ ಸಂಶ್ರಿತಸ್ತಾತ ಲೋಕೋಽಯಂ ಸುಖಮೇಧತೇ ॥

(ತಮ್ಮಾ! ಈ ಲೋಕದ ಸುಖಸಮೃದ್ಧಿಯೆಲ್ಲವೂ ಒಂದೇ ಒಂದು ಕೃಷಿಕರ್ಮದ ಆಧಾರದ ಮೇಲಿದೆ, ಆದ್ದರಿಂದ ಕೃಷಿ, ಗೋರಕ್ಷಣಗಳಿಂದ ಜೀವಿಸತಕ್ಕ ಎಲ್ಲಾ ರೈತರೂ ನಿನ್ನ ಮೇಲೆ ಪ್ರೀತಿಯನ್ನಿಟ್ಟಿರುವರಷ್ಟೆ?) ಎಂದು ಕೇಳಿದ್ದಾನೆ ಇದರಿಂದ ರಾಮಚಂದ್ರನು ಒಕ್ಕಲಿಗರ ಮೇಲೆಯೂ, ಗೋವುಗಳ ಮೇಲೆಯೂ, ಎಷ್ಟು ಪ್ರೇಮವುಳ್ಳವನಾಗಿದ್ದನೆಂಬುದು ತಾನೇ ತಿಳಿದು ಬರುವುದು ಈ ರಘುವಂಶದಲ್ಲಿ ವರ್ತಿಸಿದ ದಿಲೀಪಚಕ್ರವರ್ತಿಯ ಗೋಸೇವೆಯಂತೂ ಜಗತ್ಪ್ರಸಿದ್ಧವಾಗಿಯೇ ಇದೆ ವಸಿಷ್ಠಮಹರ್ಷಿಯ ಯಜ್ಞ ಧೇನುವಾದ ನಂದಿನಿಯನ್ನು ಸಾಯಂಕಾಲದವರೆಗೂ ಸಂರಕ್ಷಣ ಮಾಡಿದಾಗ ದಿಲೀಪಮಹಾರಾಜನು ಕೊನೆಗೆ

ಸ ತ್ವಂ ಮದೀಯೇನ ಶರೀರವೃತ್ತಿಂ ದೇಹೇನ ನಿರ್ವರ್ತಯಿತುಂ ಪ್ರಸೀದ । ದಿನಾವಸಾನೋತ್ಸುಕಬಾಲವತ್ಸಾ ವಿಸೃಜ್ಯತಾಂ ಧೇನುರಿಯಂ ಮಹರ್ಷೇಃ ॥

(ನನ್ನ ಶರೀರವನ್ನು ತಿಂದು ನಿನ್ನ ಜೀವಿಕೆಯನ್ನು ಸಂಪಾದಿಸಿಕೋ! ಮಹರ್ಷಿಯ ಈ ಆಕಳನ್ನು ಮಾತ್ರ ಅವಶ್ಯವಾಗಿ ಬಿಡು!) ಎಂದುಕೊಂಡು ನಂದಿನಿಯ ಸಲುವಾಗಿ ತನ್ನ ಶರೀರವನ್ನೇ ಕೊಡುವುದಕ್ಕೆ ಸಿದ್ಧನಾದನು ವಿಚಾರಮಾಡಿ ನೋಡಿದರೆ ತಾನು ಚಕ್ರವರ್ತಿ, ನಂದಿನಿಯೊಂದು ಆಕಳು, ಇದಕ್ಕಾಗಿ ಶರೀರತ್ಯಾಗವೆಂದ ಮೇಲೆ ದಿಲೀಪನು ತನ್ನ ಸಮಯದಲ್ಲಿ ಒಬ್ಬ ಚಕ್ರವರ್ತಿಯ ಯೋಗ್ಯತೆಯೂ, ಒಂದು ಆಕಳಿನ ಯೋಗ್ಯತೆಯೂ ಸಮಾನವಾದುದೆಂಬುದನ್ನು ಜಗತ್ತಿಗೆಲ್ಲಾ ತೋರಿಸಿಕೊಟ್ಟಂತಾಗಲಿಲ್ಲವೆ? ಈಗಿನ ಚಕ್ರವರ್ತಿಗಳಿಗೂ ಮಹಾರಾಜರುಗಳಿಗೂ ಈ ಭಾವನೆ ಯಲ್ಲಿದೆ? ದಿಲೀಪಚಕ್ರವರ್ತಿಯ ಘನತರವಾದ ಈ ಗೋಸೇವೆಯ ಫಲರೂಪವಾಗಿಯೇ ತ್ರಿಲೋಕವಿಜಯಶಾಲಿಯಾದ ರಘುಮಹಾರಾಜನು ಹುಟ್ಟಿದನಷ್ಟೆ! ಈ ಸಮಯದಲ್ಲಿ ಕೃಷಿಕರಮೇಲೂ, ಗೋಗಳಮೇಲೂ ದಯಾದೃಷ್ಟಿಯನ್ನಿಟ್ಟಿರುವ ಭೂಪಾಲನು ನಮ್ಮ ಶ್ರೀ ಕೃಷ್ಣಭೂಪಾಲನೊರ್ವನನ್ನು ಬಿಟ್ಟರೆ ಎಲ್ಲಿಯೂ ಇಲ್ಲನೆಂತಲೇ ತಿಳಿದುಬರುವುದು ಈತನ ರಾಜ್ಯಕ್ಕೆ ರಾಮರಾಜ್ಯವೆಂಬ ಹೆಸರು ಬಂದಿರುವುದಾದರೂ ಇದೇ ಕಾರಣದಿಂದಲೇ ಹರಿ ಇದೊಂದು ಕನ್ನಡಿಗರಿಗೆ ಹೆಮ್ಮೆಯ ಮಾತಾಗಿದೆ

ಮಹಾಭಾರತದ ಅನುಶಾಸನಪರ್ವದಲ್ಲಿ ಗೋವಿನ ಮಹಿಮೆಯು ವಿಶದವಾಗಿ ವರ್ಣಿಸಲ್ಪಟ್ಟಿದೆ ಆದರಿಂದ ಕೆಲವು ವಿಷಯಗಳನ್ನು ತೆಗೆದುಕೊಳ್ಳೋಣ!—ಒಂದಾನೊಂದು ಸಮಯದಲ್ಲಿ ನಹುಷಚಕ್ರವರ್ತಿಯು ಚ್ಯವನ ಮಹರ್ಷಿಯ ಬೆಲೆಯನ್ನು ನಿರ್ಧರಿಸುತ್ತ ಕ್ರಮಕ್ರಮವಾಗಿ ೧ ಸಾವಿರ, ೧ ಲಕ್ಷ, ೧ ಕೋಟಿ, ೧ ಶಂಖಪದ್ಮಗಳವರೆಗೂ ಇದು ನಿಮಗೆ ಸರಿಯಾದ ಬೆಲೆ, ಇದು ನಿಮಗೆ ಸಲ್ಲುವ ಬೆಲೆಯೆಂದು ಹೇಳುತ್ತ ದಾನಮಾಡುವುದಕ್ಕೆ ಸಿದ್ಧನಾದನು ಚ್ಯವನಮಹರ್ಷಿಯು ಅದಕ್ಕೆ ಒಪ್ಪಲಿಲ್ಲ ಆಗ ನಹುಷನು ಅರ್ಧರಾಜ್ಯವನ್ನೇ, ಕೊನೆಗೆ ಪೂರ್ಣರಾಜ್ಯವನ್ನೇ ಇದು ನಿಮ್ಮ ಬೆಲೆಯೆಂದು ದಾನಮಾಡಲು ಉದ್ಯುಕ್ತನಾದನು. ಚ್ಯವನಮಹರ್ಷಿಯು ಇದಕ್ಕೂ ಒಪ್ಪಲಿಲ್ಲ ಆಗ ನಹುಷನು ಬಹಳವಾಗಿ ಆಲೋಚಿಸಿ ಈ ಮಹರ್ಷಿಯ ಬೆಲೆಯು ಒಂದು ಗೋವಾಗಬಹುದೆಂದು ನಿಶ್ಚಯಿಸಿ ಕರುವುಳ್ಳ ಉತ್ತಮವಾದ ಒಂದು ಗೋವನ್ನು ದಾನಮಾಡಲು ಮುಂದೆ ಬಂದನು ಆಗ ಚ್ಯವನಮಹರ್ಷಿಯು 'ಹಾ! ಇದುಮಾತ್ರ ನನ್ನ ಬೆಲೆ" ಎಂದು ಆನಂದದಿಂದ ಆ ಗೋವನ್ನು ಸ್ವೀಕರಿಸಿದನು ಆಹಾ! ಈಗ ಆ ಗೋಪ್ರೇಮ, ಆ ಗೋಸನ್ಮಾನಗಳೆಲ್ಲಿವೆಯೋ ಕಾಣದಾಗಿದೆ

ಒಂದು ಸಾರೆ ಲಕ್ಷ್ಮಿಯು ಗೋಶರೀರದಲ್ಲಿ ವಾಸಮಾಡಬೇಕೆಂದು ಬಯಸಿ ಗೋವುಗಳನ್ನು ಪ್ರಾರ್ಥಿಸಿದಳು. ಆಗ ಗೋವೃಂದವು ಲಕ್ಷ್ಮಿಯನ್ನು ತಮ್ಮ ಮೂತ್ರ, ಪುರೀಷಗಳಲ್ಲಿ ವಾಸಮಾಡೆಂದ ತರುವಾಯ ಸ್ವತಃ ಲಕ್ಷ್ಮಿಯಾದರೂ ಬಂದುದರಿಂದ ಗೋಮಯ, ಗೋಮೂತ್ರಗಳಲ್ಲಿ ವಾಸಮಾಡಲಾರಂಭಿಸಿದಳು ಅಂದಿನಿಂದ ಗೋಮಯ, ಗೋಮೂತ್ರಗಳು ಎಲ್ಲೆಲ್ಲಿ ಬೀಳುತ್ತಿವೆಯೋ ಆ ಸ್ಥಾನವನ್ನು ಲಕ್ಷ್ಮೀನಿವಾಸವನ್ನಾಗಿಯೇ ಭಾವಿಸಬೇಕು ಇಂದಿಗೂ ಕಾರ್ತೀಕಮಾಸದಲ್ಲಿ ನೆರವೇರುವ ಹಟ್ಟಿಹಬ್ಬವು ಇದರ ಸ್ಮಾರಕವಾಗಿದೆ ಆದಿನ ಪ್ರತಿಯೊಬ್ಬ ಒಂದುವೂ ಸಗಣಿಯಲ್ಲಿ ಗೋಪ ಲಕ್ಷ್ಮಿಯನ್ನು ಪೂಜಿಸುತ್ತಾನೆ ಇಂತಹ ಲಕ್ಷ್ಮಿಗೆ ಅನ್ನದಲ್ಲಿ ಧಾನ್ಯಲಕ್ಷ್ಮಿಯನ್ನು ಇಟ್ಟು ಪೂಜಿಸುತ್ತಾರೆ, ಹಸುಗಳನ್ನು ಪೂಜಿಸಿ ಅವುಗಳನ್ನು ಮನೆಯಲ್ಲೆಲ್ಲಾ ತಿರುಗಿಸುವ ಹಬ್ಬವಾಗಿ ಈ ಹಬ್ಬವು ಆಚರಿಸಲ್ಪಡುತ್ತಿದೆ ಈವಾಗ ಸಗಣಿಯಿಂದ ಮನೆಯಲ್ಲೆಲ್ಲಾ ಸಂಚಾರಮಾಡಿದಂತೆ ಕೈಗಳಿಂದ ಒಂದರೂ ಸಗಣಿ ಹಜ್ಜೆಗಳನ್ನು ಬರೆಯುತ್ತಿರುವುದು ಕಂಡುಬರುವುದು

ಒಂದುಸಾರೆ ದೇವೇಂದ್ರನು ಬ್ರಹ್ಮನನ್ನು ಕುರಿತು 'ಗೋಲೋಕವು ಎಲ್ಲಾ ಲೋಕಗಳಿಗಿಂತಲೂ ಮೇಲಿರುವುದಕ್ಕೆ ಕಾರಣವೇನೆಂದು ಕೇಳಿದನು ಬ್ರಹ್ಮನು ಆದಕ್ಕುತ್ತರವಾಗಿ ಗೋವು ನಂಬಲು ಯಜ್ಞಗಳ ಅಂಗವೂ, ಯಜ್ಞರೂಪಿಯೂ ಆಗಿರುವುದು ಗೋವನ್ನು ಬಿಟ್ಟು ಯಾವ ಯಜ್ಞವೂ, ಯಾವ ಅನುಷ್ಠಾನವೂ ನಡೆಯುವುದಿಲ್ಲ ಗೋವುಗಳು ಹಾಲು ತುಪ್ಪ ಮುಂತಾದವುಗಳಿಂದ ಸಮುಸ್ತ ಪ್ರಜೆಗಳನ್ನೂ ಸಂತೋಷಪಡಿಸಿಕೊಂಡಿರುವುವು ಗೋಪುತ್ರ (ಬಸವಣ್ಣ) ನು ಒಕ್ಕಲುತನಕ್ಕೆ ಸಹಾಯಕನಾಗಿ ನಾನಾವಿಧವಾದ ಧಾನ್ಯಗಳನ್ನು ಬೆಳೆದುಕೊಡುವನು, ಇವುಗಳು ಹಸಿವೆ ನೀರಡಿಕೆಗಳಿಂದ ಬಳಲುತ್ತಿದ್ದರೂ ಬೇಸರಿಯದೆ ಭಾರಗಳನ್ನು ಹೊರುತ್ತಿರುವವು ಬ್ರಹ್ಮಪುತ್ರಿಯಾದ ಕಾಮಧೇನುವು ಒಂದುಸಾರೆ ಬಹುಕಾಲದವರೆಗೂ ತಪಸ್ಸನ್ನು ಮಾಡಿತು ಬ್ರಹ್ಮದೇವನು ಮೆಚ್ಚಿ ವರವನ್ನು ಬೇಡೆಂದು ಅಪ್ಪಣೆಮಾಡಿದನು, ಕಾಮಧೇನುವು ನಿರಪೇಕ್ಷೆಯಿಂದ ತಪಸ್ಸು ಮಾಡುತ್ತಿರುವೆನೆಂದು ಹೇಳಿತು ಆಗ ಬ್ರಹ್ಮನು ಆಶ್ಚರ್ಯಪಟ್ಟು ನಿನಗಿಂತಲೂ ನಿಸ್ವಾರ್ಥಭಾವವುಳ್ಳ ಉಚ್ಚಕೋಟಿಯ ಪ್ರಾಣಿಯನ್ನು ನಾನು ಕಾಣೆನು ಆದುದರಿಂದ ಇಂದಿನಿಂದ ಗೋಲೋಕವು ಸಕಲಲೋಕಗಳಿಗಿಂತಲೂ ಮೇಲಾಗಲಿ ಎಂದು ನುಡಿದನು" ಆದುದರಿಂದ ಗೋಲೋಕವು ಎಲ್ಲಾ ಲೋಕಗಳಿಗಿಂತಲೂ ಮೇಲಾಯಿತು ಎಂದು ಹೇಳಿದ್ದಾನೆ ವಾಸ್ತವಿಕವಾಗಿ ವಿಚಾರಮಾಡಿನೋಡಿದರೆ ಗೋವು ನಿಷ್ಕಾಮಧರ್ಮವುಳ್ಳ ಪ್ರಾಣಿಯೊಂದು ಗೊತ್ತಾಗುವುದು ಅಂತೆಯೇ ಅದು ಮನುಷ್ಯನ ಆಹಾರಕ್ಕಾಗಿ ಸ್ವತಂತ್ರವಾದ ಧಾನ್ಯಗಳನ್ನು ಕಾದಿಟ್ಟು ಆತನ ಉಪಯೋಗಕ್ಕೆ ಬಾರದ ಹೊಟ್ಟು ಸೊಪ್ಪು ಮುಂತಾದ ನಿಸ್ಸಾರವಾದ ಪದಾರ್ಥಗಳನ್ನೇ ತಿನ್ನುತ್ತಿರುವುದು ಹಾಗಾದರೂ ಮತ್ತೆ ಅದಕ್ಕೆ ಬದಲಾಗಿ ಸಾರತರವಾದ ಅಮೃತವನ್ನೇ ಕೊಡುತ್ತಿದೆ ಎಂದಮೇಲೆ ಗೋವುಗಳಿಗೆ ಮನುಷ್ಯನಿಂದಾಗುವ ಉಪಕಾರವೇನು? ಇಂತಹ ಪರಮಪವಿತ್ರವಾದ ಪ್ರಾಣಿಯಿಂದ ಸುಖಪಡುತ್ತಿರುವ ಮನುಷ್ಯನು ಅವುಗಳ ಮುಪ್ಪಿನ ಕಾಲದಲ್ಲಾದರೂ ಸ್ವಲ್ಪ ಒಣದಂಟು, ಕರಿಯನೀರನ್ನಾದರೂ ಹಾಕಿ ಕಾಪಾಡಬಾರದೆ? ಅಯ್ಯೋ! ಮೂರ್ಖರಿಗೆ ಉಪಕಾರಸ್ಮರಣೆಯು ಎಂತಾಗಬೇಕು!! ಸುಮ್ಮನೆ ಕೂಳು ಮಂದ ನೀರುದಂಡ, ಕೊಡ್ತಲೇ ಈ ಮುದಿಗೊಡ್ಡು ಆ ಕಟುಗನಿಗೆ" ಎಂದು ಕನಿಕರವಿಲ್ಲದೆ ಕೈಗೆಬಂದಷ್ಟು ದುಡ್ಡಿಗೆ ಮಾರಿಬಿಡುವರು ಈ ನರಾಧಮರು ಜಗತ್ತಿನಿಂದ ಎಂದು ಹಾಳಾಗಿಹೋಗುವರೋ ತಿಳಿಯದಾಗಿದೆ ಶಾಂತಂಪಾಪಂ!

ದೇವತೆಗಳಿಗೇನೋ ಅಮೃತವು ದೊರೆಯುವುದು ಸರಿ, ಆದರೆ ಮನುಷ್ಯರಿಗೆ ಗೋಕ್ಷೀರಕ್ಕೆ ಹೊರತಾಗಿ ಅಮೃತವು ಬೇರೆ ಇಲ್ಲವೇ ಇಲ್ಲ ಆದುದರಿಂದಲೇ ಮಹಾಭಾರತದ ಶಾಂತಿಪರ್ವದಲ್ಲಿ

'ಅಮೃತಂ ವೈ ಗವಾಂ ಕ್ಷೀರಂ ಇತ್ಯಾಹುಸ್ತ್ರಿದಶಾಧಿಪ!

ಎಂದು ಹೇಳಿರುವುದು ಕಂಡುಬರುತ್ತದೆ 'ಗೋವನ್ನು ಯಾಚಿಸಲು ಬಂದ ಕಾರ್ತವೀರ್ಯಾರ್ಜುನನಿಗೆ ಜಮದಗ್ನಿಮಹರ್ಷಿಯು ಕೊನೆಗೆ ತನ್ನ ಪ್ರಾಣವನ್ನಾದರೂ ಕೊಡಲು ಸಿದ್ಧನಾದನೇ ಹೊರತು ತನ್ನ ಯಜ್ಞದ ಗೋವನ್ನು ಮಾತ್ರ ಕೊಡಲು ಒಪ್ಪಲಿಲ್ಲ" 'ವಸಿಷ್ಠಮಹರ್ಷಿಯಲ್ಲಿದ್ದ ಕಾಮಧೇನುವಿನ ಪುತ್ರಿಯನ್ನು ಅಪಹರಿಸುವುದಕ್ಕಾಗಿ ವಿಶ್ವಾಮಿತ್ರನು ತನ್ನ ಸಂಪೂರ್ಣರಾಜ್ಯವನ್ನೇ ವಸಿಷ್ಠನಿಗೆ ಕೊಡಲುದ್ಯುಕ್ತನಾಗಿದ್ದನು ಆದರೆ ವಸಿಷ್ಠನು ವಿಶ್ವಾಮಿತ್ರನಿಗೆ ನಂದಿನಿಯನ್ನು ಕೊಡುವುದಕ್ಕೆ ಕೊನೆಗೂ ಒಪ್ಪಲೇ ಇಲ್ಲ" ಎಂತಾಗಿ ಬ್ರಹ್ಮವೈವರ್ತಪುರಾಣದಿಂದ ತಿಳಿದುಬರುತ್ತಿದೆ

ಪೂರ್ವಕಾಲದಲ್ಲಿ ಬ್ರಾಹ್ಮಣಪುತ್ರರ ಪ್ರಾಥಮಿಕ ಶಿಕ್ಷಣವು ಗೋಪಾಲನೆಯಿಂದಲೇ ಆರಂಭವಾಗುತ್ತಿತ್ತು ಬ್ರಹ್ಮಚಾರಿಯಾದ ಬ್ರಾಹ್ಮಣಬಾಲಕನು ಮೊದಲು ಗೋಪಾಲನೆಯೆಂಬ ಕಠಿಣವಾದ ಪರೀಕ್ಷೆಯಲ್ಲಿ ಉತ್ತೀರ್ಣನಾದನೆಂದರೇನೇ ವಿದ್ಯಾಗುರುವು ಆತನಮೇಲೆ ಪ್ರಸನ್ನನಾಗಿ ಮುಂದಿನ ಶಿಕ್ಷಣವನ್ನು ಆರಂಭಿಸುತ್ತಿದ್ದನು ಬ್ರಾಹ್ಮಣಕುಮಾರನಾದ ಉಪಮನ್ಯುವು ಗುರುವಿನ ಅಪ್ಪಣೆಯಂತೆ ಮೊದಲು ಗೋಪಾಲನೆಯಲ್ಲಿಯೇ ಉದ್ಯುಕ್ತನಾದನು, ಈತನು ಗೋವುಗಳನ್ನು ಕಾಯುತ್ತ ಭಿಕ್ಷಾನ್ನದಿಂದ ತನ್ನ ಜೀವಿಕೆಯನ್ನು ಸಾಗಿಸುತ್ತಲಿದ್ದನು ಒಂದುದಿನ ಗುರುವು ಉಪಮನ್ಯುವಿಗೆ ಭಿಕ್ಷೆಯನ್ನು ಬೇಡಲಾಗದೆಂದು ಅಪ್ಪಣೆಮಾಡಿದನು ಗುರುವಿನ ಆಜ್ಞೆಯನ್ನು ಮೀರದೆ ಬಾಲಕನಾದ ಉಪಮನ್ಯುವು ಭಿಕ್ಷೆಯನ್ನು ನಿಲ್ಲಿಸಿ ಹಸಿವನ್ನು ಸಹಿಸದೆ ಕಂದಿನಿಂದ ಗೋವುಗಳ ಬಾಯಿಂದ ಸುರಿಯುತ್ತಿರುವ ಬುರುಗಿನಿಂದಲೇ ಹಸಿವನ್ನು ಕಳೆದುಕೊಳ್ಳುತ್ತ ನಡೆದನು. ಗುರುವು ಅದನ್ನು ಕೂಡ ನಿಷೇಧಿಸಿದನು ಆಗ ಮುನಿಕುಮಾರನು ಅದಕ್ಕೂ ಒಪ್ಪಿಕೊಂಡು ಹಸ್ಸಾದ ಎಕ್ಕೆಯ ಎಲೆಗಳನ್ನು ತಿಂದು ಜೀವಿಸಹತ್ತಿದನು ಇದರಿಂದ ಆತನ ಕಣ್ಣುಗಳು ಕಾಣದಂತಾದವು, ಅವರಲ್ಲಿಯೇ ತಡವರಿಸುತ್ತ ಗೋವುಗಳನ್ನು ಕಾಯುತ್ತಲಿದ್ದು ಒಂದುದಿನ ಅಪ್ಪದಸ್ಸಿ ಒಂದು ದೊಡ್ಡದಾದ ಹಾಳುಬಾವಿಯಲ್ಲಿ ಮುಗ್ಗರಿಸಿ ಬಿದ್ದನು. ದೈವವಶಾತ್ ಪ್ರಾಣಾಪಾಯವೇನೂ ಸಂಭವಿಸಲಿಲ್ಲ ಇದೆಲ್ಲಾ ಗುರುವಿಗೆ ತಿಳಿದುಬಂದುದರಿಂದ ಉಪಮನ್ಯುವನ್ನು ಬಾವಿಯಿಂದ ಕಡೆಗೆತೆಗೆದು ಆತನಿಗೆ ಅಶ್ವಿನೀಕುಮಾರ ಸ್ತೋತ್ರವನ್ನು ಹೇಳಿಕೊಟ್ಟನು ಈ ಸ್ತೋತ್ರಪಠನಪ್ರಭಾವದಿಂದ ಉಪಮನ್ಯುವಿನ ಕಣ್ಣುಗಳು ಮೊದಲಿನಂತೆಯೇ ಕಾಣಹತ್ತಿದವು ಆ ಮುಂದೆ ಗುರುವಾದ ಧೌಮ್ಯಾಚಾರ್ಯನು ಉಪಮನ್ಯುವಿನ ದೃಢವಾದ ಭಕ್ತಿಗೆ ಮೆಚ್ಚಿ ವೇದ, ಧರ್ಮಶಾಸ್ತ್ರ, ನೀತಿಶಾಸ್ತ್ರ ಮೊದಲಾದವುಗಳನ್ನು ಸಂಪೂರ್ಣವಾಗಿ ಕಲಿಸಿ ಆತನನ್ನು ಲೋಕವಿಖ್ಯಾತನಾದ ಪಂಡಿತನನ್ನಾಗಿಯಷ್ಟೇ ಅಲ್ಲ, ತ್ರಿಲೋಕಪ್ರಸಿದ್ಧನಾದ ಶಿವಾಚಾರ್ಯನನ್ನಾಗಿ ಮಾಡಿದನು ಇವಲ್ಲವೇ ಗೋಸೇವೆಯ ಫಲವು?

ವಿರಾಟರಾಯನು ಲಕ್ಷಾವಧಿ ಗೋವುಗಳನ್ನು ಸಾಕಿದ್ದುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ ಪಾಂಡವರ ಅಜ್ಞಾತವಾಸವು ಈತನ ಗೋಸೇವೆಯಲ್ಲಿಯೇ ಮುಗಿಯಿತು ತತ್ವಜ್ಞಾನನಿಧಿಯಾದ ಶ್ರೀ ಕೃಷ್ಣನಂತೂ ಹುಟ್ಟಿದ ಗೋಪಾಲಕನಾಗಿಯೇ ಮತ್ತು ಈತನಿಗೆ

ಗೋಪಾಲ-ಗೋವಿಂದನೆಂಬ ಹೆಸರು ಬಂದುದೂ ಇದಕ್ಕಾಗಿಯೇ. ಶ್ರೀ ಕೃಷ್ಣನನ್ನು ಯಾವ ಕವಿಗಳು ಹೊಗಳಿದರೂ, ಯಾವ ಚಿತ್ರಕಾರರು ಆತನನ್ನು ಚಿತ್ರಿಸಿದರೂ ಗೋವುಗಳನ್ನು ಬಿಟ್ಟಿರುವಂತಿಲ್ಲ. ಒಂದು ವೇಳೆ ಕವಿಗಳು ಗೋಪಾಲಶಬ್ದವನ್ನಿಡದೆ ಶ್ರೀ ಕೃಷ್ಣನನ್ನು ಸ್ತುತಿಸಲೂಬಹುದು, ಚಿತ್ರಕಾರರು ಗೋವುಗಳಿಲ್ಲದ ಚಿತ್ರವನ್ನು ಚಿತ್ರಿಸಲೂಬಹುದು, ಆದರೆ ಅಂತಹ ಕಾವ್ಯವೂ ಅಂತಹ ಚಿತ್ರವೂ ಯಾವುದೋ ಒಂದು ಲೋಪದಿಂದ ಕೂಡಿರುವಂತೆಯೇ ಭಾಸವಾಗುವುದು. ನಮ್ಮ ಶ್ರೀ ಶಿವನ ವಿಷಯವಾದರೂ ಹಾಗೆಯೇ ಸರಿ.

ಶ್ರೀ ಶಂಕರನು ವೃಷಭವಾಹನನಾದರೂ ಅದರ ಪ್ರಾಶಸ್ತ್ಯತೆಯು ಮಿಗಿಲಾದುದೆಂಬುದನ್ನರಿತು ವೃಷಭಧ್ವಜನೂ ಆಗಿದ್ದಾನೆ. ನಂದೀಶ್ವರನೂ ವೃಷಭೇಶ್ವರನೂ ಮೂಲಗೋತ್ರಪುರುಷರಾಗಿರುವದರಿಂದ ನಮ್ಮ ವಂಶಸ್ಥರಿಗಂತೂ ಗೋವೃಷಭಗಳು ಮನೆಯದೇವರಾಗಿವೆ. ನಮ್ಮ ರೈತರು ಅವುಗಳನ್ನು ಸೋಮವಾರ ದಿವಸ ಬೇಸಾಯಕ್ಕೊಯ್ಯದಿರುವುದಕ್ಕೂ, ಕಾರಹುಣ್ಣಿಮೆಯಲ್ಲಿ ಮನೆಯಲ್ಲಿರುವ ಸಕಲವಸ್ತ್ರಾಭರಣಗಳಿಂದ ಅವುಗಳನ್ನು ಶೃಂಗರಿಸಿ ಉತ್ಸಾಹಪೂರ್ವಕವಾಗಿ ಮೆರೆಸುವುದಕ್ಕೂ ಇದೇ ಮೂಲಕಾರಣವಾಗಿದೆ. "ಗೋತ್ರ' ಶಬ್ದದ ವ್ಯುತ್ಪತ್ತಿಯಾದರೂ "ಗವಾ ತ್ರಾಯತ ಇತಿ ಗೋತ್ರಂ" (ಗೋವಿನಿಂದ ಪಾಲಿಸಲ್ಪಡತಕ್ಕದು ಗೋತ್ರವು) ಗೋವಿನಿಂದಲೇ ಉಂಟಾಗಿದೆ. ಗೋತ್ರವೆಂದರೆ ಸಂತಾನವೆಂದರ್ಥವು. ದೇವಸಂತಾನವಾಗಲಿ, ಗಣಸಂತಾನವಾಗಲಿ, ಋಷಿಸಂತಾನವಾಗಲಿ ಈಗಲೂ ಆಕಳಿನಿಂದಲೇ ಹಾಲು ಮುಂತಾದವುಗಳಿಂದ ಪಾಲಿಸಲ್ಪಡುತ್ತಿರುವುದಷ್ಟೆ! ಇನ್ನು ಗೋಷ್ಠವೆಂದರೆ ಹಕ್ಕೆ, ಇದೇ ಗೋಷ್ಠವೇ ಗೋಷ್ಠಿ (ಗೊಡವೆ, ಸಭೆ, ರಹಸ್ಯವಾಗಿ ಮಾತನಾಡುವಿಕೆ) ಯಾಗಿ ಪರಿಣಮಿಸಿದೆ. ಪುಂಗವ ಎಂದರೆ ಎತ್ತು ಎಂದರ್ಥವು, ಈ ಶಬ್ದವು ಸುರ, ಗಣ, ಋಷಿ, ನರ, ರಾಜ ಮುಂತಾದ ಶಬ್ದಗಳಿಗೆ ಸಂಬಂಧವಾಗಿ ಸುರಪುಂಗವ, ಗಣಪುಂಗವ, ಋಷಿಪುಂಗವ, ನರಪುಂಗವ, ರಾಜಪುಂಗವ ಎಂಬ ಶ್ರೇಷ್ಠವಾದ ಅರ್ಥವನ್ನು ಕೊಡುತ್ತಿದೆ. ಹೀಗೆಯೇ ಅನೇಕ ಪ್ರಕಾರವಾಗಿ ಆಲೋಚಿಸಿ ನೋಡಿದರೆ ಪೂರ್ವಕಾಲದಲ್ಲಿ ಪವಿತ್ರವಾದ ಈ ಗೋವಂಶಕ್ಕೆ ಎಷ್ಟು ಮನ್ನಣೆಯಿದ್ದಿತೆಂಬುದು ಗೊತ್ತಾಗದಿರದು.

ಅಹಿಂಸಾವಾದಿಗಳಾದ ಜ್ಯೋತಿಷಕರಂತೂ ವೃಷಭ (ಎತ್ತು) ವನ್ನು ಒಂದು ರಾಶಿಯನ್ನಾಗಿಯೇ ನಿಶ್ಚಯಿಸಿಕೊಂಡಿದ್ದಾರೆ; ಆ ವೃಷಭರಾಶಿಯ ಜೊತೆಗೆ ಮೇಷ (ಕುರಿ) ವನ್ನೂ, ಕರ್ಕ (ಏಡಿ) ವನ್ನೂ, ಸಿಂಹವನ್ನೂ, ವೃಶ್ಚಿಕ (ಚೇಳು) ವನ್ನೂ, ಮಕರ (ಮೊಸಳೆ) ವನ್ನೂ, ಮೀನವನ್ನೂ ಒಂದೊಂದು ರಾಶಿಯನ್ನಾಗಿಯೇ ಗಣಿಸಿಕೊಂಡಿದ್ದಾರೆ. ಇದರಿಂದ ಕ್ರೂರಾಕ್ರೂರ ಪ್ರಾಣಿಗಳಾವವನ್ನೂ ಹಿಂಸಿಸಬಾರದೆಂಬ ಇವರ ಸಿದ್ಧಾಂತವು ತೋರಿಬರುವುದಾದರೂ ಎಲ್ಲಾ ರಾಶಿಗೆ ಮೊದಲು ಮೇಷ ವೃಷಭಗಳನ್ನೇ ಹೇಳಿಕೊಂಡಿರುವುದರಿಂದ "ಇವೆರಡು ಜಾತಿಗಳು ಅತ್ಯಂತ ಸಾಧುಸ್ವಭಾವವುಳ್ಳವುಗಳು, ಇವುಗಳನ್ನು ಯಾರೂ ಬಲಿಕೊಡಬಾರದೆಂಬುದಾಗಿ ಇವರ ಅಭಿಪ್ರಾಯವಿರಬಹುದೆಂದು ಊಹಿಸಲು ಬರುವಂತಿದೆ. ಅಕಬರಬಾದಶಹನೂ ಕೂಡ ಈ ಗೋಜಾತಿಯಿಂದಾಗುತ್ತಿರುವ ನಾನಾಪ್ರಕಾರವಾದ ಮಹೋಪಕಾರವನ್ನು ಸ್ಮರಿಸಿಕೊಂಡೇ ತನ್ನ ರಾಜ್ಯದಲ್ಲಿ ಗೋಹತ್ಯವನ್ನು ಸುತರಾಂ ನಿಲ್ಲಿಸಿಬಿಟ್ಟಿದ್ದನು. ಆವನ ವಂಶದವರಾದ ಮುಸಲ್ಮಾನ ಬಂಧುಗಳೂ ಮೊಗಲಾಯಿಯ ದೊರೆಗಳೂ ಅಕಬರಬಾದಶಹನಂತೆ ಗೋಹತ್ಯವು ನೀಚಕೃತ್ಯವೆಂದು ಜಗತ್ತಿನಲ್ಲಿ ಸಾರಿ ಅದನ್ನು ತಡೆಯುವುದಕ್ಕೆ ಇನ್ನಾದರೂ ಮುಂದೆ ಬಂದು ಮುಸಲ್ಮಾನ ಬಂಧುಗಳೂ ಅಹಿಂಸಾವಾದಿಗಳೆಂಬ ಸುನಾಮವನ್ನು ಪಡೆಯಲಿ.

ಶ್ರೀ ಕೃಷ್ಣನಿಗೆ "ಗಾಂ ವಿಂದತೀತಿ ಗೋವಿಂದಃ (ಆಕಳುಗಳನ್ನು ಸಂಪಾದಿಸತಕ್ಕವನಾದಕಾರಣ ಗೋವಿಂದ) ಎಂಬ ಹೆಸರುಂಟಾಯಿತು. ಆ ಪುಣ್ಯವಿಭೂತಿಯು ವಾಸಮಾಡಿಕೊಂಡಿದ್ದ ದ್ವಾರಕಾ, ಮಥುರಾ, ಗೋಕುಲ, ವೃಂದಾವನ ಮುಂತಾದ ಸ್ಥಾನಗಳು ಈವಾಗ ಕ್ರಮೇಣ ಗೋಶೂನ್ಯಗಳೂ, ಸಸ್ಯಹೀನಗಳೂ ಆಗುತ್ತ ನಡೆದಿರುವುದು ಎಂತಹ ಶೋಚನೀಯವಾದ ಸಂಗತಿಯೆಂಬುದನ್ನು ಪಾಠಕರೇ ಊಹಿಸಲಿ. ಮಹಾವೀರನಾದ ಸಿಕಂದರನು ತನ್ನ ದೇಶಕ್ಕೆ ಹಿಂದಿರುಗಿ ಹೋಗುವಾಗ ನಮ್ಮ ಭಾರತದೇಶದಿಂದ ೨ ಲಕ್ಷ ಗೋವುಗಳನ್ನು ತೆಗೆದುಕೊಂಡು ಹೋದನಂತೆ! ಮುಂತಾದ ಐತಿಹಾಸಿಕ ಪ್ರಮಾಣಗಳಿಂದ ಭಾರತಭೂಮಿಯು ಒಂದು ಸಾರೆ ಗೋವುಗಳಿಂದ ಸಂಪೂರ್ಣವಾಗಿ ತುಂಬಿಹೋಗಿದ್ದಿತೆಂದು ತಿಳಿದುಬರುವುದು.

ಅಕಬರಬಾದಶಹನ ಸಮಯದಲ್ಲಿ ೮೦ ತೊಲೆಯ ೧ ಸೇರು ತುಪ್ಪಕ್ಕೆ ೧ ಆಣೆ ಬೆಲೆಯಂತೆ! ಈಗ ಅದೇ ಸ್ಥಾನದಲ್ಲಿಯೇ ಅಷ್ಟೇ ತುಪ್ಪಕ್ಕೆ ೧॥ ರೂ ಆಗಿರುವುದು ಆಶ್ಚರ್ಯಕರವಲ್ಲವೆ? ಏನಿದು ಭಾರತದೇಶವೇನಾದರೂ ಬದಲಾಗಿರುವುದೇ? ಓಹೋ! ಅದ ಹಾಗೆಯೇ ಸರಿ" ಈಗ ಪರದೇಶದಿಂದ ಯಾವುದೋ ಒಂದು ಗಿಡದ ರಸದಿಂದ ತಯಾರಾದ ಕೃತ್ರಿಮವಾದ ಹಾಲಿನ ಪುಡಿಯು ಡಬ್ಬಿಗಳಲ್ಲಿ ತುಂಬಿ ತುಂಬಿ ಬರುತ್ತಿದೆ. ನಮ್ಮ ಭಾರತೀಯರೂ ಅದನ್ನು ಪ್ರೇಮದಿಂದ ಸ್ವಾಗತಿಸಿ ಸ್ವೀಕರಿಸುತ್ತಿರುವರು. ಎಂದಮೇಲೆ ನಿಜವಾದ ಹಾಲು ನಮ್ಮ ದೇಶದಲ್ಲಿ ಉಳಿಯುವ ಬಗೆಯಾದರೂ ಹೇಗೆ, ಉತ್ತಮವಾದ ತುಪ್ಪವು ಸುಲಭವಾದ ಬೆಲೆಗೆ ದೊರೆಯುವುದಾದರೂ ಹೇಗೆ? ಯಾರಾದರೂ ಯಾವುದಾದರೊಂದು ಪದಾರ್ಥವನ್ನು ಹೆಚ್ಚಾಗಿ ಕೊಳ್ಳುವುದಾದರೆ ಆ ಪದಾರ್ಥವು ಅವಶ್ಯವಾಗಿ ಕಡಿಮೆಬೆಲೆಗೆ ದೊರೆಯಲೇಬೇಕಾಗುವುದು.

(ಸಶೇಷ)

ಮಹನೀಯರ ಹಿತೋಕ್ತಿಗಳು

(ಹಿಂದಿನಿಂದ ಮುಂದುವರಿದ)

೧೪ ಮನುಷ್ಯನು ಒಂದು ವ್ಯಾಪಾರವನ್ನು ಆರಂಭಿಸುವಾಗ, ಶರೀರಸಂಬಂಧವನ್ನು ಬೆಳೆಯಿಸುವಾಗ, ಮಿತ್ರತ್ವಮಾಡುವಾಗ "ಕರ್ತವ್ಯೋ ಮಹದಾಶ್ರಯಃ" ಎಂಬಂತೆ ದೊಡ್ಡವರ (ನಿಜವಾದ ಸಂಭಾವಿತರು) ಸಹವಾಸಮಾಡಬೇಕು. ದೊಡ್ಡವರೆಂದರೆ ದಿವ್ಯವಾಗಿಯೂ ಉದ್ದವಾಗಿಯೂ ಇರುವ ಜಡದೇಹಧಾರಿಗಳಲ್ಲ! ವಯೋವೃದ್ಧರಲ್ಲ! ಮತ್ತು ನಾಲ್ಕಾರು ಅಂತಸ್ತುಗಳುಳ್ಳ ಮನೆಗಳಿಂದಲೂ, ಕೋಟೆಗಡ್ಡೆ, ಧನಕನಕವಸ್ತ್ರವೈಡೂರ್ಯಗಳಿಂದಕೂಡಿದವರಲ್ಲ! ಆದರೆ—ಎಷ್ಟೇ ಐಶ್ವರ್ಯವಂತರಾಗಲಿ, ತೀರ ಬಡವರಾಗಲಿ, ವಯೋವೃದ್ಧನಾಗಿರಲಿ, ಹುಡುಗನಾಗಿರಲಿ, ಪರಾನ್ನ ಪರದ್ರವ್ಯಗಳನ್ನು ಪಾಷಾಣವೆಂದು ತಿಳಿಯುವಿಕೆ, ಪರನಾರೀಸೋದರತ್ವ, ತನ್ನ ಮಾನ-ವಚನ ಇವುಗಳಮುಂದೆ ತನ್ನ ಪ್ರಾಣವನ್ನು ತೃಣಕ್ಕಿಂತಲೂ ಕೀಳಾಗಿ ತಿಳಿಯುವಿಕೆ, ಲೋಕದ ಸುಖವೇ ತನ್ನ ಸುಖ, ಲೋಕದ ಕಷ್ಟವೇ ತನ್ನ ಕಷ್ಟವೆಂದು ತಿಳಿಯುವಿಕೆ ಈ ಮೊದಲಾದ ಸದ್ಗುಣಗಳು ಯಾರಿಗೆ ನಿತ್ಯನಿಯಮಿತಕಾರ್ಯಗಳಾಗಿರುವವೋ, ಯಾರು ಇವನ್ನೇ ಪರಮಪುರುಷಾರ್ಥಗಳೆಂದು ತಿಳಿದಿರುವರೋ, ಯಾರಿಗೆ ಈ ಸದಾಚಾರಗಳು ಸ್ವಗತಲ್ಯವಾಗಿರುವವೋ ಅವರೇ ದೊಡ್ಡವರು. ಇಂತಹ ಪುಣ್ಯಜೀವಿಗಳ ಸಹವಾಸವು 'ಕಬ್ಬಿನಮೇಲೆ ಜೇನು ಇಟ್ಟಂತೆ' ಆನಂದದಾಯಕವಾಗಿಯೂ, 'ಹೂವಿನ ಸಹವಾಸದಿಂದ ನಾರು ಶಿರೋಭಾಗದಲ್ಲಿ ಮೆರೆಯುವಂತೆ' ಗೌರವದಾಯಕವೂ ಆಗಿರುವುದು. ಆದರೆ, 'ನೀಚಾಶ್ರಯೋ ನಕರ್ತವ್ಯಃ' ಎಂಬಂತೆ ನೀಚರ ಸಹವಾಸವು ಸರ್ವತ್ರ ನಿಷಿದ್ಧವಾಗಿರುವುದು. ನೀಚರೆಂದರೆ—ಪರಾನ್ನ, ಪರದ್ರವ್ಯ, ಪರಸ್ತ್ರೀ ಇವುಗಳಿಗ ಯಾವಾಗಲೂ ಹಾವಿನಂತೆ ನಾಲಿಗೆಯನ್ನು ಚಾಚುವಿಕೆ, ಪರತೇಜೋವಧೆಯಲ್ಲಿ ತಮ್ಮ ಬುದ್ಧಿಯನ್ನು ವಿನಿಯೋಗಿಸುವಿಕೆ, ಹಣವೆಂದರೆ ತನ್ನ ಮಾನ-ವಚನಗಳನ್ನು ತೃಣಕ್ಕಿಂತಲೂ ಕಡೆಯಾಗಿ ತಿಳಿಯುವಿಕೆ, ದುರಾಶೆ, ಅತೃಪ್ತಿ, ಕುಟಿಲತೆ, ಅಪ್ರಮಾಣನುಡಿಯುವಿಕೆ, ತನ್ನ ಸುಖವೇ ಮೂರುಲೋಕದಸುಖವೆಂದು ತಿಳಿಯುವಿಕೆ ಈ ಗುಣಗಳೇ ಯಾರಿಗೆ ನಿತ್ಯನಿಯಮಿತಕಾರ್ಯಗಳಾಗಿರುವವೋ ಯಾರು ಇವನ್ನೇ ಪರಮಪುರುಷಾರ್ಥವೆಂದು ತಿಳಿದು ವರ್ತಿಸುವರೋ ಅವರೇ ನೀಚರು. ಇವರು ಆದಿಯಲ್ಲಿ ಇಲಿಗಳಂತಿದ್ದು ಬರಬರುತ್ತ ಹುಲಿಗಳಾಗುವರು. ಈ ಗಳಗ್ರಾಹಿಗಳಿಗೆ ಯಾಜಮಾನ್ಯವನ್ನು ಕೊಡುವದೂ, ಕುರಿಯ ಹಿಂಡಿಗೆ ತೋಳನನ್ನು ಕಾವಲಿಡುವದೂ, ಇಲಿಗಳು ಬೆಕ್ಕಿನ ಮುಂದಾಳುತನದಲ್ಲಿ ಕಾಶೀಯಾತ್ರೆಗೆ ಹೊರಡುವುದೂ ಒಂದೇ! ಇನ್ನು ಈ ಬಕಪಕ್ಷಿಗಳ ಸಹವಾಸವೆಂದರೆ ಬಿಸಿಲಿನ ತಾಪದಿಂದ ಬಳಲಿ ಬೆಂಡುಬೆಂಡಾದ ಕಪ್ಪೆಯು, ನಾಗರಹಾವಿನ ಹೆಡೆಯನೆರಳಿಗೆ ಹೋಗಿ ಶಾಂತಿಯನ್ನು ಬಯಸಿದಂತೆ ಸರ್ವಾನರ್ಥಕರವೂ ಮತ್ತು ಈಚಲಮರದಕೆಳಗೆಕುಳಿತು ಮಜ್ಜಿಗೆಯನ್ನು ಕುಡಿದು ಲೋಕಾಪವಾದವನ್ನು ಹೊಂದಿದಂತೆ ಅಗೌರವಯುತವೂ ಆಗುವದು! ಈ ನೀಚಜನರು ತಾವೇನಾದರೂ ಹೊರಗೆ ಕೊಡತಕ್ಕದ್ದಿದ್ದರೆ ಆರಕ್ಕೆ ಮೂರು ಮಾಡಿಕೊಡುತ್ತಾರೆ. ತಮಗೇನಾದರೂ ಬರತಕ್ಕದ್ದಿದ್ದರೆ ಸಮಯನೋಡಿ ಮೂರಕ್ಕೆ ಆರುಮಾಡಿ ತೆಗೆದುಕೊಳ್ಳುತ್ತಾರೆ. ಇವರು ಈರೀತಿ ಬಡಬಗ್ಗರ ಗೋಣುಮುರಿದು ಅವರನ್ನು ಅಯ್ಯೋ ಎನಿಸಿ ಮೋಸದಿಂದ ಗಳಿಸಿದ ಹಣವೇನಾದರೂ ಇವರ ಕೈಯಲ್ಲಿ ನಿಲ್ಲುವದೇನು? ಎಂದೆಂದಿಗೂ ಇಲ್ಲ! ಆದರೆ "ಅನ್ಯಾಯಾರ್ಜಿತಂ ವಿತ್ತಂ ಯೇನಕೇನಾಪಿ ನಶ್ಯತಿ" ಎಂಬಂತೆ ಹ್ಯಾಗೋ ಹಾಗೆ ಆನೆನುಂಗಿದ ಬೇಲದ ಹಣ್ಣಿನಂತೆ ಗೊತ್ತಾಗದೆ ಇಲ್ಲದೆ ಹೋಗಿಯೇ ತೀರುವದು. ಗಳಗ್ರಾಹಿಗಳೇ! ಇನ್ನಾದರೂ ಈ ಸುಲಿಗೆಯನ್ನು ಬಿಟ್ಟುಬಿಡಿರಿ" ಇದರಿಂದ ಲೇಶಮಾತ್ರವೂ ಸುಖವಿಲ್ಲ!!!

ಪಾಠಕಮಹಾಶಯ! ಸರಳರಾದ ಯಾರಾದರೂ, ಹತ್ತಿರದ ಸಂಬಂಧಿಕರೆಂದಾಗಲಿ, ಆಪ್ತರೆಂದಾಗಲಿ, ಮತ್ತು ಅವರ ನೇಹ, ಮೃದುಮಧುರವಾದ ಮಂದಹಾಸದ ಭಾಷೆ, ಬಹಿರಾಡಂಬರದ ಮಡಿ ಮೈಲಿಗೆ, ಬಡಿವಾರದ ಸ್ಥಿರವಲ್ಲದ ಪೂಜೆಪುನಸ್ಕಾರಗಳನ್ನುನೋಡಿ ಒಳ್ಳೇ ಕರ್ಮಠರೆಂದಾಗಲಿ, ಪಾಪಭೀರುಗಳೆಂದಾಗಲಿ ತಿಳಿದು ಮರುಳತನದಿಂದ ಅವರ ಸಹವಾಸಮಾಡಿ ಬಹಳ ನರಳಾಡುತ್ತದ ಶಿವಶಿವಾ! ಹೇ! ಶಂಭೋ! ದೀನೋದ್ಧರಣೈಕಶೀಲನಾದ ಪರಶಿವನ ಲೀಲೆಯೇ! ಈ ಗೋಮುಖವ್ಯಾಘ್ರಗಳ ಬಲೆಯಲ್ಲಿ ಸಿಕ್ಕಿ ಪಾಪಿಯಾಗುವ ಸಂಕಟವು ಎಂತಹ ಆ ನನ್ನ ಜನ್ಮವೈರಿಗಾದರೂ ಬೇಡ! ನಿನಗೆ ಶತಸಹಸ್ರ ನಮಸ್ಕಾರಗಳು! ಈ ರಕ್ತಸಂಶೋಷಿತರ ಸಹವಾಸದಿಂದುಂಟಾಗುವ ಹೃತ್ತಾಪಾಗ್ನಿಜ್ವಾಲೆಯು, ಅನುಭವಿಸುವವನೊಬ್ಬನಿಗೂ, ಮತ್ತು ಸರ್ವಾಂತರ್ಯಾಮಿಯಾದ ಭಗವಂತನಿಗೊಬ್ಬನಿಗೂ ಗೊತ್ತಾಗುವದಲ್ಲದೆ, 'ಉಂಡವನು ಬಲ್ಲನೇ ಹಸಿದವನ ಸಮಾಚಾರವನ್ನು' ಎಂಬಂತೆ ಇತರ ಯಾರಿಗೂ ಒಂದು ಮುಳ್ಳಿನ ಮೊನೆಯಷ್ಟೂ ಸಹ ಗೊತ್ತಾಗುವದಿಲ್ಲವು. ಹೇ! ಪ್ರಿಯವಾಚಕಮಹಾಶಯ! ಈ ಧನಪಿಶಾಚಿಗಳ ಹೃದಯದಲ್ಲಿ ಕರುಣಾರಸ, ತೃಪ್ತಿ, ಧಾರಾಳತೆ, ಸತ್ಯತೆ, ಕೃತಜ್ಞತೆ ಈ ಸದ್ಗುಣಗಳು ಇರುವವೆಂದು ಯಾರಾದರೂ ಹೇಳುವದಾದರೆ, ಅವರಿಗೆ, "ತನ್ನ ಜುಟ್ಟನ್ನು ತಾನೇ ಹಿಡಿದುಕೊಂಡು ತನ್ನ ದೇಹವನ್ನು ಮೇಲಕ್ಕೆತ್ತಿ ಆಕಾಶಕ್ಕೆ ಹಾರಿದ ಮನುಷ್ಯನನ್ನೂ, ಮತ್ತು ಗಗನಕುಸುಮವನ್ನೂ ಕಣ್ಣಾರೆ ಕಂಡೆವೆಂದು ನಾವಾದರೂ ಧಾರಾಳವಾಗಿ ಹೇಳದೇ ಇರಬಾರೆವು!!!" ಉಪವಾಸವಿದ್ದರೂ ಉಪದ್ರವವಿರಬಾರದು.

೧೫ ಈ ಚರಾಚರಾತ್ಮಕವಾದ ಜಗತ್ತಿನಲ್ಲಿಯ ಕೆಲ ಜನರ ಕೈಯಲ್ಲಿ ಅನ್ಯರ ಹಣ ಸಿಕ್ಕರೆ ಭಾರವಾದ ಕಲ್ಲಿನ ಕೆಳಗೆ ಕೈಸಿಕ್ಕಂತಾಗುವುದು. ಮೊಸಳೆಯ ದವಡೆಯಲ್ಲಿ ಸೇರಿರುವ ರತ್ನವನ್ನಾದರೂ ಅತಿಸಾಹಸದಿಂದ ತರಬಹುದು. ಆದರೆ ನರಭಕ್ಷಕರಾದ ಈ ನರರಾಕ್ಷಸರ ಕೈಯಿಂದ ದೊರಕಿಸುವುದು ಕಡುಕಷ್ಟವು. ಕೊಡಬೇಕಾದದ್ದನ್ನು ಕೊಡುವುದಕ್ಕೆ ಆ ಧನಲೋಭಿಗಳಿಗೆ ಬಹು ಪ್ರಾಣಸಂಕಟವು. ಆದರದನ್ನು ಅವರಿಗೆ ಕೊಡಬಾರದ ಈ ನೀಚರು ತಮ್ಮದೆನ್ನುವದನ್ನು ಏನನ್ನು ತಾನೆ ಕೊಟ್ಟಾರು! ಸಾಲರೂಪವಾಗಿ ತಂದದ್ದಾಗಿರಲಿ ಇಲ್ಲವೆ ಮೋಸತನದಿಂದ ಅಪಹರಿಸಿಕೊಂಡದ್ದಾಗಿರಲಿ, ಯಾವ ರೂಪದಿಂದಲಾದರೂ ಒಬ್ಬರ ಹಣ ಇನ್ನೊಬ್ಬರಲ್ಲಿ ನಿಂತರೆ ಅದಕ್ಕೆ ಋಣಶೇಷವೆನ್ನುತ್ತಾರೆ. ಕೊಟ್ಟವನು ಸತ್ತುಹೋಗಿರಲಿ, ತೆಗೆದುಕೊಂಡವನು ಸತ್ತುಹೋಗಿರಲಿ ಋಣಶೇಷಮಾತ್ರ ಇಟ್ಟುಕೊಂಡವನ ಬೆಂಬಿಡದೇ ಇರುವುದು. ಈ ಋಣಶೇಷವು ಕೊಟ್ಟಲ್ಲದೆ ಹಾಗೆಯೇ ಎಂದೆಂದಿಗೂ ತೀರುವುದಿಲ್ಲವು. ಜನನ

[೬ ನೇ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೩೬ ನೆಯ ಜೂನ್ ತಾ|| ೨೯ ನೆಯ ಸೋಮವಾರ

ಏಕದೇವನಿಷ್ಠೆ.

ಈ ಪ್ರಪಂಚವನ್ನು ಸೃಷ್ಟಿಸಿದ ದೇವರು ಒಬ್ಬನಾಗಿರುವನಲ್ಲದೆ ಅನೇಕರಿಲ್ಲವು. ಒಂದು ವೇಳೆ ಒಬ್ಬ ಯಜಮಾನನಿದ್ದು ಬೀದಿಯವರು ಅವನಧೀನದಲ್ಲಿದ್ದರೆ ಆ ಮನೆಯ ವ್ಯವಹಾರವು ಬಹುಚಂದವಾಗಿ ಸಾಗುವದು ಹಾಗಿಲ್ಲದೆ ಅನೇಕ ಯಜಮಾನರಿಂದ ಕೂಡಿದರೆ ಆ ಮನೆಯ ಸಂಸಾರವು ವಿಷಮ ಸಾಗುವಂತೆ ಒಂದು ಜಗತ್ತಿಗೆ ಅನೇಕ ಸೃಷ್ಟಿಕರ್ತರನ್ನು ಒಪ್ಪಿಕೊಳ್ಳುವುದಾದರೆ ಎಷ್ಟು ವಿರುದ್ಧ ಪ್ರಸಂಗಗಳು ... ಗುಣದಿಂದ ... ಆಗುವುದರಲ್ಲಿ ಸಂಶಯವು ಇಲ್ಲ. ಆದುದರಿಂದ ಸೃಷ್ಟಿಸ್ಥಿತಿಸಂಹಾರಕರ್ತನಾದ ಒಬ್ಬ ದೇವನೇ ಆಯಾಯ ಉಪಾಸಕರ ದೃಷ್ಟಿಭೇದದಿಂದ ವಿಷ್ಣುವೆಂತಲೂ ಶಿವನೆಂತಲೂ ... ಶಕ್ತಿಯೆಂತಲೂ ಅನಂತಾಕಾರವಾಗಿ ಕಾಣಿಸಿಕೊಂಡು ತನ್ನನ್ನು ಮಾಡುವ ಪೂಜಾಪಾಠಾನುಸಾರವಾಗಿ ಫಲಗಳನ್ನೀಯುವನು. ... ದೇವರೆಂಬ ವಸ್ತುವು ಒಂದೇ ಆಗಿದ್ದರೂ ಆಯಾಯ ಮತದ ಉಪಾಸಕರು ತಮ್ಮ ತಮ್ಮ ಮತಪ್ರಕ್ರಿಯಾನುಸಾರವಾಗಿ ಒಂದೊಂದು ನಾಮರೂಪ ಕಲ್ಪನೆಯಿಂದ ಮಾತ್ರದಿಂದ ಅವನ ದೇವರೇ ಬೇರೆ, ಇವನ ದೇವರೇ ಬೇರೆಯೆಂದು ತರ್ಕಿಸಬಾರದು. ... ಒಂದು ವಸ್ತುವೇ ಆಯಾಯ ದೇಶಭಾಷೆಗನುಸಾರವಾಗಿ ... ಮೊದಲಾದ ಅನೇಕ ನಾಮಗಳನ್ನು ಧರಿಸಿದ್ದರೂ ಅದು ಒಂದೇ ರೂಪದಿಂದಿದ್ದು ಒಂದೇ ಫಲವನ್ನು ಕೊಡುವಂತೆ ದೇವರನ್ನು ತನ್ನ ಮತಾನುಸಾರವಾಗಿ ಪೂಜಾಪ್ರಕ್ರಿಯೆಯಿಂದ ಯಾವ ರೂಪದಿಂದ ಧ್ಯಾನಿಸಿದರೂ ಪೂಜಿಸಿದರೂ ಸ್ಮರಿಸಿದರೂ ಮುಖವನ್ನು ನಿರಾಕರಿಸಿಯೇ ನಿರಾಪೇಕ್ಷನು ... ವಲ್ಲಿ ದೇವರೊಬ್ಬನೆಂದು ಒಪ್ಪುವ ದೈವ ಪ್ರಸಂಗಾಗಿ ... ದೈವ ದಿ ಅನೇಕಮೂರ್ತಿಗಳ ಯಾವ ಮತದಲ್ಲಿ ಜನ್ಮವನ್ನೆತ್ತಿದವರೂ ಆಯಾಯ ದೇವರನ್ನಾರಾಧಿಸಿ ಸುಖವನ್ನು ಪಡೆಯುವ ರೀತಿಯು ಪ್ರತಿಯೊಬ್ಬರಿಗೂ ಇರುವಲ್ಲಿ ತಾನು ಹುಟ್ಟಿದ ಮತವನ್ನು ಬಿಟ್ಟು ಮತ್ತೊಂದು ಮತವನ್ನು ಅವಲಂಬಿಸುವರೆಂಬ ಬುದ್ಧಿಯು ಕೇವಲ ... ಹೊರತು ಪಾರಮಾರ್ಥಿಕಬುದ್ಧಿಯೆಂದಲ್ಲವೆಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ಜನ್ಮದಿಂದ ... ದುಸ್ಸಂಗದೋಷದಿಂದ ಆ ವಿಶ್ವಾಸವು ... ಪುಟುವುದಾಗಲಿ ಜನ್ಮತಃ ವೈಷ್ಣವನಾಗಿದ್ದು ಅದನ್ನು ಬಿಡುವುದಾಗಲಿ ಜನ್ಮತಃ ಶೈವನಾಗಿದ್ದು ಅದನ್ನು ಬಿಡುವುದಾಗಲಿ ಎಲ್ಲವೂ ಅಜ್ಞಾನಮಾಯಕವಲ್ಲದೆ ಹೊರತು ... ವಲ್ಲ. ಮತ್ತು ಇಂಥ ಏಕಾಂತಬುದ್ಧಿಯಿಲ್ಲದವನಿಗೆ ಅನೇಕ ವಿಧ ಸಂಶಯಗಳುದಯಿಸಿ ತನ್ನ ಜೀವಮಾನವನ್ನೇ ವ್ಯರ್ಥಗೊಳಿಸುತ್ತಾನೆ. ಒಂದೇ ದೇವರನ್ನು ನಂಬಿದವನನ್ನು ಒಬ್ಬ ಸಾಧ್ವಿಗೂ ಅನೇಕ ದೇವರನ್ನು ನಂಬಿದವನನ್ನು ಒಬ್ಬ ಸ್ವೈರಿಣಿಗೂ ಹೋಲಿಸಬಹುದಾಗಿದೆ.

ಸ್ತ್ರೀಣಾಂ ಮುಖ್ಯಃ ಪತಿರೇಕೋ ಲಿಂಗಮೇಕಂ ... ||

ಎಂಬ ಧರ್ಮಶಾಸ್ತ್ರದಂತೆ ಸ್ತ್ರೀಯು ಒಂದು ಜನ್ಮದಲ್ಲಿ ಒಂದೇ ವಿವಾಹವನ್ನು ಮಾಡಿಕೊಳ್ಳಬೇಕಲ್ಲದೆ ಅನೇಕ ವಿವಾಹಗಳನ್ನು ಮಾಡಿಕೊಳ್ಳಲಾಗದು. ಒಂದು ಕಾಲದಲ್ಲಿ ಪಾಣಿಗ್ರಹಣಮಾಡಿದ ಗಂಡನು ಕುರೂಪಿಯಾಗಿರಲಿ, ಸುಂದರನಾಗಿರಲಿ ಶ್ರೀಮಂತನಾಗಿರಲಿ ದರಿದ್ರನಾಗಿರಲಿ ದುಃಖಿಯಾಗಿರಲಿ ಸುಖಿಯಾಗಿರಲಿ ಮೂಢನಾಗಿರಲಿ ಪ್ರೌಢನಾಗಿರಲಿ ಅವನೇ ತನ್ನ ಸಾಕ್ಷಾತ್ ಪರಶಿವನೆಂದು ಭಾವಿಸಿ ಅವನಲ್ಲಿಯೇ ನಿರತಿಶಯಪ್ರೇಮವನ್ನು ತೋರಿಸುತ್ತಿರುವುದೇ ಸಾಧ್ವಿಯ ಧರ್ಮವೆಂದೂ ಕ್ಷಣಿಕ ಸುಖದಾಸೆಯಿಂದಲಾಗಲಿ ... ದುಸ್ಸಂಗದೋಷದಿಂದಲಾಗಲಿ ಧನದಾಸೆಯಿಂದಲಾಗಲಿ ಬೇರೆ ಬೇರೆ ಪುರುಷರನ್ನು ಸೇರುತ್ತ ಹೋಗುವುದೇ ಸ್ವೈರಿಣಿಯ ಧರ್ಮವೆಂದೂ ಎಲ್ಲರೂ ತಿಳಿದಿರುತ್ತಾರೆ. ಇದರಂತೆ ತನ್ನ ಪರಗುರುಗಳ ಅನುಗ್ರಹದಿಂದ ತಾನು ಯಾವ ದೇವತಾಸಂಬಂಧವಾದ ದೀಕ್ಷೆಯನ್ನು ತನ್ನ ಪಿತೃಪಿತಾಮಹಾದಿ ಪರಂಪರೆಯಿಂದ ಪಡೆಕೊಂಡು ಬಂದಿರುತ್ತಾನೆಯೋ ಅಂದ ದೀಕ್ಷಾನುಗುಣವಾದ ದೇವರನ್ನು ಎಂಥ ಕಷ್ಟಗಳೊದಗಿದರೂ ಬಿಡದಿರುವುದೇ ಉತ್ತಮನ ಧರ್ಮವು. ... ರಾಗಿ ತಾವು ಸ್ವತಂತ್ರರೆಂದು ... ಯಿಂದ ... ದಾಸೆಯಿಂದ ಅನಿರೀಕ್ಷಣವಾಗಿ ಒಂದು ತನ್ನ ... ವನ್ನು ಬಿಟ್ಟು ಮತ್ತೊಂದು ಮತವನ್ನು ... ಗುಣವಾದ ದೇವರನ್ನು ಆರಾಧಿಸುವುದು ... ಅದನ್ನು ಬಿಟ್ಟು ಮತ್ತೊಂದನ್ನಾಶ್ರಯಿಸುವುದು ... ಒಳಲೆನವನಿಗೆ ಯಾವ ಪರತತ್ವ ... ಎರಡುದೇವರನ್ನು ನಂಬಿ ... ನವನನ್ನೇ ... ವನು ಕೇವಲ ... ಲಕ್ಷಣ ... ಇಂಥವರ ... ಯಾವ ಮತದಲ್ಲಿಯೂ ... ಪ್ರಿಪ್ಪಿ ... ಸಂಪೂರ್ಣವಾದ ... ಅವನ ... ವಿ ... ಸ್ಥಿತಿ ... ಸ್ವಮತವನ್ನು ಬಿಟ್ಟು ಪರಮತವನ್ನು ... ಕೇವಲ ... ರೆಂದೇ ಹೇಳಬೇಕು. ...

ಶ್ರೀ ... ||

ಎಂದು ... ಇದೇ ಅರ್ಥವನ್ನು ... ಒಂದು ... ನಿಸಿ ... ಗುರುವಿನ ... ಸಂಕರ ... ನ್ಯ ... ಇಂದ ... ವ ... ಅಲ್ಲಿ ... ಯನ್ನು ... ಯಿಂದ ... ಯಾವ ... ಬಿಟ್ಟು ... ಲಾ ... ಆದ್ದರಿಂದ ... ವಿನೆಯುಕು ... ಇದರಿಂದ ... ಯಾವ ದೋಷವು ಇಲ್ಲ ... ಗಿಯೂ ಲಿಂಗಗುರುಗಳ ... ಗಿಯು ... ವಿವಿನಿಯೋಗ ... ಜನ್ಮಜ ... ಈ ಮತವನ್ನು ಬಿಟ್ಟು ... ಮತವನ್ನು ಪ್ರವೇಶಿಸುವ ... ಆ ಮತವನ್ನು ಸಹ ಬಿಟ್ಟು ... ವನ್ನು ಪ್ರವೇಶಿಸುವುದೂ ... ಪುನರ ... ಕ್ಕೆ ... ಪನು ಪಾಷಂಡಿಯೆಂದು ಹೇಳ ... ಈ ವಿಷಯದಲ್ಲಿ ಶಾಸ್ತ್ರಕಾರರ ಅಭಿಮತವು ...

ಶಿವ ... ||
... ||
... ||

ತನ್ಮತವನ್ನು ಜಾತಿಮತವನ್ನೂ ... ಯಾವ ಶ್ರುತಿಸ್ಮೃತಿ ... ಸುವರ್ಣ ... ಪಾಷಂಡಿಗಳು ಯಾವ ವೈದಿಕ ಕರ್ಮಗಳಲ್ಲಿಯೂ ಅವರಿಗೆ ಅಧಿಕಾರವಿಲ್ಲ. ತಮ್ಮ ... ಆಶ್ರಮವರ್ಣಗಳಿಂದ ಭ್ರಷ್ಟರಾದವರು ಪತಿತರೆನಿಸಿಕೊಳ್ಳುತ್ತಾರೆ ಎಂದು ಸ್ಕಾಂದಾದಿಪುರಾಣಗಳು ಪಾಷಂಡಿ ... ಗಳ ವಿವರಣೆಯನ್ನು ಮಾಡಿರುತ್ತವಲ್ಲದೆ—

ಶ್ರುತಿ ... ||
ಲಿಂಗ ... ಪುರುಷ ||
... ಸರ್ವದಾ ||
... ||
... ||
... ||
... ||
... ||
... ||
... ||
... ||

ಎಂದು ಶಂಕರಸಂಹಿತೆ ವೀರಾಗಮ, ಮಕುಟಾಗಮ ವಿವರಣೋತ್ತರ ಮುಂತಾದ ಅನೇಕ ಧರ್ಮಗ್ರಂಥಗಳು ಲಿಂಗಧಾರಣದ ಮಹತ್ವವನ್ನು ನಾನಾಮುಖವಾಗಿ ಕೊಂಡಾಡಿರುವಲ್ಲಿ ಇಂಥ ಮುಕ್ತಿದಾಯಕವಾದ ಲಿಂಗದೀಕ್ಷೆಯನ್ನು ತ್ಯಜಿಸಿ ಮತಾಂತರವನ್ನು ಹೊಂದುವವನೇ ಪಾಷಂಡಿಯೆಂದು ಸ್ಪಷ್ಟವಾಗುತ್ತದೆ. ಇಂಥ ಮತವನ್ನು ಬಿಟ್ಟು ಮತಕ್ಕೆ ಪ್ರವೇಶಿಸುವ ಪಾಷಂಡಿಗಳೇ "ಶೈವಾನ್ ಪರಮತಾಂಶ್ಚೈವ" ಎಂಬ ಶ್ಲೋಕಕ್ಕೆ ವಾಚ್ಯರಾಗುತ್ತಾರಲ್ಲದೆ ಯಾವಜ್ಜೀವವೂ ಏಕದೇವನಿಷ್ಠೆಯೆಂಬ ... ಲಿಂಗಧಾರಿಗಳೆಂದೂ ವಾಚ್ಯರೆನಿಸುವರು.

ಒಳದೇಶದ ವೃತ್ತಾಂತಗಳು.

ಇದೇ ... ನೆಯ ತಾರೀಖಿನ ದಿವಸ ಪ್ರಾತಃಕಾಲ ಶ್ರೀ ... ಮಹಾರಾಜರವರು ವಿಲಾಯತಿಗೆ ಪ್ರಯಾಣಮಾಡ್ಯ ... ದಲ್ಲಿ ಗಂತಕಲ್ ಕಡೆಗೆ ಹೋಗ ... ಜನ್ನು ಹತ್ತಿ ... ಮುಂಬ ಯಿಗೆ ಪ್ರಯಾಣಮಾಡಿದರು.

... ಮಹಾರಾಜರವರು ಯೂರೋಪ್ ಖಂಡದಲ್ಲಿ ... ಜೂನ್ 22 ನೆಯ ... ಪ್ರಾತಃಕಾಲ ರಾಜಧಾನಿಯಿಂದ ಪ್ರಯಾಣ ... ಆಡಿಯಲ್ಲಿ ರಾಜ ... ತಲುಪಿದರೆಂದು ತಿಳಿದುಬಂದಿದೆ.

... ಮಿರ್ಜಾ ಇಸ್ಮಾಯಿಲ್ ... ತಾರೀಖಿನ ದಿವಸ ಬೆಂಗಳೂರಿನಿಂದ ... ದಲ್ಲಿ ಪ್ರಯಾಣ ಬೆಳೆಸಿದರು ... ಅನೇಕ ಸರ್ಕಾರಿ ... ಗೆ ಒಂದು ಹಾರ ... ಯಾತ್ರಾಪೇಕ್ಷವನ್ನು ... ಕೊಟ್ಟರು.

... ತಾ|| ... ಶ್ರೀಮನ್ಮಹಾರಾಜರವರು ... ವಿವಾನರು ಮೊದಲಾದವರೊಂದಿಗೆ ... ಯೂರೋಪಿಗೆ ಪ್ರಯಾಣ ... ಆ ದಿವಸ ಮಧ್ಯಾಹ್ನ ... ಕಾರಣಾಂತರದಿಂದ ... ಬೊಂಬಾಯಿಗೆ ... ತಲುಪಿತು.

ಇದೇ ... ನೆಯ ತಾರೀಖಿನ ಸಾಯಂಕಾಲ ... ನೂತನವಾಗಿ ರಚಿಸಿರುವ ... ಪ್ರವೇಶಮಹೋತ್ಸವವನ್ನು ... ನೆರವೇರಿಸಲ್ಪಟ್ಟಿತು. ಪ್ರಭು ... ಅಲಂಕರಿಸಿದ ಮೇಲೆ ಶ್ರೀಯ ... ನಂತರ ... ಸದಸ್ಯರಪರವಾಗಿ ಮಾನ ... ಒಪ್ಪಿಸಿದ ಬಳಿಕ ಶ್ರೀಮನ್ಮಹಾರಾಜರವರು ... ಭಾಷಣವನ್ನು ಮಾಡಿದರು.

ನಿಪ್ಪಾಣಿಪುರದಲ್ಲಿ ಕ್ರಾಂತಿಕಾರರ ಚಳುವಳಿಯು ಮಿತಿ ಮೀರುವುದರಿಂದ ಸರ್ಕಾರದವರು ಕ್ರಾಂತಿಯನ್ನಡಗಿಸುವುದಕ್ಕಾಗಿ ಕಾಲೇಜಿಗೆ ಹೋಗುವ ಹುಡುಗರು ಪ್ರತಿದಿನವೂ ಪೋಲೀಸರಿಗೆ ಹಾಜರಾಗಬೇಕೆಂದು ನಿರ್ಬಂಧಿಸಿರುತ್ತಾರೆ. ವಿದ್ಯಾರ್ಥಿಗಳಿಗೆ ಈ ವಿಧಿಯು ಸಂಭಾರದಿರುವುದರಿಂದ ಕಾಲೇಜನ್ನು ಬಿಟ್ಟು ಬೇರೆ ಕಡೆಗೆ ಹೋಗುತ್ತಿರುವರು. ಸದ್ಯಃ ಕಾಲೇಜಿನಲ್ಲಿ 30 ವಿದ್ಯಾರ್ಥಿಗಳು ಮಾತ್ರ ಉಳಿದಿರುವುದರಿಂದ ಕಾಲೇಜನ್ನೇ ಮುಚ್ಚಬೇಕೆಂದು ಯೋಚಿಸುತ್ತಿರುವರಂತೆ.

ಮೈಸೂರು ಪೇಪರ್ ಮಿಲ್ ಷೇರುಗಳ ಕೊಡುವಿಕೆಯನ್ನು ಡೈರೆಕ್ಟರರು ಪ್ರಕಟಿಸಿರುತ್ತಾರೆ. ಈ ಷೇರುಗಳು ... ಲಕ್ಷ ರೂಪಾಯಿ ಗಳಿಗೆ ಬೇಡಲ್ಪಟ್ಟು ಅರ್ಜಿಗಳು ಬಂದಿದ್ದವೆಂದು ತಿಳಿದುಬರುತ್ತದೆ. ಈ ಕಂಪೆನಿಯ ಮೂಲಧನಕ್ಕಾಗಿ ... ಲಕ್ಷ ರೂಪಾಯಿಗಳ ಷೇರುಗಳನ್ನು ಮಾತ್ರ ವಿಕ್ರಯಿಸಿದ್ದು ಅದರಲ್ಲಿ 2½ ಲಕ್ಷ ರೂಪಾಯಿಗಳ ಷೇರುಗಳನ್ನು ಸರ್ಕಾರದವರಿಗಾಗಿ ... ಹಂಚಲಾಗಿದೆ. ಈ ಹಂಚುವಿಕೆಯಲ್ಲಿ ಇವರು ಮೈಸೂರಿನವರು ಇವರು ಹೊರಗಿನವರೆಂಬ ಭೇದವನ್ನು ಎಣಿಸಲಿಲ್ಲವೆಂದೂ, 20 ಷೇರುಗಳಿಗಿಂತ ಕಡಮೆ ಷೇರುಗಳಿಗೆ ಅರ್ಜಿಹಾಕಿದ್ದವರಿ

ಗೆಲ್ಲಾ ಅರ್ಜಿಯಲ್ಲಿ ಕೇಳಿದ್ದಷ್ಟು ಷೇರುಗಳನ್ನು ಕೊಟ್ಟು ಅದಕ್ಕೆ ಹೆಚ್ಚು ಕೇಳಿದ್ದವರಿಗೆ ನೇಕಡ 20 ರಂತೆ ಹಂಚಿರುವುದಾಗಿಯೂ ತಿಳಿಯಬರುತ್ತದೆ. ಯಾರಿಗೂ 1000 ಕ್ಕಿಂತ ಹೆಚ್ಚಾಗಿ ಕೊಟ್ಟಿರುವುದಿಲ್ಲವೆಂದ ಕೇಳುತ್ತೇವೆ.

ಮೈಸೂರು ಸ್ಟ್ರೀಟ್‌ಮಾರ್ಕೆಟನಲ್ಲಿರುವ ಶ್ರೀನಿವಾಸನೆಂಬ 18 ವರ್ಷ ವಯಸ್ಸಿನ ಹುಡುಗನು ಮನೆಯಕಡೆಯಿಂದ ಅಂಗಡಿಗೆ ಹೋಗುತ್ತಿರುವಾಗ ಸೆನಾಪ್ ಬೀದಿಯ ಚೌಕದಲ್ಲಿರುವ ಒಂದು ಎಲೆಕ್ಟ್ರಿಕ್ ಪೋಸ್ಟಿನ ವೈರನ್ನು ಆಕಸ್ಮಾತ್ತಾಗಿ ಹಿಡಿದುಕೊಂಡನು. ಆ ವೈರು ತುಂಬಾ ಸಡಿಲವಾಗಿದ್ದು ಕೆಳಗಿದ್ದ ತಂತಿಯೊಂದಕ್ಕೆ ಸೋಕಿದ್ದಿತು. ಆ ಹುಡುಗನು ವೈರನ್ನು ಹಿಡಿದ ಕೂಡಲೆ ಅವನಿಗೆ ಬಲವಾದ ಷಾಕ್ ಹೊಡೆದದ್ದಲ್ಲದೆ ಕೈಯನ್ನು ಸಹ ಬಿಡಿಸಿಕೊಳ್ಳಲಾಗಲಿಲ್ಲ. ಹುಡುಗನು ಅಪಸ್ವರದಿಂದ ಕೂಗಿಕೊಂಡನು. ದಾರಿಯಲ್ಲಿ ಹೋಗುತ್ತಿದ್ದ ಪ್ಲೈಟ್ ಆಫೀಸಿನ ಶ್ರೀಯುತ ಲಿಂಗಯ್ಯ ಎಂಬುವರು ಇವನನ್ನು ಕಂಡು ತಕ್ಷಣ ಅವನನ್ನು ಬಿಡಿಸಿದರು. ಕೂಡಲೆ ಸ್ಕೌಟ್ ಮಾಸ್ಟರ್ ರಾದ ಶ್ರೀಯುತ ಎಂ. ಎ. ಜೋಯಿಸರು ಮನೆಗೆ ಕರೆದುಕೊಂಡುಹೋಗಿ ಉಪಚಾರಮಾಡಿದರು. ಹುಡುಗನು ಹುಷಾರಾಗಿದ್ದಾನೆ.

ವರ್ತಮಾನಸಂಗ್ರಹ.

ರಾಯಚೂರಿನಲ್ಲಿ ಒಂದು ಹತ್ತಿಗಿರಣಿಗೆ ಬೆಂಕಿಬಿದ್ದು ಸುಮಾರು 200 ಹತ್ತಿಯ ಬಂಡಿಗಳು ಸುಟ್ಟಿದ್ದರಿಂದ 10 ಸಾವಿರ ರೂಪಾಯಿಗಳ ವರೆಗೆ ನಷ್ಟವಾಗಿರುತ್ತದೆ.

ರಾಜ್ಯಪಟ್ಟವನ್ನು ಹೊಂದಿದ ಅಬಿಸೀನಿಯಾ ದಾಸ್ ತಫರಿಯವರು ಅಂಗೀಕರಿಸುವುದಾದರೆ ಅಬಿಸೀನಿಯಾದ ಲ್ಲಿನ ಅನ್ಯೋಕ್ರಿತಭಾಗದ ರಾಜ್ಯಸ್ಥಾನವನ್ನು ಕೊಡುವುದಕ್ಕೆ ಮುಸ್ಸೋಲಿನಿಯು ಸಿದ್ಧನಿರುವನೆಂದು ಲಂಡನ್ನಿನ ರಾಜಕಾರಣಕರ್ತೃಗಳು ಹೇಳುತ್ತಿರುವರು. ಆದರೆ ರಾಸ್ ತಫರಿಯವರು ಇದಕ್ಕೆ ಒಪ್ಪುವರೋ ಇಲ್ಲವೋ ಎಂಬ ಸಂಶಯವು ಉತ್ಪನ್ನವಾಗಿದೆಯಂತೆ.

ಗುಜರಾನವಾಲಾ ಸ್ಟೇಷನ್ನಿನಲ್ಲಿ ರೈಲಿನಿಂದ ಒಂದು ಚೀಲವು ಪ್ಲಾಟ್‌ಫಾರನ್ನಿನಮೇಲೆ ಆಕಸ್ಮಾತ್ ಬಿದ್ದಿತು. ಆ ಚೀಲದೊಳಗೆ ಅಳುವ ಸ್ವರವು ಕೇಳಿಬಂದಿತು. ಚೀಲವನ್ನು ಬಿಚ್ಚಿನೋಡಲು ಒಬ್ಬ ಹುಡುಗನು ಕಂಡುಬಂದನು. ಆ ಹುಡುಗನನ್ನು ಕೇಳಲಾಗಿ ಪಿರೋಜಪುರದ ಒಂದು ಶಾಲೆಯಲ್ಲಿ ಓದುತ್ತಿದ್ದೆನು, ಒಬ್ಬ ಸರದಾರನು ನನ್ನನ್ನು ಹಿಡಿದು ಈ ಚೀಲದಲ್ಲಿ ಹಾಕಿದ್ದನೆಂದು ಹೇಳಿದನು. ಪರಾಣನನ್ನು ಹುಡುಕುತ್ತಿರುವರು.

ಅಡಿಸ್ ಅಬಾಬಾ-ಜಿಬೂಟಿ ರೈಲ್ವೆ

ಇಟಾಲಿಯನ್ ಸೈನ್ಯಗಳನ್ನೂ ಸಾಮಾನುಗಳನ್ನೂ ಅಡಿಸ್ ಅಬಾಬಕ್ಕೆ ಸಾಗಿಸಿದ್ದಕ್ಕೆ ಇಟಲಿ ಸರ್ಕಾರದವರು ತಮ್ಮ ನ್ಯಾಯವಾದ ಚಾರ್ಜನ್ನು ಕೊಡುವುದನ್ನು ಫ್ರೆಂಚ್ ರೈಲ್ವೆ ಅಧಿಕಾರಿಗಳು ನಿರಾಕರಿಸುತ್ತಿರುವುದು ಬಹಳ ಅಸಮಾಧಾನಕ್ಕೆ ಕಾರಣವಾಗಿದೆ. ಇದು ಹ್ಯಾಗೆ ಕೊನೆಗಾಣುವುದೆಂಬದೊಂದು ಮುಖ್ಯ ಸಮಸ್ಯೆಯಾಗಿದೆ.

ಪಾಶ್ಚಾತ್ಯ ನಾಗರಿಕತೆಯ ವಿಚಿತ್ರದೃಶ್ಯ !

ಸ್ಪೇನ್‌ದೇಶದ 11 ವರ್ಷದ ಹುಡುಗಿಯೊಬ್ಬಳಿಗೆ 10 ತಿಂಗಳಲ್ಲಿಯೇ ಮೂರುಜನ ಗಂಡಂದಿರಾದರು. ಮೊದಲನೇ ಗಂಡನು ಇಂಗ್ಲೀಷಿನವನು. ಅವನಿಗೆ ಸುಮಾರು ಎರಡು ಸಾವಿರಾರು ಪೌಂಡುಗಳನ್ನು ಕಸಿದುಕೊಂಡು ಪರಾರಿಯಾದಳು. ಆ ಮೇಲೆ ಇಬ್ಬರು ಫ್ರೆಂಚ್ ಗಂಡಂದಿರಿಗೂ ನಾಮಹಾಕಿದಳು. ಕೊನೆಗೆ ನಾಲ್ಕನೆಯವನ ಸಂಗಡ ಪತ್ರವ್ಯವಹಾರ ನಡಿಸುತ್ತಿದ್ದಾಗ ಸಿಕ್ಕಿದಳು. ಅವಳನ್ನು ವಸ್ತಗಿರಿ ಮಾಡಿರುವರು.

ದರೋಡೇಕಾರರ ಕ್ರೂರಕೃತ್ಯ

ಕಳೆದ ೨೧ ನೆಯ ತಾರೀಕು ರಾತ್ರಿ ದರೋಡೆಕಾರರು ಪೂನಾದ ಸಮೀಪದಲ್ಲಿರುವ ತಾಲಿರ್ವಾಡಿ ಎಂಬಲ್ಲಿಯ ಒಬ್ಬ ಗುಜರಾತಿ ವರ್ತಕನ ಮನೆಗೆನುಗ್ಗಿ ಮನೆಯಲ್ಲಿದ್ದ ಒಡವೆವಸ್ತುಗಳನ್ನೆಲ್ಲಾ ದೋಚಿಕೊಂಡು ವರ್ತಕನ ಮತ್ತು ಆತನ ಪತ್ನಿಯ ಮೈಮೇಲಿದ್ದ ಆಭರಣಗಳನ್ನೂ ಕಿತ್ತುಕೊಂಡ. ವರ್ತಕನ ಕೈಯ್ಯಲ್ಲಿದ್ದ ಉಂಗುರುಗಳನ್ನು ತೆಗಯಲು ಬಾರದ್ದರಿಂದ ಆತನ ಕೈ ಬೆರಳುಗಳನ್ನೇ ಕತ್ತರಿಸಿಕೊಂಡು ಹೋದರು. ಪೋಲೀಸರು ಪತ್ತೆ ತನಿಖೆಯನ್ನು ನಡೆಸುತ್ತಿದ್ದಾರೆ.

ಹುಲಿಯೊಡನೆ ಹೋರಾಟ

ರಂಗೂನಿನ ಬಳಿ ಟಹಾಯ್ ಡಿಸ್ಟ್ರಿಕ್ಟಿನ ಇಬ್ಬರು ಬರ್ಮೀಯರು ಕಾಡಿನಲ್ಲಿ ಬೊಂಬುಗಳನ್ನು ಕಡಿಯಲು ಹೋಗಿದ್ದಾಗ ಒಂದು 8 ಅಡಿಯ ಭಾರಿ ಹುಲಿಯು ಇವರ ಮೇಲೆ ಬಿದ್ದಿತು. ಆದರೆ ಇವರುಗಳು ಧೈರ್ಯಗೆಡದೆ ತಮ್ಮ ಕೈಯಲ್ಲಿದ್ದ ಆಯುಧಗಳಿಂದಲೇ ಅದನ್ನು ಎದುರಿಸಿದರು. ಹುಲಿಯು ಇವರಿಗೆ ಅನೇಕಕಡೆ ಘಾಯಮಾಡಿದರೂ ಕೊನೆಗೆ ಇವರಿಂದ ಕೊಲ್ಲಲ್ಪಟ್ಟಿತು. ಇವರಿಬ್ಬರೂ ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದಾರೆ.

ರೈಲ್ವೆಗಾರ್ಡಿಗೆ ಶಿಕ್ಷೆ

ತಿನ್ನವಲ್ಲಿಗೆ ರೈಲ್ವೇ ಪಾರ್ಸಲ್‌ಮೂಲಕ ಕಳುಹಿಸಿದ್ದ ಕೆಲವು ಸೀರೆಗಳ ಗಂಟನ್ನು ಒಡೆದು ಸೀರೆಗಳನ್ನು ತೆಗೆದುಕೊಂಡು ಅವಕ್ಕೆ ಬದಲಾಗಿ ಇಟ್ಟಿಗೆಯನ್ನೂ ಹುಲ್ಲನ್ನೂ ತುಂಬಿ ಕಳುಹಿಸಿದನೆಂದು ಮುರುಗೇಶಮುದಲಿಯಾರೆಂಬ ರೈಲ್ವೆ ಗಾರ್ಡ್‌ನಮೇಲೆ ಮೊಕದ್ದಮೆಯಾಗಿ ಮ್ಯಾಜಿಸ್ಟ್ರೇಟರು ರೈಲ್ವೆಗಾರ್ಡಿಗೆ ೬ ತಿಂಗಳು ಕಠಿಣಶಿಕ್ಷೆಯನ್ನು ಈ ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನೊಬ್ಬ ರೈಲ್ವೆ ಅಧಿಕಾರಿಯವನಿಗೆ ೩ ತಿಂಗಳು ಕಠಿಣ ಸಜೆಯನ್ನೂ ವಿಧಿಸಿರುತ್ತಾರೆ.

ಕಂದಾಯಕ್ಕಾಗಿ ಮಗಳನ್ನು ಮಾರಿದನು

ಬಿಹಾರ್ ಪ್ರಾಂತದಲ್ಲಿ ಮಳೆಬೆಳೆಗಳು ಸರಿಯಾಗಿ ಆಗದ ರೈತರು ಬಹಳ ದಾರಿದ್ರ್ಯದಲ್ಲಿರುವರು. ತಮ್ಮ ಜಮೀನಿನ ಕಂದಾಯವನ್ನು ಕಂದ ಕೊಡಲು ಶಕ್ತರಾಗಿಲ್ಲ. ಕಂದಾಯದ ಬಾಕಿ ಸರ್ಕಾರದವರ ಒತ್ತಾಯವು ಹೆಚ್ಚಾದದರಿಂದ ಬೇರೆ ದಾರಿಯಿಲ್ಲದ ರೈತರು ತಮ್ಮ ಹೆಣ್ಣುಮಕ್ಕಳನ್ನು ಮಾರಬೇಕಾದ ಪ್ರಸಂಗಬಂದಿದೆಯೆಂದೂ ಒಂದು ಸ್ಥಳದಲ್ಲಿ ಒಬ್ಬ ರೈತನು ಕೊಡಬೇಕಾಗಿದ್ದ 700 ರೂಪಾಯಿಗಳ ಕಂದಾಯಕ್ಕಾಗಿ ಗತಿಯಿಲ್ಲದೆ ತನ್ನ ಮಗಳನ್ನು ಮಾರಿ ಕಂದಾಯವನ್ನು ಕಟ್ಟಿದನೆಂದೂ ತಿಳಿಯಬರುತ್ತದೆ.

ಹಾವು ಕಡಿತಕ್ಕೆ ಸುಲಭೌಷಧ

ಹಾವು ಕಡಿದರೆ ತತ್‌ಕ್ಷಣವೇ ವಿಷವು ರಕ್ತದಲ್ಲಿ ವ್ಯಾಪಿಸಿ ಅಪಾಯಸಂಭವಿಸಬಹುದು. ಹಾವುಗಳಿರುವ ಸ್ಥಳಗಳಲ್ಲೆಲ್ಲಾ ಹಾವಿನವಿಷವನ್ನು ಪರಿಹರಿಸತಕ್ಕ ಮೂಲಿಕೆಗಳು ಇದ್ದೇ ಇರುತ್ತವೆ. ಇದು ಭಗವಂತನ ಸೃಷ್ಟಿವೈಚಿತ್ರ್ಯವು. ತುಂಬೆಸೊಪ್ಪಿನಿಕ್ಕದಿರುವ ಸ್ಥಳವ್ಯಾವುದು? ತುಂಬೆಸೊಪ್ಪಿನ ರಸವನ್ನು ಒತ್ತರಿಸಿ ಒಂದು ತಿಲೇ ರಸವನ್ನು ಹೊಟ್ಟೆಗೆ ಕುಡಿಸಿ ಕಚ್ಚಿದ ಸ್ಥಳದಲ್ಲಿ ಉಜ್ಜಿದರೆ ತತ್‌ಕ್ಷಣ ಗುಣವಾಗುತ್ತದೆ. ಎಕ್ಕದಿಂದಿನ ರಸದಲ್ಲೂ ಬಿಳೀ ಎಕ್ಕದ ಬೇರಿನಲ್ಲೂ ಕಾಫಿಬೇರಿನಲ್ಲೂ ಇಂಥ ಗುಣಗಳು ಉಪಯೋಗಿಸಿಕೊಳ್ಳಬಹುದು.

ಕಾಶಿಯಲ್ಲಿ ಕನ್ಯಾಪಹಾರ

ಮೊನ್ನೆ ಸೂರ್ಯಗ್ರಹಣಕಾಲಕ್ಕೆ ಗಂಗಾಸ್ನಾನಕ್ಕೆಂದು ಕಾಶಿಗೆ ಬಂದ ಮೊಂಘೈರ್ ಜಿಲ್ಲೆಯ ಸುರ್ಜಗಾರ್ಹ್ ಗ್ರಾಮದ ಜೈಕೃಷ್ಣಮುಕ್ತ ಎಂಬ ಬ್ರಾಹ್ಮಣನ 18 ವಯಸ್ಸಿನ ಪತ್ನಿ ಮತ್ತು 45 ವರ್ಷ ವಯಸ್ಸಿನ ತಾಯಿ ಇಬ್ಬರನ್ನೂ ಯಾರೋ ದುರಾತ್ಮರು ಅಪಹರಿಸಿಕೊಂಡು ಹೋಗಿರುತ್ತಾರೆ. ಈತನು ತನ್ನ ತಾಯಿ ಮತ್ತು ಹೆಂಡತಿಯರನ್ನು ರೈಲ್ವೆ ಸ್ಟೇಷನ್ನಿನ ಎಳೆ ಗಾಡಿಯಲ್ಲಿ ಕುಳ್ಳಿರಿಸಿ, ಸಾಮಾನುಗಳನ್ನು ತರಲು ಪ್ಲಾಟ್‌ಫಾರಂಮಿಗೆ ಹೋಗಿ ಬರುವುದರೊಳಗಾಗಿ ಹೆಂಗಸರೂ, ಗಾಡಿಯೂ ಮಾಯವಾಗಿದ್ದವು. ಹೆಂಗಸರ ಮೈಮೇಲೆ 600 ರೂ ಬೆಲೆಬಾಳುವ ಆಭರಣಗಳಿದ್ದವು. ಇವರನ್ನು ಪಂಜಾಬಿಗೆ ಅಪಹರಿಸಿಕೊಂಡು ಹೋಗಿರಬಹುದೆಂದು ಊಹಿಸಲಾಗಿದೆ. ಈ ವಿಷಯವು ಕಾಶಿಯಲ್ಲೆಲ್ಲಾ ಬಹಳ ಅಲ್ಲೋಲಕಲ್ಲೋಲವನ್ನುಂಟುಮಾಡಿರುತ್ತದೆ. ಕೂಡಲೆ ಪತ್ತೇತನಿಖೆಯನ್ನು ಮಾಡಬೇಕೆಂದು ಕಾಶಿ ಪೋ|| ಸೂಪರಿಂಟೆಂಡೆಂಟ್ ಸೈಯ್ಯದ್ ಕಾಜೀ ರಜಾರವರು ಎಲ್ಲಾ ಸಬ್ ಇನ್ಸ್‌ಪೆಕ್ಟರುಗಳಿಗೂ ಆಜ್ಞೆಮಾಡಿರುತ್ತಾರೆ.

ಪ್ರಸಿದ್ಧ ಕಳ್ಳರ ಪತ್ತೆ.

ಕರ್ನೂಲ್ ಪ್ರಾಂತದ ಸುತ್ತಲೂ ಈಗ ಸುಮಾರು ಹನ್ನೊಂದು ತಿಂಗಳಿನಿಂದ ಅನೇಕ ಭಾರಿಕಳ್ಳತನಗಳನ್ನು ನಡೆಸಿ ತಲೆ ತಪ್ಪಿಸಿಕೊಂಡಿದ್ದ ಒಂದು ಗ್ಯಾಂಗನ್ನು ಹಿಡಿಯಲು ಅಲ್ಲಿನ ಪೋಲೀಸಿನವರು ಬಹಳ ಪ್ರಯತ್ನಪಡುತ್ತಿದ್ದರು. ಈಚೆಗೆ ಅವರು ನಲ್ಲಮಲೆಕಾಡಿನಲ್ಲಿ ಅಡಗಿಕೊಂಡಿರುವರೆಂದು ತಿಳಿದುಬಂದಿರುವುದರಿಂದ ಅವರನ್ನು ಹಿಡಿಯಲು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮಿ|| ಸೈಯ್ಯದ್ ಹುಸೇನ್ ಎಂಬವರು ಕೆಲವುಮಂದಿ ಪೋಲೀಸಿನವರೊಡನೆ ಅಲ್ಲಿಗೆ ಹೋಗಿ ಅವರನ್ನು ಹುಡುಕುತ್ತಿದ್ದಾಗ ಅದನ್ನು ತಿಳಿದ ಆ ಕಳ್ಳರ ಮುಖಂಡರಾದ ಇಬ್ಬರು ಕೂರಚರು ಪೋಲೀಸಿನವರಮೇಲೆ ಬಿದ್ದು ಬಿಲ್ಲುಬಾಣಗಳಿಂದ ಹೊಡೆದು ಗಾಯಪಡಿಸಲುದ್ಯುಕ್ತರಾದರು. ಆಷ್ಟರಲ್ಲಿ ಪೋಲೀಸರು ಆತ್ಮರಕ್ಷಣೆಗಾಗಿ ಗುಂಡುಹಾರಿಸಿ ಒಬ್ಬನನ್ನು ಗಾಯಪಡಿಸಿ ಇನ್ನೊಬ್ಬನನ್ನು ಮೂರ್ಛೆಗೊಳಿಸಿ ಇಬ್ಬರನ್ನು ಹಿಡಿದು ಸಂಧ್ಯಾಲಕ್ಕೆ ತಂದು ವಿಚಾರಣೆ ನಡೆಸುತ್ತಿರುವರು. ಗಾಯಪಟ್ಟವನು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವನು.

ಅಬ್ಸೀನಿಯಾದ ಪರಿಸ್ಥಿತಿ

ಇಟಾಲಿಯನ್ನರು ಅಬ್ಸೀನಿಯದ ಮುಖಮುಖ್ಯ ಪಟ್ಟಣಗಳನ್ನು ಆಕ್ರಮಿಸಿಕೊಂಡಿರುವರಾದರೂ ಈ ಪಟ್ಟಣಗಳ ಹೊರಗೆ ಇರುವ ಅನೇಕಪ್ರದೇಶದ ಜನರು ಅವರ ಆಕ್ರಮಣವನ್ನು ಒಪ್ಪದೆ ಪ್ರತಿಭಟಿಸಿ ನಿಂತಿರುವರು. ಇಟಲಿಯವರು ಪಶ್ಚಿಮ ಮತ್ತು ದಕ್ಷಿಣ ಅಬ್ಸೀನಿಯಾ ಪ್ರದೇಶಗಳ ಮುಗ್ಗನ ಪ್ರಯತ್ನವನ್ನು ಮಾಡಿರುವುದಿಲ್ಲ. ಅಬ್ಸೀನಿಯದ ಒಳಪ್ರದೇಶಗಳನ್ನು ವ್ಯವಸ್ಥೆಯಲ್ಲಿಟ್ಟಿರುವ ಸರ್ಕಾರವು ನೇಗಸ್ಸರಬಳಿ ಅರ್ಥಸಚಿವರಾಗಿದ್ದ ರಾಸ್ ಮುಲುಗೆಟ್ಟರ ನಿಧನಾನಂತರ ಯುದ್ಧಸಚಿವರಾದ ಡೆಜ್ಜಾಜಮುಚ್ ಮೇರಿಯಾಂರ ಅಧೀನದಲ್ಲಿ ನಡೆಯುತ್ತಿದೆ. ಈಗ ಸರ್ಕಾರವು ಇಟಲಿಯವರನ್ನು ಎದುರಿಸಲು ಸಿದ್ಧವಾಗಿರುತ್ತದೆ. ಇಟಲಿಗೆ ಪ್ರತಿಕೂಲವಾಗಿರುವ ಪಾಳೆಯಗಾರರನ್ನು ಸೇರಿಸಿಕೊಳ್ಳಲು ಅಡಿಸ್ ಅಬಾಬದ ಪ್ರಜೆಗಳು ಸೇನೆಗಳು ಓಡಿಹೋಗಿರುತ್ತಾರೆ. ಇನ್ನೂ ಎಷ್ಟೋ ವರ್ಷಕಾಲದವರೆಗೆ ಅಬ್ಸೀನಿಯವು ಸುಲಭವಾಗಿ ಇಟಲಿಯ ದಾಸ್ಯವನ್ನು ಕೈಗೊಳ್ಳುವುದಿಲ್ಲವೆಂದು ತೋರುತ್ತದೆ.

ಪ್ಯಾಲಸ್ಟೈನ್ ಪರಿಸ್ಥಿತಿ

ಪ್ಯಾಲಸ್ಟೈನಿನ ಅರಬ್ಬಿಗಳ ಚಳವಳಿಯು ಇನ್ನೂ ತೀವ್ರವಾಗಿಯೇ ನಡೆಯುತ್ತಿದೆ. ಕಳೆದ 21 ನೆಯ ತಾರೀಖು ಶಸ್ತ್ರಾಸ್ತ್ರ ಸಜ್ಜಿತರಾದ ದೊಡ್ಡ ಅರಬ್ಬಿಗಳಗುಂಪಿಗೂ ಬ್ರಿಟಿಷ್ ಪೋಲೀಸರು ಸೈನಿಕರು ಮತ್ತು ವಿಮಾನಗಳಿಗೂ ಅನೇಕ ಗಂಟೆಗಳಕಾಲ ಕದನವು ನಡೆಯಿತು. ಇದರಿಂದ ಬ್ರಿಟಿಷರಕಡೆ ಒಬ್ಬನು ಸತ್ತು ೩ ಮಂದಿಗೆ ಘಾಯಗಳಾದವು. ಸತ್ತ ಅರಬ್ಬರ ಸಂಖ್ಯೆ ತಿಳಿದುಬಂದಿರುವುದಿಲ್ಲ. ಶಸ್ತ್ರಾಸ್ತ್ರವುಳ್ಳ ಅರಬ್ಬಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸುವುದಾಗಿ ವಿಶೇಷ ಕಾನೂನು ಪ್ರಕಟಿಸಲ್ಪಟ್ಟಿದೆ. ಇನ್ನೊಂದು ಅರಬ್ಬಿಯ ಗುಂಪು ಜೆರುಸಲೇಮಿನಿಂದ ಸಮುದ್ರತೀರಕ್ಕೆ ಸೈನಿಕರನ್ನು ಸಾಗಿಸುತ್ತಿದ್ದ ರೈಲುಕಂಬಿಯ ಮೇಲೆ ದೊಡ್ಡ ದೊಡ್ಡ ಕಲ್ಲುಬಂಡೆಗಳನ್ನು ಉರುಳಿಸಿ ರೈಲು ನಿಲ್ಲುವಂತೆ ಮಾಡಿ ಅದರಮೇಲೆ ಗುಂಡುಹಾರಿಸಿ ಬಾಂಬುಗಳನ್ನೆಸೆದು ವಿಶೇಷ ತೊಂದರೆಮಾಡಿದರು. ರೈಲಿನಲ್ಲಿದ್ದ ಛಸ್ಸರ್ ರೆಜಿಮೆಂಟಿನವರು ಇವರಮೇಲೆ ಗುಂಡಿನ ಮಳೆಗರೆದದ್ದರಿಂದ ಅರಬ್ಬಿಗಳು ಹಿಮ್ಮೆಟ್ಟಿದರು. ಸೈನಿಕರಲ್ಲಿ ಒಬ್ಬ ಸಾರ್ಜಂಟಿಗೂ ಒಬ್ಬ ಶಿಪಾಯಿಗೂ ಗಾಯಗಳಾದವು. ಈ ಅನರ್ಥಗಳಿಂದ ಈಗ ಜರುಸಲೇಮಿನಲ್ಲಿ ಕರ್ಫ್ಯೂ ಆರ್ಡರು ಜಾರಿಮಾಡಲಾಗಿದೆ. ಇದರಿಂದ ಸಾಯಂಕಾಲ 6 ಘಂಟೆಯಮೇಲೆ ಬೆಳಗಿನ 6 ಘಂಟೆಯವರಿಗೆ ಯಾರೂ ಹೊರಗೆ ತಿರುಗಾಡಕೂಡದೆಂದೂ ಗಾಡಿಗಳೇ ಮೊದಲಾದ ವಾಹನಗಳೂ ಹೊರಗೆ ಬರದಂತೆ ಆಜ್ಞೆಯಾಗಿದೆ. ಹ್ಯಾಗೂ ಪರಿಸ್ಥಿತಿಯು ಇನ್ನೂ ಭಯಾನಕವಾಗಿಯೇ ಇದೆ.